ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೨೪

ಶ್ರೀ ವ್ಯಾಸಮಹರ್ಷಿಪ್ರಣೀತವಾದ

ಶ್ರೀ ಸೌರಪುರಾಣವು

(ಸಂಸ್ಕೃತ ಮೂಲ, ಕನ್ನಡ ಅರ್ಥಾನುವಾದದೊಡನೆ ಪರಿಷ್ಕೃತವಾಗಿದೆ)

ಪ್ರಥಮ ಸಂಪುಟ

ಅನುವಾದಕ

ಆಸ್ಥಾನ ವಿದ್ವಾನ್

ಎಚ್. ಗಂಗಾಧರಶಾಸ್ತ್ರೀ

ಕನ್ನಡ ಪಂಡಿತ

ಶ್ರೀ ವಿನಾಯಕ್ ಪ್ರಿಂಟಿಂಗ್ ವರ್ಕ್ಸ್

ಮೈಸೂರು

೧೯೪೫

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೨೪

ಶ್ರೀ ವ್ಯಾಸಮಹರ್ಷಿಪ್ರಣೀತವಾದ

ಶ್ರೀ ಸೌರಪುರಾಣವು

(ಸಂಸ್ಕೃತ ಮೂಲ, ಕನ್ನಡ ಅರ್ಥಾನುವಾದದೊಡನೆ ಪರಿಷ್ಕೃತವಾಗಿದೆ)

ಪ್ರಥಮ ಸಂಪುಟ

ಅನುವಾದಕ

ಆಸ್ಥಾನ ವಿದ್ವಾನ್

ಎಚ್. ಗಂಗಾಧರಶಾಸ್ತ್ರೀ

ಕನ್ನಡ ಪಂಡಿತ

ಶ್ರೀ ವಿನಾಯಕ್ ಪ್ರಿಂಟಿಂಗ್ ವರ್ಕ್ಸ್

ಮೈಸೂರು

೧೯೪೫

ಮುನ್ನುಡಿ.

ನಮ್ಮ ಆರ್ಯಮಹರ್ಷಿಗಳು ನಮಗಾಗಿ ಶೇಖರಿಸಿಟ್ಟಿರುವ ನಿಧಿಯೆಂದರೆ ಜ್ಞಾನ ಭಂಡಾರವೊಂದೇ. ಅದು ಸಾಮಾನ್ಯಜನರಿಗೆ ಸುಲಭವಾಗಿ ದೊರೆಯಲಾರದೆಂದು, ಅದಕ್ಕೆ ಸಾಧಕವಾಗಿ ವೇದಶಾಸ್ತ್ರಾದಿಗಳನ್ನೂ, ಪುರಾಣೇತಿಹಾಸಗಳನ್ನೂ, ರಚಿಸಿಟ್ಟಿರುವರು. ವೇದಶಾಸ್ತ್ರಾದಿಗಳು, ಸತ್ಪ್ರಭುವಿನಂತೆ ಆಜ್ಞಾರೂಪವಾದ ವಿಧಿ ನಿಷೇಧವಾಕ್ಯಗಳಿಂದ, ಜನರಿಗೆ ಕರ್ಮ ಮತ್ತು ಜ್ಞಾನದ ಸ್ವರೂಪವನ್ನು ತಿಳಿಸುವುದರ ಮೂಲಕ, ಸನ್ಮಾರ್ಗಿಗಳನ್ನಾಗಿ ಮಾಡುತ್ತವೆ. ಪುರಾಣೇತಿಹಾಸಗಳು, ಅಷ್ಟು ಪ್ರಭಾವವನ್ನು ತೋರ್ಪಡಿಸದೆ ಸನ್ಮಿತ್ರರಂತೆ ದುರ್ಮಾರ್ಗದಲ್ಲಿ ಜನರಿಗೆ ಜಿಹಾಸೆಯನ್ನೂ, ಸನ್ಮಾರ್ಗದಲ್ಲಿ ಪ್ರವೃತ್ತಿಯನ್ನೂ ಒದಗಿಸುತ್ತವೆ. ಅಧಿಕಾರಿಭೇದದಿಂದ ವಿನಯಾದಿ ಅನೇಕ ಸದ್ಗುಣಗಳನ್ನು ಬೋಧಿಸಬೇಕಾಗಿರುವುದರಿಂದ, ಈ ಪುರಾಣಗಳಲ್ಲಿ ಹೆಚ್ಚುಹೆಚ್ಚಾದ ಮತ್ತು ಭಕ್ತಿಯುತವಾದ ಇತಿಹಾಸಗಳೂ ಆವಶ್ಯಕವಾಗಿ ಬೇಕಾದುವು. ಈ ಉದ್ದೇಶದಿಂದಲೇ ಹದಿನೆಂಟು ಮಹಾಪುರಾಣಗಳೂ ಹದಿನೆಂಟು ಉಪಪುರಾಣಗಳೂ ನಿರ್ಮಿತವಾಗಿವೆ ಎಂದು ಹೇಳಬಹುದು. ಈ ಪುರಾಣಗಳೆಲ್ಲವೂ ವ್ಯಾಸಮಹರ್ಷಿಗಳಿಂದಲೇ ಪ್ರಣೀತವಾದವುಗಳೆಂದು ಸಂಪ್ರದಾಯಸ್ಥರು ತೀರ್ಮಾನಿಸಿದ್ದಾರೆ. ಆಧುನಿಕರಲ್ಲಿ ಹಲವರು, ವ್ಯಾಸನಾಮಾಂಕಿತವಾಗಿ ಅನೇಕ ಜನರಿಂದ ಬರೆಯಲ್ಪಟ್ಟಿರಬೇಕೆಂದು ಊಹಿಸುತ್ತಾರೆ. ಇದು ಹೇಗಾದರೂ ಇರಲಿ, ಅಂತೂ ಸಂಸಾರದಲ್ಲಿ ಸಿಕ್ಕಿತೊಳಲುತ್ತಿರುವ, ಮಂದಾಧಿಕಾರಿಗಳಿಗೆ, ಸುಲಭವಾದ ರೀತಿಯಿಂದ, ಭಕ್ತಿಮಾರ್ಗ, ಮೋಕ್ಷಸ್ವರೂಪ, ಇವನ್ನು ತಿಳಿಸಲು ಪುರಾಣಗಳು ಅತ್ಯಂತ ಸಹಕಾರಿಗಳಾಗಿವೆ.

ಪ್ರಕೃತ, ಸೌರಪುರಾಣವು ಬ್ರಹ್ಮಮಹಾಪುರಾಣದ ಉಪಪುರಾಣವೆಂದು ವ್ಯಾಸರೇ ಪ್ರತಿಅಧ್ಯಾಯದ ಕೊನೆಯಲ್ಲಿಯೂ, ತಿಳಿಸಿರುವರು. ಶ್ರೀ ಸೂರ್ಯದೇವನು ತನ್ನ ಪ್ರಿಯಪುತ್ರನಾದ ವೈವಸ್ವತಮನುವಿಗೆ ಶಿವಮಹಿಮೆಯನ್ನು ತಿಳಿಸಿರುವ ಅಂಶವು ಈ ಪುರಾಣದಲ್ಲಿ ವಿವೃತವಾಗಿದೆ. ಇದಕ್ಕೆ ಸೌರಪುರಾಣವೆಂದು ಹೆಸರುಬರಲು ಇದೇ ಕಾರಣ. ಶಿವಪೂಜಾಫಲ, ಶಿವಪೂಜಾವಿಧಿ, ಶಿವಭಕ್ತಿಯ ಮತ್ತು ಶಿವಭಕ್ತರ ಪ್ರಭಾವ, ಇವುಗಳ ವರ್ಣನೆಯೇ ಈ ಗ್ರಂಥದ ಮುಖ್ಯ ಜೀವಾಳ. ಇದರಲ್ಲಿ ಯೋಗಶಾಸ್ತ್ರದ, ಮತ್ತು ಅದ್ವೈತ ಮತತತ್ತ್ವದ ಸಾರವನ್ನು ಅಲ್ಲಲ್ಲಿ ಕಾಣಬಹುದು. ಈ ಪ್ರಥಮ ಸಂಪುಟದಲ್ಲಿ ದ್ವಿಜಧರ್ಮ, ಬ್ರಹ್ಮಚಾರಿಯ ಕರ್ತವ್ಯಗಳು, ಶ್ರಾದ್ಧನಿಯಮಗಳು, ಇವೇ ಮೊದಲಾದ ವಿಷಯಗಳು ವಿಸ್ತಾರವಾಗಿ ಪ್ರತಿಪಾದಿತವಾಗಿವೆ.

ಇಲ್ಲಿನವರೆಗೆ ಈ ಪುರಾಣಗಳು ಕೇವಲಸಂಸ್ಕೃತ ಭಾಷೆಯಲ್ಲಿಯೇಇದ್ದು ಆ ಭಾಷಾಜ್ಞಾನಿಗಳಿಗೆ ಮಾತ್ರ ಉಪಯೋಗಕರವಾಗಿದ್ದವು. ಈಗ ನಮ್ಮನ್ನಾಳುವ ಶ್ರೀಮನ್ಮಹಾರಾಜರವರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ.,** ಮಹಾಪ್ರಭುಗಳವರ ಕೃಪಾದೃಷ್ಟಿಯ ಫಲವಾಗಿ ಸಂಸ್ಕೃತ ಭಾಷೆಯಲ್ಲಿದ್ದ ಜ್ಞಾನವಾಹಿನಿಯು ಕನ್ನಡ ಭಾಷೆಗೆ ಹರಿಯುವಂತಾಗಿದೆ. ಹೀಗೆ ಭಾಷಾ ಪ್ರೋತ್ಸಾಹವನ್ನೂ, ಪ್ರಾಚೀನ ಗ್ರಂಥಗಳ ಜೀರ್ಣೋದ್ಧಾರ ಕ್ರಮವನ್ನೂ, ಕೈಗೊಂಡಿರುವ ಕನ್ನಡಿಗರ ಕಲ್ಪತರುವಾದ ಶ್ರೀಮನ್ಮಹಾರಾಜರವರಿಗೆ, ಸರ್ವೇಶ್ವರನು ಸಕಲ ಸನ್ಮಂಗಳವನ್ನೂ ದಯಪಾಲಿಸಿ, ಇತೋಪ್ಯತಿಶಯವಾದ ಸೌಭಾಗ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಭಗವಂತನನ್ನು ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಪಾರ್ಥಿವ ಸಂವತ್ಸರದ ಆಶ್ವಯುಜ ಶುದ್ಧ
ಪ್ರತಿಪತ್, ಭಾನುವಾರ
೧೯೪೫

ಹೊನ್ನೇನಹಳ್ಳಿ ಗಂಗಾಧರಶಾಸ್ತ್ರೀ.

ವಿಷಯಾನುಕ್ರಮಣಿಕೆ

ಅಧ್ಯಾಯ ಮತ್ತು ವಿಷಯಗಳು ಪುಟಗಳು

ಕೆ. ವೆಂಕಟಸುಬ್ಬಯ್ಯ, ಪ್ರಿಂಟರ್,
ಶ್ರೀ ವಿನಾಯಕ್ ಪ್ರಿಂಟಿಂಗ್ ವರ್ಕ್ಸ್,
ಮೈಸೂರು.

॥ ಶ್ರೀಃ ॥

॥ ಶ್ರೀ ಸೂರ್ಯಾಯನಮಃ ॥

॥ ವ್ಯಾಸಕೃತಂ ॥

॥ ಸೌರಪುರಾಣಂ ॥

ಅಥ ಶ್ರೀಸೌರಪುರಾಣೇ ಪ್ರಥಮೋಽಧ್ಯಾಯಃ

ಯಸ್ಯಾಜ್ಞಯಾ ಜಗತ್ಸ್ರಷ್ಟಾ ವಿರಂಚಿಃ ಪಾಲಕೋ ಹರಿಃ ।
ಸಂಹರ್ತಾ ಕಾಲರುದ್ರಾಖ್ಯೋ ನಮಸ್ತಸ್ಮೈ ಪಿನಾಕಿನೇ ॥ ೧ ॥

ತೀರ್ಥಾನಾಮುತ್ತಮಂ ತೀರ್ಥಂ ಕ್ಷೇತ್ರಾಣಾಂ ಕ್ಷೇತ್ರಮುತ್ತಮಂ ।
ಮುನೀನಾಮಾಶ್ರಯೋ ನಿತ್ಯಂ ನೈಮಿಷಾರಣ್ಯಮುತ್ತಮಂ ॥ ೨ ॥

ಶೌನಕಾದ್ಯಾ ಮಹಾತ್ಮಾನಃ ಶಿವಭಕ್ತಾ ಮಹೌಜಸಃ ।
ದೀರ್ಘಸತ್ರಂ ಪ್ರಕುರ್ವಂತಃ ತತ್ರೇಶಾನಸ್ಯ ತುಷ್ಟಯೇ ॥ ೩ ॥

ಶ್ರೀ ಸೂರ್ಯದೇವನಿಗೆ ವಂದನೆಯು

ವ್ಯಾಸಮಹರ್ಷಿಗಳಿಂದ ಪ್ರಣೀತವಾದ ಶ್ರೀ ಸೌರಪುರಾಣದಲ್ಲಿ ಒಂದನೆಯ ಅಧ್ಯಾಯವು.

೧. ಯಾವ ಪರಮೇಶ್ವರನ ಅಪ್ಪಣೆಯಿಂದ ಬ್ರಹ್ಮನು ಜಗತ್ತನ್ನು ಸೃಷ್ಟಿಸುವನೋ, ವಿಷ್ಣುವು ಲೋಕವನ್ನು ರಕ್ಷಿಸುವನೋ, ಕಾಲರುದ್ರನು ಲೋಕನಾಶಕನಾಗುವನೋ, ಅಂತಹ ಪಿನಾಕಧಾರಿಯಾದ ಈಶ್ವರನಿಗೆ ನಮಸ್ಕಾರವು.

೨. ತೀರ್ಥಗಳಲ್ಲೆಲ್ಲಾ ಉತ್ತಮವೆಂದೆನಿಸಿ, ಕ್ಷೇತ್ರಗಳಲ್ಲೆಲ್ಲಾ ಶ್ರೇಷ್ಠವಾದುದಾಗಿ, ನೈಮಿಷಾರಣ್ಯವೆಂಬ ಕ್ಷೇತ್ರವು ಸರ್ವದಾ ಋಷಿಗಳಿಗೆ ಆಶ್ರಯವಾಗಿ ವಿರಾಜಿಸುತ್ತಿದೆ.

೩. ಅಲ್ಲಿ ಒಂದು ಸಾರಿ ಮಹಾತ್ಮರೂ, ಮಹಾತೇಜಸ್ವಿಗಳೂ ಆದ ಶೌನಕರೇ ಮೊದಲಾದ ಮಹರ್ಷಿಗಳು ಶಿವಭಕ್ತಿ ಪರಾಯಣರಾಗಿ, ಪರಮೇಶ್ವರನನ್ನು ತೃಪ್ತಿಪಡಿಸಲು ಒಂದು ಸತ್ರಾತ್ಮಕವಾದ, ಅಂದರೆ ವರ್ಷಪರ್ಯಂತವಾಗಿ ನಡೆಯುವ ಯಾಗವನ್ನು ಮಾಡುತ್ತಿದ್ದರು.

ತಸ್ಮಿನ್ ಸತ್ರೇ ಮಹಾಭಾಗೋ ಮುನೀನಾಂ ಭಾಗ್ಯಗೌರವಾತ್ ।
ಆಜಗಾಮ ಮುನೀನ್ ದ್ರಷ್ಟುಂ ಸೂತಃ ಪೌರಾಣಿಕೋತ್ತಮಃ ॥೪॥

ತಂ ದೃಷ್ಟ್ವಾ ತೇ ಮಹಾತ್ಮಾನೋ ನೈಮಿಷಾರಣ್ಯವಾಸಿನಃ ।
ಪ್ರಹೃಷ್ಟಾಃ ಪ್ರಷ್ಟುಮುದ್ಯುಕ್ತಾಃ ಪಪ್ರಚ್ಛು ರೋಮಹರ್ಷಣಂ ॥೫॥

॥ ಋಷಯ ಊಚುಃ ॥

ಕಥಂ ಭಗವತಾ ಪೂರ್ವಮಾದಿತ್ಯೇನಾತ್ಮರೂಪಿಣಾ ।
ಪುರಾಣಂ ಕಥಿತಂ ಸೌರಂ ತನ್ನೋ ವಕ್ತುಮಿಹಾರ್ಹಸಿ ॥೬॥

ಕೃಷ್ಣದ್ವೈಪಾಯನಾತ್ಸಾಕ್ಷಾತ್ಪೂರ್ವಂ ಹಿ ವಿದಿತಂ ತ್ವಯಾ ।
ತ್ವತ್ತೋ ನಾಸ್ತಿ ಪರೋ ವಕ್ತಾ ಪುರಾಣಾನಾಂ ಮಹಾತಪಃ ॥೭॥

ಸಂತ್ಯನ್ಯೇ ಬಹವಶ್ಶಿಷ್ಯಾ ಅಪಿ ತಸ್ಯ ಮಹಾತ್ಮನಃ ।
ತಥಾಪಿ ಶಿಷ್ಯವಾತ್ಸಲ್ಯಾತ್ತ್ವಂ ಪುರಾಣೇಷು ಯೋಜಿತಃ ॥೮॥

---

೪. ಅದೇ ಸಮಯದಲ್ಲಿ ಮಹಾತ್ಮನೂ, ಪೌರಾಣಿಕ ಶ್ರೇಷ್ಠನೂ ಆದ ಸೂತ ಮಹರ್ಷಿಯು, ಆ ಋಷಿಗಳ ಸುಕೃತವಶದಿಂದ ಅವರನ್ನು ನೋಡಲು ಅಲ್ಲಿಗೆ ಬಂದು ಸೇರಿದನು.

೫. ನೈಮಿಷಾರಣ್ಯವಾಸಿಗಳಾದ ಆ ಋಷಿಗಳೆಲ್ಲರೂ ಮಹಾತ್ಮನಾದ ಆ ರೋಮಹರ್ಷಣ ಋಷಿಯನ್ನು ನೋಡಿ ಬಹಳವಾಗಿ ಸಂತೋಷಪಟ್ಟರು. ಅಲ್ಲದೆ ಅಪೂರ್ವ ವಿಷಯಗಳನ್ನು ಅವರಿಂದ ತಿಳಿಯಲುದ್ಯುಕ್ತರಾಗಿ ಕೆಲವು ಪ್ರಶ್ನೆಗಳನ್ನು ಕೇಳಲಾರಂಭಿಸಿದರು.

೬. "ಎಲೈ ಸೂತಮಹರ್ಷಿಯೇ, ಆತ್ಮಸ್ವರೂಪಿಯೂ, ಪೂಜ್ಯನೂ ಆದ ಸೂರ್ಯದೇವನು, ಅನೇಕ ವಿಷಯಗಳನ್ನು, ಪುರಾಣರೂಪದಿಂದ ತಿಳಿಸಿರುವನಷ್ಟೆ. ಅಂತಹ ಸೌರಪುರಾಣವನ್ನು ನೀನು ನಮಗೆ ಈಗ ತಿಳಿಸಬೇಕು.

೭. ಹಿಂದೆ ವ್ಯಾಸಮಹರ್ಷಿಗಳು ಆ ಪುರಾಣದ ವಿಷಯವನ್ನೆಲ್ಲಾ ನಿನಗೆ ಸಂಪೂರ್ಣವಾಗಿ ಬೋಧಿಸಿರುವರು. ಅದನ್ನು ವಿಶದವಾಗಿ ನಮಗೆ ತಿಳಿಸುವುದರಲ್ಲಿ ನಿನಗಿಂತ ಶ್ರೇಷ್ಠನಾದವನು ಮತ್ತಾರೂ ಇಲ್ಲ.

೮. ಓ ಸೂತಋಷಿಯೇ ಮಹಾತ್ಮರಾದ ವ್ಯಾಸರಿಗೆ ಅನೇಕ ಜನ ಶಿಷ್ಯರಿರುವರು. ಆದರೂ ಅವರು ನಿನ್ನಲ್ಲಿ ಹೆಚ್ಚು ವಾತ್ಸಲ್ಯದಿಂದ ಎಲ್ಲಾ ಪುರಾಣಗಳನ್ನೂ ವಿಸ್ತಾರವಾಗಿ ಬೋಧಿಸಿರುವರು.

ಯಾನ್ಯನ್ಯಾನಿ ಪುರಾಣಾನಿ ತ್ವಯೋಕ್ತಾನಿ ಮಹಾಮುನೇ ।
ಅಲಂ ತೈಃ ಪಾರ್ವತೀಕಾಂತಭಕ್ತ್ಯಾ ಭಕ್ತಿಯುತಂ ತ್ವಿದಂ ॥ ೯ ॥

ನ ಯಜ್ಞೈರ್ನತಪೋಭಿರ್ವಾ ನ ದಾನೈರ್ನವ್ರತೈಸ್ತಥಾ ।
ಶಿವಭಕ್ತಿಮೃತೇ ಯಸ್ಮಾನ್ಮುಕ್ತಿರ್ನಾಸ್ತೀತಿ ಶುಶ್ರುಮ ॥ ೧೦ ॥

ದೇವೋಽಯಂ ಭಗವಾನ್ ಭಾನುರಂತರ್ಯಾಮೀ ಸನಾತನಃ ।
ಯೋ ಬ್ರೂತೇ ಸರ್ವವಸ್ತೂನಾಂ ತತ್ತ್ವಂ ಜ್ಞಾತ್ವೈವ ನಾನ್ಯಥಾ ॥ ೧೧ ॥

ಅತಃ ಶ್ರದ್ಧಾ ಹಿ ಮಹತೀ ಶ್ರೋತುಂ ತ್ವದ್ವದನಾಮೃತಂ ।
ಅಸ್ಮಾಕಂ ವರ್ತತೇ ಸೂತ ರೋಮಹರ್ಷಣ ಸುವ್ರತ ॥ ೧೨ ॥

॥ ಸೂತ ಉವಾಚ ॥

ನತ್ವಾ ಸೂರ್ಯಂ ಪರಂಧಾಮ ಋಗ್ಯಜುಸ್ಸಾಮರೂಪಿಣಂ ।
ತ್ರಿಸತ್ಯಂ ತ್ರಿಜಗದ್ಯೋನಿಂ ತ್ರಿಮಾರ್ಗಂ ಚ ತ್ರಿತತ್ತ್ವಗಂ ॥ ೧೩ ॥

---

೯. ಮಹರ್ಷಿಯೇ, ನೀನು ಹಿಂದೆ ನಮಗೆ ಅನೇಕ ಪುರಾಣಗಳನ್ನು ಬೋಧಿಸಿರುವೆಯಷ್ಟೆ. ಅವೆಲ್ಲಕ್ಕಿಂತಲೂ ಹೆಚ್ಚಾಗಿ ಈ ಪುರಾಣವು ಪರಮೇಶ್ವರನಲ್ಲಿ ನಮಗೆ ಹೆಚ್ಚು ಭಕ್ತಿಯನ್ನುಂಟುಮಾಡತಕ್ಕದ್ದಾಗಿದೆ.

೧೦. ಯಜ್ಞ, ತಪಸ್ಸು, ದಾನ, ವ್ರತ ಇವುಗಳಲ್ಲಿ ಯಾವುದನ್ನು ಮಾಡಿದರೂ ಪರಮೇಶ್ವರನಲ್ಲಿ ಸಂಪೂರ್ಣವಾದ ಭಕ್ತಿಯನ್ನಿಡದಿದ್ದರೆ, ಅವರಿಗೆ ಅದರಿಂದ ಮೋಕ್ಷವಿಲ್ಲವೆಂದು ನಾವು ಕೇಳಿದ್ದೇವೆ.

೧೧. ಭಗವಂತನಾದ ಸೂರ್ಯದೇವನು, ಸನಾತನನು, ಮತ್ತು ಸರ್ವಾಂತರ್ಯಾಮಿಯು. ಅಂತಹ ಮಹಾತ್ಮನು ವಸ್ತುಸ್ವರೂಪವನ್ನು ತಿಳಿಸುವಾಗ, ಯಥಾರ್ಥವಾದ ತತ್ತ್ವವನ್ನು ಎಂದಿಗೂ ಬಿಡಲಾರನು.

೧೨. ಆದಕಾರಣ ಸೂತಮಹರ್ಷಿಯೇ! ನಿನ್ನ ಬಾಯಿಂದ ಆ ಸೂರ್ಯೋಕ್ತವಾದ ಸಮಸ್ತ ವಿಷಯಗಳನ್ನೂ ಕೇಳಬೇಕೆಂಬ ಶ್ರದ್ಧೆಯು ನಮ್ಮಗಳಿಗೆ ಬಹಳವಾಗಿದೆ. ದಯವಿಟ್ಟು ವಿವರಿಸಬೇಕು, ಎಂದು ಸಮಸ್ತ ಋಷಿಗಳೂ ಕೇಳಿಕೊಳ್ಳಲಾಗಿ ಸೂತಮಹರ್ಷಿಯು ಹೇಳಲಾರಂಭಿಸಿದನು ;—

ಪುರಾಣಂ ಸಂಪ್ರವಕ್ಷ್ಯಾಮಿ ಸೌರಂ ಶಿವಕಥಾಶ್ರಯಂ ।
ಯಚ್ಛ್ರುತ್ವಾ ಮನುಜಃ ಶೀಘ್ರಂ ಪಾಪಕಂಚುಕಮುತ್ಸೃಜೇತ್ ॥ ೧೪ ॥

ಶ್ಲೋಕದ್ವಯಂ ಪಠೇದ್ಯಸ್ತು ಶ್ಲೋಕಮೇಕಮಥಾಪಿ ವಾ ।
ಶ್ರದ್ಧಾವಾನ್ ಪಾಪಕರ್ಮಾಽಪಿ ಸ ಗಚ್ಛೇತ್ಸವಿತುಃ ಪದಂ ॥ ೧೫ ॥

ಪೌರಾಣೀಂ ವೃತ್ತಿಮಾಶ್ರಿತ್ಯ ಯೇ ಜೀವಂತಿ ದ್ವಿಜಾತಯಃ ।
ತನ್ಮಂಡಲಂ ವಿನಿರ್ಭಿದ್ಯ ತತ್ಸಾಯುಜ್ಯಂ ವ್ರಜಂತಿ ತೇ ॥ ೧೬ ॥

ವಕ್ತಾ ಯತ್ರ ರವಿಃ ಸಾಕ್ಷಾತ್ ಶ್ರೋತಾ ತಸ್ಯ ಸುತೋ ಮನುಃ ।
ಮಾಹಾತ್ಮ್ಯಂ ಕಥ್ಯತೇ ಶಂಭೋರ್ನಾಸ್ತ್ಯಸ್ಮಾದಧಿಕಂ ದ್ವಿಜಾಃ ॥ ೧೭ ॥

೧೩-೧೪. " ಎಲೈ ಮಹರ್ಷಿಗಳೇ ಸೂರ್ಯದೇವನು ಋಗ್ಯಜುಸ್ಸಾಮವೇದಾತ್ಮಕನು. ಮೂರು ಲೋಕಗಳ ಸೃಷ್ಟಿಗೂ ಮೂಲಕಾರಣನು. ಅನ್ನತತ್ತ್ವ, ಜಲತತ್ತ್ವ, ಆಕಾಶತತ್ತ್ವಗಳೆಂಬ ಮೂರು ತತ್ತ್ವಗಳಲ್ಲಿಯೂ ಸಂಚರಿಸುವವನು. ಪೃಥಿವ್ಯಂತರಿಕ್ಷ ದಿವ್ಯಮಾರ್ಗಗಳಲ್ಲಿ ವಿಹರಿಸುವವನು. ಇಂತಹ ಪರಮಾತ್ಮನಾದ ಸೂರ್ಯದೇವನಿಗೆ ಮೊದಲು ವಂದಿಸಿ, ಶಿವನ ಕಥೆಯನ್ನು ವಿವರಿಸುವಂತಹ ಸೌರಪುರಾಣವನ್ನು ನಿಮಗೆ ಈಗ ವಿವರಿಸುವೆನು. ಅದನ್ನು ಕೇಳಿದ ಮನುಷ್ಯನು ಪಾಪವೆಂಬ ಆವರಣದಿಂದ ಬಿಡಲ್ಪಟ್ಟವನಾಗಿ ಮೋಕ್ಷವನ್ನು ಹೊಂದುವನು.

೧೫. ಯಾವನು ಶ್ರದ್ಧೆಯಿಂದ ಈ ಪುರಾಣದ ಒಂದೆರಡು ಶ್ಲೋಕಗಳನ್ನಾದರೂ ಭಕ್ತಿಯಿಂದ ಪಠಿಸುವನೋ ಅವನು ಎಷ್ಟೇ ಪಾಪಿಷ್ಠನಾಗಿದ್ದರೂ, ಕೊನೆಗೆ ಸೂರ್ಯಲೋಕವನ್ನು ಹೊಂದುವನೆಂಬುದರಲ್ಲಿ ಸಂಶಯವಿಲ್ಲ.

೧೬. ಈ ಪುರಾಣದ ಪಠನೆಯಿಂದ ಯಾವ ಬ್ರಾಹ್ಮಣರು ಜೀವಿಸುವರೋ, ಅವರು ಸೂರ್ಯಮಂಡಲವನ್ನು ಭೇದಿಸಿಕೊಂಡು ಹೋಗಿ ಕೊನೆಗೆ ಸೂರ್ಯಸಾಯುಜ್ಯವನ್ನೇ ಹೊಂದುವರು.

೧೭. ಈ ಪುರಾಣವನ್ನು ವಿವರಿಸುವವನು ಸೂರ್ಯದೇವನು. ಕೇಳುವವನು ಸೂರ್ಯಪುತ್ರನಾದ ಮನುಚಕ್ರವರ್ತಿಯು. ಇದರಲ್ಲಿ ವಿವರಿಸತಕ್ಕದ್ದು ಶಿವಮಹಿಮೆಯು. ಆದ್ದರಿಂದ ಇದಕ್ಕಿಂತ ಉತ್ತಮವಾದ ಗ್ರಂಥವು ಮತ್ತೊಂದಿರಲಾರದು.

ಇದಂ ಪುರಾಣಂ ವಕ್ತವ್ಯಂ ಧಾರ್ಮಿಕಾಯಾನಸೂಯವೇ ।
ದ್ವಿಜಾಯ ಶ್ರದ್ದಧಾನಾಯ ಶಿವೈಕಾರ್ಪಿತಬುದ್ಧಯೇ ॥ ೧೮ ॥

ಆಸೀನ್ಮನುಸ್ಸೂರ್ಯಸುತೋ ವರ್ತತೇ ಯೋ ಮಹಾತಪಾಃ ।
ಸ ಕದಾಚಿನ್ಮಹಾಭಾಗಃ ಕಾಮಿಕಾಖ್ಯಂ ವನಂ ಯಯೌ ॥ ೧೯ ॥

ಪ್ರತರ್ದನಸ್ಯ ನೃಪತೇರ್ಯಜ್ಞೇ ವಿಪುಲದಕ್ಷಿಣೇ ।
ತತ್ತ್ವಂ ವಿಚಾರಯಾಮಾಸುರ್ಮಿಥೋ ಯತ್ರ ಮಹರ್ಷಯಃ ॥ ೨೦ ॥

ಅಶಕ್ತಾಸ್ತೇ ಮಹಾಭಾಗ ಭೃಗ್ವಾದ್ಯಾಸ್ತತ್ತ್ವನಿರ್ಣಯೇ ।
ಏವಂ ಸ್ಥಿತೇಷು ವಿಪ್ರೇಷು ಮಾಯಯಾ ಮೋಹಿತಾತ್ಮಸು ॥ ೨೧ ॥

ಸಂಶಯಾವಿಷ್ಟಚಿತ್ತೇಷು ವಾಗಭೂದಶರೀರಿಣೀ ।
ತಪಃ ಕುರುಧ್ವಂ ವಿಪ್ರೇಂದ್ರಾಸ್ತಪೋಽಜ್ಞಾನನಿಬರ್ಹಣಂ ॥ ೨೨ ॥

---

೧೮. ಇಂಥ ಮಹತ್ತರವಾದ ಪುರಾಣವನ್ನು ಕೇಳುವವನು, ಧರ್ಮಿಷ್ಠನೂ, ಅಸೂಯಾರಹಿತನೂ, ಶ್ರದ್ಧಾವಂತನೂ, ಶಿವಭಕ್ತಿಪರಾಯಣನೂ ಆಗಿರಬೇಕು.

೧೯. ಹಿಂದೆ ಸೂರ್ಯಪುತ್ರನಾದ ಮನುಚಕ್ರವರ್ತಿಯು ಮಹಾತಪಸ್ವಿಯಾಗಿ ರಾಜ್ಯಭಾರಮಾಡುತ್ತಿದ್ದನು. ಆತನು ಒಂದು ಸಾರಿ ಕಾಮಿಕವೆಂಬ ಮಹಾರಣ್ಯವನ್ನು ಕುರಿತು ಪ್ರಯಾಣಮಾಡಿದನು.

೨೦. ಆ ವನದಲ್ಲಿ ಪ್ರತರ್ದನನೆಂಬ ರಾಜನು ಅತಿಶಯವಾದ ದಾನದಕ್ಷಿಣೆಗಳಿಂದ ಕೂಡಿದ ಮಹಾಯಜ್ಞವೊಂದನ್ನು ಮಾಡುತ್ತಿದ್ದನು. ಅಲ್ಲಿ ಅನೇಕ ಮಹರ್ಷಿಗಳು ಮಿಳಿತರಾಗಿ ತತ್ತ್ವವಿಚಾರವನ್ನು ನಡೆಸುತ್ತಿದ್ದರು.

೨೧. ಆ ತತ್ತ್ವವಿಚಾರದಲ್ಲಿ ಭೃಗುವೇ ಮೊದಲಾದ ಮಹರ್ಷಿಗಳೆಲ್ಲರೂ ನಿರ್ಣಯವನ್ನು ಕಾಣಲಾರದೆ ಸಂಶಯಾತ್ಮರಾಗಿದ್ದರು. ಅಷ್ಟೇ ಅಲ್ಲದೆ ಅಲ್ಲಿ ನೆರೆದಿದ್ದ ಬ್ರಾಹ್ಮಣರೆಲ್ಲರೂ ಮಾಯಾಮೋಹಿತರಾಗಿ ಸ್ತಬ್ಧರಾಗಿ ಕುಳಿತುಬಿಟ್ಟರು.

೨೨. ಹಾಗೆ ಸಂಶಯಚಿತ್ತರಾಗಿ ಬ್ರಾಹ್ಮಣರೆಲ್ಲರೂ ಕುಳಿತಿರಲು, ಆಗ ಒಂದು ಅಶರೀರವಾಣಿಯಾಯಿತು. “ ಎಲೈ ಬ್ರಾಹ್ಮಣರೇ ನಿಮಗೆ ಅಜ್ಞಾನವು ತೊಲಗಿ ಜ್ಞಾನವು ವೃದ್ಧಿಯಾಗಲು ತಪಸ್ಸುಮಾಡಿರಿ.

ತಪಸಾ ಪ್ರಾಪ್ಯತೇ ಸರ್ವಮಿತಿ ತೇ ಶುಶ್ರುವುರ್ಗಿರಂ ।
ಶ್ರುತ್ವಾ ತು ಮುನಯಸ್ಸರ್ವೇ ಭೃಗ್ವಾದ್ಯಾ ದಗ್ಧಕಿಲ್ಬಿಷಾಃ ॥ ೨೩ ॥

ಮನುಂ ಪುರಸ್ಕೃತ್ಯ ಯಯುಃ ಕ್ಷೇತ್ರಂ ವೈ ದ್ವಾದಶಾತ್ಮನಃ ।
ವಿಶ್ರುತಂ ದ್ವಾದಶಾದಿತ್ಯಮಿತಿ ಲೋಕೇಷು ತದ್ದ್ವಿಜಾಃ ॥ ೨೪ ॥

ಯತ್ರ ಸನ್ನಿಹಿತೋ ನಿತ್ಯಂ ಭಾನುಸ್ತ್ರಿದಶಪೂಜಿತಃ ।
ತೇಪುಸ್ತತ್ರ ತತೋ ಘೋರಂ ತತ್ತ್ವದರ್ಶನಕಾಂಕ್ಷಿಣಃ ॥ ೨೫ ॥

ಗತೇ ವರ್ಷಸಹಸ್ರೇತು ಸೂರ್ಯಃ ಪ್ರತ್ಯಕ್ಷತಾಮಗಾತ್ ।
ಕಿಮರ್ಥಂ ತಪ್ಯತೇ ವತ್ಸ ಸರ್ವೈಶ್ಚೈತೈರ್ಮಹರ್ಷಿಭಿಃ । ॥ ೨೬ ॥

ತುಷ್ಟೋಽಹಂ ತವ ದಾಸ್ಯಾಮಿ ಯತ್ತೇ ಮನಸಿ ವರ್ತತೇ !
ಏತೇ ಚ ಮುನಯಸ್ಸರ್ವೇ ತಪಸಾ ದಗ್ಧಕಿಲ್ಬಿಷಾಃ ॥ ೨೭ ॥
ಪಶ್ಯಂತು ಮಾಂ ಪರಂ ದೇವಂ ವಿಶ್ವಾಂತರ್ಯಾಮಿಣಂ ವಿಭುಂ ॥ ೨೮ ॥

---

೨೩. ಆ ತಪಸ್ಸಿನಿಂದಲೇ ನೀವು ಸಂಪೂರ್ಣ ಜ್ಞಾನವನ್ನೂ ಪಡೆಯುವಿರಿ, ಎಂಬ ಆ ಅಶರೀರವಾಣಿಯನ್ನು ಭೃಗುವೇ ಮೊದಲಾದ ಋಷಿಶ್ರೇಷ್ಠರೆಲ್ಲಾ ಕೇಳಿ ಸಂತೋಷಪಟ್ಟರು.

೨೪. ಒಡನೆಯೇ ಮನುವನ್ನೇ ಮುಂದುಮಾಡಿಕೊಂಡು ಆ ಬ್ರಾಹ್ಮಣರೆಲ್ಲರೂ ದ್ವಾದಶಾದಿತ್ಯವೆಂದು ಪ್ರಸಿದ್ಧಿಗೊಂಡಿರುವ ಸೂರ್ಯಕ್ಷೇತ್ರವೊಂದನ್ನು ಕುರಿತು ಪ್ರಯಾಣಮಾಡಿದರು.

೨೫. ಆ ಕ್ಷೇತ್ರದಲ್ಲಿ ಸೂರ್ಯದೇವನು ಯಾವಾಗಲೂ ದೇವತೆಗಳಿಂದ ಪೂಜಿತನಾಗಿ ವಾಸಿಸುತ್ತಿರುವನು. ಅಂಥ ಕ್ಷೇತ್ರದಲ್ಲಿ ಈ ಋಷಿಗಳೆಲ್ಲರೂ ತತ್ವಾರ್ಥವನ್ನು ತಿಳಿಯಲೋಸುಗ ತಪಸ್ಸಿಗೆ ಆರಂಭಿಸಿದರು.

೨೬. ಹೀಗೆ ತಪಸ್ಸಿನಿಂದ ಸಾವಿರ ವರ್ಷಗಳು ಕಳೆದವು. ಆಮೇಲೆ ಸೂರ್ಯದೇವನು ಈ ತಪಸ್ಸಿಗೆ ಮೆಚ್ಚಿ ಮನುವನ್ನು ಕುರಿತು "ಮಗನೇ, ನೀನು ಏತಕ್ಕೋಸ್ಕರ ಈ ಮಹರ್ಷಿಗಳೊಡನೆ ಇಷ್ಟು ಉಗ್ರವಾಗಿ ತಪಸ್ಸುಮಾಡುತ್ತಿರುವೆ.

೨೭-೨೮. ನಿನ್ನ ತಪಸ್ಸಿಗೆ ನಾನು ಮೆಚ್ಚಿರುವೆನು. ನಿನ್ನ ಇಷ್ಟಾರ್ಥವೇನು ? ಹೇಳು. ಅಲ್ಲದೆ ಈ ಋಷಿಗಳೂ ತಪಸ್ಸಿನಿಂದ ಈಗ ಪಾಪಮುಕ್ತರಾಗಿದ್ದಾರೆ. ಎದುರಿನಲ್ಲಿ ನಿಂತಿರುವ ಸರ್ವಾಂತರ್ಯಾಮಿಯಾದ ನನ್ನನ್ನು ಸರ್ವರೂ ನೋಡಲಿ" ಎಂದು ಅಪ್ಪಣೆಕೊಟ್ಟನು.

॥ ಸೂತ ಉವಾಚ ॥

ಇತಿ ದೃಷ್ಟ್ವಾ ರವಿಂ ಸಾಕ್ಷಾತ್ಪ್ರತ್ಯಕ್ಷಂ ಪುರತಃ ಸ್ಥಿತಂ ।
ಮೇನೇ ಕೃತಾರ್ಥಮಾತ್ಮಾನಂ ಮನುರ್ವೈವಸ್ವತಸ್ತದಾ ॥ ೨೯ ॥

ಆತ್ಮನ್ಯಾತ್ಮಾನಮಾಧಾಯ ಸರ್ವಭಾವೇನ ಸಂಯಮೀ ।
ಸ್ತುತಿಂ ಚಕಾರ ಸ ಮನುರ್ಮುನಿಭಿಸ್ಸಹ ಸುವ್ರತಃ ॥ ೩೦ ॥

ನಮೋ ನಮೋ ವರೇಣ್ಯಾಯ ವರದಾಯಾಂಶುಮಾಲಿನೇ ।
ಜ್ಯೋತಿರ್ಮಯ ನಮಸ್ತುಭ್ಯಂ ಅನಂತಾಯಾಜಿತಾಯ ತೇ ॥ ೩೧ ॥

ತ್ರಿಲೋಕಚಕ್ಷುಷೇ ತುಭ್ಯಂ ತ್ರಿಗುಣಾಯಾಮೃತಾಯ ಚ ।
ನಮೋ ಧರ್ಮಾಯ ಹಂಸಾಯ ಜಗಜ್ಜನನಹೇತವೇ ॥ ೩೨ ॥

ನರನಾರೀಶರೀರಾಯ ನಮೋ ಮೀಢುಷ್ಟಮಾಯ ತೇ ।
ಪ್ರಜ್ಞಾನಾಯಾಖಿಲೇಶಾಯ ಸಪ್ತಾಶ್ವಾಯ ತ್ರಿಮೂರ್ತಯೇ ॥ ೩೩ ॥

---

೨೯. ಹೀಗೆ ಅನುಗ್ರಹಿಸಿ ಎದುರಿನಲ್ಲಿ ಪ್ರತ್ಯಕ್ಷವಾಗಿ ನಿಂತಿರುವ ಸೂರ್ಯದೇವನನ್ನು ವೈವಸ್ವತಮನುವು ನೋಡಿ ತನ್ನ ಪ್ರಯತ್ನವು ಸಫಲವಾಯಿತೆಂದು ಮನಸ್ಸಿನಲ್ಲಿ ಬಹುವಾಗಿ ಆನಂದಿಸಿದನು.

೩೦. ಜಿತೇಂದ್ರಿಯನೂ, ತಪಸ್ವಿಯೂ ಆಗಿರುವ ವೈವಸ್ವತಮನುವು ಪರಮಾತ್ಮ ರೂಪಿಯಾದ ಸೂರ್ಯನನ್ನೇ ಸರ್ವಸ್ವವೆಂದು ಧ್ಯಾನಿಸುತ್ತಾ ಸಮಸ್ತ ಋಷಿಗಳೊಡನೆ ಹೀಗೆ ಪ್ರಾರ್ಥಿಸತೊಡಗಿದನು.

೩೧. "ಓ ಸೂರ್ಯದೇವನೇ ನೀನು ತೇಜೋರೂಪನು. ನಿನ್ನ ಕಿರಣಗಳು ಅನಂತಾನಂತವಾಗಿವೆ. ವರದನೂ ಅನಂತನೂ ಆಗಿ ಸರ್ವಸ್ವವನ್ನೂ ಜಯಿಸಿರುವ ನಿನಗೆ ವಂದನೆಯು.

೩೨. ನೀನು ಮೂರು ಲೋಕಗಳಿಗೂ ಕಣ್ಣಿನಂತಿದ್ದೀಯೆ. ಸತ್ವರಜಸ್ತಮೋಗುಣಗಳು ನಿನ್ನಲ್ಲಿ ಯಾವಾಗಲೂ ಅಡಕವಾಗಿವೆ. ಧರ್ಮಸ್ವರೂಪನೂ, ಜ್ಞಾನೋಪದೇಶಕನೂ ಪರಮಾತ್ಮಸ್ವರೂಪನೂ, ನೀನೇ. ನಿನ್ನಿಂದಲೇ ಈ ಜಗತ್ತೆಲ್ಲವೂ ಉತ್ಪತ್ತಿಯಾಗಿದೆ.

೩೩. ಸ್ತ್ರೀಪುರುಷಭೇದದಿಂದ ಜಗತ್ತಿನಲ್ಲಿ ಸಂಚರಿಸುವವನೂ ನೀನೇ. ಜಗತ್ತಿಗೆ ವೃಷ್ಟಿಯನ್ನು ಉಂಟುಮಾಡುತ್ತಾ ಮಂಗಳದಾಯಕನೂ, ಜ್ಞಾನಬೋಧಕನೂ ನೀನೇ ಆಗಿರುವೆ. ನಿನ್ನ ರಥವು ಏಳು ಕುದುರೆಗಳಿಂದ ಎಳೆಯಲ್ಪಡುತ್ತಿದೆ. ನೀನೇ ಜಗದೊಡೆಯನು.

ನನೋ ವ್ಯಾಹೃತಿರೂಪಾಯ ತ್ರಿಲಕ್ಷಾಯಾಶುಗಾಮಿನೇ ।
ಹರ್ಯಶ್ವಾಯ ನಮಸ್ತುಭ್ಯಂ ನಮೋ ಹರಿತಬಾಹವೇ ॥ ೩೪ ॥

*ಏಕಲಕ್ಷದ್ವಿಲಕ್ಷಾಯ ಬಹುಲಕ್ಷಾಯ ದಂಡಿನೇ ।
ಏಕಸಂಸ್ಥದ್ವಿಸಂಸ್ಥಾಯ ಬಹುಸಂಸ್ಥಾಯ ತೇ ನಮಃ ॥ ೩೫ ॥

ಶಕ್ತಿತ್ರಯಾಯ ಶುಕ್ಲಾಯ ರವಯೇ ಪರಮೇಷ್ಠಿನೇ ।
ತ್ವಂ ಶಿವಸ್ತ್ವಂ ಹರಿ ರ್ದೇವ ತ್ವಂ ಬ್ರಹ್ಮಾ ತ್ವಂ ದಿವಸ್ಪತಿಃ ॥ ೩೬ ॥

ತ್ವಮೋಂಕಾರೋ ವಷಟ್ಕಾರಃ ಸ್ವಧಾ ಸ್ವಾಹಾ ತ್ವಮೇವ ಹಿ ।
ತ್ವಾಮೃತೇ ಪರಮಾತ್ಮಾನಂ ನ ತತ್ಪಶ್ಯಾಮಿ ದೈವತಂ ॥ ೩೭ ॥

---

೩೪. ಗಾಯತ್ರೀಮಂತ್ರಕ್ಕೇ ವ್ಯಾಹೃತಿಯಾಗಿರುವವನು ಅಂದರೆ ಭೂರ್ಭುವಸ್ವಃ ಎಂಬ ರೂಪದಿಂದ ವಿಹರಿಸುವವನು ನೀನು. ಸೂರ್ಯದೇವನೇ, ನಿನ್ನ ನಿತ್ಯಗಮನವು ಮೂರು ಲಕ್ಷ ಯೋಜನದ ವಿಸ್ತಾರವಾಗಿದೆ. ನಿನ್ನ ಕುದುರೆಗಳೂ, ನಿನ್ನ ಬಾಹುಗಳೂ ಸಹ ಎಳೆಗರುಕೆಯಂತೆ ಹಸುರು ಬಣ್ಣವುಳ್ಳದ್ದಾಗಿದೆ.

೩೫. ಪರಮಾತ್ಮನೇ, ನಿನಗೆ ಜಗದ್ರಕ್ಷಣವೊಂದೇ ಒಂದು ಗುರಿ. ಅದನ್ನು ನಾನಾವಿಧವಾಗಿ ನಾನಾದೃಷ್ಟಿಗಳಿಂದ ನಿರ್ವಹಿಸುತ್ತಿದ್ದೀಯೆ. ಒಂದಲ್ಲ, ಎರಡಲ್ಲ, ಅನೇಕ ಲಕ್ಷ ವಿಧವಾಗಿ ತೋರುತ್ತಿರುವೆ. ನಿನ್ನ ಆಶ್ರಯವಸ್ತುಗಳೋ ಕೇವಲ ಒಂದೆರಡಲ್ಲ, ನಾನಾವಸ್ತುಗಳ ಜಾಲವೇ ಆಗಿದೆ. ಇಂತಹ ನಾನಾರೂಪದಿಂದ ಪ್ರಕಾಶಿಸುವ ನಿನಗೆ ಪ್ರಣಾಮವು.

೩೬. ಪ್ರಭು, ಮಂತ್ರ, ಉತ್ಸಾಹಗಳೆಂಬ ಮೂರು ಶಕ್ತಿಗಳೂ ನಿನ್ನಲ್ಲಿ ಅಡಗಿವೆ. ಉತ್ತಮ ಸ್ಥಾನದಲ್ಲಿರುವವನೂ, ವೇದಗಳಿಂದ ಸ್ತುತಿಸಲ್ಪಡುವವನೂ ನೀನೇ. ನೀನೇ ಬ್ರಹ್ಮನು. ಶಿವ, ವಿಷ್ಣು, ಬ್ರಹ್ಮ, ಸ್ವರ್ಗಾಧಿಪತಿ ಇವರೆಲ್ಲರೂ ನಿನ್ನ ಅಂಶಸಂಭೂತರೇ.

೩೭. ಓಂಕಾರವೆಂಬ ಪ್ರಣವವೂ, ವಷಟ್ಕಾರ, ಸ್ವಧಾ, ಸ್ವಾಹಾ ಎಂಬ ತೃಪ್ತಿವಚನಗಳೂ ನಿನ್ನ ಅಭಿಮಾನದ ಮಂತ್ರಗಳೇ. ನಿನ್ನನ್ನು ಬಿಟ್ಟರೆ ಪರಬ್ರಹ್ಮ ವಸ್ತುರೂಪದಿಂದ ಜಗತ್ತನ್ನಾವರಸಿರುವ ಮತ್ತೊಂದು ಪದಾರ್ಥವನ್ನು ನಾನು ಕಾಣೆನು.

---

(೧) ಏಕಲಕ್ಷದ್ವಿಲಕ್ಷಾಯ, ಎಂಬ ಪಾಠಾಂತರವಿದೆ.

ಏವಂ ಸ್ತುತ್ವಾ ಮನುಃ ಪ್ರಾಹ ಭಗವಂತಂ ತ್ರಯೀಮಯಂ ।
ಮುನಿಭಿಸ್ಸಹ ಧರ್ಮಾತ್ಮಾ ಸಮ್ಯಗ್ದರ್ಶನಕಾಂಕ್ಷಿಭಿಃ ॥ ೩೮ ॥

॥ ಮನುರುವಾಚ ॥

ಕಿಂ ತಚ್ಛ್ರೇಯಸ್ಕರಂ ತತ್ತ್ವಂ ವೇದಾಂತೇಷು ಪ್ರತಿಷ್ಠಿತಂ ।
ಕಸ್ಮಾದ್ವಿಶ್ವಮಿದಂ ಜಾತಂ ಕಸ್ಮಿನ್ವಾ ಲಯಮೇಷ್ಯತಿ ॥ ೩೯ ॥

ಕಸ್ಯ ಬ್ರಹ್ಮಾದಯೋ ದೇವಾ ವಶೇ ತಿಷ್ಠಂತಿ ಸರ್ವದಾ ।
ತದೇಕಮಥವಾನೇಕಮುಭಯಂ ವಾ ವದ ಪ್ರಭೋ ॥ ೪೦ ॥

ಕೇನ ವಾ ಜ್ಞಾಯತೇ ಸಮ್ಯಗಯಮಿತ್ಥಮಿತೀತಿವತ್ ।
ಜ್ಞಾತೇ ತಸ್ಮಿಂಸ್ತು ಕಿಂ ರೂಪಂ ತಸ್ಯ ಜ್ಞಾನಂ ಕಿಮಾತ್ಮಕಂ ॥ ೪೧ ॥

---

೩೮. ಹೀಗೆ ಮನುಚಕ್ರವರ್ತಿಯು, ವೇದತ್ರಯಸ್ವರೂಪನೂ, ಭಗವಂತನೂ ಆದ ಸೂರ್ಯನನ್ನು ಪ್ರಾರ್ಥನೆಮಾಡಿದನು. ಅಲ್ಲಿದ್ದ ಋಷಿಗಳು ಸಹ ಆ ಪರಮಾತ್ಮನನ್ನೇ ಮನದಲ್ಲಿ ಧ್ಯಾನಿಸುತ್ತಾ ಸೂರ್ಯದೇವನನ್ನೇ ನೋಡುತ್ತಾ ನಿಂತಿದ್ದರು.

೩೯. ಆಗ ವೈವಸ್ವತಮನುವು ಸೂರ್ಯನಾರಾಯಣನನ್ನು ಕುರಿತು,

“ ಸ್ವಾಮಿಯೇ ಉಪನಿಷತ್ತುಗಳಲ್ಲಿ ವಿವೃತವಾಗಿರುವ ತತ್ತ್ವಗಳಲ್ಲಿ ಶ್ರೇಷ್ಠವೂ ಮುಕ್ತಿಪ್ರದವೂ ಆದ ತತ್ತ್ವವಾವುದು ? ಯಾವನಿಂದ ಈ ಜಗತ್ತು ಹುಟ್ಟಿತು ? ಯಾವನಲ್ಲಿ ಕೊನೆಗೆ ಲಯವಾಗುತ್ತದೆ ?

೪೦. ಬ್ರಹ್ಮನೇ ಮೊದಲಾದ ಸಮಸ್ತ ದೇವತೆಗಳು ಯಾವಾಗಲೂ ಯಾರ ಅಧೀನದಲ್ಲಿರುತ್ತಾರೆ ? ಹಾಗೆ ಎಲ್ಲರನ್ನೂ ವಶಮಾಡಿಕೊಂಡಿರುವ ಪರಮಾತ್ಮನು ಒಬ್ಬನೋ ? ಅಥವಾ ಎರಡು ರೂಪದಿಂದಿರುವನೋ ? ಅಥವಾ ಅನೇಕ ಮೂರ್ತಿಗಳೋ ?

೪೧. ಆ ಮೂಲವಸ್ತುವನ್ನು, ಇದೇ ಆ ವಸ್ತುವು, ಎಂದು ಧೃಢವಾಗಿ ತಿಳಿದಿರುವವರು ಯಾರು ? ತಿಳಿಯತಕ್ಕವರು ಹೇಗಿರಬೇಕು ? ತಿಳಿಯಬೇಕಾದ ಆ ವಸ್ತುವಿನ ರೂಪವು ಹೇಗಿದೆ ? ಅದರ ಸ್ವರೂಪವು ಎಂಥಾದ್ದು ?

ಚರಿತಂ ತಸ್ಯ ಕಿಂ ತಾತ ಕಿಂ ತೀರ್ಥಂ ತದಧಿಷ್ಠಿತಂ ।
ಕೇಷಾಮನುಗ್ರಹಸ್ತಸ್ಯ ತೀರ್ಥೇ ನಿವಸತಾಂ ಪ್ರಭೋ ॥ ೪೨ ॥

ಲಕ್ಷಣಂ ಚ ಪುರಾಣಾನಾಂ ವ್ರತಾನಾಂ ಚ ಕ್ರಮೋ ಯಥಾ ।
ವರ್ಣಾನಾಮಾಶ್ರಮಾಣಾಂ ಚ ವರ್ಣಾಚಾರವಿಧಿಃ ಕಥಮ್ ॥ ೪೩ ॥

ಶ್ರಾದ್ಧಂ ಕಥಂ ವಾ ಕ್ರಿಯತೇ ಪ್ರಾಯಶ್ಚಿತ್ತವಿಧಿ: ಕಥಂ ।
ಏತತ್ಸರ್ವಂ ಹಿ ಭಗವನ್ ಪೃಷ್ಟಂ ವಕ್ತುಮಿಹಾರ್ಹಸಿ ॥ ೪೪ ॥

ಏವಂ ಮನೋರ್ವಚಃ ಶ್ರುತ್ವಾ ಭಗವಾನ್ ಭಾಸ್ಕರೋ ದ್ವಿಜಾಃ ।
ಯತ್ಪೃಷ್ಟಂ ತದಶೇಷೇಣ ವಕ್ತುಂ ಸಮುಪಚಕ್ರಮೇ ॥ ೪೫ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ನೈಮಿಷಾರಣ್ಯಪ್ರಶಂಸಾದಿ ಕಥನಂ ನಾಮ
ಪ್ರಥಮೋಽಧ್ಯಾಯಃ.

---

೪೨. ಓ ಪ್ರಭುವೇ, ಆ ವಸ್ತುವಿನ ಚರ್ಯೆಯು ಎಂಥಾದ್ದು ? ತಂದೆಯೇ, ಆ ಪರಾಪರ ವಸ್ತುವಿಗೆ ಆಶ್ರಯಕೊಟ್ಟಿರುವ ಸ್ಥಳವು ಯಾವುದು ? ಅದಕ್ಕೆ ಆಶ್ರಯ ಸ್ಥಾನವಾದ ಪುಣ್ಯತೀರ್ಥಗಳಲ್ಲಿ ವಾಸಮಾಡಲು ಯಾರ ಅನುಗ್ರಹವನ್ನು ಪಡೆಯ ಬೇಕು ?

೪೩. ಪುರಾಣಗಳ ಲಕ್ಷಣವೇನು ? ವ್ರತಗಳ ಕ್ರಮವು ಹೇಗೆ ? ವರ್ಣಾಶ್ರಮ ಧರ್ಮಗಳ ಸ್ವರೂಪವೇನು ? ಮತ್ತು ಅವುಗಳ ಸದಾಚಾರಕ್ರಮವು ಎಂತು ?

೪೪. ಶ್ರಾದ್ಧಾದಿಗಳನ್ನು ಮಾಡುವುದು ಹೇಗೆ? ಲೋಪದೋಷಗಳಿಗೆ ಪ್ರಾಯಶ್ಚಿತ್ತವೇನಿದೆ? ಭಗವಂತನೇ, ನಾನು ಈಗ ಕೇಳಿರುವ ಈ ಎಲ್ಲಾ ವಿಷಯ ಗಳನ್ನೂ ನನಗೆ ತಿಳಿಸಲು ನೀನೇ ಸಮರ್ಥನು. ದಯೆಯಿಟ್ಟು ವಿವರಿಸಬೇಕು " ಎಂದು ಪ್ರಾರ್ಥಿಸಲಾಗಿ—

೪೫. ಮನುವಿನ ಮಾತೆಲ್ಲವನ್ನೂ ಸೂರ್ಯದೇವನು ನಿದಾನವಾಗಿ ಕೇಳಿ, ಅನಂತರ ಆತನು ಕೇಳಿದ ಪ್ರಶ್ನೆಗಳಿಗೆಲ್ಲಾ ಕ್ರಮವಾಗಿ ಉತ್ತರವನ್ನು ಹೇಳಲು ಪ್ರಾರಂಭಿಸಿದನು ಎಂದು ಸೂತರು ಶೌನಕಾದಿಗಳಿಗೆ ತಿಳಿಸಿದರು.

ಇಲ್ಲಿಗೆ ಬ್ರಹ್ಮಪುರಾಣದ ಉಪಪುರಾಣವಾದ ಶ್ರೀ ಸೌರಪುರಾಣದಲ್ಲಿ ಸೂತಶೌನಕ ಸಂವಾದರೂಪವಾಗಿ ನೈಮಿಷಾರಣ್ಯ ಪ್ರಶಂಸೆಯೇ ಮೊದಲಾದ ವಿಷಯಗಳನ್ನುಳ್ಳ ಮೊದಲನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ದ್ವಿತೀಯೋಽಧ್ಯಾಯಃ.

॥ ಭಾನುರುವಾಚ ॥

ಶೃಣು ಪುತ್ರ ಪ್ರವಕ್ಷ್ಯಾಮಿ ತತ್ತ್ವಂ ಯತ್ರ ಪ್ರತಿಷ್ಠಿತಂ ।
ಪುರಾಣೇಽಸ್ಮಿನ್ ಮಹಾಭಾಗ ಸರ್ವವೇದಾರ್ಥಸಂಗ್ರಹೇ ॥ ೧ ॥

ತತ್ತತ್ತ್ವಂ ಯದ್ಭಗವತೋ ರೂಪಮೀಶಸ್ಯ ಶೂಲಿನಃ ।
ವಿಶ್ವಂ ತೇನಾಖಿಲಂ ವ್ಯಾಪ್ತಂ ನಾನ್ಯೇನೇತ್ಯಬ್ರವೀಚ್ಛ್ರುತಿಃ ॥ ೨ ॥

ಸ ಏವಾಽತ್ಮಾ ಸಮಸ್ತಾನಾಂ ಭೂತಾನಾಂ ಮನುಜಾಧಿಪ ।
ಚೈತನ್ಯರೂಪೋ ಭಗವಾನ್ಮಹಾದೇವಃ ಸಹೋಮಯಾ ॥ ೩ ॥

ಎರಡನೆಯ ಅಧ್ಯಾಯವು.

೧. ಸೂರ್ಯದೇವನು ತನ್ನ ಮಗನಾದ ಮನುವನ್ನು ಕುರಿತು “ ಅಯ್ಯಾ ಪುತ್ರನೇ ಸೌರಪುರಾಣವೆಂಬುದು ಸಮಸ್ತ ವೇದದ ಅರ್ಥಸಾರವು. ಈ ಸಾರವನ್ನೆಲ್ಲಾ ನಿನಗೆ ತಿಳಿಸುವೆನು ಕೇಳು ” ಎಂದು ಕ್ರಮವಾಗಿ ಅವನ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ಹೇಳಲಾರಂಭಿಸಿದನು.

೨. ಭಗವಂತನಾದ ಪರಮೇಶ್ವರನ ರೂಪವೇ ಈ ನಿಖಿಲಪ್ರಪಂಚದಲ್ಲೆಲ್ಲಾ ಹರಡಿದೆ ಎಂಬುದೇ ನಿಜವಾದ ಆ ತತ್ತ್ವವು. ಪರಮಾತ್ಮನಾದ ಪರಮೇಶ್ವರನ ಸ್ವರೂಪವನ್ನು ಬಿಟ್ಟರೆ ಮತ್ತಾವುದೂ ಜಗತ್ತಿನಲ್ಲಿಲ್ಲ, ಎಂಬುದನ್ನು ವೇದಗಳೂ ಸಹ ಘೋಷಿಸುತ್ತಿವೆ.

೩. ಮನುಚಕ್ರವರ್ತಿಯೇ! ಲೋಕದಲ್ಲಿ ಎಷ್ಟೋ ಭೂತದ್ರವ್ಯಗಳು ಅಂದರೆ ಸ್ಥಾವರ ಜಂಗಮಗಳಾದ ವಸ್ತುಗಳು ಸೃಷ್ಟಿಸಲ್ಪಟ್ಟಿವೆಯಷ್ಟೆ. ಅವುಗಳಲ್ಲಿ ಚೈತನ್ಯರೂಪದಿಂದ ಅಡಗಿರುವವನು ಯಾರೆಂದರೆ, ಆ ಉಮಾಪತಿಯಾದ ಪರಮೇಶ್ವರನೇ.

ಏಕೋಽಪಿ ಬಹುಧಾ ಭಾತಿ ಲೀಲಯಾ ಕೇವಲಶ್ಶಿವಃ ।
ಬ್ರಹ್ಮವಿಷ್ಣ್ವಾದಿರೂಪೇಣ ದೇವದೇವೋ ಮಹೇಶ್ವರಃ ॥ ೪ ॥

ಪೃಷ್ಟೋ ಬ್ರಹ್ಮಾದಿಭಿರ್ದೇವೈಃ ಕಸ್ತ್ವಂ ದೇವೇತಿ ಶಂಕರಃ ।
ಅಬ್ರವೀದಹಮೇವೈಕೋ ನಾನ್ಯಃ ಕಶ್ಚಿದಿತಿ ಶ್ರುತಿಃ ॥ ೫ ॥

ಆತ್ಮಭೂತಾನ್ಮಹಾದೇವಾಲ್ಲೀಲಾವಿಗ್ರಹರೂಪಿಣಃ ।
ಆದಿಸರ್ಗೇ ಸಮುದ್ಭೂತೌ ಬ್ರಹ್ಮವಿಷ್ಣೂ ಸುರೋತ್ತಮೌ ॥ ೬ ॥

ತಮೇಕಂ ಪರಮಾತ್ಮಾನಂ ಆದಿಕರ್ತಾರಮೀಶ್ವರಮ್ ।
ಪ್ರಾಹುರ್ಬಹುವಿಧಂ ತಜ್ಜ್ಞಾ ಇಂದ್ರಂ ಮಿತ್ರ ಇತಿ ಶ್ರುತಿಃ ॥ ೭ ॥

ನ ತಸ್ಮಾದಧಿಕಃ ಕಶ್ಚಿನ್ನಾಣೀಯಾನಪಿ ಕಶ್ಚನ ।
ತೇನೇದಮಖಿಲಂ ಪೂರ್ಣಂ ಶಂಕರೇಣ ಮಹಾತ್ಮನಾ ॥ ೮ ॥

---

೪. ದೇವದೇವನಾದ ಪರಮೇಶ್ವರನು ಒಬ್ಬನೇ. ಆದರೂ ತನ್ನದೇ ಆದ ಒಂದು ಲೀಲೆಯಿಂದ, ಬ್ರಹ್ಮ, ವಿಷ್ಣು, ಇವರೇ ಮೊದಲಾದ ಬೇರೆ ಬೇರೆ ದೇವತೆಗಳ ಹೆಸರಿನಲ್ಲಿ ತೋರುತ್ತಿದ್ದಾನೆ.

೫. ಒಂದು ಸಾರಿ ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ ಶಿವನ ಸಮೀಪಕ್ಕೆ ಬಂದು “ ದೇವ ದೇವನೇ ನೀನು ಯಾರು ? ನಿನ್ನ ಸ್ವರೂಪವೆಂತಾದ್ದು ? ” ಎಂದು ಪ್ರಶ್ನಿಸಿದರು. ಆಗ ಶಂಕರನು “ ನಾನು ಒಬ್ಬನೇ, ನಾನೇ ಜಗತ್ತು, ನನ್ನಿಂದ ಬೇರೆಯಾದ ವಸ್ತುವೇ ಇಲ್ಲ ” ಎಂದು ತಿಳಿಸಿದನೆಂದು ವೇದದಲ್ಲಿ ಉಕ್ತವಾಗಿದೆ.

೬. ಲೋಕಕ್ಕೆ ಮಹಾದೇವನು ಆತ್ಮಭೂತನು. ಆತನು ಲೀಲಾಮಾತ್ರದಿಂದ ಶರೀರಗಳನ್ನು ಪಡೆಯುವನು. ಬ್ರಹ್ಮ ಮತ್ತು ವಿಷ್ಣು ಇವರಿಬ್ಬರೂ, ಸೃಷ್ಟಿಯ ಆದಿಯಲ್ಲಿ ಈ ಪರಶಿವನಿಂದಲೇ ಉತ್ಪನ್ನರಾದರು.

೭. ಆ ಪರಮೇಶ್ವರನನ್ನೇ ಪರಮಾತ್ಮನೆಂದೂ, ಆದಿಕರ್ತೃವೆಂದೂ, ಈಶ್ವರನೆಂದೂ ನಾನಾವಿಧವಾಗಿ ಹೊಗಳುತ್ತಾರೆ. ಶ್ರುತಿಯಲ್ಲಿಯೂ ಕೂಡ ಆ ಪರಶಿವನೇ ಇಂದ್ರ, ಮಿತ್ರ ಎಂಬ ಅನೇಕ ನಾಮಗಳಿಂದ ಸ್ತುತಿಸಲ್ಪಟ್ಟಿರುವನು.

೮. ಆ ಪರಮೇಶ್ವರನಿಗಿಂತ ದೊಡ್ಡವನೂ ಮತ್ತೊಬ್ಬನಿಲ್ಲ. ಅವನಿಗಿಂತ ಚಿಕ್ಕವಸ್ತುವೂ ಜಗತ್ತಿನಲ್ಲಿ ಮತ್ತೊಂದು ತೋರುವುದಿಲ್ಲ. ಈ ಸಮಸ್ತ ಜಗತ್ತು ಆ ಪರಮೇಶ್ವರನಿಂದಲೇ ಆವರಿಸಲ್ಪಟ್ಟಿದೆ.

ಮುಮುಕ್ಷಿಭಿಃ ಸದಾ ಧ್ಯೇಯಃ ಶಿವ ಏಕೋ ನಿರಂಜನಃ ।
ಸರ್ವಮನ್ಯತ್ಪರಿತ್ಯಜ್ಯ ಮುಕ್ತ ಏವ ವಿಮುಚ್ಯತೇ ॥ ೯ ॥

ನ ತಸ್ಯ ಕರ್ಮ ಕಾರ್ಯಂ ವಾ ಬಂಧಮುಕ್ತೀ ಮಹೇಶಿತುಃ ।
ಆನಂದರೂಪಯಾ ಗೌರ್ಯಾ ಕ್ರೀಡತಿ ಸ್ಮ ಮಹೇಶ್ವರಃ ॥ ೧೦ ॥

---

೯. ಮೋಕ್ಷಾರ್ಥಿಯಾದವನು ನಿಷ್ಕಲ್ಮಶನಾದ ಆ ಶಿವನನ್ನೇ ಧ್ಯಾನಮಾಡಬೇಕು. ಮೋಕ್ಷವನ್ನು ಪಡೆವವನೂ ಸಹ ಸರ್ವವನ್ನೂ ತ್ಯಾಗಮಾಡಿ ಆ ಪರಶಿವನಲ್ಲಿಯೇ ಐಕ್ಯ ಹೊಂದುವನು.

೧೦. ಮಹೇಶ್ವರನಿಗೆ ಸಂಸಾರಬಂಧನಗಳೇ ಆಗಲಿ, ಮೋಕ್ಷವೇ ಆಗಲಿ ಇರುವದಿಲ್ಲ. ಆನಂದ ಸ್ವರೂಪಿಣಿಯಾದ ಪಾರ್ವತಿಯೊಡನೆ ಸರ್ವದಾ ಮಹೇಶ್ವರನು ಸಂತೋಷದಿಂದಿರುವನು.

ಕೆಲವು ಪ್ರತಿಗಳಲ್ಲಿ ಈ ಕೆಳಗೆ ಕಂಡಂತೆ ಅಧಿಕಪಾಠವಿದೆ

ಧರ್ಮಾರ್ಥಕಾಮ ಮೋಕ್ಷಾಣಾಂ ಪ್ರಾಯೇಣ ಕರಣಂ ಪರಂ ।
ಶಿವಭಕ್ತಿಃ ಸದಾ ಸತ್ಯಂ ನಾನ್ಯತ್ಕಿಂಚನ ಭೂತಲೇ ॥ ೧ ॥

ತ್ರಿಲೋಕ್ಯಾಂ ಸುಖಕಾಮೋ ಯಸ್ತೇನ ಪೂಜ್ಯಃ ಸದಾಶಿವಃ ।
ಶಿವಭಕ್ತಿಮೃತೇ ಸೌಖ್ಯಂ ಕುತಃ ಸ್ಯಾತ್ಸರ್ವದೇಹಿನಾಂ ॥ ೨ ॥

ಶಿವಭಕ್ತ್ಯಾ ಧನಂ ವಿದ್ಯಾ ಯತಃ ಶತ್ರುಕ್ಷಯಸ್ತಥಾ !
ಪ್ರಾಪ್ಯತೇ ವಿಜಯಃ ಸರ್ವಂ ಸತ್ಯಮೇತನ್ನ ಸಂಶಯಃ ॥ ೩ ॥

ರೋಗಕ್ಷಯ ಸ್ತಥಾರೋಗ್ಯಂ ಯದ್ಯದ್ಧಿ ಮನಸೇಚ್ಛತಿ !
ಜನಸ್ತತ್ಸರ್ವಮಾಪ್ನೋತಿ ವೇದಸ್ಯ ವಚನಂ ಯಥಾ ॥ ೪ ॥

ತರ್ಹಿ ಸರ್ವೇಽಪಿ ಶಿವಭಕ್ತಿಂ ಕಥಂ ನಕುರ್ವಂತಿ ತತ್ರಾಹ.----

ಯದಾ ಲಲಾಟೇ ಧಾತ್ರಾಹಿ ಲಿಖಿತಂ ಸೌಖ್ಯಮುತ್ತಮಂ !
ಶಿವಭಕ್ತೌ ತದಾ ಬುದ್ಧಿರ್ಜಾಯತೇ ನಾನ್ಯಥಾ ಧ್ರುವಂ ॥ ೫ ॥

೧. ೨. ೩. ೪. ೫. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳ ಸಾಧನೆಗೆ ಶಿವಭಕ್ತಿಯೇ ಮೂಲಕಾರಣವು. ಭೂಮಿಯಲ್ಲಿ ಶಿವಭಕ್ತಿಗಿಂತ ಉತ್ತಮ

ಅಕ್ಷರಂ ಪರಮಂ ವ್ಯೋಮ ಶೈವಂ ಜ್ಯೋತಿರನಾಮಯಂ ।
ಯಸ್ತನ್ನ ವೇದ ಕಿಂ ವೇದೈ ರ್ಬ್ರಾಹ್ಮಣಸ್ಯ ಭವಿಷ್ಯತಿ ॥ ೧೧ ॥

ನಾನ್ಯೋ ವೇದ್ಯಃ ಸ್ವಯಂಜ್ಯೋತೀ ರುದ್ರ ಏಕೋ ನಿರಂಜನಃ ।
ತಸ್ಮಿನ್ ಜ್ಞಾತೇಽಖಿಲಂ ಜ್ಞಾತಮಿತ್ಯಾಹುರ್ವೇದವಾದಿನಃ ॥ ೧೨ ॥

ಅಹಂ ಬ್ರಹ್ಮಾ ಚ ವಿಷ್ಣುಶ್ಚ ಶಕ್ರಶ್ಚಾನ್ಯೇ ದಿವೌಕಸಃ ।
ಅದ್ಯಾಪ್ಯುಪಾಯೈರ್ವಿವಿಧೈಃ ಶಂಭೋರ್ದರ್ಶನಕಾಂಕ್ಷಿಣಃ ॥ ೧೩ ॥

---

೧೧. ಶಿವತತ್ತ್ವವು ನಾಶರಹಿತವಾದದ್ದು. ಅತ್ಯುತ್ತಮವಾದದ್ದು. ಅನಿಮಿತ್ತವಾಗಿ ಬಂದಿರುವ ತೇಜಸ್ಸುಳ್ಳದ್ದು. ಈ ತತ್ತ್ವವನ್ನು ಯಾವನು ಅರಿಯಲಾರನೋ, ಅಂಥವನಿಗೆ ಯಾವ ವೇದಗಳಿಂದ ತಾನೇ ಏನು ಪ್ರಯೋಜನ ?

೧೨. ದೇವತೆಗಳಲ್ಲಿ ರುದ್ರನೊಬ್ಬನೇ ಸ್ವಯಂಪ್ರಕಾಶಕನು. ಪಾಪನಿರ್ಮುಕ್ತನು. ಮುಖ್ಯವಾಗಿ ತಿಳಿಯಲೇಬೇಕಾದ ತತ್ತ್ವವುಳ್ಳವನು. ಅವನ ವಿಷಯವನ್ನು ಸಂಪೂರ್ಣವಾಗಿ ತಿಳಿದರೇ, ಸಮಸ್ತ ತತ್ತ್ವಗಳ ಪರಿಶ್ರಮವೂ ಉಂಟಾಯಿತೆಂದು ವೇದಜ್ಞರು ಹೇಳುತ್ತಾರೆ.

೧೩. ಮನುವೇ, ಈಗ ನಾನೂ, ಬ್ರಹ್ಮನೂ, ವಿಷ್ಣುವೂ, ಇಂದ್ರನೂ, ಇನ್ನೂ ಇತರ ದೇವತೆಗಳೂ ಸಹ ಶಂಕರನ ದರ್ಶನಾಕಾಂಕ್ಷಿಗಳಾಗಿ ಅಹರ್ನಿಶವೂ ಪ್ರಯತ್ನ ಪಡುತ್ತಿದ್ದೇವೆ. ಅನೇಕ ಉಪಾಯಗಳನ್ನು ಹುಡುಕುತ್ತಿದ್ದೇವೆ.

ವಾದ ಸುಖಸಾಧನವು ಮತ್ತೊಂದಿಲ್ಲ. ಮೋಕ್ಷಸುಖವನ್ನು ಹೊಂದಲಿರುವವನಂತೂ ಶಿವಧ್ಯಾನವನ್ನು ಸರ್ವದಾ ಮಾಡುತ್ತಿರಬೇಕು. ಐಹಿಕಸುಖಕ್ಕೆ ಬೇಕಾದ ಹಣ, ವಿದ್ಯೆ, ಕೀರ್ತಿ, ಶತ್ರುನಾಶ, ವಿಜಯ ಇವೆಲ್ಲವೂ ಶಿವಾನುಗ್ರಹದಿಂದಲೇ ಲಭಿಸಬೇಕು. ಪ್ರಾರಬ್ಧಕರ್ಮದಿಂದ ಬಂದಿರುವ ರೋಗಗಳನ್ನು ಹೋಗಲಾಡಿಸಿಕೊಂಡು ಇಷ್ಟಾರ್ಥಗಳನ್ನು ಸಂಪಾದಿಸಿಕೊಳ್ಳಲು, ಭಕ್ತಿಯಿಂದ ಶಿವಾರ್ಚನೆ ಮಾಡುವುದೊಂದೇ ಉಪಾಯವೆಂದು ಸಕಲ ವೇದಗಳೂ ಘೋಷಿಸುತ್ತವೆ. ಆದರೆ ಎಲ್ಲರಿಗೂ ಶಿವನಲ್ಲಿ ಭಕ್ತಿಯುಂಟಾಗಲಾರದು. ಯಾರು ವಿಶೇಷ ಸುಕೃತಿಗಳಾಗಿರುವರೋ ಅಂತಹವರಿಗೆ ಮಾತ್ರಶಿವಧ್ಯಾನದಲ್ಲಿ ಬುದ್ಧಿಯು ಹೋಗುವಂತೆ ಬ್ರಹ್ಮನು ಅವರ ಹಣೆಯಲ್ಲಿ ಬರೆದಿರುವನು. ಪಾಪಿಷ್ಠರಿಗೆ ನಿಜವಾಗಿಯೂ ಶಿವಭಕ್ತಿಯುಂಟಾಗಲಾರದು. ಇದು ನಿಶ್ಚಯ.

ನ ದಾನೈರ್ನ ತಪೋಭಿರ್ವಾ ನಾಶ್ವಮೇಧಾದಿಭಿರ್ಮಖೈಃ ।
ಭಕ್ತ್ಯೈವಾನನ್ಯಯಾ ರಾಜನ್ ಜ್ಞಾಯತೇ ಭಗವಾನ್ ಶಿವಃ ॥ ೧೪ ॥

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ।
ಭರ್ಗಾದ್ವಿಶ್ವಸ್ಯ ಭರಣಾದ್ವಿಶ್ವಯೋನೇರುಮಾಪತೇಃ ॥ ೧೫ ॥

ತಸ್ಯಜ್ಞಾನಮಯೀ ಶಕ್ತಿ ರವ್ಯಯಾ ಗಿರಿಜಾ ಶಿವಾ ।
ತಯಾ ಸಹ ಮಹಾದೇವಃ ಸೃಜತ್ಯವತಿ ಹಂತಿ ಚ ॥ ೧೬ ॥

ಆಚಕ್ಷತೇ ತಯೋರ್ಭೇದ ಮಜ್ಞಾನಂ ಪರಮಾರ್ಥತಃ ।
ಅಭೇದಶ್ಶಿವಯೋ ಸ್ಸಿದ್ಧೋ ವಹ್ನಿದಾಹಕಯೋರಿವ ॥ ೧೭ ॥

---

೧೪. ಆ ಪರಮೇಶ್ವರನನ್ನು ನೋಡಲು ದಾನಧರ್ಮಗಳಾಗಲಿ, ಅಶ್ವಮೇಧವೇ ಮೊದಲಾದ ಯಜ್ಞಯಾಗಗಳಾಗಲಿ ಉಪಯೋಗವಾಗುವುದಿಲ್ಲ. ಯಾವನು ಅಸದೃಶವಾದ ಭಕ್ತಿಯಿಂದ ಶಂಕರನನ್ನು ಉಪಾಸನೆ ಮಾಡುವನೋ ಅವನಿಗೆ ಶಂಕರನು ಸುಲಭವಾಗಿ ಗೋಚರನಾಗುವನು.

೧೫-೧೬. ಸಮಸ್ತ ಇಂದ್ರಿಯಗಳಿಗೂ, ಇಂದ್ರಯ ಚಾಲಕವಾದ ಮನಸ್ಸಿಗೂ, ಗೋಚರನಲ್ಲದವನು ಪರಶಿವನು. ಪ್ರಪಂಚವನ್ನು ಸೃಷ್ಟಿಮಾಡಿದ್ದರಿಂದ ಪರಮೇಶ್ವರನು ವಿಶ್ವಯೋನಿಯಾದನು. ರಕ್ಷಣೆಮಾಡಿದ್ದರಿಂದ ಅವನು ಭರ್ಗನೆನಿಸಿಕೊಂಡನು. ಆದರೆ ಕೇವಲ ಜ್ಞಾನಸ್ವರೂಪಳೂ, ನಾಶರಹಿತಳೂ, ಪರ್ವತರಾಜಪುತ್ರಿಯೂ, ಶಕ್ತಿದೇವತೆಯೂ ಆದ ಪಾರ್ವತಿಯ ಸಹಾಯದಿಂದ ಆ ಪರಶಿವನು ಲೋಕವನ್ನು ಸೃಷ್ಟಿಸುವನು, ರಕ್ಷಿಸುವನು, ನಾಶಮಾಡುವನು.

೧೭. ಆ ಪಾರ್ವತೀ ಪರಮೇಶ್ವರರು ಯಾವಾಗಲೂ ಏಕವ್ಯಕ್ತಿಯಂತೆ ಜೊತೆಯಲ್ಲಿರತಕ್ಕವರು. ಅಜ್ಞಾನಿಗಳು ಮಾತ್ರ ಅವರನ್ನು ಬೇರೆ ಬೇರೆಯಾಗಿ ತಿಳಿಯುವರು. ಬೆಂಕಿಯೂ, ಅದರಲ್ಲಿರುವ ಸುಡುವಶಕ್ತಿಯೂ ಹೇಗೆ ಬೇರೆ ಬೇರೆ ಇರಲಾರವೋ, ಹಾಗೆ ಆ ಶಿವದಂಪತಿಗಳಿಗೆ ವಿನಾಭಾವವು ಎಂದಿಗೂ ಇರುವುದಿಲ್ಲ.

ಮಾಯಯಾ ಸಾ ಪರಮಾ ಶಕ್ತಿರಕ್ಷರಾ ಗಿರಿಜಾಽವ್ಯಯಾ ।
ಮಾಯಾ ವಿಶ್ವಾತ್ಮಕೋ ರುದ್ರ ಸ್ತಜ್ಜ್ಞಾತ್ವಾ ಹ್ಯಮೃತೀ ಭವೇತ್ ॥ ೧೮ ॥

ಸ್ವಾತ್ಮನ್ಯವಸ್ಥಿತಂ ದೇವಂ ವಿಶ್ವವ್ಯಾಪಿನಮೀಶ್ವರಂ ।
ಭಕ್ತ್ಯಾ ಪರಮಯಾ ರಾಜನ್ ಜ್ಞಾತ್ವಾ ಪಾಶೈರ್ವಿಮುಚ್ಯತೇ ॥ ೧೯ ॥

ಸಕಲಂ ತಸ್ಯ ಭಾಸೈವ ಭಾತಿ ನಾನ್ಯೇನ ಶಂಕರಃ ।
ತಸ್ಮಿನ್ ಪ್ರಕಾಶಮಾನೇ ಹಿ ನೈವ ಭಾಂತ್ಯನಲಾದಯಃ ॥ ೨೦ ॥

ತಸ್ಮಿನ್ಮಹೇಶ್ವರೇ ಗೂಢೇ ವಿದ್ಯಾವಿದ್ಯೇ ಕ್ಷರಾಕ್ಷರೇ ।
ವಿಧಾತರಿ ಜಗನ್ನಾಥೇ ವಿಶ್ವಂ ಭಾತಿ ನ ವಸ್ತುತಃ ॥ ೨೧ ॥

---

೧೮. ಆ ಪಾರ್ವತಿಯೇ, ಶಿವಶಕ್ತಿಯು ಮತ್ತು ನಾಶರಹಿತಳು. ಆಕೆಯನ್ನೇ ಮಾಯೆಯನ್ನುವರು. ಆಕೆಯಿಂದ ಕೂಡಿದ ಪರಮೇಶ್ವರನೇ, ಮಾಯೆಯಿಂದಾವೃತವಾಗಿರುವ ಜಗತ್ತು. ಆ ಮಾಯಾವೃತಜಗದ್ರೂಪಿಯಾದ ಪರಮಾತ್ಮನನ್ನು ಯಾವನು ಸರಿಯಾಗಿ ಅರಿಯುವನೋ ಅವನೇ ಮುಕ್ತನಾಗುವುದಕ್ಕೆ ಯೋಗ್ಯನು.

೧೯. ಮನುರಾಜನೇ, ಆ ಪರಶಿವನು ಪ್ರಪಂಚದಲ್ಲೆಲ್ಲಾ ವ್ಯಾಪ್ತನಾಗಿರುವನು. ಯಾವನು ಅನ್ಯಾದೃಶಭಕ್ತಿಯಿಂದ ಆ ಪರಶಿವನು ತನ್ನ ಹೃದಯದಲ್ಲಿರುವನೆಂದೂ, ದೇವದೇವನೆಂದೂ, ಜಗದೊಡೆಯನೆಂದೂ ಅರಿತು ಧ್ಯಾನಿಸುವನೋ ಆತನು ಸಮಸ್ತ ಬಂಧನಗಳಿಂದಲೂ ತಪ್ಪಿಸಿಕೊಳ್ಳುವನು.

೨೦. ಆ ಶಂಕರನ ಕಾಂತಿಯಿಂದಲೇ ಎಲ್ಲವೂ ಲೋಕದಲ್ಲಿ ಪ್ರಕಾಶಿಸುವುವು. ಯಾವುದರ ಒಂದು ಕಾಂತಿಯೂ ಆ ಶಿವನನ್ನು ಪ್ರಕಾಶಗೊಳಿಸಲಾರದು. ಆ ದೇವದೇವನ ತೇಜಸ್ಸಿನಮುಂದೆ ಅಗ್ನಿಯೇ ಮೊದಲಾದ ತೇಜೋವಸ್ತುಗಳು ಮಂಕಾಗುವುವು

೨೧. ವಿದ್ಯಾ ಮತ್ತು ಅವಿದ್ಯಾರೂಪನಾದ ಆ ಪರಮೇಶ್ವರನು ಗೂಢಶಕ್ತಿಯುಳ್ಳವನು. ನಾಶವಾಗುವ ಜಗತ್ತೂ, ಶಾಶ್ವತವಾಗಿರುವ ಆತ್ಮವೂ ಪರಮೇಶ್ವರನ ವಿಕಾರಗಳೇ. ಈ ಜಗತ್ತನ್ನು ಸೃಷ್ಟಿಸುವವನು, ಹಾಗೆಯೇ ರಕ್ಷಿಸುವವನು ಈ ಈಶ್ವರನೇ. ಮಾಯಾವಿಶಿಷ್ಟನಾದ ಈಶ್ವರನೇ ಜಗತ್ತು. ಜಗತ್ತೆಂಬುದು ಬೇರೆ ಎಂದಿಗೂ ಇಲ್ಲ.

ತಸ್ಮಿನ್ಮಹೇಶ್ವರೇ ವಿಶ್ವಮೋತಂ ಪ್ರೋತಂ ನ ಸಂಶಯಃ ।
ತಸ್ಮಿನ್ ಜ್ಞಾತೇಽಖಿಲೈಃ ಪಾಶೈರ್ಮುಚ್ಯತೇ ಮನುಜೇಶ್ವರ ॥ ೨೨ ॥

ಬ್ರಹ್ಮವಿಷ್ಣ್ವಾದಯೋ ದೇವಾ ಮುನಯೋ ಮನವಸ್ತಥಾ ।
ಸರ್ವೇ ಕ್ರೀಡನಕಾಸ್ತಸ್ಯ ದೇವದೇವಸ್ಯ ಶೂಲಿನಃ ॥ ೨೩ ॥

ಸ ಏವೈಕೋ ನ ಚಾನೇಕೋ ನ ದ್ವಿರೂಪಃ ಕದಾಚನ ।
ತಸ್ಯಾಽಽಜ್ಞಯಾಖಿಲಂ ವಿಶ್ವಂ ವರ್ತತೇ ತನ್ನಿಯಂತ್ರಿತಂ ॥ ೨೪ ॥

ಆದಿಸರ್ಗೇ ಮಹಾದೇವೋ ಬ್ರಹ್ಮಾಣಮಸೃಜತ್ಪ್ರಭುಃ ।
ದಕ್ಷಿಣಾಂಗಾದ್ವಿರೂಪಾಕ್ಷಃ ಸೃಷ್ಟ್ಯರ್ಥಂ ಲೀಲಯಾ ಕಿಲ ॥ ೨೫ ॥

ತಸ್ಮೈ ವೇದಾನ್ ಪುರಾಣಾನಿ ದತ್ತವಾನಗ್ರಜನ್ಮನೇ ।
ವಾಸುದೇವಂ ಜಗದ್ಯೋನಿಂ ಸತ್ವೋದ್ರಿಕ್ತಂ ಸನಾತನಂ ॥ ೨೬ ॥

---

೨೨. ಆ ಪರಮೇಶ್ವರನಲ್ಲಿಯೇ ಸಮಸ್ತಜಗತ್ತೂ ಹಾಸುಹೊಕ್ಕಾಗಿ ವ್ಯಾಪಿಸಿದೆ. ಈ ಅಂಶವನ್ನು ತಿಳಿದು ಯಾವನು ಭಜಿಸುತ್ತಾನೋ ಆತನು ಸಮಸ್ತ ಬಂಧನಗಳಿಂದಲೂ ಬಿಡಲ್ಪಡುವನು.

೨೩. ದೇವದೇವನಾದ ಪರಮೇಶ್ವರನಿಗೆ ಬ್ರಹ್ಮ, ವಿಷ್ಣು ಇವರೇ ಮೊದಲಾದ ಸಮಸ್ತದೇವತೆಗಳೂ ಸಮಸ್ತಮುನಿಗಳೂ ಆಟದ ಬೊಂಬೆಗಳಂತೆ ಕಾಣುತ್ತಾರೆ.

೨೪. ಆ ಶಿವನು ಒಬ್ಬನೇ. ಅನೇಕಜನ ಅಂತಹ ಶಿವರಿಲ್ಲ. ಶಿವನಲ್ಲಿ ದ್ವೈತಭಾವವೇ ಇಲ್ಲ. ಆ ಅದ್ವೈತರೂಪಿಯಾದ ಪರಶಿವನ ಅಪ್ಪಣೆಯಿಂದಲೇ ಸಮಸ್ತವಿಶ್ವವೂ ಸಹ ನಡೆಯುತ್ತಿದೆ.

೨೫. ವಿರೂಪಾಕ್ಷನಾದ ಪರಮೇಶ್ವರನು ತನ್ನ ಬಲಭಾಗದ ಅವಯುವದಿಂದ ಮೊದಲು ಬ್ರಹ್ಮನನ್ನು ಸೃಷ್ಟಿಮಾಡಿದನು. ಲೋಕದಸೃಷ್ಟಿಯನ್ನೇ ಅವನಿಗೆ ಉದ್ಯೋಗವನ್ನಾಗಿ ಕಲ್ಪಿಸಿ ಅವನ ಸಹಾಯಕ್ಕಾಗಿ ಸಮಸ್ತವೇದಗಳನ್ನೂ, ಪುರಾಣಗಳನ್ನೂ ಕೊಟ್ಟನು.

ಅಸೃಜತ್ಪಾಲನಾರ್ಥಂ ಚ ವಾಮಭಾಗಾನ್ಮಹೇಶ್ವರಃ ।
ಹೃದಯಾತ್ಕಾಲರುದ್ರಾಖ್ಯಂ ಜಗತ್ಸಂಹಾರಕಾರಕಂ ॥ ೨೭ ॥

ಅಸೃಜದ್ಯೋಗಿನಾಂ ಧ್ಯೇಯೋ ನಿರ್ಗುಣಸ್ತು ಸ್ವಯಂ ಶಿವಃ ।
ವಿಶ್ವಂ ತಸ್ಮಾದ್ಧಿ ಸಂಭೂತಂ ತಸ್ಮಿಂಸ್ತಿಷ್ಠತಿ ಶಂಕರೇ ॥ ೨೮ ॥

ಲಯಮೇಷ್ಯತಿ ತತ್ರೈವ ತ್ರಯಮೇತತ್ಸ್ವಲೀಲಯಾ ।
ಸ ಏವಾತ್ಮಾ ಮಹಾದೇವಃ ಸರ್ವೇಷಾಮೇವ ದೇಹಿನಾಂ ॥ ೨೯ ॥

ಜ್ಞಾನೇನ ಭಕ್ತಿಯುಕ್ತೇನ ಜ್ಞಾತವ್ಯಃ ಪರಮೇಶ್ವರಃ ।
ನ ಪಶ್ಯಾಮಿ ಮಹಾದೇವಾದಧಿಕಂ ದೇವತಾಂತರಂ ॥ ೩೦ ॥

ವೇದಾ ಅಪಿ ತಮೇವಾರ್ಥಮಾಹುಃ ಸ್ವಾಯಂಭುವೇಽಂತರೇ

೨೬-೨೭. ಪರಮೇಶ್ವರನು ತನ್ನ ಎಡಭಾಗದಿಂದ ಮಹಾವಿಷ್ಣುವನ್ನು ಸೃಷ್ಟಿಮಾಡಿದನು. ಜಗತ್ತನ್ನು ರಕ್ಷಿಸುವುದೇ ಆತನಿಗೆ ಮುಖ್ಯೋದ್ಯೋಗವಾಯಿತು. ಅದಕ್ಕಾಗಿ ಆ ವಿಷ್ಣುವಿನಲ್ಲಿ ಸತ್ವಗುಣವನ್ನು ವಿಶೇಷವಾಗಿಟ್ಟನು. ಅನಂತರ ಸೃಷ್ಟವಾಗಿದ್ದ ಜಗತ್ತನ್ನು ನಾಶಮಾಡುವುದಕ್ಕಾಗಿ ಕಾಲರುದ್ರನೆಂಬ ಒಂದು ವ್ಯಕ್ತಿಯನ್ನು ತನ್ನ ಹೃದಯದಿಂದ ನಿರ್ಮಾಣಮಾಡಿದನು. ಇಷ್ಟಾದರೂ ತಾನುಮಾತ್ರ ನಿರ್ಗುಣನಾಗಿಯೇ ಇದ್ದು, ಯೋಗಿಗಳಿಗೆಲ್ಲಾ ಪರಮಪೂಜ್ಯನೆನಿಸಿಕೊಂಡಿದ್ದಾನೆ.

೨೮-೨೯. ಒಟ್ಟಿನಲ್ಲಿ ಜಗತ್ತೆಲ್ಲವೂ ಆ ಪರಮೇಶ್ವರನಿಂದ ಸೃಷ್ಟವಾಯಿತು. ಪರಮೇಶ್ವರನಲ್ಲಿಯೇ ಲೀನವಾಗುತ್ತದೆ. ಹೀಗೆ ಸೃಷ್ಟಿ, ಸ್ಥಿತಿ, ಲಯಗಳೆಂಬ ಈ ಮೂರು ಕಾರ್ಯಗಳೂ ಆ ಪರಶಿವನ ಲೀಲೆಯಿಂದಲೇ ನಡೆಯತಕ್ಕವುಗಳಾಗಿವೆ. ಅಂತೂ ಸಮಸ್ತಪ್ರಾಣಿಗಳಿಗೂ ಎಲ್ಲಾ ವಿಧದಲ್ಲಿಯೂ ಆ ಪರಮೇಶ್ವರನೇ ಆತ್ಮಸ್ವರೂಪನು.

೩೦. ಭಕ್ತಿಯಿಂದಾವೃತವಾದ ಜ್ಞಾನವೇ ಪರಮೇಶ್ವರನ ಸಾಕ್ಷಾತ್ಕಾರಕ್ಕೆ ಮುಖ್ಯವಾದದ್ದು. ಪರಮೇಶ್ವರನಿಗಿಂತ ಉತ್ತಮವಾದ ಬೇರೆ ದೇವರನ್ನು ನಾನು ನೋಡಲಿಲ್ಲ ಇದೇ ಅಭಿಪ್ರಾಯವನ್ನೇ ಸಮಸ್ತವೇದಗಳೂ ಸಹ ಸಾರಿರುತ್ತವೆ.

॥ ವೇದಾಊಚುಃ ॥

ಯಂ ಪ್ರಪಶ್ಯಂತಿ ವಿದ್ವಾಂಸೋ ಯೋಗಿನಃ ಕ್ಷಪಿತಾಶಯಾಃ ।
ನಿಯಮ್ಯ ಕರಣಗ್ರಾಮಂ ಸ ಏವಾತ್ಮಾ ಮಹೇಶ್ವರಃ　　॥ ೩೧ ॥

ಬ್ರಹ್ಮವಿಷ್ಣ್ವಿಂದ್ರಚಂದ್ರಾದ್ಯಾ ಯಸ್ಯ ದೇವಸ್ಯ ಕಿಂಕರಾಃ ।
ಯಸ್ಯ ಪ್ರಸಾದಾಜ್ಜೀವಂತಿ ಸ ದೇವಃ ಪಾರ್ವತೀಪತಿಃ　　॥ ೩೨ ॥

ನ ಜಾನಂತಿ ಪರಂ ಭಾವಂ ಯಸ್ಯ ಬ್ರಹ್ಮಾದಯಃ ಸುರಾಃ ।
ಅದ್ಯಾಪಿ ನ ವಯಂ ವಿದ್ಮಃ ಸ ದೇವಸ್ತ್ರಿಪುರಾಂತಕಃ　　॥ ೩೩ ॥

ಶೃಣ್ವಂತು ದೇವತಾ ಸ್ಸರ್ವಾಃ ಸತ್ಯಮಸ್ಮದ್ವಚಃ ಪರಂ ।
ನಾಸ್ತಿ ರುದ್ರಾನ್ಮಹಾದೇವಾದಧಿಕಂ ದೈವತಂ ಪರಂ　　॥ ೩೪ ॥

ನ ಯಥಾ ಕೂರ್ಮರೋಮಾಣಿ ಶೃಂಗಂ ನ ಶಶಮಸ್ತಕೇ ।
ನ ಯಥಾಸ್ತಿ ವಿಯತ್ಪುಷ್ಪಂ ತಥಾ ನಾಸ್ತಿ ಹರಾತ್ಪರಂ　　॥ ೩೫ ॥

---

೩೧. "ಯೋಗಿಗಳೂ, ವಿದ್ವಾಂಸರೂ, ಜಿತೇಂದ್ರಿಯರೂ ಆದ ಮುನಿಗಳು ತಮ್ಮ ಇಂದ್ರಿಯಗಳನ್ನು ನಿಗ್ರಹಿಸಿ ಯಾವನನ್ನು ಸಾಕ್ಷಾತ್ಕಾರಮಾಡಿಕೊಳ್ಳುವರೋ, ಆ ಪರಮಾತ್ಮನೇ ಮಹೇಶ್ವರನು ಎಂದು ಸಮಸ್ತವೇದಗಳೂ ಹೇಳಿವೆ.

೩೨. ಅ ಪರಮೇಶ್ವರನಿಗೆ ಬ್ರಹ್ಮ, ವಿಷ್ಣು, ಇಂದ್ರ, ಚಂದ್ರ ಇವರೇ ಮೊದಲಾದ ದೇವತೆಗಳು ಕಿಂಕರರು. ಅಲ್ಲದೆ ಇವರೆಲ್ಲರೂ ಆ ಪರಶಿವನ ಅನುಗ್ರಹದಿಂದಲೇ ಜೀವಿಸುತ್ತಿರುವರು.

೩೩. ತ್ರಿಪುರಾಂತಕನಾದ ಆ ಪರಮೇಶ್ವರನ ಸ್ವರೂಪವನ್ನು ಬ್ರಹ್ಮನೇ ಮೊದಲಾದ ದೇವತೆಗಳು ಇನ್ನೂ ಅರಿತಿಲ್ಲ. ನಮಗೂ ಸಹ ಇನ್ನೂ ಆ ಪರಮೇಶ್ವರನ ತತ್ತ್ವವು ಸರಿಯಾಗಿ ತಿಳಿದುಬಂದಿಲ್ಲ.

೩೪. ನಮ್ಮ ಮಾತು ಸತ್ಯವೆಂಬುದನ್ನು ಸಮಸ್ತ ದೇವತೆಗಳೂ ಅರಿಯಲಿ. ನಿಜವಾಗಿಯೂ ಪರಮೇಶ್ವರನಿಗಿಂತ ದೊಡ್ಡ ದೇವರು ಲೋಕದಲ್ಲಿ ಮತ್ತೊಬ್ಬನಿಲ್ಲ.

೩೫. ಆಮೆಗಳ ದೇಹದಲ್ಲಿ ಕೂದಲೂ, ಮೊಲದ ತಲೆಯಲ್ಲಿ ಕೊಂಬೂ, ಆಕಾಶದಲ್ಲಿ ಪುಷ್ಪವೂ ಹೇಗೆ ಅಸಂಭವವೋ, ಹಾಗೆ ಪರಮೇಶ್ವರನಿಗಿಂತ ಬೇರೊಬ್ಬ ದೇವನಿದ್ದಾನೆ ಎಂಬ ಮಾತು ಅಪ್ರಸಿದ್ಧವು.

ಶಿವಭಕ್ತಿಮೃತೇ ಯಸ್ತು ಸುಖಮಾಪ್ತುಮಿಹೇಚ್ಛತಿ ।
ಅಜಾಗಲಸ್ತನಾದೇವ ಸ ದುಗ್ಧಂ ಪಾತುಮಿಚ್ಛತಿ ॥ ೩೬ ॥

ಮಹಾದೇವಂ ವಿಜಾನೀಯಾದಹಮಸ್ಮೀತಿ ಪಂಡಿತಃ ।
ಅಸ್ಮಾತ್ಕಿಮಸ್ಮಾದಪ್ಯಸ್ತಿ ಜ್ಞಾತವ್ಯಂ ಮುಕ್ತಿಹೇತವೇ ॥ ೩೭ ॥

ಬ್ರಾಹ್ಮೀಂ ನಾರಾಯಣೀಂ ರೌದ್ರೀಂ ಪೂಜಯಿತ್ವಾ ಮಹೇಶ್ವರೀಂ ।
ಯತ್ಪ್ರಪಶ್ಯಂತಿ ಯೋಗೀಂದ್ರಾಸ್ತದ್ವಿದ್ಯಾಚ್ಛಾಂಕರಂ ಪದಂ ॥ ೩೮ ॥

ಕ್ರಮಾಚ್ಚಕ್ರಾಣಿ ಚಂಕ್ರಮ್ಯ ಶಂಖಿನ್ಯಾಮುಪರಿ ಸ್ಥಿತಂ ।
ಯದಭಿವ್ಯಜ್ಯತೇ ಜ್ಯೋತಿಸ್ತದ್ವಿದ್ಯಾಚ್ಛಾಂಕರಂ ಪದಂ ॥ ೩೯ ॥

ದೇವಯಾನಪಥಂ ಹಿತ್ವಾ ಪಿತೃಯಾನಂ ತಥೋತ್ತರಂ ।
ಗಗನಾದ್ಯೋ ರವಸ್ಸೂಕ್ಷ್ಮಃ ಶಂಕರಸ್ಯ ಸ ವಾಚಕಃ ॥ ೪೦ ॥

---

೩೬. ಆಡಿನ ಕತ್ತಿನಲ್ಲಿ ನೇತಾಡುವ ಸ್ತನಗಳಿಂದ ಹಾಲು ಕುಡಿಯಲೆತ್ನಿಸು ಪವನು ಹೇಗೆ ಅವಿವೇಕಿಯೋ, ಹಾಗೆಯೇ ಶಿವಭಕ್ತಿಯನ್ನು ಪಡೆಯದೆ ಸುಖವನ್ನು ಬಯಸುವವನೂ ಅಜ್ಞಾನಿಯೆನಿಸಿಕೊಳ್ಳುವನು.

೩೭. ಪಂಡಿತನೆನಿಸಿದವನು, ಅಹಂ ಬ್ರಹ್ಮಾಸ್ಮಿ, ಎಂಬ ಸೂತ್ರದ ಅರ್ಥವನ್ನು ಅನುಸರಿಸಿ, ತಾನೇ ಬ್ರಹ್ಮಸ್ವರೂಪನೆಂದು ಅರಿಯಬೇಕು. ಅಲ್ಲದೆ ಈ ಬ್ರಹ್ಮರೂಪಿ ಯಾದ ಪರಶಿವನಿಗಿಂತ ಮತ್ತೆ ಬೇರೆ ಸತ್ಯವಸ್ತು ಯಾವುದೂ ಇಲ್ಲವೆಂಬುದನ್ನು ಅರಿ ತವರಿಗೆ ಮೋಕ್ಷಪ್ರಾಪ್ತಿಯಾಗುವುದು.

೩೮. ಬ್ರಹ್ಮ, ವಿಷ್ಣು, ಮಹೇಶ್ವರ ಈ ಮೂರು ಮೂರ್ತಿಗಳಲ್ಲಿಯೂ ಪರ ಮೇಶ್ವರನ ಅಂಶವನ್ನೇ ಯಾವನು ಅಭ್ಯಾಸಬಲದಿಂದ ತಿಳಿಯುವನೋ ಅವನೇ ನಿಜವಾದ ಶಂಕರನ ಸ್ಥಾನವನ್ನು ಅರಿಯುವವನಾಗುವನು.

೩೯. ದೇಹದಲ್ಲಿ ನಿರೂಪಿತವಾಗಿರುವ ಷಟ್ಚಕ್ರಗಳಲ್ಲಿ ದ್ವಾದಶಾರ ಮತ್ತು ಶಂಖಿನೀ ಎಂಬುವು ಮುಖ್ಯಚಕ್ರಗಳು. ಅದರಲ್ಲಿ ಜ್ಯೋತೀರೂಪದಿಂದ ತೋರಿಬರುವ ಸ್ಥಾನವೇ ಶಂಕರನ ಪವಿತ್ರಸ್ಥಾನವು.

೪೦. ನಭೋಮಾರ್ಗದಲ್ಲಿ ಮೊದಲು ದೇವಮಾರ್ಗ, ಅನಂತರ ಪಿತೃಮಾ ರ್ಗವು ಗೋಚರಿಸುವುದು. ಈ ಎರಡು ಮಾರ್ಗಗಳಾದಮೇಲೆ ಒಂದು ಸೂಕ್ಷ್ಮ ವಾದ ಧ್ವನಿಯು ಕೇಳಿಬರುವುದು. ಆ ಇಂಪುಧ್ವನಿಯೇ ಶಂಕರನ ಗಂಭೀರ ಧ್ವನಿಯು.

ವಿಶ್ವತಶ್ಚಕ್ಷುರೀಶಾನ ಸ್ತ್ರಿಶೂಲೀ ವಿಶ್ವತೋಮುಖಃ ।
ಜನಕ ಸ್ಸರ್ವಭೂತಾನಾ ಮೇಕ ಏವ ಮಹೇಶ್ವರಃ ॥ ೪೧ ॥

ವಾಲಾಗ್ರಮಾತ್ರಂ ಹೃತ್ಪದ್ಮೇ ಸ್ಥಿತಂ ದೇವಮುಮಾಪತಿಂ ।
ಯೇಽನುಪಶ್ಯಂತಿ ವಿದ್ವಾಂಸಸ್ತೇಷಾಂ ಶಾಂತಿರ್ಹಿ ಶಾಶ್ವತೀ ॥ ೪೨ ॥

ಪೃಥಿವ್ಯಾಂ ತಿಷ್ಠತಿ ವಿಭುಃ ಪೃಥಿವೀ ವೇತ್ತಿ ನೈವ ತಂ ।
ರೂಪಂ ಚ ಪೃಥಿವೀ ಯಸ್ಯ ತಸ್ಮೈ ಭೂಮ್ಯಾತ್ಮನೇ ನಮಃ ॥ ೪೩ ॥

ಅಪ್ಸು ತಿಷ್ಠತಿ ನೈವಾಪಸ್ತಂ ವಿದುಃ ಪರಮೇಶ್ವರಂ ।
ಆಪೋ ರೂಪಂ ಚ ಯಸ್ಯೈವ ನಮಸ್ತಸ್ಮೈ ಜಲಾತ್ಮನೇ ॥ ೪೪ ॥

ಯೋಽಗ್ನೌ ತಿಷ್ಠತ್ಯಮೇಯಾತ್ಮಾ ನ ತಂ ವೇತ್ತಿ ಕದಾಚನ ।
ಅಗ್ನಿ ರೂಪಂ ಭವೇದ್ಯಸ್ಯ ತಸ್ಮೈ ವಹ್ನ್ಯಾತ್ಮನೇ ನಮಃ ॥ ೪೫ ॥

---

೪೧. ಮಹೇಶ್ವರನು ಪ್ರಪಂಚಕ್ಕೆ ಕಣ್ಣು, ಅವನೇ ಲೋಕಕ್ಕೆ ಮುಖ. ಸಮಸ್ತಪ್ರಾಣಿಗಳಿಗೂ ಶಂಕರನೇ ಜನಕನು. ಇಷ್ಟು ಲೋಕಚಾಲಕನಾದವನು ಒಬ್ಬನೇ. ಅವನೇ ಶಿವನು.

೪೨. ಜ್ಞಾನಿಗಳಾದವರು ತಮ್ಮ ಹೃದಯಕಮಲದಲ್ಲಿ ಉಮಾಪತಿಯಾದ ಪರಮೇಶ್ವರನನ್ನು ಅಣುಮಾತ್ರದವನನ್ನಾಗಿ ಧ್ಯಾನಿಸಬೇಕು. ಆ ಧ್ಯಾನದಿಂದಲೇ ಅವರಿಗೆ ಅನಿರ್ವಚನೀಯವಾದ ಜ್ಞಾನವೊಂದು ದೊರೆಯುವುದು. ಆ ಜ್ಞಾನವೇ ನಿಜವಾದ ಮತ್ತು ಸ್ಥಿರವಾದ ಮನಶ್ಶಾಂತಿಯು.

೪೩. ಆ ಶಂಕರನು ವಿಭುವಾಗಿ ಪೃಥಿವೀತತ್ವದಲ್ಲಿ ಎಲ್ಲೆಡೆಯೂ ವ್ಯಾಪಿಸಿದ್ದಾನೆ. ಆದರೆ ಪೃಥಿವಿಯು ಆ ಶಿವನನ್ನು ನೋಡಲಾರದು. ಅವನ ರೂಪವು ಮಾತ್ರ ಪೃಥ್ವಿಯ ವಿಕಾರವಾದದ್ದೇ ಆಗಿರುವುದು.

೪೪. ಪರಮೇಶ್ವರನು ನೀರಿನಲ್ಲಿಯೂ ಅಡಗಿರುವನು. ನೀರು ಮಾತ್ರ ಅವನನ್ನು ತಿಳಿಯಲಾರದು. ಆದರೆ ಪರಶಿವನು ಜಲಾತ್ಮನೂ ಜಲಮಯನೂ ಆಗಿರುವನು.

೪೫. ಅಪ್ರಮೇಯನಾದ ಪರಶಿವನು ಅಗ್ನಿಯಲ್ಲಿ ವಾಸಿಸುವನು. ಅಗ್ನಿಯು ಮಾತ್ರ ಅವನನ್ನು ಅರಿಯಲಾರದು. ಅಗ್ನಿಸ್ವರೂಪನೂ, ಅಗ್ನಿಮಯನೂ ಆಗಿರುವ ಪರಮೇಶ್ವರನಿಗೆ ನಮಸ್ಕಾರವು.

ತಿಷ್ಠತ್ಯಜಸ್ರಂ ಯೋ ವಾಯೌ ನ ವಾಯುರ್ವೇತ್ತಿ ತಂ ಪರಂ ।
ವಾಯುರ್ಯಸ್ಯ ಭವೇದ್ರೂಪಂ ತಸ್ಮೈ ವಾಯ್ವಾತ್ಮನೇ ನಮಃ ॥ ೪೬ ॥

ವ್ಯೋಮ್ನಿ ತಿಷ್ಠತಿ ಯೋ ನಿತ್ಯಂ ವ್ಯೋಮ ವೇತ್ತಿ ನ ತಂ ಹರಂ ।
ವ್ಯೋಮ ಯಸ್ಯ ಭವೇದ್ರೂಪಂ ತಸ್ಮೈ ವ್ಯೋಮಾತ್ಮನೇ ನಮಃ ॥ ೪೭ ॥

ಸೂರ್ಯೇ ತಿಷ್ಠತಿ ಯೋ ದೇವೋ ನ ಸೂರ್ಯೋ ವೇತ್ತಿ ಶಂಕರಂ ।
ಯಸ್ಯ ಸೂರ್ಯೋ ಭವೇದ್ರೂಪಂ ತಸ್ಮೈ ಸೂರ್ಯಾತ್ಮನೇ ನಮಃ ॥ ೪೮ ॥

ಯಶ್ಚಂದ್ರೇ ತಿಷ್ಠತಿ ವಿಭುಶ್ಚಂದ್ರೋ ವೇತ್ತಿ ನ ಶಾಶ್ವತಂ ।
ಚಂದ್ರೋ ಯಸ್ಯ ಭವೇದ್ರೂಪಂ ತಸ್ಮೈ ಚಂದ್ರಾತ್ಮನೇ ನಮಃ ॥ ೪೯ ॥

ಯಜಮಾನೇ ತಿಷ್ಠತಿ ಯೋ ನ ತಂ ವೇತ್ತಿ ಕದಾಚನ ।
ಯಜಮಾನೋಽಪಿ ಯದ್ರೂಪಂ ಯಜಮಾನಾತ್ಮನೇ ನಮಃ ॥ ೫೦ ॥

---

೪೬. ವಾಯುವಿನಲ್ಲಿ ಪರಮೇಶ್ವರನು ವ್ಯಾಪಿಸಿದ್ದರೂ ವಾಯುವು ಮಾತ್ರ ಪರಮೇಶ್ವರನನ್ನು ಅರಿಯಲಾರನು. ವಾಯುವೂ ಸಹ ಶಂಕರನಿಗೆ ಒಂದು ದೇಹವಾಗಿ ಪರಿಣಮಿಸಿದೆ. ಇಂಥ ವಾಯುರೂಪಿಯಾದ ಶಂಕರನಿಗೆ ಪ್ರಣಾಮವು.

೪೭. ಆಕಾಶದಲ್ಲೆಲ್ಲಾ ಪರಮೇಶ್ವರನು ವ್ಯಾಪಿಸಿರುವನು. ಆದರೆ ಆಕಾಶವೇ ಪರಶಿವನಲ್ಲ. ಯಾವನ ಅಷ್ಟದೇಹಗಳಲ್ಲಿ ಆಕಾಶವೂ ಒಂದು ಮೂರ್ತಿಯಾಗಿದೆಯೋ, ಅಂಥ ಆಕಾಶಾತ್ಮಕನಾದ ಶಿವನಿಗೆ ವಂದನೆಯು.

೪೮. ಪರಮೇಶ್ವರನು ಸೂರ್ಯನಲ್ಲಿಯೂ ಅಡಗಿರುವನು. ಆದರೆ ಸೂರ್ಯನಿಗೂ, ಸುಲಭವಾಗಿ ಗೋಚರನಾಗಲಾರನು. ಸೂರ್ಯನೂ ಪರಶಿವನಿಗೆ ಒಂದು ಆಕಾರ. ಇಂಥ ಪರಮೇಶ್ವರನಿಗೆ ವಂದನೆಯು.

೪೯. ಚಂದ್ರನಿಗೆ ಸುಲಭವಾಗಿ ಗೋಚರನಲ್ಲದಿದ್ದರೂ, ಚಂದ್ರನಲ್ಲಿ ಪರಮೇಶ್ವರನು ಅಡಗಿರುವನು. ಅಷ್ಟಮೂರ್ತಿಗಳಲ್ಲಿ ಚಂದ್ರನೂ ಒಂದು ಮೂರ್ತಿಯು.

೫೦. ಯಜಮಾನನೂ ಅಷ್ಟಮೂರ್ತಿಗಳಲ್ಲಿ ಒಬ್ಬನು. ಅವನಲ್ಲಿಯೂ ಶಂಕರನು ವ್ಯಾಪಿಸಿರುವನು. ಆದರೇನು? ಆ ಯಾಗಕರ್ತನಾದ ಯಜಮಾನನಿಗೆ ಮಾತ್ರ ಗೋಚರಿಸಲಾರನು. ಇಂಥ ಯಜಮಾನರೂಪಿಯಾದ ಪರಮೇಶ್ವರನಿಗೆ ವಂದನೆಯು.

ತ್ವತ್ತೋ ವಯಂ ಸಮುದ್ಭೂತಾ ಸ್ತ್ವಯ್ಯೇವ ವಿಲಯಸ್ತಥಾ ।
ಪ್ರಮಾಣಪದಮಾರೂಢಾಸ್ತ್ವತ್ಪ್ರಸಾದಾತ್ ವೃಷಧ್ವಜ ॥ ೫೧ ॥

ಭಾನುರುವಾಚ

ಏವಂ ವೇದಸ್ತುತಿಂ ಶ್ರುತ್ವಾ ಭಗವಾನ್ ಗಿರಿಜಾಪತಿಃ ।
ಪ್ರತ್ಯಕ್ಷಃ ಸಮಭೂತ್ತೇಷಾಂ ವೇದಾನಾಂ ಮನುಜಾಧಿಪ ॥ ೫೨ ॥

ಸೂರ್ಯಕೋಟಿಪ್ರತೀಕಾಶಃ ಸಹಸ್ರಾಕ್ಷಸ್ಸಹಸ್ರಪಾತ್ ।
ಸಹಸ್ರಶೀರ್ಷಾ ಪುರುಷಃ ಸೂರ್ಯಸೋಮಾಗ್ನಿಲೋಚನಃ ॥ ೫೩ ॥

ಸ್ಥೂಲಾತ್ ಸ್ಥೂಲತರ ಸ್ಸ್ಥೂಲಃ ಸೂಕ್ಷ್ಮಾತ್ಸೂಕ್ಷ್ಮತರಃ ಪರಃ ।
ವೇದಾನುವಾಚ ಭಗವಾನ್ ದೇವದೇವೋ ಮಹೇಶ್ವರಃ ॥ ೫೪ ॥

ಈಶ್ವರ ಉವಾಚ

ಮತ್ಪ್ರಸಾದಾದ್ಭವಿಷ್ಯಧ್ವಂ ಹೇ ವೇದಾ ಲೋಕಪೂಜಿತಾಃ ।
ಯುಷ್ಮಾನಾಶ್ರಿತ್ಯ ವಿಪ್ರೇಂದ್ರಾಃ ಕರ್ಮ ಕುರ್ವಂತಿ ನಾನ್ಯಥಾ ॥ ೫೫ ॥

---

೫೧. ವೃಷಭಧ್ವಜನಾದ ಓ ಪರಮಾತ್ಮನೇ, ವೇದಗಳಾದ ನಾವು ನಿನ್ನಿಂದಲೇ ಹುಟ್ಟಿದೆವು. ನಿನ್ನಲ್ಲಿಯೇ ಲಯವನ್ನು ಹೊಂದುವೆವು. ನಿನ್ನ ಅನುಗ್ರಹ ಬಲದಿಂದಲೇ ನಾವು ಲೋಕದಲ್ಲಿ ಉಚ್ಚತರಗತಿಯಲ್ಲಿ ಗಣ್ಯರಾಗಿದ್ದೇವೆ"

೫೨. ಎಂದು ಸ್ತೋತ್ರಮಾಡಿದ ವೇದಗಳಿಗೆ ಗಿರಿಜಾಪತಿಯಾದ ಪರಶಿವನು ಪ್ರತ್ಯಕ್ಷನಾದನು

೫೩. ಪ್ರತ್ಯಕ್ಷನಾದ ಪರಮೇಶ್ವರನು ಕೋಟಿಸೂರ್ಯರಂತೆ ಹೊಳೆಯುತ್ತಿದ್ದನು. ಅವನ ಕಣ್ಣುಗಳು ಸಾವಿರವಿದ್ದವು. ಸಾವಿರಕಾಲುಗಳಿಂದಲೂ ಸಹಸ್ರಶಿರಸ್ಸುಗಳಿಂದಲೂ ಕೂಡಿ ಸೂರ್ಯ, ಚಂದ್ರ, ಅಗ್ನಿ ಇವುಗಳನ್ನೇ ಮೂರು ಕಣ್ಣುಗಳನ್ನಾಗಿ ಮಾಡಿಕೊಂಡು ವೇದಗಳಿಗೆ ಗೋಚರಿಸಿದನು.

೫೪. ದೊಡ್ಡವಸ್ತುಗಳೆಲ್ಲಕ್ಕೂ ದೊಡ್ಡವನಂತೆಯೂ, ಸೂಕ್ಷ್ಮವಸ್ತು ಸಮೂಹಕ್ಕೆ ಅತ್ಯಂತ ಸೂಕ್ಷ್ಮರೂಪಿಯಾಗಿಯೂ ಇರುವ ದೇವದೇವನಾದ ಮಹೇಶ್ವರನು ವೇದಗಳನ್ನು ಸಂಬೋಧಿಸಿ ಹೀಗೆ ನುಡಿದನು.

೫೫. "ಎಲೈ ವೇದಗಳೇ! ನನ್ನ ಅನುಗ್ರಹದಿಂದ ನೀವು ಈಗ ಲೋಕಪೂಜರಾಗಿರಿ. ನಿಮ್ಮನ್ನೇ ಆಶ್ರಯಿಸಿ ಬ್ರಾಹ್ಮಣರು ಕರ್ಮಾನುಷ್ಠಾನಗಳನ್ನು ಆಚರಿಸಲಿ. ನಿಮ್ಮ ಸಹಾಯವಿಲ್ಲದ ಕರ್ಮಗಳು ಅವರಿಗೆ ವ್ಯರ್ಥವಾಗಲಿ.

ಯೇ ಯುಷ್ಮಾನ್ ಸಮತಿಕ್ರಮ್ಯ ಯತ್ಕಿಂಚಿತ್ಕರ್ಮ ಕುರ್ವತೇ ।
ನಿಷ್ಫಲಂ ತದ್ಭವೇತ್ಕರ್ಮ ತೇಷಾಂ ಯುಷ್ಮದವಜ್ಞಯಾ ॥ ೫೬ ॥

ನಿತ್ಯಂ ನೈಮಿತ್ತಿಕಂ ಕಾಮ್ಯಂ ಯಚ್ಚಾನ್ಯನ್ಮೋಕ್ಷಸಾಧನಂ ।
ಯುಷ್ಮದ್ವಚೋ ನಾನ್ಯದಿತಿ ಮತ್ವಾ ಧೀರೋ ನ ಶೋಚತಿ ॥ ೫೭ ॥

ಯೇ ವೈ ಯುಷ್ಮಾನನಾದೃತ್ಯ ಶಾಸ್ತ್ರಂ ಕುರ್ವಂತಿ ಮಾನವಾಃ ।
ನಿರಯೇ ತೇ ವಿಪಚ್ಯಂತೇ ಯಾವದಿಂದ್ರಾಶ್ಚತುರ್ದಶ ॥ ೫೮ ॥

ಶ್ರೇಯಸೇ ತ್ರಿಷು ಲೋಕೇಷು ನ ವೇದಾದಧಿಕಂ ಪರಂ ।
ವಿದ್ಯತೇ ನಾತ್ರ ಸಂದೇಹ ಇತಿ ದತ್ತೋ ವರೋ ಮಯಾ ॥ ೫೯ ॥

---

೫೬. ನಿಮ್ಮ ವಚನಗಳನ್ನು ಮೀರಿ ಯಾರು ವಿರುದ್ಧಕರ್ಮಕರಾಗುವರೋ ಅವರ ಕರ್ಮಾಚರಣೆಯೆಲ್ಲವೂ ವ್ಯರ್ಥವಾಗಲಿ. ನಿಮ್ಮ ತಿರಸ್ಕಾರದಿಂದ ಅವರಿಗೆ ಸುಕೃತಗಳು ದೊರಕದಿರಲಿ.

೫೭. ನಿತ್ಯವೂ ಮಾಡುವ ಸಂಧ್ಯಾವಂದನಾದಿಗಳೂ ನೈಮಿತ್ತಿಕವಾಗಿ ಮಾಡುವ ಶಾಂತ್ಯಾದಿಗಳೂ, ಫಲಾಪೇಕ್ಷೆಯಿಂದ ಮಾಡುವ ವ್ರತಾದಿಗಳೂ, ಮೋಕ್ಷಸಾಧನೆಗಾಗಿ ಮಾಡುವ ತಪಸ್ಸುಗಳೂ, ನಿಮ್ಮ ಆಧಾರದಿಂದಲೇ ಬೆಳೆಯುತ್ತಿರಲಿ. ಇವೆಲ್ಲವೂ ವೇದೋಕ್ತವಾದವುಗಳೆಂದೇ ಎಲ್ಲರೂ ತಿಳಿಯಲಿ.

೫೮. ಶಾಸ್ತ್ರಗಳಲ್ಲಿ ಹೇಳಿದ ಕರ್ಮವಾದರೂ ವೇದವಿರುದ್ಧವಾಗಿದ್ದರೆ ಅದನ್ನು ಯಾರೂ ಆಚರಿಸದೆ ಇರಲಿ. ಹಾಗೆ ಆ ವೇದವಿರುದ್ಧ ಕರ್ಮಗಳನ್ನು ಅನುಷ್ಠಾನಮಾಡಿದರೆ ಅವರು ಕಲ್ಪಾಂತವಾಗಿ ನರಕದಲ್ಲಿ ಬೀಳುವರು.

೫೯. ಮನುಷ್ಯರು ಯಾವ ಶ್ರೇಯಸ್ಸನ್ನು ಹೊಂದಬೇಕಾದರೂ ವೇದವನ್ನೇ ಆಶ್ರಯಿಸಬೇಕು. ಅದಕ್ಕಿಂತ ದೊಡ್ಡವಸ್ತುವು ಮೂರು ಲೋಕಗಳಲ್ಲೂ ಮತ್ತೊಂದು ಸಿಗಲಾರದು. ಇದು ನಿಶ್ಚಯ. ಅಲ್ಲದೆ ನಾನು ಇದೇ ವರವನ್ನೇ ವೇದಗಳಿಗೆ ಕೊಟ್ಟಿರುವೆನು.

ಯುಷ್ಮತ್ಕೃತಂ ಪರಂ ಸ್ತೋತ್ರಂ ಯೇ ಪಠಿಷ್ಯಂತಿ ವೈ ದ್ವಿಜಾಃ ।
ತೇಷಾ ಮಧ್ಯಯನಂ ಪುಣ್ಯಂ ಮತ್ಪ್ರಸಾದಾ ದ್ಭವಿಷ್ಯತಿ　　　॥ ೬೦ ॥

॥ ಭಾನುರುವಾಚ ॥

ಏವಂ ದತ್ವಾ ವರಾನ್ ದೇವೋ ವೇದೇಭ್ಯೋ ಗಿರಿಜಾಪತಿಃ ।
ಪಶ್ಯತಾಮೇವ ವೇದಾನಾಂ ಕ್ಷಣಾದಂತರ್ಹಿತೋಽಭವತ್　　　॥ ೬೧ ॥

ಇತಿ ಶ್ರೀಬ್ರಹ್ಮಪುರಾಣೋಪಪುರಾಣೇ ಶ್ರೀಸೌರೇ ಸೂತಶೌನಕಸಂವಾದೇ ಶಿವಮಹಿಮವರ್ಣನಂ ನಾಮ ದ್ವಿತೀಯೋಽಧ್ಯಾಯಃ

---

೬೦. ಎಲೈ ವೇದಗಳೇ, ನೀವು ನನ್ನನ್ನು ಬಹುವಾಗಿ ಸ್ತುತಿಸಿದ್ದೀರಿ. ಈ ಸ್ತೋತ್ರಗಳನ್ನು ಯಾರು ನಿತ್ಯವೂ ಪಠಿಸುವರೋ, ಅವರು ನನ್ನ ಅನುಗ್ರಹ ದಿಂದ ಪುಣ್ಯಶಾಲಿಗಳಾಗುವರು ” ಎಂದು ಪರಮೇಶ್ವರನು ವೇದಗಳಿಗೆ ಅನುಗ್ರಹ ಪೂರ್ವಕವಾದ ಮಾತುಗಳನ್ನಾಡಿದನು.

೬೧. ಹೀಗೆ ಪರಮೇಶ್ವರನು ವೇದಗಳಿಗೆ ವರಗಳನ್ನು ಕೊಟ್ಟು, ವೇದಗಳು ನೋಡುತ್ತಿರುವಾಗಲೇ ಮಾಯವಾದನು, ಎಂದು ಸೂರ್ಯದೇವನು ವೈವಸ್ವತಮನುವಿಗೆ ಹೇಳಿ ಸುಮ್ಮನಾದನು.

ಇಲ್ಲಿಗೆ ಬ್ರಹ್ಮಮಹಾಪುರಾಣದ ಉಪಪುರಾಣವಾದ ಸೌರಪುರಾಣದಲ್ಲಿ ಸೂತ ಮತ್ತು ಶೌನಕ ಋಷಿಗಳ ಸಂಭಾಷಣೆಯ ರೂಪವಾಗಿ ಶಿವನ ಮಹಿಮೆಯ ವರ್ಣನೆಯೆಂಬ ಎರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ತೃತೀಯೋಽಧ್ಯಾಯಃ ॥

॥ ಭಾನುರುವಾಚ ॥

ಯದೇತದೈಶ್ವರಂ ತೇಜಃ ಸರ್ವಗಂ ಭಾತಿ ಕೇವಲಂ।
ತದೇವ ಶರಣಂ ಗಚ್ಛ ಯದೀಚ್ಛಸಿ ಪರಂ ಪದಂ ॥ ೧ ॥

ತದೇವ ಸರ್ವಭೂತಸ್ಥಂ ಚಿನ್ಮಾತ್ರಂ ತಮಸಃ ಪರಂ।
ಅಕ್ಷರಂ ನಿರ್ಗುಣಂ ಶುದ್ಧಮಾನಂದಂ ಪದಮವ್ಯಯಂ ॥ ೨ ॥

ಪ್ರತ್ಯಕ್ಷಂ ಸರ್ವಭೂತಾನಾಂ ಅಜ್ಞಾನಾಂ ತದ್ವಿಪರ್ಯಯಃ ।
ವಿಶ್ವಮಾಯಾವಿಧಾತಾರಂ ದ್ವಿರಷ್ಟಾದಶರೂಪಿಣಂ ॥ ೩ ॥

ಮೂರನೆಯ ಅಧ್ಯಾಯವು

ಸೂರ್ಯನು ಪುನಃ ಮನುವಿಗೆ ಶಿವಮಹಿಮೆಯನ್ನು ವಿವರಿಸಲಾರಂಭಿಸಿದನು.

೧ ಈಶ್ವರನ ತೇಜಸ್ಸು ಸರ್ವವ್ಯಾಪಿಯು. ಅದೇ ಪರಮಪದಕ್ಕೆ ಮಾರ್ಗದರ್ಶಿಯು. ಅಯ್ಯಾ ಮನುವೇ ! ನಿನಗೆ ಮೋಕ್ಷಪ್ರಾಪ್ತಿಯಲ್ಲಿ ಇಷ್ಟವಿದ್ದರೆ, ಆ ಶ್ರೇಷ್ಠವಾದ ಮಹೇಶ್ವರನ ತೇಜಸ್ಸನ್ನು ಆಶ್ರಯಿಸು.

೨. ಆ ಮಹೇಶ್ವರನ ತೇಜಸ್ಸೇ ಸಮಸ್ತಪ್ರಾಣಿಗಳಲ್ಲಿಯೂ ಅಡಗಿರತಕ್ಕದ್ದು. ಅಜ್ಞಾನನಾಶಕವಾದ ಜ್ಞಾನರೂಪವೇ ಅದು. ನಾಶರಹಿತವಾಗಿಯೂ, ಗುಣರಹಿತವಾಗಿಯೂ, ಆನಂದಮಯವಾಗಿಯೂ, ಎಂದೂ ಕಮ್ಮಿಯಾಗದೆಯೂ ಇರುವ ತೇಜಸ್ಸೆಂದರೆ, ಶೈವತೇಜಸ್ಸೇ.

೩. ಆ ಶೈವಕಾಂತಿಯು ಸರ್ವತ್ರವ್ಯಾಪಿಯಾಗಿದ್ದರೂ ಅಜ್ಞಾನಿಗಳಿಗೆ ಮಾತ್ರ ಗೋಚರಿಸಲಾರದು. ಪ್ರಪಂಚವನ್ನೇ ಮಾಯೆಯಲ್ಲಿ ಮುಳುಗಿಸಿ ಆ ಶೈವತೇಜಸ್ಸು ಮೂವತ್ತಾರು ತತ್ತ್ವಗಳಿಂದ ಆವೃತವಾಗಿದೆ.

ಭಕ್ತಿಗ್ರಾಹ್ಯಂ ಮಹಾದೇವಂ ಜಾನೀಹ್ಯಾತ್ಮನಿ ಸಂಸ್ಥಿತಂ।
ಆತ್ಮಭೂತೇ ಮಹಾದೇವೇ ಯೋಗಿಭ್ಯೇಯೇ ಸನಾತನೇ ॥ ೪ ॥

ಭಕ್ತಿಮಾಸ್ಥಾಯ ಪರಮಾಂ ಪರಂ ನಿರ್ವಾಣಮಾಪ್ನುಹಿ ।
ತೀರ್ಥಯಾತ್ರಾ ಬಹುವಿಧಾ ಯಜ್ಞಾಶ್ಚ ವಿವಿಧಾಃ ಕೃತಾಃ ॥ ೫ ॥

ಯೇಷಾಂ ಜನ್ಮಸಹಸ್ರೇಷು ತೇಷಾಂ ಭಕ್ತಿರ್ಭವೇಚ್ಛಿವೇ ।
ಅಕ್ಷಯಃ ಪರಮೋಧರ್ಮೋ ಭಕ್ತಿಲೇಶೇನ ಜಾಯತೇ ॥ ೬ ॥

ನಾಸ್ತಿ ತಸ್ಮಾತ್ಪರೋ ಧರ್ಮ ಇತ್ಯಾಹು ರ್ವೇದವಾದಿನಃ ।
ಧರ್ಮೋ ಬಹುವಿಧಃ ಪ್ರೋಕ್ತೋ ಮುನಿಭಿಸ್ತತ್ವದರ್ಶಿಭಿಃ ॥ ೭ ॥

---

೪. ಪರಮೇಶ್ವರನು ಭಕ್ತಿಗೆ ಸುಲಭನೆಂಬುದನ್ನು ಮರೆಯಬೇಡ. ಆತ್ಮ ಸ್ವರೂಪಿಯಾದ ಮಹಾದೇವನು ಯೋಗಿಗಳಿಂದ ಪೂಜಿತನಾಗಿ, ಅನಾದಿಯಾದ ಆತ್ಮ ರೂಪದಿಂದ ದೇಹಾಂತರ್ವರ್ತಿಯಾಗಿರುವನು.

೫. ಎಲೈ ವೈವಸ್ವತಮನುವೇ! ನೀನು ನಿಶ್ಚಲವಾದ ಭಕ್ತಿಯ ಸಹಾಯ ದಿಂದ ಮೋಕ್ಷವನ್ನು ಸಂಪಾದಿಸಲು ಯತ್ನಿಸು. ಏಕೆಂದರೆ ತೀರ್ಥಯಾತ್ರೆಗಳೂ, ಯಜ್ಞಯಾಗಗಳೂ ನಾನಾರೀತಿಯಲ್ಲಿವೆ- ಅವುಗಳಿಂದ ಮೋಕ್ಷಪ್ರಾಪ್ತಿಯು ಅಷ್ಟು ಸುಲಭವಲ್ಲ.

೬. ಯಾರು ಸಹಸ್ರಾರುಜನ್ಮಗಳಲ್ಲಿ ತೀರ್ಥಯಾತ್ರೆಗಳನ್ನೂ, ಯಜ್ಞಯಾಗಾ ದಿಗಳನ್ನೂ ಮಾಡಿ ಶುದ್ಧರೆನಿಸಿಕೊಳ್ಳುವರೋ ಅವರಿಗೆ ಶಿವನಲ್ಲಿ ದೃಢಭಕ್ತಿಯುಂಟಾಗು ವುದು. ಆ ಪರಶಿವನ ಭಕ್ತಿಲೇಶವೇ ಅವರಿಗೆ ಅಪಾರವಾದ ಮೋಕ್ಷಸುಖವನ್ನು ಒದಗಿಸುವುದು.

೭. ಶಿವಭಕ್ತಿಗಿಂತ ಶ್ರೇಷ್ಠವಾದ ಧರ್ಮವು ಮತ್ತೊಂದಿಲ್ಲವೆಂಬುದು ವೇದ ಗಳವಾದ. ಆದರೆ ಧರ್ಮಸ್ವರೂಪವನ್ನು ತತ್ವಜ್ಞಾನಿಗಳು ಬಹುವಿಧವಾಗಿ ಹೇಳುವರು.

ತತ್ರಾಕ್ಷಯಃ ಪರೋ ಧರ್ಮಃ ಶಿವಧರ್ಮಸ್ಸನಾತನಃ ।
ಯಜ್ಞಾತ್ತೀರ್ಥಾಜ್ಜಪಾದ್ದಾನಾದ್ಧರ್ಮ ಸ್ಸ್ಯಾದ್ಬಹುಸಾಧನಃ ॥ ೮ ॥

ಸಾಧನಪ್ರಾರ್ಥನಾಕ್ಲೇಶಃ ಪರಸಂಪತ್ತಿದುಃಖದಃ ।
ಯಃ ಪುನಶ್ಶಿವಧರ್ಮಸ್ತು ನ ಸಾಧನ ಮುಪೇಕ್ಷತೇ ॥ ೯ ॥

ಸಂಚಿತಂ ಜನ್ಮಸಾಹಸ್ರೈಃ ಪಾಪಂ ಮೇರೂಪಮಂ ಯದಿ
ಕರೋತಿ ಭಸ್ಮಸಾಚ್ಛಕ್ತಿಃ ಶಂಭೋರಮಿತತೇಜಸಃ ॥ ೧೦ ॥

ಕುರ್ವನ್ನಪಿ ಸದಾ ಪಾಪಂ ಸಕೃದೇವಾರ್ಚಯೇಚ್ಛಿವಂ ।
ಲಿಪ್ಯತೇ ನ ಸ ಪಾಪೇನ ಯಾತಿ ಮಾಹೇಶ್ವರಂ ಪದಂ ॥ ೧೧ ॥

ಯೇ ಸ್ಮರಂತಿ ಮಹಾದೇವಂ ಯದಿ ಪಾಪರತಾ ಅಪಿ ।
ತೇ ವಿಜ್ಞೇಯಾ ಮಹಾತ್ಮಾನ ಇತಿ ಸತ್ಯಂ ಬ್ರವೀಮ್ಯಹಂ ॥ ೧೨ ॥

---

೮. ಧರ್ಮಗಳಲ್ಲಿ ಶಿವಭಕ್ತಿಯೆಂಬುದು ಸನಾತನವಾದದ್ದು. ಮತ್ತು ನಾಶರಹಿತವಾದದ್ದು. ಧರ್ಮಗಳು ಯಜ್ಞದಿಂದಲೂ, ತೀರ್ಥಯಾತ್ರೆಗಳಿಂದಲೂ, ಜಪ, ದಾನ ಇವೇ ಮೊದಲಾದ ಪುಣ್ಯಕರ್ಮಗಳಿಂದಲೂ ಮನುಷ್ಯರಿಗೆ ಲಭಿಸುವುದು.

೯. ಧರ್ಮಗಳಿಗೆ ಸಾಧನಗಳು ಬಹಳ. ಆ ಸಾಧನಗಳನ್ನು ಹೊಂದುವುದೇ ಒಂದು ಕ್ಲೇಶ. ಆ ಸಾಧನಗಳಿಂದ ಮನುಷ್ಯನು ಇತರರಿಗೆ ಸುಖವನ್ನೂ ದುಃಖವನ್ನೂ ಕೊಡಬೇಕಾಗುತ್ತದೆ. ಶಿವಧರ್ಮಕ್ಕಿರುವ ಸಾಧನಗಳಾದರೋ ಯಾರಿಗೂ ಯಾವ ವಿಧವಾದ ಕ್ಲೇಶಾದಿಗಳನ್ನೂ ಕೊಡಲಾರದು.

೧೦. ಈ ಪರಶಿವನ ಭಕ್ತಿಯೆಂಬುದು, ಸಹಸ್ರಜನ್ಮಗಳಿಂದ ಸಂಪಾದಿಸಿ, ಮೇರುಪರ್ವತದಂತೆ ಕೂಡಿಹಾಕಿಕೊಂಡಿರುವ ಪಾಪರಾಶಿಯನ್ನು ಕ್ಷಣಮಾತ್ರದಲ್ಲಿ ನಾಶಮಾಡುತ್ತದೆ.

೧೧. ಎಷ್ಟೇ ಪಾಪಕರ್ಮಗಳನ್ನಾಚರಿಸಿದರೂ ಭಕ್ತಿಯಿಂದ ಒಂದುಸಾರಿ ಮಹೇಶ್ವರನನ್ನು ಅರ್ಚಿಸಿದರೆ, ಅವನು ಪಾಪರಾಶಿಯಿಂದ ಬಿಡುಗಡೆಹೊಂದಿ ಮಹೇಶ್ವರನ ಸನ್ನಿಧಿಯನ್ನು ಸುಲಭವಾಗಿ ಹೊಂದುವನು.

೧೨. ಮಹೇಶ್ವರನನ್ನು ಭಕ್ತಿಯಿಂದ ಸ್ಮರಿಸಿದವರು ಎಷ್ಟೇ ಪಾಪಿಷ್ಠರಾಗಿದ್ದರೂ ಅವರನ್ನು ನಾನು ಮಹಾತ್ಮರೆಂದೇ ಹೇಳುವೆನು. ಇದು ಸತ್ಯ.

ನಾಮಾನಿ ಚ ಮಹೇಶಸ್ಯ ಗೃಣಂತ್ಯಜ್ಞಾನತೋಽಪಿ ವಾ ।
ತೇಷಾಮಪಿ ಶಿವೋ ಮುಕ್ತಿಂ ದದಾತಿ ಕಿಮತಃ ಪರಂ ॥ ೧೩ ॥

ಅತ್ರಾಹಂ ಸಂಪ್ರವಕ್ಷ್ಯಾಮಿ ಕಥಾಂ ಪಾಪಪ್ರಣಾಶನೀಂ ।
ಪಾದ್ಮಕಲ್ಪಸಮುದ್ಭೂತಾಂ ಬ್ರಹ್ಮಣಾ ಸಮುದೀರಿತಾಂ ॥ ೧೪ ॥

ಶ್ರದ್ಧಯಾ ಪರಯಾ ರಾಜನ್ ಶೃಣು ತ್ವಂ ಗದತೋ ಮಮ ।
ವಕ್ಷ್ಯೇಽಹಂ ತಂ ಪ್ರಣಮ್ಯಾದಾವೀಶಂ ಭುವನನಾಯಕಂ ॥ ೧೫ ॥

ಆಸೀದಾದ್ಯೇ ಕೃತಯುಗೇ ಸಪ್ತದ್ವೀಪೈಕರಾಡ್ಬಲೀ ।
ಇಂದ್ರದ್ಯುಮ್ನ ಇತಿ ಖ್ಯಾತೋ ರಾಜಾ ಪರಮಧಾರ್ಮಿಕಃ ॥ ೧೬ ॥

ತಸ್ಯ ಪುತ್ರೋ ಮಹಾಭಾಗಃ ಸುದ್ಯುಮ್ನ ಇತಿ ವಿಶ್ರುತಃ ।
ಐಶ್ವರ್ಯೈರಖಿಲೈರ್ಭಾತಿ ಯಥಾ ದಿವಿ ಶಚೀಪತಿಃ ॥ ೧೭ ॥

---

೧೩. ಅಕಸ್ಮಾತ್ತಾಗಿ ಅರಿವಿಲ್ಲದೆ ಪರಮೇಶ್ವರನ ಹೆಸರುಗಳನ್ನು ಸ್ಮರಿಸಿದವರಿಗೂ ಭಗವಂತನಾದ ಪರಶಿವನು ಮುಕ್ತಿಯನ್ನು ದಯಪಾಲಿಸುವನು. ಹಾಗಿರುವಾಗ ಭಕ್ತಿಯಿಂದ ಶಿವನನ್ನು ಆರಾಧಿಸಿದವರಿಗೆ ಹೇಳತಕ್ಕದ್ದೇನು?

೧೪. ಇದಕ್ಕೆ ನಿದರ್ಶನವಾಗಿ ಬ್ರಹ್ಮನು, ಹಿಂದೆ ಪದ್ಮಕಲ್ಪದಲ್ಲಿ ನಡೆದ ಒಂದು ಪಾಪನಾಶಕನಾದ ಕಥೆಯನ್ನು ನನಗೆ ಹೇಳಿದ್ದನು. ಅದನ್ನು ನಾನು ಈಗ ನಿನಗೆ ಹೇಳುತ್ತೇನೆ ಕೇಳು ಎಂದು ಸೂರ್ಯದೇವನು ಮನುವಿಗೆ ಹೇಳಲಾರಂಭಿಸಿದನು,

೧೫. "ಎಲೈ ವೈವಸ್ವತಮನುವೇ, ಈಗ ನಾನು ಹೇಳಲಿರುವ ಕಥೆಯನ್ನು ಮನಸ್ಸಿಟ್ಟು ಕೇಳು. ನಾನು ಈಗ ಸಾಕ್ಷಾಲ್ಲೋಕನಾಯಕನಾದ ಪರಮೇಶ್ವರನನ್ನು ಮೊದಲು ವಂದಿಸಿ ಕಥೆಯನ್ನು ಆರಂಭಿಸುವೆನು.

೧೬. ಹಿಂದೆ ಕೃತಯುಗದಲ್ಲಿ ಇಂದ್ರದ್ಯುಮ್ನನೆಂಬ ರಾಜನಿದ್ದನು. ಆತನು ಸಪ್ತದ್ವೀಪಗಳಿಗೂ ರಾಜನೆನಿಸಿ, ಕೀರ್ತಿಶಾಲಿಯಾಗಿ ಪರಮಧರ್ಮದಿಂದ ರಾಜ್ಯವಾಳುತ್ತಿದ್ದನು.

೧೭. ಅವನಿಗೆ ಸುದ್ಯುಮ್ನನೆಂಬ ಪ್ರಸಿದ್ಧನಾದ ಮಗನಿದ್ದನು. ಆ ಸುದ್ಯುಮ್ನನು ರಾಜನಾಗಿ ಸಮಸ್ತ ಐಶ್ವರ್ಯಗಳಿಂದ ಕೂಡಿ, ದೇವಲೋಕದ ಇಂದ್ರನಂತೆ ಭೂಲೋಕದಲ್ಲಿ ರಾಜ್ಯಭೋಗವನ್ನನುಭವಿಸುತ್ತಿದ್ದನು

ಪ್ರತಿಷ್ಠಾನಪುರೇ ರಮ್ಯೇ ಗಂಗಾತೀರೇ ಮನೋರಮೇ ॥
ತತ್ರ ಸ್ಥಿತ್ವಾಖಿಲಾಂ ಪೃಥ್ವೀಂ ತಸ್ಮಿನ್ ರಾಜನಿ ಶಾಸತಿ ॥ ೧೮ ॥

ಕದಾಚಿತ್ತತ್ರ ಭಗವಾನ್ ತೃಣಬಿಂದು ರ್ಮಹಾಮುನಿಃ ।
ಆಜಗಾಮ ಸ ತಂ ದ್ರಷ್ಟುಂ ಸುದ್ಯುಮ್ನಂ ಪ್ರಿಯದರ್ಶನಂ ॥ ೧೯ ॥

ತಮಾಯಾಂತಂ ಮುನಿಂ ದೃಷ್ಟ್ವಾ ರಾಜಾ ರುದ್ರಾರ್ಚನೇ ರತಃ ।
ಉದ್ವಾಸ್ಯಾರ್ಚಾಂ ಮಹಾಬಾಹು ರುತ್ಥಾಯ ಚ ಕೃತಾಂಜಲಿಃ ॥ ೨೦ ॥

ಯಥಾವದಭಿವಾದ್ಯಾಥ ದದಾವಾಸನಮುತ್ತಮಂ ।
ಯಥಾವನ್ಮಧುಪರ್ಕಾದಿ ತಸ್ಮೈ ಸರ್ವಂ ನ್ಯವೇದಯತ್ ॥ ೨೧ ॥

ಅದ್ಯ ಧನ್ಯಃ ಕೃತಾರ್ಥೋಽಸ್ಮಿ ಸಫಲಂ ಜೀವಿತಂ ಮಮ ।
ಭಗವಾನಾಗತೋ ಯಸ್ಮಾನ್ಮಾಂ ದ್ರಷ್ಟುಂ ಮುನಿಸತ್ತಮ ॥ ೨೨ ॥

---

೧೮. ಗಂಗಾನದಿಯ ದಡದಲ್ಲಿ ಪ್ರಸಿದ್ಧವಾಗಿದ್ದ ಪ್ರತಿಷ್ಠಾನ ನಗರವೇ ಆತನಿಗೆ ರಾಜಧಾನಿಯಾಗಿತ್ತು. ಅಲ್ಲಿ ನೆಲಸಿ ರಾಜನು ಧರ್ಮದಿಂದ ಸಮಸ್ತಭೂಮಿಯನ್ನೂ ಆಳುತ್ತಿದ್ದನು.

೧೯. ಹೀಗಿರುವಾಗ ಒಂದುಸಾರಿ ತೃಣಬಿಂದುವೆಂಬ ಮಹರ್ಷಿಯು ಧರ್ಮಿಷ್ಠನಾಗಿ ಸಕಲರಿಗೂ ಪ್ರಿಯನಾಗಿರುವ ಆ ಸುದ್ಯುಮ್ನನನ್ನು ನೋಡಲು ದಯಮಾಡಿಸಿದನು.

೨೦. ಹಾಗೆ ಬಂದ ಋಷಿಯನ್ನು ಕಂಡು ಸುದ್ಯುಮ್ನನು ಶಿವಾರಾಧನೆಯಲ್ಲಿ ನಿರತನಾಗಿದ್ದರೂ ಸಹ, ಅದನ್ನು ತತ್ಕಾಲದಲ್ಲಿ ನಿಲ್ಲಿಸಿ ಮಹರ್ಷಿಯನ್ನು ಪ್ರತ್ಯುತ್ಥಾನದಿಂದ ಉಪಚರಿಸಿದನು

೨೧. ಪದ್ಧತಿಯಂತೆ ನಮಸ್ಕರಿಸಿ ಮಹರ್ಷಿಗೆ ಉತ್ತಮವಾದ ಪೀಠವನ್ನಿತ್ತು, ಶಾಸ್ತ್ರೋಕ್ತವಾಗಿ ಮಧುಪರ್ಕಾದಿಗಳನ್ನು ನಿವೇದಿಸಿ, ಬಹುವಾಗಿ ಸತ್ಕಾರಮಾಡಿದನು.

೨೨. ಅನಂತರ ಸುದ್ಯುಮ್ನನು ಋಷಿಯನ್ನು ಕುರಿತು, " ಸ್ವಾಮಿಯೇ ಈಗ ನಾನು ಧನ್ಯನಾದೆನು. ನನ್ನ ಜೀವಿತವು ಸಫಲವಾಯಿತು. ತಮ್ಮಂತಹ ಮಹಾತ್ಮರು ನನ್ನನ್ನು ನೋಡಲು ಬಂದುದೇ ನನ್ನ ಸೌಭಾಗ್ಯವಲ್ಲವೆ ?

ಕಿಮರ್ಥಮಾಗತೋಽ ಬ್ರಹ್ಮನ್ ಕೃತಕೃತ್ಯೋಽಸ್ಮಿ ಸುವ್ರತ ।
ವಿಶೇಷಾಚ್ಛಾಂಕರೇ ಭಕ್ತೋಽ ನ ದುರ್ಲಭ ಮಿಹಾಸ್ತಿ ತೇ ॥ ೨೩ ॥

॥ ಭಾನುರುವಾಚ ॥

ಸುದ್ಯುಮ್ನಸ್ಯ ವಚಶ್ಶ್ರುತ್ವಾ ಮುನಿರಾಹ ಮಹಾಮನಾಃ ।
ಶಿವಭಕ್ತ್ಯಮೃತಾಸ್ವಾದಪರಾನಂದೈಕನಿರ್ಭರಃ ॥ ೨೪ ॥

॥ ತೃಣಬಿಂದುರುವಾಚ ॥

ರಾಜನ್, ಯದುಕ್ತಂ ಭವತಾ ತತ್ತಥೈವ ನ ಸಂಶಯಃ ।
ತಥಾಪಿ ಚರಿತಂ ಶ್ರುತ್ವಾ ತವಾಹಂ ವಿಸ್ಮಯಾನ್ವಿತಃ ॥ ೨೫ ॥

ದ್ರಷ್ಟುಂ ಸಮಾಗತೋಽ ರಾಜನ್ ಜನ್ಮನಸ್ತವ ಗೌರವಂ ।
ಕಥಯಸ್ವ ಮಹಾಬಾಹೋ ಶ್ರೋತುಂ ಕೌತೂಹಲಂ ಹಿ ಮೇ ॥ ೨೬ ॥

---

೨೩. ಎಲೈ ಮಹರ್ಷಿಯೇ, ನೀನು ಈಶ್ವರ ಭಕ್ತನು. ನಿನಗೆ ದುರ್ಲಭ ವಾದದ್ದು ಲೋಕದಲ್ಲಿ ಯಾವುದೂ ಇಲ್ಲ. ಈಗ ಇಲ್ಲಿಗೆ ಬಿಜಯಮಾಡಲು ಕಾರಣ ವೇನು ” ಎಂದು ವಿನಯದಿಂದ ಕೇಳಿಕೊಂಡನು.

೨೪. ಆಗ ತೃಣಬಿಂದು ಮಹರ್ಷಿಯು ಆ ಸುದ್ಯುಮ್ನನ ಹಿತಮಿತವಾದ ಮಾತುಗಳನ್ನು ಕೇಳಿ, ಅವನ ಶಿವಭಕ್ತಿಗೆ ಮೆಚ್ಚಿ, ಅಮೃತಪಾನದಿಂದ ಸಂತುಷ್ಟ ನಾದವನಂತೆ ಆನಂದಭರಿತನಾಗಿ ಹೀಗೆಂದನು.

೨೫. “ಎಲೈ ರಾಜನೇ! ನೀನು ಹೇಳಿದ್ದೆಲ್ಲವೂ ನಿಜ. ನಿನ್ನ ನಡತೆಯನ್ನೂ, ಭಕ್ತಿಮಾರ್ಗವನ್ನೂ ಕೇಳಿ ನಾನು ಬಹಳವಾಗಿ ಹರ್ಷಿತನಾಗಿದ್ದೇನೆ.

೨೬. ಎಲೈ ರಾಜನೇ ! ಈಗ ನಿನ್ನ ಗುರುತರವಾದ ಹಿಂದಿನ ಜನ್ಮದ ವಿಚಾರ ವನ್ನು ಕೇಳಲು ಬಂದಿದ್ದೇನೆ. ನನಗೆ ಅದನ್ನು ಕೇಳಲು ಬಹಳ ಕುತೂಹಲವಿದೆ. ತಪ್ಪದೆ ಅದನ್ನು ತಿಳಿಸುವೆಯಾ” ಎಂದು ಆ ಋಷಿಯು ಕೇಳಿಕೊಳ್ಳಲು.

॥ ಸುದ್ಯುಮ್ನ ಉವಾಚ ॥
ಜನ್ಮನ್ಯಹಮತೀತೇಽಸ್ಮಿನ್ ವ್ಯಾಧೋಽಹಂ ಗೋಮತೀತಟೇ ।
ದೇವತಾನಾಮಹಂ ದ್ವೇಷ್ಟಾ ಸರ್ವೇಷಾಂ ಪ್ರಾಣಿನಾಮಪಿ ॥ ೨೭ ॥

ಸುವ್ಯಾಡಿರಿತಿ ನಾಮ್ನಾಹಂ ಖ್ಯಾತೋಽಹಂ ವ್ಯಾಧರಾಡ್ಮುನೇ ।
ನ ಕಶ್ಚಿದ್ಧರ್ಮಲೇಶೋಽಸ್ತಿ ಪಾಪಕರ್ಮಸ್ವಹಂ ರತಃ ॥ ೨೮ ॥

ಮಯಾ ಯೇ ನಿಹತಾ ಮಾರ್ಗೇ ತೇಷಾಂ ಸಂಖ್ಯಾ ನ ವಿದ್ಯತೇ ।
ಪರಸ್ವಂ ಯದಪಹೃತಂ ತತ್ಪಾಪಂ ಪರ್ವತೋಪಮಂ ॥ ೨೯ ॥

ಏವಂ ಬಹುತಿಥೇ ಕಾಲೇ ಗತೇಽಹಂ ಪಂಚತಾಂ ಗತಃ ।
ಧರ್ಮರಾಜಸ್ಯ ಪುರತೋ ನೀತೋಽಹಂ ಯಮಕಿಂಕರೈಃ ॥ ೩೦ ॥

ಮಾಂ ದೃಷ್ಟ್ವಾಽಥಾಬ್ರವೀದ್ಧರ್ಮಶ್ಚಿತ್ರಗುಪ್ತಂ ವಿಚಾರಕಂ ।
ಕಿಮನೇನ ಕೃತೋ ಧರ್ಮಲೇಶೋಽಸ್ತಿ ವದ ಸುವ್ರತ ॥ ೩೧ ॥

---

೨೭. ಸುದ್ಯುಮ್ನನು, " ಓ ಋಷಿಯೇ, ನಾನು ಹಿಂದಿನ ಜನ್ಮದಲ್ಲಿ ಬೇಡರವನಾಗಿದ್ದೆ. ನನ್ನ ವಾಸಸ್ಥಳವು ಗೋಮತೀನದಿಯ ದಡವಾಗಿತ್ತು. ಅಲ್ಲಿ ಸಮಸ್ತ ಪ್ರಾಣಿಗಳಿಗೂ, ಸಮಸ್ತ ದೇವತೆಗಳಿಗೂ ದ್ವೇಷಿಯಾಗಿಯೇ ವಾಸಮಾಡುತ್ತಿದ್ದೆನು.

೨೮. ನನ್ನ ಹೆಸರು ಸುವ್ಯಾಡಿ, ಎಂಬುದಾಗಿತ್ತು. ನಾನೇ ಬೇಡರರಾಜ. ನನ್ನ ವೃತ್ತಿಯಂತೆ ಪಾಪಕರ್ಮಗಳಲ್ಲಿಯೇ ನಾನು ಆಸಕ್ತನಾಗಿದ್ದುದರಿಂದ ಯಾವ ಧರ್ಮ ಕಾರ್ಯಗಳನ್ನೂ ಆಗ ನಾನು ಮಾಡಲೇ ಇಲ್ಲ.

೨೯. ನಾನು ದಾರಿಹೋಕರಲ್ಲಿ ಎಷ್ಟು ಜನರನ್ನು ಕೊಂದೆನೋ ಅದಕ್ಕೆ ಲೆಕ್ಕವೇ ಇರಲಿಲ್ಲ. ಪರರ ಸ್ವತ್ತುಗಳನ್ನು ಅಪಹರಿಸಿ ಅದರಿಂದ ಸಂಪಾದಿಸಿದ ಪಾಪ ರಾಶಿಯು ನನಗೆ ಪರ್ವತದಷ್ಟು ಕೂಡಿಬಂದಿತ್ತು.

೩೦. ಹೀಗೆಯೇ ಬಹುಕಾಲ ಜೀವಿಸಿ ಕೊನೆಗೆ ಮೃತನಾದೆನು. ನನ್ನನ್ನು ಯಮಕಿಂಕರರು ಯಮನಲ್ಲಿಗೆ ನಿರ್ದಯವಾಗಿ ಕರೆದೊಯ್ದರು.

೩೧. ನನ್ನನ್ನು ಯಮನು ನೋಡಿ, ತನ್ನ ಕಡೆಯ ಚಿತ್ರಗುಪ್ತರನ್ನು ಕರೆದು "ಈತನು ಮಾಡಿರುವ ಧರ್ಮಕಾರ್ಯವೇನಾದರೂ ಇದೆಯೆ ?" ಎಂದು ಪ್ರಶ್ನಿಸಿದನು.

॥ ಚಿತ್ರಗುಪ್ತ ಉವಾಚ ॥

ಅನೇನ ಯತ್ಕೃತಂ ಪುಣ್ಯಂ ಮಯಾ ವಕ್ತುಂ ನ ಶಕ್ಯತೇ ।
ಜಾನಾತಿ ಭಗವಾನೇಕೋ ವಿಶ್ವವ್ಯಾಪೀ ಮಹೇಶ್ವರಃ ॥ ೩೨ ॥

ಇದಂ ಪುಣ್ಯಮಿತಿ ಜ್ಞಾತ್ವಾ ಕೃತಂ ನಾನೇನ ಯದ್ಯಪಿ ।
ಆಹರ ಪ್ರಹರೇತ್ಯಾದಿ ನಾಮ ಸಂಕೀರ್ತನಂ ಚ ಯತ್ ॥ ೩೩ ॥

ಕರೋತಿ ತೇನ ಪುಣ್ಯೇನ ದುಷ್ಕೃತಂ ಭಸ್ಮಸಾತ್ಕೃತಂ ।
ಪಾಪಲೇಶೋಽಪಿ ನಾಸ್ಯಾಸ್ತಿ ಇತಿ ಮೇ ನಿಶ್ಚಿತಾ ಮತಿಃ ॥ ೩೪ ॥

॥ ಸುದ್ಯುಮ್ನ ಉವಾಚ ॥

ತಸ್ಯ ತದ್ವಚನಂ ಶ್ರುತ್ವಾ ಚಿತ್ರಗುಪ್ತಸ್ಯ ಧೀಮತಃ ।
ಸುವ್ಯಾಡಿಂ ಪೂಜಯಾಮಾಸ ಯಥಾವದ್ವಿಧಿಪೂರ್ವಕಂ ॥ ೩೫ ॥

---

೩೨. ಆಗ ಚಿತ್ರಗುಪ್ತನು ತನ್ನ ಒಡೆಯನನ್ನು ಕುರಿತು" ಸ್ವಾಮಿಯೇ ನನಗೆ ತಿಳಿದಂತೆ ಈತನು ಯಾವ ಪುಣ್ಯಕಾರ್ಯವನ್ನೂ ನಡಿಸಿಲ್ಲ. ಭಗವಂತನಾದ ಪರಮೇಶ್ವರನೇನಾದರೂ ಸೂಕ್ಷ್ಮಜ್ಞಾನದಿಂದ ಅಲ್ಪಸ್ವಲ್ಪ ಇವನ ಪುಣ್ಯಕಾರ್ಯವನ್ನು ತಿಳಿದಿದ್ದಾನೋ ಏನೋ ಅರಿಯೆ.

೩೩. ಆದರೆ ಇವನಿಗೆ ತಿಳಿಯದಂತೆ ನಡೆದಿರುವ ಒಂದು ಸುಕೃತವು ಮಾತ್ರ, ಇವನ ಭಾಗಕ್ಕಿದೆ. ಎಳೆದುತಾ ಹೊಡಿ, ಎಂಬರ್ಥದ ಆಹರ, ಪ್ರಹರ ಎಂಬ ಪದಗಳನ್ನು ಈತನು ಆಗಾಗ ಪ್ರಯೋಗಿಸಿರುವನು. ಆ ಸಂದರ್ಭದಲ್ಲಿ ಹರ, ಹರ, ಎಂಬ ಭಗವನ್ನಾಮಗಳು ಇವನಿಂದ ಹೇಳಲ್ಪಟ್ಟಿವೆ.

೩೪. ಆ ಭಗವನ್ನಾಮೋಚ್ಚಾರಣೆಯಿಂದಲೇ ಇವನು ಸಂಪಾದಿಸಿದ್ದ ಪಾಪಗಳೆಲ್ಲವೂ ನಿರ್ಮೂಲವಾಗಿ ನಾಶವಾಗಿವೆ. ಆದರಿಂದ ಈತನು ಈಗ ಸಂಪೂರ್ಣವಾಗಿ ಪಾಪರಹಿತನಾಗಿರುವನೆಂಬುದೇ ನನ್ನ ಭಾವನೆ ಎಂದನು.

೩೫. ಹೀಗೆ ಹೇಳಿದ ಚಿತ್ರಗುಪ್ತನ ಮಾತುಗಳನ್ನು ಕೇಳಿ ಯಮನು, ಸುವ್ಯಾಡಿಯನ್ನು ಸುಕೃತಿಯೆಂದರಿತು, ಶಾಸ್ತ್ರೋಕ್ತವಾದ ರೀತಿಯಲ್ಲಿ ಆತನನ್ನು ಪೂಜಿಸಿ ಮಾಡಿದನು.

ಏತಸ್ಮಿನ್ನಂತರೇ ತತ್ರ ವಿಮಾನಂ ಸಾರ್ವಕಾಮಿಕಂ ।
ಸೂರ್ಯಾಯುತಪ್ರತೀಕಾಶಂ ದಿವ್ಯಸ್ತ್ರೀಭಿರ್ವಿರಾಜಿತಂ ॥ ೩೬ ॥

ದೇವದೂತೈಸ್ಸಮಾನೀತಮಾರುಹ್ಯ ಮುನಿಪುಂಗವ ।
ಧರ್ಮರಾಜಮನುಜ್ಞಾಪ್ಯ ಗತೋಽಹಮಮರಾವತೀಂ ॥ ೩೭ ॥

ತತ್ರ ಭುಕ್ತ್ವಾ ಮಹಾಭೋಗಾನ್ ಯುಗಾನಾಮಯುತಂ ತತಃ ।
ಗತೋಽಸ್ಮಿ ಬ್ರಹ್ಮಸದನಂ ಬ್ರಹ್ಮಣಾಹಂ ಪ್ರಪೂಜಿತಃ ॥ ೩೮ ॥

ತತ್ರಾಹಂ ಕಲ್ಪಪರ್ಯಂತಂ ಭೋಗಾನ್ ಭುಕ್ತ್ವಾ ಯಥೇಪ್ಸಿತಾನ್ ।
ತತಸ್ತು ಕರ್ಮಣಃ ಶೇಷಂ ಭೋಕ್ತುಮತ್ರ ಮಹೀತಲೇ ॥ ೩೯ ॥

ಇಂದ್ರದ್ಯುಮ್ನಸ್ಯ ರಾಜರ್ಷೇಃ ಕುಲೇ ಜಾತೋಽಸ್ಮಿ ಸುವ್ರತ ।
ಸ್ಮರಾಮಿ ಪೂರ್ವಿಕಾಂ ಜಾತಿಂ ಪ್ರಸಾದಾಚ್ಛೂಲಿನೋ ಮುನೇ ॥ ೪೦ ॥

೩೬—೩೭. ಅಷ್ಟರಲ್ಲಿಯೇ ದೇವದೂತರು ದಿವ್ಯವಿಮಾನವನ್ನು ತಂದರು. ಅದು ಸಹಸ್ರ ಸೂರ್ಯರ ತೇಜಸ್ಸಿನಿಂದ ಹೊಳೆಯುತ್ತಿತ್ತು. ಅಪ್ಸರ ಸ್ತ್ರೀಯರೆಲ್ಲರೂ ಅದರ ಸುತ್ತಲೂ ನೆರೆದಿದ್ದರು. ಇಷ್ಟಾರ್ಥಗಳನ್ನೆಲ್ಲಾ ಒದಗಿಸತಕ್ಕ ಆ ದಿವ್ಯವಿಮಾನವನ್ನು ಹತ್ತಿ ಯಮನ ಅಪ್ಪಣೆಯನ್ನು ಪಡೆದು ದೇವೇಂದ್ರನ ಅಮರಾವತಿಗೆ ಪ್ರಯಾಣಮಾಡಿದೆನು.

೩೮. ಅಲ್ಲಿ ಹತ್ತುಸಹಸ್ರ ಯುಗಗಳವರೆಗೂ ದಿವ್ಯಭೋಗಗಳನ್ನು ಅನುಭವಿಸಿದೆನು. ಅನಂತರ ಬ್ರಹ್ಮಲೋಕಕ್ಕೆ ಹೋದೆನು. ಅಲ್ಲಿಯೂ ಬ್ರಹ್ಮನು ನನ್ನನ್ನು ಬಹುವಾಗಿ ಸತ್ಕರಿಸಿದನು.

೩೯. ಆ ಬ್ರಹ್ಮಲೋಕದಲ್ಲಿಯೂ ಕಲ್ಪಪರ್ಯಂತವಾಗಿ ಸಕಲ ಸುಖಗಳನ್ನೂ ಅನುಭವಿಸಿದೆನು. ಆದರೆ ಕರ್ಮಶೇಷದ ಕಿಂಚಿತ್ಪಾಪ ಫಲವನ್ನು ಅನುಭವಿಸಲು ಈಗ ಭೂಲೋಕಕ್ಕೆ ಬಂದಿರುವೆನು.

೪೦. ಈಗ ರಾಜರ್ಷಿಯಾದ ಇಂದ್ರದ್ಯುಮ್ನನೆಂಬುವನ ವಂಶದಲ್ಲಿ ಹುಟ್ಟಿದ್ದೇನೆ. ಪರಮೇಶ್ವರನ ಅನುಗ್ರಹದಿಂದ ನನಗೆ ಪೂರ್ವಜನ್ಮದ ವೃತ್ತಾಂತವೆಲ್ಲವೂ ಸ್ಮರಣೆಯಲ್ಲಿದೆ.

ಈಶ್ವರೇ ಸಹಸಾ ಭಕ್ತಿ ರ್ಮಮ ತ್ರಿದಶಪೂಜಿತೇ ।
ಜಾನಾತಿ ಕೋ ಮಹೇಶಸ್ಯ ಮಾಹಾತ್ಮ್ಯಂ ಪರಮಾತ್ಮನಃ ॥ ೪೧ ॥

ಯಸ್ಯ ನಾಮ್ನಃ ಫಲಮಿದಮಜ್ಞಾನೋಚ್ಚರಣಾದಪಿ ।
ಜ್ಞಾತ್ವಾ ಯಃ ಕೀರ್ತಯೇಚ್ಛಂಭೋರ್ನಾಮಾನ್ಯಮಿತತೇಜಸಃ। ॥ ೪೨ ॥

ಮುಕ್ತಿಃ ಕರತಲೇ ತಸ್ಯ ಸ್ಥಿತೇತಿ ಮುನಯೋ ಜಗುಃ ॥

॥ ಭಾನುರುವಾಚ ॥

ಇತಿ ಸರ್ವಮಶೇಷೇಣ ಚರಿತಂ ತಸ್ಯ ಧೀಮತಃ ।
ಸುದ್ಯುಮ್ನಸ್ಯ ಮುನಿಃ ಶ್ರುತ್ವಾ ವಿಸ್ಮಿತೋಽಭೂತ್ಪುನಃ ಪುನಃ ॥ ೪೩ ॥

ಸಮಾಲಿಂಗ್ಯ ಮಹಾತ್ಮಾನಂ ಸುದ್ಯುಮ್ನಂ ರಾಜಪುಂಗವಂ ।
ರಾಜನ್ ಸ್ವಮಾಶ್ರಮಪದಂ ಯಾಮೀತ್ಯುಕ್ತ್ವಾ ಜಗಾಮ ಸಃ ॥ ೪೪ ॥

---

೪೧. ಅಲ್ಲದೆ ದೇವದೇವನಾದ ಪರಮೇಶ್ವರನಲ್ಲಿ ನಾನು ಸಂಪೂರ್ಣವಾದ ಭಕ್ತಿಯುಳ್ಳವನೂ ಆಗಿರುವೆ. ಆದರೆ ಆ ಪರಮೇಶ್ವರನ ಮಹಿಮೆಯನ್ನು ತಿಳಿದಿರುವವರು ಲೋಕದಲ್ಲಿ ಯಾರಿರುವರು ?

೪೨. ಅಜ್ಞಾನದಿಂದ ಆ ಪರಶಿವನ ಸ್ಮರಣೆಯಿಲ್ಲದೆ, ಆಕಸ್ಮಿಕವಾಗಿ ಬಂದ ಪರಶಿವನ ನಾಮೋಚ್ಚಾರಣೆಯಿಂದಲೇ ಈ ಭೋಗ ನನಗೆ ದೊರೆತಿರುವಾಗ, ತಿಳಿದೂ ಭಕ್ತಿಪೂರ್ವಕವಾಗಿ ಯಾರು ಶಿವನಾಮಗಳನ್ನು ಉಚ್ಚರಿಸುವರೋ, ಅವರಿಗೆ ಮೋಕ್ಷವು ಹಸ್ತಗತವೆಂಬುದನ್ನು ಮತ್ತೆ ಹೇಳಬೇಕೇ ? ಇದನ್ನೇ ಸಮಸ್ತ ಋಷಿ ··ಳೂ ಮುಕ್ತಕಂಠದಿಂದ ಹೇಳಿರುತ್ತಾರಲ್ಲವೆ"

೪೩. ಎಂದು ಹೇಳಿದ ಸುದ್ಯುಮ್ನನ ಮಾತುಗಳನ್ನು ಕೇಳಿದ ತೃಣಬಿಂದು ಮಹರ್ಷಿಯು ಶಿವನಾಮ ಮಹಿಮೆಗಾಗಿ ಅತ್ಯಾಶ್ಚರ್ಯಪಟ್ಟು,

೪೪. ಆ ಪ್ರದ್ಯುಮ್ನ ರಾಜನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು, ಅವನ ಅಪ್ಪಣೆಯಂತೆ ತನ್ನ ಆಶ್ರಮಕ್ಕೆ ಪ್ರಯಾಣಮಾಡಿದನು.

ಏತತ್ತೇ ಚರಿತಂ ರಾಜನ್ ಸುದ್ಯುಮ್ನಸ್ಯ ಮಹಾತ್ಮನಃ ।
ಕಥಿತಂ ಯಃ ಪಠೇದ್ಭಕ್ತ್ಯಾ ಬ್ರಹ್ಮಲೋಕಂ ಸ ಗಚ್ಛತಿ ॥ ೪೫ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಭಾನುಮನು
ಸಂವಾದೇ ಸುದ್ಯುಮ್ನಾಖ್ಯಾನಂ ನಾಮ ತೃತೀಯೋಧ್ಯಾಯಃ

---

೪೫. ಎಲೈ ವೈವಸ್ವತಮನುವೇ! ನಿನಗೆ ಈಗ ಸುದ್ಯುಮ್ನನ ಕಥೆಯನ್ನು ವಿಸ್ತಾರವಾಗಿ ಹೇಳಿರುವೆನು. ಇದನ್ನು ಯಾರು ಭಕ್ತಿಯಿಂದ ಪಠಿಸುವರೋ ಅವರಿಗೆ ಬ್ರಹ್ಮಲೋಕ ಪ್ರಾಪ್ತಿಯಾಗುವುದು, ಎಂದು ಸೂರ್ಯದೇವನು ಮನುವಿಗೆ ಹೇಳಿದನು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂರ್ಯ ಮನು
ಸಂವಾದರೂಪವಾಗಿ ಸುದ್ಯುಮ್ನನ ಕಥೆಯನ್ನು ತಿಳಿಸುವ
ಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ಚತುರ್ಥೋಽಧ್ಯಾಯಃ ॥

॥ ಮನುರುವಾಚ ॥

ರಾಜ್ಞಸ್ಸಕಾಶಾತ್ಸಮುನಿರ್ಗತ್ವಾ ಕಿಂ ಕೃತವಾನ್ ಪುನಃ ।
ತಸ್ಯಾಶ್ರಮಸ್ಯ ಕಿಂ ನಾಮ ಭಗವನ್ ಬ್ರೂಹಿ ಮೇ ಪ್ರಭೋ ॥ ೧ ॥

॥ ಭಾನುರುವಾಚ ॥

ರೇವಾತೀರೇ ಮಹತ್ಪುಣ್ಯಂ ಜಾಲೇಶ್ವರ ಮಿತಿ ಸ್ಮೃತಂ ।
ಆಶ್ರಮಂ ತೃಣಬಿಂದೋಸ್ತು ಮುನಿಸಿದ್ಧನಿಷೇವಿತಂ ॥ ೨ ॥

ಗತ್ವಾ ತತ್ರ ಮುನಿಶ್ರೇಷ್ಠೋ ಭವಭಾವಸಮನ್ವಿತಃ ।
ಶಿವಲಿಂಗಂ ಪ್ರತಿಷ್ಠಾಪ್ಯ ತೀರ್ಥಯಾತ್ರಾಂ ಚಕಾರ ಸಃ ॥ ೩ ॥

ನಾಲ್ಕನೆಯ ಅಧ್ಯಾಯವು

೧. ಮತ್ತೆ ವೈವಸ್ವತಮನುಚಕ್ರವರ್ತಿಯು ಸೂರ್ಯದೇವನನ್ನು ಕುರಿತು "ಓತಂದೆಯೇ ತೃಣಬಿಂದು ಮಹರ್ಷಿಯು ಸುದ್ಯುಮ್ನರಾಜನ ವಿಷಯವನ್ನು ತಿಳಿದು ತನ್ನ ಆಶ್ರಮಕ್ಕೆ ಹೋದನಷ್ಟೆ. ಅಲ್ಲಿಂದ ಮುಂದೆ ಅವನು ಮಾಡಿದುದೇನು ? ಅವನ ಆಶ್ರಮವುಯಾವುದು ? ಇದೆಲ್ಲವನ್ನೂ ನನಗೆ ವಿಸ್ತರಿಸಿ ಹೇಳು" ಎಂದು ಕೇಳಲಾಗಿ,

೨. ಸೂರ್ಯದೇವನು "ಅಯ್ಯಾ ಪುತ್ರನೇ, ಆ ತೃಣಬಿಂದು ಮಹರ್ಷಿಯ ಆಶ್ರಮದ ಹೆಸರು ಜಾಲೇಶ್ವರ. ಅದು ರೇವಾ ನದಿಯತೀರದಲ್ಲಿ ಪುಣ್ಯಕ್ಷೇತ್ರವೆನಿಸಿ ಕೊಂಡಿದೆ. ಅಲ್ಲಿ ಸಮಸ್ತ ಸಿದ್ಧತಪಸ್ವಿಗಳು ವಾಸಿಸುತ್ತಿರುವರು.

೩. ಅಂತಹ ತನ್ನ ಆಶ್ರಮದಲ್ಲಿ ತೃಣಬಿಂದು ಮಹರ್ಷಿಯು ಮೊದಲು ಶಿವ ಲಿಂಗವನ್ನು ಶಾಸ್ತ್ರೋಕ್ತವಾಗಿ ಪ್ರತಿಷ್ಠೆಮಾಡಿ, ಅನಂತರ ಶಿವಭಕ್ತಿ ಪರಾಯಣನಾಗಿ ಸರ್ವದಾ ತೀರ್ಥಯಾತ್ರೆಯಲ್ಲಿ ಮನಸ್ಸಿಟ್ಟು, ಅಲ್ಲಿಂದ ಮುಂದಕ್ಕೆ ಪ್ರಯಾಣಮಾಡಿ ದನು". ಎಂದು ಸೂರ್ಯದೇವನು ಹೇಳಲು.

॥ ಮನುರುವಾಚ ॥

ಕಾನಿ ತೀರ್ಥಾನಿ ಗುಹ್ಯಾನಿ ಯೇಷು ಸನ್ನಿಹಿತಶ್ಶಿವಃ ।
ಬ್ರೂಹಿ ಮೇ ತಾನಿ ಭಗವನ್ನನ್ಯಾನ್ಯಪಿ ಚ ತತ್ತ್ವತಃ ॥ ೪ ॥

॥ ಭಾನುರುವಾಚ ॥

ತೀರ್ಥಾನಾಮುತ್ತಮಂ ತೀರ್ಥಂ ಕ್ಷೇತ್ರಾಣಾಂ ಕ್ಷೇತ್ರಮುತ್ತಮಂ ।
ವಾರಾಣಸೀತಿ ನಗರೀ ಪ್ರಿಯಾ ದೇವಸ್ಯ ಶೂಲಿನಃ ॥ ೫ ॥

ಯತ್ರ ವಿಶ್ವೇಶ್ವರೋ ದೇವಃ ಸರ್ವೇಷಾಮಿಹ ದೇಹಿನಾಂ ।
ದದಾತಿ ತಾರಕಂ ಜ್ಞಾನಂ ಸಂಸಾರಾನ್ಮೋಚಕಂ ಪರಂ ॥ ೬ ॥

ಗಂಗಾ ಬ್ರಹ್ಮಮಯೀ ಯತ್ರ ಮೂರ್ತಿಶ್ಚೋತ್ತರವಾಹಿನೀ ।
ಸಂಹರ್ತ್ರೀ ಸರ್ವಪಾಪಾನಾಂ ದೃಷ್ಟ್ವಾ ಸ್ಪೃಷ್ಟ್ವಾ ನಮಸ್ಕೃತಾ ॥ ೭ ॥

---

೪. ಮನುವು ಮತ್ತೆ "ಯಾವ ತೀರ್ಥಗಳು ಲೋಕದಲ್ಲಿ ಉತ್ತಮವಾದವುಗಳು ? ಅವುಗಳಲ್ಲಿ ಶಿವನ ಆವಾಸಸ್ಥಾನವಾದವುಗಳು ಯಾವುವು ? ಇತರ ತೀರ್ಥಗಳು ಯಾವ ಯಾವ ದೇವತೆಗಳಿಗೆ ಪ್ರಿಯವಾಗಿವೆ ? ಇವೆಲ್ಲವನ್ನೂ ನನಗೆ ವಿಸ್ತರಿಸಿ ಹೇಳಬೇಕು" ಎಂದು ಕೇಳಿಕೊಳ್ಳಲು,

೫. ಆಗ ಸೂರ್ಯದೇವನು " ಅಯ್ಯಾ ವೈವಸ್ವತಮನುವೇ! ಪರಮೇಶ್ವರನಿಗೆ ಪ್ರಿಯವಾದ ಸ್ಥಳವೆಂದರೆ ಕಾಶಿಯೊಂದೇ. ಆದ್ದರಿಂದಲೇ ಅದು ಸಮಸ್ತ ತೀರ್ಥಗಳಲ್ಲಿಯೂ, ಸಮಸ್ತ ಕ್ಷೇತ್ರಗಳಲ್ಲಿಯೂ ಉತ್ತಮವೆನಿಸಿಕೊಂಡಿದೆ.

೬. ಅಲ್ಲಿ ಪರಮೇಶ್ವರನು ಸರ್ವರಿಗೂ ಅವಸಾನಕಾಲದಲ್ಲಿ ಸಂಸಾರ ದುಃಖಗಳನ್ನು ಪಾರುಗಾಣಿಸುವ ತಾರಕಮಂತ್ರವನ್ನು ತಾನೇ ಉಪದೇಶಮಾಡುವನು. ಅಲ್ಲಿ ಮರಣವನ್ನು ಪಡೆದವರು ಈ ತಾರಕಮಂತ್ರ ಪ್ರಭಾವದಿಂದ ಪುನಃ ಸಂಸಾರದ ದುಃಖವನ್ನು ಪಡೆಯಲಾರರು.

೭. ಅಲ್ಲಿ ಗಂಗಾನದಿಯು ಜ್ಞಾನರೂಪಿಣಿಯಾಗಿ ಉತ್ತರ ದಿಕ್ಕಿಗೆ ಪ್ರವಹಿಸುತ್ತಿರುವಳು. ಆ ಗಂಗಾನದಿಯನ್ನು ಅಲ್ಲಿ ಯಾರು ಭಕ್ತಿಯಿಂದ ದರ್ಶನಮಾಡುವರೋ, ಯಾರು ಸ್ಪರ್ಶಿಸುವರೋ, ಯಾರು ನಮಸ್ಕರಿಸುವರೋ, ಅವರೆಲ್ಲರೂ ಸಮಸ್ತ ಪಾಪಗಳನ್ನೂ ಕಳೆದುಕೊಂಡು ಮೋಕ್ಷಕ್ಕೆ ಸಿದ್ಧರಾಗುವರು.

ನಾಸ್ತಿ ಗಂಗಾಸಮಂ ತೀರ್ಥಂ ವಾರಾಣಸ್ಯಾಂ ವಿಶೇಷತಃ ।
ತತ್ರಾಪಿ ಮಣಿಕರ್ಣ್ಯಾಖ್ಯಂ ತೀರ್ಥಂ ವಿಶ್ವೇಶ್ವರಪ್ರಿಯಂ ॥ ೮ ॥

ತಸ್ಮಿಂಸ್ತೀರ್ಥೇ ನರಃ ಸ್ನಾತ್ವಾ ಪಾತಕೀವಾಪ್ಯಪಾತಕೀ ।
ದೃಷ್ಟ್ವಾ ವಿಶ್ವೇಶ್ವರಂ ದೇವಂ ಮುಕ್ತಿಭಾಗ್ಜಾಯತೇ ನರಃ ॥ ೯ ॥

ವಿಶ್ವೇಶ್ವರಸ್ಯ ಮಾಹಾತ್ಮ್ಯಂ ಯದುಕ್ತಂ ಬ್ರಹ್ಮಸೂನುನಾ ।
ತದಹಂ ಸಂಪ್ರವಕ್ಷ್ಯಾಮಿ ವ್ಯಾಸಾಯಾಮಿತತೇಜಸೇ ॥ ೧೦ ॥

ಘೋರಂ ಕಲಿಯುಗಂ ಪ್ರಾಪ್ಯ ಕೃಷ್ಣದ್ವೈಪಾಯನಃ ಪ್ರಭುಃ ।
ಕಿಂ ತಚ್ಛ್ರೇಯಸ್ಕರಮಿತಿ ಹೃದಿ ಕೃತ್ವಾ ಜಗಾಮ ಸಃ ॥ ೧೧ ॥

ನಂದೀಶ್ವರಸ್ಯ ಯಚ್ಛಿಷ್ಯೋ ಯೋಗಿನಾಮಗ್ರಣೀಃ ಸ್ವಯಂ ।
ಸನತ್ಕುಮಾರೋ ಭಗವಾನ್ ಯತ್ರಾಽಽಸ್ತೇ ಹಿಮವದ್ಗಿರೌ ॥ ೧೨ ॥

---

೮. ಲೋಕದಲ್ಲಿ ಗಂಗೆಗೆ ಸಮನಾದ ತೀರ್ಥವು ಬೇರೊಂದಿಲ್ಲ. ಅದರಲ್ಲೂ ಮಣಿಕರ್ಣಿಕೆಯೆಂಬ ಗಂಗಾತೀರ್ಥವಂತೂ, ಪರಮೇಶ್ವರನಿಗೆ ಪ್ರಿಯತಮವಾದದ್ದು.

೯. ಯಾವನು ಆ ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ ವಿಶ್ವೇಶ್ವರನ ದರ್ಶನಮಾಡುವನೋ ಅವನು ನಿಜವಾಗಿಯೂ ಮೋಕ್ಷವನ್ನು ಹೊಂದುವನು.

೧೦. ಹಿಂದೆ ಬ್ರಹ್ಮನ ಮಾನಸಪುತ್ರನಾದ ಸನತ್ಕುಮಾರನು ವ್ಯಾಸನಿಗೆ ಉಪದೇಶಿಸಿದ ಕಾಶೀ ವಿಶ್ವೇಶ್ವರಸ್ವಾಮಿಯ ಮಹಿಮೆಯನ್ನು ಈಗ ನಿನಗೆ ಹೇಳುವೆನು. ಕೇಳು.

೧೧. ಹಿಂದೆ ಕೃಷ್ಣದ್ವೈಪಾಯನನು ಭಯಂಕರವಾದ ಕಲಿಯುಗವು ಬಂದದ್ದನ್ನು ನೋಡಿ, ಈ ಯುಗದಲ್ಲಿ ಶ್ರೇಯಸ್ಕರವಾದ ಸ್ಥಳವಾವುದು ಎಂದು ಮನಸ್ಸಿನಲ್ಲಿಯೇ ಯೋಚಿಸುತ್ತಾ,

೧೨. ನಂದೀಶ್ವರನ ಶಿಷ್ಯನೂ, ಯೋಗಿವಂದ್ಯನೂ ಆದ ಸನತ್ಕುಮಾರ ಋಷಿಯು ವಾಸಿಸುತ್ತಿದ್ದ ಹಿಮಾಲಯಾಪರ್ವತದ ಭಾಗಕ್ಕೆ ಪ್ರಯಾಣಮಾಡಿದನು.

ನಾನಾದೇವಗಣಾಕೀರ್ಣೇ ಯಕ್ಷಗಂಧರ್ವಸೇವಿತೇ ।
ಸಿದ್ಧಚಾರಣಕೂಷ್ಮಾಂಡೈರಪ್ಸರೋಭಿಶ್ಚ ಸಂಕುಲೇ ॥ ೧೩ ॥

ಗಂಗಾ ಮಂದಾಕಿನೀ ಯತ್ರ ರಾಜತೇ ದುಃಖಹಾರಿಣೀ ।
ಶೋಭಿತಾ ಹೇಮಕಮಲೈಃ ಪುಷ್ಪೈರನ್ಯೈರ್ಮನೋಹರೈಃ ॥ ೧೪ ॥

ತಸ್ಯಾಶ್ರಮಮನುಪ್ರಾಪ್ಯ ಪಾರಾಶರ್ಯೋ ಮಹಾಮುನಿಃ ।
ಅಭಿವಾದ್ಯ ಯಥಾನ್ಯಾಯಂ ತಸ್ಯಾಗ್ರ ಉಪವಿಶ್ಯ ಚ ॥ ೧೫ ॥
ಕೃತಾಂಜಲಿಪುಟೋ ಭೂತ್ವಾ ವಾಕ್ಯಮೇತದುವಾಚ ಹ ॥ ೧೬ ॥

॥ ವ್ಯಾಸ ಉವಾಚ ॥

ಪ್ರಾಪ್ತಂ ಕಲಿಯುಗಂ ಘೋರಂ ಪುಣ್ಯಮಾರ್ಗಬಹಿಷ್ಕೃತಂ ।
ಪಾಷಂಡಾಚಾರನಿರತಂ ಮ್ಲೇಚ್ಛಾಂಧ್ರಜನಸಂಕುಲಂ ॥ ೧೭ ॥

---

೧೩. ಅಲ್ಲಿ ನಾನಾ ವಿಧವಾದ ದೇವತೆಗಳೂ, ಯಕ್ಷರೂ, ಗಂಧರ್ವರೂ ಅಪ್ಸರ ಸ್ತ್ರೀಯರೂ, ಸದಾ ಆ ಆಶ್ರಮವನ್ನು ಸೇವಿಸುತ್ತಲೇ ಇದ್ದರು.

೧೪. ಗಂಗಾನದಿಯು ಅಲ್ಲಿ ಸಮಸ್ತರ ದುಃಖವನ್ನೂ ನಾಶಮಾಡುತ್ತಾ ಹರಿಯುತ್ತಿತ್ತು. ಅದರಲ್ಲಿ ಚಿನ್ನದ ಕಮಲಗಳೂ, ಸುಗಂಧಮಯವಾದ ಪುಷ್ಪಗಳೂ ಕಂಗೊಳಿಸುತ್ತಿದ್ದುವು.

೧೫–೧೬. ಪರಾಶರಪುತ್ರನಾದ ವ್ಯಾಸಮಹರ್ಷಿಯು ಆ ಆಶ್ರಮಕ್ಕೆ ಹೋಗಿ ಅಲ್ಲಿ ಮಂಡಿಸಿದ್ದ ಸನತ್ಕುಮಾರಋಷಿಗೆ ಅಭಿವಾದನಮಾಡಿ ಶಿಷ್ಯನಂತೆ ಅವರ ಮುಂದೆ ಕೈಜೋಡಿಸಿಕೊಂಡು ಕುಳಿತು ಈ ಮಾತುಗಳನ್ನು ಹೇಳಿದನು.

೧೭. ಸನತ್ಕುಮಾರ ಋಷಿಯೇ, ಈಗ ಕಲಿಯುಗವು ಪ್ರಾರಂಭವಾಗಿದೆ. ಇದರಲ್ಲಿ ಜನರು ಪುಣ್ಯಮಾರ್ಗಗಳನ್ನು ತೊರೆದುಬಿಡುವರು, ನಾಸ್ತಿಕವಾದದಲ್ಲೇ ಮನಸ್ಸಿಡುವರು. ಎಲ್ಲೆಲ್ಲೂ ಮ್ಲೇಚ್ಛರು, ಆಂಧ್ರರು ಮೊದಲಾದ ಕ್ರೂರಿಗಳೇ ಆವರಿಸುವರು.

ಅಧಾರ್ಮಿಕಾಃ ಕ್ರೂರಸತ್ವಾ ಹ್ಯನಾಚಾರಾಲ್ಪಮೇಧಸಃ ।
ತಸ್ಮಿನ್ ಯುಗೇ ಭವಿಷ್ಯಂತಿ ಬ್ರಾಹ್ಮಣಾಃ ಶೂದ್ರಯಾಜಕಾಃ ॥ ೧೮ ॥

ಸ್ನಾನಂ ದೇವಾರ್ಚನಂ ದಾನಂ ಹೋಮಂ ಚ ಪಿತೃತರ್ಪಣಂ ।
ಸ್ವಾಧ್ಯಾಯಂ ನ ಕರಿಷ್ಯಂತಿ ಬ್ರಾಹ್ಮಣಾ ಹಿ ಕಲೌ ಯುಗೇ ॥ ೧೯ ॥

ನ ಪಠಂತಿ ತಥಾ ವೇದಾನ್ ಶ್ರೇಯಸೇ ಬ್ರಾಹ್ಮಣಾಧಮಾಃ ।
ಪ್ರತಿಗ್ರಹಾರ್ಥಂ ವೇದಾಂಶ್ಚ ಪಠಿಷ್ಯಂತಿ ಕಲೌ ಯುಗೇ ॥ ೨೦ ॥

ಪುರುಷೋತ್ತಮಮಾಶ್ರಿತ್ಯ ಶಿವನಿಂದಾರತಾ ದ್ವಿಜಾಃ ।
ಕಲೌ ಯುಗೇ ಭವಿಷ್ಯಂತಿ ತೇಷಾಂ ತ್ರಾತಾ ನ ಮಾಧವಃ ॥ ೨೧ ॥

ಸ್ವಾಂ ಸ್ವಾಂ ವೃತ್ತಿಂ ಪರಿತ್ಯಜ್ಯ ಪರವೃತ್ತ್ಯುಪಜೀವಕಾಃ ।
ಬ್ರಾಹ್ಮಣಾದ್ಯಾ ಭವಿಷ್ಯಂತಿ ಸಂಪ್ರಾಪ್ತೇ ತು ಕಲೌ ಯುಗೇ ॥ ೨೨ ॥

---

೧೮. ಈ ಯುಗದಲ್ಲಿ ಬ್ರಾಹ್ಮಣರು ಅಧರ್ಮಿಷ್ಠರಾಗುವರು. ಕ್ರೂರಿಗಳಾಗುವರು. ಅನಾಚಾರದಿಂದ ಅಲ್ಪಬುದ್ಧಿಯುಳ್ಳವರಾಗುವರು. ಅಲ್ಲದೆ ಶೂದ್ರರಿಂದ ಯಜ್ಞಯಾಗಾದಿಗಳನ್ನು ಮಾಡಿಸಿ ತನ್ಮೂಲಕ ದ್ರವ್ಯಸಂಪಾದನೆ ಮಾಡುವರು.

೧೯. ಕಲಿಯುಗದಲ್ಲಿ ಬ್ರಾಹ್ಮಣರು ಸ್ನಾನಸಂಧ್ಯಾವಂದನಾದಿಗಳನ್ನು ಬಿಡುವರು. ದಾನಹೋಮಗಳನ್ನು ದೂರಮಾಡುವರು. ಪಿತೃತರ್ಪಣ, ವೇದಾಧ್ಯಯನ ಇವುಗಳನ್ನು ಸಂಪೂರ್ಣವಾಗಿ ತ್ಯಜಿಸುವರು.

೨೦. ಅಲ್ಲದೆ ಕೆಲವು ನೀಚರಾದ ಬ್ರಾಹ್ಮಣರು ವೇದಗಳನ್ನು ಶ್ರೇಯಸ್ಸಿಗಾಗಿ ಅಭ್ಯಾಸಮಾಡದೆ, ದ್ರವ್ಯಾರ್ಜನೆಯ ಉದ್ದೇಶಕ್ಕಾಗಿಯೇ ವಿಕ್ರಯಮಾಡುವರು. ವೇದಗಳು ತಮ್ಮ ಶ್ರೇಯಸ್ಸಿಗಿವೆ ಎಂಬುದನ್ನು ಮರತೇಬಿಡುವರು.

೨೧. ಮತ್ತೆ ಕೆಲವು ಬ್ರಾಹ್ಮಣರು ವಿಷ್ಣುವನ್ನೇ ಕುಲದೇವರನ್ನಾಗಿ ಮಾಡಿಕೊಂಡು ಪರಮೇಶ್ವರನನ್ನು ನಿಂದಿಸುವರು. ಅಂಥವರನ್ನು ಕಾಪಾಡಲು ಸಾಕ್ಷಾದ್ವಿಷ್ಣುವಿಗೂ ಸಾಧ್ಯವಾಗಲಾರದು.

೨೨. ಕಲಿಯುಗದಲ್ಲಿ ಸರ್ವವರ್ಣದವರೂ ತಮ್ಮ ತಮ್ಮ ಧರ್ಮವನ್ನು ಬಿಟ್ಟು ಜೀವಿಕೆಗಾಗಿ ಪರಧರ್ಮವನ್ನು ಆಶ್ರಯಿಸುವರು. ಪರಧರ್ಮಾಶ್ರಯಣದಿಂದ ಸ್ವಧರ್ಮವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವರು.

ಏತಾನ್ ಪಾಪರತಾನ್ ದೃಷ್ಟ್ವಾ ರಾಜಾನಶ್ಚಾವಿಚಾರಕಾಃ ।
ಭವಿಷ್ಯಂತಿ ಕಲೌ ಪ್ರಾಪ್ತೇ ವೃಥಾ ಜಾತ್ಯಭಿಮಾನಿನಃ ॥ ೨೩ ॥

ಉಚ್ಚಾಸನಗತಾಶ್ಶೂದ್ರಾಃ ದೃಷ್ಟ್ವಾ ಚ ಬ್ರಾಹ್ಮಣಾಂ ಸ್ತದಾ ।
ನ ಚಲಂತ್ಯಲ್ಪಮತಯಃ ಸಂಪ್ರಾಪ್ತೇತು ಕಲೌ ಯುಗೇ ॥ ೨೪ ॥

ಕಾಷಾಯಿಣಶ್ಚ ನಿರ್ಗ್ರಂಥು ನಗ್ನಾಃ ಕಾಪಾಲಿಕಾಸ್ತಥಾ ।
ಚೌದ್ಧಾ ವೈಶೇಷಿಕಾ ಜೈನಾ ಭವಿಷ್ಯಂತಿ ಕಲೌ ಯುಗೇ ॥ ೨೫ ॥

ತಪೋಯಜ್ಞಫಲಾನಾಂತು ವಿಕ್ರೇತಾರೋ ದ್ವಿಜಾಧಮಾಃ ।
ಯತಯಶ್ಚ ಭವಿಷ್ಯಂತಿ ಶತಶೋಥ ಸಹಸ್ರಶಃ ॥ ೨೬ ॥

ವಿನಿಂದಂತಿ ಮಹಾದೇವಂ ಸಂಸಾರಾನ್ಮೋಚಕಂ ಪರಂ ।
ತದ್ಭಕ್ತಾಂಶ್ಚ ಮಹಾತ್ಮನೋ ಬ್ರಾಹ್ಮಣಾಂಶ್ಚ ಕಲೌ ಯುಗೇ ॥ ೨೭ ॥

---

೨೩. ಇಂತಹವರನ್ನು ರಾಜನೂ ಸಹ ಶಿಕ್ಷಿಸದೆ ಉದಾಸೀನನಾಗಿ ಕುಳಿತುಕೊಳ್ಳುವನು. ಪ್ರಜೆಗಳು ಮಾತ್ರ ವ್ಯರ್ಥವಾದ ಜಾತ್ಯಭಿಮಾನದಿಂದ ಮೆರೆಯುಲಾರಂಭಿಸುವರು.

೨೪. ಶೂದ್ರಾದಿಗಳು ಉನ್ನತಪದವಿಯನ್ನು ಏರುವರು. ಬ್ರಾಹ್ಮಣರನ್ನು ಅಲ್ಲಗಳೆಯುವರು. ಅವರಿಗೆ ಸ್ವಲ್ಪವೂ ಮರ್ಯಾದೆಕೊಡರು. ತಾವೂ ಸಹ ಅಲ್ಪ ಬುದ್ಧಿಯುಳ್ಳವರಾಗಿ ಯಾವ ಕಾರ್ಯಗಳನ್ನೂ ಮಾಡಲಾರರು. ಇದು ಕಲಿಯುಗದಲ್ಲಿ ನಡೆಯುವ ಬದಲಾವಣೆ.

೨೫. ಅಶಾಸ್ತ್ರೀಯವಾಗಿ ಕಾಷಾಯವಸ್ತ್ರವನ್ನು ಧರಿಸಿದ ಸಂನ್ಯಾಸಿಗಳೂ ದಿಗಂಬರರಾದ ಕಾಪಾಲಿಕರೂ, ಬುದ್ಧನ ಅನುಯಾಯಿಗಳೂ, ಜಿನಭಕ್ತರೂ, ವೈಶೇಷಿಕ ಮತದವರೂ ಕಲಿಯುಗದಲ್ಲಿ ಪ್ರಬಲಿಸುವರು.

೨೬. ತಾವು ಮಾಡಿದ ತಪಸ್ಸು, ಯಜ್ಞ, ಈ ಸತ್ಕರ್ಮಗಳನ್ನು ಅನೇಕ ಬ್ರಾಹ್ಮಣರೂ ಸಂನ್ಯಾಸಿಗಳೂ ಮಾರಿಕೊಂಡು ಜೀವಿಸುವವರಾಗುವರು. ಇಂತಹವರ ಸಂಖ್ಯೆಯೇ ಅಧಿಕವಾಗುವುದು.

೨೭. ಸಂಸಾರದುಃಖಗಳನ್ನು ನಿವಾರಿಸುವ ಪರಮೇಶ್ವರನನ್ನೂ, ಅವನ ಭಕ್ತರಾದ ಮಹಾತ್ಮರನ್ನೂ, ಯೋಗ್ಯರಾದ ಬ್ರಾಹ್ಮಣರನ್ನೂ ಸಹ ನಿಂದಿಸುವ ಜನರು ಕಲಿಯುಗದಲ್ಲಿ ಹೇರಳವಾಗಿ ತೋರುವರು.

ತಾಡಯಂತಿ ದುರಾತ್ಮಾನೋ ಬ್ರಾಹ್ಮಣಾನ್ ರಾಜಸೇವಕಾಃ ।
ನ ನಿವಾರಯತೇ ರಾಜಾ ತಾನ್ದೃಷ್ಟ್ವಾಪಿ ಕಲೌ ಯುಗೇ　　॥ ೨೮ ॥

ಏವಂ ಘೋರೇ ಕಲಿಯುಗೇ ಕಿಂ ತಚ್ಛ್ರೇಯಸ್ಕರಂ ದ್ವಿಜ ।
ಬ್ರೂಹಿ ತದ್ಭಗವನ್ ಮಹ್ಯಂ ಸಂಸಾರಾನ್ಮೋಚಕಂ ಪರಂ　　॥ ೨೯ ॥

ಇತಿ ಶ್ರೀ ಬ್ರಹ್ಮಪುರಾಣೋಪ ಪುರಾಣೇ ಶ್ರೀ ಸೌರೇ ಭಾನುಮನುಸಂವಾದೇ ವಾರಾಣಸೀಮಹಿಮಕಲಿಯುಗವರ್ಣನಂ ನಾಮ ಚತುರ್ಥೋಽಧ್ಯಾಯಃ

---

೨೮. ಕಲಿಯುಗದಲ್ಲಿ ದುಷ್ಟರಾದ ರಾಜಾಧಿಕಾರಿಗಳು ಬ್ರಾಹ್ಮಣರನ್ನು ಬಹುವಾಗಿ ಹಿಂಸಿಸುವರು. ಅಂಥ ಹಿಂಸಕರನ್ನು ರಾಜನು ಕಣ್ಣಾರ ಕಂಡರೂ ಅವರನ್ನು ಶಿಕ್ಷಿಸಲು ತೊಡಗುವುದಿಲ್ಲ.

೨೯. ಸನತ್ಕುಮಾರ ಋಷಿಯೇ, ಇಂತಹ ಭಯಂಕರವಾದ ಕಲಿಯುಗದಲ್ಲಿ ಮನುಷ್ಯರಿಗೆ ಭವಬಂಧನಗಳನ್ನು ನಿವಾರಿಸಿ, ಮೋಕ್ಷವನ್ನು ದೊರಕಿಸುವ ಕಾರ್ಯವು ಯಾವುದಿದೆ? ಎಂಬುದನ್ನು ದಯೆಯಿಂದ ನನಗೆ ತಿಳಿಸು ಎಂದು ವ್ಯಾಸಮಹರ್ಷಿಯು ವಿನಯದಿಂದ ಕೇಳಿಕೊಂಡನು.

ಇಲ್ಲಿಗೆ ಬ್ರಹ್ಮಪುರಾಣೋಪ ಪುರಾಣವಾದ ಸೌರದಲ್ಲಿ ಭಾನುಮನುಸಂವಾದ ರೂಪದಲ್ಲಿ ಕಾಶೀಪುರದ ಮಹಿಮೆ, ಮತ್ತು ಕಲಿಯುಗದ ವರ್ಣನೆಯೆಂಬ ನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ಪಂಚಮೋಽಧ್ಯಾಯಃ ॥

॥ ಸನತ್ಕುಮಾರ ಉವಾಚ ॥

ಗಚ್ಛ ವಾರಾಣಸೀಂ ವ್ಯಾಸ ಯತ್ರ ವಿಶ್ವೇಶ್ವರಃ ಶಿವಃ ।
ನ ತತ್ರ ಯುಗಧರ್ಮೋಽಸ್ತಿ ನೈವ ಲಗ್ನಾ ವಸುಂಧರಾ ॥ ೧ ॥

ವಿಶ್ವೇಶ್ವರಸ್ಯ ಯಲ್ಲಿಂಗಂ ಜ್ಯೋತಿರ್ಲಿಂಗಂ ಯದುಚ್ಯತೇ ।
ಯಸ್ಮಿನ್ ದೃಷ್ಟೇ ಕ್ಷಣಾಜ್ಜಂತುಃ ಸಂಸಾರಂ ನ ಪುನರ್ವಿಶೇತ್ ॥ ೨ ॥

ಗತ್ವಾ ಪಶ್ಯ ಪರಂ ಲಿಂಗಂ ತತ್ರ ಸತ್ಯವತೀಸುತ ।
ಪ್ರಾಪ್ಸ್ಯಸೇ ಪರಮಾಂ ಮುಕ್ತಿಂ ದೇವೈರಪಿ ಸುದುರ್ಲಭಾಂ ॥ ೩ ॥

ಐದನೆಯ ಅಧ್ಯಾಯವು.

೧. ಸನತ್ಕುಮಾರನು ವ್ಯಾಸಮಹರ್ಷಿಗೆ ಬೋಧಿಸುತ್ತಾ "ಎಲೈ ವ್ಯಾಸಮಹರ್ಷಿಯೇ, ನೀನು ಈಗಲೇ ಕಾಶೀಕ್ಷೇತ್ರಕ್ಕೆ ಹೋಗು. ಅಲ್ಲಿ ವಿಶ್ವೇಶ್ವರಸ್ವಾಮಿಯು ನೆಲಸಿರುವನು. ಕಲಿಯುಗದ ಯಾವ ಅಧರ್ಮಗಳೂ ಅಲ್ಲಿ ತೋರುವುದಿಲ್ಲ. ಆ ಕಾಶೀಕ್ಷೇತ್ರವು ಮಾತ್ರ ಪರಮೇಶ್ವರನಿಗಲ್ಲದೆ ಯಾರಿಗೂ ಅಧೀನವಾಗಿರುವುದಿಲ್ಲ.

೨. ಕಾಶಿಯಲ್ಲಿರುವ ವಿಶ್ವೇಶ್ವರನ ಲಿಂಗವು ಜ್ಯೋತಿರ್ಲಿಂಗವು. ಅದು ಕೇವಲ ತೇಜೋಮಯವಾದದ್ದು. ಆ ಲಿಂಗದ ದರ್ಶನದಿಂದಲೇ ಸಂಸಾರಿಯಾದ ಮನುಷ್ಯನು ಕ್ಷಣಕಾಲದಲ್ಲಿ ಮೋಕ್ಷವನ್ನು ಪಡೆಯುವನು.

೩. ಸತ್ಯವತೀ ತನುಜನಾದ ವ್ಯಾಸನೇ, ಅಲ್ಲಿಗೆ ಹೋಗಿ ನೀನು ಶಿವದರ್ಶನ ಮಾಡಿದರೆ ದೇವತೆಗಳಿಗೂ ಸುದುರ್ಲಭವಾದ ಮೋಕ್ಷವನ್ನು ಪಡೆಯುವೆ.

ಸ್ನಾತ್ವಾ ಗಂಗಾಜಲೇ ಪುಣ್ಯೇ ಪಶ್ಯ ವಿಶ್ವೇಶ್ವರಂ ಪರಂ ।
ಸ ದಾಸ್ಯತಿ ಪರಂ ಜ್ಞಾನಂ ಯೇನ ಮುಕ್ತೋ ಭವಿಷ್ಯತಿ ॥ ೪ ॥

ದೃಷ್ಟ್ವಾ ವಿಶ್ವೇಶ್ವರಂ ದೇವಂ ಯಾವತ್ತಿಷ್ಠತಿ ತತ್ಕ್ಷಣಾತ್ ।
ಆಗಮಿಷ್ಯಂತಿ ಮುನಯ ಸ್ತ್ವಾಂ ದ್ರಷ್ಟುಂ ಸರ್ವ ಏವ ತೇ ॥ ೫ ॥

ವಿಶ್ವೇಶ್ವರಸ್ಯ ಮಾಹಾತ್ಮ್ಯಂ ಪ್ರಕ್ಷ್ಯಂತಿ ತ್ವಾಂ ಮಹಾಮುನೇ ।
ಬ್ರೂಹಿ ಮದ್ವಚನಾತ್ತೇಷಾಂ ಜ್ಞಾನಂ ಮಾಹೇಶ್ವರಂ ಪರಂ ॥ ೬ ॥

ಏವಂ ಸತ್ಯವತೀಸೂನು ಸ್ತನ್ಮಾಹಾತ್ಮ್ಯಮಶೇಷತಃ ।
ಸನತ್ಕುಮಾರಾತ್ ಸ್ವಗುರೋಃ ಶ್ರುತ್ವಾ ಮಾಹೇಶ್ವರಾಗ್ರಣೀಃ ॥ ೭ ॥

ಪ್ರಣಿಪತ್ಯ ಗುರುಂ ಭಕ್ತ್ಯಾ ರುದ್ರಂ ಬ್ರಹ್ಮಾದಿಸೇವಿತಂ ।
ಸ ಶಿಷ್ಯಃ ಪ್ರಯಯೌ ಶೀಘ್ರಂ ವ್ಯಾಸೋ ವಾರಾಣಸೀಂ ಪ್ರತಿ ॥ ೮ ॥

---

೪. ಗಂಗಾನದಿಯಲ್ಲಿ ಸ್ನಾನಮಾಡು. ಮೋಕ್ಷಪ್ರದಾಯಕನಾದ ವಿಶ್ವೇಶ್ವರನ ದರ್ಶನಮಾಡು. ಅದರಿಂದ ನಿನಗೆ ಚಿತ್ತಶುದ್ಧಿಯೂ ಶಿವಭಕ್ತಿಯೂ ತನ್ಮೂಲಕ ಮೋಕ್ಷವೂ ಲಭಿಸುವುದು.

೫. ನೀನು ಹಾಗೆ ಕಾಶಿಯಲ್ಲಿ ವಿಶ್ವೇಶ್ವರ ದರ್ಶನಕ್ಕಾಗಿ ನಿಂತೆಯಾದರೆ ಸಮಸ್ತ ಋಷಿಗಳೂ ಶಿವಾನುಗ್ರಹಕ್ಕೆ ಪಾತ್ರನಾದ ನಿನ್ನನ್ನು ನೋಡಲು ಅಲ್ಲಿಗೆ ಬರುವರು.

೬. ಎಲೈ ಮಹರ್ಷಿಯೇ ಆಗ ಅವರೆಲ್ಲರೂ ಪರಮೇಶ್ವರನ ವಿಷಯಕವಾದ ಜ್ಞಾನಾರ್ಥಿಗಳಾಗಿ ನಿನ್ನಲ್ಲಿಗೆ ಬರುವರು. ನೀನು ವಿಶ್ವೇಶ್ವರನ ಮಹಿಮೆಯನ್ನು ಸಮಸ್ತ ಋಷಿಗಳಿಗೂ ವಿವರವಾಗಿ ತಿಳಿಸು. ಅವರಿಗೆ ಮಹೇಶ್ವರನ ಮಹಿಮೆಯು ಸರಿಯಾಗಿ ತಿಳಿಯುವಂತಾಗಲಿ" ಎಂದು ಸನತ್ಕುಮಾರನು ಶಿವಮಹಿಮೆಯೆಲ್ಲವನ್ನೂ ವ್ಯಾಸರಿಗೆ ವಿವರಿಸಿದನು.

೭. ಹೀಗೆ ವ್ಯಾಸಮಹರ್ಷಿಯು, ವಿಶ್ವೇಶ್ವರ ಮಹಿಮೆಯನ್ನು ತನ್ನ ಪೂಜ್ಯ ಗುರುವಾದ ಸನತ್ಕುಮಾರ ಮಹರ್ಷಿಯಿಂದ ಸಂಪೂರ್ಣವಾಗಿ ತಿಳಿದುಕೊಂಡನು.

೮. ಅನಂತರ ವ್ಯಾಸಮಹರ್ಷಿಯು ಗುರುವಾದ ಸನತ್ಕುಮಾರನಿಗೆ ವಂದಿಸಿ, ಬ್ರಹ್ಮಾದಿಗಳಿಗೂ ಪೂಜ್ಯನಾದ ಈಶ್ವರನನ್ನು ಧ್ಯಾನಿಸುತ್ತಾ, ಶಿಷ್ಯಸಮೇತನಾಗಿ ಒಡನೆಯೇ ಕಾಶೀಕ್ಷೇತ್ರಕ್ಕೆ ಬಂದನು" ಎಂದು ಸೂರ್ಯದೇವನು ಹೇಳಲು

॥ ಮನುರುವಾಚ ॥

ಗತ್ವಾ ವಾರಾಣಸೀಂ ವ್ಯಾಸಃ ಸಿದ್ಧರ್ಷಿ ಮುನಿಸೇವಿತಾಂ ।
ಅಕರೋತ್ಕಿಂ ತದಾಚಕ್ಷ್ವ ಭಗವನ್ವಿಶ್ವಪೂಜಿತ ॥ ೯ ॥

॥ ಭಾನುರುವಾಚ ॥

ಸಂಪ್ರಾಪ್ಯ ಕಾಶೀಂ ಧರ್ಮಾತ್ಮಾ ಕೃಷ್ಣದ್ವೈಪಾಯನೋ ಮುನಿಃ ।
ಸ್ನಾತ್ವಾ ಯಥಾವಜ್ಜಾಹ್ನವ್ಯಾಂ ತರ್ಪಯಿತ್ವಾ ಸುರಾನ್ ಪಿತೄನ್ ॥ ೧೦ ॥

ಯಯೌ ವಿಶ್ವೇಶ್ವರಂ ದ್ರಷ್ಟುಂ ಜ್ಯೋತಿರ್ಲಿಂಗಮನಾಮಯಂ ।
ಸಂಪೂಜ್ಯ ಸರ್ವಭಾವೇನ ದಂಡವತ್ಪ್ರಣಿಪತ್ಯ ಚ ॥ ೧೧ ॥

ದೇವಸ್ಯ ದಕ್ಷಿಣಾಮೂರ್ತಾವುಪವಿಶ್ಯ ಮಹಾಮುನಿಃ ।
ಪಶ್ಯನ್ವಿಶ್ವೇಶ್ವರಂ ಲಿಂಗಂ ಜಪನ್ ವೈ ಶತರುದ್ರಿಯಂ ॥ ೧೨॥

---

೯. ಮನುವು ಪುನಃ ಸೂರ್ಯನನ್ನು ಕುರಿತು "ಲೋಕಪೂಜ್ಯನಾದ ಭಾನುವೇ ಅಲ್ಲಿಂದ ಮುಂದೆ ವ್ಯಾಸಮಹರ್ಷಿಯು ಅಂಥ ಪವಿತ್ರವಾದ ಕಾಶೀಕ್ಷೇತ್ರದಲ್ಲಿ ಮಾಡಿದುದೇನು? ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳಲು,

೧೦. ಸೂರ್ಯದೇವನು ತನ್ನ ಮಗನೊಡನೆ ಹೀಗೆ ಹೇಳಿದನು. "ಅಯ್ಯಾ ಮನುವೇ! ವ್ಯಾಸಮಹರ್ಷಿಯು ಅಲ್ಲಿಂದ ಹೊರಟು ಕಾಶಿಗೆ ಬಂದು ಮೊದಲು ವಿಧಿವತ್ತಾಗಿ ಗಂಗಾನದಿಯಲ್ಲಿ ಸ್ನಾನಮಾಡಿ, ದೇವತೆಗಳನ್ನೂ ಪಿತೃಗಳನ್ನೂ ತರ್ಪಣಾದಿಗಳಿಂದ ತೃಪ್ತಿಪಡಿಸಿದನು.

೧೧. ಅನಂತರ ಜ್ಯೋತಿರ್ಲಿಂಗವಾದ ವಿಶ್ವೇಶ್ವರನ ದರ್ಶನಕ್ಕಾಗಿ ಹೋಗಿ, ಅಲ್ಲಿ ಅನನ್ಯಭಕ್ತಿಭಾವದಿಂದ ವಿಶ್ವೇಶ್ವರಸ್ವಾಮಿಗೆ ಸಾಷ್ಟಾಂಗಪ್ರಣಾಮ ಮಾಡಿದನು.

೧೨. ದಕ್ಷಿಣಾಮೂರ್ತಿಸ್ವಾಮಿಯ ಸನ್ನಿಧಿಯಲ್ಲಿ ಕುಳಿತುಕೊಂಡು ವ್ಯಾಸಮಹರ್ಷಿಯು ವಿಶ್ವೇಶ್ವರ ಲಿಂಗವನ್ನು ಧ್ಯಾನಿಸುತ್ತಾ ಶತರುದ್ರಮಂತ್ರವನ್ನು ಜಪಿಸಲಾರಂಭಿಸಿದನು.

ಕ್ಷಣಾಲ್ಲಿಂಗಾತ್ಪರಂ ಜ್ಯೋತಿ ರಾವಿರ್ಭೂತಂ ನಿರಂಜನಂ ।
ಸೂಕ್ಷ್ಮಾತ್ಸೂಕ್ಷ್ಮಂ ಚ ಪರಮಮಾನಂದಂ ತಮಸಃ ಪರಂ ॥ ೧೩ ॥

ಆದಿಮಧ್ಯಾಂತರಹಿತಂ ಸೂರ್ಯಕೋಟಿಸಮಪ್ರಭಂ ।
ಯತ್ತನ್ಮಾಹೇಶ್ವರಂ ಜ್ಯೋತಿರ್ವೇದಾಂತೇಷು ಪ್ರತಿಷ್ಠಿತಂ ॥ ೧೪ ॥

ದರ್ಶನಾತ್ತಸ್ಯ ಚ ಮುನೇಃ ಪಾರಾಶರ್ಯಸ್ಯ ಧೀಮತಃ ।
ದಿವ್ಯಂ ಮಾಹೇಶ್ವರಂ ಜ್ಞಾನ ಮುದಭೂತಂ ಕೇವಲಂ ಶಿವಂ ॥ ೧೫ ॥

ಮೇನೇ ಕೃತಾರ್ಥಮಾತ್ಮಾನಂ ದುಃಖತ್ರಯವಿವರ್ಜಿತಂ ।
ಅದ್ವಯಂ ನಿರ್ಗುಣಂ ಶಾಂತಂ ಜೀವನ್ಮುಕ್ತಸ್ತದಾಮುನಿಃ ॥ ೧೬ ।
ಅಹೋ ವಿಶ್ವೇಶ್ವರೋ ದೇವಃ ಕಥಂ ಕೈರ್ವಾ ನ ಸೇವ್ಯತೇ ।
ಯಸ್ಮಿನ್ ದೃಷ್ಟೇ ಕ್ಷಣಾಜ್ಞಾನಮುದಿತಂ ಮಮ ನಿರ್ಮಲಂ ॥ ೧೭ ॥

---

೧೩. ಕ್ಷಣಕಾಲದಲ್ಲಿಯೇ ಆ ವಿಶ್ವೇಶ್ವರನ ಜ್ಯೋತಿರ್ಲಿಂಗದಿಂದ ಒಂದು ವಿಧವಾದ ತೇಜಸ್ಸು ಉದ್ಬುದ್ಧವಾಯಿತು. ಆ ತೇಜಸ್ಸು ಅತಿಸೂಕ್ಷ್ಮವಾದುದಾಗಿಯೂ ಅಜ್ಞಾನ ನಿವಾರಕವಾಗಿಯೂ. ಆನಂದದಾಯಕವಾಗಿಯೂ ತೋರಿಬರುತಿತ್ತು.

೧೪. ಆ ತೇಜಸ್ಸಿಗೆ ಆದಿ, ಮಧ್ಯ, ಅಂತ್ಯಗಳಿರಲಿಲ್ಲ. ಸೂರ್ಯಕೋಟಿಗಳ ಪ್ರಭೆಗೆ ಸಮಾನವಾಗಿತ್ತು. ವೇದಾಂತಗಳಲ್ಲಿ ವರ್ಣಿತವಾಗಿರುವ ಶೈವತೇಜಸ್ಸಿಗೆ ಸದೃಶವಾಗಿತ್ತು.

೧೫. ಆ ತೇಜಸ್ಸಿನ ದರ್ಶನಮಾತ್ರದಿಂದಲೇ, ಆ ವ್ಯಾಸಮಹರ್ಷಿಗೆ ದಿವ್ಯವಾದ ಮತ್ತು ಶೈವಸಂಬಂಧವಾದ ಜ್ಞಾನೋದಯವಾಯಿತು.

೧೬. ಆಗಲೇ ವ್ಯಾಸಮಹರ್ಷಿಗೆ ಆತ್ಮಸ್ವರೂಪದ ಅರಿವು ಸಂಪೂರ್ಣವಾಗಿ ಲಭಿಸಿತು. ಆತ್ಮನಿಗೆ ಸುಖದುಃಖಾದಿಗಳಿಲ್ಲ. ಆತ್ಮವಿಕಾರವೇ ಪ್ರಪಂಚ, ನಿರ್ಗುಣ ಸ್ವರೂಪವೇ ಆತ್ಮನ ಮುಖ್ಯ ಲಕ್ಷಣ. ದ್ವಿತೀಯ ವಸ್ತುರಹಿತನಾದವನು ಆತ್ಮನು ಎಂಬ ಆತ್ಮಜ್ಞಾನದಿಂದ ಮಹರ್ಷಿಯು ಆಗಲೇ ಮೋಕ್ಷಾನಂದವನ್ನು ಅನುಭವಿಸಿದನು.

೧೭. ಆವಿಧದ ದಿವ್ಯಜ್ಞಾನವು ತನಗೆ ಉಂಟಾದುದಕ್ಕಾಗಿ ವ್ಯಾಸಮಹರ್ಷಿಯು, “ಆಹಾ, ಇದೇನಾಶ್ಚರ್ಯ. ಈ ವಿಶ್ವೇಶ್ವರ ದರ್ಶನದಿಂದಲೇ ನನಗೆ ಇಂತಹ ದಿವ್ಯಜ್ಞಾನವು ಆವಿರ್ಭವಿಸಿರುವಾಗ, ಇಂಥ ಮೂರ್ತಿಯನ್ನು ಸರ್ವರೂ ಏಕೆ ಸೇವಿಸಬಾರದು ?

ನಮೋ ಭಗವತೇ ತುಭ್ಯಂ ವಿಶ್ವನಾಥಾಯ ಶೂಲಿನೇ ।
ಪಿನಾಕಿನೇ ಜಗತ್ಕರ್ತ್ರೇ ವಿಶ್ವಮಾಯಾಪ್ರವರ್ತಿನೇ ॥ ೧೮ ॥

ದುರ್ವಿಜ್ಞೇಯಾಪ್ರಮೇಯಾಯ ಪರಮಾನಂದರೂಪಿಣೇ ।
ಭಕ್ತಿಪ್ರಿಯಾಯ ಸೂಕ್ಷ್ಮಾಯ ಪಾರ್ವತೀಶಾಯ ತೇ ನಮಃ ॥ ೧೯ ॥

ನಮೋ ಜಗತ್ಪ್ರತಿಷ್ಠಾಯ ಜಗಜ್ಜನನಹೇತವೇ ।
ಸಂಹರ್ತ್ರೇ ಋಗ್ಯಜುಸ್ಸಾಮಮೂರ್ತಯೇ ತತ್ಪ್ರವರ್ತಿನೇ ॥ ೨೦ ॥

ಜಾನಾತಿ ಕಸ್ತ್ವಾಂ ವಿಶ್ವೇಶ ತತ್ತ್ವತೋ ಮಾದೃಶೋ ಜನಃ ।
ವೇದಾ ಅಪಿ ನ ಜಾನಂತಿ ಸಾಂಗೋಪನಿಷದಕ್ರಮಾಃ ॥ ೨೧ ॥

॥ ಭಾನುರುವಾಚ ॥

ಅಥ ತಸ್ಮಿನ್ ಮಹಾದೇವೇ ಪರಂ ಜ್ಯೋತಿಷಿ ವಿಶ್ವಭುಕ್ ।
ಶೂಲಪಾಣಿರಮೇಯಾತ್ಮಾ ಪ್ರಾದುರಾಸೀದ್ವೃಷಧ್ವಜಃ ॥ ೨೨ ॥

೧೮. ಓ ಪರಮೇಶ್ವರನೇ, ಪಿನಾಕಧಾರಿಯೇ, ಮಾಯಾಸಂಬಂಧದಿಂದ ಪ್ರಪಂಚರೂಪವಾಗಿ ತೋರತಕ್ಕವನೇ ನಿನಗೆ ನಮಸ್ಕಾರವು.

೧೯. ಓ ಜಗತ್ಪತಿಯೇ, ನೀನು ಎಲ್ಲರಿಗೂ ಸುಲಭಗೋಚರನಲ್ಲ. ಊಹೆಯಿಂದ ನಿನ್ನ ಸ್ವರೂಪವನ್ನು ಅಳೆಯಲು ಸಾಧ್ಯವಿಲ್ಲ. ನೀನು ಆನಂದರೂಪಿಯು, ಭಕ್ತಿಪ್ರಿಯನು ಸೂಕ್ಷ್ಮರೂಪಿಯು. ಪಾರ್ವತೀಪತಿಯು.

೨೦. ಜಗತ್ತನ್ನು ಸೃಷ್ಟಿಸುವವನೂ ನೀನೇ. ಋಗ್ಯಜುಸ್ಸಾಮವೇದಗಳಿಗೆ ಮೂರ್ತಿಮತ್ತಾಗಿ ಕಾಣುವ ದೇವದೇವನೂ ನೀನೇ.

೨೧. ವಿಶ್ವೇಶ್ವರಸ್ವಾಮಿಯೇ! ನಿಜವಾಗಿಯೂ ನನ್ನಂತಹ ಮೂಢರು ನಿನ್ನನ್ನು ತಿಳಿಯುವುದು ಹೇಗೆ? ಏಕೆಂದರೆ ಅಂಗೋಪಾಂಗಗಳಿಂದ ಕೂಡಿದ ಉಪನಿಷತ್ತುಗಳೂ, ವೇದಗಳೂ ಸಹ ನಿನ್ನನ್ನು ತಿಳಿಯಲಾರದೆ, ತೊಳಲುತ್ತಿವೆ.

೨೨. ಹೀಗೆಂದು ವೇದವ್ಯಾಸನು ಭಗವಂತನಾದ ಮತ್ತು ಜ್ಯೋತೀರೂಪನಾದ ಮಹಾದೇವನನ್ನು ಭಕ್ತಿಯಿಂದ ಧ್ಯಾನಮಾಡಲು, ಶೂಲಪಾಣಿಯಾದ ಪರಮೇಶ್ವರನು ವೃಷಭಾರೂಢನಾಗಿ ವೇದವ್ಯಾಸನಿಗೆ ಪ್ರತ್ಯಕ್ಷನಾದನು.

ತತಸ್ತಮಬ್ರವೀದ್ವಾಕ್ಯಂ ಕಾರುಣ್ಯಾಚ್ಛುಭಯಾ ಗಿರಾ ।
ವರಂ ವರಯ ದಾಸ್ಯಾಮಿ ಯತ್ತೇ ಮನಸಿ ರೋಚತೇ ॥ ೨೩ ॥

॥ ವ್ಯಾಸಉವಾಚ ॥

ಭಗವನ್ ಕೃತಕೃತ್ಯೋಽಸ್ಮಿ ದರ್ಶನಾತ್ತವ ಶಂಕರ ।
ಜಾತಂ ತ್ವದ್ವಿಷಯಂ ಜ್ಞಾನಂ ದೇವಾನಾಮಪಿ ದುರ್ಲಭಂ ॥ ೨೪ ॥

ಭಕ್ತಿಂ ಪರೇ ಭಗವತಿ ತ್ವಯ್ಯೇವಾವ್ಯಭಿಚಾರಿಣೀಂ।
ದೇಹಿ ಮೇ ದೇವದೇವೇಶ ನಾನ್ಯದಿಷ್ಟಂ ವರಂ ಮಮ ॥ ೨೫ ॥

॥ ಭಾನುರುವಾಚ ॥

ಏವಮಸ್ತ್ವಿತಿ ದೇವೇಶೋ ವ್ಯಾಸಾಯಾಮಿತತೇಜಸೇ ।
ವರಂ ದತ್ವಾ ಮುನೀಂದ್ರಾಯ ಕ್ಷಣಾದಂತರ್ಹಿತೋಽಭವತ್ ॥ ೨೬ ॥

---

೨೩. ಅಲ್ಲದೆ ಶಿಷ್ಯನಾದ ವ್ಯಾಸನನ್ನು ಕುರಿತು, ದಯಾಪೂರಿತವಾದ ಮಾತುಗಳಿಂದ, ಅವನ ಮನಸ್ಸಿನ ಕೋರಿಕೆಗಳನ್ನು ನೆರವೇರಿಸುವಂತೆ ಭರವಸೆಕೊಟ್ಟನು

೨೪. ಪರಮೇಶ್ವರನ ಆಕಾರವನ್ನು ಕಂಡು, ದಯಾವಾಣಿಯನ್ನು ಕೇಳಿದ ವ್ಯಾಸಮಹರ್ಷಿಯು, "ಸ್ವಾಮಿಯೇ ಇಂದು ನಾನು ಧನ್ಯನಾದೆನು. ನಿನ್ನ ಮಹಿಮೆಯನ್ನೂ, ನಿನ್ನನ್ನು ಧ್ಯಾನಮಾಡುವ ಕ್ರಮವನ್ನೂ ನಾನು ಚೆನ್ನಾಗಿ ಅರಿತಿರುವೆನು. ದೇವತೆಗಳಿಗೂ ಲಭಿಸದ ದಿವ್ಯಜ್ಞಾನವು ನಿನ್ನ ದರ್ಶನದಿಂದ ನನಗೆ ಈಗ ಪ್ರಾಪ್ತವಾಗಿರುವುದು.

೨೫. ಈಗ ಯಾವಾಗಲೂ ನಿನ್ನನ್ನೇ ಧ್ಯಾನಮಾಡುವಂತಹ ನಿರ್ದುಷ್ಟವಾದ ಮತ್ತು ಅನ್ಯಾದೃಶವಾದ ಭಕ್ತಿಯು ನನಗೆ ಉಂಟಾಗಲಿ. ದೇವದೇವನೆ! ಇದಕ್ಕಿಂತಲೂ ಬೇರೆ ಯಾವ ವರವು ನನಗೆ ಮತ್ತೇನಿರುವುದು ?

೨೬. ಎಂದು ಭಕ್ತಿಯಿಂದ ಕೇಳಿಕೊಂಡ ವ್ಯಾಸನಿಗೆ ಅದೇ ರೀತಿ ವರಗಳನ್ನಿತ್ತು ಪರಮೇಶ್ವರನು ಅಲ್ಲಿಯೇ ಅಂತರ್ಧಾನನಾದನು ''

ತಸ್ಮಾದ್ವ್ಯಾಸಾತ್ಪರೋ ನಾನ್ಯಃ ಶಿವಭಕ್ತೋ ಜಗತ್ತ್ರಯೇ ।
ಕೃಷ್ಣೋ ವಾ ದೇವಕೀಸೂನುರರ್ಜುನೋ ವಾ ಮಹಾಮತಿಃ ॥ ೨೭ ॥

ಏವಂ ಹರಾಲ್ಲಬ್ಧವರಃ ಕೃಷ್ಣದ್ವೈಪಾಯನಃ ಪ್ರಭುಃ ।
ತತ್ರ ಯಾನಿ ಚ ಲಿಂಗಾನಿ ತಾನಿ ದ್ರಷ್ಟುಂ ಯಯೌ ಮುನಿಃ ॥ ೨೮ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀಸೌರೇ ಭಾನುಮನು
ಸಂವಾದೇ ಮಹಾದೇವವರಪ್ರದಾನಂ ನಾಮ
ಪಂಚಮೋऽಧ್ಯಾಯಃ ॥

---

೨೭. ಆದ್ದರಿಂದ, ಎಲೈ ಮನುವೇ! ಪರಮೇಶ್ವರನ ಭಕ್ತರಾಗಿ ಮೂರು ಲೋಕಗಳಲ್ಲಿ ಖ್ಯಾತಿ ಪಡೆದವರು ವ್ಯಾಸಮಹರ್ಷಿಯೊಬ್ಬರೇ· ದೇವಕೀಪುತ್ರನಾದ ಶ್ರೀಕೃಷ್ಣನೂ ಬುದ್ಧಿಶಾಲಿಯಾದ ಅರ್ಜುನನೂ ಶಿವಭಕ್ತಾಗ್ರಗಣ್ಯರೇ ಆದರೂ, ವ್ಯಾಸನಿಗೆ ಸರಿಸಮರಾಗರು, ಎಂದು ಸೂರ್ಯದೇವನು ಮನುವಿಗೆ ಬೋಧಿಸಿದನು.

೨೮. ಹಾಗೆ ವ್ಯಾಸಮಹರ್ಷಿಯು, ಪರಮೇಶ್ವರನಿಂದ ವರಗಳನ್ನು ಪಡೆದು ಮುಂದೆ ಇರುವ ಇನ್ನೂ ಅನೇಕ ಶಿವಲಿಂಗಗಳನ್ನು ದರ್ಶನ ಮಾಡಲು ಪ್ರಯಾಣ ಮಾಡಿದನು ಎಂದು ಸೂರ್ಯದೇವನು ಮನುವಿಗೆ ಹೇಳಿದನೆಂಬಲ್ಲಿಗೆ

ಬ್ರಹ್ಮಪುರಾಣದ ಉಪಪುರಾಣವಾದ ಸೌರಪುರಾಣದಲ್ಲಿ ಭಾನುಮನು
ಸಂವಾದ ರೂಪವಾದ ಮಹಾದೇವವರಪ್ರದಾನವೆಂಬ
ಐದನೇಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ಷಷ್ಠೋಽಧ್ಯಾಯಃ ॥

॥ ಋಷಯ ಊಚುಃ ॥

ಕಾನಿ ದಿವ್ಯಾನಿ ಲಿಂಗಾನಿ ಯಾನಿ ದ್ರಷ್ಟುಂ ಯಯೌ ಮುನಿಃ ।
ಆಚಕ್ಷ್ವ ತಾನಿ ನಃ ಸೂತ ಮಾಹಾತ್ಮ್ಯಂ ಚಾಪಿ ಕೃತ್ಸ್ನಶಃ ॥ ೧ ॥

॥ ಸೂತ ಉವಾಚ ॥

ಯದುಕ್ತಂ ಭಾನುನಾ ಪೂರ್ವಂ ಮನವೇ ಮುನಿಸತ್ತಮಾಃ ।
ತದೇವ ಕಥಯಿಷ್ಯಾಮಿ ಶೃಣುಧ್ವಂ ಗದತೋ ಮಮ ॥ ೨ ॥

ಆಗ್ನೇಯ್ಯಾಮವಿಮುಕ್ತಸ್ಯ ವಾಪೀ ತ್ರೈಲೋಕ್ಯವಿಶ್ರುತಾ ॥
ಯತ್ರ ಸನ್ನಿಹಿತೋ ದೇವೋ ನಿತ್ಯಂ ವಿಶ್ವೇಶ್ವರಃ ಶಿವಃ ॥ ೩ ॥

ಆರನೆಯ ಅಧ್ಯಾಯವು.

೧. "ಆ ವ್ಯಾಸಮಹರ್ಷಿಯು ಮುಂದೆ ಯಾವ ಯಾವ ಉತ್ತಮವಾದ ಲಿಂಗಗಳ ದರ್ಶನಾರ್ಥವಾಗಿ ಸಂಚರಿಸಿದನು? ಆ ದಿವ್ಯ ಲಿಂಗಗಳ ಮಹಿಮೆಯೆಲ್ಲವನ್ನೂ ನಮಗೆ ವಿಸ್ತರಿಸಬೇಕು" ಎಂಬುದಾಗಿ ಶೌನಕಾದಿ ಋಷಿಗಳು ಕೇಳಿಕೊಳ್ಳಲು,

೨. ಸೂತಮಹರ್ಷಿಯು ಶೌನಕಾದಿಗಳನ್ನು ಕುರಿತು ಋಷಿವರ್ಯರೇ! ಹಿಂದೆ ಸೂರ್ಯದೇವನು ಮನುವಿಗೆ ಹೇಳಿದ ವಿಷಯವನ್ನೇ ನಿಮಗೆ ಈಗ ತಿಳಿಯಹೇಳುವೆನು. ಎಂದು ಮುಂದಿನ ವಿಚಾರವನ್ನು ವಿವರಿಸಲಾರಂಭಿಸಿದನು.

೩. ವಿಶ್ವೇಶ್ವರಲಿಂಗದ ಆಗ್ನೇಯ ದಿಕ್ಕಿನಲ್ಲಿ ಅವಿಮುಕ್ತೇಶ್ವರ ಲಿಂಗವಿದೆ. ಆ ಲಿಂಗದ ಸಮೀಪದಲ್ಲಿಯೇ ಪ್ರಸಿದ್ಧವೂ ಮಹಿಮಾಪೂರ್ಣವೂ ಆದ ಬಾವಿಯೊಂದಿರುವುದು. ಅಲ್ಲಿ ನಿತ್ಯವೂ ವಿಶ್ವೇಶ್ವರಸ್ವಾಮಿಯ ಸಾನ್ನಿಧ್ಯವಿರುವುದು.

ಯತ್ರ ಸ್ನಾನಂ ದ್ವಿಜಶ್ರೇಷ್ಠಾ ದೇವಾನಾ ಮಪಿದುರ್ಲಭಂ ।
ಭಕ್ತ್ಯಾ ಯೈಸ್ತಜ್ಜಲಂ ಪೀತಂ ತೇ ರುದ್ರಾ ಏವ ಭೂತಲೇ ॥ ೪ ॥

ತೇಷಾಂ ಲಿಂಗಾನಿ ಜಾಯಂತೇ ಹೃದಯೇ ತ್ರೀಣಿ ಸುವ್ರತಾಃ ।
ದುರ್ಲಭಂ ತಜ್ಜಲಂ ತಸ್ಮಾತ್ತ್ರಿಷ್ವತ್ಯೇವ ಹಿ ಮುದ್ರಿತಂ ॥ ೫ ॥

ತತ್ರ ಸತ್ಯವತೀಸೂನುಃ ಸ್ನಾತ್ವಾ ಚೈವ ಯಥಾವಿಧಿ ।
ಅವಿಮುಕ್ತೇಶ್ವರಂ ದೃಷ್ಟ್ವಾ ಲಾಂಗಲೀಶಂ ತತೋ ಯಯೌ ॥ ೬ ॥

ತತ್ರ ಬ್ರಹ್ಮಾದಯೋ ದೇವಾಃ ಸೇವಂತೇ ಶೂಲಪಾಣಿನಂ ।
ತಸ್ಯ ದರ್ಶನಮಾತ್ರೇಣ ಜ್ಞಾನಂ ಪಾಶುಪತಂ ಭವೇತ್ ॥ ೭ ॥

ಜಗಾಮ ಸ ಮುನಿಃ ಪಶ್ಚಾದ್ದ್ರಷ್ಟುಂ ವೈ ತಾರಕೇಶ್ವರಂ ।
ಯತ್ರಾಂತಕಾಲೇ ಭಗವಾನ್ ಜ್ಞಾನಂ ತತ್ಸಂಪ್ರಯಚ್ಛತಿ ॥ ೮ ॥

---

೪. ಓ ಶೌನಕಾದಿಗಳೇ! ಅಲ್ಲಿ ಸ್ನಾನಮಾಡುವುದು ಬಹಳ ಪುಣ್ಯಕರ. ದೇವತೆಗಳಿಗೂ ಅಲ್ಲಿ ಸ್ನಾನವು ದೊರೆಯುವುದು ದುರ್ಲಭ. ಯಾರು ಭಕ್ತಿಯಿಂದ ಆ ಬಾವಿಯ ತೀರ್ಥವನ್ನು ಪಾನಮಾಡುವರೋ ಅವರು ಭೂಲೋಕದಲ್ಲಿ ಸಾಕ್ಷಾತ್ಪರಮೇಶ್ವರ ಸ್ವರೂಪಿಗಳೇ ಆಗುವರು.

೫. ಯಾರು ಆ ತೀರ್ಥಪಾನ ಮಾಡುವರೋ ಅವರ ಹೃದಯದಲ್ಲಿ ಆ ನೀರು ಮೂರು ವಿಧವಾದ ಲಿಂಗಗಳಂತೆ ಬದಲಾವಣೆ ಹೊಂದುತ್ತದೆ. ಆದ್ದರಿಂದ ಆ ತೀರ್ಥವು ಉತ್ತಮೋತ್ತಮವಾದದ್ದು.

೬. ಅಂಥ ಪವಿತ್ರತೀರ್ಥದಲ್ಲಿ ಸತ್ಯವತೀಪುತ್ರನಾದ ವ್ಯಾಸ ಮಹರ್ಷಿಯು ವಿಧಿವತ್ತಾಗಿ ಸ್ನಾನಮಾಡಿ, ಅವಿಮುಕ್ತೇಶ್ವರನ ದರ್ಶನಮಾಡಿ ಅನಂತರ ಲಾಂಗಲೀಶ ದರ್ಶನಕ್ಕಾಗಿ ತೆರಳಿದನು.

೭. ಅಲ್ಲಿ ಆ ಲಾಂಗಲೀಶನಾದ ಪರಮೇಶ್ವರನನ್ನು ಬ್ರಹ್ಮನೇ ಮೊದಲಾದ ದೇವತೆಗಳೂ ಸಹ ಸೇವಿಸಿ ಧನ್ಯರಾಗುವರು. ಅಂಥ ಲಿಂಗ ದರ್ಶನ ಮಾತ್ರದಿಂದಲೇ ಮನುಷ್ಯರು ಪಶುಪತಿಯ ಸಂಬಂಧವಾದ ಜ್ಞಾನವನ್ನು ಪಡೆಯುವರು.

೮. ಅಲ್ಲಿಂದ ಮುಂದೆ ವ್ಯಾಸ ಮಹರ್ಷಿಯು ತಾರಕೇಶ್ವರನ ದರ್ಶನಕ್ಕಾಗಿ ತೆರಳಿದನು. ಆ ತಾರಕೇಶ್ವರನು ಭಕ್ತರಿಗೆ ಅವಸಾನ ಕಾಲದಲ್ಲಿ ತಾರಕಮಂತ್ರೋಪದೇಶದಿಂದ ಮೋಕ್ಷವನ್ನು ಕೊಡುವನು.

ಯತ್ರೈವಾನೇನ ದೇವಸ್ಯ ಸ್ಥಾಪಿತಂ ಲಿಂಗಮುತ್ತಮಂ ।
ಯಸ್ಯ ದರ್ಶನಮಾತ್ರೇಣ ಬ್ರಹ್ಮಹತ್ಯಾಂ ವ್ಯಪೋಹತಿ ॥ ೯ ॥

ತಂ ದೃಷ್ಟ್ವಾ ಪರಮಂ ಲಿಂಗಂ ವ್ಯಾಸಸ್ಸತ್ಯವತೀಸುತಃ ।
ಯಯೌ ಶುಕ್ರೇಶ್ವರಂ ದ್ರಷ್ಟುಂ ಸರ್ವಸಿದ್ಧಿಪ್ರದಾಯಕಂ ॥ ೧೦ ॥

ಆರಾಧ್ಯ ಮುನಿನಾ ಯತ್ರ ಶುಕ್ರೇಣಾಮಿತತೇಜಸಾ ।
ಪ್ರಾಪ್ತಾ ಸಂಜೀವಿನೀ ವಿದ್ಯಾ ಸುರಾಣಾಮಪಿ ದುರ್ಲಭಾ ॥ ೧೧ ॥

ದೇವಸ್ಯ ವಹ್ನಿದಿಗ್ಭಾಗೇ ಕೂಪಸ್ತಿಷ್ಠತಿ ಶೋಭನಃ ।
ಸ್ನಾನಂ ತತ್ರಾಶ್ವಮೇಧಸ್ಯ ಫಲಂ ಯಚ್ಛತಿ ಶೋಭನಂ ॥ ೧೨ ॥

ತಸ್ಮಿನ್ ಕೂಪೇ ಮುನಿಃ ಸ್ನಾತ್ವಾ ದೃಷ್ಟ್ವಾ ಶುಕ್ರೇಶ್ವರಂ ಶಿವಂ ।
ಬ್ರಹ್ಮೇಶ್ವರಂ ಯಯೌ ದ್ರಷ್ಟುಂ ತತ್ರ ಬ್ರಹ್ಮಾ ವಿರಾಟ್ ಸ್ವಯಂ ॥ ೧೩ ॥

---

೯ ತಾರಕೇಶ್ವರ ಲಿಂಗವು ಸಾಕ್ಷಾತ್ ವಿಶ್ವೇಶ್ವರ ಸ್ವಾಮಿಯಿಂದಲೇ ಪ್ರತಿಷ್ಠಿಸಲ್ಪಟ್ಟಿತು ಆ ಲಿಂಗದ ದರ್ಶನದಿಂದ ಬ್ರಹ್ಮಹತ್ಯಾರೂಪವಾದ ಪಾಪವೂ ನಿವಾರಣೆಯಾಗುತ್ತದೆ.

೧೦. ಆ ತಾರಕೇಶ್ವರ ಲಿಂಗವನ್ನು ಸತ್ಯವತೀಸುತನಾದ ವ್ಯಾಸ ಮಹರ್ಷಿಯು ದರ್ಶನಮಾಡಿ ಅಲ್ಲಿಂದ ಮುಂದೆ ಸರ್ವಸಿದ್ಧಿಗಳನ್ನೂ ದಯಪಾಲಿಸುವಂತಹ ಶುಕ್ರೇಶ್ವರನ ದರ್ಶನಕ್ಕಾಗಿ ಪ್ರಯಾಣಮಾಡಿದನು.

೧೧. ಹಿಂದೆ ಶುಕ್ರಾಚಾರ್ಯನು ಈ ಲಿಂಗಾರ್ಚನೆಯಿಂದಲೇ ಪರಮೇಶ್ವರನನ್ನು ಮೆಚ್ಚಿಸಿ ದೇವತೆಗಳಿಗೂ ದುರ್ಲಭವಾದ ಮೃತಸಂಜೀವಿನೀ ವಿದ್ಯೆಯನ್ನು ಸಂಪಾದಿಸಿದನು. ಈ ವಿದ್ಯಾಪ್ರದಾತೃವಾದ ಲಿಂಗವೇ ಆ ಶುಕ್ರೇಶ್ವರ ಲಿಂಗ.

೧೨. ಶುಕ್ರೇಶ್ವರ ಲಿಂಗದ ಆಗ್ನೇಯ ಭಾಗದಲ್ಲಿ ಒಂದು ದಿವ್ಯವಾದ ಕೋಣವಿದೆ. ಅಲ್ಲಿ ಸ್ನಾನಮಾಡಿದರೆ ಅಶ್ವಮೇಧಯಾಗದ ಫಲವನ್ನು ಸುಲಭವಾಗಿ ಹೊಂದಬಹುದು.

೧೩. ಅಂತಹ ಕೊಳದಲ್ಲಿ ವ್ಯಾಸಮಹರ್ಷಿಯು ಸ್ನಾನಮಾಡಿ ಶುಕ್ರೇಶ್ವರನ ದರ್ಶನಮಾಡಿಕೊಂಡು ಅನಂತರ ಬ್ರಹ್ಮನಿಂದ ಪ್ರತಿಷ್ಠಿತವಾಗಿದ್ದ ಬ್ರಹ್ಮೇಶ್ವರ ದರ್ಶನಕ್ಕಾಗಿ ಪ್ರಯಾಣಮಾಡಿದನು.

ತಪಸ್ತಪ್ತ್ವಾ ಮಹಾಘೋರಂ ಪ್ರೀತಯೇ ಪಾರ್ವತೀಪತೇಃ ।
ಬ್ರಹ್ಮತ್ವಂ ಪ್ರಾಪ್ತವಾನ್ ಬ್ರಹ್ಮಾ ಯೋಗಂ ಚಾನ್ಯೇ ಮಹರ್ಷಯಃ ॥ ೧೪ ॥

ದರ್ಶನಾತ್ತಸ್ಯ ಲಿಂಗಸ್ಯ ಸರ್ವಯಜ್ಞಫಲಂ ಲಭೇತ್ ।
ಪುನರ್ಜಗಾಮ ಭಗವಾನ್ ಓಂಕಾರೇಶ್ವರ ಮವ್ಯಯಂ ॥ ೧೫ ॥

ಸ್ಮರಣಾದ್ಯಸ್ಯ ಲಿಂಗಸ್ಯ ಮುಚ್ಯತೇ ಸರ್ವಪಾತಕೈಃ ।
ಯತ್ರ ಸಾಕ್ಷಾಚ್ಛಿವಃ ಸೂಕ್ಷ್ಮೋ ನಿತ್ಯಂ ತಿಷ್ಠತಿ ವೈ ದ್ವಿಜಾಃ ॥ ೧೬ ॥

ಅನುಗ್ರಹಾಯ ಲೋಕಾನಾಂ ಪಶುಪಾಶವಿಮೋಚಕಾಃ ।
ಯತ್ರ ಪಾಶುಪತಾಃ ಸಿದ್ಧಾಃ ಓಂಕಾರೇಶ್ವರ ಮೀಶ್ವರಂ ॥ ೧೭ ॥

ಸಂಪೂಜ್ಯ ಪರಮಾಂ ಸಿದ್ಧಿಂ ಪ್ರಾಪ್ತವಂತೋ ದ್ವಿಜೋತ್ತಮಾಃ ।
ಕೃಷ್ಣಪಕ್ಷೇ ಚತುರ್ದಶ್ಯಾಂ ತಸ್ಮಿಲ್ಲಿಂಗ ಉಪೋಷಿತಃ ॥ ೧೮ ॥

---

೧೪. ಅಲ್ಲಿ ಬ್ರಹ್ಮನು ಹಿಂದೆ ಘೋರವಾಗಿ ಪರಮೇಶ್ವರನನ್ನು ಕುರಿತು ತಪಸ್ಸುಮಾಡಿದ್ದನು. ಅದರಿಂದ ಈಶ್ವರನು ಸಂತುಷ್ಟನಾಗಿ ಅವನಿಗೆ ಬ್ರಹ್ಮ ಪದವಿಯನ್ನು ದಯಪಾಲಿಸಿದನು. ಅಷ್ಟೇ ಅಲ್ಲದೆ ಇತರ ಯೋಗಿಗಳೂ ಸಹ ಇಲ್ಲಿ ಸಿದ್ಧಿಯನ್ನು ಪಡೆದಿರುವರು.

೧೫. ಆ ಬ್ರಹ್ಮೇಶ್ವರನ ದರ್ಶನದಿಂದ ಮನುಷ್ಯನಿಗೆ ಸಮಸ್ತ ಯಾಗಗಳ ಫಲವೂ ದೊರೆಯುವುದು. ವ್ಯಾಸಮಹರ್ಷಿಯು ಬ್ರಹ್ಮೇಶ್ವರನ ದರ್ಶನಮಾಡಿಕೊಂಡು ಅಲ್ಲಿಂದ ಓಂಕಾರೇಶ್ವರ ದರ್ಶನಾರ್ಥವಾಗಿ ಮುಂದಕ್ಕೆ ಪ್ರಯಾಣಮಾಡಿದನು.

೧೬. ಓಂಕಾರೇಶ್ವರ ಲಿಂಗದ ಸ್ಮರಣೆಯಿಂದಲೇ ಸಮಸ್ತಪಾಪಗಳೂ ಪರಿಹಾರವಾಗುವುವು. ಏಕೆಂದರೆ ಆ ಲಿಂಗದಲ್ಲಿ ಸಾಕ್ಷಾನ್ಮಹೇಶ್ವರನು ಸೂಕ್ಷ್ಮರೂಪದಿಂದ ಸರ್ವದಾ ವಾಸಿಸುತ್ತಿರುವನು.

೧೭-೧೮. ಲೋಕಗಳ ರಕ್ಷಣೆಗಾಗಿಯೂ ಗೋವುಗಳ ಹಿತಕ್ಕಾಗಿಯೂ, ಪರಶಿವನ ಭಕ್ತರನೇಕರು ಈ ಓಂಕಾರೇಶ್ವರ ಲಿಂಗವನ್ನು ಪೂಜಿಸುವರು. ಬಹಳಮಂದಿ ಆ ಲಿಂಗವನ್ನು ಪೂಜಿಸಿ ತಮ್ಮ ಇಷ್ಟಾರ್ಥವನ್ನು ಪಡೆದಿರುವರು. ಆದ್ದರಿಂದ ಯಾರೇ ಆಗಲಿ ಕೃಷ್ಣಪಕ್ಷದ ಚತುರ್ದಶೀ ದಿವಸ ಪೂರ್ತಿ ಉಪವಾಸಮಾಡಿ,

ಯದಿಜಾಗರಣಂ ಕುರ್ಯಾತ್ಪರಾಂ ಸಿದ್ಧಿಮವಾಪ್ನುಯಾತ್ ।
ತತಃ ಸತ್ಯವತೀಸೂನುಃ ಕೃತ್ತಿವಾಸೇಶ್ವರಂ ಯಯೌ　　॥ ೧೯ ॥

ಉಪಾಸತೇ ಮಹಾದೇವಂ ಯತ್ರ ಬ್ರಹ್ಮಾದಯಃ ಸುರಾಃ ।
ಮುನಯಶ್ಯಂಸಿತಾತ್ಮಾನೋ ರುದ್ರಜಾಪ್ಯಪರಾಯಣಾಃ　　॥ ೨೦ ॥

ಕೃತ್ತಿವಾಸೇಶ್ವರೇ ಲಿಂಗೇ ಲೀಲಾಶ್ಚ ಬಹವೋ ದ್ವಿಜಾಃ ।
ದೇವಸ್ಯ ಪೂರ್ವದಿಗ್ಭಾಗೇ ಹಂಸತೀರ್ಥಂ ಮಹತ್ಸರಃ　　॥ ೨೧ ॥

ಸ್ನಾತ್ವಾ ತತ್ರ ಮಹಾದೇವಂ ಕೃತ್ತಿವಾಸೇಶ್ವರಂ ವಿಭುಂ ।
ನ ಪತತ್ಯೇವ ಸಂಸಾರೇ ನಾತ್ರ ಕಾರ್ಯಾ ವಿಚಾರಣಾ　　॥ ೨೨ ॥

ಸಕೃತ್ಪಶ್ಯತಿ ಯೋ ಭಕ್ತ್ಯಾ ಕೃತ್ತಿವಾಸೇಶ್ವರಂ ವಿಭುಂ ।
ಯೇ ದ್ರಕ್ಷ್ಯಂತಿ ಮಹಾತ್ಮಾನಸ್ತೇ ವೈ ಬ್ರಹ್ಮಾದಿವಂದಿತಾಃ　　॥ ೨೩ ॥

---

೧೯. ರಾತ್ರಿಯೆಲ್ಲಾ ಜಾಗರಣೆಮಾಡಿ, ಆ ಲಿಂಗವನ್ನು ಪೂಜೆಮಾಡಿದರೆ, ಓಂಕಾರೇಶ್ವರ ಸ್ವಾಮಿಯ ಅನುಗ್ರಹದಿಂದ ಅವರು ಸಕಲೇಷ್ಟಾರ್ಥಗಳನ್ನೂ ಪಡೆಯುವರು. ಆದ್ದರಿಂದ ವ್ಯಾಸಮಹರ್ಷಿಯು ಸ್ನಾನಾದಿಗಳಿಂದ ಓಂಕಾರೇಶ್ವರ ದರ್ಶನಮಾಡಿ ಅನಂತರ ಕೃತ್ತಿವಾಸೇಶ್ವರನ ದರ್ಶನಕ್ಕಾಗಿ ತೆರಳಿದನು.

೨೦. ಆಕೃತ್ತಿವಾಸೇಶ್ವರನನ್ನು ಸಮಸ್ತದೇವತೆಗಳೂ ಸರ್ವದಾ ಪೂಜಿಸುತ್ತಿರುವರು. ಅಲ್ಲದೆ ಸಮಸ್ತ ಮುನಿಗಳೂ, ಶಿವಭಕ್ತಿಪರಾಯಣರಾದ ಸಕಲ ಮಾನವರೂ ಆ ದೇವನ ಅರ್ಚನೆಯಲ್ಲಿಯೇ ತೊಡಗಿರುವರು.

೨೧. ಬಹುಜನ ಬ್ರಾಹ್ಮಣರು ಕೃತ್ತಿವಾಸೇಶ್ವರ ಲಿಂಗವನ್ನು ಭಕ್ತಿಯಿಂದ ಅರ್ಚಿಸುತ್ತಿರುವರು. ಇದರ ಪೂರ್ವದಿಗ್ಭಾಗದಲ್ಲಿ ಹಂಸತೀರ್ಥವೆಂಬ ಒಂದು ದೊಡ್ಡ ಸರಸ್ಸುಂಟು.

೨೨. ಕೃತ್ತಿವಾಸಲಿಂಗದ ದರ್ಶನಕ್ಕೆ ಮೊದಲು ಆ ಕೊಳದಲ್ಲಿ ಸ್ನಾನಮಾಡಿ, ಅನಂತರ ಆ ಲಿಂಗದ ದರ್ಶನಮಾಡಿದರೆ ಅವರು ಖಂಡಿತವಾಗಿಯೂ ಭವಬಂಧನಕ್ಕೆ ಸಿಕ್ಕಲಾರರು. ಇದರಲ್ಲಿ ಸಂದೇಹವಿಲ್ಲ.

೨೩. ಯಾರು ಕೃತ್ತಿವಾಸೇಶ್ವರ ಲಿಂಗವನ್ನು ಭಕ್ತಿಯಿಂದ ಅರ್ಚಿಸಿ, ಧ್ಯಾನಿಸುವರೋ, ಅಂತಹವರು ಬ್ರಹ್ಮಾದಿಗಳಿಗೂ ಪೂಜ್ಯರಾಗಿ ಮಹಾತ್ಮರೆನಿಸಿಕೊಳ್ಳುವರು.

ಹಂಸತೀರ್ಥೇ ನರಃಸ್ನಾತ್ವಾ ಕೃತ್ತಿವಾಸೇಶ್ವರಂ ವಿಭುಂ ।
ಸಂಪೂಜ್ಯ ಪದಯಾ ಭಕ್ತ್ಯಾ ಕೃತ್ತಿವಾಸೇಶ್ವರಂ ಶಿವಂ ॥ ೨೪ ॥

ನ ಪತತ್ಯೇವ ಸಂಸಾರೇ ರುದ್ರ ಏವ ನ ಸಂಶಯಃ ।
ಯಯೌ ರತ್ನೇಶ್ವರಂ ದ್ರಷ್ಟುಂ ಮೋಕ್ಷೋ ಯತ್ರ ಪ್ರತಿಷ್ಠಿತಃ ॥೨೫ ॥

ದರ್ಶನಾತ್ತಸ್ಯ ಲಿಂಗಸ್ಯ ಫಲಂ ವಕ್ತುಂ ನ ಶಕ್ಯತೇ ।
ಸರ್ವಸ್ಮಾದಧಿಕೋ ಯೋಗೋ ವೇದವಿದ್ಭಿರ್ನಿಷೇವ್ಯತೇ ॥ ೨೬ ॥

ಯೋಯಂ ಪಾಶುಪತೋ ಯೋಗಃ ಪಶುಪಾಶವಿಮೋಚಕಃ ।
ವರ್ಷೈರ್ದ್ವಾದಶಭಿಸ್ಸಮ್ಯಕ್ಕೃತೇ ಪಾಶುಪತೇ ದ್ವಿಜಾಃ ॥ ೨೭ ॥

ರತ್ನೇಶ್ವರೇ ತದಾ ಜ್ಯೋತಿರ್ದರ್ಶನಾನ್ಮನುಜೋತ್ತಮಃ ।
ರತ್ನೇಶ್ವರಂ ತು ಸಂಪೂಜ್ಯ ಪಾರಾಶರ್ಯೋ ಮಹಾಮುನಿಃ ॥ ೨೮ ॥

---

೨೪. ಯಾರು ಹಂಸತೀರ್ಥದಲ್ಲಿ ಸ್ನಾನಮಾಡಿ ಕೃತ್ತಿವಾಸೇಶ್ವರನನ್ನು ಅತಿಶಯವಾದ ಭಕ್ತಿಯಿಂದ ಆರಾಧಿಸುವರೋ,

೨೫. ಅಂತಹವರಿಗೆ ಸಂಸಾರದ ಭಯವು ಲೇಶವೂ ಇರುವುದಿಲ್ಲ. ಅದಕ್ಕಾಗಿಯೇ ವ್ಯಾಸಮಹರ್ಷಿಯು ಈ ಕೃತ್ತಿವಾಸೇಶ್ವರನನ್ನು ದರ್ಶನಮಾಡಿ, ಅನಂತರ ಮೋಕ್ಷಪ್ರದವಾದ ರತ್ನೇಶ್ವರನ ಕ್ಷೇತ್ರಕ್ಕೆ ಪ್ರಯಣಮಾಡಿದನು.

೨೬. ಆ ರತ್ನೇಶ್ವರ ಲಿಂಗದ ದರ್ಶನದಿಂದ ಒದಗುವ ಪುಣ್ಯಫಲವನ್ನು ಹೇಳಲು ಸಾಧ್ಯವಿಲ್ಲ. ಮತ್ತು ವೇದಜ್ಞರಾದವರು, ಎಲ್ಲ ಯೋಗಗಳಿಗಿಂತಲೂ ದೊಡ್ಡದಾದದ್ದು ಪಾಶುಪತಯೋಗವೆಂದು ನಿರ್ಧರಿಸಿರುವರು.

೨೭. ಆ ಪಶುಪತಿಯೋಗವು ಪಶುಗಳಿಗೂ ಬಂಧನವನ್ನು ಬಿಡಿಸತಕ್ಕದ್ದು. ಅಂಥಯೋಗವನ್ನು ಹನ್ನೆರಡು ವರ್ಷಗಳಕಾಲ ಅಭ್ಯಾಸಮಾಡಿದವರಿಗೆ,

೨೮. ರತ್ನೇಶ್ವರನ ಲಿಂಗದಲ್ಲಿ ಒಂದು ತೇಜಸ್ಸು ಗೋಚರಿಸುವುದು. ಅದರ ದರ್ಶನದಿಂದ ಅವರು ರಾಜರಾಗಿ ಅವತರಿಸುವರು. ವ್ಯಾಸಮಹರ್ಷಿಯು ಅಂಥ ರತ್ನೇಶ್ವರನನ್ನು ಭಕ್ತಿಯಿಂದಾರಾಧಿಸಿ ಮುಂದೆ ಸಾಗಿದನು.

ದ್ರಷ್ಟುಂ ದೇವಾಧಿದೇವೇಶಂ ವೃದ್ಧಕಾಲೇಶ್ವರಂ ಯಯೌ ।
ತಸ್ಮಿಲ್ಲಿಂಗೇ ಮಹಾದೇವಃ ಸದಾ ತಿಷ್ಠತಿ ಲೀಲಯಾ ॥ ೨೯॥

ಅನುಗ್ರಹಾಯ ಲೋಕಾನಾಂ ಉಮಯಾ ಸಹ ವಿಶ್ವಭುಕ್ ।
ಪೃಥಿವ್ಯಾಂ ಯಾನಿ ಲಿಂಗಾನಿ ಸಂತಿ ದಿವ್ಯಾನಿ ವೈ ದ್ವಿಜಾಃ ॥ ೩೦ ॥

ವೃದ್ಧಕಾಲೇಶ್ವರೇ ದೃಷ್ಟೇ ದೃಷ್ಟಾನ್ಯೇವ ನ ಸಂಶಯಃ ।
ದೇವಸ್ಯ ಪೂರ್ವದಿಗ್ಭಾಗೇ ಕೂಪೋ ಮುನಿನಿಷೇವಿತಃ ॥ ೩೧ ॥

ಪೂರಿತಃ ಪುಣ್ಯಸಲಿಲೈಃ ದೇವದೇವೇನ ಶಂಭುನಾ ।
ಯೈಃ ಪೀತಂ ತಸ್ಯ ಸಲಿಲಂ ಪ್ರಾಕೃತೈಶ್ಚುಲುಕ ತ್ರಯಂ ॥೩೨ ॥

೨೯. ಅಲ್ಲಿ ದೇವಾಧಿದೇವನಾದ ವೃದ್ಧಕಾಲೇಶ್ವರಸ್ವಾಮಿಯ ದರ್ಶನವಾಯಿತು. ಆ ವೃದ್ಧಕಾಲೇಶ್ವರಲಿಂಗದಲ್ಲಾದರೋ ಸರ್ವದಾ ಮಹೇಶ್ವರನು ವಾಸಿಸುತ್ತಿರುವನು.

೩೦. ಲೋಕರಕ್ಷಣೆಯಲ್ಲಿ ನಿರತರಾಗಿರುವ ಪಾರ್ವತೀ ಪರಮೇಶ್ವರರಿಬ್ಬರೂ ಸರ್ವದಾ ಆ ವೃದ್ಧಕಾಲೇಶ್ವರ ಲಿಂಗಾಂತರ್ವರ್ತಿಯಾಗಿರುವುದರಿಂದಲೇ ಆ ಲಿಂಗವು ಸದಾ ಸನ್ಮುನಿಸೇವ್ಯವಾಗಿತ್ತು. ಅದರ ಮಹಿಮೆಯೇನೆಂದರೆ ಲೋಕದಲ್ಲಿ ಎಷ್ಟು ಶಿವಲಿಂಗಗಳು ಪ್ರತಿಷ್ಠಿತವಾಗಿವೆಯೋ, ಅವುಗಳ ಅರ್ಚನೆಯಿಂದ ಭಕ್ತರು ಎಂತಹ ಪುಣ್ಯರಾಶಿಯನ್ನು ಸಂಪಾದಿಸಬಹುದೋ, ಅದೆಲ್ಲವನ್ನೂ, ಈವೃಧ್ಧಕಾಲೇಶ್ವರ ಸ್ವಾಮಿಯ ದರ್ಶನಮಾತ್ರದಿಂದ ಪಡೆಯಬಹುದಾಗಿತ್ತು.

೩೧. ವೃಧ್ಧಕಾಲೇಶ್ವರಲಿಂಗದ ದರ್ಶನಮಾತ್ರದಿಂದ ಸಮಸ್ತ ಶಿವಲಿಂಗಗಳ ದರ್ಶನಫಲವೂ ಒದಗುವುದರಲ್ಲಿ ಸಂಶಯವೇ ಇಲ್ಲ. ಅಂತಹ ಪವಿತ್ರಮೂರ್ತಿಯಾದ ವೃದ್ಧಕಾಲೇಶ್ವಸ್ವಾಮಿಯ ಲಿಂಗದ ಪೂರ್ವಭಾಗದಲ್ಲಿ ಒಂದು ಕೊಳವಿತ್ತು. ಆ ಕೊಳದಲ್ಲಿ ಸಮಸ್ತ ಮುನಿಜನವೂ ಭಕ್ತಿಯಿಂದ ಮಿಂದು ತಮ್ಮ ಪಾಪರಾಶಿಯನ್ನು ಕಳೆದುಕೊಳ್ಳುತ್ತಿದ್ದರು.

೩೨. ಆವೃದ್ಧಕಾಲೇಶ್ವರಸ್ವಾಮಿಯ ಪೂರ್ವ ಭಾಗದಲ್ಲಿ ಋಷಿಸೇವಿತವಾದ ಒಂದು ಕೊಳವಿದೆ. ಅದರಲ್ಲಿಸಾಕ್ಷಾನ್ಮಹೇಶ್ವರನೇ ಪುಣ್ಯತೀರ್ಥಗಳನ್ನು ತಂದು ತುಂಬಿರುವನು.ಅಂತಹ ಪವಿತ್ರೋದಕವನ್ನು ಯಾರು ಮೂರು ಬಾರಿ ಬೊಗಸೆಯಿಂದ ಪಾನ ಮಾಡುವರೋ,

ಪ್ರಕೃತಿರ್ಮುಚ್ಯತೇ ತೇಭ್ಯೋ ಮುಕ್ತಾತ್ಮಾನೋ ಭವಂತಿ ತೇ ।
ತತ್ರ ದ್ವೈಪಾಯನೋ ವಿಪ್ರಾಃ ಸ್ನಾನಂ ಕೃತ್ವಾ ಸಮಾಹಿತಃ ॥ ೩೩ ॥

ವೃದ್ಧಕಾಲೇಶ್ವರಂ ಲಿಂಗಂ ಸಂಪೂಜ್ಯ ಚ ತತೋ ಯಯೌ ।
ಮಂದಾಕಿನೀತಟೇ ರಮ್ಯೇ ಮುನಿಸಿದ್ಧನಿಷೇವಿತೇ ॥ ೩೪ ॥

ಮಧ್ಯಮೇಶ್ವರನಾಮಾನಂ ಮೋಕ್ಷಲಿಂಗಮನುತ್ತಮಂ ।
ಯತ್ರ ಬ್ರಹ್ಮಾದಯೋ ದೇವಾ ಮುನಯಸ್ಸನಕಾದಯಃ ॥ ೩೫ ॥

ಉಪಾಸತೇ ಪರಂ ಲಿಂಗಂ ಶಿವದರ್ಶನಕಾಂಕ್ಷಿಣಃ ।
ಮಂದಾಕಿನ್ಯಾಂ ಮುನಿಃ ಸ್ನಾತ್ವಾ ದೃಷ್ಟ್ವಾ ವೈ ಮಧ್ಯಮೇಶ್ವರಂ ॥ ೩೬ ॥

---

೩೩. ಅಂಥವರು ಸಮಸ್ತ ಪಾಪಗಳನ್ನೂ ಕಳೆದುಕೊಂಡು ಮುಕ್ತರಾಗುವರು. ಅಂತಹ ಕೊಳದಲ್ಲಿ ವೇದವ್ಯಾಸನು ಸ್ನಾನಮಾಡಿ ಶುದ್ಧಮನಸ್ಕನಾದನು.

೩೪. ಅಲ್ಲಿಂದ ಮುಂದೆ ವ್ಯಾಸಮಹರ್ಷಿಯು ಮಧ್ಯಮೇಶ್ವರಲಿಂಗ ಸನ್ನಿಧಿಗೆ ಬಿಜಯಮಾಡಿದನು. ಆ ಲಿಂಗವು ಗಂಗಾನದಿಯ ದಡದಲ್ಲಿ ಮನೋಹರವಾದ ಪ್ರದೇಶವೊಂದರಲ್ಲಿ ಸ್ಥಾಪಿತವಾಗಿತ್ತು. ಆ ಕ್ಷೇತ್ರವು ಪ್ರಕೃತಿಸೌಂದರ್ಯದಿಂದ ತುಂಬಿ ತುಳುಕುತ್ತಿತ್ತು. ತಪಸ್ಸಿನಿಂದ ಸಿದ್ಧಿಯನ್ನು ಪಡೆದ ಋಷಿವರ್ಯರೂ ಸಹ ಆ ಲಿಂಗವನ್ನು ಸೇವಿಸುತ್ತಿದ್ದರು. ಇಂತಹ ಮಹಿಮಾಪೂರ್ಣವಾದ ಮಧ್ಯಮೇಶ್ವರ ಲಿಂಗವನ್ನು ಭಕ್ತಿಯಿಂದ ಅರ್ಚಿಸಲು, ಮುಂದೆ ಗೋಚರವಾಗುತ್ತಿದ್ದ ಗಂಗಾನದಿಯಲ್ಲಿ ಸ್ನಾನಮಾಡಲು ಪ್ರಯಾಣಬೆಳೆಸಿದನು.

೩೫. ಮಧ್ಯಮೇಶ್ವರಲಿಂಗಕ್ಕೆ ಮೋಕ್ಷಲಿಂಗವೆಂಬ ನಾಮಾಂತರವುಂಟು. ಆ ಮೋಕ್ಷಲಿಂಗಾಂತರ್ವರ್ತಿಯಾದ ಪರಮೇಶ್ವರನನ್ನು ಬ್ರಹ್ಮನೇ ಮೊದಲಾದ ದೇವಶ್ರೇಷ್ಠರೂ, ಸನಕ, ಸನಂದನನೇ ಮೊದಲಾದ ಋಷಿಶ್ರೇಷ್ಠರೂ, ಸರ್ವದಾ ಸೇವಿಸುತ್ತಿದ್ದರು. ಅದನ್ನು ನೋಡಿ ಕೃಷ್ಣದ್ವೈಪಾಯನು ಗಂಗಾಸ್ನಾನವಾದ ಮೇಲೆ ಭಕ್ತಿಯಿಂದ ಆ ಲಿಂಗಕ್ಕೆ ಎರಗಿದನು.

೩೬. ದೇವರ್ಷಿಗಳು ಮಾತ್ರವಲ್ಲದೆ ಇತರ ಶಿವದರ್ಶನಾಕಾಂಕ್ಷಿಗಳಾದ ಭಕ್ತರನೇಕರು ಆ ಮಧ್ಯಮೇಶ್ವರಲಿಂಗದ ದರ್ಶನಾರ್ಥವಾಗಿ ಅಲ್ಲಿಗೆ ಬಂದಿದ್ದರು. ಆಗಲೇ ವೇದವ್ಯಾಸನೂ ಮಧ್ಯಮೇಶ್ವರಸ್ವಾಮಿಯನ್ನು ವಿಧಿಪೂರ್ವಕವಾಗಿ ಅರ್ಚನೆ ಮಾಡಿದನು.

ಘಂಟಾಕರ್ಣಹ್ರದೇ ಸ್ನಾತ್ವಾ ಲಿಂಗಂ ತದ್ವಿಮಲಂ ಶಿವಂ ।
ಪ್ರತಿಷ್ಠಾಪ್ಯ ಮುನಿಶ್ರೇಷ್ಠೋ ಲಬ್ಧವಾನ್ ಜ್ಞಾನಮುತ್ತಮಂ ॥ ೩೭ ॥

ಘಂಟಾಕರ್ಣಹ್ರದೇ ತತ್ರ ದೃಷ್ಟ್ವಾ ವ್ಯಾಸೇಶ್ವರಂ ಶಿವಂ ।
ಯತ್ರ ಯತ್ರ ಮೃತೋ ವಾಪಿ ವಾರಾಣಸ್ಯಾಂ ಮೃತೋ ಭವೇತ್ ॥ ೩೮ ॥

ತತಸ್ಸತ್ಯವತೀಸೂನುಃ ಕಪರ್ದೀಶ್ವರಮೀಶ್ವರಂ ।
ದ್ರಷ್ಟುಂ ಜಗಾಮ ವಿಪ್ರೇಂದ್ರಾ ಲಿಂಗಂ ತತ್ಪಾರಮೇಶ್ವರಂ ॥ ೩೯ ॥

ಪಿಶಾಚಮೋಚನಂ ನಾಮ ತತ್ರತೀರ್ಥಮನುತ್ತಮಂ ।
ರುದ್ರಲೋಕಸ್ಯ ಸೋಪಾನಮಿತಿಪ್ರಾಹ ಮಹಾಮುನಿಃ ॥ ೪೦ ॥

ಯೇ ದ್ರಕ್ಷ್ಯಂತಿ ಕಪರ್ದೀಶಂ ಕೃತಾರ್ಥಾಸ್ತೇ ನ ಸಂಶಯಃ ।
ಮಾನುಷೀಂ ತನುಮಾಶ್ರಿತ್ಯ ರುದ್ರಾ ಏವ ನ ಸಂಶಯಃ ॥ ೪೧ ॥

---

೩೭. ಅಲ್ಲಿಯೇ ಮುಂದೆ ಘಂಟಾಕರ್ಣವೆಂಬ ಪವಿತ್ರವಾದ ಸರೋವರವೊಂದಿತ್ತು. ಅಲ್ಲಿ ಸ್ನಾನಮಾಡಿ, ಒಂದು ಶಿವಲಿಂಗವನ್ನು ಪ್ರತಿಷ್ಠಿಸಿ ವೇದವ್ಯಾಸ ಮಹರ್ಷಿಯು ಅದರ ಮಹಿಮೆಯಿಂದ ದಿವ್ಯಜ್ಞಾನವನ್ನು ಪಡೆದನು.

೩೮. ಆ ಲಿಂಗವೇ ವ್ಯಾಸೇಶ್ವರನೆನಿಸಿಕೊಂಡಿದೆ. ಅದು ಘಂಟಾಕರ್ಣ ತೀರ್ಥದ ಸಮೀಪದಲ್ಲಿದೆ. ಇದನ್ನು ದರ್ಶನಮಾಡಿದವರು ಎಲ್ಲಿ ಮೃತವಾದರೂ ಅವರು ಕಾಶೀಮರಣದ ಫಲವನ್ನೇ ಪಡೆಯುವರು.

೩೯. ಅಲ್ಲಿಂದ ಮುಂದೆ ವ್ಯಾಸಮಹರ್ಷಿಯು ಕಪರ್ದೀಶ್ವರನ ದರ್ಶನಕ್ಕಾಗಿ ಪ್ರಯಾಣಮಾಡಿದನು. ಆ ಲಿಂಗವು ಸಂಪೂರ್ಣ ಪರಮೇಶ್ವರನ ಸನ್ನಿಧಿಗೆ ಪಾತ್ರವಾಗಿತ್ತು.

೪೦. ಅಲ್ಲಿರುವ ಒಂದು ತೀರ್ಥಕ್ಕೆ ಪಿಶಾಚಮೋಚನವೆಂಬ ಹೆಸರಿದೆ. ಅಲ್ಲಿ ಸ್ನಾನಮಾಡಿದವರಿಗೆ ರುದ್ರಲೋಕಕ್ಕೆ ಒಂದು ಮೆಟ್ಟಲು ಸುಲಭವಾಗಿ ದೊರೆತಂತೆಯೇ ಆಗುವುದು.

೪೧. ಕಪರ್ದೀಶ್ವರನನ್ನು ದರ್ಶನಮಾಡಿದವರು ನಿಜವಾಗಿಯೂ ಧನ್ಯರೆನಿಸಿಕೊಳ್ಳುವರು. ಮನುಷ್ಯ ದೇಹದಿಂದಲೇ ಪರಮೇಶ್ವರನ ಭಾವವನ್ನು ಪಡೆದು ಶಿವಸ್ವರೂಪರಾಗುವರು.

ತಸ್ಮಿಂಸ್ತೀರ್ಥೇ ಮುನಿಃ ಸ್ನಾತ್ವಾ ಸಂತರ್ಪ್ಯ ಚ ಸುರಾನ್ ಪಿತೄನ್ ।
ಕಪರ್ದೀಶ್ವರಮೀಶಾನಂ ಸಂಪೂಜ್ಯ ಪ್ರಯಯೌ ಮುನಿಃ ॥ ೪೨ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ವಾರಾಣಸೀಲಿಂಗಮಹಿಮವರ್ಣನಂ ನಾಮ ಷಷ್ಠೋಽಧ್ಯಾಯಃ

---

೪೨. ವ್ಯಾಸನು ಪಿಶಾಚಮೋಚನ ತೀರ್ಥದಲ್ಲಿ ಸ್ನಾನಮಾಡಿ, ದೇವತೆಗಳಿಗೂ, ಪಿತೃಗಳಿಗೂ ತರ್ಪಣಮಾಡಿ, ಕಪರ್ದೀಶ್ವರನನ್ನು ಭಕ್ತಿಯಿಂದಾರಾಧಿಸಿ, ಮುಂದೆ ಪ್ರಯಾಣಮಾಡಿದನು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ
ಸಂವಾದ ರೂಪವಾಗಿ, ಕಾಶೀ ಲಿಂಗಗಳ ಮಹಿಮಾ ವರ್ಣನೆಯೆಂಬ
ಆರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ಸಪ್ತಮೋಽಧ್ಯಾಯಃ ॥

॥ ಸೂತ ಉವಾಚ ॥

ಪುನರ್ಜಗಾಮ ಭಗವಾನ್ ಕೃಷ್ಣದ್ವೈಪಾಯನಃ ಪ್ರಭುಃ ।
ದ್ರಷ್ಟುಂ ದಕ್ಷೇಶ್ವರಂ ದೇವಂ ಭಕ್ತಾನಾಂ ಸಿದ್ಧಿದಾಯಕಂ ॥ ೧ ॥

ಯಚ್ಛಿವಾವಜ್ಞಯಾ ಪಾಪಂ ಜಾತಂ ದಕ್ಷಪ್ರಜಾಪತೇಃ ।
ತಸ್ಯ ಪಾಪಸ್ಯ ಮೋಕ್ಷಾಯ ತಸ್ಮಿಲ್ಲಿಂಗೇ ದ್ವಿಜೋತ್ತಮಾಃ ॥ ೨ ॥

ಆರಾಧ್ಯ ದೇವದೇವೇಶಂ ಬಹೂನ್ಯಬ್ದಶತಾನಿ ವೈ ।
ತಸ್ಯ ಪ್ರಸನ್ನೋ ಭಗವಾನ್ ದೇವದೇವಸ್ಸಹೋಮಯಾ ॥ ೩ ॥

ಏಳನೆಯ ಅಧ್ಯಾಯವು.

೧. ಅಲ್ಲಿಂದ ಮುಂದೆ ವ್ಯಾಸಮಹರ್ಷಿಯು ಭಕ್ತರ ಸಕಲೇಷ್ಟಾರ್ಥಗಳನ್ನು ಸಲ್ಲಿಸುವಂತಹ ದಕ್ಷೇಶ್ವರ ಲಿಂಗವನ್ನು ನೋಡಲು ಪ್ರಯಾಣಮಾಡಿದನು, ಎಂದು ವ್ಯಾಸನ ಮುಂದಿನ ಪ್ರಯಾಣದ ವಿಷಯವಾಗಿ ಸೂತರು ಶೌನಕಾದಿಗಳಿಗೆ ಬೋಧಿಸ ತೊಡಗಿದರು.

೨. ಹಿಂದೆ ದಕ್ಷಬ್ರಹ್ಮನು ಶಿವನನ್ನು ತಿರಸ್ಕರಿಸಿದ ಪಾಪಶೇಷವನ್ನು ಕಳೆದು ಕೊಳ್ಳುವುದಕ್ಕಾಗಿ, ಆ ಲಿಂಗವನ್ನು ಪ್ರತಿಷ್ಠೆಮಾಡಿದನು.

೩. ಮತ್ತು ಅದೇ ಲಿಂಗವನ್ನು ದಕ್ಷಬ್ರಹ್ಮನು ಪ್ರತಿದಿನವೂ ಅನೇಕವರ್ಷ ಪರ್ಯಂತ ಭಕ್ತಿಯಿಂದ ಆರಾಧಿಸಿದನು. ಇವನ ಭಕ್ತಿಗೆ ಮೆಚ್ಚಿ ಪಾರ್ವತಿಯೊಡ ಗೂಡಿದ ಪರಮೇಶ್ವರನು ಪ್ರತ್ಯಕ್ಷನಾದನು.

ದದೌ ಮಾಹೇಶ್ವರಂ ಯೋಗಂ ತಸ್ಮೈ ದಕ್ಷಾಯ ಧೀಮತೇ ।
ಲಬ್ಧ್ವಾ ತಂ ಪರಮಂ ಯೋಗಂ ತಸ್ಮಿಲ್ಲಿಂಗೇ ಲಯಂ ಗತಃ ॥ ೪ ॥

ತತಃ ಪ್ರಭೃತಿ ತಲ್ಲಿಂಗಂ ಯೋಗಿಭಿಸ್ಸೇವ್ಯತೇ ದ್ವಿಜಾಃ ।
ಯೋಗಂ ದದಾತಿ ಸರ್ವೇಷಾಂ ದೇವೋ ದಕ್ಷೇಶ್ವರಶ್ಶಿವಃ ॥ ೫ ॥

ಗಂಗಾಯಾಂ ಪ್ರಯತಃ ಸ್ನಾತ್ವಾ ದೃಷ್ಟ್ವಾ ದಕ್ಷೇಶ್ವರಂ ಶಿವಂ ।
ಪ್ರಾಪ್ನೋತಿ ಪರಮಂ ಯೋಗಂ ಇತಿ ದ್ವೈಪಾಯನೋಽಬ್ರವೀತ್ ॥ ೬ ॥

ಸ್ನಾತ್ವಾ ಸತ್ಯವತೀಸೂನುರ್ಗಂಗಾಯಾಂ ಪ್ರಯತೋ ದ್ವಿಜಾಃ ।
ದೃಷ್ಟ್ವಾ ದಕ್ಷೇಶ್ವರಂ ದೇವಂ ಯಯೌ ಪಶ್ಚಾತ್ತ್ರಿಲೋಚನಂ ॥ ೭ ॥

---

೪. ದಕ್ಷಬ್ರಹ್ಮನಿಗೆ ಮಹೇಶ್ವರನು ಆಗಲೇ ಪ್ರೀತಿಯಿಂದ ಶೈವಯೋಗವನ್ನು ಉಪದೇಶಿಸಿ, ಅದರಿಂದ ಅವನನ್ನು ಪೂತನನ್ನಾಗಿಮಾಡಿ, ಅಲ್ಲಿಯೇ ಅಂತರ್ಧಾನನಾದನು. ದಕ್ಷಬ್ರಹ್ಮನೂ ಸಹ ಆ ಯೋಗವನ್ನು ಆಚರಿಸಿ, ಅದರ ಮಹಿಮೆಯಿಂದ ಆ ಲಿಂಗದಲ್ಲಿಯೇ ಐಕ್ಯನಾದನು.

೫. ಅಂದಿನಿಂದ ಸಮಸ್ತ ಯೋಗಿಗಳೂ ಸಹ ಆ ಲಿಂಗವನ್ನು ಅರ್ಚಿಸುತ್ತಿರುವರು. ಆ ದಕ್ಷೇಶ್ವರ ಲಿಂಗವು ಸಮಸ್ತ ಯೋಗಿಗಳಿಗೂ ಯೋಗಧರ್ಮವನ್ನು ಅನುಗ್ರಹಿಸುತ್ತಲಿರುವುದು.

೬. ಗಂಗಾನದಿಯಲ್ಲಿ ಶುದ್ಧಮನಸ್ಸಿನಿಂದ ಸ್ನಾನಮಾಡಿ, ದಕ್ಷೇಶ್ವರ ಲಿಂಗವನ್ನು ಯಾರು ಅರ್ಚಿಸುವರೋ, ಅವರು ಯೋಗಿಗಳಾಗುವರು ಎಂದು ವ್ಯಾಸಮಹರ್ಷಿಯೇ ಹೇಳಿರುವನು.

೭. ಹಾಗೆ ಹೇಳಿ ವ್ಯಾಸಮಹರ್ಷಿಯು ಗಂಗೆಯಲ್ಲಿ ಸ್ನಾನಮಾಡಿ, ದಕ್ಷೇಶ್ವರನ ದರ್ಶನದಿಂದ ಪವಿತ್ರನಾಗಿ ಮುಂದೆ ತ್ರಿಲೋಚನೇಶ್ವರನ ದರ್ಶನಕ್ಕಾಗಿ ಹೊರಟನು" ಎಂದು ಸೂತಪುರಾಣಿಕರು ಹೇಳಲಾಗಿ,

॥ ಋಷಯ ಊಚುಃ ॥

ಹೇತುನಾ ಕೇನ ದಕ್ಷಸ್ಯ ನಿಂದಾಭೂಚ್ಛಾಂಕರೀ ಪುರಾ ।
ಕಾರಣಂ ವದ ತತ್ಸೂತ ಶ್ರೋತುಂ ವಾಂಛಾ ಪ್ರವರ್ತತೇ ॥ ೮ ॥

॥ ಸೂತ ಉವಾಚ ॥

ಆಸೀದ್ಬ್ರಹ್ಮಸುತೋ ದಕ್ಷಃ ಪುನಃ ಪ್ರಾಚೇತಸೋಽಭವತ್ ।
ಶಪ್ತೋ ದೇವೇನ ರುದ್ರೇಣ ಕ್ರೋಧಾಚ್ಛಂಭೋರವಜ್ಞಯಾ ॥ ೯ ॥

ವೈರಂ ನಿಧಾಯ ಮನಸಿ ಶಂಭುನಾ ಸಹ ಸುವ್ರತಾಃ ।
ದಕ್ಷಃ ಪ್ರಾಚೇತಸೋ ಯಜ್ಞಮಕರೋಜ್ಜಾಹ್ನವೀತಟೇ ॥ ೧೦ ॥

ತಸ್ಮಿನ್ಯಜ್ಞೇ ಸಮಾಹೂತಾ ಇಂದ್ರಾದ್ಯಾ ದೇವತಾಗಣಾಃ ।
ಋಷಯೋ ಮುನಯಸ್ಸಿದ್ಧಾ ರಾಜಾನಃ ಪ್ರಥಿತೌಜಸಃ ॥ ೧೧ ॥

---

೮. ಶೌನಕಾದಿಗಳು ಸೂತಪುರಾಣೀಕರನ್ನು ಕುರಿತು, ಸ್ವಾಮಿಯೇ," ದಕ್ಷಬ್ರಹ್ಮನು ಮಹೇಶ್ವರನನ್ನು ನಿಂದಿಸಿದನೆಂದು ಹೇಳಿದಿರಲ್ಲವೆ? ಹಾಗೆ ದಕ್ಷನು ನಿಂದಿಸಲು ಕಾರಣವೇನು? ಅದನ್ನು ಕೇಳಲು ನಮಗೆ ಬಹಳ ಕುತೂಹಲವಿದೆ. ದಯೆಯಿಟ್ಟು ತಾವು ತಿಳಿಸಬೇಕೆ"ಂದು ಕೇಳಿಕೊಳ್ಳಲು,

೯. ಸೂತನು, "ಎಲೈ ಋಷಿಗಳಿರಾ, ಹಿಂದೆ ದಕ್ಷಬ್ರಹ್ಮನು ಬ್ರಹ್ಮಮಾನಸಪುತ್ರನಾಗಿದ್ದನು. ಶಿವನಿಂದ ಶಾಪಪಡೆದು ಆಮೇಲೆ ವರುಣನ ಮಗನಾಗಿ ಹುಟ್ಟಿದನು. ಆದರೆ ಹಿಂದೆ ಶಿವನು ತನಗೆ ಶಾಪಕೊಟ್ಟುದನ್ನು ಸ್ಮರಿಸಿಕೊಂಡು, ದಕ್ಷನು ಶಿವನನ್ನು ಬಹುವಾಗಿ ದ್ವೇಷಿಸಲಾರಂಭಿಸಿದನು.

೧೦. ಇದೇ ದ್ವೇಷವನ್ನು ಮನಸ್ಸಿನಲ್ಲಿಟ್ಟು ದಕ್ಷಬ್ರಹ್ಮನು ಒಂದು ವಾರುಣೀಯಾಗವನ್ನು ಗಂಗಾತೀರದಲ್ಲಿ ಮಾಡಲು ಸಿದ್ಧನಾದನು.

೧೧. ಆ ಯಾಗಕ್ಕೆ ಇಂದ್ರನೇ ಮೊದಲಾದ ದೇವತೆಗಳನ್ನೂ, ಸಮಸ್ತ ಋಷಿಸಮೂಹವನ್ನೂ, ಸಿದ್ಧರಾದ ಮುನಿವರ್ಯರನ್ನೂ, ಶೂರರಾದ ರಾಜರನ್ನೂ ಆಹ್ವಾನಿಸಿದನು.

ಬ್ರಹ್ಮಾಚ ವಿಷ್ಣುನಾ ಸಾರ್ಧಂ ಆಹೂತಸ್ತೇನ ಧೀಮತಾ ।
ದೇವಾನ್ ಸರ್ವಾಂಶ್ಚ ಭಾಗಾರ್ಥಮಾಹೂತಾನ್ ಪದ್ಮಸಂಭವಃ ॥ ೧೨ ॥

ದೃಷ್ಟ್ವಾ ಶಿವೇನ ರಹಿತಾನ್ ದಕ್ಷಂ ಪ್ರತ್ಯೇವ ಮಬ್ರವೀತ್ ।

ಬ್ರಹ್ಮೋವಾಚ ।

ಅಹೋ ದಕ್ಷ ಮಹಾಮೂಢ ದುರ್ಬುದ್ಧೇ ಕಿಂ ಕೃತಂ ತ್ವಯಾ ।
ದೇವಾಃ ಸರ್ವೇ ಸಮಾಹೂತಾಃ ಶಂಕರೇಣ ವಿನಾ ಕಥಂ ॥ ೧೩ ॥

ಅಂತರ್ಯಾಮೀ ಸ ವಿಶ್ವೇಶಃ ಸರ್ವೇಷಾಮೇವ ದೇಹಿನಾಂ ।
ಭೋಕ್ತಾ ಸ ಸರ್ವಯಜ್ಞಾನಾಂ ಶಂಕರಃ ಪರಮಾರ್ಥತಃ ॥ ೧೪ ॥

ಏತೇಚ ಮುನಯಸ್ಸರ್ವೇ ತವ ಸಾಹಾಯ್ಯಕಾರಿಣಃ ।
ನ ಜಾನಂತಿ ಪರಂ ಭಾವಂ ಮಹಾದೇವಸ್ಯ ಶೂಲಿನಃ ॥ ೧೫ ॥

---

೧೨. ಬ್ರಹ್ಮ, ಮತ್ತು ವಿಷ್ಣು ಇವರನ್ನೂ ಬರಮಾಡಿದನು. ಆಗ ಬ್ರಹ್ಮನು ಮೊದಲು ಯಜ್ಞಭಾಗಕ್ಕಾಗಿ ಬಂದಿದ್ದ ಸಮಸ್ತ ದೇವತೆಗಳನ್ನೂ ನೋಡಿ, ಶಿವನಿಲ್ಲ ದಿರುವುದನ್ನು ಕಂಡು, ದಕ್ಷಬ್ರಹ್ಮನನ್ನು ಕುರಿತು ಹೀಗೆ ಪ್ರಶ್ನಿಸಿದನು.

೧೩. ಎಲೈ ಮೂಢನಾದ ದಕ್ಷನೇ, ನಿನಗೆ ಎಂಥ ದುರ್ಬುದ್ಧಿ ಬಂದಿತು. ಶಂಕರನನ್ನು ನೀನು ಏಕೆ ಕರೆಸಲಿಲ್ಲ ? ಶಂಭುನಿಲ್ಲದೆ ಸಕಲದೇವತೆಗಳೂ ಒಂದೆಡೆ ಯಲ್ಲಿ ನಿಲ್ಲಲು ಸಾಧ್ಯವೇ ?

೧೪. ಆ ಶಂಕರನು ಸರ್ವವ್ಯಾಪಿಯು. ಎಲ್ಲರ ಹೃದಯದಲ್ಲೂ ಅಡಗಿರುವ ವನು. ಸಮಸ್ತ ಯಜ್ಞಭಾಗಗಳಿಗೂ ಅವನೇ ಭೋಕ್ತೃವು. ಇಷ್ಟಿರುವಾಗ ಶಂಕರ ನಿಲ್ಲದೆ ಹೇಗೆ ಯಜ್ಞವಾದೀತು ?

೧೫. ಈಗ ನಿನ್ನ ಸಹಾಯಕ್ಕಾಗಿ ಬಂದಿರುವ ಈ ಮಹರ್ಷಿಗಳೂ ಸಹ ಆ ಮಹಾದೇವನಾದ ಪರಮೇಶ್ವರನ ಮಹಿಮೆಯನ್ನು ತಿಳಿಯರು.

ಏತೇ ಚ ದೇವಾಶ್ಶಕ್ರಾದ್ಯಾಃ ಆಗತಾ ಯಜ್ಞಭಾಗಿನಃ ।
ತನ್ಮಾಯಯಾಮೋಹಿತಾಸ್ಸರ್ವೇ ನ ಜಾನಂತಿ ಪಿನಾಕಿನಂ ॥ ೧೬ ॥

ಯಸ್ಯ ಪಾದರಜಃಸ್ಪರ್ಶಾದ್ಬ್ರಹ್ಮತ್ವಂ ಪ್ರಾಪ್ತವಾನಹಂ ।
ಶಾರ್ಙ್ಗಿಣಾಪಿ ಸದಾ ಮೂರ್ಧ್ನಾ ಧಾರ್ಯತೇ ಕಃ ಶಿವಾತ್ಪರಃ ॥ ೧೭ ॥

ಯಸ್ಯ ವಾಮಾಂಗಜೋ ವಿಷ್ಣು ರ್ದಕ್ಷಿಣಾಂಗಾದ್ಭವಾಮ್ಯಹಂ ।
ಯಸ್ಯಾಜ್ಞಯಾಽಖಿಲಂ ವಿಶ್ವಂ ಸೂರ್ಯೋಭ್ರಮತಿ ಸರ್ವದಾ ॥ ೧೮ ॥

ಚಂದ್ರಶ್ಚ ತಾರಕಾಶ್ಚೈವ ಗ್ರಹಾಶ್ಚ ಭುವನಾನಿ ಚ ।
ಧರ್ಮಾಧರ್ಮವ್ಯವಸ್ಥಾ ಚ ವರ್ಣಾಶ್ಚೈವಾಶ್ರಮಾಣಿ ಚ ॥ ೧೯ ॥

ತಿಷ್ಠಂತಿ ಶಾಸನಾತ್ತಸ್ಯ ದೇವದೇವಸ್ಯ ಶೂಲಿನಃ ।
ಸಾ ಚ ಶಕ್ತಿಃ ಪರಾ ಗೌರೀ ಸ್ವೇಚ್ಛಾವಿಗ್ರಹಚಾರಿಣೀ ॥ ೨೦ ॥

---

೧೬. ಹವಿಸ್ಸಿಗಾಗಿ ಬಂದಿರುವ ಈ ಇಂದ್ರಾದಿ ದೇವತೆಗಳೂ ಸಹ ಈಶ್ವರನ ಮಾಯಾಮೋಹಿತರಾಗಿ ಈಶ್ವರನ ಸತ್ವವನ್ನೇ ಸರಿಯಾಗಿ ತಿಳಿದುಕೊಂಡಿಲ್ಲ.

೧೭. ಆ ಪರಮೇಶ್ವರನ ಪಾದಧೂಳಿಯನ್ನು ಸ್ಪರ್ಶಮಾಡಿಯೇ ನಾನು ಈಗ ಬ್ರಹ್ಮನಾಗಿರುವೆನು. ವಿಷ್ಣುವೂ ಸಹ ಈಗಲೂ ಪರಮೇಶ್ವರ ಪಾದರಜಸ್ಸನ್ನು ಶಿರಸ್ಸಿನಲ್ಲಿ ಧರಿಸಿ ಮಹಿಮನೆನಿಸಿಕೊಂಡಿರುವನು. ಆದ್ದರಿಂದ ಶಿವನಿಗಿಂತ ದೊಡ್ಡವರು ಮತ್ತಾರಿರುವರು?

೧೮. ಶಂಕರನ ಎಡಭಾಗದಿಂದ ವಿಷ್ಣುವೂ ಬಲಭಾಗದಿಂದ ನಾನೂ ಜನಿಸಿರುವೆವು. ಅವನ ಅಪ್ಪಣೆಯಿಂದಲೇ ಸೂರ್ಯನು ಇಂದೂ ಜಗತ್ತನ್ನು ಸುತ್ತುತ್ತಿರುವನು.

೧೯-೨೦. ಚಂದ್ರನೂ, ನಕ್ಷತ್ರಗಳೂ, ಸಮಸ್ತಗ್ರಹಗಳೂ, ಸಮಸ್ತ ಲೋಕವೂ, ಧರ್ಮಾಧರ್ಮಗಳೂ, ವರ್ಣಾಶ್ರಮತತ್ತ್ವಗಳೂ ಆ ದೇವದೇವನಾದ ಪರಮೇಶ್ವರನ ಅಪ್ಪಣೆಯಿಂದಲೇ ನಡೆಯುತ್ತಿವೆ. ಶಿವನ ಪತ್ನಿಯಾದ ಗೌರೀ ದೇವಿಯಾದರೋ, ಶಕ್ತಿರೂಪಿಣಿಯು. ಸ್ವತಂತ್ರವಾಗಿ ಇಷ್ಟಬಂದ ದೇಹದಿಂದ ಸಂಚರಿಸುವವಳು.

ತವ ಪುತ್ರೀತಿ ದುರ್ಬುದ್ಧೇ ಮನ್ಯಸೇ ತಮಸಾವೃತಃ ।
ಕಸ್ತಾಂ ಜಾನಾತಿ ವಿಶ್ವೇಶೀಂ ಈಶ್ವರಾರ್ಧಶರೀರಿಣೀಂ ॥ ೨೧ ॥

ಅಹಂ ನಾದ್ಯಾಪಿ ಜಾನಾಮಿ ಚಕ್ರೀ ಶಕ್ರಸ್ಯ ಕಾ ಕಥಾ ।
ಸ್ವೇಚ್ಛಾವಿಗ್ರಹರೂಪಿಣ್ಯಾ ಗೌರ್ಯಾಸಹ ಪಿನಾಕಧೃಕ್ ॥ ೨೨ ॥

ಭ್ರಾಮಯತ್ಯಖಿಲಂ ವಿಶ್ವಂ ಇತಿ ಸತ್ಯಂ ನ ಸಂಶಯಃ ।
ಸ ಏವ ಬಧ್ನಾತಿ ಪಶೂನ್ ಅಸ್ಮದಾದೀನ್ಮಹೇಶ್ವರಃ ॥ ೨೩ ॥

ಸ ಏವ ಮೋಚಕೋ ದೇವಃ ಪಶೂನಾಂ ನ ಇತಿ ಶ್ರುತಿಃ।
ನಾಮಸಂಕೀರ್ತನಾದ್ಯಸ್ಯ ಭಿದ್ಯತೇ ಪಾಪಪಂಜರಂ ॥ ೨೪ ॥

ಕಥಂ ನ ಪೂಜ್ಯತೇ ದೇವಸ್ತ್ವಯಾ ದಕ್ಷ ಸುದುರ್ಮತೇ ।
ಶಂಭೋರವಜ್ಞಾ ಯತ್ರಾಽಽಸ್ತೇ ಸ್ಥಾತವ್ಯಂ ನೈವ ಸೂರಿಭಿಃ ॥ ೨೫ ॥
ಇತ್ಯುಕ್ತ್ವಾ ಪ್ರಯಯೌ ಬ್ರಹ್ಮಾ ಸ್ತೂಯಮಾನೋ ಮಹರ್ಷಿಭಿಃ ॥ ೨೬ ॥

---

೨೧. ಓ ದಕ್ಷಬ್ರಹ್ಮನೇ! ಆ ಗೌರೀದೇವಿಯನ್ನು ನಿನ್ನ ಮಗಳೆಂದು ತಿಳಿದಿದ್ದೀಯೆ. ಇದು ನಿನ್ನ ಭ್ರಾಂತಿ. ಈಶ್ವರನ ಅರ್ಧಾಂಗಿಯಾದ ಲೋಕಮಾತೆಯನ್ನು ಯಾರು ತಾನೆ ಸರಿಯಾಗಿ ಅರಿಯಬಲ್ಲರು?

೨೨. ಆ ಗೌರಿಯ ಮಹಿಮೆಯು ನನಗೂ ಸಹ ಇನ್ನೂ ತಿಳಿದಿಲ್ಲ. ಇನ್ನು ಇಂದ್ರ, ವಿಷ್ಣು ಇವರು ತಿಳಿಯುವುದು ಹೇಗೆ? ಇಂತಹ ಸ್ವೇಚ್ಛಾರೂಪಿಣಿಯಾದ ದೇವಿಯೊಡನೆ ಈಶ್ವರನು,

೨೩. ಸಮಸ್ತ ಲೋಕವನ್ನೂ ನಡೆಸುತ್ತಾನೆ. ಇದು ಸುಳ್ಳಲ್ಲ. ಪ್ರಪಂಚದ ಸಮಸ್ತ ಪ್ರಾಣಿಗಳನ್ನೂ, ಹೆಚ್ಚೇನು, ನಮ್ಮನ್ನೂ ಸಹ ಮಾಯೆಯಿಂದ ಬಂಧಿಸುವನು.

೨೪. ಪಶುಗಳನ್ನು ಮತ್ತು ನಮ್ಮನ್ನು ಮಾಯೆಯಿಂದ ಬಿಡಿಸಿ ರಕ್ಷಿಸುವವನೂ ಅವನೇ. ಅವನ ನಾಮಸ್ಮರಣೆಯಿಂದ ನಮ್ಮ ಪಾಪವೆಲ್ಲವೂ ಪರಿಹಾರವಾಗುವುವು.

೨೫–೨೬. ಹೀಗಿರುವಾಗ ಎಲೈ ದಕ್ಷನೇ! ನೀನು ಅಂಥ ಪರಮಾತ್ಮನನ್ನು ತಿರಸ್ಕರಿಸುತ್ತಿರುವೆಯಲ್ಲಾ! ಇದು ನ್ಯಾಯವಲ್ಲ. ಅಲ್ಲದೆ ಎಲ್ಲಿ ಪರಶಿವನಿಗೆ ಪುರಸ್ಕಾರವಿಲ್ಲವೋ ಅಲ್ಲಿ ಜ್ಞಾನಿಗಳು ಇರಬಾರದು" ಎಂದು ಹೇಳಿ ಬ್ರಹ್ಮನು ಆ ಸಭೆಯಿಂದ ಎದ್ದು ಹೊರಟುಹೋದನು.

॥ ಸೂತ ಉವಾಚ ॥

ಗತೇ ಚತುರ್ಮುಖೇ ದೇವೇ ಸರ್ವಲೋಕಪಿತಾಮಹೇ ।
ದಧೀಚಿರಬ್ರವೀದ್ದಕ್ಷಂ ಮುನೀನಾಮಗ್ರಣೀಃ ಸ್ವಯಂ ॥ ೨೭ ॥

॥ ದಧೀಚಿ ರುವಾಚ ॥

ಕಥಂ ದೇವಾಧಿದೇವೇಶಃ ಕರ್ಮಸಾಕ್ಷೀ ಸನಾತನಃ ।
ವಿಶ್ವೇಶ್ವರೋ ಮಹಾದೇವಸ್ತ್ವಯಾ ದಕ್ಷ ನ ಪೂಜ್ಯತೇ ॥ ೨೮ ॥

ವಾಚಕಃ ಪ್ರಣವೋ ಯಸ್ಯ ಜ್ಞಾನಮೂರ್ತೇರುಮಾಪತೇಃ ।
ಅನುಗ್ರಹಂ ವಿನಾ ತಸ್ಯ ಕಥಂ ಜಾನಾತಿ ಶೂಲಿನಂ ॥ ೨೯ ॥

ಏಕ ಏವೇತಿ ಯೋ ರುದ್ರಃ ಸರ್ವವೇದೇಷು ಗೀಯತೇ ।
ತಸ್ಯ ಪ್ರಸಾದಲೇಶೇನ ಮುಕ್ತಿರ್ಭವತಿ ಕಿಂಕರೀ ॥ ೩೦ ॥

---

೨೭. ಹೀಗೆ ಬ್ರಹ್ಮನು ಎದ್ದು ಹೊರಟುಹೋಗಲು, ದಧೀಚಿಮಹರ್ಷಿಯು ಬಂದು ದಕ್ಷಬ್ರಹ್ಮನಿಗೆ ಕೆಲವು ಹಿತೋಕ್ತಿಗಳನ್ನು ಬೋಧಿಸಿದನು.

೨೮. "ಎಲೈ ದಕ್ಷಬ್ರಹ್ಮನೇ ಪರಮೇಶ್ವರನು ದೇವಾದಿದೇವನು. ಆದ್ಯಂತರಹಿತನು. ಸಮಸ್ತ ಕರ್ಮಗಳಿಗೂ ಸಾಕ್ಷಿಯಂತೆ ಎದುರಿಗಿರುವವನು. ವಿಶ್ವರಕ್ಷಕನು. ಇಂತಹವನನ್ನು ನೀನು ಏಕೆ ಸತ್ಕರಿಸುವುದಿಲ್ಲ. ?

೨೯. ಸರ್ವಮಂತ್ರಗಳಿಗೂ ಪ್ರಣವವು ಹೇಗೆ ಮೊದಲಿನದೊ, ಹಾಗೆ ಸರ್ವಕರ್ಮಗಳಿಗೂ ಸಾಕ್ಷಾದುಮಾಪತಿಯಾದ ಈಶ್ವರನ ಅನುಗ್ರಹವೇ ಶ್ರೇಷ್ಠವಾದದ್ದು. ಆ ಪರಮೇಶ್ವರನ ಅನುಗ್ರಹವಿಲ್ಲದಿದ್ದರೆ ಅವನ ಮಹಿಮೆಯು ನಮಗೆ ತಿಳಿಯಲಾರದು.

೩೦. ಸರ್ವ ವೇದಗಳೂ, "ರುದ್ರನೊಬ್ಬನೇ ದೇವನು. ಅವನ ಪ್ರಸಾದದಿಂದಲೇ ಮೋಕ್ಷವು ಲಭಿಸುವುದು. ಅವನಿಗೆ ಮೋಕ್ಷವೆಂಬುದು ಸೇವಕನಂತೆ ವರ್ತಿಸುತ್ತಿದೆ" ಯೆಂದು ಕೂಗಿಕೊಳ್ಳುತ್ತಿವೆ.

ಪ್ರಸಂಗಾತ್ಕೌತುಕಾಲ್ಲೋಭಾದ್ಭಯಾದಜ್ಞಾನತೋಪಿ ವಾ ।
ಹರ ಇತ್ಯುಚ್ಚರನ್ ಮರ್ತ್ಯಃ ಸರ್ವಪಾಪೈಃ ಪ್ರಮುಚ್ಯತೇ ॥ ೩೧ ॥

ಅಹೋ ದಕ್ಷ ತವಾಜ್ಞಾನಂ ತವ ನಾಶಸ್ಯ ಕಾರಣಂ ।
ಕೇನಾಪಿ ಹೇತುನಾ ಜಾತ ಮಿತಿ ಮೇ ಭಾತಿ ನಿಶ್ಚಿತಂ ॥ ೩೨ ॥

ಏವಂ ದಧೀಚೇರ್ವಚನಂ ಶ್ರುತ್ವಾ ದಕ್ಷೋ ವಿಚಕ್ಷಣಃ ।
ದಧೀಚಿಮಬ್ರವೀದ್ವಿಪ್ರಾಃ ಶಕ್ರಾದೀನಾಂ ಚ ಸನ್ನಿಧೌ ॥ ೩೩ ॥

॥ ದಕ್ಷ ಉವಾಚ ॥

ನಾಹಂ ನಾರಾಯಣಾದ್ದೇವಾತ್ಪಶ್ಯಾಮ್ಯನ್ಯಂ ದ್ವಿಜೋತ್ತಮ ।
ಕಾರಣಂ ಸರ್ವವಸ್ತೂನಾಂ ನಾಸ್ತೀತ್ಯೇವ ಸುನಿಶ್ಚಿತಂ ॥ ೩೪ ॥

---

೩೧. ಮನುಷ್ಯನು ತಿಳಿದೋ, ತಿಳಿಯದೆಯೋ, ಕಾಲಾನುಸಾರವಾಗಿಯೋ ಲೋಭ ಬುದ್ಧಿಯಿಂದಲೋ ಮತ್ತಾವ ಕಾರಣದಿಂದಲೋ ಹರನ ಹೆಸರನ್ನು ಸ್ಮರಿಸಿದರೆ ಸಾಕು. ಅವನು ಪಾಪಮುಕ್ತನಾಗುವನು.

೩೨. ದಕ್ಷನೇ, ನಿನ್ನ ಅಜ್ಞಾನವೇ ನಿನ್ನನ್ನು ನಾಶಮಾಡೀತು. ಯಾವುದೋ ಅನರ್ಥಕ್ಕಾಗಿ ನಿನಗೆ ಈ ಬುದ್ಧಿಯುಂಟಾಗಿದೆಯೆಂದು ನಾನು ತಿಳಿಯುತ್ತೇನೆ.''

೩೩. ಎಂದು ದಧೀಚಿಮಹರ್ಷಿಯು ಹೇಳಲಾಗಿ ಅದನ್ನು ಕೇಳಿದ ದಕ್ಷಬ್ರಹ್ಮನು ದಧೀಚಿಮಹರ್ಷಿಯನ್ನು ಕುರಿತು ಇಂದ್ರಾದಿ ದೇವತೆಗಳ ಎದುರಿನಲ್ಲಿಯೇ ಹೀಗೆ ನುಡಿದನು.

೩೪. "ಎಲೈ ದಧೀಚಿ ಮಹರ್ಷಿಯೇ, ನಾನು ಲೋಕದಲ್ಲಿ ವಿಷ್ಣುವಿಗಿಂತ ದೊಡ್ಡದೇವರು ಮತ್ತೊಬ್ಬರಿಲ್ಲವೆಂದು ನಂಬಿದ್ದೇನೆ. ಇದಕ್ಕೆ ಕಾರಣವನ್ನು ನಾನು ಕೊಡಲಾರೆ, ಏಕೆಂದರೆ ಲೋಕದಲ್ಲಿ ಸಮಸ್ತ ವಸ್ತುಗಳಿಗೂ ಕಾರಣವನ್ನು ಹೇಳಲು ಸಾಧ್ಯವಿಲ್ಲ" ಎಂದು ದಕ್ಷನು ಹೇಳಲಾಗಿ,

॥ ದಧೀಚಿರುವಾಚ ॥

ಉಮಯಾ ಸಹ ಯೋ ದೇವಃ ಸೋಮ ಇತ್ಯುಚ್ಯತೇ ಬುಧೈಃ ।
ಸ ಏವ ಕಾರಣಂ ನಾನ್ಯೋ ವಿಷ್ಣೋರಪಿ ಹಿ ವೈ ಶ್ರುತಿಃ ॥ ೩೫ ॥

ತಸ್ಮಾದ್ಯಸ್ಸರ್ವದೇವಾನಾಂ ಅಧಿಕಶ್ಚಂದ್ರಶೇಖರಃ ।
ಇಜ್ಯತೇ ಸರ್ವಯಜ್ಞೇಷು ಕಥಂ ದಕ್ಷ ನ ಪೂಜ್ಯತೇ ॥ ೩೬ ॥

ಯಜ್ಞಸ್ಯ ಪಾಲಕೋ ವಿಷ್ಣುರಿತಿ ಯನ್ನಿಶ್ಚಿತಂ ತ್ವಯಾ ।
ಭವಿಷ್ಯಂತ್ಯನ್ಯಥೈವಾಶು ಪಶ್ಯತಃ ಕಮಲಾಪತೇಃ ॥ ೩೭ ॥

ಏತೇ ಚ ಬ್ರಾಹ್ಮಣಾಃ ಸರ್ವೇ ಯೇ ದ್ವಿಷಂತಿ ಮಹೇಶ್ವರಂ ।
ಭವಂತು ವೇದಬಾಹ್ಯಾಸ್ತೇ ತಮೋಪಹತಚೇತಸಃ ॥ ೩೮ ॥

ಪಾಷಂಡಾಚಾರನಿರತಾಃ ಸರ್ವೇ ನಿರಯಗಾಮಿನಃ ।
ಕಲೌ ಯುಗೇತು ಸಂಪ್ರಾಪ್ತೇ ದರಿದ್ರಾಃ ಶೂದ್ರಯಾಜಕಾಃ ॥ ೩೯ ॥

---

೩೫. ಉಮೆಯೆಂದರೆ, ಪಾರ್ವತಿಯು. ಅವಳಿಂದ ಸಹಿತನಾದ ಪರಮೇಶ್ವರನಿಗೆ ಸೋಮನೆಂದು ಹೆಸರು. ಲೋಕದಲ್ಲಿ ಸಮಸ್ತವಸ್ತುಗಳಿಗೂ, ಸಾಕ್ಷಾದ್ವಿಷ್ಣುವಿಗೂ ಸಹ ಆ ಮಹೇಶ್ವರನೇ ಕಾರಣನೆಂಬುದನ್ನು ತಿಳಿ. ಇದನ್ನೇ ಸಮಸ್ತವೇದಗಳೂ ದೃಢಪಡಿಸುತ್ತವೆ. ಎಂದು ದಧೀಚಿಯು ಹೇಳುತ್ತಾ,

೩೬. "ಎಲೈ ದಕ್ಷನೇ,ಮಹೇಶ್ವರನೇ ದೇವಾದಿ ದೇವನೆಂದು ತಿಳಿದು ಸಮಸ್ತ ಯಾಗಗಳಲ್ಲಿಯೂ, ಹವಿರ್ಭಾಗಗಳು, ಅವನಿಗೆ ಸಲ್ಲುತ್ತಿವೆ. ಹೀಗಿರುವಾಗ ನೀನು ಮಾತ್ರ ಆ ಮಹೇಶ್ವರನನ್ನು ಏಕೆ ಪೂಜಿಸುವುದಿಲ್ಲ ?

೩೭. ಯಾಗರಕ್ಷಕನು ವಿಷ್ಣುವು ಎಂದು ನೀನು ನಂಬಿರುವೆಯಷ್ಟೆ. ಆ ವಿಷ್ಣುವಿನ ಎದುರಿನಲ್ಲಿಯೇ ಈ ನಿನ್ನ ನಂಬಿಕೆಯು ಸುಳ್ಳಾಗುವುದನ್ನು ಕಾಣುವೆ.

೩೮. ಈ ಬ್ರಾಹ್ಮಣರಲ್ಲಿ ಯಾರು ಶಿವನನ್ನು ದ್ವೇಷಿಸುವರೋ, ಅವರು ಅಜ್ಞಾನಿಗಳಾಗಿ ವೇದಬಾಹಿರರಾಗಲಿ.

೩೯. ಕಲಿಯುಗದಲ್ಲಿ ಈ ಬ್ರಾಹ್ಮಣರೆಲ್ಲರೂ ದುರಾಚಾರಗಳಲ್ಲಿ ನಿರತರಾಗಿ' ನರಕಭಾಗಿಗಳಾಗಲಿ. ಅಲ್ಲದೆ ಅನ್ನಾಹಾರಗಳಿಗೆ ಗತಿಯಿಲ್ಲದೆ ದರಿದ್ರರಾಗಿ, ಶೂದ್ರರಿಂದ ಯಜ್ಞಯಾಗಗಳನ್ನು ಮಾಡಿಸಿ ಜೀವಿಸಲಿ.

ಸರ್ವಸ್ಮಾದಧಿಕೋ ರುದ್ರಃ ಪಶುಪಾಶವಿಮೋಚಕಃ ।
ಪರಾಙ್ಮುಖಸ್ತು ಯುಷ್ಮಾಕಂ ಮಾಭೂದಿಜ್ಯಾಕರೀ ಗತಿಃ ॥ ೪೦ ॥

ಇತಿ ಶಪ್ತ್ವಾಯಯೌ ವಿಪ್ರೋ ದಧೀಚಿರ್ಮುನಿಪುಂಗವಃ ।
ಸ್ವಾಶ್ರಮಂ ಮುನಿಭಿರ್ಜುಷ್ಟಂ ಓಂಕಾರಂ ನರ್ಮದಾತಟೇ ॥ ೪೧ ॥

ಏತಸ್ಮಿನ್ನಂತರೇ ಗೌರೀ ಪರವ್ಯೋಮಾತ್ಮಿಕಾ ಶಿವಾ ।
ದಕ್ಷಯಜ್ಞಸ್ಯ ವೃತ್ತಾಂತಂ ಶ್ರುತ್ವಾ ದೇವಋಷೇರ್ಮುಖಾತ್ ॥ ೪೨ ॥

ಪ್ರಾಹ ವಿಶ್ವಾಧಿಕಂ ರುದ್ರಂ ಪ್ರಣತಾರ್ತಿಪ್ರಭಂಜನಂ ।
ನಿರೀಕ್ಷ್ಯಮಾಣಂ ದೇವೇಶೀ ಪರಾನಂದೈಕವಿಗ್ರಹಂ ॥ ೪೩ ॥

॥ ಶ್ರೀದೇವ್ಯುವಾಚ ॥

ಯೋಽಯಂ ಪ್ರಾಚೇತಸೋ ದಕ್ಷಃ ಪಿತಾ ಮೇ ಪೂರ್ವಜನ್ಮನಿ ।
ಆವಾಮವಜ್ಞಾಯ ಕಥಂ ಯಜ್ಞಂ ಕರ್ತುಂ ಪ್ರಚಕ್ರಮೇ ॥ ೪೪ ॥

---

೪೦. ಎಲ್ಲ ದೇವತೆಗಳಿಗೂ ದೊಡ್ಡವನಾದವನು ರುದ್ರನು, ಅವನೇ ಅಜ್ಞಾನಿಗಳನ್ನು ಬಂಧನದಿಂದ ತಪ್ಪಿಸಿ ಉದ್ಧರಿಸುವವನು. ಯಾವನು ಇಂಥ ಪರಶಿವನಿಗೆ ವಿರುದ್ಧವಾಗಿ ಆಚರಿಸುವನೋ ಅವನಿಗೆ ಯಾಗದ ಫಲವು ಸಿದ್ಧಿಸದೇ ಹೋಗಲಿ.

೪೧. ಹೀಗೆಂದು ದಧೀಚಿ ಋಷಿಯು ಶಪಿಸಿ, ಸಕಲಮುನಿಗಳಿಗೂ ಆಶ್ರಯನಾಗಿ, ನರ್ಮದಾತೀರದಲ್ಲಿರುವ, ತನ್ನ ಓಂಕಾರಾಶ್ರಮವನ್ನು ಕುರಿತು ಪ್ರಯಾಣ ಮಾಡಿದನು.

೪೨. ಅಷ್ಟರಲ್ಲಿ ಪರಾಪರಳಾದ ಗೌರೀ ದೇವಿಯು, ದೇವಋಷಿಗಳ ಮೂಲಕ ತನ್ನ ತಂದೆಯು ಯಾಗಮಾಡುವನೆಂಬ ವಿಷಯವನ್ನು ಕೇಳಿ ತಿಳಿದುಕೊಂಡಳು.

೪೩. ಅಲ್ಲಿಂದ ಭಕ್ತರ ದುರಿತಗಳನ್ನು ನಾಶಮಾಡುವವನೂ, ಆನಂದ ರೂಪಿಯೂ ಲೋಕಶ್ರೇಷ್ಠನೂ ಆದ ತನ್ನ ಪತಿಯ ಸಮೀಪಕ್ಕೆ ಹೋಗಿ ಪತಿಯನ್ನು ಕುರಿತು ಹೀಗೆಂದಳು.

೪೪. ದೇವದೇವನೇ ವರುಣವಂಶದವನಾದ ದಕ್ಷಬ್ರಹ್ಮನು ನನಗೆ ಪೂರ್ವಜನ್ಮದ ತಂದೆಯು. ಅಂಥವನು ಈಗ ನಮ್ಮಿಬ್ಬರನ್ನೂ ತಿರಸ್ಕರಿಸಿ ಹೇಗೆ ಯಾಗವನ್ನು ಆರಂಭಿಸಿದ್ದಾನೆ. ?

ದೇವಾಸ್ಸರ್ವೇ ಸಮಾಹೂತಾ ವಿಷ್ಣುನಾ ಸಹ ಶಂಕರ ।
ಆದಿತ್ಯಾ ವಸವೋ ರುದ್ರಾಃ ಸಾಧ್ಯಾಶ್ಚೈವ ಮರುದ್ಗಣಾಃ ॥ ೪೫ ॥

ಋಷಯೋ ಮುನಯಃ ಸಿದ್ಧಾ ದೈತೇಯಾ ದಾನವಾಶ್ಚಯೇ ।
ರಾಜಾನಶ್ಚ ಮಹಾಭಾಗಾ ಗಂಧರ್ವಾಃ ಕಿನ್ನರಾಸ್ತಥಾ ॥ ೪೬ ॥

ಅವಜ್ಞಾಕಾರಿಣಸ್ತಸ್ಯ ಯಜ್ಞಂ ಶೀಘ್ರಂ ವಿನಾಶಯ ।
ತೇನ ಮೇ ಜಾಯತೇ ಪ್ರೀತಿ ರತುಲಾ ಭಕ್ತವತ್ಸಲ ॥ ೪೭ ॥

ಏವಂ ದೇವ್ಯಾ ವಚಃ ಶ್ರುತ್ವಾ ದೇವದೇವಃ ಪಿನಾಕಧೃಕ್ ।
ಅಸೃಜತ್ ತತ್‌ಕ್ಷಣಾಚ್ಛಂಭುರ್ವೀರಭದ್ರಂ ಮಹಾಬಲಂ ॥ ೪೮ ॥

ಸಹಸ್ರಸಿಂಹವದನಂ ಪ್ರಲಯಾಗ್ನಿಸಮಪ್ರಭಂ ।
ಸಹಸ್ರಬಾಹುಂ ಜಟಿಲಂ ದುಷ್ಟಾನಾಂ ಚ ಭಯಂಕರಂ ॥ ೪೯ ॥

---

೪೫. ಸಮಸ್ತ ದೇವತೆಗಳೂ, ವಿಷ್ಣುವೂ, ದ್ವಾದಶಾದಿತ್ಯರೂ, ಅಷ್ಟವಸುಗಳೂ, ಏಕಾದಶರುದ್ರರೂ, ಸಾಧ್ಯರೂ, ಸಿದ್ಧರೂ, ಇವರೆಲ್ಲರೂ ಅಲ್ಲಿಗೆ ಬಂದಿದ್ದಾರಂತೆ.

೪೬, ಸಮಸ್ತ ಋಷಿಗಳನ್ನೂ, ಮುನಿಜನರನ್ನೂ, ದೈತ್ಯದಾನವರನ್ನೂ ಶೂರರಾಜರುಗಳನ್ನೂ, ಗಂಧರ್ವಕಿನ್ನರರನ್ನೂ, ಯಾಗಕ್ಕೆ ಆಹ್ವಾನಿಸಿರುವನು.

೪೭. ನಮ್ಮನ್ನು ಮಾತ್ರ ತಿರಸ್ಕರಿಸುವನು. ಇಂಥ ದಕ್ಷನ ಯಜ್ಞವನ್ನು ಎಲೈ ಭಕ್ತವತ್ಸಲನಾದ ಶಂಕರನೇ! ಬೇಗ ನಾಶಮಾಡು. ಇದರಿಂದ ನನಗೆ ಹೆಚ್ಚಿನ ಸಂತೋಷವಾಗುವುದು.

೪೮. ಹೀಗೆಂದ ದೇವಿಯ ಮಾತುಗಳನ್ನು ಕೇಳಿದ ಪರಮೇಶ್ವರನು ಒಡನೆಯೇ ಮಹಾ ಪರಾಕ್ರಮಿಯಾದ ವೀರಭದ್ರನೆಂಬ ಒಂದು ವ್ಯಕ್ತಿಯನ್ನು ಸೃಷ್ಟಿಸಿದನು.

೪೯. ಆ ವೀರಭದ್ರನ ಆಕಾರವು ಪ್ರಲಯಕಾಲದ ಅಗ್ನಿಯಂತೇ ಭಯಂಕರವಾಗಿತ್ತು. ಅವನ ಮುಖವು ಸಹಸ್ರ ಸಿಂಹದ ಮುಖಗಳಂತೆ ಭಯಾನಕವಾಗಿತ್ತು. ಅವನಿಗೆ ಸಾವಿರ ತೋಳುಗಳಿದ್ದುವು. ಒಟ್ಟಿನಲ್ಲಿ ಅವನ ಸ್ವರೂಪವು ದುಷ್ಟರಿಗೆ ಭಯವನ್ನುಂಟುಮಾಡತಕ್ಕದ್ದಾಗಿತ್ತು.

ಭಕ್ತಾನಾಂ ವರದಂ ದೇವಂ ಸೂರ್ಯಸೋಮಾಗ್ನಿಲೋಚನಂ ।
ಉಮಾ ಕೋಪೋದ್ಭವಾ ದೇವೀ ಭದ್ರಕಾಲೀ ಭಯಂಕರೀ ॥ ೫೦ ॥

ಅನ್ಯಾಶ್ಚ ದೇವ್ಯೋ ರುದ್ರಾಶ್ಚ ಶತಶೋ ರೋಮಸಂಭವಾಃ ।
ಭದ್ರಕಾಳ್ಯಾ ಸಹ ತದಾ ವೀರಭದ್ರೋ ಮಹಾಬಲಃ ॥ ೫೧ ॥

ಪ್ರಹಿತೋ ದೇವದೇವೇನ ದಕ್ಷಯಜ್ಞಜಿಘಾಂಸಯಾ ।
ಗತ್ವಾ ಸ ಯಜ್ಞಂ ದಕ್ಷಸ್ಯ ಭಸ್ಮಸಾದಕರೋದ್ದ್ವಿಜಾಃ ॥ ೫೨ ॥

ದಕ್ಷಸ್ತದದ್ಭುತಂ ಕರ್ಮ ದೃಷ್ಟ್ವಾಽಥ ಭಯವಿಹ್ವಲಃ ।
ಗತಸ್ತಚ್ಛರಣಂ ಶೀಘ್ರಂ ವೀರಭದ್ರಸ್ಯ ಶೂಲಿನಃ ॥ ೫೩ ॥

ಉವಾಚ ವೀರಭದ್ರಸ್ತಂ ದಕ್ಷಂ ಪ್ರಾಚೇತಸಂ ದ್ವಿಜಾಃ ।
ತಸ್ಯ ಪಾಪವಿಮೋಕ್ಷಾಯ ಕಾರುಣ್ಯಾಮೃತವಾರಿಧಿಃ ॥ ೫೪ ॥

---

೫೦. ಶಿವಾನುಗ್ರಹದಿಂದ ಭಕ್ತರಿಗೆ ವರವನ್ನು ಕೊಡುವಶಕ್ತಿಯೂ ವೀರಭದ್ರನಿಗೆ ಬಂತು. ಸೂರ್ಯ, ಚಂದ್ರ, ಅಗ್ನಿ ಮೂವರೇ ಮೂರು ಕಣ್ಣುಗಳಾದರು. ಒಡನೆಯೇ ದೇವಿಯು,ತನ್ನ ಕೋಪಾವೇಶದಿಂದ ಭದ್ರಕಾಳಿಯೆಂಬ ಭಯಂಕರವ್ಯಕ್ತಿಯೊಂದನ್ನು ಸೃಷ್ಟಿಸಿದಳು

೫೧. ಹೀಗೆಯೇ ದೇವಿಯು ಅನೇಕ ದೇವಿಯರನ್ನೂ, ರುದ್ರನು ತನ್ನ ರೋಮಾಂಚಗಳಿಂದ ಅನೇಕ ರುದ್ರರನ್ನೂ ಸೃಷ್ಟಿಸಿದನು. ವೀರಭದ್ರನು ಭದ್ರಕಾಳಿಯೊಡನೆ ಕೂಡಿ,

೫೨. ಪರಮೇಶ್ವರನ ಅಪ್ಪಣೆಯಿಂದ ಹೊರಟು ದಕ್ಷಬ್ರಹ್ಮನ ಯಜ್ಞಮಂಟಪವನ್ನು ಪ್ರವೇಶಿಸಿ, ಆ ಯಾಗವನ್ನೆಲ್ಲಾ ನಾಶಮಾಡಿ, ಆ ಮಂಟಪವನ್ನು ಸುಟ್ಟುಬೂದಿಯನ್ನಾಗಿ ಮಾಡಿದನು.

೫೩. ಈ ವೀರಭದ್ರನ ವೀರಕಾರ್ಯವನ್ನು ದಕ್ಷನು ನೋಡಿ ಭಯಚಕಿತನಾಗಿ ಒಡನೆಯೇ ಆ ವೀರಭದ್ರನನ್ನೇ ಮೊರೆಹೊಕ್ಕನು.

೫೪. ಆಗ ವೀರಭದ್ರನು ಕರುಣಾತ್ಮನಾಗಿ ತನ್ನ ಮೊರೆಹೊಕ್ಕಿರುವ ದಕ್ಷಬ್ರಹ್ಮನನ್ನು ಕುರಿತು, ಆತನು ಶಿವದ್ವೇಷದಿಂದ ಪಡೆದ ಪಾಪವನ್ನು ಕಳೆದುಕೊಳ್ಳಲು ಕೆಲವು ಉಪಾಯಮಾರ್ಗಗಳನ್ನು ಬೋಧಿಸಿದನು.

॥ ವೀರಭದ್ರ ಉವಾಚ ॥

ಗಚ್ಛ ವಾರಾಣಸೀಂ ದಕ್ಷ ಸರ್ವಪಾಪಪ್ರಣಾಶನೀಂ ।
ಅನುಗ್ರಹಾರ್ಥಂ ಲೋಕಾನಾಂ ಯತ್ರ ತಿಷ್ಠತಿ ಶಂಕರಃ ॥ ೫೫ ॥

ಅನುಗ್ರಹಾದ್ಭಗವತೋ ದೇವದೇವಸ್ಯ ಶೂಲಿನಃ ।
ಅನೇನೈವ ಶರೀರೇಣ ತತ್ರ ಮೋಕ್ಷಂ ಗಮಿಷ್ಯಸಿ ॥ ೫೬ ॥

॥ ಸೂತ ಉವಾಚ ॥

ವೀರಭದ್ರಸ್ಯ ವಚನಂ ಶ್ರುತ್ವಾ ದಕ್ಷೋ ಮಹಾಮತಿಃ ।
ಗತ್ವಾ ವಾರಾಣಸೀಂ ಶೀಘ್ರಂ ಸರ್ವಸಂಗವಿವರ್ಜಿತಃ ॥ ೫೭ ॥

ಪ್ರತಿಷ್ಠಾಪ್ಯ ಮಹಾಲಿಂಗಂ ಗಂಗಾತೀರೇ ಮನೋರಮೇ ।
ಆರಾಧ್ಯ ಪರಯಾ ಭಕ್ತ್ಯಾ ತಸ್ಮಿಲ್ಲಿಂಗೇ ಲಯಂ ಗತಃ ॥ ೫೮ ॥

---

೫೫. ಅಯ್ಯಾ ದಕ್ಷನೇ, ನೀನು ಈಗ ಸರ್ವಪಾಪಗಳನ್ನೂ ನಿವಾರಣೆ ಮಾಡುವ ಕಾಶೀನಗರಕ್ಕೆ ಪ್ರಯಾಣಬೆಳಸು. ಅಲ್ಲಿ ಪರಮೇಶ್ವರನು ಲೋಕರಕ್ಷಣೆಗಾಗಿ ಸರ್ವದಾ ನೆಲಸಿರುವನು.

೫೬. ನೀನು ಅಲ್ಲಿ ಪರಮೇಶ್ವರನನ್ನು ಆರಾಧಿಸಿ, ಆತನ ಅನುಗ್ರಹಕ್ಕೆ ಪಾತ್ರನಾಗು. ಅದರಿಂದ ನೀನು ಸಶರೀರನಾಗಿ ಮೋಕ್ಷವನ್ನು ಪಡೆಯುವೆ, ಎಂದು ವೀರಭದ್ರನು ದಕ್ಷಬ್ರಹ್ಮನಿಗೆ ಹಿತವಾದಗಳನ್ನು ಬೋಧಿಸಿ ಹೊರಟುಹೋದಮೇಲೆ,

೫೭. ದಕ್ಷಬ್ರಹ್ಮನು ವೀರಭದ್ರನ ಮಾತಿನಂತೆಯೇ ಕಾಶಿಗೆ ಹೋಗಿ, ಅಲ್ಲಿ ಸರ್ವ ಸಂಗಗಳನ್ನೂ ಪರಿತ್ಯಜಿಸಿ ಶಿವಾರಾಧನೆಯಲ್ಲಿಯೇ ನಿಂತನು.

೫೮. ಮತ್ತು ಗಂಗಾನದಿಯ ತೀರದಲ್ಲಿಯೇ, ಒಂದು ದೊಡ್ಡ ಶಿವಲಿಂಗವನ್ನು ವಿಧಿವತ್ತಾಗಿ ಪ್ರತಿಷ್ಠೆಮಾಡಿ, ಅದನ್ನು ಭಕ್ತಿಯಿಂದ ಅರ್ಚಿಸಿ, ಕೊನೆಗೆ ಆ ಲಿಂಗದಲ್ಲಿಯೇ ಲೀನನಾದನು.

ದಕ್ಷೇಶ್ವರಸ್ಯ ಮಾಹಾತ್ಮ್ಯಂ ಕಥಿತಂ ಮುನಿಪುಂಗವಾಃ ।
ತ್ರಿಲೋಚನಸ್ಯ ಮಾಹಾತ್ಮ್ಯಂ ಸಾಂಪ್ರತಂ ವರ್ಣ್ಯತೇ ಮಯಾ ॥ ೫೯ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ದಕ್ಷೇಶ್ವರ ಮಾಹಾತ್ಮ್ಯಾದಿ ಕಥನಂ ನಾಮ ಸಪ್ತಮೋಽಧ್ಯಾಯಃ

---

೫೯. ಎಲೈ ಶೌನಕಾದಿಗಳೇ ನಿಮಗೆ ಇಲ್ಲಿನವರೆಗೂ ದಕ್ಷೇಶ್ವರನ ಮಹಿಮೆಯನ್ನು ವಿವರಿಸಿರುವೆನು. ಮುಂದೆ ತ್ರಿಲೋಚನೇಶ್ವರನ ಪ್ರಭಾವವನ್ನು ಹೇಳತೊಡಗುವೆನು. ಲಾಲಿಸಿರಿ, ಎಂದು ಸೂತಮಹರ್ಷಿಯು ಶೌನಕಾದಿಗಳಿಗೆ ಹೇಳಿದನೆಂಬಲ್ಲಿಗೆ,

ಬ್ರಹ್ಮಪುರಾಣೋಪಪುರಾಣವಾದ ಸೌರದಲ್ಲಿ ಸೂತಶೌನಕ ಸಂವಾದ
ರೂಪವಾಗಿ ದಕ್ಷೇಶ್ವರ ಮಹಿಮೆಯನ್ನು ವಿವರಿಸುವ
ಏಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ಅಷ್ಟಮೋಽಧ್ಯಾಯಃ ॥

॥ ಸೂತ ಉವಾಚ ॥

ತ್ರಿಲೋಚನಾತ್ಪರಂ ಲಿಂಗಂ ವಾರಾಣಸ್ಯಾಂ ನ ದೃಶ್ಯತೇ ।
ಸದಾ ಸನ್ನಿಹಿತೋ ನಿತ್ಯಂ ಯಸ್ಮಿಲ್ಲಿಂಗೇ ಶಿವಃ ಸ್ಥಿತಃ ॥ ೧ ॥

ಯಾನಿ ಸ್ಥಿತಾನಿ ಲಿಂಗಾನಿ ವಾರಾಣಸ್ಯಾಂ ದ್ವಿಜೋತ್ತಮಾಃ ।
ದೃಷ್ಟಾನ್ಯೇವ ಭವಂತ್ಯೇವ ದೃಷ್ಟೇ ಲಿಂಗೇ ತ್ರಿಲೋಚನೇ ॥ ೨ ॥

ಅಸಂಖ್ಯಾತಾನಿ ಪಾಪಾನಿ ಜ್ಞಾನತೋಽಜ್ಞಾನತೋಽಪಿ ವಾ ।
ಕೃತಾನಿ ನಾಶಯತ್ಯೇವ ದೇವದೇವ ಸ್ತ್ರಿಲೋಚನಃ ॥ ೩ ॥

ಮಾಯಾಪಾಶೇನ ಬದ್ಧಾನಾಂ ಸರ್ವೇಷಾಂ ಪ್ರಾಣಿನಾಮಪಿ ।
ಮುಕ್ತಿಂ ದದಾತಿ ಪರಮಾಂ ದೇವದೇವ ಸ್ತ್ರಿಲೋಚನಃ ॥ ೪ ॥

ಎಂಟನೆಯ ಅಧ್ಯಾಯವು.

೧. ಕಾಶೀಕ್ಷೇತ್ರದಲ್ಲಿ ತ್ರಿಲೋಚನಲಿಂಗವೆಂಬ ಒಂದು ಶಿವಲಿಂಗವುಂಟು. ಅದು ಉತ್ತಮೋತ್ತಮವಾದ ಲಿಂಗ. ಏಕೆಂದರೆ ಅದರಲ್ಲಿ ಯಾವಾಗಲೂ ಶಿವನ ಸಾನ್ನಿಧ್ಯವಿರುತ್ತದೆ.

೨. ಆ ತ್ರಿಲೋಚನ ಲಿಂಗದ ದರ್ಶನಮಾತ್ರದಿಂದ ಕಾಶೀಕ್ಷೇತ್ರದಲ್ಲಿರುವ ಸಮಸ್ತಲಿಂಗಗಳ ದರ್ಶನಫಲವನ್ನೆಲ್ಲಾ ಸುಲಭವಾಗಿ ಪಡೆಯಬಹುದು.

೩. ತಿಳಿದೋ, ತಿಳಿಯದೆಯೋ, ಮಾಡಿದ, ಲೆಕ್ಕವಿಲ್ಲದಷ್ಟು ಪಾಪರಾಶಿಗಳನ್ನೂ, ಈ ತ್ರಿಲೋಚನಸ್ವಾಮಿಯು ನಿವಾರಣೆಮಾಡಲು ಶಕ್ತಿಯುಳ್ಳವನು.

೪. ತ್ರಿಲೋಚನೇಶ್ವರನು, ಮಾಯಾಪಾಶದಲ್ಲಿ ಸಿಲುಕಿ ನರಳುತ್ತಿರುವ ಸಕಲ ಪ್ರಾಣಿವರ್ಗಗಳಿಗೂ ಮೋಕ್ಷವನ್ನಿತ್ತು ಅನುಗ್ರಹಿಸುವನು.

ಪಶ್ಚಿಮಾಭಿಮುಖಂ ಲಿಂಗಂ ಸರ್ಪಮೇಖಲಮಂಡಿತಂ ।
ತಸ್ಯದರ್ಶನಮಾತ್ರೇಣ ಕೋಟಿಲಿಂಗಾರ್ಚನಂ ಫಲಂ ॥ ೫ ॥

ತ್ರಿಲೋಚನಂ ಸುಸಂಪೂಜ್ಯ ಕೃಷ್ಣದ್ವೈಪಾಯನೋ ಮುನಿಃ ।
ಯಯೌ ಕಾಮೇಶ್ವರಂ ದ್ರಷ್ಟುಂ ಸಿದ್ಧಲಿಂಗಮನುತ್ತಮಂ ॥ ೬ ॥

ದದೌ ದುರ್ವಾಸಸೇ ಯತ್ರ ದೇವದೇವೋ ಮಹೇಶ್ವರಃ ।
ಪ್ರಸನ್ನೋ ವಿವಿಧಾಃ ಸಿದ್ಧೀಃ ಸರ್ವೇಷಾಮಪಿ ದುರ್ಲಭಾಃ ॥ ೭ ॥

ಅನ್ಯಶ್ಚಾಪಿ ವರೋ ದತ್ತೋ ದೇವದೇವೇನ ಶೂಲಿನಾ ।
ಕೃತಾನಾಂ ಕ್ರಿಯಮಾಣಾನಾಂ ಸರ್ವೇಷಾಂ ತಪಸಾಮಪಿ ॥ ೮ ॥

ಕ್ರೋಧೋ ನಾಶಕರಃ ಪ್ರೋಕ್ತೋ ಹ್ಯನ್ಯಥೈವ ಮುನೇ ಸ್ತುತೇ ।
ತಸ್ಯ ದಕ್ಷಿಣದಿಗ್ಭಾಗೇ ಕಾಮಕುಂಡಮಿತಿ ಸ್ಮೃತಂ ॥ ೯ ॥

---

೫. ಆ ಲಿಂಗವು ಪಶ್ಚಿಮಾಭಿಮುಖವಾಗಿದೆ. ಸರ್ಪಾಭರಣವು ಆ ಲಿಂಗವನ್ನು ಅಲಂಕರಿಸಿದೆ. ಇಂಥ ಲಿಂಗದ ಅರ್ಚನೆಯು, ಅಥವಾ ದರ್ಶನವು, ಕೋಟಿ ಲಿಂಗಗಳ ಅರ್ಚನಾಫಲವನ್ನು ಕೊಡುವುದು.

೬. ವ್ಯಾಸಮಹರ್ಷಿಯು ಈ ತ್ರಿಲೋಚನ ಲಿಂಗವನ್ನು ಆರಾಧಿಸಿ, ಅಲ್ಲಿಂದ ಮುಂದೆ, ಸಿದ್ಧಲಿಂಗವಾದ ಕಾಮೇಶ್ವರನನ್ನು ದರ್ಶನಮಾಡಲು ತೆರಳಿದನು.

೭. ಆ ಕಾಮೇಶ್ವರಲಿಂಗವು ಹಿಂದೆ ದುರ್ವಾಸಋಷಿಗೆ, ಎಲ್ಲರಿಗೂ ಸುಲಭವಾಗಿ ದೊರೆಯಲಾರದಂತಹ ಅನೇಕ ಸಿದ್ಧಿಗಳನ್ನು ದಯಪಾಲಿಸಿತ್ತು.

೮-೯. ಅಲ್ಲದೆ ದುರ್ವಾಸಋಷಿಗೆ ಮತ್ತೊಂದು ವರವನ್ನೂ ಅನುಗ್ರಹಿಸಿದೆ. ಅದೇನೆಂದರೆ, ಈ ಕಾಮೇಶ್ವರ ಲಿಂಗದ ಅರ್ಚನೆಯಿಂದ, ಅವನಲ್ಲಿದ್ದ ಸಹಜವಾದ ಕೋಪವು ನಿವಾರಣೆಯಾಯಿತು. ಆ ಕೋಪದ ಪರಿಣಾಮವು ಆ ಋಷಿಯು ಅಲ್ಲಿನ ವರೆಗೆ ಮಾಡಿದ್ದ ತಪಸ್ಸುಗಳ ಫಲವನ್ನೆಲ್ಲಾ ನಾಶಮಾಡಿತ್ತು. ಅಂದಿನಿಂದ ಆತನ ಕೋಪವು ಶಾಂತವಾಗಿ ತಪಃ ಫಲವು ಆತನಿಗೆ ಉಳಿಯಿತು. ಆ ಕಾಮೇಶ್ವರ ಲಿಂಗದ ದಕ್ಷಿಣ ಭಾಗದಲ್ಲಿ ಕಾಮಕುಂಡವೆಂಬ ಮತ್ತೊಂದು ಕೊಳವಿದೆ.

ತತ್ರ ಸ್ನಾತ್ವಾ ನರೋ ಭಕ್ತ್ಯಾ ದೃಷ್ಟ್ವಾ ಕಾಮೇಶ್ವರಂ ಶಿವಂ ।
ಬ್ರಹ್ಮಹತ್ಯಾದಿಭಿಃ ಪಾಪೈಃ ಮುಕ್ತೋ ಯಾತಿ ಪರಾಂಗತಿಂ ॥ ೧೦ ॥

ಅನ್ಯಾನ್ಯಪಿಚ ಲಿಂಗಾನಿ ವಾರಾಣಸ್ಯಾಂ ಸ್ಥಿತಾನ್ಯಪಿ ।
ಸಂಖ್ಯಾಮಪಿ ನ ಜಾನಾತಿ ತೇಷಾಂ ದೇವಶ್ಚತುರ್ಮುಖಃ ॥ ೧೧ ॥

ಕೋವಾ ವದತಿ ಮಾಹಾತ್ಮ್ಯಂ ಋತೇ ದೇವಾನ್ಮಹೇಶ್ವರಾತ್ ।
ನಂದೀಶ್ವರೋ ವಾ ಜಾನಾತಿ ಪ್ರಸಾದಾದ್ಗಿರಿಜಾಪತೇಃ ॥ ೧೨ ॥

ಅಥ ಸತ್ಯವತೀಸೂನು ರ್ದ್ರಷ್ಟುಂ ದೇವೀಂ ಶಿವಾಂ ಪರಾಂ ।
ವಿಶಾಲಾಕ್ಷೀಂ ದ್ವಿಜಶ್ರೇಷ್ಠಾ ಯತ್ರ ಸನ್ನಿಹಿತಾ ಶಿವಾ ॥ ೧೩ ॥

ತಾಂದೃಷ್ಟ್ವಾ ವಿಧಿವದ್ಭಕ್ತ್ಯಾ ಸಂಪೂಜ್ಯ ಚ ಮಹಾಮುನಿಃ ।
ಪರಾನಂದಾತ್ಮಿಕಾಂ ಗೌರೀಂ ಸ್ತುತಿಂ ಮತ್ವಾ ಚಕಾರ ಸಃ ॥ ೧೪ ॥

---

೧೦. ಅಲ್ಲಿ ಭಕ್ತನು ಸ್ನಾನಮಾಡಿ ಕಾಮೇಶ್ವರ ಲಿಂಗವನ್ನು ದರ್ಶನಮಾಡಿ ದರೆ ಬ್ರಹ್ಮಹತ್ಯೆಯೇ ಮೊದಲಾದ ಸಮಸ್ತ ಪಾಪಗಳನ್ನೂ ಕಳೆದುಕೊಂಡು ಕೊನೆಗೆ ಶಿವಸಾಯುಜ್ಯವನ್ನು ಹೊಂದುವನು.

೧೧. ವಾರಾಣಸೀ ಕ್ಷೇತ್ರದಲ್ಲಿ ಇನ್ನೂ ಎಷ್ಟೋ ಲಿಂಗಗಳು ಕಂಡುಬರುತ್ತವೆ. ಅವುಗಳ ಸಂಖ್ಯೆಯು ಬ್ರಹ್ಮನಿಗೂ ಸಹ ಗೊತ್ತಿಲ್ಲ.

೧೨. ಈ ಸಮಸ್ತ ಲಿಂಗಗಳ ಮಹಿಮೆಯನ್ನು ಹೇಳಲು ಸಾಕ್ಷಾತ್ಪರಮೇಶ್ವರ ನೊಬ್ಬನಿಂದಲೇ ಸಾಧ್ಯ. ಅಥವಾ ಅವನ ಅನುಗ್ರಹವನ್ನು ಪಡೆದಿರುವ ನಂದೀಶ್ವರ ನೊಬ್ಬನು ಹೇಳಬಲ್ಲನು.

೧೩. ಅನಂತರ ವ್ಯಾಸಮಹರ್ಷಿಯು ಜಗನ್ಮಾತೆಯಾದ ವಿಶಾಲಾಕ್ಷೀ ದೇವಿ ಯನ್ನು ದರ್ಶನಮಾಡಲು ಪ್ರಯಾಣಮಾಡಿದನು.

೧೪. ಅಲ್ಲಿ ಗೌರೀದೇವಿಯನ್ನು ದರ್ಶನಮಾಡಿ ಪರಾನಂದ ಸ್ವರೂಪಳಾದ ಪಾರ್ವತಿಯನ್ನು ಭಕ್ತಿಯಿಂದ ವಿಧವಿಧವಾಗಿ ಸ್ತುತಿಸಲಾರಂಭಿಸಿದನು.

॥ ವ್ಯಾಸ ಉವಾಚ ॥

ವಿಶಾಲಾಕ್ಷಿ ನಮಸ್ತುಭ್ಯಂ ಪರಬ್ರಹ್ಮಾತ್ಮಿಕೇ ಶಿವೇ ।
ತ್ವಮೇವ ಮಾತಾ ಸರ್ವೇಷಾಂ ಬ್ರಹ್ಮಾದೀನಾಂ ದಿವೌಕಸಾಂ ॥ ೧೫ ॥

ಇಚ್ಛಾಶಕ್ತಿ ಕ್ರಿಯಾಶಕ್ತಿಜ್ಞಾನಶಕ್ತಿಸ್ತ್ವಮೇವ ಹಿ ।
ಋಜ್ವೀ ಕುಂಡಲಿನೀ ಸೂಕ್ಷ್ಮಾ ಯೋಗಸಿದ್ಧಿಪ್ರದಾಯಿನೀ ॥ ೧೬ ॥

ಸ್ವಾಹಾ ಸ್ವಧಾ ಮಹಾವಿದ್ಯಾ ಮೇಧಾ ಲಕ್ಷ್ಮೀಃ ಸರಸ್ವತೀ ।
ಸತೀ ದಾಕ್ಷಾಯಣೀ ವಿದ್ಯಾ ಸರ್ವಶಕ್ತಿಮಯೀ ಶಿವಾ ॥ ೧೭ ॥

ಅಪರ್ಣಾ ಚೈಕಪರ್ಣಾ ಚ ತಥಾ ಚೈಕೈಕಪಾಟಲಾ ।
ಉಮಾ ಹೈಮವತೀ ಚಾಪಿ ಕಲ್ಯಾಣೀ ಚೈವ ಮಾತೃಕಾ ॥ ೧೮ ॥

ಖ್ಯಾತಿಃ ಪ್ರಜ್ಞಾ ಮಹಾಭಾಗಾ ಲೋಕೇ ಗೌರೀತಿ ವಿಶ್ರುತಾ ।
ಗಣಾಂಬಿಕಾ ಮಹಾದೇವೀ ನಂದಿನೀ ಜಾತವೇದಸೀ ॥ ೧೯ ॥

---

೧೫. ಪರಬ್ರಹ್ಮಸ್ವರೂಪಳಾದ ವಿಶಾಲಾಕ್ಷೀದೇವಿಯೇ, ನಿನಗೆ ನಮಸ್ಕಾರವು. ನೀನು ಬ್ರಹ್ಮನೇ ಮೊದಲಾದ ಸಮಸ್ತ ದೇವತೆಗಳಿಗೂ ತಾಯಿಯಂತಿರುವೆ.

೧೬. ಲೋಕದಲ್ಲಿ ಪ್ರಸಿದ್ಧವಾಗಿರುವ ಇಚ್ಛಾ, ಜ್ಞಾನ, ಕ್ರಿಯಾ ಎಂಬ ಶಕ್ತಿ ತ್ರಯಗಳೂ ನಿನ್ನಲ್ಲಿಯೇ ಹುಟ್ಟುವುವು. ಅಲ್ಲದೆ ಋಜ್ವೀ, ಕುಂಡಲಿನೀ, ಸೂಕ್ಷ್ಮಾ, ಎಂಬ ಯೋಗಸಿದ್ಧಿಗಳನ್ನು ಕೊಡುವವಳೂ ನೀನೇ ಆಗಿರುವೆ.

೧೭–೨೩. ದೇವಿಯೇ, ನೀನೇ ಸ್ವಾಹಾ, ಸ್ವಧಾ, ಎಂಬ ಹೆಸರಿನ ದೇವತೆಯು. ನಿನ್ನನ್ನೇ ಮಹಾವಿದ್ಯೆ, ಮೇಧಾ, ಲಕ್ಷ್ಮೀ, ಸರಸ್ವತೀ, ಸತೀ, ದಾಕ್ಷಾಯಣೀ ವಿದ್ಯಾ ಸರ್ವಶಕ್ತಿಮಯಿಯಾದ ಶಿವೆ ಎಂದೆನ್ನುವರು. ಅಪರ್ಣಾ, ಏಕಪರ್ಣಾ ಎಂಬುವಳೂ ನೀನೇ. ಪಾಟಲವರ್ಣವುಳ್ಳವಳು ನೀನು. ಉಮಾ, ಹಿಮವಂತನ ಮಗಳು, ಕಲ್ಯಾಣೀ, ಮಾತೃಕಾ, ಖ್ಯಾತೆ, ಪ್ರಜ್ಞೆ ಮಹಾಭಾಗಾ, ಗೌರೀ, ಇವೆಲ್ಲವೂ ನಿನ್ನ ಹೆಸರುಗಳೇ. ಸಮಸ್ತಗಣಗಳಿಗೂ ನೀನೇ ತಾಯಿಯು, ಮಹಾದೇವನ ಪತ್ನಿಯೂ, ಸಮಸ್ತರನ್ನು ಆನಂದಗೊಳಿಸುವವಳೂ, ಜಾತವೇದಸೀ, ಸಾವಿತ್ರೀ,

ಸಾವಿತ್ರೀ ವರದಾ ಪುಣ್ಯಾ ಪಾವನೀ ಲೋಕವಿಶ್ರುತಾ ।
ಆಯತೀ ನಿಯತೀ ರೌದ್ರೀ ದುರ್ಗಾ ಭದ್ರಾ ಪ್ರಮಾಥಿನೀ ॥ ೨೦ ॥

ಕಾಲರಾತ್ರೀ ಮಹಾಭಾಗಾ ರೇವತೀ ಭೂತನಾಯಿಕಾ ।
ಗೌತಮೀ ಕೌಶಿಕೀ ಚಾರ್ಯಾ ಚಂಡೀ ಕಾತ್ಯಾಯನೀ ಸತೀ ॥ ೨೧ ॥

ವೃಷಧ್ವಜಾ ಶೂಲಧರಾ ಪರಮಾ ಬ್ರಹ್ಮಚಾರಿಣೀ ।
ಮಹೇಂದ್ರೋಪೇಂದ್ರ ಮಾತಾ ಚ ಪಾರ್ವತೀ ಸಿಂಹವಾಹನಾ ॥ ೨೨ ॥

ಏವಂ ಸ್ತುತ್ವಾ ವಿಶಾಲಾಕ್ಷೀಂ ದಿವ್ಯೈರೇತೈ ಸ್ಸನಾಮಭಿಃ ।
ಕೃತಕೃತೋಽಭವದ್ವ್ಯಾಸೋ ವಾರಾಣಸ್ಯಾಂ ದ್ವಿಜೋತ್ತಮಾಃ ॥ ೨೩ ॥

ವಾರಾಣಸ್ಯಾಂ ವಿಶಾಲಾಕ್ಷೀ ಗಂಗಾ ವಿಶ್ವೇಶ್ವರಃ ಶಿವಃ ।
ಭಕ್ತಿಃ ಪಶುಪತೌ ತತ್ರ ದುರ್ಲಭಂ ಹಿ ಚತುಷ್ಟಯಂ ॥ ೨೪ ॥

ವರದಳು, ಪುಣ್ಯಾತ್ಮಿಕೆ, ಪಾವನೀ, ಲೋಕಪ್ರಸಿದ್ಧಳು, ಆಯತೀ, ನಿಯತೀ, ರೌದ್ರೀ, ದುರ್ಗಾ, ಭದ್ರಾ, ಸಮಸ್ತ ರಾಕ್ಷಸನಾಶಕಳು, ಕಾಳರಾತ್ರೀ, ಮಹಾಭಾಗಾ, ರೇವತೀ, ಭೂತನಾಯಿಕಾ, ಇವೆಲ್ಲವೂ ನಿನ್ನ ನಾಮಾಂತರಗಳು. ಗೌತಮಿಯೆಂದೂ, ಕೌಶಿಕಿ ಯೆಂದೂ, ಆರ್ಯಳೆಂದೂ, ಚಂಡಿ, ಕಾತ್ಯಾಯನಿಯೆಂದೂ, ಸತಿಯೆಂದೂ, ನಿನ್ನನ್ನು ಆರಾಧಿಸುವರು. ನಿನ್ನ ಧ್ವಜವು ಎತ್ತಿನಗುರುತುಳ್ಳದ್ದು. ನೀನೂ ಸಹ ತ್ರಿಶೂಲ ವನ್ನು ಧರಿಸಿರುವೆ. ಪರಮಳೂ, ಬ್ರಹ್ಮಚಾರಿಣಿಯೂ, ಮಹೇಂದ್ರನಿಗೂ, ಉಪೇಂದ್ರನಿಗೂ, ತಾಯಿಯಂತಿರುವವಳು ನೀನೇ. ಪಾರ್ವತಿಯೇ, ನೀನು ಸಿಂಹ ವನ್ನೇ ವಾಹನವನ್ನಾಗಿ ಮಾಡಿಕೊಂಡಿರುವೆ. ಇದೇ ರೀತಿಯಾಗಿ ವಿಶಾಲಾಕ್ಷೀ ದೇವಿ ಯನ್ನು ನಾನಾ ನಾಮಗಳಿಂದ ಭಜಿಸಿ, ವ್ಯಾಸಮಹರ್ಷಿಯು ತನ್ನನ್ನು ಧನ್ಯನೆಂದು ಅರಿತುಕೊಂಡನು.

೨೪. ಕಾಶೀಕ್ಷೇತ್ರದಲ್ಲಿ ಅತಿದುರ್ಲಭವಾದ ವಸ್ತುಗಳೆಂದರೆ, ಗಂಗಾನದೀ, ವಿಶ್ವೇಶ್ವರಲಿಂಗ, ವಿಶಾಲಾಕ್ಷೀ, ಶಿವಭಕ್ತಿ ಇವುಗಳು. ಇವುಗಳನ್ನು ಯಾರು ಪಡೆಯು ವರೋ ಅವರೇ ಕಾಶೀಕ್ಷೇತ್ರದ ಫಲವನ್ನು ಸಂಪೂರ್ಣವಾಗಿ ಹೊಂದುವರು.

ಯಃ ಪಶ್ಯತಿ ವಿಶಾಲಾಕ್ಷೀಂ ಸ್ನಾತ್ವಾ ಗಂಗಾಂಭಸಿ ದ್ವಿಜಾಃ ।
ಅಶ್ವಮೇಧಸಹಸ್ರಸ್ಯ ಫಲಮಾಪ್ನೋತ್ಯನುತ್ತಮಮ್ ॥ ೨೫ ॥

ವಾರಾಣಸ್ಯಾಸ್ತು ಮಾಹಾತ್ಮ್ಯಮಿತಿ ಕಿಂಚಿನ್ಮಯೋದಿತಂ ।
ಯಃ ಪಠೇಚ್ಛೃಣುಯಾದ್ವಾಪಿ ಯಾತಿ ಮಾಹೇಶ್ವರಂ ಪದಂ । ॥ ೨೬ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತ ಶೌನಕ
ಸಂವಾದೆ ತ್ರಿಲೋಚನ ಮಾಹಾತ್ಮ್ಯಾದಿ ಕಥನಂ ನಾಮ
ಅಷ್ಟಮೋಧ್ಯಾಯಃ

---

೨೫. ಯಾವನು ಗಂಗಾಸ್ನಾನಮಾಡಿ, ಅನಂತರ ವಿಶಾಲಾಕ್ಷಿಯ ದರ್ಶನ ಮಾಡುವನೋ, ಅವನು ಅಶ್ವಮೇಧ ಸಹಸ್ರಯಾಗದ ಫಲವನ್ನು ಹೊಂದುವನು.

೨೬. ಕಾಶೀಕ್ಷೇತ್ರದ ಮಹಿಮೆಯನ್ನು ನಾನು ಈಗ ಸ್ವಲ್ಪಮಟ್ಟಿಗೆ ವಿವರಿಸಿರುವೆನು. ಇದನ್ನು ಯಾರು ಭಕ್ತಿಯಿಂದ ಕೇಳುವರೋ, ಯಾರು ಭಕ್ತಿಯಿಂದ ಪಠಿಸುವರೋ, ಅವರು ಶಿವಸಾಯುಜ್ಯವನ್ನು ಪಡೆಯುವರು, ಎಂದು ಸೂತ ಮಹರ್ಷಿಗಳು ಶೌನಕಾದಿಗಳಿಗೆ ಹೇಳಿದರೆಂಬಲ್ಲಿಗೆ,

ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದ
ರೂಪವಾದ ತ್ರಿಲೋಚನ ಮಾಹಾತ್ಮ್ಯವರ್ಣನೆಯೆಂಬ
ಎಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ನವಮೋಽಧ್ಯಾಯಃ ॥

॥ ಋಷಯ ಊಚುಃ ॥

ಕಿಂ ಲಕ್ಷಣಂ ಪುರಾಣಾನಾಂ ತೇಷಾಂ ದಾನೇನ ಕಿಂ ಫಲಂ ।
ಅನ್ಯೇಷಾಮಪಿ ದಾನಾನಾಂ ವ್ರತಾನಾಂ ಚ ವಿಶೇಷತಃ ॥ ೧ ॥

ವರ್ಣಾನಾಮಾಶ್ರಮಾಣಾಂ ಚ ತೇಷಾಂ ವೈ ಲಕ್ಷಣಂ ಯಥಾ ।
ತತಃ ಶ್ರಾದ್ಧವಿಧಾನಂ ಚ ಪ್ರಾಯಶ್ಚಿತ್ತಂ ಕಥಂ ಭವೇತ್ ॥ ೨ ॥
ಸರ್ವಮೇತದಶೇಷೇಣ ಸೂತ ನೋ ವಕ್ತುಮರ್ಹಸಿ॥

॥ ಸೂತ ಉವಾಚ ॥

ಯದುಕ್ತಂ ಭಾನುನಾ ಪೂರ್ವಂ ಪುತ್ರಾಯ ಮನವೇ ದ್ವಿಜಾಃ ।
ತದಹಂ ಸಂಪ್ರವಕ್ಷ್ಯಾಮಿ ಶೃಣುಧ್ವಂ ಗದತೋ ಮಮ ॥ ೩ ॥

ಒಂಬತ್ತನೆಯ ಅಧ್ಯಾಯವು.

೧-೨. ಶೌನಕಾದಿಋಷಿಗಳು ಪುನಃ ಸೂತಮಹರ್ಷಿಗಳನ್ನು ಕುರಿತು 'ಸ್ವಾಮಿಯೇ ಪುರಾಣಗಳ ಮುಖ್ಯ ಲಕ್ಷಣವೇನು? ಅಂಥ ಪುರಾಣಗಳ ದಾನದಿಂದ ಬರುವ ಫಲವೇನು? ಲೋಕದಲ್ಲಿ ಹೆಚ್ಚು ಫಲಕೊಡುವ ದಾನಗಳು ಯಾವ ಯಾವುವು? ವ್ರತಗಳ ಮಹಿಮೆಯೇನು? ವರ್ಣಾಶ್ರಮಧರ್ಮಗಳನ್ನೂ, ಶ್ರಾದ್ಧ ಕರ್ಮವನ್ನೂ, ಅದರಲ್ಲಿ ಕಂಡುಬರುವ ತಪ್ಪಿತಗಳಿಗೆ ಪ್ರಾಯಶ್ಚಿತ್ತವನ್ನೂ ನಮಗೆ ವಿವರಿಸಿ ಹೇಳಬೇಕು" ಎಂದು ಪ್ರಾರ್ಥಿಸಿಕೊಳ್ಳಲು

೩. ಸೂತಮಹರ್ಷಿಯು "ಎಲೈ ಶೌನಕಾದಿಗಳೇ, ಹಿಂದೆ ಮನುವಿಗೆ ಸೂರ್ಯ ದೇವನು ಪ್ರೀತಿಯಿಂದ ಈ ವಿಚಾರವಾಗಿ ಏನನ್ನು ತಿಳಿಸಿದನೋ, ಅದನ್ನೇ ನಿಮಗೆ ಈಗ ಹೇಳುವೆನು'' ಎಂದು ಮೊದಲು ಪುರಾಣ ಲಕ್ಷಣವನ್ನು ವಿವರಿಸಿದನು.

ಸರ್ಗಶ್ಚ ಪ್ರತಿಸರ್ಗಶ್ಚ ವಂಶಾ ಮನ್ವಂತರಾಣಿ ಚ ।
ವಂಶಾನುಚರಿತಂ ಚೈವ ಪುರಾಣಂ ಪಂಚಲಕ್ಷಣಂ ॥ ೪ ॥

ಬ್ರಾಹ್ಮಾದೀನಾಂ ಪುರಾಣಾನಾಂ ಉಕ್ತಮೇತತ್ತು ಲಕ್ಷಣಂ ।
ಏತಚ್ಚೋಪಪುರಾಣಾನಾಂ ಖಿಲತ್ವಾಲ್ಲಕ್ಷಣಂ ಸ್ಮೃತಂ ॥ ೫ ॥

ಬ್ರಾಹ್ಮಂ ಪುರಾಣಂ ತತ್ರಾದ್ಯಂ ಸಂಹಿತಾಯಾಂ ವಿಭೂಷಿತಂ ।
ಶ್ಲೋಕಾನಾಂ ದಶಸಾಹಸ್ರಂ ನಾನಾಪುಣ್ಯಕಥಾಯುತಂ ॥ ೬ ॥

ಪಾದ್ಮಂ ದ್ವಿತೀಯಂ ಕಥಿತಂ ತೃತೀಯಂ ವೈಷ್ಣವಂ ಸ್ಮೃತಂ ।
ಚತುರ್ಥಂ ವಾಯುನಾ ಪ್ರೋಕ್ತಂ ವಾಯವೀಯಮಿತಿ ಸ್ಮೃತಂ ॥ ೭ ॥

ತತೋ ಭಾಗವತಂ ಪ್ರೋಕ್ತಂ ಭಾಗದ್ವಯವಿಭೂಷಿತಂ ।
ಚತುರ್ಭಿಃ ಪರ್ವಭಿಃ ಪ್ರೋಕ್ತಂ ಭವಿಷ್ಯಂ ತದನಂತರಂ ॥ ೮ ॥

---

೪. ಆದಿಸೃಷ್ಟಿಯವಿಷಯ, ಮಹಿಮಾದಿಗಳಿಂದ ಪ್ರತಿಯಾಗಿ ಲಯವಾದ ಸನ್ನಿವೇಶ, ಪ್ರಸಿದ್ಧವಾದ ವಂಶಗಳ ಕಥೆಗಳು, ಮನ್ವಂತರಗಳಲ್ಲಿ ನಡೆದ ಇತಿಹಾಸಗಳು, ವಂಶಪರಂಪರೆಯಾಗಿ ಬಂದ ಅನೇಕ ರಾಜಾಧಿರಾಜರ ಮಹಾಕಾರ್ಯವಿವರಣೆ, ಈ ಐದು ವಿಷಯಗಳು ಎಲ್ಲಿ ವಿಸ್ತೃತವಾಗುವುವೋ ಆ ಗ್ರಂಥವೇ ಪುರಾಣಗ್ರಂಥವೆನಿಸುವುದು.

೫. ಹೀಗೆ ಹೇಳಿದ ಪುರಾಣಗಳ ಲಕ್ಷಣವು ಬ್ರಹ್ಮಪುರಾಣವೇ ಮೊದಲಾದ ಮಹಾಪುರಾಣಗಳಲ್ಲಿ ಸಂಪೂರ್ಣವಾಗಿ ಇರುತ್ತದೆ. ಉಪಪುರಾಣಗಳಲ್ಲಿ ಸ್ವಲ್ಪಭಾಗವನ್ನು ಮಾತ್ರ ಕಾಣಬಹುದು.

೬. ಈ ಮಹಾಪುರಾಣಗಳಲ್ಲಿ ಮೊದಲನೆಯದು ಬ್ರಹ್ಮಪುರಾಣ. ಇದು ನೀತಿಬೋಧಕವಾದ ಮತ್ತು ಪುಣ್ಯಪ್ರದವಾದ ಅನೇಕ ಇತಿಹಾಸಗಳನ್ನು ಒಳಗೊಂಡಿದೆ. ಇದರಲ್ಲಿ ಹತ್ತುಸಹಸ್ರ ಶ್ಲೋಕಗಳಿವೆ.

೭. ಎರಡನೆಯದೇ ಪದ್ಮಮಹಾಪುರಾಣ. ವಿಷ್ಣುಪುರಾಣವು ಮೂರನೆಯದು, ನಾಲ್ಕನೆಯದು ವಾಯುಪುರಾಣ. ಅದು ವಾಯುವಿನಿಂದ ಹೇಳಲ್ಪಟ್ಟಿರುವುದು.

೮. ಐದನೇಯದೇ ಭಾಗವತವು. ಅದರಲ್ಲಿ ಎರಡು ಭಾಗಗಳಿವೆ. ಆರನೆಯ ಮಹಾಪುರಾಣವೇ ಭವಿಷ್ಯೋತ್ತರಪುರಾಣ. ಅದರಲ್ಲಿ ನಾಲ್ಕು ಪರ್ವಗಳಿವೆ.

ನಾರದೀಯಂ ತಥಾಗ್ನೇಯಂ ಮಾರ್ಕಂಡೇಯಮತಃ ಪರಂ ।
ದಶಮಂ ಬ್ರಹ್ಮವೈವರ್ತಂ ಲಿಂಗಮೇಕಾದಶಂ ಪರಂ ॥ ೯ ॥

ಭಾಗದ್ವಯೇನ ಲೈಂಗಂ ಚ ತತೋ ವಾರಾಹ ಮುತ್ತಮಂ ।
ಸಂಯುಕ್ತಮಷ್ಟಭಿಃ ಖಂಡೈಃ ಸ್ಕಾಂದಂ ಚೈವಾತಿವಿಸ್ತರಂ ॥ ೧೦ ॥

ತತಸ್ತು ವಾಮನಂ ಕೌರ್ಮಂ ಭಾಗದ್ವಯವಿರಾಜಿತಂ ।
ಮಾತ್ಸ್ಯಂ ಚ ಗಾರುಡಂ ಪ್ರೋಕ್ತಂ ಬ್ರಹ್ಮಾಂಡಂ ಚ ತತಃ ಪರಂ ॥ ೧೧ ॥

ಭಾಗದ್ವಯೇನ ಕಥಿತಂ ಬ್ರಹ್ಮಾಂಡಮಿತಿ ಸಂಜ್ಞಿತಂ ।
ಖಿಲಾನ್ಯುಪಪುರಾಣಾನಿ ಯಾನಿ ಚೋಕ್ತಾನಿ ಸೂರಿಭಿಃ ॥ ೧೨ ॥

ಇದಂ ಬ್ರಹ್ಮಪುರಾಣಸ್ಯ ಖಿಲಂ ಸೌರಮನುತ್ತಮಂ ।
ಸಂಹಿತಾದ್ವಯಸಂಯುಕ್ತಂ ಪುಣ್ಯಂ ಶಿವಕಥಾಶ್ರಯಂ ॥ ೧೩ ॥

---

೯. ಏಳನೆಯ ಮಹಾಪುರಾಣವು ನಾರದೀಯ. ಆಗ್ನೇಯ (ಅಗ್ನಿ) ಪುರಾಣವು ಎಂಟನೆಯದು, ಒಂಭತ್ತನೆಯದೇ ಮಾರ್ಕಂಡೇಯಪುರಾಣ. ಬ್ರಹ್ಮವೈವರ್ತವು ಹತ್ತನೆಯದಾಗಿಯೂ ಲಿಂಗಪುರಾಣವು ಹನ್ನೊಂದನೆಯದಾಗಿಯೂ ಪ್ರಸಿದ್ಧವಾಗಿವೆ.

೧೦. ಲಿಂಗಪುರಾಣದಲ್ಲಿ ಎರಡು ಭಾಗಗಳಿವೆ. ಹನ್ನೆರಡನೆಯ ಪುರಾಣವು ವಾರಾಹವೆಂದೂ ಹದಿಮೂರನೆಯ ಪುರಾಣವೇ ಅತಿವಿಸ್ತಾರವಾದ ಸ್ಕಾಂದಪುರಾಣವು. ಇದರಲ್ಲಿ ಎಂಟು ಖಂಡಗಳಿವೆ.

೧೧. ವಾಮನಪುರಾಣವು ಹದಿನಾಲ್ಕನೆಯದು. ಎರಡು ಭಾಗವುಳ್ಳ ಕೂರ್ಮ ಪುರಾಣವು ಹದಿನೈದನೆಯಪುರಾಣವು. ಮತ್ಸ್ಯಪುರಾಣ, ಗರುಡಪುರಾಣ, ಬ್ರಹ್ಮಾಂಡ ಪುರಾಣ ಇವು ಹದಿನಾರು , ಹದಿನೇಳು, ಹದಿನೆಂಟನೆಯ ಪುರಾಣಗಳು.

೧೨. ಬ್ರಹ್ಮಾಂಡಪುರಾಣವು ಎರಡು ಭಾಗವುಳ್ಳದ್ದಾಗಿದೆ. ಇವಲ್ಲದೆ ಅಷ್ಟಾದಶ ಉಪಪುರಾಣಗಳೂ ವಿದ್ವಾಂಸರ ಮೆಚ್ಚಿಗೆಯನ್ನು ಪಡೆದಿವೆ. ಇವುಗಳಲ್ಲಿ ಮಹಾಪುರಾಣಗಳಲ್ಲಿ ಹೇಳದೇ ಬಿಟ್ಟಿರುವ ಅನೇಕ ವಿಷಯಗಳು ದೊರಕುವುವು.

೧೩. ಈ ಸೌರಪುರಾಣವು ಬ್ರಹ್ಮಪುರಾಣದ ಪರಿಶಿಷ್ಟಭಾಗ. ಇದರಲ್ಲಿ ಇಬ್ಬರು ಮಹಾತ್ಮರ ಹಿತಬೋಧೆಗಳಿವೆ. ಇದರ ಸಂಪೂರ್ಣ ಕಥೆಯೆಲ್ಲಾ ಮಹೇಶ್ವರನ ಮಹಿಮಾವರ್ಣನೆಯೇ ಆಗಿದೆ.

ಆದ್ಯಾ ಸನತ್ಕುಮಾರೋಕ್ತಾ ದ್ವಿತೀಯಾ ಸೂರ್ಯಭಾಷಿತಾ ।
ಇಯಂ ಪುಣ್ಯತಮಾ ಖ್ಯಾತಾ ಸಂಹಿತಾ ಪಾಪನಾಶನೀ ॥ ೧೪ ॥

ವೈವಸ್ವತಾಯ ಮನವೇ ಕಥಿತಾ ರವಿಣಾ ಪುರಾ ।
ದಾನಮಸ್ಯ ಪುರಾಣಸ್ಯ ದಾನಾನಾಮುತ್ತಮಂ ದ್ವಿಜಾಃ ॥ ೧೫ ॥

ಯೋ ದದ್ಯಾಚ್ಛಿವಭಕ್ತಾಯ ಬ್ರಾಹ್ಮಣಾಯ ತಪಸ್ವಿನೇ ।
ಯಾನಿ ದಾನಾನಿ ಲೋಕೇಷು ಪ್ರಸಿದ್ಧಾನಿ ದ್ವಿಜೋತ್ತಮಾಃ ॥ ೧೬ ॥

ಸರ್ವೇಷಾಂ ಫಲಮಾಪ್ನೋತಿ ಚತುರ್ದಶ್ಯಾಂ ನ ಸಂಶಯಃ ।
ಬ್ರಾಹ್ಮಂ ಪುರಾಣಂ ಪ್ರಥಮಂ ದದಾತಿ ಶ್ರದ್ಧಯಾನ್ವಿತಃ ॥ ೧೭ ॥

ಸರ್ವಪಾಪವಿನಿರ್ಮುಕ್ತೋ ಬ್ರಹ್ಮಲೋಕೇ ಮಹೀಯತೇ ।
ಪಾದ್ಮಂ ಬ್ರಹ್ಮಾಣಮುದ್ದಿಶ್ಯ ಯೋ ದದಾತಿ ಗುರೋರ್ದಿನೇ ॥ ೧೮ ॥

---

೧೪. ಈ ಎರಡು ಸಂಹಿತೆಗಳಲ್ಲಿ ಮೊದಲನೆಯದು ಸನತ್ಕುಮಾರ ಋಷಿಯು ವ್ಯಾಸನಿಗೆ ಉಪದೇಶಿಸಿದುದು. ಎರಡನೆಯದು ಸೂರ್ಯದೇವನು ವೈವಸ್ವತಮನುವಿಗೆ ಬೋಧಿಸಿದ ಈಶ್ವರ ವಿಷಯಕವಾದ ಪರಮಜ್ಞಾನ.

೧೫. ಹಿಂದೆ ಸೂರ್ಯದೇವನು ವೈವಸ್ವತಮನುವಿಗೆ ಹೇಳಿದ ವಿಷಯಗಳಲ್ಲಿ, ಈ ಪುರಾಣಗಳ ದಾನದ ವಿಷಯವಾಗಿ ಕೆಲವು ಮಹಿಮೆಯನ್ನು ವಿವರಿಸಿರುವನು.

೧೬–೧೭- ಲೋಕದಲ್ಲಿ ಎಷ್ಟೋ ಪ್ರಸಿದ್ಧವಾದ ದಾನಗಳಿರುತ್ತವೆ. ಅವುಗಳನ್ನು ಶಿವಭಕ್ತನೂ ಬ್ರಾಹ್ಮಣನೂ, ತಪಸ್ವಿಯೂ ಆದವನಿಗೆ ಕೊಡಬೇಕು. ಹಾಗೆ ಕೊಟ್ಟರೇ ಆ ದಾನದ ಫಲವು ಕರ್ತೃವಿಗೆ ಸಂಪೂರ್ಣವಾಗಿ ದೊರೆಯುತ್ತದೆ. ಅಲ್ಲದೆ ಯಾವ ದಾನಕ್ಕೂ ಚತುರ್ದಶೀ ತಿಥಿಯೇ ಶ್ರೇಷ್ಠವಾದದ್ದು. ಯಾವನು ಮೊದಲನೇ ಮಹಾಪುರಾಣವಾದ ಬ್ರಹ್ಮಪುರಾಣವನ್ನು ಶ್ರದ್ಧೆಯಿಂದ ಸತ್ಪಾತ್ರನಿಗೆ ದಾನ ಮಾಡುವನೋ ಅವನು ಸಮಸ್ತ ಪಾಪಗಳಿಂದಲೂ ಬಿಡಲ್ಪಟ್ಟು ಬ್ರಹ್ಮಲೋಕವನ್ನು ಸೇರುವನು.

೧೮. ಪದ್ಮಪುರಾಣವನ್ನು ಬ್ರಹ್ಮಪ್ರೀತಿಗಾಗಿ ಗುರುವಾರದ ದಿನ, ವೇದಜ್ಞನಾದ ಬ್ರಾಹ್ಮಣನಿಗೆ ದಾನಮಾಡಬೇಕು. ಅದರಿಂದ ಜ್ಯೋತಿಷ್ಟೋಮಯಾಗದ ಫಲವು ಲಭಿಸುವುದು.

ದ್ವಿಜಾಯ ವೇದವಿದುಷೇ ಜ್ಯೋತಿಷ್ಟೋಮಫಲಂ ಲಭೇತ್ ।
ವೈಷ್ಣವಂ ವಿಷ್ಣುಮುದ್ದಿಶ್ಯ ದ್ವಾದಶ್ಯಾಂ ಪ್ರಯತಶ್ಶುಚಿಃ ॥ ೧೯ ॥

ಅನೂಚಾನಾಯ ಯೋ ದದ್ಯಾತ್ ವೈಷ್ಣವಂ ಪದಮಾಪ್ನುಯಾತ್॥ ।
ದದಾತಿ ಸೂರ್ಯಭಕ್ತಾಯ ಯಸ್ತು ಭಾಗವತಂ ದ್ವಿಜಾಃ ॥ ೨೦ ॥

ಸರ್ವಪಾಪವಿನಿರ್ಮುಕ್ತಃ ಸರ್ವರೋಗವಿವರ್ಜಿತಃ ।
ಜೀವೇದ್ವರ್ಷಶತಂ ಸಾಗ್ರಂ ಅಂತೇ ವೈವಸ್ವತಂ ಪದಂ ॥ ೨೧

ವೈಶಾಖೇ ಶುಕ್ಲಪಕ್ಷಸ್ಯ ತೃತೀಯಾಕ್ಷಯಸಂಜ್ಞಿತಾ ।
ತಸ್ಯಾಂ ತಿಥೌ ಸಂಯತಾತ್ಮಾ ಬ್ರಾಹ್ಮಣಾಯಾऽऽಹಿತಾಗ್ನಯೇ ॥ ೨೨ ॥

ಭವಿಷ್ಯಾಖ್ಯಂ ಪುರಾಣಂ ತು ದದಾತಿ ಶ್ರದ್ಧಯಾನ್ವಿತಃ ।
ಅಶ್ವಮೇಧಸ್ಯ ಯಜ್ಞಸ್ಯ ಫಲಮಾಪ್ನೋತ್ಯನುತ್ತಮಂ ॥ ೨೩ ॥

---

೧೯. ದ್ವಾದಶಿಯದಿನ ವಿಷ್ಣುಪುರಾಣವನ್ನು ವಿಷ್ಣುವಿನ ತೃಪ್ತಿಗಾಗಿ, ಯೋಗ್ಯ ಸಂಪ್ರದಾಯವುಳ್ಳ ಬ್ರಾಹ್ಮಣನಿಗೆ ದಾನಮಾಡಿದರೆ, ಅವನಿಗೆ ವಿಷ್ಣುಲೋಕಪ್ರಾಪ್ತಿ ಯಾಗುವುದು.

೨೦. ಭಾಗವತವನ್ನು ಸೂರ್ಯೋಪಾಸಕನಿಗೆ ದಾನಮಾಡಬೇಕು. ಅದರಿಂದ ಡಾತೃವಿನ ಸರ್ವಪಾಪಗಳೂ, ಸರ್ವರೋಗಗಳೂ ನಿವಾರಣೆಯಾಗುವುವು.

೨೧. ಅಲ್ಲದೆ ಆತನು ಶತಮಾನಗಳು ಬದುಕಿದ್ದು ಅನಂತರ ಸೂರ್ಯಲೋಕ ವನ್ನು ಸೇರುವನು.

೨೨-೨೩. ವೈಶಾಖ ಶುದ್ಧ ತೃತೀಯಾ ದಿನಕ್ಕೆ ಅಕ್ಷಯ ತದಿಗೆಯೆಂದು ಹೆಸರು. ಅದರಲ್ಲಿ ಯಾರು ಭವಿಷ್ಯೋತ್ತರ ಪುರಾಣವನ್ನು ಶ್ರದ್ಧೆಯಿಂದ ಆಹಿತಾಗ್ನಿ ಯಾದ ಬ್ರಾಹ್ಮಣನಿಗೆ ದಾನಮಾಡುವರೋ, ಅವನಿಗೆ ಅಶ್ವಮೇಧಯಾಗದ ಫಲವು ದೊರಕುವುದು.

ಮಾರ್ಕಂಡೇಯಂ ತು ಯೋ ದದ್ಯಾತ್ಸಪ್ತಮ್ಯಾಂ ಪ್ರಯತಾತ್ಮವಾನ್ ।
ಸೂರ್ಯಲೋಕಮವಾಪ್ನೋತಿ ಸರ್ವಪಾಪವಿವರ್ಜಿತಃ ॥ ೨೪ ॥

ಆಗ್ನೇಯಂ ಪ್ರತಿಪದ್ಯೇವ ಪ್ರದದ್ಯಾದಾಹಿತಾಗ್ನಯೇ ।
ರಾಜಸೂಯಸ್ಯ ಯಾಗಸ್ಯ ಫಲಂ ಭವತಿ ಶಾಶ್ವತಂ ॥ ೨೫ ॥

ದದಾತಿ ನಾರದೀಯಂ ಯಶ್ಚತುರ್ದಶ್ಯಾಂ ಸಮಾಹಿತಃ ।
ದ್ವಿಜಾಯ ಶಿವಭಕ್ತಾಯ ಶಿವಲೋಕೇ ಮಹೀಯತೇ ॥ ೨೬ ॥

ಯೋ ದದ್ಯಾತ್ ಬ್ರಹ್ಮವೈವರ್ತಂ ವೈಷ್ಣವಾಯ ಸಮಾಹಿತಃ ।
ಬ್ರಹ್ಮಲೋಕ ಮವಾಪ್ನೋತಿ ಪುನರಾವೃತ್ತಿ ದುರ್ಲಭಂ ॥ ೨೭ ॥

ಕಾರ್ತಿಕಸ್ಯ ಚತುರ್ದಶ್ಯಾಂ ಶುಕ್ಲಪಕ್ಷಸ್ಯ ಸುವ್ರತಾಃ ।
ಲೈಂಗಂ ದದ್ಯಾದ್ದ್ವಿಜೇಂದ್ರಾಯ ಶಿವಾರ್ಚನರತಾಯ ವೈ ॥ ೨೮ ॥

---

೨೪. ಸಪ್ತಮಿಯದಿನ ಮಾರ್ಕಂಡೇಯ ಪುರಾಣವನ್ನು ಶುದ್ಧ ಮನಸ್ಸಿನಿಂದ ದಾನಮಾಡಬೇಕು. ಇದರಿಂದ ದಾನಮಾಡಿದವನು ಪಾಪಮುಕ್ತನಾಗಿ ಸೂರ್ಯ ಲೋಕವನ್ನು ಹೊಂದುವನು.

೨೫. ಪ್ರಥಮಾ ತಿಥಿಯಲ್ಲಿ ಯಾವನು ಆಹಿತಾಗ್ನಿಯಾದ ಬ್ರಾಹ್ಮಣನಿಗೆ ಅಗ್ನಿಪುರಾಣವನ್ನು ಶುದ್ಧಮನಸ್ಸಿನಿಂದ ಕೊಡುವನೋ ಅವನಿಗೆ ರಾಜಸೂಯಯಾಗದ ಫಲವು ದೊರಕುವುದು.

೨೬. ಚತುರ್ದಶಿಯದಿನ ಶಿವಭಕ್ತನಾದ ಬ್ರಾಹ್ಮಣನಿಗೆ ನಾರದೀಯ ಪುರಾಣ ವನ್ನುದಾನಮಾಡಬೇಕು. ಇದರಿಂದ ದಾನಮಾಡಿದವನಿಗೆ ಮುಂದಿನ ಜನ್ಮದಲ್ಲಿ ಶಿವಲೋಕ ಪ್ರಾಪ್ತಿಯಾಗುವುದು.

೨೭. ಬ್ರಹ್ಮವೈವರ್ತ ಪುರಾಣವನ್ನು ವಿಷ್ಣುಭಕ್ತನಿಗೆ ಪ್ರೀತಿಯಿಂದ ದಾನ ಮಾಡಬೇಕು. ಇದರಿಂದ ಆತನಿಗೆ ಪುನರ್ಜನ್ಮವಿಲ್ಲದಿರುವ ಬ್ರಹ್ಮಲೋಕವು ದೊರ ಕುವುದು.

೨೮. ಕಾರ್ತಿಕಮಾಸದ ಶುಕ್ಲಪಕ್ಷದ ಚತುರ್ದಶಿಯದಿನ ಶಿವಾರ್ಚನರತ ನಾದ ಬ್ರಾಹ್ಮಣನಿಗೆ ಲಿಂಗಪುರಾಣವನ್ನು ದಾನಮಾಡಬೇಕು.

ಸರ್ವಪಾಪವಿನಿರ್ಮುಕ್ತಃ ಸರ್ವೈಶ್ವರ್ಯಸಮನ್ವಿತಃ ।
ಯಾತಿ ಮಾಹೇಶ್ವರಂ ಧಾಮ ಸರ್ವಲೋಕೋಪರಿಸ್ಥಿತಂ ॥ ೨೯ ॥

ದ್ವಾದಶ್ಯಾಂ ಸಂಯತೋ ಭೂತ್ವಾ ಬ್ರಾಹ್ಮಣಾಯ ತಪಸ್ವಿನೇ ।
ಯೋ ವೈ ದದಾತಿ ವಾರಾಹಂ ವಿಷ್ಣುಲೋಕಂ ಸ ಗಚ್ಛತಿ ॥ ೩೦ ॥

ಸ್ಕಾಂದಂ ಶಿವಚತುರ್ದಶ್ಯಾಂ ಪ್ರದದ್ಯಾಚ್ಛಿವಯೋಗಿನೇ ।
ಜ್ಞಾನೀ ಭವತಿ ವಿಪ್ರೇಂದ್ರಾ ಮಹಾದೇವಪ್ರಸಾದತಃ ॥ ೩೧ ॥

ದ್ವಾದಶ್ಯಾಂ ವಾ ಚತುರ್ದಶ್ಯಾಂ ದದ್ಯಾದ್ವಾಮನಮುತ್ತಮಂ ।
ತಸ್ಯ ದೇವಸ್ಯ ತಂ ಲೋಕಂ ಪ್ರಾಪ್ನೋತ್ಯಕ್ಷಯಮುತ್ತಮಂ ॥ ೩೨ ॥

ದದ್ಯಾತ್ಕೌರ್ಮಂ ಚತುರ್ದಶ್ಯಾಂ ಯೋಗಿನೇಪ್ರಯತಾತ್ಮನೇ ।
ಸರ್ವದಾನಸ್ಯ ಯತ್ಪುಣ್ಯಂ ಸರ್ವಯಜ್ಞಸ್ಯ ಯತ್ಫಲಂ ॥ ೩೩ ॥
ಪ್ರಾಪ್ನೋತಿ ತತ್ಫಲಂ ವಿದ್ವಾನಂತೇ ಶೈವಂ ಪರಂ ಪದಂ ।

---

೨೯. ಹಾಗೆ ದಾನಮಾಡಿದರೆ ಅವನಿಗೆ ಸಮಸ್ತ ಪಾಪನಿವಾರಣೆಯಾಗುವುದಲ್ಲದೆ ಸಮಸ್ತ ಐಶ್ವರ್ಯಗಳೂ ಲಭಿಸುವುವು. ಕೊನೆಯಲ್ಲಿ ಶ್ರೇಷ್ಠವಾದ ಮಹೇಶ್ವರನ ಸನ್ನಿಧಿಯನ್ನು ಸಹ ಹೊಂದುವನು.

೩೦. ದ್ವಾದಶಿಯದಿನ ಯಾವನು ವರಾಹಪುರಾಣವನ್ನು ಶ್ರೇಷ್ಠನಾದ ಬ್ರಾಹ್ಮಣನಿಗೆ ದಾನಮಾಡುವನೋ, ಆತನು ವಿಷ್ಣುಲೋಕವನ್ನು ಹೊಂದುವನೆಂಬುದರಲ್ಲಿ ಸಂದೇಹವಿಲ್ಲ.

೩೧. ಶಿವರಾತ್ರಿಯದಿನ ಯಾವನು ಸ್ಕಾಂದ ಪುರಾಣವನ್ನು ಶಿವೋಪಾಸಕನಿಗೆ ದಾನಮಾಡುವನೋ ಅವನು ಮಹಾದೇವನ ಅನುಗ್ರಹಕ್ಕೆ ಪಾತ್ರನಾಗಿ ಆ ಮೂಲಕ ಜ್ಞಾನಿಯಾಗುವನು.

(ಈ ಶ್ಲೋಕವು ಕೆಲವು ಪ್ರತಿಗಳಲ್ಲಿ ಇಲ್ಲ.)

೩೨. ದ್ವಾದಶಿಯಲ್ಲಾಗಲಿ ಚತುರ್ದಶಿಯಲ್ಲಾಗಲಿ, ವಾಮನ ಪುರಾಣವನ್ನು ದಾನಮಾಡಬಹುದು. ಇದರಿಂದ ದಾನಮಾಡಿದವನಿಗೆ ವಿಷ್ಣುಲೋಕ ಪ್ರಾಪ್ತಿಯಾಗುವುದು.

೩೩. ಕೂರ್ಮಪುರಾಣವನ್ನು ಚತುರ್ದಶಿಯದಿನ ಯೋಗಿಯಾದ ಬ್ರಾಹ್ಮಣನಿಗೆ ದಾನಮಾಡುವುದರಿಂದ ಅವನಿಗೆ ಸಮಸ್ತ ಯಾಗಗಳ ಫಲವೂ ದೊರಕುವುದು. ಅದರಿಂದ ಆತನು ಕೊನೆಗೆ ಶಿವಸಾಯುಜ್ಯವನ್ನು ಹೊಂದುವನು.

ಮಾತ್ಸ್ಯಂ ದದ್ಯಾದ್ದ್ವಿಜೇಂದ್ರಾಯ ಪ್ರಯತಶ್ಚೋತ್ತರಾಯಣೇ ।
ವಿಮುಕ್ತ ಸ್ಸರ್ವಪಾಪೇಭ್ಯಃ ಶಿವಲೋಕೇ ಮಹೀಯತೇ ॥ ೩೪ ॥

ಗಾರುಡಂ ಶಿವಮುದ್ದಿಶ್ಯ ದದ್ಯಾಚ್ಛಿವತಿಥೌ ದ್ವಿಜಾಃ ।
ವಾಜಪೇಯಸಹಸ್ರಸ್ಯ ಫಲಮಾಪ್ನೋತ್ಯನುತ್ತಮಂ ॥ ೩೫ ॥

ಪ್ರದದ್ಯಾಚ್ಛಿವಭಕ್ತಾಯ ಬ್ರಹ್ಮಾಂಡಮಿತಿ ಯತ್ಸ್ಮೃತಂ।
ಶಿವಸ್ಯ ಪುರತೋ ಭಕ್ತ್ಯಾ ಸಂಪ್ರಾಪ್ತೇ ದಕ್ಷಿಣಾಯನೇ ॥ ೩೬ ॥

ಚಂದ್ರಸ್ಯ ಗ್ರಹಣೇ ವಾಽಥ ಭಾನೋರಪಿ ಚ ಸುವ್ರತಾಃ ।
ಗಣಾಧಿಪತ್ಯಮಾಪ್ನೋತಿ ದೇವದೇವಸ್ಯ ಶೂಲಿನಃ ॥ ೩೭ ॥

ಏವಮುಕ್ತಃ ಪುರಾಣಾನಾಂ ಕ್ರಮೋ ದಾನೇನ ಯತ್ಫಲಂ ॥ ೩೮ ॥

---

೩೪. ಮತ್ಸ್ಯಪುರಾಣವನ್ನು ಶಿವಪ್ರೀತ್ಯರ್ಥವಾಗಿ ಉತ್ತರಾಯಣದಲ್ಲಿ, ಸದಾಚಾರಶೀಲನೂ, ಸತ್ಪಾತ್ರನೂ ಆದ ಬ್ರಾಹ್ಮಣನಿಗೆ ದಾನಮಾಡಬೇಕು. ಇದರಿಂದ ದಾನಮಾಡಿದವನ ಸಮಸ್ತ ಪಾಪಗಳೂ ಪರಿಹಾರವಾಗುವುದಲ್ಲದೆ, ಶಿವಾನುಗ್ರಹದಿಂದ ಅವನಿಗೆ ಶಿವಲೋಕಪ್ರಾಪ್ತಿಯೂ ಆಗುವುದು.

೩೫. ಹಾಗೆಯೇ ಗರುಡಪುರಾಣದ ದಾನವೂ ಶಿವಪ್ರೀತಿಕರವಾದದ್ದೇ. ಈ ದಾನಕ್ಕೆ ಉತ್ತರಾಯಣದ ನಿರ್ಬಂಧವಿಲ್ಲ, ಆದರೆ ಶಿವಪೂಜೆಗೆ ಯೋಗ್ಯವಾದ ತಿಥಿಗಳಲ್ಲಿ, ಶಿವಾರ್ಚಕನಾದವನಿಗೆ ದಾನಮಾಡುವುದು ಶ್ರೇಯಸ್ಕರ. ಸಹಸ್ರ ವಾಜಪೇಯ ಯಾಗದಿಂದ ಯಜಮಾನನು ಯಾವ ಫಲವನ್ನು ಪಡೆಯುವನೋ, ಅದೇ ಫಲವನ್ನು ಗರುಡಪುರಾಣವನ್ನು ದಾನಮಾಡಿದವನೂ ಹೊಂದುವನು.

೩೬–೩೭. ಬ್ರಹ್ಮಾಂಡಪುರಾಣವು ದಾನಕ್ಕೆ ಬಹಳ ಶ್ರೇಷ್ಠವಾದದ್ದು. ಇದನ್ನು ದಕ್ಷಿಣಾಯನಕಾಲದಲ್ಲಿ ಶಿವದೇವಸ್ಥಾನದಲ್ಲಿ ಕುಳಿತು, ಶಿವಲಿಂಗದ ಮುಂದೆಯೇ ದಾನಮಾಡಬೇಕು. ದಾನತೆಗೆದುಕೊಳ್ಳುವವನು, ಶ್ರುತ್ಯುಕ್ತಕರ್ಮಗಳನ್ನು ಆಚರಿಸುವವನಾಗಿರಬೇಕು. ಈ ನಿಯಮದಿಂದ ಬ್ರಹ್ಮಾಂಡಪುರಾಣವನ್ನು ದಾನಮಾಡಿದರೆ ಪರಮೇಶ್ವರನು ತೃಪ್ತನಾಗುವನು. ಅಲ್ಲದೆ ಸೂರ್ಯಚಂದ್ರರ ಗ್ರಹಣಕಾಲದಲ್ಲಿ ಈ ದಾನವನ್ನು ನಡೆಸುವುದಂತೂ ಅತಿಶ್ರೇಯಸ್ಕರ. ಆಗ ಪರಶಿವನು ಈ ದಾನಕ್ಕೆ ಮೆಚ್ಚಿ ದಾತೃವಿಗೆ ತನ್ನ ಸನ್ನಿಧಿಯನ್ನು ದಯಪಾಲಿಸುವನಲ್ಲದೆ ತನ್ನ ಪ್ರಮಥಗಣಗಳ ಒಡೆತನವನ್ನೂ ಅನುಗ್ರಹಿಸುವನು.

ಪ್ರೋಕ್ತಂ ಸಮಾಸತೋ ವಿಪ್ರಾಃ ಸೂರ್ಯೋ ಯತ್ಸ್ವಯಮಬ್ರವೀತ್॥ ೩೯ ॥
ಯಃ ಪಠೇದಿಮಮಧ್ಯಾಯಂ ಮಹಾದೇವಸ್ಯ ಸನ್ನಿಧೌ ।
ಸರ್ವಪಾಪವಿನಿರ್ಮುಕ್ತೋ ವಾಜಪೇಯಫಲಂ ಲಭೇತ್ ॥ ೪೦ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಬ್ರಾಹ್ಮಾದಿರಾಣಕ್ರಮದಾನಫಲಕಥನಂ ನಾಮ ನವಮೋಽಧ್ಯಾಯಃ

---

೪೮. ಎಲೈ ಶೌನಕಾದಿಗಳೇ, ಹೀಗೆ ಸೂರ್ಯದೇವನು ಮನುವಿಗೆ ಹೇಳಿದ ವಿಷಯಗಳನ್ನೆಲ್ಲಾ ನಿಮಗೆ ಸಂಕ್ಷೇಪವಾಗಿ ವಿವರಿಸಿರುವೆನು. ಈ ಅಧ್ಯಾಯವನ್ನು ಯಾವನು ಪರಮೇಶ್ವರನ ಸನ್ನಿಧಿಯಲ್ಲಿ ಓದುವನೋ ಅವನು ಸಮಸ್ತ ಪಾಪಮುಕ್ತನಾಗಿ ವಾಜಪೇಯಯಾಗದ ಫಲವನ್ನು ಹೊಂದುವನು. ಎಂಬಲ್ಲಿಗೆ

ಬ್ರಹ್ಮಪುರಾಣಾಂಗವಾದ ಶ್ರೀ ಸೌರಪುರಾಣದಲ್ಲಿ ಸೂತಶೌನಕ ಸಂವಾದ ರೂಪವಾಗಿ ಒಂಭತ್ತನೇ ಅಧ್ಯಾಯದಲ್ಲಿ ಬ್ರಹ್ಮಪುರಾಣವೇ ಮೊದಲಾದ ಮಹಾಪುರಾಣಗಳ ದಾನಕ್ರಮದ ಮತ್ತು ಅದರಿಂದ ಉಂಟಾಗುವ ಫಲ ಶ್ರುತಿಯ ವಿಷಯ ವಿವರಣೆಯು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ದಶಮೋಽಧ್ಯಾಯಃ.

ನಿತ್ಯಂ ನೈಮಿತ್ತಿಕಂ ಕಾಮ್ಯಂ ವಿಮಲಂ ಚ ಚತುರ್ವಿಧಂ ।
ದಾನಂ ಪಾತ್ರೇ ಪ್ರದಾತವ್ಯಂ ನಾಪಾತ್ರೇಽಪ್ಯಣುಮಾತ್ರಕಂ ॥ ೧ ॥

ಪಾತ್ರಭೂತಾನ್ ಪ್ರವಕ್ಷ್ಯಾಮಿ ಶೃಣುಧ್ವಂ ಮುನಿಪುಂಗವಾಃ ।
ಭಾನುನಾ ದೇವದೇವೇನ ಮನವೇ ಕಥಿತಾಶ್ಚ ಯೇ ॥ ೨ ॥

ನ ದಾನಾದಧಿಕಂ ಕಿಂಚಿದ್ವಿದ್ಯತೇ ಭುವನತ್ರಯೇ ।
ದಾನೇನ ಪ್ರಾಪ್ಯತೇ ಸ್ವರ್ಗಃ ಶ್ರೀರ್ದಾನೇನೈವ ಲಭ್ಯತೇ ॥ ೩ ॥

ಹತ್ತನೆಯ ಅಧ್ಯಾಯವು.

೧. ದಾನಗಳು, ನಿತ್ಯ, ನೈಮಿತ್ತಿಕ, ಕಾಮ್ಯ, ವಿಮಲವೆಂದು ನಾಲ್ಕುವಿಧ ಗಳು. ಈ ನಾಲ್ಕು ತರಹದ ದಾನಗಳನ್ನೂ ದಾನಕ್ಕೆ ಯೋಗ್ಯವಾದವರಿಗೇ ಕೊಡಬೇಕು. ಅನರ್ಹರಾದವರಿಗೆ ಎಂದೂ ಯಾವ ದಾನವನ್ನೂ ಕೊಡಬಾರದು.

೨. ಈಗ ಸತ್ಪಾತ್ರರು ಯಾರು ಎಂಬುದನ್ನು ಹೇಳುವೆನು. ಕೇಳಿ. ಇದನ್ನೆ ಸೂರ್ಯದೇವನು ವೈವಸ್ವತ ಮನುವಿಗೆ ವಿಸ್ತಾರವಾಗಿ ಹೇಳಿರುವನು.

೩. ದಾನಮಾಡುವುದಕ್ಕಿಂತ ದೊಡ್ಡ ಪುಣ್ಯಕಾರ್ಯವು ಲೋಕದಲ್ಲಿ ಮತ್ತೊಂದಿಲ್ಲ. ಸ್ವರ್ಗವು ದೊರಕಬೇಕಾದರೂ ದಾನಮಾಡಬೇಕು. ಸಂಪತ್ತುಬರುವುದೂ ದಾನದಿಂದಲೇ.

ದಾನೇನ ಜಯಮಾಪ್ನೋತಿ ಮುಕ್ತಿರ್ದಾನೇನ ಲಭ್ಯತೇ ।
ದಾನೇನ ಪ್ರಾಪ್නುಯಾತ್ಸೌಖ್ಯಂ ರೂಪಂ ಕಾಂತಿಂ ಯಶೋಬಲಂ ॥ ೪ ॥

ದಾನೇನ ಶತ್ರೂನ್ ಜಯತಿ ವ್ಯಾಧಿರ್ದಾನೇನ ನಶ್ಯತಿ ।
ದಾನೇನ ಲಭತೇ ವಿದ್ಯಾಂ ದಾನೇನ ಯುವತೀಂ ಜನಃ ॥ ೫ ॥

ಧರ್ಮಾರ್ಥಕಾಮಮೋಕ್ಷಾಣಾಂ ಸಾಧನಂ ಪರಮಂ ಸ್ಮೃತಂ ।
ದಾನಮೇವ ನ ಚೈವಾನ್ಯದಿತಿ ದೇವೋಽಬ್ರವೀದ್ರವಿಃ ॥ ೬ ॥

ತಸ್ಮಾದ್ದಾನಾಯ ಸತ್ಪಾತ್ರಂ ವಿಚಾರ್ಯೈವ ಪ್ರಯತ್ನತಃ ।
ದಾತವ್ಯಮನ್ಯಥಾ ಸರ್ವಂ ಭಸ್ಮನೀವ ಹುತಂ ಭವೇತ್ ॥ ೭ ॥

ವೇದವೇದಾಂಗತತ್ತ್ವಜ್ಞಾಃ ಶಾಂತಾಶ್ಚೈವ ಜಿತೇಂದ್ರಿಯಾಃ ।
ಶ್ರೌತಸ್ಮಾರ್ತಕ್ರಿಯಾನಿಷ್ಠಾಃ ಸತ್ಯನಿಷ್ಠಾಃ ಕುಟುಂಬಿನಃ ॥ ೮ ॥

---

೪. ದಾನಮಾಡುವುದರಿಂದ ಮನುಷ್ಯನು, ಜಯವನ್ನೂ, ಮೋಕ್ಷವನ್ನೂ ಸಂಪೂರ್ಣ ಸೌಖ್ಯವನ್ನೂ, ಸೌಂದರ್ಯ, ಕಾಂತಿ, ಯಶಸ್ಸು, ಶಕ್ತಿ, ಇವೇ ಮೊದಲಾದ ಐಹಿಕ ಸುಖಸಾಮಗ್ರಿಗಳನ್ನೂ ಪಡೆಯುವನು.

೫. ದಾನದಿಂದಲೇ ಶತ್ರುಜಯವೂ, ವ್ಯಾಧಿಪರಿಹಾರವೂ ಉಂಟಾಗುತ್ತದೆ. ವಿದ್ಯೆಯನ್ನು ಪಡೆಯಬೇಕಾದರೂ, ಸುಂದರಿಯಾದ ಯುವತಿಯನ್ನು ಹೊಂದಬೇಕಾದರೂ ದಾನಮಾಡಿ ಪುಣ್ಯವನ್ನು ಸಂಪಾದಿಸಿರಬೇಕು.

೬. ಮನುಷ್ಯನು ತನ್ನ ಜೀವಿತಕಾಲದಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಸಾಧಿಸಬೇಕು. ಈ ಪುರುಷಾರ್ಥಸಾಧನೆಗೆ ಮುಖ್ಯ ಸಹಾಯವೆಂದರೆ ದಾನವೇ. ಮತ್ತೆ ಯಾವುದರಿಂದಲೂ ಇವು ಸುಲಭವಾಗಿ ಸಿಕ್ಕಲಾರವು.

೭. ಆದ್ದರಿಂದ ಮನುಷ್ಯನು ಸತ್ಪಾತ್ರನಿಗೆ ವಿಚಾರಮಾಡಿ ದಾನಮಾಡಬೇಕು. ಅಪಾತ್ರನಿಗೆ ಮಾಡಿದ ದಾನವು ಬೂದಿಯಲ್ಲಿ ಹೋಮಮಾಡಿದಂತೆ ವ್ಯರ್ಥವು.

೮-೧೧. ವೇದವೇದಾಂಗಗಳಲ್ಲಿ ಪರಿಶ್ರಮವುಳ್ಳವರೂ, ಶಾಂತಸ್ವಭಾವದವರೂ, ಜಿತೇಂದ್ರಿಯರೂ, ಶ್ರೌತಸ್ಮಾರ್ತ. ನಿತ್ಯಕರ್ಮಾನುಷ್ಠಾನರತರೂ, ಸತ್ಯಶೀಲರೂ ಆದವರೇ ದಾನಕ್ಕೆ ಅರ್ಹರು. ಕುಟುಂಬಿಗಳೂ, ತಪಸ್ವಿಗಳೂ ತೀರ್ಥಯಾತ್ರೆಗಳಲ್ಲಿ

ತಪಸ್ವಿನಸ್ತೀರ್ಥರತಾಃ ಕೃತಜ್ಞಾ ಮಿತಭಾಷಿಣಃ ।
ಗುರುಶುಶ್ರೂಷಣರತಾ ನಿತ್ಯಂ ಸ್ವಾಧ್ಯಾಯಶೀಲಿನಃ ॥ ೯ ॥

ಮಹಾದೇವಾರ್ಚನರತಾ ಭೂತಿಶಾಸನಭೂಷಿತಾಃ ।
ವೈಷ್ಣವಾಃ ಸೂರ್ಯಭಕ್ತಾ ವಾ ಪಾತ್ರಭೂತಾ ದ್ವಿಜೋತ್ತಮಾಃ ॥ ೧೦ ॥

ಏಭ್ಯ ಏವ ಪ್ರದಾತವ್ಯಮೀಹೇದ್ದಾನಫಲಂ ಯದಿ ।
ಆಪದ್ಯಪಿ ನ ದಾತವ್ಯಮನ್ಯೇಭ್ಯ ಇತಿ ನಿಶ್ಚಿತಂ ॥ ೧೧ ॥

ಯಸ್ತು ಮಾಹೇಶ್ವರೋ ವಿಪ್ರೋ ಜಾತಿಮಾತ್ರೋಽಪಿ ಯದ್ಯಪಿ ।
ಉತ್ತಮಸ್ಸರ್ವಪಾತ್ರಾಣಾಂ ತಸ್ಮೈ ದತ್ತಂ ತದಕ್ಷಯಂ ॥ ೧೨ ॥

ಶಿವಭಕ್ತಮತಿಕ್ರಮ್ಯ ಯಚ್ಚಾನ್ಯಸ್ಮೈ ಪ್ರದೀಯತೇ ।
ನಿಷ್ಫಲಂ ತದ್ಭವೇದ್ದಾನಂ ನರಕಂ ಚ ಪ್ರಪದ್ಯತೇ ॥ ೧೩ ॥

ಆಸಕ್ತಿಯುಳ್ಳವರೂ, ವೇದಾಧ್ಯಯನ ಸಂಪನ್ನರೂ ಈಶ್ವರಾರ್ಚನೆಯಲ್ಲಿ ಆಸಕ್ತರೂ ಆದವರೇ ಸರಿಯಾದ ಪಾತ್ರರು. ದಾನಕ್ಕೆ ಶೈವನಾಗಲಿ, ವೈಷ್ಣವನಾಗಲಿ, ಸೂರ್ಯಭಕ್ತನೇ ಆಗಲಿ, ಎಲ್ಲರೂ ಶ್ರೇಷ್ಠರೇ. ಈ ಗುಣಗಳಿಂದ ಕೂಡಿದವರಿಗೇ ಯಾವಾಗಲೂ ದಾನಮಾಡಬೇಕು. ಈ ದಾನಗಳಿಂದಲೇ ಮನುಷ್ಯನು ಸಂಪೂರ್ಣ ಫಲವನ್ನು ಪಡೆಯುವನು. ಎಂಥ ಆಪತ್ತಿನಲ್ಲಿಯೂ ಅಪಾತ್ರನಿಗೆ ದಾನಮಾಡಬಾರದು.

೧೨. ಬ್ರಾಹ್ಮಣನಾಗಿ ಯಾವನು ಶಿವಭಕ್ತನಾಗಿರುವನೋ, ಆತನು ಎಲ್ಲರಿಗಿಂತಲೂ ಶ್ರೇಷ್ಠನಾದವನು. ಅವನಿಗೆ ಕೊಟ್ಟದಾನವು ಅತಿಶಯವಾದ ಫಲವನ್ನು ಕೊಡುವುದು.

೧೩. ಶಿವಭಕ್ತನಾದ ಬ್ರಾಹ್ಮಣನನ್ನು ಬಿಟ್ಟು ಯಾರು ಬೇರೆಯವರಿಗೆ ದಾನ ಮಾಡುವರೋ ಅವರ ದಾನವು ನಿಷ್ಫಲವಾಗುವುದು. ಅಲ್ಲದೆ ಅವರಿಗೆ ನರಕಪ್ರಾಪ್ತಿಯೂ ಆದೀತು.

ತಸ್ಮಾತ್ಸಾತ್ರತಮಂ ಜ್ಞಾತ್ವಾ ಶಿವಭಕ್ತಮಕಲ್ಮಶಂ ।
ತಸ್ಮೈ ಸರ್ವಂ ಪ್ರದಾತವ್ಯಂ ಅಕ್ಷಯಂ ಫಲಮಿಚ್ಛತಾ ॥ ೧೪ ॥

ದಾನಂ ಫಲಮನುದ್ದಿಶ್ಯ ಸರ್ವದಾ ಯತ್ಪ್ರದೀಯತೇ ।
ತದ್ದಾನಂ ನಿತ್ಯಮಿತ್ಯುಕ್ತಂ ದೇವದೇವೇನ ಭಾನುನಾ ॥ ೧೫ ॥

ದಾನಂ ಪಾಪವಿಶುದ್ಧ್ಯರ್ಥಂ ಶ್ರದ್ಧಯಾ ಯತ್ಪ್ರದೀಯತೇ ।
ಪ್ರೋಕ್ತಂ ನೈಮಿತ್ತಿಕಂ ದಾನಂ ಋಷಿಭಿರ್ವೇದವಾದಿಭಿಃ ॥ ೧೬ ॥

ಪುತ್ರಾರ್ಥಂ ವಾ ಧನಾರ್ಥಂ ವಾ ಸ್ವರ್ಗಾರ್ಥಂ ವಾಽನ್ಯತೋಽಪಿ ವಾ ।
ಯದ್ದಾನಂ ದೀಯತೇ ಭಕ್ತ್ಯಾ ಕಾಮ್ಯಮಿತ್ಯಭಿಧೀಯತೇ ॥ ೧೭ ॥

ಹರಸ್ಯ ಪ್ರೀಣನಾರ್ಥಂ ಯಚ್ಛಿವಭಕ್ತಾಯ ದೀಯತೇ ।
ದಾನಂ ತದ್ವಿಮಲಂ ಪ್ರೋಕ್ತಂ ಕೇವಲಂ ಮೋಕ್ಷಸಾಧನಂ ॥ ೧೮ ॥

---

೧೪. ಆದ್ದರಿಂದ ಶಿವಭಕ್ತಿಯಿಂದ ಯಾವಾತನು ಸತ್ಪಾತ್ರನೆನಿಸಿಕೊಂಡಿರುವನೋ ಅವನಿಗೇ ದಾನಮಾಡಬೇಕು. ಅದರಿಂದಲೇ ದಾತೃವು ಸಂಪೂರ್ಣ ಫಲವನ್ನು ಹೊಂದುವನು.

೧೫. ಯಾವ ವಿಧವಾದ ಫಲಾಪೇಕ್ಷೆಯೂ ಇಲ್ಲದೆ ನಿತ್ಯವೂ ಮಾಡುವ ದಾನಕ್ಕೆ ನಿತ್ಯದಾನವೆಂದು ಹೆಸರು. ಸೂರ್ಯದೇವನೇ ಮನುವಿಗೆ ಹೀಗೆ ನಿತ್ಯದಾನದ ಸ್ವರೂಪವನ್ನು ತಿಳಿಸಿರುವನು.

೧೬. ಪಾಪಪರಿಹಾರಕ್ಕಾಗಿ ಶ್ರದ್ಧೆಯಿಂದ ಮಾಡಿದ ದಾನಕ್ಕೆ ನೈಮಿತ್ತಿಕದಾನವೆಂದು ಹೆಸರು. ಇದು ಮುನಿಸಮ್ಮತವು.

೧೭. ಪುತ್ರಾಪೇಕ್ಷೆಯಿಂದಾಗಲೀ, ಧನಾಭಿಲಾಷೆಯಿಂದಾಗಲಿ, ಸ್ವರ್ಗಪ್ರಾಪ್ತಿಗಾಗಲಿ, ಮಾಡುವ ದಾನಗಳಿಗೆ ಕಾಮ್ಯದಾನಗಳೆಂದು ಹೆಸರು.

೧೮. ಶಿವಪ್ರೀತ್ಯರ್ಥವಾಗಿ, ಶೈವನಿಗೆ ಕೊಟ್ಟದಾನವೇ ವಿಮಲದಾನವು. ಇದು ದಾತೃವಿಗೆ ಶೀಘ್ರವಾಗಿ ಮೋಕ್ಷಕೊಡತಕ್ಕದ್ದು.

ಯತ್ಕಿಂಚಿದ್ದೀಯತೇ ದಾನಂ ದರಿದ್ರಾಯ ವಿಶೇಷತಃ ।
ದಾನಂ ತದಧಿಕಂ ಪ್ರೋಕ್ತಂ ಸ್ವಕುಟುಂಬಾ ವಿರೋಧತಃ ॥ ೧೯ ॥

ಸ್ವಲ್ಪಾಮಪಿಮಹೀಂ ಯಸ್ತು ದದಾತಿಶ್ರದ್ಧಯಾಽನ್ವಿತಃ ।
ಸ ಯಾತಿ ಬ್ರಹ್ಮಸದನಂ ಯತ್ರ ದೇವಃ ಸ್ವಯಂ ವಿರಾಟ್ ॥ ೨೦ ॥

ಇಕ್ಷುಗೋಧೂಮತುವರೀಯವೈಶ್ಚ ಸಹಿತಾಂ ಮಹೀಂ ।
ಯೋ ದದಾತಿ ದರಿದ್ರಾಯ ಸ ಯಾತಿ ಸವಿತುಃ ಪದಂ ॥ ೨೧ ॥

ಅಪಿ ಗೋಚರ್ಮಮಾತ್ರಾಂ ಯೋ ದದಾತಿ ಶ್ರದ್ಧಯಾನ್ವಿತಃ ।
ಶಿವಭಕ್ತಾಯ ಶಾಂತಾಯ ಸರ್ವಪಾಪೈಃ ಪ್ರಮುಚ್ಯತೇ ॥ ೨೨ ॥

ನ ಭೂಮಿದಾನಾದಧಿಕಂ ದಾನಮಸ್ತೀಹ ಭೂತಲೇ ।
ತದ್ದಾನಂ ಹಿ ದರಿದ್ರಾಯ ದತ್ತಂ ಭವತಿ ಚಾಕ್ಷಯಂ ॥ ೨೩ ॥

---

೧೯. ದಾನಮಾಡತಕ್ಕ ವಸ್ತುವು ಅಲ್ಪವೇ ಆಗಿದ್ದರೂ, ಅದನ್ನು ದರಿದ್ರನಿಗೇ ದಾನಮಾಡಬೇಕು. ಅಂಥ ಅಲ್ಪದಾನವೂ ಮಹಾದಾನವೆನಿಸಿಕೊಳ್ಳುತ್ತದೆ. ಆದರೆ ಮಾಡುವ ದಾನವು ತನ್ನ ಕುಟುಂಬವರ್ಗದವರಿಗೆ ವಿರೋಧವಾಗಿರಬಾರದು.

೨೦. ಸ್ವಲ್ಪವಾದರೂ ಭೂಮಿಯನ್ನು ಭಕ್ತಿಯಿಂದ ದಾನಮಾಡಿದವನಿಗೆ ಸಾಕ್ಷಾದ್ವಿರಾಟ್ಪುರುಷನಾದ ಪರಬ್ರಹ್ಮನ ಆವಾಸಸ್ಥಾನವಾದ ಬ್ರಹ್ಮಲೋಕವು ಪ್ರಾಪ್ತವಾಗುವುದು.

೨೧. ಕಬ್ಬು, ಗೋಧಿ, ದ್ವಿದಳಧಾನ್ಯ ಮತ್ತು ಬತ್ತ ಇವುಗಳ ಬೆಳೆಯಿಂದ ಕೂಡಿದ ಭೂಮಿಯನ್ನು ದರಿದ್ರನಿಗೆ ದಾನಮಾಡಿದರೆ, ಅವನು ಸೂರ್ಯಲೋಕವನ್ನು ಹೊಂದುವನು.

೨೨. ಯಾವನು ಭಕ್ತಿಯಿಂದ ಗೋಚರ್ಮದಷ್ಟು ಅಗಲವಾದ ಭೂಮಿಯನ್ನಾಗಲಿ, ಶಿವಾರ್ಚಕನಾದ ಮತ್ತು ಶಾಂತಾತ್ಮನಾದ ಮನುಷ್ಯನಿಗೆ ದಾನಮಾಡುವನೋ ಅವನು ಸಮಸ್ತ ಪಾಪಗಳಿಂದಲೂ ಬಿಡುಗಡೆ ಹೊಂದುವನು

೨೩. ದರಿದ್ರನಿಗೆಮನಃಪೂರ್ವಕವಾಗಿ ದಾನಮಾಡಿದ ಭೂದಾನಕ್ಕಿಂತ ದೊಡ್ಡ ದಾನವು ಮತ್ತೊಂದಿಲ್ಲ. ಅಕ್ಷಯಫಲವನ್ನುಕೊಡುವ ದಾನವೆಂದರೇ ಅದೇ.

ಆಢ್ಯಾಯ ನೈವ ದಾತವ್ಯಂ ಭೂಮಿದಾನಂ ವಿಶೇಷತಃ ।
ಯೋ ದದಾತಿ ಭಯಾತ್ ಸ್ನೇಹಾತ್ ಸೋಽಕ್ಷಯಂ ನರಕಂ ವ್ರಜೇತ್ ॥

ಯೈರ್ದತ್ತಾ ಬ್ರಾಹ್ಮಣೇಭ್ಯಶ್ಚ ಗ್ರಾಮಾಃ ಪರಮಧಾರ್ಮಿಕೈಃ ।
ಗೃಹ್ಣಂತಿ ಯೇ ಕರಂ ತೇಷು ಲೋಭಾಂಧಾಃ ಪಾಪಿನೋ ನೃಪಾಃ ॥ ೨೫ ॥

ನರಕೇಷು ವಿಪಚ್ಯಂತೇ ಯಾವತ್ಕಲ್ಪಾಯುತತ್ರಯಂ ।
ತದಂತೇ ಮಕ್ಷಿಕಾ ಯೂಕಾ ಮತ್ಕುಣಾ ಮಶಕಾಸ್ತಥಾ ॥ ೨೬ ॥

ಕೃಮಯೋ ಜಾಲಪಾದಾಶ್ಚ ಶೂಕರಾಃ ಪಕ್ಷಿಣಸ್ತಥಾ ।
ಶ್ವಾನೋ ಗೋಧಾಃ ಶಶಾಃ ಸೇಧಾ ಗರ್ದಭಾಶ್ಚ ಪಿಪೀಲಿಕಾಃ ॥ ೨೭ ॥

ಮೂಷಕಾಃ ಕೃಕಲಾಸಾಶ್ಚ ವೃಕ್ಷಗುಲ್ಮಾದಯಸ್ತಥಾ ।
ಭವಂತಿ ಯುಗಸಾಹಸ್ರಂ ತದಂತೇ ಮ್ಲೇಚ್ಛಜಾತಯಃ ॥ ೨೮ ॥

---

೨೪. ಯಾವಾಗಲೂ ಶ್ರೀಮಂತನಿಗೆ ಭೂದಾನವನ್ನು ಕೊಡಬಾರದು. ಭಯದಿಂದಾಗಲಿ, ಸ್ನೇಹದಿಂದಾಗಲೀ ಶ್ರೀಮಂತನಿಗೆ ದಾನಕೊಟ್ಟರೆ ಅವನಿಗೆ ಶಾಶ್ವತವಾದ ನರಕವು ಲಭಿಸುವುದು.

೨೫. ಧಾರ್ಮಿಕರಾದವರು ಬ್ರಾಹ್ಮಣರಿಗೆ ದಾನಮಾಡಿದ ಭೂಮಿಯಿಂದ, ರಾಜರು ಕಂದಾಯವೇ ಮೊದಲಾದ ತೆರಿಗೆಗಳನ್ನು ಸ್ವೀಕರಿಸಬಾರದು. ಹಾಗೆ ಮಾಡದೆ ಪಾಪಿಗಳೂ, ಆಶಾಪರರೂ ಆದ ರಾಜರು ಅವರಿಂದ ಕಪ್ಪಕಾಣಿಕೆಗಳನ್ನು ಸೆಳೆದುಕೊಂಡರೆ, ಕಲ್ಪಾಂತರಗಳವರೆಗೂ ಅವರು ನರಕದಲ್ಲಿ ದುಃಖಪಡಬೇಕಾಗುವುದು.

೨೬–೨೮. ಆ ಮೇಲೂ ಅವರು ಭೂಲೋಕದಲ್ಲಿ ನೊಣಗಳಾಗಿಯೂ, ಜೇನು ಹುಳುಗಳಾಗಿಯೂ, ತಿಗಣೆಗಳಾಗಿಯೂ, ಸೊಳ್ಳೆಗಳಾಗಿಯೂ ಜನಿಸುವರು. ಅಷ್ಟೇ ಅಲ್ಲದೆ ಕ್ರಮವಾಗಿ, ಕ್ರಿಮಿಗಳು, ಜಲಚರ ಪ್ರಾಣಿಗಳು, ಹಂದಿ, ಪಕ್ಷಿ, ನಾಯಿ, ಮೊಲ, ನರಿ, ಕತ್ತೆ, ಇರುವೆ, ಇಲಿ, ಕೋಳಿ, ಮರ, ಪೊದರು ಇವೇ ಮೊದಲಾದ ಕಷ್ಟಜೀವಿಗಳ ಜನ್ಮವನ್ನು ಪಡೆದು, ಸಹಸ್ರಾರು ಯುಗಗಳು ಈ ಜನ್ಮಗಳನ್ನನುಭವಿಸಿ, ಕೊನೆಗೆ ಮ್ಲೇಚ್ಛಜಾತಿಯಲ್ಲಿ ಜನಿಸುವರು.

ನ ತೇಷಾಂ ನಿಷ್ಕೃತಿರ್ದೃಷ್ಟಾ ಪ್ರಾಯಶ್ಚಿತ್ತಶತೈರಪಿ ।
ಬ್ರಹ್ಮಹಾ ಶುದ್ಧಿಮಾಪ್ನೋತಿ ಕಾಲೇನ ಮುನಿಪುಂಗವಾಃ ॥ ೨೯ ॥

ದ್ವಿಜಗ್ರಾಮಕರಗ್ರಾಹೀ ನೈವ ಶುದ್ಧಿಮವಾಪ್ನುಯಾತ್ ।
ತಸ್ಮಾತ್ಪರಿಹರೇತ್ತತ್ರ ಕರಂ ಯತ್ನೇನ ಬುದ್ಧಿಮಾನ್ ॥ ೩೦ ॥

ವಿಪ್ರದಾನಕರಾದಾನಾದಧಿಕಂ ನಾಸ್ತಿ ಪಾತಕಂ ।
ದಾನಾನಾಮುತ್ತಮಂ ದಾನಂ ವಿದ್ಯಾದಾನಂ ವಿದುರ್ಬುಧಾಃ ॥ ೩೧ ॥

ತಚ್ಚ ದಾನಂ ವಿನೀತಾಯ ವರ್ಣಾಶ್ರಮರತಾಯ ಚ ।
ಬ್ರಾಹ್ಮಣಾಯೈವ ಶಾಂತಾಯ ಶುಶ್ರೂಷಣರತಾಯ ಚ । ॥ ೩೨ ॥

ದತ್ತಂ ತದ್ಬ್ರಹ್ಮಲೋಕಾಯ ವಿದ್ಯಾದಾನಂ ಪ್ರಚಕ್ಷತೇ ।
ಅನ್ನದಾನಂ ಪ್ರಶಂಸಂತಿ ವಿದುಷೋ ವೇದವಾದಿನಃ ॥ ೩೩ ॥

೨೯-೩೦. ಎಷ್ಟೇ ಪ್ರಾಯಶ್ಚಿತ್ತಗಳನ್ನು ನಡೆಸಿಕೊಂಡರೂ ಆ ಪಾಪವು ಪರಿಹಾರವಾಗಲಾರದು. ಬ್ರಹ್ಮಹತ್ಯೆಯೂ ಸಹ ಕಾಲಾನುಕ್ರಮವಾಗಿ ಕಳೆದು ಹೋದೀತು. ಆ ಪಾಪವು ಮಾತ್ರ ಎಂದಿಗೂ ನಾಶವಾಗಲಾರದು. ಆದ್ದರಿಂದ ರಾಜನಾದವನು ದತ್ತವಾದ ಭೂಮಿಯಿಂದ ಕಂದಾಯವನ್ನು ಎಂದಿಗೂ ಸ್ವೀಕರಿಸಬಾರದು.

೩೧. ವಿಪ್ರರಿಗೆ ದಾನಮಾಡಿದ ಭೂಮಿಯಿಂದ ಕಂದಾಯವನ್ನು ತೆಗೆದುಕೊಳ್ಳುವುದು ಮಹಾಪಾತಕವೆನಿಸಿಕೊಳ್ಳುವುದು. ಅಲ್ಲದೆ ಎಲೈ ಋಷಿಗಳಿರಾ ಇದೇ ಭೂದಾನದಂತೆಯೇ ಉತ್ತಮೋತ್ತಮವಾದ ಮತ್ತೊಂದು ದಾನವುಂಟು. ಅದು ಯಾವುದೆಂದರೆ ವಿದ್ಯಾದಾನವೇ.

೩೨. ಆ ವಿದ್ಯಾದಾನವನ್ನು, ವಿನಯಶೀಲನೂ, ವರ್ಣಾಶ್ರಮಗಳಲ್ಲಿ ಆಸಕ್ತಿಯುಳ್ಳವನೂ, ಬ್ರಾಹ್ಮಣನೂ, ಶಾಂತನೂ, ಸೇವೆಯಲ್ಲಿ ಬದ್ಧಾದರನೂ ಆದವನಿಗೆ ನೀಡಬೇಕು.

೩೩. ಈ ವಿದ್ಯಾದಾನದಿಂದ ಮನುಷ್ಯನಿಗೆ ಬ್ರಹ್ಮಲೋಕ ಪ್ರಾಪ್ತಿಯಾಗುವುದು ಇದರಂತೆಯೇ ಅನ್ನದಾನವೂ ಶ್ರೇಷ್ಠವಾದದ್ದೆಂದು ವೇದಜ್ಞರಾದ ಮಹರ್ಷಿಗಳು ಹೊಗಳುವರು.

ಅನ್ನಮೇವ ಯತಃ ಪ್ರಾಣಾಃ ಪ್ರಾಣದಾನಸಮಂ ಹಿ ತತ್ ।
ತಸ್ಮಾದಹರಹರ್ದೇಯಂ ಅನ್ನಮೇವ ವಿಚಕ್ಷಣೈಃ ॥ ೩೪ ॥

ಅಪರೀಕ್ಷ್ಯೈವ ಸರ್ವೇಭ್ಯ ಇತಿ ಸ್ವಾಯಂಭುಶಾಸನಾತ್ ।
ಪ್ರೀತೋ ವಿರಂಚಿರನ್ನೇನ ಪ್ರೀತಶ್ಚ ಕಮಲಾಪತಿಃ ॥ ೩೫ ॥

ಪ್ರೀತಶ್ಚ ಭಗವಾನ್ ಶಂಭುರನ್ನೇನೈವ ಶಚೀಪತಿಃ ।
ತಸ್ಮಾದ್ವಿಶಿಷ್ಟಂ ತದ್ದೇಯಮಾಹುರ್ವೇದವಿದೋ ಬುಧಾಃ ॥ ೩೬ ॥

ಆಮಮನ್ನಂ ಗೃಹಸ್ಥಾಯ ನೈವ ಪಕ್ವಂ ಕದಾಚನ ।
ನಾಧ್ವಗಾಯ ನಿಷಿದ್ಧಂ ತದಿತಿ ದೇವೋಽಬ್ರವೀದ್ರವಿಃ ॥ ೩೭ ॥

---

೩೪. ಏಕೆಂದರೆ ಮನುಷ್ಯರಿಗೆ ಅನ್ನವೇ ಪ್ರಾಣ. ಅನ್ನವೆಂದರೆ, ಆಹಾರವನ್ನಾಗಿ ಬಳಸುವ ಭೋಜ್ಯವಸ್ತು. ಇದರ ದಾನವು ಪ್ರಾಣದಾನಕ್ಕೆ ಸಮನಾಗುವುದು. ಆದ್ದರಿಂದ ಬುದ್ಧಿಶಾಲಿಗಳಾದವರು ಪ್ರತಿನಿತ್ಯವೂ ಅನ್ನದಾನವನ್ನು ಮಾಡತಕ್ಕದ್ದು ಅತ್ಯಂತ ಪುಣ್ಯಪ್ರದವಾದದ್ದು.

೩೫. ಅನ್ನದಾನವನ್ನು ಮಾತ್ರ ಪಾತ್ರಾಪಾತ್ರ ವಿವೇಚನೆಯಿಲ್ಲದೆ ಮಾಡಬಹುದು. ಈ ವಿಧವಾದ ಅನ್ನದಾನದಿಂದ ಬ್ರಹ್ಮನೂ, ಮಹಾವಿಷ್ಣುವೂ ತೃಪ್ತಿ ಹೊಂದುವರು, ಎಂಬುದು ಪರಬ್ರಹ್ಮನಮಾತು.

೩೬. ದೇವೇಂದ್ರನ ಮತ್ತು ಪರಮೇಶ್ವರನ ಅನುಗ್ರಹವನ್ನು ಪಡೆಯಬೇಕಾದರೂ ಅನ್ನದಾನವನ್ನು ಮಾಡಲೇಬೇಕು. ಅಂತೂ ಅನ್ನದಾನವು ಸಮಸ್ತ ದೇವತಾ ಪ್ರೀತಿಕರವಾಗಿಯೇ ಇರುತ್ತದೆ. ಆದ್ದರಿಂದಲೇ ಈ ದಾನವನ್ನು ಶ್ರೇಷ್ಠವಾದ ದಾನವೆಂದು ಸಮಸ್ತಮುನಿಗಳೂ ಹೇಳುತ್ತಿರುವರು.

೩೭. ಗೃಹಸ್ಥನಾದ ಕುಟುಂಬಿಗೆ ಅಪಕ್ವವಾದ ಅಂದರೆ ಬೇಯಿಸದೆ ಹಸಿಯದಾಗಿರುವ ಆಹಾರ ಪದಾರ್ಥಗಳನ್ನೇ ದಾನಮಾಡಬೇಕು. ಎಂದಿಗೂ ಪಕ್ವವಾದ ಆಹಾರ ವಸ್ತುಗಳನ್ನು ದಾನಮಾಡಬಾರದು. ಆದರೆ ಪ್ರಯಾಣದಲ್ಲಿರುವ ಗೃಹಸ್ಥನಿಗೆ ಮಾತ್ರ ಪಕ್ವಾನ್ನವನ್ನು ಸ್ವೀಕರಿಸುವ ಯೋಗ್ಯತೆ ಇದೆ ಎಂದು ಸೂರ್ಯದೇವನ ಅಭಿಪ್ರಾಯವಾಗಿರುವುದು.

ಜಲದಾನಮಪಿ ಪ್ರೋಕ್ತಂ ಅನ್ನದಾನೇನ ವೈ ಸಮಂ ।
ಜೀವನಂ ಸರ್ವಭೂತಾನಾಂ ಜಲಮೇವ ದ್ವಿಜೋತ್ತಮಾಃ ॥ ೩೮ ॥

ತಿಲದಃ ಪುತ್ರಮಾಪ್ನೋತಿ ವಾಸೋದಃ ಕಾಂತಿಮುತ್ತಮಾಂ ।
ದೀಪದೋ ನಿರ್ಮಲಾಂ ದೃಷ್ಟಿಂ ಯಾನದಃ ಶ್ರಿಯಮುತ್ತಮಾಂ ॥ ೩೯ ॥

ಶಯ್ಯಾಪ್ರದಶ್ಚಾಪಿ ತಥಾ ಧಾನ್ಯದಃ ಸೌಖ್ಯಮುತ್ತಮಂ ।
ಅಶ್ವಿನೋರ್ಲೋಕಮಾಪ್ನೋತಿ ಸೌಂದರ್ಯಂ ಘೋಟಕಪ್ರದಃ ॥ ೪೦ ॥

ಬ್ರಹ್ಮದಾನಂ ಮಹದ್ದಾನಂ ಇತಿ ವೇದವಿದೋ ವಿದುಃ ।
ತೇನ ದಾನೇನ ಮಹತಾ ಸಾಯುಜ್ಯಂ ಬ್ರಹ್ಮಣಃ ಸ್ಮೃತಂ ॥ ೪೧ ॥

ಗೃಹೀತ್ವಾ ವೇತನಂ ವೇದಂ ಯೋಽಧ್ಯಾಪಯತಿ ಮೂಢಧೀಃ ।
ಅಧೀತೇ ಯೋ ಹಿ ವಾ ದತ್ವಾ ತಾವುಭೌ ಪಾಪಿನೌ ಸ್ಮೃತೌ ॥ ೪೨ ॥

---

೩೮. ನೀರಿನ ದಾನವನ್ನು ಅನ್ನದಾನಕ್ಕೆ ಸಮನೆಂದು ಹೇಳುವರು. ಏಕೆಂದರೆ ಸಮಸ್ತ ಪ್ರಾಣಿಗಳಿಗೂ, ಅನ್ನವು ಹೇಗೆ ಪ್ರಾಣವೋ ಹಾಗೆ ನೀರೂ, ಮುಖ್ಯ ಜೀವನಾಧಾರವಾದದ್ದೇ.

೩೯. ಎಳ್ಳಿನ ದಾನದಿಂದ ಸಂತಾನಪ್ರಾಪ್ತಿಯೂ, ವಸ್ತ್ರದಾನದಿಂದ ಉತ್ತಮವಾದ ತೇಜಸ್ಸೂ, ದೀಪದಾನದಿಂದ ನಿರ್ಮಲವಾದ ದೃಷ್ಟಿಯೂ, ವಾಹನಗಳ ದಾನದಿಂದ ಸಂಪೂರ್ಣವಾದ ಐಶ್ವರ್ಯವೂ ಉಂಟಾಗುತ್ತದೆ. ಆದ್ದರಿಂದ ಆಯಾ ಫಲಾಪೇಕ್ಷೆಯುಳ್ಳವರು ಆಯಾ ದಾನಗಳನ್ನು ಮಾಡಬೇಕು.

೪೦. ಶಯ್ಯಾದಾನ, ಧಾನ್ಯದಾನ ಇವುಗಳಿಂದ ಅತಿಶಯವಾದ ಸುಖವು ಲಭಿಸುವುದು. ಕುದುರೆಯನ್ನು ಸತ್ಪಾತ್ರನಿಗೆ ದಾನಮಾಡುವುದರಿಂದ ಸೌಂದರ್ಯವನ್ನೂ ಹಾಗೆಯೇ ಅಶ್ವಿನೀ ದೇವತೆಗಳ ಲೋಕವನ್ನೂ ಹೊಂದಬಹುದು

೪೧. ವೇದಜ್ಞರು ಬ್ರಹ್ಮದಾನವನ್ನು ಮಹಾದಾನವೆಂದಿರುವರು. ಬ್ರಹ್ಮದಾನವೆಂದರೆ ತಾನು ತಿಳಿದಿರುವ ವೇದಾರ್ಥಗಳನ್ನು ಮತ್ತೊಬ್ಬರಿಗೆ ಉಚಿತವಾಗಿ ಬೋಧಿಸುವುದು. ಆ ಬ್ರಹ್ಮದಾನದಿಂದ ಬ್ರಹ್ಮಸಾಯುಜ್ಯವೂ ದೊರಕುವುದು.

೪೨. ಯಾರು ದ್ರವ್ಯವನ್ನು ಸ್ವೀಕರಿಸಿ ವೇದವನ್ನು ಹೇಳಿಕೊಡುವರೋ, ಯಾರು ದ್ರವ್ಯವನ್ನು ಕೊಟ್ಟು ವೇದವನ್ನು ಕಲಿಯುವರೋ, ಅವರಿಬ್ಬರೂ ಮಹಾಪಾಪಿಷ್ಠರು ಎಂದು ಉಕ್ತವಾಗಿದೆ. ಆದ್ದರಿಂದ ಬ್ರಹ್ಮವಿದ್ಯೆಯು ದಾನರೂಪವಾಗಿಯೇ ಇರಬೇಕು.

ತಯೋ ರ್ಮುಖಗತಾ ವೇದಾ ನಿಂದಿತಾಃ ಸರ್ವಕರ್ಮಸು ।
ಸುರಾಭಾಂಡಗತಂ ತೋಯಂ ಯಥಾ ಭವತಿ ನಿಂದಿತಂ ॥ ೪೩ ॥

ಗವಾಂ ಗ್ರಾಸಪ್ರದಾನೇನ ಮುಚ್ಯತೇ ಸರ್ವಪಾತಕೈಃ ।
ಯಾನಿ ಭೋಜ್ಯಾನಿ ಮೂಲಾನಿ ಫಲಾನಿ ವಿವಿಧಾನಿ ಚ ॥ ೪೪ ॥

ಶಾಕಾನಿ ಬ್ರಾಹ್ಮಣೇಭ್ಯಶ್ಚ ದತ್ವಾತ್ಯಂತಂ ಸುಖೀ ಭವೇತ್ ।
ಇಂಧನಾನಾಂ ಪ್ರದಾನೇನ ಜಠರಾಗ್ನಿಪ್ರದೀಪನಂ ॥ ೪೫ ॥

ಪರಲೋಕಗತಾನಾಂ ಚ ಛತ್ರದಾನಂ ಸುಖಪ್ರದಂ ।
ರೋಗಿಣೇ ರೋಗಶಾಂತ್ಯರ್ಥಂ ಔಷಧಂ ಯಃ ಪ್ರಯಚ್ಛತಿ ॥ ೪೬ ॥

ರೋಗಹೀನಃ ಸ ದೀರ್ಘಾಯುಃ ಸುಖೀ ಭವತೀ ಸರ್ವದಾ ।
ಗಾಮಲಂಕೃತ್ಯ ಯೋ ದದ್ಯಾತ್ ಸವತ್ಸಾಂ ಚ ಸದಕ್ಷಿಣಾಂ ॥ ೪೭ ॥

---

೪೩. ಅಂಥ ಪಾಪಿಗಳು ಹೇಳುವ ವೇದವು, ಮದ್ಯಭಾಂಡದಲ್ಲಿರುವ ನೀರಿನಂತೆ ಅಪವಿತ್ರವಾದದ್ದು ಮತ್ತು ಸಕಲಕರ್ಮಗಳಿಗೂ ಗರ್ಹ್ಯವಾದದ್ದು.

೪೪. ಗೋವುಗಳಿಗೆ ಆಹಾರಕೊಡುವುದರಿಂದ ಮನುಷ್ಯನ ಸಮಸ್ತಪಾಪ ಗಳೂ ನಿವಾರಣೆಯಾಗುವುವು. ಅದೇ ಗೋಗ್ರಾಸದಾನ, ಅವುಗಳು ಪ್ರೀತಿಯಿಂದ ತಿನ್ನತಕ್ಕ ಕಂದಮೂಲಾದಿಗಳನ್ನೂ ಹಣ್ಣುಹಂಪಲುಗಳನ್ನೂ ಇನ್ನೂ ಇತರ ಪ್ರಸಿದ್ಧ ಗೋಗ್ರಾಸಗಳನ್ನೂ ಆಹಾರವಾಗಿ ಕೊಡಬಹುದು.

೪೫. ಬ್ರಾಹ್ಮಣರಿಗೆ ತರಕಾರಿಗಳನ್ನು ದಾನಕೊಡುವುದರಿಂದ ದಾತೃವು ಹೆಚ್ಚು ಸುಖಿಯಾಗುತ್ತಾನೆ. ಜಠರಾಗ್ನಿಯು ಹೆಚ್ಚಿ ಮನುಷ್ಯನು ರೋಗಾದಿಗಳನ್ನು ಹೊಂದದೇ ಇರಬೇಕಾದರೆ ಸೌದೆಯನ್ನು ದಾನಮಾಡಬೇಕು.

೪೬. ಪರಲೋಕಕ್ಕೆ ಹೋದವರ ತೃಪ್ತಿಗಾಗಿ ಛತ್ರಿಯನ್ನು ದಾನಮಾಡ ಬೇಕು. ಅಲ್ಲದೆ ರೋಗವನ್ನು ನಿವಾರಿಸುವಂತಹ ಔಷಧವನ್ನು ರೋಗಿಗೆ ದಾನ ಮಾಡುವುದು ಅತ್ಯಂತ ಶ್ರೇಯಸ್ಕರವಾದುದು. ಇದರಿಂದ ಸಮಸ್ತ ರೋಗಗಳ ಬಾಧೆಯನ್ನೂ ತಪ್ಪಿಸಿಕೊಳ್ಳಬಹುದು.

೪೭. ಹಾಗೆ ಔಷಧವನ್ನು ದಾನಮಾಡಿದವನು, ದೀರ್ಘಾಯುಸ್ಸನ್ನೂ, ಬದು ಕಿರುವವರೆಗೂ ಸಂಪೂರ್ಣ ಆರೋಗ್ಯವನ್ನೂ ಪಡೆಯುವನು. ಹಾಗೆಯೇ ದಾನ ಗಳಲ್ಲಿ ಗೋದಾನವೆಂಬುದೂ ಒಂದು ಉತ್ತಮವಾದ ದಾನ. ದಾನಮಾಡುವ ಹಸುವು ಅಲಂಕೃತವಾಗಿರಬೇಕು. ಎಳಗರುವಿನಿಂದ ಕೂಡಿರಬೇಕು. ಅಂತಹ ಗೋವನ್ನು ಸರಿ ಯಾದ ದಕ್ಷಿಣೆಯಿಂದ ದಾನಮಾಡಬೇಕು.

ಸಕ್ಷೀರಿಣೀಂ ದ್ವಿಜೇಂದ್ರಾಯ ಶ್ರದ್ಧಯಾ ದ್ವಿಜಪುಂಗವಾಃ ।
ಸ್ರಾಪ್ನೋತಿ ಶಾಶ್ವತಾಂಲ್ಲೋಕಾನ್ನಾನಾಭೋಗಸಮನ್ವಿತಾನ್ ॥ ೪೮ ॥
ಸಂಖ್ಯಾ ನೈವಾಸ್ತಿ ಪುಣ್ಯಾನಾಂ ಕಪಿಲಾಯಾಃ ಪ್ರದಾನತಃ ।
ಕೃಷ್ಣಾಜಿನಂ ಚ ಮಹಿಷೀ ಮೇಷೀ ಚ ದಶ ಧೇನವಃ ॥ ೪೯ ॥
ಬ್ರಹ್ಮಲೋಕಪ್ರದಾಯಿನ್ಯಸ್ತುಲಾಪುರುಷ ಏವ ಚ ।
ಷೋಡಶ ಕ್ರತವೋ ಯೇ ಚ ದಾನಂ ತೀರ್ಥೇಷು ಯತ್ಸ್ಮೃತಂ ॥ ೫೦ ॥
ತದಕ್ಷಯಂ ಭವೇದ್ದಾನಂ ಯೋಗಿನೇ ಚ ವಿಶೇಷತಃ ।
ಅಯನೇ ವಿಷುವೇ ಚೈವ ಗ್ರಹಣೇ ಚಂದ್ರಸೂರ್ಯಯೋಃ ॥ ೫೧ ॥
ಸಂಕ್ರಾಂತ್ಯಾದಿಷು ಕಾಲೇಷು ದತ್ತಂ ಭವತಿ ಚಾಕ್ಷಯಂ ।

---

೪೮. ಎಲೈ ಶೌನಕಾದಿಗಳೇ ಹಾಲುಕೊಡುವಂತಹ ಹಸುವನ್ನು ಯಾರು ಶ್ರದ್ಧೆಯಿಂದ ದ್ವಿಜಶ್ರೇಷ್ಠನಿಗೆ ದಾನಮಾಡುವರೋ, ಅವರು ನಾನಾ ವಿಧವಾದ ಸುಖಗಳಿಂದ ತುಂಬಿರುವ ಉತ್ತಮೋತ್ತಮವಾದ ಲೋಕಗಳನ್ನು ಹೊಂದುವರೆಂಬುದರಲ್ಲಿ ಸಂಶಯವಿಲ್ಲ.

೪೯-೫೦. ಅದರಲ್ಲೂ ಕಪಿಲವರ್ಣದ (ಕೆಂಪುಬಣ್ಣದ) ಹಸುವನ್ನು ದಾನಮಾಡುವುದರಿಂದ ಅಸಂಖ್ಯಾತವಾದ ಪುಣ್ಯವು ಲಭಿಸುವುದು. ಹಾಗೆಯೇ ಎಮ್ಮೆ, ಆಡು, ದಶಗೋದಾನಗಳು ಇವುಗಳ ದಾನವೂ, ತೂಕದಲ್ಲಿ ತನ್ನನ್ನಿಟ್ಟು ಅದೇತೂಕದ ವಸ್ತುಗಳನ್ನು ದಾನಮಾಡುವುದೂ ಸಹ ದಾತೃವಿಗೆ ಬ್ರಹ್ಮಲೋಕವನ್ನು ಕೊಡತಕ್ಕವುಗಳು. ತೀರ್ಥಕ್ಷೇತ್ರಗಳಲ್ಲಿ ಮಾಡಿದ ಯಾವ ದಾನವಾದರೂ ಷೋಡಶಮಹಾಯಾಗಗಳಿಗೆ ಸಮನಾಗಿ ಫಲವನ್ನು ಕೊಡತಕ್ಕದ್ದಾಗುವುದು.

೫೧. ಅದರಲ್ಲೂ ತೀರ್ಥಕ್ಷೇತ್ರಗಳಲ್ಲಿ ಯೋಗಿಯಾದವನಿಗೆ ಕೊಟ್ಟ ದಾನವಂತೂ ಅಕ್ಷಯ ಫಲವುಳ್ಳದ್ದಾಗುವುದು. ಹಾಗೆಯೇ ದಕ್ಷಿಣಾಯನ, ಉತ್ತರಾಯಣ ಸಂಕ್ರಮಣ ಕಾಲಗಳಲ್ಲಿಯೂ, ಸೂರ್ಯಚಂದ್ರರ ಗ್ರಹಣ ಕಾಲಗಳಲ್ಲಿಯೂ, ಇನ್ನೂ ಇತರ ಸೂರ್ಯ ಸಂಕ್ರಮಣ ಕಾಲಗಳಲ್ಲಿಯೂ ಮಾಡಿದ ಯಾವ ದಾನವೇ ಆಗಲಿ ಅದು ಅನಂತಾನಂತ ಫಲವನ್ನು ಕೊಡುವುದು.

ಶಿವಮುದ್ದಿಶ್ಯ ಯದ್ದತ್ತಂ ಸ್ವಲ್ಪಂ ವಾ ಯದಿ ವಾ ಬಹು ।
ಶಿವಾಲಯೇ ವಿಶೇಷೇಣ ದತ್ತಂ ಭವತಿ ಚಾಕ್ಷಯಂ ॥ ೫೨ ॥

ವಿಶಾಖರ್ಕ್ಷೇಣ ಸಂಯುಕ್ತಾ ವೈಶಾಖೀ ಪೂರ್ಣಿಮಾ ಭವೇತ್ ।
ತಸ್ಯಾಂ ತಿಥೌ ತು ಸಂಪೂಜ್ಯ ಬ್ರಾಹ್ಮಣಾನ್ ಸಪ್ತ ಪಂಚ ವಾ ॥ ೫೩ ॥

ಕೃಷ್ಣೈರೇವ ತಿಲೈರ್ವಿದ್ವಾನ್ಮಧುನಾ ವಾಪ್ಯುಪೋಷಿತಃ ।
ಧರ್ಮರಾಜೋ ಯಮಃ ಸಾಕ್ಷಾತ್ ಪ್ರೀಯತಾಮಿತಿ ಶಕ್ತಿತಃ ॥ ೫೪ ॥

ದದ್ಯಾದ್ವೇದಾರ್ಥವಿದುಷೇ ಯದಿ ವಾ ಶಿವಯೋಗಿನೇ ।
ಯಾವಜ್ಜೀವಂ ಕೃತೈಃ ಪಾಪೈಃ ಕಾಯಿಕೈರ್ವಾಙ್ಮನೋಗತೈಃ ॥ ೫೫ ॥
ಮುಚ್ಯತೇ ತತ್ಕ್ಷಣಾದೇವ ಧರ್ಮರಾಜಪ್ರಸಾದತಃ ॥ ೫೬ ॥

ಕೃಷ್ಣಾಜಿನೇ ತಿಲಾನ್ ಕೃತ್ವಾ ಹಿರಣ್ಯಂ ಮಧುಸರ್ಪಿಷೀ ।
ದದಾತಿ ಯಸ್ತು ವಿಪ್ರಾಯ ಸರ್ವಪಾಪೈಃ ಪ್ರಮುಚ್ಯತೇ ॥ ೫೭ ॥

---

೫೨. ಈಶ್ವರಾರ್ಪಣ ಬುದ್ಧಿಯಿಂದ, ಈಶ್ವರ ದೇವಾಲಯದಲ್ಲಿ ಮಾಡಿದ ದಾನವು ಸ್ವಲ್ಪವೇ ಆಗಲಿ, ಬಹುಪ್ರಮಾಣವುಳ್ಳದ್ದೇ ಆಗಲಿ, ಅದು ಅತಿಶಯವಾದ ಫಲವನ್ನು ಒದಗಿಸುವುದು. ಆದ್ದರಿಂದ ಶಿವದೇವಾಲಯದಲ್ಲಿ ಮಾಡುವ ದಾನವು ವಿಶೇಷಫಲಪ್ರದವಾಗುತ್ತದೆ.

೫೩. ವಿಶಾಖಾ ನಕ್ಷತ್ರಯುತವಾದ ವೈಶಾಖ ಶುದ್ಧ ಪೂರ್ಣಿಮಾದಿನ ಐದು ಅಥವಾ ಏಳು ಜನ ಬ್ರಾಹ್ಮಣರನ್ನು ಭಕ್ತಿಯಿಂದ ಆರಾಧಿಸಿ.

೫೪-೫೬. ಕರೀ ಎಳ್ಳು, ಅಥವಾ ಜೇನು ಇವುಗಳನ್ನು ದಾನಮಾಡಬೇಕು. ದಾನದಕಾಲದಲ್ಲಿ ಸಾಕ್ಷಾತ್ ಧರ್ಮರಾಜನಾದ ಯಮನು ಇದರಿಂದ ತೃಪ್ತಿಹೊಂದಲಿ ಎಂಬ ಭಾವನೆಯಿರಬೇಕು. ಆ ದಾನಗಳನ್ನು ವೇದಾರ್ಥಜ್ಞಾನಿಗಳಾಗಿ ಸದ್ಗುಣ ಭರಿತನಾಗಿರುವ ಶಿವಯೋಗಿಗಳಿಗೆ ಕೊಡುವುದು ಒಳ್ಳೆಯದು. ಹೀಗೆ ಮಾಡುವುದರಿಂದ ಅನೇಕ ಜನ್ಮಗಳಲ್ಲಿ ಮಾಡಿದ ಪಾಪವು ಪರಿಹಾರವಾಗುವುದಲ್ಲದೆ ಸಾಕ್ಷಾದ್ಯಮ ಧರ್ಮನ ಅನುಗ್ರಹದಿಂದ ಕಾಯ ಶುದ್ಧಿಯೂ, ಚಿತ್ತಶುದ್ಧಿಯೂ ಲಭಿಸುವುವು.

೫೭. ಕೃಷ್ಣಾಜಿನದಲ್ಲಿ ಎಳ್ಳನ್ನೂ, ಸುವರ್ಣವನ್ನೂ, ಜೇನು, ಮತ್ತು ತುಪ್ಪ ಇವುಗಳನ್ನಿಟ್ಟು ಯಾವನು ಬ್ರಾಹ್ಮಣನಿಗೆ ದಾನಮಾಡುವನೋ, ಅವನು ಸಮಸ್ತ ಪಾಪಗಳಿಂದಲೂ ಬಿಡುಗಡೆ ಹೊಂದುವನು. ಅದು ಮಹಾಪಾಪಗಳನ್ನೂ ಸಹ ನಿವಾರಿಸುತ್ತದೆ.

ಗಾಮನ್ನಮುದಕುಂಭಂ ಚ ವೈಶಾಖ್ಯಾಂ ಸಂಪ್ರಯಚ್ಛತಿ ।
ಪ್ರೀತಯೇ ಧರ್ಮರಾಜಸ್ಯ ಸರ್ವಪಾಪೈಃ ಪ್ರಮುಚ್ಯತೇ ॥ ೫೮ ॥

ಪ್ರಸಿದ್ಧಾ ಯಾ ಶಿವತಿಥಿರ್ಮಾಘೇ ಕೃಷ್ಣಚತುರ್ದಶೀ ।
ತಸ್ಯಾಂ ತಿಥೌ ನರೋ ಭಕ್ತ್ಯಾ ದೇವಮುದ್ದಿಶ್ಯ ಶಂಕರಂ ॥ ೫೯ ॥

ದದಾತಿ ಹೇಮವಾಸೋ ವಾ ಫಲಂ ಧಾನ್ಯಮಥಾಪಿ ವಾ ।
ಯತ್ಕಿಂಚಿದ್ವೇದವಿದುಷೇ ದತ್ತಂ ಭವತಿ ಚಾಕ್ಷಯಂ ॥ ೬೦ ॥

ಅಭಯಂ ಸರ್ವಭೂತೇಭ್ಯೋ ದದ್ಯಾದ್ದಾನಂ ಪರಂ ಸ್ಮೃತಂ ।
ನ ತಸ್ಮಾದಧಿಕಂ ದಾನಂ ವಿದ್ಯತೇ ಚ ಧನೈರ್ವಿನಾ ॥ ೬೧ ॥

---

೫೮. ವೈಶಾಖಮಾಸದಲ್ಲಿ ಗೋದಾನ, ಅನ್ನದಾನ, ಉದಕುಂಭದಾನ, ಇವು ಅತ್ಯಂತ ಮುಖ್ಯವಾದವುಗಳು. ಇದರಿಂದ ಯಮನು ಬಹುವಾಗಿ ತೃಪ್ತಿಹೊಂದುವನು. ದಾನಮಾಡಿದವನು ಸರ್ವಪಾಪಗಳಿಂದಲೂ ಬಿಡಲ್ಪಡುವನು.

೫೯. ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿಯೇ, ಪ್ರಸಿದ್ಧವಾದ ಶಿವರಾತ್ರಿಯು. ಆ ದಿನದಲ್ಲಿ ಶಂಕರನನ್ನು ಉದ್ದೇಶಿಸಿ ದಾನಧರ್ಮಗಳನ್ನು ಭಕ್ತಿಯಿಂದ ನಡೆಸುವುದು ಅತ್ಯುತ್ತಮವಾದದ್ದು.

೬೦. ಆದಿನ ಅದರಲ್ಲೂ ಸುವರ್ಣ, ವಸ್ತ್ರ, ಹಣ್ಣು, ಅಥವಾ ಧಾನ್ಯ ಈ ದಾನಗಳನ್ನು ವೇದವಿತ್ತಮನಿಗೆ ಕೊಡುವವನಿಗಂತೂ ಸುಕೃತವು ಅಕ್ಷಯವಾಗಿ ಲಭಿಸುವುದು.

೬೧. ಸಮಸ್ತ ಪ್ರಾಣಿಗಳಿಗೂ ಧೈರ್ಯವನ್ನು ಕೊಡುವುದೂ ಸಹ ಒಂದು ಮಹಾದಾನವೇ. ಅದಕ್ಕಿಂತ ದೊಡ್ಡ ದಾನವೊಂದು ಕಾಣುವುದಿಲ್ಲ. ಹಣಕಾಸುಗಳಿಲ್ಲದೆ ಶ್ರಮಪಡದೆ ಪುಣ್ಯಸಂಪಾದಿಸುವ ದಾನವೆಂದರೆ ಅಭಯದಾನವೇ ಮನುಷ್ಯನಿಗೆ ಭಯವೆಂಬುದು ದೊಡ್ಡ ಶತ್ರುವು. ಅದರ ಬಾಧೆಯನ್ನು ತಪ್ಪಿಸುವುದೇ ಅಭಯದಾನವು. ಈ ದಾನವು ವಾಗ್ರೂಪವಾಗಿಯೂ, ಶಕ್ತಿಪ್ರದರ್ಶನ ರೂಪವಾಗಿಯೂ ಇರುತ್ತದೆ. ಇದಕ್ಕೆ ವಸ್ತುಗಳಾಗಲಿ, ಹಣಕಾಸುಗಳಾಗಲಿ ಬೇಕಾಗಿಲ್ಲ.

ಏವಂ ದಾನಫಲಂ ಪ್ರೋಕ್ತಂ ಪುರಾಣೇಸ್ಮಿನ್ ಪೃಥಕ್ ಪೃಥಕ್ ।
ಪಠೇದ್ಯಃ ಶೃಣುಯಾದ್ವಾಪಿ ಗೋದಾನಸ್ಯ ಫಲಂ ಲಭೇತ್ ॥ ೬೨ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ದಾನಾರ್ಹ ವಿಪ್ರಾದಿ ಕಥನಂ ನಾಮ ದಶಮೋಧ್ಯಾಯಃ

---

೬೨. ಹೀಗೆ ಎಲ್ಲಾ ದಾನಗಳನ್ನೂ ಅದರ ಫಲಗಳನ್ನೂ, ಈ ಪುರಾಣದಲ್ಲಿ ವಿವರವಾಗಿ ಹೇಳಲ್ಪಟ್ಟಿದೆ. ಇವನ್ನು ಯಾವನು ಶ್ರದ್ಧೆಯಿಂದ ಕೇಳುವನೋ ಅವನಿಗೆ ಗೋದಾನದ ಫಲವು ದೊರಕುತ್ತದೆ ಎಂಬಲ್ಲಿಗೆ

ಬ್ರಹ್ಮಪುರಾಣೋಪಪುರಾಣವಾದ ಸೌರದಲ್ಲಿ ಸೂತಶೌನಕ ಸಂವಾದ ರೂಪವಾಗಿ ದಾನಕ್ಕೆ ಯೋಗ್ಯರಾದವರು ಮತ್ತು ಆ ದಾನಗಳ ಫಲ ಇವುಗಳನ್ನು ತಿಳಿಸುವ ಹತ್ತನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀ ಶಿವಾಯ ನಮಃ ||

ಅಥ ಶ್ರೀ ಸೌರಪುರಾಣೇ ಏಕಾದಶೋಽಧ್ಯಾಯಃ

|| ಸೂತ ಉವಾಚ ||

ಅನ್ಯದ್ವ್ರತಮಿದಂ ವಕ್ಷ್ಯೇ ಶೃಣುಧ್ವಂ ಮುನಿಪುಂಗವಾಃ |
ಶಿವೇನ ಕಥಿತಂ ಸಾಕ್ಷಾತ್ ಸ್ವಯಂ ಸ್ಕಂದಾಯ ಪೃಚ್ಛತೇ || ೧ ||

|| ಸ್ಕಂದ ಉವಾಚ ||

ದೇವದೇವ ಮಹಾದೇವ ಶಶಾಂಕಕೃತಶೇಖರ !
ಭರ್ಗ ವಿಶ್ವೇಶ್ವರೇಶಾನ ಕಾರುಣ್ಯಾಮೃತವಾರಿಧೇ || ೨ ||
ಕಸ್ಯ ಪ್ರಸೀದತಿ ಕ್ಷಿಪ್ರಂ ಕೇನ ವಾ ಜ್ಞಾಯತೇ ಭವಾನ್ !
ಯೋಗಸ್ತ್ವದ್ವಿಷಯಃ ಕೋ ವಾ ಜ್ಞಾನಂ ತ್ವದ್ವಿಷಯಂ ಚ ಕಿಂ || ೩ ||
ಸರ್ವಮೇತನ್ಮಹಾದೇವ ಪುತ್ರಸ್ನೇಹಾದ್ಬ್ರವೀಹ ಮೇ || ೪ ||

---

೧. ಎಲೈ ಶೌನಕಾದಿಗಳೇ, ಸಾಕ್ಷಾತ್ ಪರಮೇಶ್ವರನು ತನ್ನ ಪುತ್ರನಾದ ಕುಮಾರಸ್ವಾಮಿಗೆ ಹೇಳಿದ ಉತ್ತಮವಾದ ವ್ರತವೊಂದನ್ನು ನಿಮಗೆ ಈಗ ತಿಳಿಸುವೆನು ಅದನ್ನು ಕೇಳಿರಿ ಎಂದು ಸೂತಮಹರ್ಷಿಯು ಹೇಳತೊಡಗಿದನು.

೨-೩. ಒಂದುಸಾರಿ ಕುಮಾರಸ್ವಾಮಿಯು ಪರಶಿವನನ್ನು ಕುರಿತು “ ಓ ದೇವದೇವನೇ, ವಿಶ್ವೇಶ್ವರನೇ, ಚಂದ್ರಶೇಖರನೇ, ನೀನು ದಯಾಸಮುದ್ರನಲ್ಲವೆ ,! ನೀನು ಸುಲಭವಾಗಿ ಯಾರಿಗೆ ಗೋಚರನಾಗುವೆ. ನಿನ್ನನ್ನು ಸುಲಭವಾಗಿ ಅರಿಯುವವರು ಹೇಗಿರಬೇಕು? ನಿನ್ನನ್ನು ಅರಿಯುವ ಯೋಗವುಎಂಥಾದ್ದು? ನಿನ್ನ ವಿಷಯಕನಾದ ಜ್ಞಾನದ ಸ್ವರೂಪವೇನು?

೪. ಪರಮೇಶ್ವರನೇ ಇದೆಲ್ಲವನ್ನೂ ನನಗೆ ಪುತ್ರಸ್ನೇಹದಿಂದ ತಿಳಿಯುವವನಾಗು” ಎಂದು ವಿನಯದಿಂದ ಪ್ರಾರ್ಥಿಸಲಾಗಿ ಪರಮೇಶ್ವರನು ತನ್ನ ಪುತ್ರನನ್ನು ಕುರಿತು,

॥ ಈಶ್ವರ ಉವಾಚ ॥

ಮದ್ಭಕ್ತಃ ಸರ್ವದಾ ಸ್ಕಂದ ಮತ್ಪ್ರಿಯೋ ನ ಗುಣಾಧಿಕಃ ।
ಸರ್ವಾಶೀ ಸರ್ವಭಕ್ಷೀ ವಾ ಸರ್ವಾಚಾರವಿಲೋಪಕಃ ॥ ೫ ॥

ಮತ್ಪರೋ ವಾಙ್ಮನಃಕಾಯೈರ್ಮುಕ್ತ ಏವ ನ ಸಂಶಯಃ ।
ನಾಹಂ ಪ್ರಸನ್ನಸ್ತಪಸಾ ನ ದಾನೇನ ನ ಚೇಜ್ಯಯಾ ॥ ೬ ॥

ತುಷ್ಟೋಽಹಂ ಭಕ್ತಿಲೇಶೇನ ಕ್ಷಿಪ್ರಂ ಯಚ್ಛೇ ಪರಂ ಪದಂ ।
ತ್ರಿಪುಂಡ್ರಧಾರೀ ಸತತಂ ಶಾಂತೋ ರುದ್ರಾಕ್ಷಕಂಕಣಃ ॥ ೭ ॥
ನಿರ್ದಂಭಃ ಸತ್ಯಸಂಕಲ್ಪೋ ಭಕ್ತಸ್ಸ್ಯಾದುತ್ತಮೋ ಮಮ ।

ಸೂರ್ಯವಹ್ನೀಂದುಭಕ್ತಾನಾಮುತ್ತಮೋ ವೈಷ್ಣವಃ ಪರಃ ।
ವೈಷ್ಣವಾನಾಂ ಸಹಸ್ರೇಭ್ಯಃ ಶಿವಭಕ್ತೋ ವಿಶಿಷ್ಯತೇ ॥ ೮ ॥

---

೫. ಎಲೈ ಕುಮಾರಸ್ವಾಮಿಯೇ ನನ್ನಲ್ಲಿ ಭಕ್ತಿ ಇಟ್ಟಿರುವ ಮನುಷ್ಯನು ಎಷ್ಟೇ ಗುಣಹೀನನಾಗಿದ್ದರೂ ನಿಷಿದ್ಧವಸ್ತುಗಳನ್ನು ಭಕ್ಷಿಸುವವನಾದರೂ, ಸದಾಚಾರಗಳಿಂದ ದೂರನಾಗಿದ್ದರೂ ಅವನು ನನ್ನ ಪ್ರಿಯಭಕ್ತನೆನಿಸುವನು.

೬. ಮಾತು, ಮನಸ್ಸು, ದೇಹ, ಇವೆಲ್ಲವುಗಳಿಂದಲೂ, ನನ್ನನ್ನು ಸೇವಿಸಿದ ಮನುಷ್ಯನು ನಿಜವಾಗಿಯೂ ಮುಕ್ತನಾಗುವನು. ನಾನು ತಪಸ್ಸಿನಿಂದಲೂ, ದಾನಧರ್ಮಗಳಿಂದಲೂ, ಯಜ್ಞಯಾಗಗಳಿಂದಲೂ ಅಷ್ಟು ಬೇಗ ತೃಪ್ತನಾಗುವುದಿಲ್ಲ.

೭. ನನಗೆ ಮುಖ್ಯವಾಗಿ ಬೇಕಾದದ್ದು ಭಕ್ತನಲ್ಲಿ ತೋರುವ ಭಕ್ತಿ. ಅದರಿಂದ ನಾನು ತೃಪ್ತನಾಗಿ ಅವನ ಇಷ್ಟಾರ್ಥಗಳನ್ನು ದಯಪಾಲಿಸುವೆನು. ಯಾವನು ತ್ರಿಪುಂಡ್ರವನ್ನು ಸರ್ವದಾ ಹಣೆಯಲ್ಲಿ ಧರಿಸಿ, ರುದ್ರಾಕ್ಷಿಯನ್ನೂ ಕೈಗೆ ಕಟ್ಟಿಕೊಂಡು ಡಂಬಾಚಾರವಿಲ್ಲದೆ ಸನ್ಮಾರ್ಗದಲ್ಲಿ ನಡೆಯುತ್ತಿರುವನೋ ಅವನೇ ನನ್ನ ನಿಜವಾದ ಭಕ್ತ. ಅವನ ವಿಷಯದಲ್ಲಿಯೇ ನನಗೆ ಅಭಿಮಾನವು.

೮. ಸೂರ್ಯ, ಅಗ್ನಿ, ಚಂದ್ರ ಇವರನ್ನು ಆರಾಧಿಸುವ ಭಕ್ತರಿಗಿಂತ, ವಿಷ್ಣುವಿನ ಆರಾಧಕನೇ ಶ್ರೇಷ್ಠನಾದವನು. ಆ ವಿಷ್ಣುಭಕ್ತರಿಗಿಂತ ಶಿವಭಕ್ತನು ಸಹಸ್ರಪಾಲು ಮಿಗಿಲಾದವನು.

ಯದಿ ಪಾಪರತಃ ಕ್ರೂರಃ ಸ್ವಾಶ್ರಮಾಚಾರವರ್ಜಿತಃ ।
ಮಮ ಭಕ್ತೋ ಯದಿ ಭವೇತ್ಪೂಜ್ಯೋ ಮಾನ್ಯಸ್ಸ ಏವ ಹಿ ॥ ೯ ॥

ಯೇಽಪಿ ದಂಭಂ ಸಮಾಶ್ರಿತ್ಯ ಭಕ್ತಾನಾಮುಪಜೀವಿಕಾಃ ।
ಸಂಸಾರಾತ್ತೇಽಪಿ ಮುಚ್ಯಂತೇ ಕಿಂ ಪುನರ್ಮತ್ಪರಾ ಜನಾಃ ॥ ೧೦ ॥

ಮದ್ಭಕ್ತಾನಾಂ ಚ ಮಾಹಾತ್ಮ್ಯಂ ಕೋ ವಾ ಜಾನಾತಿ ತತ್ತ್ವತಃ ।
ಜಾನೇಽಹಂ ತ್ವಂ ಚ ಜಾನಾಸಿ ನಂದೀ ಜಾನಾತಿ ವಾ ಗುಹ ॥ ೧೧ ॥

ಮಾರ್ಗಸ್ಥೋ ವಾಽಪ್ಯಮಾರ್ಗಸ್ಥೋ ಮೂರ್ಖೋ ವಾ ಪಂಡಿತೋಽಪಿ ವಾ
ಮಮ ಭಕ್ತೋ ಯದಿ ಭವೇತ್ಸರ್ವಸ್ಮಾದಧಿಕೋ ಹಿ ಸಃ ॥ ೧೨ ॥

ಭಕ್ತಃ ಪ್ರಿಯೋ ಮೇ ಸತತಂ ಯಥಾ ತ್ವಂ ಕ್ರೌಂಚಸೂದನ ।
ತಸ್ಮಾತ್ತತ್ಪೂಜನಾದ್ವತ್ಸ ಪೂಜಿತೋಽಹಂ ನ ಸಂಶಯಃ ॥ ೧೩ ॥

---

೯. ನನ್ನ ಭಕ್ತನಾದವನು ಎಷ್ಟೇ ಪಾಪಿಷ್ಠನಾದರೂ, ಕ್ರೂರಿಯಾದರೂ ವರ್ಣಾಶ್ರಮಾಚಾರಗಳನ್ನು ಬಿಟ್ಟವನಾದರೂ, ಅವನು ಲೋಕಪೂಜ್ಯನೆನಿಸುವನು. ಅವನೇ ನಿಜವಾಗಿ ಮಾನ್ಯನು.

೧೦. ಯಾರು ಡಾಂಭಿಕತನಕ್ಕಾದರೂ ನನ್ನ ಭಕ್ತರನ್ನು ಸೇವಿಸುವರೋ ಅವರೂ ಸಹ ಸಂಸಾರ ದುಃಖಗಳನ್ನು ಕಳೆದುಕೊಂಡು ಮುಕ್ತರಾಗುವರು. ಇನ್ನ ನನ್ನನ್ನೇ ಸೇವಿಸಿದ ಭಕ್ತರ ವಿಷಯದಲ್ಲಿ ಹೇಳತಕ್ಕದ್ದೇನು?

೧೧. ನನ್ನ ಭಕ್ತರ ಮಹಿಮೆಯನ್ನು ಯಾರೂ ಸರಿಯಾಗಿ ತಿಳಿದಿರಲಾರರು. ಎಲೈ ಸ್ಕಂದನೇ, ಅವರ ಮಹಿಮೆಯನ್ನು ನಾನು ತಿಳಿದಿದ್ದೇನೆ. ನೀನು ತಿಳಿಯಬಹುದು. ನಂದಿಯು ತಿಳಿದಿದ್ದಾನೆ. ಮತ್ತಾರಿಗೂ ನನ್ನ ಭಕ್ತರ ಮಹಿಮೆಯು ಗೋಚರವಾಗಲಾರದು.

೧೨. ನನ್ನ ಭಕ್ತನು ಸನ್ಮಾರ್ಗದಲ್ಲಿರಲಿ ಅಥವಾ ದುರ್ಮಾರ್ಗಿಯೇಆಗಿರಲಿ, ಪಂಡಿತನೇಆಗಲಿ, ಹೇಗಿದ್ದರೂ ಅವನು ಎಲ್ಲರಿಗಿಂತಲೂ ದೊಡ್ಡವನೆನಿಸುವನು.

೧೩. ಕ್ರೌಂಚಪರ್ವತಗಳನ್ನು ಸೀಳಿದ ಷಣ್ಮುಖನೇ, ನನ್ನ ಭಕ್ತನು ನನಗೆ ನಿನ್ನಷ್ಟೇ ಪ್ರಿಯನಾದವನು. ನಿನ್ನಲ್ಲಿಟ್ಟಿರುವ ಪುತ್ರವಾತ್ಸಲ್ಯವನ್ನೇ ನಾನು ನನ್ನ ಭಕ್ತರಲ್ಲಿಡುವೆನು, ಆದ್ದರಿಂದ ಯಾರು ನನ್ನ ಭಕ್ತರನ್ನು ಸೇವಿಸುವರೋ, ಅವರು ನನ್ನನ್ನು ಸೇವಿಸಿದಂತೆಯೇ ಫಲವನ್ನು ಹೊಂದುವರು.

ಮದ್ಭಕ್ತಂ ದ್ವೇಷ್ಟಿ ಯೋ ಮೋಹಾತ್ಸ ಮಾಂ ದ್ವೇಷ್ಟಿ ಸನಾತನಂ ।
ತಂ ಪೂಜಯತಿ ಯೋ ಭಕ್ತ್ಯಾ ಸ ಮಾಂ ಪೂಜಿತವಾನ್ ಗುಹ　॥ ೧೪ ॥

ಭಕ್ತಿರಷ್ಟವಿಧಾ ಸ್ಕಂದ ಸರ್ವಶಾಸ್ತ್ರೇಷು ಪಠ್ಯತೇ ।　॥ ೧೫ ॥
ತಾಮಹಂ ಕಥಯಿಷ್ಯಾಮಿ ಭಕ್ತಿಂ ಭವವಿನಾಶಿನೀಂ
ಮದ್ಭಕ್ತಜನವಾತ್ಸಲ್ಯಂ ಪೂಜಾಯಾಶ್ಚಾನುಮೋದನಂ　॥ ೧೬ ॥

ಸ್ವಯಮಭ್ಯರ್ಚನಂ ಭಕ್ತ್ಯಾ ಮಮಾರ್ಥೇ ಚಾಂಗಚೇಷ್ಟಿತಂ ।
ಮತ್ಕಥಾಶ್ರವಣೇ ಭಕ್ತಿಃ ಸ್ವರನೇತ್ರಾಂಗವಿಕ್ರಿಯಾ　॥ ೧೭ ॥

ಮಮಾನುಸ್ಮರಣಂ ನಿತ್ಯಂ ಯಶ್ಚ ಮಾಂ ನೋಪಜೀವತಿ ।
ಭಕ್ತಿರಷ್ಟವಿಧಾ ಹ್ಯೇಷಾ ಯಸ್ಮಿಂಲ್ಲೇಶೋಽಪಿ ವರ್ತತೇ　॥ ೧೮ ॥

---

೧೪. ಎಲೈ ಗುಹನೇ, ಯಾರು ನನ್ನ ಭಕ್ತರನ್ನು ದ್ವೇಷಿಸುವರೋ. ಅವರು ನನಗೂ ದ್ವೇಷಿಗಳೇ. ಯಾರು ನನ್ನ ಭಕ್ತರನ್ನು ಪೂಜಿಸುವರೋ ಅವರು ನನ್ನನ್ನೂ ಪೂಜಿಸಿದಂತೆಯೇ, ಒಟ್ಟಿನಲ್ಲಿ ಭಕ್ತಪರಾಧೀನನು ನಾನು.

೧೫. ಷಣ್ಮುಖನೇ! ಭಕ್ತಿಯು ಎಂಟುವಿಧ. ಸರ್ವಶಾಸ್ತ್ರಗಳೂ ಇದನ್ನು ಒಪ್ಪಿವೆ. ಆ ಎಂಟುವಿಧವಾದ ಭಕ್ತಿಯಸ್ವರೂಪವನ್ನು ನಿನಗೆ ಈಗ ವಿವರಿಸುವೆನು. ಸಂಸಾರ ದುಃಖವನ್ನು ಹೋಗಲಾಡಿಸಿ ಮುಕ್ತಿಯನ್ನು ದೊರಕಿಸುವುದೇ ಈ ಭಕ್ತಿಯ ಮುಖ್ಯಕಾರ್ಯ.

೧೬-೧೮. ನನ್ನ ಸೇವಕರಲ್ಲಿ ಪ್ರೀತಿಯನ್ನಿಡುವುದು, ನನ್ನ ಪೂಜೆಗೆ ಒಪ್ಪಿಗೆ ಕೊಡುವುದು, ನನ್ನ ಪೂಜೆಯನ್ನು ತಾನೇ ನೆರವೇರಿಸುವುದು, ನನಗಾಗಿ ತನ್ನ ಅವಯವಗಳನ್ನು ದಂಡಿಸುವುದು, ನನ್ನ ಕಥೆಗಳನ್ನು ಭಕ್ತಿಯಿಂದ ಕೇಳುವುದು, ಧ್ವನಿ ಮತ್ತು ಕಣ್ಣು ಇವುಗಳ ವಿಕಾರದಿಂದ ನನ್ನನ್ನು ಧ್ಯಾನಿಸುವುದು, ಯಾವಾಗಲೂ ನನ್ನನ್ನೇ ಸ್ಮರಿಸುವುದು, ನನ್ನಿಂದ ಜೀವನಯಾತ್ರೆಯನ್ನ ನಡೆಸದೇ ಇರುವುದು. ಈ ಎಂಟು ಕ್ರಿಯೆಗಳೂ, ನನ್ನ ವಿಷಯಕವಾದ ಭಕ್ತಿಯ ಎಂಟು ವಿಧಗಳು. ಅಷ್ಟವಿಧ ಭಕ್ತಿಗಳಲ್ಲಿ ಒಂದುವಿಧವಾದರೂ ಯಾರಲ್ಲಿ ತೋರಿಬರುವುದೋ ಅವರು ನಿಜವಾಗಿಯೂ ನನ್ನ ಭಕ್ತನೆನಿಸುವರು

ಸ ವಿಪ್ರೇಂದ್ರೋ ಮುನಿಃ ಶ್ರೀಮಾನ್ ಸ ಯತಿಃ ಸ ಚ ಪಂಡಿತಃ ।
ತಸ್ಮೈ ದಾನಂ ಸದಾ ದೇಯಂ ತಸ್ಮಾದ್ಗ್ರಾಹ್ಯಂ ಷಡಾನನ ॥ ೧೯ ॥

ಸಕೃದಭ್ಯರ್ಚಯೇನ್ಮಾಂ ಯೋ ಭಕ್ತಿಲೇಶಸಮನ್ವಿತಃ ।
ಸ ಮಹಾಪಾತಕೈರ್ಮುಕ್ತೋ ಮಮ ಲೋಕೇ ಮಹೀಯತೇ ॥ ೨೦ ॥

ಸ್ವಹಸ್ತಾಹೃತಪುಷ್ಪಾಣಿ ಮಾಮುದ್ದಿಶ್ಯ ಪ್ರಯಚ್ಛತಿ ।
ತದ್ದಾನಂ ಸರ್ವದಾನಾನಾಮುತ್ತಮಂ ಪರಿಪಠ್ಯತೇ ॥ ೨೧ ॥

ಮಯಿ ಭಕ್ತಿಃ ಸದಾ ಕಾರ್ಯಾ ಭವಪಾಶವಿಮೋಚನೀ ।
ಭಕ್ತಿಗಮ್ಯಸ್ತ್ವಹಂ ವತ್ಸ ಮಮ ಯೋಗೋ ಹಿ ದುರ್ಲಭಃ ॥ ೨೨ ॥

ಯೋಗಾತ್ಸಂಜಾಯತೇ ಜ್ಞಾನಂ ಯೋಗೋ ಮಯ್ಯೇಕಚಿತ್ತತಾ ।
ಜ್ಞಾನಂ ಸ್ವರೂಪಮೇವ ಸ್ಯಾಚ್ಚಿದ್ರೂಪಮಜಮವ್ಯಯಂ ॥ ೨೩ ॥

---

೧೯. ಆ ನನ್ನ ಭಕ್ತನೇ ಬ್ರಾಹ್ಮಣಶ್ರೇಷ್ಠನು. ಅವನೇ ಋಷಿಸದೃಶನು. ಅವನೇ ಸನ್ಯಾಸಿಯು, ಪಂಡಿತನು. ಸಮಸ್ತದಾನಗಳನ್ನೂ ಅಂತಹ ನನ್ನ ಭಕ್ತರಿಗೆ ಕೊಡಬಹುದು. ಅವರಿಂದಲೇ ಸಕಲ ಉಪದೇಶಗಳನ್ನೂ ಹೊಂದಬಹುದು.

೨೦. ಯಾವನು ಅಲ್ಪಭಕ್ತಿಯಿಂದಲಾದರೂ ನನ್ನನ್ನು ಒಂದಾವರ್ತಿ ಆರಾಧಿಸುವನೋ, ಅವನ ಸಮಸ್ತ ಪಾಪಗಳೂ ನಾಶವಾಗಿ, ಕೊನೆಗೆ ಆತನು ನನ್ನ ಲೋಕಕ್ಕೆ ಬಂದು ಸೇರುವನು.

೨೧. ತನ್ನ ಕೈಯಿಂದಲೇ ಹೂಗಳನ್ನು ಕೊಯ್ದು ತಂದು ನನಗೆ ಸಮರ್ಪಿಸಿದವನಿಗೆ ಸಮಸ್ತ ದಾನಗಳಫಲವೂ ಲಭಿಸುತ್ತದೆ. ಅಲ್ಲದೆ, ಆ ಪುಷ್ಪಾರ್ಚನೆಯೇ ಒಂದು ಮಹಾದಾನವೆನಿಸಿಕೊಳ್ಳುತ್ತದೆ.

೨೨. ಸಂಸಾರ ದುಃಖವನ್ನು ನಿವಾರಿಸುವಂತಹ ಭಕ್ತಿಯನ್ನು ಸರ್ವರೂ ನನ್ನಲ್ಲಿಟ್ಟಿರಬೇಕು. ಏಕೆಂದರೆ ನಾನು ಭಕ್ತಿಗೆ ಸಿಕ್ಕತಕ್ಕವನು. ಈ ಭಕ್ತಿಯೋಗವು ಸುಲಭವಾಗಿ ಎಲ್ಲರಿಗೂ ದೊರೆಯತಕ್ಕುದಲ್ಲ.

೨೩. ಯೋಗದ ಅಭ್ಯಾಸದಿಂದ ಜ್ಞಾನವೂ ಸಿಗುತ್ತದೆ. ನನ್ನಲ್ಲಿ ಏಕಮನಸ್ಸಿನಿಂದ ವರ್ತಿಸುವುದೇ ಯೋಗವು. ನನ್ನ ಸ್ವರೂಪದ ಅರಿವೇ ಜ್ಞಾನವು ಅದೇ ಚಿತ್‌ ಎಂಬ ಪ್ರಕಾಶವು. ಆ ಪ್ರಕಾಶವು ನಾಶರಹಿತವಾದದ್ದು.

ಆನಂದಮಜರಂ ಶುದ್ಧಮಜ್ಞಾನೇನ ತಿರೋಹಿತಂ ।
ವೇದಾಂತವಾಕ್ಯಬೋಧೇನ ತಚ್ಚಾಜ್ಞಾನಂ ನಿವರ್ತತೇ　　॥ ೨೪ ॥

ಜ್ಞಾನಂ ನೈವಾತ್ಮನೋ ಧರ್ಮಃ ನ ಗುಣೋ ವಾ ಕಥಂಚನ ।
ಜ್ಞಾನಸ್ವರೂಪಮೇವಾತ್ಮಾ ನಿತ್ಯಃ ಸರ್ವಗತಃ ಶಿವಃ　　॥ ೨೫ ॥

ಅಹಮಾತ್ಮಾ ಸಮಸ್ತಾನಾಂ ಭೂತಾನಾಂ ಪರಮೇಶ್ವರಃ ।
ಏಕ ಏವ ಪದಾರ್ಥಶ್ಚ ಕಲ್ಪಿತೋ ಮಯಿ ಷಣ್ಮುಖ　　॥ ೨೬ ॥

ಅದ್ವೈತಮೇಕಂ ಪರಮಮಾತ್ಮಾನಂ ಜ್ಞಾನವಿಗ್ರಹಂ ।
ನಾನಾತ್ಮಾನಂ ಪ್ರಪಶ್ಯಂತಿ ಮಾಯಯಾ ಮೋಹಿತಾ ಜನಾಃ　　॥ ೨೭ ॥

ನಾಸದ್ರೂಪಾ ನ ಸದ್ರೂಪಾ ಮಾಯಾ ನೈವೋಭಯಾತ್ಮಿಕಾ ।
ಸದಸದ್ಭ್ಯಾಮನಿರ್ವಾಚ್ಯಾ ಮಿಥ್ಯಾಭೂತಾ ಸನಾತನಾ　　॥ ೨೮ ॥

---

೨೪. ಆನಂದ ಸ್ವರೂಪವಾದ ನಾಶರಹಿತವಾದ ಶುದ್ಧ ಜ್ಞಾನವು ಯಾವಾಗಲೂ ಅಜ್ಞಾನದಿಂದ ಮುಚ್ಚಲ್ಪಟ್ಟಿರುವುದು. ಈ ಅಜ್ಞಾನವನ್ನು ತೊಡೆದು ಹಾಕಲು ವೇದಾಂತ ವಾಕ್ಯಗಳ ಅರ್ಥವನ್ನು ವಿವರವಾಗಿ ತಿಳಿಯಬೇಕು.

೨೫. ಜ್ಞಾನವೆಂಬುದು ಆತ್ಮನಲ್ಲಿರುವ ಒಂದುಗುಣವಲ್ಲ. ಏಕೆಂದರೆ ಆತ್ಮನು ಯಾವಾಗಲೂ ನಿರ್ಗುಣನಾದವನು. ಆತ್ಮನು ನಿತ್ಯನು. ಜ್ಞಾನಸ್ವರೂಪನೇ ಆಗಿರುತ್ತಾನೆ. ಆ ಅತ್ಮನು ಶಿವನೆಂಬ ಹೆಸರಿನಿಂದ ಸರ್ವತ್ರ ವ್ಯಾಪಿಸಿದ್ದಾನೆ.

೨೬. ಎಲೈ ಆರುಮುಖವುಳ್ಳವನೇ, ಸಮಸ್ತ ಪ್ರಾಣಿಗಳಲ್ಲಿ ಆತ್ಮರೂಪವಾಗಿರುವವನು ನಾನೇ. ಒಂದೇ ಒಂದು ವಸ್ತುವಾಗಿರುವ ನಾನು ಸರ್ವತ್ರಹರಡಿರುವೆನು.

೨೭. ಆತ್ಮನು ಒಬ್ಬನೇ. ಅವನು ಜ್ಞಾನಸ್ವರೂಪಿಯು. ಅಂಥ ಒಬ್ಬ ಪರಮಾತ್ಮನನ್ನು ಮಾಯಾಮೋಹಿತರಾದ ಅಜ್ಞಾನಿಗಳು ಅನೇಕ ಆತ್ಮಗಳೆಂದು ತಿಳಿಯುವರು. ಆ ಅಜ್ಞಾನವನ್ನೇ ಭ್ರಾಂತಿಯೆಂದು ತಿಳಿಯಬೇಕು.

೨೮. ಮಾಯೆಯು ಅಸತ್ಯವಾದುದೂ ಅಲ್ಲ ಸತ್ಯವೂ ಅಲ್ಲ. ಸದಸದ್ರೂಪವೂ ಅಲ್ಲ. ಸತ್ ಅಸತ್ ಇವೆರಡಕ್ಕಿಂತಲೂ ಬೇರೆಯಾದ ಮಿಥ್ಯಾರೂಪವೇ ಮಾಯೆಯು. ಇದು ಅನಾದಿಯಾದದ್ದು.

ವಿಜ್ಞಾನಮೇವಮಖಿಲಂ ವಿಶ್ವಾಕಾರಮಬುದ್ಧಯಃ ।
ಪಶ್ಯಂತಿ ಜ್ಞಾನಿನಸ್ತ್ವೇಕಮಾತ್ಮರೂಪಮಿದಂ ಜಗತ್ ॥ ೨೯ ॥

ಅಹಮಾತ್ಮಾ ವಿಭುಃ ಶುದ್ಧಃ ಸ್ಫಟಿಕೋಪಲಸನ್ನಿಭಃ ।
ಉಪಾಧಿರಹಿತಃ ಶಾಂತಃ ಸ್ವಯಂ ಜ್ಯೋತಿಃ ಪ್ರಕಾಶಕಃ ॥ ೩೦ ॥

ಆತ್ಮನ್ಯೇವಾಖಿಲಂ ಭಾತಿ ಶುಕ್ತಿಕಾರಜತಂ ಯಥಾ ।
ಶುಕ್ತಿತತ್ತ್ವಪರಿಜ್ಞಾನಾತ್ತನ್ನಾಶಸ್ತದ್ವದಾತ್ಮನಿ ॥ ೩೧ ॥

ಕರ್ತೃತ್ವಂ ನೈವ ಭೋಕ್ತೃತ್ವಮಾತ್ಮನೋಽಸ್ತಿ ಕದಾಚನ ।
ಅಹಂಕಾರಾವಿವೇಕೇನ ಕರ್ತೃತ್ವಮಿತಿ ನಿಶ್ಚಿತಂ ॥ ೩೨ ॥

---

೨೯. ಇಂಥ ಮಿಥ್ಯಾಭೂತವಾದ ಮಾಯೆಯೇ ಜಗತ್ತು ಎಂದು ತಿಳಿವಳಿಕೆಯಿಲ್ಲದವರು ಅರಿಯುತ್ತಾರೆ. ತಿಳಿದವರಾದರೋ, ಈ ಜಗತ್ತನ್ನು ಕೇವಲ ಆತ್ಮವಿಕಾರವೆಂದು ಭಾವಿಸುತ್ತಾರೆ.

೩೦. ಅಹಂ, ಎಂಬ ಪದದಿಂದ ವಾಚ್ಯವಾಗುವ ವಸ್ತುವೇ ಆತ್ಮ. ಆ ಆತ್ಮನು, ಸರ್ವವ್ಯಾಪೀ ಮತ್ತು ಶುದ್ಧಸ್ವರೂಪನು. ಸ್ಫಟಿಕಮಣಿಯಂತೆ ನಿರ್ಮಲನು. ಸರ್ವೋಪಾಧಿಗಳಿಂದ ಬಿಡಲ್ಪಟ್ಟಿರುವವನು. ಶಾಂತಾತ್ಮನು ಮತ್ತು ಸ್ವಯಂ ಪ್ರಕಾಶಕನು.

೩೧. ಸಮಸ್ತ ವಸ್ತುಗಳಲ್ಲಿಯೂ ಆತ್ಮನು ಪ್ರಕಾಶಿಸುತ್ತಿದ್ದರೂ ಮುತ್ತಿನ ಚಿಪ್ಪಿನಲ್ಲಿ ಭ್ರಾಂತಿಯಿಂದ ಬೆಳ್ಳಿಯು ತೋರಿಬರುವಂತೆ, ಮಾಯೆಯ ಭ್ರಾಂತಿಯಿಂದ ಜಗತ್ತು ತೋರುವುದು. ಮುತ್ತಿನ ಚಿಪ್ಪಿನ ಪರಿಜ್ಞಾನವು ಚೆನ್ನಾಗಿ ಆದರೆ ಬೆಳ್ಳಿಯ ಭ್ರಾಂತಿಯು ಹೋಗುವಂತೆ ಆತ್ಮಜ್ಞಾನವಾದರೆ ಮಾಯಾಜನಕವಾದ ಅಜ್ಞಾನವು ನಾಶವಾಗುವುದು.

೩೨. ಆತ್ಮನು ಕರ್ತೃವೂ ಅಲ್ಲ, ಭೋಕ್ತೃವೂ ಅಲ್ಲ. ಅಹಂಕಾರ ಮತ್ತು ಅವಿವೇಕಗಳ ಅಧ್ಯಾಸದಿಂದ ಆತ್ಮನನ್ನು ತಿಳಿಯದೆ ಜನರು ಆತ್ಮನೇ ಸಕಲಕರ್ಮಗಳಿಗೂ ಕರ್ತನೆಂದೂ ಕರ್ಮಾನುಭವ ಮಾಡುವವನೆಂದೂ ನಂಬುವರು.

ಆತ್ಮನೋ ನಿತ್ಯಮುಕ್ತಸ್ಯ ನಿರ್ವಿಭಾಗಸ್ಯ ಷಣ್ಮುಖ ।
ನೈವಾಸ್ತಿ ಕಿಂಚಿತ್ಕರ್ತವ್ಯಮಿತ್ಯಾಹುರ್ವೇದವಾದಿನಃ ॥ ೩೩ ॥

ಕರ್ತೃತ್ವಂ ಕರಣಸ್ಯೈವ ನಾತ್ಮನೋಽಸ್ತಿ ಹಿ ತತ್ತ್ವತಃ ।
ನ ತೇನ ಲಿಪ್ಯತೇ ಹ್ಯಾತ್ಮಾ ಪುಣ್ಯಾಪುಣ್ಯಾಖ್ಯಕರ್ಮಣಾ ॥ ೩೪ ॥

ಬುದ್ಧ್ಯಾದಯೋ ಗುಣಾಸ್ಸರ್ವೇ ಹ್ಯಭೂದ್ಬುದ್ಧೇರಹಂಕೃತಿಃ ।
ಅಹಂಕಾರಾಚ್ಚ ಸೂಕ್ಷ್ಮಾಣಿ ತನ್ಮಾತ್ರಾಣೀಂದ್ರಿಯಾಣಿ ಚ ॥ ೩೫ ॥

ಸೂಕ್ಷ್ಮೇಭ್ಯಃ ಪಂಚಭೂತಾನಿ ತೇಭ್ಯಃ ಸ್ಥೂಲಮಿದಂ ಜಗತ್ ।
ಚತುರ್ವಿಂಶಕಮವ್ಯಕ್ತಂ ಪುರುಷಃ ಪಂಚವಿಂಶಕಃ ॥ ೩೬ ॥

ನ ತಸ್ಯ ಕಾರ್ಯಂ ಕರಣಂ ಕ್ರಿಯಾರೂಪಂ ಚ ವಿದ್ಯತೇ ।

---

೩೩. ಆತ್ಮನು ನಿತ್ಯಮುಕ್ತನು ಮತ್ತು ಏಕರೂಪಿಯು. ಅವನಲ್ಲಿ ಯಾವ ವಿಧವಾದ ಕಾರ್ಯಕಲಾಪಗಳಾಗಲಿ ಕಂಡು ಬರುವುದಿಲ್ಲ.

೩೪. ಕರ್ಮಗಳಲ್ಲಿ ಸಾಧನವಾಗಿರುವ ಕರಣಾದಿಗಳಿಗೇ ಕರ್ತೃತ್ವವಿರತಕ್ಕದ್ದು ನಿಜವಾಗಿಯೂ ಕರ್ತೃತ್ವವು ಆತ್ಮನಲ್ಲಿಲ್ಲ ಪುಣ್ಯ, ಪಾಪ ಮುಂತಾದ ಕರ್ಮಜನ್ಯ ಫಲಗಳು ಎಂದಿಗೂ ಆತ್ಮನನ್ನು ಹೊಂದಲಾರವು. ಅವೆಲ್ಲವೂ ಅಂತಃಕರಣಾಧ್ಯಾಸನಾದ ಜೀವನಿಗೆ ಸಂಬಂಧಿಸಿವೆ.

೩೫. ಬುದ್ಧಿಯೇ ಮೊದಲಾದವುಗಳು ಗುಣಗಳು. ಅದರಲ್ಲಿ ಬುದ್ಧಿಯೆಂಬ ಗುಣದಿಂದ ಅಹಂಕಾರವೂ, ಅಹಂಕಾರದಿಂದ ಸೂಕ್ಷ್ಮೇಂದ್ರಿಯಗಳೂ ಉಂಟಾಗಿವೆ.

೩೬. ಸೂಕ್ಷ್ಮವಾದ ಪಂಚೇಂದ್ರಿಯಗಳಿಂದ ಸೂಕ್ಷ್ಮವಾದ ಪಂಚಭೂತಗಳೂ, ಆ ಪಂಚಭೂತಗಳಿಂದ ಪ್ರಪಂಚವೂ ಹುಟ್ಟಿದೆ ಇದರಲ್ಲಿ ಇಪ್ಪತ್ತು ನಾಲ್ಕು ತತ್ತ್ವಗಳೂ, ಇಪ್ಪತ್ತೈದನೆಯವನಾದ ಪುರುಷನೂ ಆವಿರ್ಭಸುವುವು.

ಸ್ವಾಜ್ಞಾನಾತ್ಕಥಿತಂ ಸರ್ವಮಾತ್ಮನ್ಯೇವೇತಿ ಚ ಶ್ರುತಿಃ ॥ ೩೭ ॥
ಇತಿ ಮದ್ವಿಷಯಂ ಜ್ಞಾನಂ ಕಥಿತಂ ತವ ಪುತ್ರಕ ॥ ೩೮ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಶಿವಭಕ್ತಮಹಿಮಾದಿ ಕಥನಂ ನಾಮೈಕಾದಶೋಽಧ್ಯಾಯಃ.

೩೭–೩೮. ಆ ಪುರುಷನಿಗೆ, ಕಾರ್ಯವಾಗಲಿ, ಕರಣವಾಗಲಿ, ಕ್ರಿಯೆಯಾಗಲಿ ಸಂಬಂಧಿಸುವುದಿಲ್ಲ. ಪುರುಷನು ತನ್ನ ಅಜ್ಞಾನದಿಂದ, ಸರ್ವವೂ ಆತ್ಮನೆಂದೇ ತಿಳಿಯುವನು ಎಂದು ವೇದಗಳೂ ಹೇಳುತ್ತಿವೆ. ಎಲೈ ಪುತ್ರನಾದ ಕುಮಾರ ಸ್ವಾಮಿಯೇ, ಹೀಗೆ ನಿನಗೆ ನನ್ನ ವಿಷಯಕವಾದ ಜ್ಞಾನವನ್ನು ವಿವರವಾಗಿ ತಿಳಿಸಿರುವೆನು." ಎಂದು ಪರಮೇಶ್ವರನು ತನ್ನ ಮಗನಾದ ಕುಮಾರಸ್ವಾಮಿಗೆ ತಿಳಿಸಿದನು ಎಂಬಲ್ಲಿಗೆ

ಬ್ರಹ್ಮಪುರಾಣೋಪಪುರಾಣವಾದ ಸೌರದಲ್ಲಿ ಸೂತಶೌನಕಸಂವಾದರೂಪವಾಗಿ, ಶಿವಭಕ್ತರ ಮಹಿಮೆ ಮುಂತಾದವುಗಳ ವರ್ಣನೆಯು ಈ ಹನ್ನೊಂದನೆಯ ಅಧ್ಯಾಯದಲ್ಲಿ ಮುಗಿಯಿತು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ದ್ವಾದಶೋಽಧ್ಯಾಯಃ.

॥ ಈಶ್ವರ ಉವಾಚ ॥

ಮಯ್ಯೇಕಚಿತ್ತತಾ ಯೋಗ ಇತಿ ಪೂರ್ವಂ ನಿರೂಪಿತಂ !
ಸಾಧನಾನ್ಯಷ್ಟಧಾ ತಸ್ಯ ಪ್ರವಕ್ಷ್ಯಾಮ್ಯಧುನಾ ಶೃಣು ॥ ೧ ॥

ಯಮಾಶ್ಚ ನಿಯಮಾಸ್ತಾವದಾಸನಾನ್ಯಪಿ ಷಣ್ಮುಖ ।
ಪ್ರಾಣಾಯಾಮಸ್ತತಃ ಪ್ರೋಕ್ತಃ ಪ್ರತ್ಯಾಹಾರಶ್ಚ ಧಾರಣಾ ॥ ೨ ॥
ಧ್ಯಾನಂ ತಥಾ ಸಮಾಧಿಶ್ಚ ಯೋಗಾಂಗಾನಿ ಪ್ರಚಕ್ಷತೇ ।
ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಾಪರಿಗ್ರಹೌ ॥ ೩ ॥

---

೧. ಮತ್ತೆ ಶ್ರೀ ಪರಮೇಶ್ವರನು ತನ್ನ ಮಗನಾದ ಕುಮಾರಸ್ವಾಮಿಯೊಡನೆ, ಯೋಗ ವಿಷಯವನ್ನು ಹೇಳಲು ಉಪಕ್ರಮಿಸಿದನು. ಅಯ್ಯಾ ಸ್ಕಂದನೇ, ಹಿಂದೆ ನಾನು ಯೋಗವೆಂದರೆ, ನನ್ನಲ್ಲಿ ಸ್ಥಿರಬುದ್ಧಿಯಿಡುವುದು, ಎಂಬುದಾಗಿ ಹೇಳಿದೆನಲ್ಲವೆ! ಆ ಯೋಗಕ್ಕೆ ಎಂಟು ಸಾಧನಗಳಿವೆ. ಅವುಗಳನ್ನು ನಾನು ಈಗ ವಿವರಿಸುತ್ತೇನೆ.

೨–೪. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬುವೇ ಯೋಗದ ಅಷ್ಟಾಂಗಗಳು. ಇವುಗಳಲ್ಲಿ ಸಮಾಧಿಯೇ ಮುಖ್ಯವಾದ ಅಂಶವು. ಯಮವೆಂದರೆ ಬಿಡತಕ್ಕದ್ದು, ಅದು ಹಿಂಸೆ ಅಸತ್ಯ, ಸ್ತೇಯ, ದುರಾಚಾರ, ಪರಿಗ್ರಹ ಎಂದು ಐದುಪ್ರಕಾರ. ಇವುಗಳನ್ನು ಬಿಟ್ಟರೆ, ಉಳಿಯತಕ್ಕವುಗಳು ಅಹಿಂಸೆ, ಸತ್ಯ, ಕಳ್ಳತನವಿಲ್ಲದಿರುವಿಕೆ, ಬ್ರಹ್ಮಚರ್ಯ, ಅಶಾರಾಹಿತ್ಯ ಇವುಗಳು. ಯಮದ ಪ್ರಯೋಜನಗಳೇ ಇವು. ನಿಯಮವೆಂದರೆ ಮಾಡತಕ್ಕದ್ದು ಎಂದರ್ಥ.

ಯಮಾಃ ಸಂಕ್ಷೇಪತಃ ಪ್ರೋಕ್ತಾ ನಿಯಮಾನ್ ಶ್ರುಣು ಪುತ್ರಕ ।
ತಪಃ ಸ್ವಾಧ್ಯಾಯಸಂತೋಷಃ ಶೌಚಮೀಶ್ವರಪೂಜನಂ ॥ ೪ ॥

ನಿಯಮಾಃ ಕಥಿತಾ ವತ್ಸ ಯೋಗಸಿದ್ಧಿಪ್ರದಾಯಿನಃ ।
ಸರ್ವೇಷಾಮೇವ ಭೂತಾನಾಮಕ್ಲೇಶಜನನಂ ಹಿ ಯತ್ ॥ ೫ ॥

ಅಹಿಂಸಾ ಕಥಿತಾ ಸದ್ಭಿರ್ಯೋಗಸಿದ್ಧಿಪ್ರದಾಯಿನೀ ।
ಯಥಾರ್ಥಕಥನಂ ಸತ್ಯಮಸ್ತೇಯಮಧುನಾ ಶೃಣು ॥ ೬ ॥

ಚೌರ್ಯೇಣ ವಾ ಬಲೇನಾಪಿ ಪರಸ್ವಹರಣಂ ಚ ಯತ್ ।
ಸ್ತೇಯಮಿತ್ಯುಚ್ಯತೇ ಸದ್ಭಿರಸ್ತೇಯಂ ತಸ್ಯ ವರ್ಜನಂ ॥ ೭ ॥

ಸರ್ವತ್ರ ಮೈಥುನತ್ಯಾಗೋ ಬ್ರಹ್ಮಚರ್ಯಮಿಹೋಚ್ಯತೇ ।
ದ್ರವ್ಯಾಣಾಮಪ್ಯನಾದಾನಮಾಪದ್ಯಪಿ ಯಥೇಚ್ಛಯಾ ॥ ೮ ॥
ಅಪರಿಗ್ರಹ ಇತ್ಯುಕ್ತೋ ಯೋಗಸಿದ್ಧೇಸ್ತು ಸಾಧನಂ ।

ಅದು ತಪಸ್ಸು, ವೇದಾಧ್ಯಯನ, ಸಂತೋಷ, ಶುಚಿತ್ವ, ಈಶ್ವರಾರಾಧನೆ ಎಂದು ಐದು ಪ್ರಕಾರವಾಗಿದೆ.

೫-೬. ಈ ನಿಯಮಗಳು ಯೋಗದ ಸಿದ್ಧಿಯನ್ನು ಕೊಡತಕ್ಕವುಗಳು. ಅದರಲ್ಲಿ, ಅಹಿಂಸೆಯೆಂದರೆ ಯಾವ ಪ್ರಾಣಿಗೂ ದುಃಖವನ್ನು ಕೊಡದಿರುವುದೇ, ಈ ಅಹಿಂಸೆಯೂ ಯೋಗಸಿದ್ಧಿಗೆ ಒಂದು ಮುಖ್ಯಕಾರಣವೆಂದು ದೊಡ್ಡವರು ಹೇಳುತ್ತಾರೆ. ಈ ಯಮನಿಯಮಗಳ ಸಿದ್ಧಿಗಳಲ್ಲಿ ಅಹಿಂಸಾಸಿದ್ಧಿಯುಂಟಾದರೆ ಆ ಯೋಗಿಯ ಸಮೀಪದಲ್ಲಿ ಯಾವ ಪ್ರಾಣಗಳಿಗೂ ಪರಸ್ಪರ ವೈರವಿರುವುದಿಲ್ಲವೆಂಬುದನ್ನು ತಿಳಿಯಬೇಕು. ಈ ಅಂಶವು ಅನೇಕ ಮಹರ್ಷಿಗಳ ಆಶ್ರಮವರ್ಣನೆಯಿಂದ ನಮಗೆ ತಿಳಿದು ಬರುವುದು.

೭. ನಿಜವನ್ನು ಹೇಳುವುದೇ ಸತ್ಯ. ಕಳ್ಳತನದಿಂದಾಗಲಿ, ಪರಾಕ್ರಮದಿಂದಾಗಲಿ ಪರರ ಸ್ವತ್ತನ್ನು ಅಪಹರಿಸುವುದೇ ಸ್ತೇಯ. ಈ ಸ್ತೇಯವನ್ನು ಬಿಟ್ಟಿರುವುದು ಅಸ್ತೇಯ. ಪರದ್ರವ್ಯಾನಭಿಲಾಷೆಯೆಂಬ ಅಸ್ತೇಯಭಾವನೆ ನಿಂತರೆ ಯೋಗಿಯು ಅಷ್ಟೈಶ್ವರ್ಯವಂತನಾಗುವನು.

೮. ಯಾವಾಗಲೂ ಸ್ತ್ರೀಸಂಭೋಗವಿಲ್ಲದಿರುವುದೇ ಬ್ರಹ್ಮಚರ್ಯೆಯು. ಬ್ರಹ್ಮಚರ್ಯ ಸಿದ್ಧಿಸಿದರೆ ಚಿತ್ತವು ಯೋಗಾಭ್ಯಾಸ ಸಮರ್ಥವಾಗುವುದು. ಆಪತ್ಕಾಲದಲ್ಲಿಯೂ ಸ್ವೇಚ್ಛೆಯಾಗಿ ಪರದ್ರವ್ಯವನ್ನು ಸ್ವೀಕರಿಸದಿರುವುದು ಅಪರಿಗ್ರಹವೆನಿಸಿಕೊಳ್ಳುವುದು. ಈ ಅಪರಿಗ್ರಹವು ಯೋಗಸಿದ್ಧಿಗೆ ಮುಖ್ಯ ಸಾಧನವು. ಅಪರಿಗ್ರಹವು ಸಿದ್ಧಿಸಿದರೆ ಜನ್ಮಾಂತರ ಜ್ಞಾನವುಂಟಾಗುವುದು.

ಚಾಂದ್ರಾಯಣಾದಿನಾ ಯತ್ತು ಶರೀರಸ್ಯ ಚ ಶೋಷಣಂ ।
ತತ್ತಪಃ ಕಥಿತಂ ಪುತ್ರ ಸ್ವಾಧ್ಯಾಯಮಧುನಾ ಶೃಣು ॥ ೯ ॥

ಪ್ರಣವಃ ಶತರುದ್ರೀಯಂ ತಥಾಽಥರ್ವಶಿರಃಶಿಖಾ ।
ಏತೇಷಾಂ ಯೋ ಜಪಃ ಪುತ್ರ ಸ್ವಾಧ್ಯಾಯ ಇತಿ ಕೀರ್ತಿತ ॥ ೧೦ ॥

ಯದೃಚ್ಛಾಲಾಭಸಂತುಷ್ಟಿಃ ಸಂತೋಷ ಇತಿ ಪಠ್ಯತೇ ।
ಬಾಹ್ಯೇ ಚಾಭ್ಯಂತರೇ ಚಾಪಿ ಶುದ್ಧಿಃ ಶೌಚಂ ವಿಧೀಯತೇ ॥ ೧೧ ॥

ಸ್ತುತಿಸ್ಮರಣಪೂಜಾಭಿರ್ವಾಙ್ಮನಃಕಾಯಕರ್ಮಭಿಃ ।
ಮಯಿ ಭಕ್ತಿರ್ದೃಢಾ ಪುತ್ರ ಏತದೀಶ್ವರಪೂಜನಂ ॥ ೧೨ ॥

---

೯. ಚಾಂದ್ರಾಯಣವೇ ಮೊದಲಾದ ವ್ರತಗಳಿಂದ ದೇಹವನ್ನು ಶೋಷಿಸುವುದಕ್ಕೆ ತಪಸ್ಸು ಎಂದು ಹೆಸರು. ತಪಸ್ಸು ಸಿದ್ಧಿಯಾದರೆ ಚಿತ್ತಶುದ್ಧಿಯುಂಟಾಗುವುದು.

೧೦. ಪ್ರಣವಮಂತ್ರ, ಶತರುದ್ರೀಯಸಂಹಿತೆ, ಅಥರ್ವಶಿರಸ್ಸು, ಉಪನಿಷತ್ತು ಇವೇ ಮೊದಲಾದ ಮಂತ್ರಗಳನ್ನು ಜಪಿಸುವುದೇ ಸ್ವಾಧ್ಯಾಯವು. ಈ ಸ್ವಾಧ್ಯಾಯ ಸಿದ್ಧಿಯಿಂದ ದೇವತಾಸಾಕ್ಷಾತ್ಕಾರವಾಗುವುದು.

೧೧. ಸ್ವೇಚ್ಛೆಯಾಗಿ ತಾನಾಗಿಯೇ ಬಂದ ಲಾಭದಿಂದ ಉಂಟಾಗುವ ತೃಪ್ತಿಯೇ ಸಂತೋಷ. ಸಂತೋಷದಿಂದ ಸುಖಾಭಿವೃದ್ಧಿಯಾಗುವುದು. ಅಂತರಂಗದ ಮತ್ತು ಹೊರಭಾಗದ ಶುಚಿಯನ್ನೇ ಶೌಚವೆನ್ನುವರು. ಶೌಚವು ಬಾಹ್ಯ, ಆಭ್ಯಂತರ ಎಂದು ಎರಡುವಿಧ. ಈ ಶೌಚ ಸಿದ್ಧಿಯಿಂದ ಶರೀರೇಂದ್ರಿಯಗಳಿಗೆ ಯೋಗಾಭ್ಯಾಸ ಯೋಗ್ಯತೆಯು ದೊರಕುವುದು.

೧೨. ಮಾತಿನಿಂದ ಸ್ತೋತ್ರವನ್ನೂ, ಮನಸ್ಸಿನಿಂದ ಸ್ಮರಣೆಯನ್ನೂ, ದೇಹದಿಂದ ಅರ್ಚನೆಯನ್ನೂ ಮಾಡುತ್ತಾ ಯಾರು ನನ್ನಲ್ಲಿ ನಿಜವಾದ ಭಕ್ತಿಯನ್ನು ಇಡುವರೋ ಅದೇ ಈಶ್ವರಪೂಜನವು. ಈ ಈಶ್ವರಾರಾಧನೆಯು ಕ್ರಿಯಾಯೋಗ, ಭಕ್ತಿಯೋಗ ಎಂದು ಎರಡು ವಿಧವಾಗಿರುವುದು. ಈಶ್ವರಪೂಜೆಯು ಸಿದ್ಧಿಸಿದರೆ ಸಮಾಧಿ ಸಿದ್ಧಿಯಾಯಿತೆಂದು ಅರಿಯಬೇಕು.

ಯಮಾಶ್ಚ ನಿಯಮಾಃ ಪ್ರೋಕ್ತಾಃ ಸಂಕ್ಷೇಪಾನ್ನ ತು ವಿಸ್ತರಾತ್ ।
ಯಮೈಶ್ಚ ನಿಯಮೈರ್ಯುಕ್ತೋ ಯೋಗೀ ಮೋಕ್ಷಾಯ ಸಂಸ್ಥಿತಃ॥೧೩ ॥

ಸ್ಥಿರಬುದ್ಧಿರಸಂಮೂಢಃ ಪೂರ್ವಮಾಸನಮಭ್ಯಸೇತ್ ॥ ೧೪ ॥

ಪದ್ಮಕಂ ಸ್ವಸ್ತಿಕಂ ಪೀಠಂ ಸೈಂಹಂ ಕೌಕುಟಕೌಂಜರಂ ।
ಕೌರ್ಮಂ ವಜ್ರಾಸನಂ ಚೈವಂ ವೈಯಾಘ್ರಂ ಚಾರ್ಧಚಂದ್ರಕಂ ॥ ೧೫ ॥

ದಂಡಂ ತಾರ್ಕ್ಷ್ಯಾಸನಂ ಶೂಲಂ ಖಡ್ಗಂ ಮುದ್ಗರಮೇವ ಚ ।
ಮಕರಂ ತ್ರಿಪಥಂ ಕಾಷ್ಠಂ ಸ್ಥಾಣುರ್ವಾ ಹಸ್ತಿಕರ್ಣಿಕಂ ॥ ೧೬ ॥

ಭೀಮಂ ವೀರಾಸನಂ ಚಾಪಿ ವಾರಾಹಂ ಮೃಗವೈಣಿಕಂ ।
ಕ್ರೌಂಚಂ ಚಾನಾಲಿಕಂ ಚಾಪಿ ಸರ್ವತೋಭದ್ರಮೇವ ಚ ॥ ೧೭ ॥

ಇತ್ಯೇತಾನ್ಯಾಸನಾನ್ಯತ್ರ ಸಪ್ತವಿಂಶತಿಸಂಖ್ಯಯಾ ।
ಯೋಗಸಂಸಿದ್ಧಿಹೇತೋಸ್ತು ಕಥಿತಾನಿ ತವಾನಘ ॥ ೧೮ ॥

---

೧೩. ಹೀಗೆ ಯಮ, ನಿಯಮ, ಇವುಗಳ ಸ್ವರೂಪವನ್ನು ಸಂಕ್ಷೇಪದಿಂದ ವಿವರಿಸಿರುವೆನು. ಯೋಗಿಯಾದವನಿಗೆ ಯಮನಿಯಮಗಳು ಮೋಕ್ಷಕ್ಕೆ ಕಾರಣ ವಾಗುತ್ತವೆ.

೧೪–೧೮. ಯೋಗಾಭ್ಯಾಸ ಮಾಡಲಿಷ್ಟವುಳ್ಳವನು ಮೊದಲು ಬುದ್ಧಿಯನ್ನು ಸ್ಥಿರವಾಗಿಟ್ಟುಕೊಂಡು, ಆಸನಗಳನ್ನು ಅಭ್ಯಾಸಮಾಡಬೇಕು. ಆಸನವೆಂದರೆ ಸುಖ ಕರವಾಗಿಯೂ ಸ್ಥಿರವಾಗಿಯೂ ಇರತಕ್ಕ ಸ್ಥಿತಿ. ಅದು ಶಾರೀರಕವಾಗಿಯೂ, ಬಾಹ್ಯ ವಾಗಿಯೂ ಇರುವುದು. ಆಸನಗಳು ಒಟ್ಟು ಇಪ್ಪತೇಳು, ಅವುಗಳಲ್ಲಿ ಒಂದೊಂದಕ್ಕೂ ಪ್ರತ್ಯೇಕವಾದ ಹೆಸರುಗಳಿವೆ. ಪದ್ಮಾಸನ, ಸ್ವಸ್ತಿಕಾಸನ, ಪೀಠ, ಸಿಂಹಾಸನ ಕುಕ್ಕುಟಾಸನ, ಕುಂಜರಾಸನ, ಕೂರ್ಮಾಸನ, ವಜ್ರಾಸನ, ವ್ಯಾಘ್ರಾಸನ, ಅರ್ಧ ಚಂದ್ರಾಸನ, ದಂಡಾಸನ, ತಾರ್ಕ್ಷ್ಯಾಸನ, ಶೂಲಾಸನ, ಖಡ್ಗಾಸನ, ಮಕರಾಸನ, ತ್ರಿಪಥಾಸನ, ಕಾಷ್ಠಾಸನ, ಸ್ಥಾಣ್ವಾಸನ, ಹಸ್ತಿಕರ್ಣಿಕಾಸನ, ಭೀಮಾಸನ, ವೀರಾ ಸನ, ವರಾಹಾಸನ, ಮೃಗವೈಣಿಕಾಸನ, ಕ್ರೌಂಚಾಸನ, ಅನಾಲಿಕಾಸನ, ಸರ್ವತೋ ಭದ್ರಾಸನ, ಹೀಗೆ ಒಟ್ಟು ಇಪ್ಪತ್ತೇಳು ಆಸನಗಳಿವೆ. ಈ ಆಸನಗಳು ಯೋಗದ ಸಿದ್ಧಿಯನ್ನು ತೋರ್ಪಡಿಸುವುವು. ಇಂತಹ ಆಸನಗಳು ಸಿದ್ಧಿಸಿದರೆ ಶಾರೀರವಾದ ವ್ಯಾಧಿ ಮೊದಲಾದ ಯಾವ ತೊಂದರೆಯೂ ಇರಲಾರದು.

ಏಷಾಮೇಕತರಂ ಬದ್ಧ್ವಾ ಗುರುಭಕ್ತಿಪರಾಯಣಃ ।
ದ್ವಂದ್ವಾತೀತೋ ಜಯೇತ್ಪ್ರಾಣಾನಭ್ಯಾಸಕ್ರಮಯೋಗತಃ ॥ ೧೯ ॥

ಅಂತಶ್ಚರಾಣಾಂ ವಾಯೂನಾಂ ಬಾಹ್ಯಾಭ್ಯಂತರರೋಧನಂ ।
ಪ್ರಾಣಾಯಾಮ ಇತಿ ಪ್ರೋಕ್ತೋ ದ್ವಿವಿಧಃ ಸ ಚ ಕಥ್ಯತೇ ॥ ೨೦ ॥

ಅಗರ್ಭಶ್ಚ ಸಗರ್ಭಶ್ಚ ತಯೋರಾದ್ಯೋಽಜಯಃ ಸ್ಮೃತಃ ।
ದ್ವಿತೀಯಃ ಸಜಯಃ ಪ್ರೋಕ್ತೋ ಧ್ರುವಂ ವ್ಯಾಹೃತಿಮಾತೃಭಿಃ ॥ ೨೧ ॥

ರೇಚಕಃ ಶೂನ್ಯಕಶ್ಚೈವ ಪೂರಕಃ ಕುಂಭಕಸ್ತಥಾ ।
ಏವಂ ಚತುರ್ವಿಧೋ ಭೇದಃ ಪ್ರಾಣಾಯಾಮೋಽತ್ರ ಸೂರಿಭಿಃ ॥ ೨೨॥

ಅಸೂನಾಂ ನಾಡಯಃ ಪ್ರೋಕ್ತಾ ಗಮಾಗಮಲಯಾಶ್ರಯಾಃ ।
ರೇಚನಾದ್ರೇಚಕಃ ಪ್ರೋಕ್ತಃ ಶೂನ್ಯಕಸ್ತು ಯಥಾಸ್ಥಿತಃ ॥ ೨೩ ॥

---

೧೯. ಈ ಆಸನಗಳಲ್ಲಿ ಒಂದನ್ನು ಗುರುಮುಖೇನ ಅರಿತವನಾಗಿ ಅದನ್ನು ಚೆನ್ನಾಗಿ ಅಭ್ಯಾಸಮಾಡಿ ಅಭ್ಯಾಸ ಕ್ರಮದಿಂದ ಪ್ರಾಣಾಯಮ ಮಾಡಬೇಕು.

೨೦. ಹೃದಯದಲ್ಲಿ ಪ್ರವಹಿಸುವ ವಾಯುವನ್ನು ಒಳಗೂ, ಹೊರಗೂ ತಡೆದು ನಿಲ್ಲಿಸುವುದೇ ಪ್ರಾಣಾಯಾಮವು. ಅಂದರೆ ಉಚ್ಛ್ವಾಸ ನಿಶ್ವಾಸ ರೂಪವಾದ ಪ್ರಾಣವಾಯುವನ್ನು ಸ್ವಾಧೀನದಲ್ಲಿಟ್ಟುಕೊಳ್ಳುವುದು. ಆ ಪ್ರಾಣಾಯಮವು ಎರಡು ವಿಧ.

೨೧. ಮೊದಲನೆಯ ವಿಧವೇ ಅಗರ್ಭ. ಅದಕ್ಕೆ ಅಜಯವೆಂಬ ಮತ್ತೊಂದು ಹೆಸರು. ಎರಡನೆಯದು ಸಗರ್ಭಪ್ರಾಣಾಯಾಮ ಇದಕ್ಕೆ ಸಜಯವೆಂಬ ನಾಮಾಂತರವಿದೆ.

೨೨. ಪ್ರಾಣಾಯಾಮದಲ್ಲಿ ರೇಚಕ, ಶೂನ್ಯಕ, ಪೂರಕ, ಕುಂಭಕವೆಂಬ ನಾಲ್ಕು ಎಂದು ವಿದ್ವಾಂಸರು ಹೇಳುತ್ತಾರೆ.

೨೩. ಪ್ರಾಣವಾಯುವಿನ, ಗಮನ, ಆಗಮನ, ಮತ್ತು ಸ್ಥಾಪನ ಇವುಗಳಿಗೆ ಆಶ್ರಯವಾಗಿರತಕ್ಕವುಗಳು ನಾಡಿಗಳು. ಅದರಲ್ಲಿ ಒಳಗಿನ ವಾಯುವನ್ನು ಸಂಪೂರ್ಣವಾಗಿ ಹೊರಪಡಿಸುವುದೇ ರೇಚಕ, ರೇಚಕವೆಂದು ಸಂಜ್ಞೆ. ಇದ್ದಂತೆಯೇ ನಿಲ್ಲಿಸುವುದು ಶೂನ್ಯಕವೆಂದು ತಿಳಿಯಬೇಕು.

ಪೂರಕಃ ಪೂರಣಾದ್ವಾಯೋಸ್ತನ್ನಿರೋಧಾಚ್ಚ ಕುಂಭಕಃ ।
ದೇಹಿನೋ ದಕ್ಷಿಣೇ ಭಾಗೇ ಪಿಂಗಳಾ ನಾಡಿಕಾ ಸ್ಮೃತಾ ॥ ೨೪ ॥

ಪಿತೃಯೋನಿರಿತಿ ಖ್ಯಾತಾ ಭಾನುಸ್ತತ್ರಾಧಿದೈವತಂ ।
ದಕ್ಷಿಣೇತರಗಾ ಯಾ ಚ ಇಡಾ ಸಾ ನಾಡಿಕಾ ಸ್ಮೃತಾ ॥ ೨೫ ॥

ದೇವಯೋನಿರಿತಿ ಖ್ಯಾತಾ ಚಂದ್ರಸ್ತತ್ರಾಧಿದೈವತಂ ।
ಏತಯೋರುಭಯೋರ್ಮಧ್ಯೇ ಸುಷುಮ್ನಾ ನಾಮ ವಿಶ್ರುತಾ ॥ ೨೬ ॥

ಪದ್ಮಸೂತ್ರನಿಭಾ ನಾಡೀ ಕಾರ್ಯಾಖ್ಯಾ ಬ್ರಹ್ಮದೈವತಂ ।
ತತಶ್ಶೂನ್ಯಂ ನಿರಾಲಂಬಂ ಮಧ್ಯೇ ಸ್ವಾತ್ಮನಿ ಯೋಜಯೇತ್ ॥ ೨೭ ॥

ಬಾಹ್ಯಸ್ಥಾದ್ರೋಧನಾದ್ವಾಯೋಃ ಶೂನ್ಯಕತ್ವಂ ವಿನಿರ್ದಿಶೇತ್ ।
ಚಂದ್ರದೈವತಯಾ ಭೂಯಃ ಪಿಬೇದಮೃತಮುತ್ತಮಂ ॥ ೨೮ ॥

---

೨೪. ವಾಯುವನ್ನು ಒಳಕ್ಕೆ ತುಂಬಿಸುವುದು ಪೂರಕವು ಪೂರಕದಿಂದ ಒಳಗೆ ತುಂಬಲ್ಪಟ್ಟ ವಾಯುವನ್ನು ತಡೆದು ನಿಲ್ಲಿಸುವುದು ಕುಂಭಕವು. ಮನುಷ್ಯನ ನಾಸಿಕದ ಬಲಭಾಗದಲ್ಲಿ ಪಿಂಗಳನಾಡಿಯು ಇದೆ.

೨೫. ಆ ಪಿಂಗಳನಾಡಿಗೆ ಪಿತೃಯೋಗಿ ಎಂಬ ಹೆಸರು ಪ್ರಸಿದ್ಧವಾಗಿದೆ. ಅವಕ್ಕೆ ಸೂರ್ಯನೇ ಅಧಿಪತಿ. ಎಡಭಾಗದಲ್ಲಿ ಇಡಾನಾಡಿ ಇದೆ.

೨೬. ಇಡಾನಾಡಿಯು ದೇವಯೋಗಿಯು. ಅದಕ್ಕೆ ಮುಖ್ಯ ದೇವತೆ ಚಂದ್ರ. ಈ ಇಡಾ, ಪಿಂಗಳನಾಡಿಗಳ ಮಧ್ಯದಲ್ಲಿ ಕಂಡುಬರುವುದೇ ಪ್ರಸಿದ್ಧವಾದ ಸುಷುಮ್ನಾ ನಾಡೀ.

೨೭. ಆ ಸುಷುಮ್ನಾನಾಡಿಯು ತಾವರೆಯ ದಂಟಿನ ಎಳೆಯಂತೆ ಬಹಳ ಸೂಕ್ಷ್ಮವಾದದ್ದು. ಅದಕ್ಕೆ ಕಾರ್ಯನಾಡಿಯೆಂದೂ ಹೆಸರು. ಬ್ರಹ್ಮನೇ ಸುಷುಮ್ನಾ ನಾಡಿಯ ಅಭಿಮಾನದೇವತೆ. ಅಲ್ಲಿಂದ ಮೇಲೆ ಶೂನ್ಯಪ್ರದೇಶವಿರುವುದು ಆ ಶೂನ್ಯ ಸ್ಥಾನದಲ್ಲಿಯೇ ಆತ್ಮನನ್ನು ಧ್ಯಾನದಿಂದ ನಿಲ್ಲಿಸಬೇಕು,

೨೮. ಹೊರಗಿನ ವಾಯುವನ್ನು ಕುಂಭಕದಿಂದ ತಡೆದು ಹೃದಯದಲ್ಲಿ ಸರ್ವ ಶೂನ್ಯವನ್ನಾಗಿ ತೋರ್ಪಡಿಸಿಕೊಳ್ಳಬೇಕು. ಅನಂತರ ಚಂದ್ರದೇವತಾಕವಾದ ಎಡ ಭಾಗದ ಇಡಾನಾಡಿಯಿಂದ ಶ್ವಾಸವನ್ನು ಒಳಕ್ಕೆ ಎಳೆಯಬೇಕು. ಈ ಚಂದ್ರದೇವತಾಧಿಷ್ಠಾನವಾದ ನಾಡಿಯಲ್ಲಿ ಅಮೃತ ಬಿಂದುಗಳನ್ನು ಸೇವಿಸುವಂತೆ ಅಭ್ಯಾಸದಿಂದ ತೆರಬೇಕು.

ಆಪ್ಯಾಯನಂ ಭವೇತ್ತೇನ ಪ್ಲಾವನಂ ಕಲ್ಮಶಸ್ಯ ತು ।
ಆಪೂರ್ಯೋದರಸಂಸ್ಥಂ ತು ಉಚ್ಚೈರ್ವಾಯುಂ ನಿರೋಧಯೇತ್ ॥ ೨೯ ॥

ಕುಂಭಕಃ ಕುಂಭವತ್ಸ ಸ್ಯಾದ್ರೇಚಕೋ ವರ್ತಿತಸ್ಯ ಚ ।
ಉತ್ಕ್ಷಿಪ್ಯ ಪ್ರಯತ್ನತೋ ವಾಯುಮುಜದೇವತ್ಯಮಾನಯೇತ್ ॥ ೩೦ ॥

ಅಂಗುಷ್ಠಾಗ್ರಾತ್ಸಮಾರಭ್ಯ ಬ್ರಹ್ಮರಂಧ್ರೇಣ ಮೋಚಯೇತ್ ।
ಸಂಕೋಚ್ಯ ಕೊಚಿಕಾಚಕ್ರಮೂರ್ಧ್ವಂ ನೀತ್ವಾ ರಸಾತ್ತ್ರಯಂ ॥೩೧ ॥

ಸಂಕ್ಷೋಭ್ಯ ಶಂಖಿನೀಂ ಸಮ್ಯಕ್ತತೋ ಬ್ರಹ್ಮಗುಹಾಂ ನಯೇತ್ ।
ಅನೇನ ಶೋಧಯೇನ್ಮಾರ್ಗನ್ಮೈಶ್ವರಂ ವಿಮಲಂ ಮುನಿಃ ॥ ೩೨ ॥

---

೨೯. ಆ ಇಡಾನಾಡಿಯಲ್ಲಿಯೇ ಶ್ವಾಸಕ್ಕೆ ಒಂದು ವಿಧವಾದ ಆಪ್ಯಾಯನವೂ ಮತ್ತು ಸಕಲಕಲ್ಮಷಗಳನಾಶವೂ ಉಂಟಾಗುವುದು. ಅನಂತರ ಆಶ್ವಾಸವನ್ನು ಉದರ ಭಾಗದಲ್ಲಿ ತುಂಬಿ ಗಟ್ಟಿಯಾಗಿ ಅಲ್ಲಿ ವಾಯುವನ್ನು ಬಂಧಿಸಬೇಕು.

೩೦. ಕುಂಭಕದಿಂದ ಹೃದಯವು ಒಂದು ಗಡಿಗೆಯಂತೆ ದಪ್ಪನಾಗುವುದು. ರೇಚಕದಿಂದ ಹೃದಯವು ತೆಳ್ಳಗಾಗುವುದು. ಕುಂಭಕದಿಂದ ನಿರೋಧಿಸಿದ್ದ ವಾಯುವನ್ನು ಪ್ರಯತ್ನಪೂರ್ವಕವಾಗಿ ಬ್ರಹ್ಮರಂಧ್ರದೊಳಕ್ಕೆ ಸುಷುಮ್ನಾನಾಡಿಗೆ ಸೇರಿಸಬೇಕು.

೩೧. ಆ ಕಾಲದಲ್ಲಿ ಅಂಗುಷ್ಠಾಗ್ರದಿಂದ ಬ್ರಹ್ಮರಂಧ್ರಪರ್ಯಂತ ದೇಹವೆಲ್ಲಾ ನಿಶ್ಚಲವಾಗಿರಬೇಕು. ಹೃದಯಾಂತರ್ವರ್ತಿಯಾದ ಮೂಲಾಧಾರೈಕಚಕ್ರವನ್ನು ಸಂಕೋಚಗೊಳಿಸಿ ಮುಂದಿನ ಚಕ್ರಸ್ಥಾನಗಳಾದ ಪಾತಾಳಲೋಕದಿಂದ ಮುಂದಕ್ಕೆ ವಾಯುವನ್ನು ಪೂರಕಮಾಡಬೇಕು.

೩೨. ಅಭ್ಯಾಸಬಲದಿಂದ ಅದೇ ವಾಯುವನ್ನು ಶಂಖಿನೀ ನಾಡಿಯಮೂಲಕ ಬ್ರಹ್ಮರಂಧ್ರಕ್ಕೆ ಸೇರಿಸಿ ಅಲ್ಲಿ ಕುಂಭಕಮಾಡಬೇಕು. ಈ ವಿಧವಾದ ವಾಯುಧಾರಣೆಯಿಂದ ಯೋಗಿಯು ಈಶ್ವರ ಧ್ಯಾನಕ್ಕೆ ಅರ್ಹನಾಗುವನು.

ಕ್ರಮೇಣಾಭ್ಯಾಸಯೋಗೇನ ಯೋಗಸಂಸಿದ್ಧಿಭಾಗ್ಭವೇತ್ ।
ಮುಮುಕ್ಷೂಣಾಂ ಸದಾ ವತ್ಸ ಯೋಗಾಂಗಂ ಯೋಗಸಿದ್ಧಯೇ ॥ ೩೩ ॥

ವಿಹಾಯ ವಹ್ನಿಮಾರ್ಗಂ ತು ಅಂಗುಲ್ಯಾಸ್ತು ಶನೈಃ ಶನೈಃ ।
ಸೌಮ್ಯೇನಾಕರ್ಷಯೇದ್ವಾಯುಂ ನಾಭಾವಾಕೃಷ್ಯ ಧಾರಯೇತ್ ॥ ೩೪ ॥

ಧಾರಯನ್ ನಿಯತಪ್ರಾಣೋ ಯೋಗೈಶ್ವರ್ಯಸಮನ್ವಿತಃ ।
ಜಾಯತೇ ವತ್ಸರಾದ್ಯೋಗೀ ಜರಾಮರಣವರ್ಜಿತಃ ॥ ೩೫ ॥

ವಾಯುಮಾಕರ್ಷಯೇದ್ಬಾಹ್ಯಂ ವಾಮಯಾ ಚೋದರಂ ಭರೇತ್ ।
ನಾಭಿನಾಸಾಂತರಾ ಧ್ಯಾಯಂಸ್ತ್ರೀನ್ಪ್ರಾಣಾಂಶ್ಚ ಜಯೇದ್ಧ್ರುವಂ ॥ ೩೬ ॥

ಮನಃಸ್ಥೈರ್ಯಂ ಭವೇದ್ವತ್ಸ ತ್ರಿಷು ಸ್ಥಾನೇಷು ಧಾರಣಾತ್ ।
ಅಂಗುಷ್ಠನಾಭಿನಾಸಾಗ್ರೇ ವಾಯುಂ ಯೋಗೀ ಜಿತಾಸನಃ ॥ ೩೭ ॥

---

೩೩. ಕುಮಾರನೇ! ಹೀಗೆ ಮೋಕ್ಷಕಾಮಿಯಾದವನು ಗುರುಮುಖದಿಂದ ಈ ಅಷ್ಟಾಂಗಗಳ ಕ್ರಮವನ್ನು ಸರಿಯಾಗಿ ತಿಳಿದು ಅಭ್ಯಾಸಬಲದಿಂದ ಪ್ರಾಣಾಯಾಮವನ್ನು ಸಾಧಿಸಿ ತನ್ಮೂಲಕ ಯೋಗಸಿದ್ಧಿಯನ್ನು ಪಡೆಯುವನು.

೩೪. ಹಾಗೆಯೇ ಕ್ರಮಕ್ರಮವಾಗಿ, ರೇಚಕ. ಪೂರಕ, ಕುಂಭಕಗಳನ್ನು ಕೇವಲ ಚಂದ್ರನಾಡಿಯಿಂದಲೇ ಮಾಡುವುದನ್ನು ಅಭ್ಯಾಸಮಾಡಬೇಕು. ಸೂರ್ಯನಾಡಿಯಮೂಲಕ ಅವುಗಳನ್ನು ನಿಲ್ಲಿಸಬೇಕು. ಹೀಗೆ ಪೂರಕಮಾಡಿದ ಪ್ರಾಣವಾಯುವನ್ನು ನಾಭಿಯಲ್ಲಿ ದೃಢವಾಗಿ ಕುಂಭಕಮಾಡಬೇಕು.

೩೫. ಈ ರೀತಿ ಯಾರು ಒಂದು ವರ್ಷಪರ್ಯಂತ ವಿಧಿವತ್ತಾಗಿ ಪ್ರಾಣಾಯಾಮವನ್ನು ಅನುಷ್ಠಿಸುವರೋ, ಅವರು ಮುಪ್ಪು, ಮರಣ ಇವುಗಳಿಗೆ ತುತ್ತಾಗದೆ ಸರ್ವದಾ ಯುವಕರಂತೆಯೇ ಜೀವಿಸುವರು.

೩೬. ಹೊರಗಿನ ವಾಯುವನ್ನು ಎಡಭಾಗದ ನಾಡಿಯಿಂದ ಪೂರಕ ಮಾಡಿ. ನಾಭಿ ಮತ್ತು ನಾಸಿಕ ಇವುಗಳ ಮಧ್ಯಭಾಗದಲ್ಲಿ ನಿಯತವಾಗಿರುವ ಪ್ರದೇಶಗಳಲ್ಲಿ ರೇಚಕ, ಪೂರಕ, ಕುಂಭಕಗಳನ್ನು ಸ್ವೇಚ್ಛೆಯಾಗಿ ಮಾಡುವವನು ನಿಜವಾಗಿಯೂ ಯೋಗಿಯು.

೩೭. ಷಣ್ಮುಖನೇ! ಈ ರೀತಿ ಅಂಗುಷ್ಠ, ನಾಭಿ, ನಾಸಿಕ, ಈ ಭಾಗಗಳಲ್ಲಿ ವಾಯು ನಿರೋಧಕಮಾಡುವವನಿಗೆ ಚಿತ್ತಸ್ಥೈರ್ಯವೂ, ಕಾಯಶಕ್ತಿಯೂ ಜಿತೇಂದ್ರಿಯತ್ವವೂ ಒದಗುವುದು.

ಅಪಾನಂ ಕಟಿದೇಶೇ ತು ಪೃಷ್ಠತೋ ವೈ ವಿನಿರ್ದಿಶೇತ್ ।
ಸದಾ ತತ್ರೈವ ಸಂಧೇಯ ಏಷ ವಾಯುಜಯಕ್ರಮಃ ॥ ೩೮ ॥

ರೇಚಕಃ ಪೂರಕಶ್ಚೈವ ಕುಂಭಕಶ್ಚ ನ ವಿದ್ಯತೇ ।
ನಿರಾಲಂಬೇ ಮನಃ ಕೃತ್ವಾ ಕ್ಷಣಾತ್ಪ್ರಾಣಜಿತೋ ಭವೇತ್ ॥ ೩೯ ॥

ಇಂದ್ರಿಯಾಣಾಂ ವಿಚರತಾಂ ವಿಷಯೇಷು ಸ್ವಭಾವತಃ ।
ನಿಗ್ರಹಃ ಪ್ರೋಚ್ಯತೇ ಯಸ್ತು ಪ್ರತ್ಯಾಹಾರಃ ಸ ಉಚ್ಯತೇ ॥ ೪೦ ॥

ಯದ್ಯತ್ಪಶ್ಯತಿ ತತ್ಸರ್ವಂ ಪಶ್ಯೇದಾತ್ಮವದಾತ್ಮನಿ ।
ಪ್ರತ್ಯಾಹಾರಃ ಸ ವೈ ಪ್ರೋಕ್ತೋ ಯೋಗಸಾಧನಮುತ್ತಮಂ ॥ ೪೧ ॥

ಕರ್ಮೇಂದ್ರಿಯಾಣಾಂ ಪಂಚಾನಾಂ ಪಂಚಮಾದ್ಯೇತರೇ ಜನೇ ।
ಯದಿ ತತ್ರ ಸ್ಥಿರೋ ಲೋಕೋ ಮನೋ ಯಾತಿ ತದಾಲಯಂ ॥ ೪೨ ॥

---

೩೮. ಅಪಾನವಾಯುವು ಸೊಂಟದ ಪ್ರದೇಶದಲ್ಲಿರುತ್ತದೆ. ಆ ವಾಯುವನ್ನು ಸರ್ವದಾ ಅಲ್ಲಿಯೇ ಬಂಧಿಸಿಡಬೇಕು. ಅದು ಪ್ರಾಣವಾಯುವನ್ನು ಎಳೆಯದಂತೆ ಕಟಿಪ್ರದೇಶದಲ್ಲಿಯೇ ತಡೆಯಬೇಕು. ಹಾಗೆ ಮಾಡಿದರೆ ಅಪಾನವಾಯುವೇಗ ವನ್ನು ತಡೆದಂತಾಗುವುದು.

೩೯. ಯಾವಾಗ ಯೋಗಿಯು ರೇಚಕ, ಪೂರಕ, ಕುಂಭಕಗಳಿಂದ ವಾಯು ವನ್ನು ನಿರಾಲಂಬವಾದ ಬ್ರಹ್ಮರಂಧ್ರದಲ್ಲಿ ನಿಲ್ಲಿಸುವನೋ, ಆಗ ಈ ರೇಚಕಾದಿಗಳ ಕಾರ್ಯವು ನಿಂತುಹೋಗುತ್ತದೆ. ಪ್ರಾಣವಾಯುವನ್ನು ಆಗಲೇ ಗೆದ್ದಂತಾಗುವುದು.

೪೦. ವಿಷಯಸುಖಗಳಲ್ಲಿ ಸ್ವೇಚ್ಛೆಯಾಗಿ ಸಂಚರಿಸುವ ಇಂದ್ರಿಯಗಳನ್ನು ಬಿಗಿಹಿಡಿದು, ಅವುಗಳನ್ನು ನಿಗ್ರಹಿಸುವುದೇ ಪ್ರತ್ಯಾಹಾರವು, ಅಂದರೆ ಇಂದ್ರಿಯ ಗಳನ್ನು ಅಂತಃಕರಣಕ್ಕೆ ಅನುಕೂಲವಾಗಿರಿಸುವುದು.

೪೧. ಲೋಕದಲ್ಲಿ ಯಾವುದನ್ನು ನೋಡಿದರೂ, ಆ ವಸ್ತುಗಳನ್ನು ಸ್ವಕೀಯ ವಸ್ತುಗಳಂತೆ ಭಾವಿಸಿ ಆದರಿಸುವುದೇ ಪ್ರತ್ಯಾಹಾರವೆನಿಸುವುದು. ಇದು ಯೋಗ ಸಾಧನೆಗೆ ಅತ್ಯಾವಶ್ಯಕವು. ಈ ಪ್ರತ್ಯಾಹಾರಸಿದ್ಧಿಯಿಂದ ಇಂದ್ರಿಯಗಳು ಸ್ವಾಧೀನ ವಾಗುವುವು.

೪೨. ಲೋಕದ ಸಮಸ್ತ ವರ್ಣದವರಿಗೂ ಐದು ಕರ್ಮೇಂದ್ರಿಯಗಳು ಮನಸ್ಸನ್ನು ಎಳೆಯುತ್ತಿರುತ್ತವೆ. ಆ ಇಂದ್ರಿಯಗಳನ್ನು ಸ್ಥಿರವಾಗಿ ನಿಲ್ಲಿಸಿಕೊಂಡರೆ ಮನಸ್ಸು ಆಗ ಸ್ತಿಮಿತದಲ್ಲಿ ನಿಲ್ಲುವುದು.

ಉದ್ವಾತಾನ್ ದಶ ಪಂಚೈವ ಕಾರಯೇದ್ಧಾರಣಾಂ ಬುಧಃ ।
ಪ್ರಾಣವಾಯುಂ ನಿವಾರ್ಯೈವ ಮನಸ್ಸೂರ್ಯೇಂತರೇ ಕ್ಷಿಪೇತ್ ॥ ೪೩ ॥

ದೇವಾಂಶ್ಚ ಸಿದ್ಧಾನ್ ಗಂಧರ್ವಾನ್ ಚಾರಣಾನ್ ಖೇಚರಾನ್ ಗಣಾನ್ ।
ಷಣ್ಮಾಸಾಭ್ಯಾಸಯೋಗೇನ ಸೂಕ್ಷ್ಮಜ್ಯೋತಿಃ ಪ್ರಪಶ್ಯತಿ ॥ ೪೪ ॥

ದೃಷ್ಟೇ ನ ಸ್ಯಾಜ್ಜರಾಮೃತ್ಯುಃ ಸರ್ವಜ್ಞಶ್ಚ ಪ್ರಜಾಯತೇ ।
ಸ್ಫೋಟಾಖ್ಯಾ ನಾಡಿಕಾ ಪ್ರೋಕ್ತಾ ಕೂರ್ಮಲೋಕಸ್ತದಾಂತರೇ ॥ ೪೫ ॥

ಉಚ್ಚಾರ್ಯ ಬಿಂದುತತ್ತ್ವಂ ತು ತಸ್ಯಾಂತೇ ಗುಣವತ್ಸ್ಮರೇತ್ ।
ಭೂತಂ ಭವ್ಯಂ ಭವಿಷ್ಯಂ ಚ ವರ್ತಮಾನಂ ಚ ದೂರತಃ ॥ ೪೬ ॥

ಜ್ಞಾನಂ ಯತ್ತದ್ಭವೇನ್ನೂನಂ ಸ್ಫೋಟಾಖ್ಯೇ ಜ್ಞಾನಮಭ್ಯಸೇತ್ ।
ಲಲಾಟೇ ಮೂರ್ಧ್ನಿ ಹೃದಯೇ ಸದಾಶಿವಮನುಸ್ಮರೇತ್ ॥ ೪೭ ॥

---

೪೩. ಶ್ವಾಸೋಚ್ಛ್ವಾಸಗಳು ಸಾಮಾನ್ಯವಾಗಿ ಹದಿನೈದು ವಿಧಗಳಿವೆ. ಆ ವಿಧಗಳಾದ ಶ್ವಾಸವನ್ನು ಧಾರಣೆಮಾಡಿ, ಪ್ರಾಣವಾಯುವನ್ನು ತಡೆದು ತನ್ನ ಮನಸ್ಸನ್ನು ಸೂರ್ಯಮಂಡಲದಲ್ಲಿ ಬ್ರಹ್ಮರಂಧ್ರದಲ್ಲಿ ನಿಲ್ಲಿಸಬೇಕು.

೪೪. ಹೀಗೆ ಆರು ತಿಂಗಳು ವಾಯುಧಾರಣೆಮಾಡಿದ್ದೇ ಆದರೆ, ಆಗ ಸೂಕ್ಷ್ಮಜ್ಯೋತಿರೂಪದಿಂದ ದೇವತೆಗಳನ್ನೂ, ಸಿದ್ಧರನ್ನೂ, ಗಂಧರ್ವರನ್ನೂ, ಚಾರಣರನ್ನೂ ಗಗನಚಾರಿಗಳಾದ ದೇವಗಣಗಳನ್ನೂ ನೋಡಬಹುದು.

೪೫. ಹಾಗೆ ದೇವತೆಗಳ ದರ್ಶನವು ಲಭಿಸಿದರೆ, ಆ ಮನುಷ್ಯನಿಗೆ, ಮುಪ್ಪಾಗಲೀ, ಮೃತ್ಯುವಾಗಲಿ ಒದಗುವುದಿಲ್ಲ. ಅಲ್ಲದೆ, ಆತನು ಸರ್ವಜ್ಞನೂ ಆಗುವನು. ಮನುಷ್ಯರಲ್ಲಿ ಕೂರ್ಮಲೋಕಾಂತರ್ಗತವಾದ ಸ್ಫೋಟಕವೆಂಬ ನಾಡಿಯು ಒಂದಿರುವುದು.

೪೬. ಆ ಸ್ಫೋಟಕನಾಡಿಯಲ್ಲಿ ಬಿಂದು ತತ್ತ್ವವನ್ನು (ಶ್ರೀವಿದ್ಯೆಯನ್ನು) ಉಚ್ಚರಿಸಿ, ಕೊನೆಯಲ್ಲಿ ಈಶ್ವರನ ಗುಣರಾಶಿಗಳನ್ನು ಸ್ಮರಿಸಿಕೊಳ್ಳಬೇಕು. ಇದರಿಂದ ವರ್ತಮಾನ, ಭೂತ, ಭವಿಷ್ಯದ್ವಿಚಾರಗಳು ಎಲ್ಲಿದ್ದರೂ ತಿಳಿದುಬರುತ್ತವೆ.

೪೭. ತ್ರಿಕಾಲಜ್ಞಾನದಾಯಕವಾದ ಈ ಜ್ಞಾನವು ಸ್ಫೋಟನೆಂಬ ಹೆಸರಿನ ನಾಡಿಯಿಂದಲೇ ದೊರೆಯುತ್ತದೆ. ಮನಸ್ಸು ಸ್ಫೋಟಾನಾಡಿಯಲ್ಲಿ ಸಂಚರಿಸುವುದೇ ಈ ತ್ರಿಕಾಲಜ್ಞತ್ವಕ್ಕೆ ಕಾರಣವು.

ಶುದ್ಧಸ್ಫಟಿಕಸಂಕಾಶಂ ಜಟಾಜೂಟೇಂದುಶೇಖರಂ ॥
ಪಂಚವಕ್ತ್ರಂ ದಶಭುಜಂ ಸರ್ಪಯಜ್ಞೋಪವೀತಿನಂ ॥ ೪೮ ॥

ಧ್ಯಾತ್ವೈವಮಾತ್ಮನಿ ವಿಭುಂ ಧ್ಯಾನಂ ತತ್ಪರಯೋ ವಿದುಃ ।
ತತೋನ್ಮನಸ್ತ್ವಂ ಭವತಿ ನ ಶೃಣೋತಿ ನ ಪಶ್ಯತಿ ॥ ೪೯ ॥

ನ ಜಿಘ್ರತಿ ನ ಸ್ಪೃಶತಿ ನ ಕಿಂಚಿದ್ವಾ ಸಮೀಕ್ಷತೇ ।
ಗುಹ್ಯೋದರಾದಿಸ್ಥಾನೇಷು ವಾಯುಂ ನಾಸಾಂ ವಿಚಿಂತಯೇತ್ ॥ ೫೦ ॥

ಈಶೋಹಮಿತಿ ಯೋಗೀಂದ್ರಃ ಪರಾನಂದೈಕವಿಗ್ರಹಃ ।
ಜರಾಮರಣನಿರ್ಮುಕ್ತಃ ಶಿವ ಏವ ಭವೇನ್ಮುನಿಃ ॥ ೫೧ ॥

---

೪೮. ಸುಷುಮ್ನಾ ನಾಡಿಯಲ್ಲಿ, ಬ್ರಹ್ಮರಂಧ್ರದಲ್ಲಿ, ಹೃದಯದಲ್ಲಿ, ವಾಯು ನಿರೋಧನಮಾಡುತ್ತಾ ಪರಮೇಶ್ವರನನ್ನು ಸ್ಮರಿಸುತ್ತಿರಬೇಕು. ಪರಮೇಶ್ವರನು ಶುದ್ಧವಾದ ಸ್ಫಟಿಕದಂತೆ ಹೊಳೆಯುತ್ತಿರುವನು. ಶಿರಸ್ಸಿನಲ್ಲಿ ಜಟಾಸಮೂಹವೂ ಚಂದ್ರಬಿಂಬವೂ ರಾರಾಜಿಸುತ್ತಿರುವುದು. ಈಶ್ವರನಿಗೆ ಐದು ಮುಖಗಳಿವೆ. ಹತ್ತು ಭುಜಗಳಿವೆ. ಸರ್ಪವನ್ನೇ ಯಜ್ಞೋಪವೀತವನ್ನಾಗಿ ಧರಿಸಿರುವನು.

೪೯. ಈರೀತಿಯಾಗಿ ಪರಮೇಶ್ವರನನ್ನು ಧ್ಯಾನಮಾಡಬೇಕು. ಹೀಗೆ ಧ್ಯಾನಮಗ್ನನಾದ ಮನುಷ್ಯನು ಅಜ್ಞಾನಿಗಳಿಗೆ ಹುಚ್ಚನಂತೆ ಕಾಣುತ್ತಾ, ತಾನು ಏನನ್ನೂ ಕೇಳುವುದಿಲ್ಲ. ಯಾವುದನ್ನೂ ನೋಡುವುದಿಲ್ಲ.

೫೦. ವಾಸನೆಯೇ ಆತನಿಗೆ ತಿಳಿಯುವುದಿಲ್ಲ. ಸ್ಪರ್ಶೇಂದ್ರಿಯವು ಯಾವ ಕಾರ್ಯವನ್ನೂ ಮಾಡುವುದಿಲ್ಲ. ಲೋಕದಲ್ಲಿ ಅವನಿಗೆ ಯಾವುದೂ ಕಾಣುವುದೇ ಇಲ್ಲ. ಗುಹ್ಯ, ಉದರ ಮುಂತಾದ ಅಂಗಗಳಲ್ಲಿಯೂ ಆತನು ದೃಷ್ಟಿಯಿಟ್ಟಿರುವುದಿಲ್ಲ. ಮೂಗಿನಲ್ಲಿ ಮಾತ್ರ ವಾಯುವು ಸಂಚರಿಸುತ್ತಿರುತ್ತದೆ.

೫೧. ಆಗ ಅವನು ಯೋಗಿಯೆನಿಸುವನು. (ಶಿವೋಽಹಂ) ನಾನು ಈಶ್ವರನು ಎಂಬ ಬುದ್ಧಿಯು ಆತನಿಗೆ ಬರುವುದು. ಮುಪ್ಪು, ಮರಣಗಳ ಭಯವಿಲ್ಲದೆ ಆಗ ಆತನು ಸಾಕ್ಷಾತ್ ಶಿವಸ್ವರೂಪನಾಗುವನು.

ಗಮನಾಗಮನಾಭ್ಯಾಂ ಯೋ ಹೀನೋ ವೈ ವಿಷಯೋಜ್ಝಿತಃ ।
ಏಕಾಂತರೋನ್ಮನೀಭಾವಃ ಸಮಾಧಿರಭಿಧೀಯತೇ ॥ ೫೨ ॥

ನ ಬೃಹದ್ವಸ್ತುನಶ್ಚಿಂತಾ ನ ಸೂಕ್ಷ್ಮಸ್ಯಾಪಿ ಚಿಂತನಂ ।
ನ ಬಹಿರ್ನಾಂತರಂ ಪುತ್ರ ಬ್ರಹ್ಮಗ್ರಂಥಿವಿಭೇದನಂ ॥ ೫೩ ॥

ನ ಸ್ಥೂಲಂ ನ ಕೃಶಂ ವಾಪಿ ನ ಹ್ರಸ್ವಂ ನಾಪಿ ಲೇಪಿತಂ ।
ನ ಶುಕ್ಲಂ ನಾಪಿ ವಾ ಪೀತಂ ನ ಕೃಷ್ಣಂ ನಾಪಿ ಕರ್ಬುರಂ ॥ ೫೪ ॥

ಕೃತ್ವಾ ಹೃತ್ಪದ್ಮನಿಲಯೇ ವಿಶ್ವಾಖ್ಯಂ ವಿಶ್ವಸಂಭವಂ ।
ಆತ್ಮಾನಂ ಸರ್ವಭೂತಾನಾಂ ಪರಸ್ತಾತ್ತಮಸಂಸ್ಥಿತಂ ॥ ೫೫ ॥

---

೫೨. ಸಮಾಧಿಯೆಂದರೆ, ಗಮನ, ಆಗಮನಗಳು ಯಾವುದೂ ಇಲ್ಲದೆ, ವಿಷಯಸುಖಗಳನ್ನು ಬಿಟ್ಟು, ಏಕಾಂತವಾಸಿಯಾಗಿ, ಉಚ್ಛೃಂಖಲ ಸ್ವಭಾವದಿಂದಿರುವುದೇ. ಸಮಾಧಿಕಾಲದಲ್ಲಿ ಚಿತ್ತವೃತ್ತಿಪ್ರವಾಹಕ್ಕೂ ಧ್ಯೇಯವಸ್ತುವಿಗೂ ಭೇದ ತೋರದೆ, ಚಿತ್ತವೃತ್ತಿಯು ಧ್ಯೇಯವಸ್ತುಸ್ವರೂಪದಲ್ಲೇ ಲೀನವಾಗುವುದು.

೫೩. ಸಮಾಧಿಯ ಅವಸ್ಥೆಯಲ್ಲಿ ಯೋಗಿಗೆ ಸ್ಥೂಲಸೂಕ್ಷ್ಮವಸ್ತುಗಳ ಪರಿಚಯವಾಗಲಿ, ಬಾಹ್ಯಾಂತರ ಭೇದಗಳಾಗಲಿ ಗೋಚರಿಸುವುದಿಲ್ಲ. ಬ್ರಹ್ಮರಂಧ್ರದಲ್ಲಿ ಚಿತ್ತಸ್ಥಿರೀಕರಣವಾಗಿ ಆ ಮೂಲಕ ಆತ್ಮಸ್ವರೂಪನಾಗುವನು.

೫೪. ಪರಬ್ರಹ್ಮವಸ್ತುವು ಸ್ಥೂಲವೂ ಅಲ್ಲ. ಕೃಶವಾದದ್ದೂ ಅಲ್ಲ. ಚಿಕ್ಕದಲ್ಲ. ಮಿಶ್ರವಾದದ್ದಲ್ಲ. ಅದರ ವರ್ಣವು ಬಿಳುಪೂ ಅಲ್ಲ. ಹಳದಿಯೂ ಅಲ್ಲ. ಕಪ್ಪು, ಮಿಶ್ರವರ್ಣ, ಇವುಗಳಲ್ಲಿ ಯಾವುದೂ ಅಲ್ಲ.

೫೫. ಹೃತ್ಕಮಲದಲ್ಲಿ ಪರಮಾತ್ಮನನ್ನು ಈರೀತಿ ಧ್ಯಾನಮಾಡಬೇಕು. ಪರಮಾತ್ಮನು ಸರ್ವಭೂತಗಳಲ್ಲಿಯೂ ಅಡಗಿರುವವನು. ಅವನಿಗಿಂತ ಉತ್ತಮವಾದ ಯಾವ ವಸ್ತುವನ್ನೂ ನಾವು ಕಾಣಲಾರೆವು.

ಸರ್ವಸ್ಯಾಧಾರಮವ್ಯಕ್ತಮಾನಂದಂ ಜ್ಯೋತಿರವ್ಯಯಂ ।
ಪ್ರಧಾನಪುರುಷಾತೀತಂ ಆಕಾಶಂ ದಹರಂ ಶಿವಂ ॥ ೫೬ ॥

ತದಂತಸ್ಸರ್ವಭೂತಾನಾಂ ಈಶ್ವರಂ ಬ್ರಹ್ಮರೂಪಿಣಂ ।
ಧ್ಯಾಯೇದನಾದಿಮಧ್ಯಾಂತಮಾನಂದಾದಿ ಗುಣಾಲಯಂ ॥ ೫೭ ॥

ಮಹಾಂತಂ ಪುರುಷಂ ಬ್ರಹ್ಮ ಬ್ರಹ್ಮಾಣಂ ಬ್ರಹ್ಮ ಚಾವ್ಯಯಂ ।
ಓಂಕಾರಾಂತೇ ತಥಾತ್ಮಾನಂ ಸಂಸ್ಥಾಪ್ಯ ಪರಮಾತ್ಮನಿ ॥ ೫೮ ॥

ಆಕಾಶೇ ದೇವಮೀಶಾನಂ ಧ್ಯಾಯೀತಾऽऽಕಾಶಮಧ್ಯಗಂ ।
ಕಾರಣಂ ಸರ್ವಭಾವಾನಾಮಾನಂದೈಕರಸಾಶ್ರಯಂ ॥ ೫೯ ॥

ಪುರಾಣಂ ಪುರುಷಂ ಶಂಭುಂ ಧ್ಯಾಯೇನ್ಮುಚ್ಯೇತ ಬಂಧನಾತ್ ।
ಶಿವಭಕ್ತಿಂ ವಿನಾ ಯಸ್ತು ಸಂಸಾರಂ ತರ್ತುಮಿಚ್ಛತಿ ॥ ೬೦ ॥

---

೫೬. ಪರಮಾತ್ಮನು ಎಲ್ಲಕ್ಕೂ ಆಧಾರಭೂತನು, ಆನಂದರೂಪಿಯು ತೇಜೋಮಯನು, ಪ್ರಧಾನಪುರುಷನು, ನಾಶರಹಿತನು, ಭೂವ್ಯಾಕಾಶಗಳಲ್ಲಿಯೂ ವ್ಯಾಪಿಸಿರುವವನು ಈಶ್ವರಸ್ವರೂಪನು.

೫೭. ಸರ್ವಪ್ರಾಣಿಗಳಲ್ಲಿಯೂ ಅಡಗಿರುವ ಪರಬ್ರಹ್ಮರೂಪಿಯಾದ ಈಶ್ವರನನ್ನು, ಆದಿ, ಮಧ್ಯ, ಅಂತ ಇವುಗಳಿಲ್ಲದವನನ್ನಾಗಿಯೂ, ಆನಂದಾದಿ ಸಮಸ್ತ ಸದ್ಗುಣಗಳಿಗೆ ಆಶ್ರಯನನ್ನಾಗಿಯೂ ಅರಿಯಬೇಕು.

೫೮. ಪರಮಾತ್ಮನು, ಮಹಾತ್ಮನಾದವನು. ರಮಪುರುಷನು, ತತ್ತ್ವರೂಪಿಯು, ನಾಶರಹಿತನು, ಎಂಬ ಭಾವನೆಯಿಂದ ಯೋಗಿಯಾದವನು ಯಾವಾಗಲೂ ಓಂಕಾರವನ್ನೇ ಆದಿಯನ್ನಾಗಿಮಾಡಿಕೊಂಡು ಹೃದಯಕಮಲದಲ್ಲಿ ಪರಮಾತ್ಮನನ್ನು ಧ್ಯಾನಿಸಬೇಕು.

೫೯. ಆಕಾಶಮಧ್ಯದಲ್ಲಿ ಈಶಾನರೂಪದಿಂದ ವ್ಯಾಪಿಸಿರುವವನು ಈ ಪರಮಾತ್ಮನೇ. ಸರ್ವಸ್ವಭಾವಗಳಿಗೂ ಕಾರಣನಾಗಿ ಆನಂದರೂಪಿಯಾಗಿರುವವನೂ ಈ ಪರಮಾತ್ಮನೇ ಎಂಬ ಭಾವನೆಯನ್ನು ಸರ್ವದಾ ಹೊಂದಿರಬೇಕು.

೬೦-೬೧. ಸಂಸಾರಬಂಧನದಿಂದ ತಪ್ಪಿಸಿಕೊಳ್ಳಲು ಮನುಷ್ಯನು ಪುರಾಣಪುರುಷನಾದ ಪರಶಿವನನ್ನೇ ಭಕ್ತಿಯಿಂದ ಧ್ಯಾನಮಾಡಬೇಕು. ಈಶ್ವರಭಕ್ತಿಯಿಲ್ಲದವನು

ಮೂಢೋ ಯಥಾ ಶ್ವಲಾಂಗೂಲೈಃ ಸಮುದ್ರಂ ತರ್ತುಮಿಚ್ಛತಿ ।
ತಥಾ ವಿನಾ ಶಂಭುಸೇವಾಂ ಸಂಸಾರತರಣಂ ನ ಹಿ ॥ ೬೧ ॥

ಸರ್ವಸೌಖ್ಯಪ್ರದಃ ಶಂಭುರ್ನಾನ್ಯಾ ಕಾಚನ ದೇವತಾ ।
ತಸ್ಮಾತ್ಸರ್ವಪ್ರಯತ್ನೇನ ಮಹಾದೇವಂ ಪ್ರಪೂಜಯೇತ್ ॥ ೬೨ ॥

ಯದ್ವಾ ಗುಹಾಯಾಂ ಪ್ರಕೃತಂ ಜಗತ್ಸಂಮೋಹನಾಲಯೇ ।
ವಿಚಿಂತ್ಯ ಪರಮಂ ವ್ಯೋಮ ಸರ್ವಭೂತೈಕಕಾರಣಂ ॥ ೬೩ ॥

ಜೀವನಂ ಸರ್ವಭೂತಾನಾಂ ಯತ್ರ ಲೋಕಃ ಪ್ರಲೀಯತೇ ।
ಆನಂದಂ ಬ್ರಹ್ಮಣಃ ಸೂಕ್ಷ್ಮಂ ಯತ್ಪಶ್ಯಂತಿ ಮುಮುಕ್ಷವಃ ॥ ೬೪ ॥

ತನ್ಮಧ್ಯೇ ನಿಹಿತಂ ಬ್ರಹ್ಮ ಕೇವಲಂ ಜ್ಞಾನಲಕ್ಷಣಂ ।
ಪಾತುಂ ತಿಷ್ಠೇತ್ಸ್ಮಹೇಶೇನ ಸೋಽಶ್ನುತೇ ಯೋಗಮೈಶ್ವರಂ ॥ ೬೫ ॥

ಸಂಸಾರದುಃಖಗಳಿಂದ ಪಾರಾಗಲಾರನು. ನಾಯಿಯ ಬಾಲದಿಂದ ಸಮುದ್ರವನ್ನು ದಾಟುವುದು ಹೇಗೆ ದುಸ್ತರವೋ ಹಾಗೆ ಈಶ್ವರಭಕ್ತಿಯನ್ನು ಬಿಟ್ಟು ಇತರ ಕರ್ಮಗಳಿಂದ ಮುಕ್ತನಾಗುವುದು ಅಸಾಧ್ಯ.

೬೨. ಶಂಕರನು ಸಮಸ್ತ ಸುಖಗಳನ್ನೂ ಕೊಡತಕ್ಕವನು. ಶಂಕರನಿಗಿಂತ ಬೇರೆ ದೇವರೇ ಲೋಕದಲ್ಲಿಲ್ಲ. ಆದ್ದರಿಂದ ಸರ್ವಪ್ರಯತ್ನದಿಂದಲೂ ಮಹಾದೇವನನ್ನೇ ನಂಬಿ ಅರ್ಚಿಸುವುದು ಉತ್ತಮೋತ್ತಮವು.

೬೩. ಗುಹೆಯಲ್ಲಾಗಲಿ, ಲೋಕಮೋಹವನ್ನು ನಿವಾರಿಸುವಂತಹ ಕ್ಷೇತ್ರಗಳಲ್ಲಾಗಲಿ (ಅಂದರೆ, ಗುಹಾರೂಪವಾದ ಮೂರ್ಧಸ್ಥಾನದಲ್ಲಿ ಚಿತ್ತವನ್ನಿಟ್ಟು) ಕುಳಿತು ಸಮಸ್ತ ಭೂತಗಳಿಗೂ ಕಾರಣಕರ್ತನಾಗಿ, ಆಕಾಶದಂತೆ, ಸರ್ವವ್ಯಾಪಿಯಾಗಿರುವ ಪರಮೇಶ್ವರನನ್ನು ಮನಸಾ ಧ್ಯಾನಿಸಬೇಕು.

೬೪. ಮೋಕ್ಷಾರ್ಥಿಗಳು, ಪರಮೇಶ್ವರನು ಸಮಸ್ತ ಪ್ರಾಣಿಗಳಿಗೂ ಜೀವದಾತೃವೆಂದೂ, ಹಾಗೆಯೇ ಲಯಕರ್ತನೆಂದೂ, ಆನಂದದಾಯಕನೆಂದೂ ಅರಿದು ಧ್ಯಾನಿಸುವರು. ಅಂತಹವರಿಗೆ ಪರಬ್ರಹ್ಮನು ಸೂಕ್ಷ್ಮನಾಗಿ ಆನಂದರೂಪಿಯಾಗಿ ಗೋಚರನಾಗುವನು.

೬೫. ಪರಬ್ರಹ್ಮನು ಕೇವಲ ಜ್ಞಾನರೂಪಿಯಾಗಿ ಹೃನ್ಮಧ್ಯಭಾಗದಲ್ಲಿ ಗೋಚರಿಸುವನು. ಆ ಪರಾಪರವಸ್ತುವನ್ನು ತಿಳಿಯಲು ಮಹೇಶ್ವರನ ಆರಾಧನೆಯೇ ಬೇಕು. ಹೀಗೆ ಉಪಾಸನೆಮಾಡಿ ಪರಬ್ರಹ್ಮವನ್ನರಿತವನೇ ನಿಜವಾದ ಯೋಗದ ಸಿದ್ಧಿಯನ್ನು ಪಡೆದವನು.

ನೈಕಲಕ್ಷಂ ದ್ವಿಲಕ್ಷಂ ವಾ ತ್ರಿಲಕ್ಷಂ ನ ನವಾತ್ಮಕಂ ।
ಸರ್ವೋಪಾಧಿವಿನಿರ್ಮುಕ್ತಂ ಸಮಾಧಿರಭಿಧೀಯತೇ ॥ ೬೬ ॥

ಬಾಹ್ಯೇ ಚಾಭ್ಯಂತರೇ ಪುತ್ರ ಯತ್ರ ಯತ್ರ ಮನಃ ಕ್ಷಿಪೇತ್ ।
ತತ್ರ ತತ್ರಾತ್ಮನೋ ರೂಪಂ ಆನಂದಮನುಭೂಯತೇ ॥ ೬೭ ॥

ಸಂಸ್ಥಾಪ್ಯ ಮಯಿ ಚಾತ್ಮಾನಂ ಪರಂ ಜ್ಯೋತಿಷಿ ನಿರ್ಗುಣೇ ।
ಮುಹೂರ್ತಂ ತಿಷ್ಠತಃ ಸಾಕ್ಷಾತ್ತಸ್ಯ ಚಾನುಭವೋ ಭವೇತ್ ॥ ೬೮ ॥

ಸರ್ವಜ್ಞಃ ಪರಿಪೂರ್ಣಶ್ಚ ಜರಾಮರಣವರ್ಜಿತಃ ।
ಮತ್ಪ್ರಸಾದಾದ್ಭವೇದ್ಯೋಗೀ ನಾನ್ಯಥಾ ಕ್ರೌಂಚಸೂದನ ॥ ೬೯ ॥

ತಸ್ಮಾತ್ಸರ್ವಂ ಪರಿತ್ಯಜ್ಯ ಕರ್ಮಜಾತಂ ಸುದುಷ್ಕರಂ ।
ಮಾಮೇಕಂ ಶರಣಂ ಗಚ್ಛೇದಜ್ಞಾನಂ ನಾಶಯಾಮ್ಯಹಂ ॥ ೭೦ ॥

---

೬೬. ಸಮಾಧಿಯೆಂದರೆ ಸರ್ವೋಪಾಧಿಗಳನ್ನು ಬಿಟ್ಟಿರುವ ಭಾವನೆ ಎಂದರ್ಥ. ಯಾವ ವಸ್ತುವನ್ನು ಸಾಕ್ಷಾತ್ಕಾರಮಾಡಿಕೊಳ್ಳಬೇಕೋ, ಅದರಲ್ಲಿ ಚಿತ್ತವನ್ನು, ಪುನಃ ಪುನಃ ಇಡುತ್ತಾ, ಇತರ ವಸ್ತುಜ್ಞಾನವನ್ನು ದೂರೀಕರಿಸಬೇಕು. ಗುರಿ ಒಂದೇ ಇರಬೇಕು. ಧ್ಯಾನಕ್ಕೂ, ಧ್ಯೇಯವಸ್ತುವಿಗೂ ಭೇದತೋರದೆ, ಧ್ಯಾನವು ಧ್ಯೇಯ ವಸ್ತುಸ್ವರೂಪದಲ್ಲೇ ಲೀನವಾಗಬೇಕು. ಈ ಸಮಾಧಿಸ್ವರೂಪವು ಅನೇಕ ವಿಧವಾಗಿದ್ದರೂ ಧ್ಯೇಯವಸ್ತುವಿನಲ್ಲಿ ಚಿತ್ತವನ್ನು ಸ್ಥಿರವಾಗಿ ನಿಲ್ಲಿಸುವುದು, ಎಂಬುದೇ ಸಮಾಧಿಯಮುಖ ತತ್ತ್ವಾರ್ಥ.

೬೭. ಸ್ಕಂದನೇ! ಒಳಗೂ, ಹೊರಗೂ, ಮನಸ್ಸಿಟ್ಟ ಕಡೆಯಲ್ಲೂ, ಯಾವನು ಆನಂದರೂಪಿಯಾದ ಪರಮಾತ್ಮನನ್ನೇ ಅನುಸಂಧಾನಮಾಡುವನೋ ಅವನೇ ನಿಜವಾಗಿಯೂ ಆನಂದವನ್ನು ಅನುಭವಿಸುವವನು.

೬೮. ಯಾವನು ನಿರ್ಗುಣನೂ, ಜ್ಯೋತೀರೂಪನೂ, ಆದ ನನ್ನಲ್ಲಿ ಮನಸ್ಸಿಟ್ಟು ಕ್ಷಣಕಾಲ ನನ್ನನ್ನೇ ಧ್ಯಾನಿಸುವನೋ ಅವನು ಭವಬಂಧನಗಳನ್ನು ಕಳೆದುಕೊಂಡು, ಆನಂದಾನುಭವಿಯಾಗುವನು.

೬೯. ಅಲ್ಲದೆ ಅಂಥವನು ಸರ್ವಜ್ಞನಾಗಿಯೂ, ಸಮಸ್ತ ಗುಣಗಳಿಂದ ಕೂಡಿದವನಾಗಿಯೂ, ಜರಾಮರಣಗಳ ಭಯವನ್ನು ಕಳೆದುಕೊಂಡವನಾಗಿಯೂ, ಆಗಿ ಕೊನೆಗೆ ನನ್ನ ಅನುಗ್ರಹದಿಂದ ಯೋಗಿಶ್ರೇಷ್ಠನೆನಿಸಿಕೊಳ್ಳುವರು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಶೂದ್ರಾಶ್ಚಾನ್ಯೇಚ ಸಂಕರಾಃ ।
ಮದ್ಭಕ್ತಿಭಾವನಾಪೂತಾ ಯಾಂತಿ ಮತ್ಪರಮಂ ಪದಂ ॥ ೭೧ ॥

ಜಗತಃ ಪ್ರಲಯೇ ಪ್ರಾಪ್ತೇ ನಷ್ಟೇ ಚ ಕಮಲೋದ್ಭವೇ ।
ಮದ್ಭಕ್ತಾ ನೈವ ನಶ್ಯಂತಿ ಸ್ವೇಚ್ಛಾವಿಗ್ರಹಧಾರಿಣಃ ॥ ೭೨ ॥

ಯೋಗಿನಾಂ ಕರ್ಮಿಣಾಂ ಚೈವ ತಾಪಸಾನಾಂ ಯತಾತ್ಮನಾಂ ।
ಅಹಮೇವಗತಿಸ್ತೇಷಾಂ ನಾನ್ಯದಸ್ತೀತಿ ನಿಶ್ಚಯಃ ॥ ೭೩ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಶಿವಸ್ಕಂದ ಸಂವಾದೇ ಯಮನಿಯಮ ಪ್ರಾಣಾಯಾಮಾದಿ ಕಥನಂ ನಾಮ ದ್ವಾದಶೋಽಧ್ಯಾಯಃ.

---

೭೦. ಆದ್ದರಿಂದ ಕಷ್ಟತರವಾದ ಕರ್ಮಗಳನ್ನು ಆಶ್ರಯಿಸುವುದಕ್ಕಿಂತಲೂ ಸುಲಭವಾದ ಯೋಗಜ್ಞಾನದಿಂದ ನನ್ನನ್ನೇ ಮೊರೆಹೊಕ್ಕವರು, ನನ್ನ ಅನುಗ್ರಹದಿಂದ ಜ್ಞಾನಿಗಳಾಗುವರು. ಅವರ ಅಜ್ಞಾನವೆಲ್ಲವೂ ನಾಶವಾಗುವುದು.

೭೧. ಬ್ರಾಹ್ಮಣರು ಕ್ಷತ್ರಿಯರು, ವೈಶ್ಯರು, ಶೂದ್ರರು ಅಥವಾ ಮತ್ತೆ ಯಾವ ಸಂಕರಜಾತಿಯವರೇ ಆಗಲಿ ನನ್ನಲ್ಲಿ ಭಕ್ತಿಯಿಟ್ಟು, ಅದರಿಂದ ಪವಿತ್ರಾತ್ಮರಾದರೆ ಅವರು ಖಂಡಿತವಾಗಿ ಮೋಕ್ಷಪದವಿಯನ್ನು ಹೊಂದುವರು.

೭೨. ಜಗತ್ತು ಪ್ರಲಯಕ್ಕೆ ಸಿಕ್ಕಿ ನಾಶವಾದರೂ, ಸೃಷ್ಟಿಕರ್ತನಾದ ಬ್ರಹ್ಮನು ನಷ್ಟಹೊಂದಿದರೂ ನನ್ನ ಭಕ್ತರು ಎಂದಿಗೂ ನಾಶವಾಗಲಾರರು. ಸ್ವತಂತ್ರವಾಗಿ ತಮಗೆ ಇಷ್ಟಬಂದ ದೇಹವನ್ನು ಧರಿಸಿ ಜೀವಿಸಿಯೇ ಇರುವರು.

೭೩. ಯೋಗಿಗಳಿಗೂ, ಕರ್ಮಠರಿಗೂ, ತಪಸ್ವಿಗಳಿಗೂ ಮುಮುಕ್ಷುಗಳಿಗೂ, ನಾನೇ ಗತಿಯನ್ನು ಕೊಡತಕ್ಕನು. ಬೇರೆ ಯಾರೂ ಅವರಿಗೆ ಮೋಕ್ಷಕೊಡಲಾರರು. ಇದೆ ೯ನಿಶ್ಚಯವು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ, ಶಿವ ಮತ್ತು ಸ್ಕಂದರ ಸಂವಾದರೂಪವಾಗಿ ಯಮ, ನಿಯಮ, ಪ್ರಾಣಾಯಾಮ, ಇವೇ ಮೊದಲಾದುವುಗಳ ಲಕ್ಷಣವನ್ನು ತಿಳಿಸುವ ಹನ್ನೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥಶ್ರೀ ಸೌರಪುರಾಣೇ ತ್ರಯೋದಶೋಽಧ್ಯಾಯಃ.

॥ ಸ್ಕಂದ ಉವಾಚ ॥

ಭೂತಕಾರ್ಯಮಿದಂ ದೇಹಂ ಆಪದ್ರೋಗಾಕುಲಂ ಪರಂ ।
ವಿಷಯೈಃ ಪೀಡ್ಯತೇ ದೇವ ಸುಖದುಃಖಾತ್ಮಕೈಸ್ಸದಾ ॥ ೧ ॥

ಅಭಿಭೂತೋ ಯದಾ ಯೋಗೀ ದುಃಖೈರಧ್ಯಾತ್ಮಸಂಭವೈಃ ।
ಕಿಮುಪಾಯಂ ತದಾ ತಸ್ಯ ಯದಾ ವೈ ಭೌತಿಕಸ್ಯ ಚ । ॥ ೨ ॥

ಬ್ರೂಹ್ಯಾಧಿದೈವಿಕಸ್ಯಾಪಿ ಯೋಗಸಂಸಿದ್ಧಯೇ ಪ್ರಭೋ ।
ಯಾತನಾ ಯೋಪಸರ್ಗಾಣಾಂ ಪ್ರಸಾದಾದ್ಯೋಗಿನಾಂ ವದ ॥ ೩ ॥

ಹದಿಮೂರನೆಯ ಅಧ್ಯಾಯವು

೧. ಷಣ್ಮುಖಸ್ವಾಮಿಯು ಪುನಃ ಪರಮೇಶ್ವರನನ್ನು ಕುರಿತು “ಸ್ವಾಮಿಯೇ, ಈ ದೇಹವು ಪಂಚಭೂತಗಳಿಂದ ನಿರ್ಮಿತವಾಗಿದೆ. ಸಮಸ್ತ ವಿಪತ್ತುಗಳಿಗೂ, ರೋಗಗಳಿಗೂ ಆಶ್ರಯವಾಗಿದೆ. ಅಲ್ಲದೆ ಸುಖ, ದುಃಖಗಳನ್ನುಂಟುಮಾಡುವ ವಿಷಯೇಂದ್ರಿಯಗಳಿಂದ ಕಷ್ಟವನ್ನೂ ಅನುಭವಿಸುತ್ತದೆ.

೨. ಇಂಥ ದೇಹದಲ್ಲಿ ಆತ್ಮಸಂಬಂಧವಿರುವುದರಿಂದ, ಆ ದೇಹಕ್ಕೆ ಆಧ್ಯಾತ್ಮಿಕ, ಆಧಿಭೌತಿಕ ದುಃಖಗಳು ಒದಗುವುದು ಸಹಜ. ಅಂತಹ ದುಃಖಗಳನ್ನು ತಪ್ಪಿಸಿಕೊಳ್ಳಲು ಯೋಗಿಯಾದವನು ಮಾಡಬೇಕಾದ ಉಪಾಯವೇನು ?

೩. ಯಾಗದ ಫಲಸಿದ್ಧಿಗಾಗಿ ದುಡಿಯುವವನಿಗೆ ದೈವಸಂಬಂಧವಾಗಿ ಎಷ್ಟೋ ಆಧಿದೈವಿಕ ವಿಘ್ನಪರಂಪರೆಗಳು ಬರುವವಷ್ಟೇ. ಆ ವಿಘ್ನಗಳಿಂದ ಒದಗುವ ದುಃಖಗಳ ನಿವಾರಣೆಯನ್ನು ಯೋಗಿಗಳ ಹಿತಕ್ಕಾಗಿ ತಿಳಿಸುವವನಾಗು” ಎಂದು ವಿನಯದಿಂದ ಕೇಳಲಾಗಿ.

॥ ಈಶ್ವರ ಉವಾಚ ॥

ಸಾತ್ವಿಕಾ ರಾಜಸಾ ವಿಘ್ನಾಸ್ತಾಮಸಾಸ್ತ್ವಿಹ ಯೋಗಿನಾಂ ।
ಯೋಗತ್ರಾಸಕರಾಸ್ಸರ್ವೇ ಭವಂತಿ ಭವತಾಮಪಿ ॥ ೪ ॥

ಪ್ರಾತಿಭಾಶ್ರವಣಾವಾರ್ತಾದರ್ಶನಾಸ್ವಾದವೇದನಾಃ ।
ಉಪಸರ್ಗಾ ಭವಂತ್ಯೇತೇ ಸಾತ್ವಿಕಾಸ್ತು ಷಡೇವ ಹಿ ॥ ೫ ॥

ದರಿದ್ರೋಽಹಮಹಂ ಚಾಢ್ಯಃ ಶೂರೋಽಹಂ ದುರ್ಬಲಸ್ತಥಾ ।
ಮೂರ್ಖೋಽಹಂ ಚ ಸುವಿದ್ವಾಂಶ್ಚ ಸುರೂಪೋಽಹಮರೂಪವಾನ್ ॥ ೬ ॥

ದಾತಾಽಹಂ ಕೃಪಣಶ್ಚಾಹಂ ಸುಖೀ ಭೋಗ್ಯಹಮೇವ ಚ ।
ಅಕುಲೀನಃ ಕುಲೀನಶ್ಚ ಕಂಟಕಃ ಕಂಟಕೋಜ್ಝಿತಃ ॥ ೭ ॥

ಮದೀಯಂ ಸರ್ವಮೇತದ್ಧಿ ವಸ್ತ್ವಿತ್ಯಾದಿ ಪ್ರಜಲ್ಪನಂ ।
ಅಹಂಕಾರಮಯಂ ಕಿಂಚಿತ್ ಯತ್ತತ್ಕೃತ್ಸ್ನಂ ಹಿ ರಾಜಸಂ ॥ ೮ ॥

---

೪. ಪರಮೇಶ್ವರನು ಹೇಳುತ್ತಾನೆ "ಎಲೈ ಪುತ್ರನೇ, ಕೇಳು, ಯೋಗಿಗಳಿಗೆ ಸಾತ್ವಿಕ, ರಾಜಸ, ತಾಮಸಗಳೆಂಬ ಮೂರುವಿಧವಾದ ವಿಘ್ನಗಳು ಬರುವುವು. ಈ ಮೂರು ವಿಧಗಳೂ ಸಹ ಯೋಗಾಭ್ಯಾಸಕ್ಕೆ ತೊಂದರೆಯನ್ನೇ ಕೊಡುತ್ತವೆ. ಆತೊಂದರೆಗಳು ನಿಮ್ಮಂತಹವರನ್ನೂ ಬಿಡಲಾರವು.

೫. ಪ್ರಾತಿಭ, ಶ್ರವಣ, ವಾರ್ತಾ, ದರ್ಶನ, ಆಸ್ವಾದ, ವೇದನ, ಈ ಆರು ಸಾತ್ವಿಕವಾದಉಪಸರ್ಗಗಳು. ಅಂದರೆ ಪಂಚೇಂದ್ರಿಯಗಳ ಕಾರ್ಯಗಳು. ಇವು ಆರು ಸಾತ್ವಿಕರೀತಿಯಿಂದ ಯೋಗಕ್ಕೆ ತೊಂದರೆಕೊಡುವುವು.

೬-೭-೮. ನಾನು ಬಡವ, ನಾನು ಧನಿಕ, ನನ್ನಲ್ಲಿ ಶೌರ್ಯವಿದೆ. ದುರ್ಬಲನು ನಾನು. ನನಗೆ ಏನೂ ತಿಳಿಯದು, ನನಗೆ ಎಲ್ಲವೂ ಗೊತ್ತಿದೆ, ನಾನು ಸುಂದರನು, ಕುರೂಪಿಯು ನಾನು, ದಾತೃವೂ, ನಾನೇ, ನಾನು ಲೋಭಿಯು, ಸುಖಿಯೂ, ಭೋಗಿಯೂ ನಾನಾಗಿರುವೆನು. ಸತ್ಕುಲಪ್ರಸೂತನು ನಾನು. ದುಷ್ಕುಲದಲ್ಲಿ ಹುಟ್ಟಿದವನು ನಾನು. ತೊಂದರೆಕೊಡುವ ಶಕ್ತಿ ನನಗಿದೆ. ತೊಂದರೆಗಳನ್ನೆಲ್ಲಾ ನಾನು ಗೆದ್ದಿರುವೆನು. ಇವೆಲ್ಲವೂ ನನ್ನ ವಸ್ತುಗಳು. ಹೀಗೆಂದು ಅಹಂಕಾರದಿಂದ ಬರುವ ಭಾವನೆಗಳೆಲ್ಲವೂ ರಾಜಸವಾದ ಉಪಸರ್ಗಗಳು. ಈ ಭಾವನೆಯು ಯೋಗಸಿದ್ಧಿಗೆ ಅಡಚಣೆಯನ್ನು ಕೊಡುತ್ತದೆ.

ಅಂಧತ್ವಂ ಚೈವ ಬಾಧಿರ್ಯಂ ಪಂಗುತ್ವಂ ದುಷ್ಟರೋಗತಾ ।
ಶಿರೋರೋಗೋ ಜ್ವರಃ ಶೂಲಯಕ್ಷ್ಮಮೂರ್ಛಾಭ್ರಮಾದಯಃ ॥ ೯ ॥

ರಾಜಸಾಸ್ತಾಮಸಾಃ ಸರ್ವೇ ತಮೋಹಂಕಾರಸಂಯುತಾಃ ।
ವ್ಯಾಧಯೋ ಮಿಶ್ರಭಾವೇನ ಪೀಡಯಂತೀಹ ದೇಹಿನಂ ॥ ೧೦ ॥

ಕೇವಲಂ ಜಾಡ್ಯಭಾವೇನ ಮೂಢತ್ವಂ ಮೋಹನಂ ತಥಾ ।
ಅಜ್ಞಾನತ್ವಂ ಚ ಮೂಕತ್ವಂ ಇತ್ಯಾದ್ಯಾಸ್ತಾಮಸಾಃ ಸ್ಮೃತಾಃ ॥ ೧೧ ॥

ಗುಹ್ಯಕಾ ಯಾತುದಾನಾಶ್ಚ ಕಿಂನರೋರಗರಾಕ್ಷಸಾಃ ।
ದೇವದಾನವರೌದ್ರಾಶ್ಚ ದೈತ್ಯಾ ಮಾತರಜಾ ಗಣಾಃ ॥ ೧೨ ॥

ತಾಮಸಾಸ್ತೆ ಗ್ರಹಾ ಭೂತಾ ವಾಯುಭೂತಾ ನರಂ ಸದಾ ।
ಪೀಡಯಂತೀಹ ವಿಘ್ನಾ ಹಿ ಯೋಗಾಭ್ಯಾಸರತಂ ಗ್ರಹೈಃ ॥ ೧೩ ॥

---

೯. ಕುರುಡುತನ, ಕಿವುಡು, ಕುಂಟತನ, ದುಷ್ಟರೋಗಗಳು, ತಲೇಬಾಧೆ, ಜ್ವರ, ಶೂಲ, ಕ್ಷಯ, ಅಪಸ್ಮಾರ, ಇವೇ ಮೊದಲಾದವುಗಳು ತಾಮಸವಾದ ಉಪಸರ್ಗಗಳು.

೧೦ ಮೇಲೆ ಹೇಳಿದ ರಾಜಸವಾದ ಮತ್ತು ತಾಮಸವಾದ ತೊಂದರೆಗಳು ಅಜ್ಞಾನ, ಅಹಂಕಾರ, ಇವುಗಳಿಂದ ಕೂಡಿ, ಭಿನ್ನಭಿನ್ನ ರೋಗಗಳಾಗಿ ಪರಿಣಮಿಸುವುವು. ಆರೋಗಗಳು ಮನುಷ್ಯನನ್ನು ಬಹುವಾಗಿ ಹಿಂಸಿಸುವುವು.

೧೧. ಕೇವಲ ಜಡನಾದವನು ಮೂಢನಾಗುವನು. ಅವನಿಗೆ ಅಜ್ಞಾನವು ಹೆಚ್ಚುವುದು. ಅಜ್ಞಾನದಿಂದ ಮೂಕನಂತಾಗುವನು. ಇವೂ ಸಹ ತಾಮಸವಾದ ಉಪಸರ್ಗಗಳೇ.

೧೨. ಗುಹ್ಯಕವೆಂಬ ಪಿಶಾಚಿಗಳೂ, ರಾಕ್ಷಸರೂ, ಕಿನ್ನರರೂ, ಸರ್ಪಗಳೂ, ದೇವತೆಗಳೂ, ದಾನವರೂ, ರುದ್ರಗಣಗಳೂ. ಮಾತೃಗಣಗಳೂ, ದೈತ್ಯರೂ, ಇವರೆಲ್ಲರೂ,

೧೩. ತಾಮಸಗ್ರಹಗಳಂತೆ ಆಗಿ, ವಾಯುರೂಪದಿಂದ ಯಾವಾಗಲೂ, ಯೋಗಾಭ್ಯಾಸಕ್ಕೆ ತೊಡಗಿರುವ ಮನುಷ್ಯನನ್ನು ಬಹುವಾಗಿ ಪೀಡಿಸುವುವು.

ಏವಮಾದ್ಯುಪಸರ್ಗಾಣಾಂ ವಾರಣಾಯ ಚ ಧಾರಣಾಂ ।
ವಕ್ಷ್ಯಾಮಿ ವಿವಿಧಾಂ ವತ್ಸ ಯೋಗಿನಾಂ ಸಿದ್ಧಿಹೇತವೇ ॥ ೧೪ ॥

ತ್ವಗಾದಿಸಪ್ತಧಾತೂನಾಂ ಏಕೀಭೂತಂ ವಿಚಿಂತಯೇತ್ ।
ಪ್ರಣವಂ ಕಂಠನಾಸಾಗ್ರೇ ಸಬೀಜಂ ವಹ್ನಿದೀಪಿತಂ ॥ ೧೫ ॥

ವಾರುಣೇಷು ಚ ಸರ್ವೇಷು ಉಪಸರ್ಗೇಷು ಯೋಗವಿತ್ ।
ಏತದೇವ ಚರೇನ್ನಿತ್ಯಂ ಉಪಸರ್ಗಾದಯೋ ಯಯುಃ ॥ ೧೬ ॥

ಪಿತ್ತರೋಗಾಭಿಭೂತೋ ವಾ ಯೋಗೀ ಯೋಗಪರಾಯಣಃ ।
ಧ್ಯಾನಮೇತತ್ಪ್ರಕುರ್ವೀತ ತಥಾನ್ಯಚ್ಛೃಣು ಪುತ್ರಕ ॥ ೧೭ ॥

ಸುವೃತ್ತಂ ಚೋಡುನಾಥಸ್ಯ ಚಾಕ್ಷರಂ ತತ್ರ ಚಿಂತಯೇತ್ ।
ಸುಧಾಭಿಲಷಿತಂ ಧ್ಯಾಯೇತ್ ಸ್ವಸ್ಯ ಮೂರ್ಧ್ನಿ ಶಿವಾತ್ಮಕಂ ॥ ೧೮ ॥

---

೧೪. ಈ ವಿಧವಾದ ಅಡಚಣೆಗಳನ್ನು ತಡೆಗಟ್ಟಲು ಮತ್ತು ಯೋಗಸಿದಿಯನ್ನು ಶೀಘ್ರವಾಗಿ ಪಡೆಯಲು ನಾನು ನಾನಾವಿಧವಾದ ಕ್ರಮಗಳನ್ನು ಈಗ ಹೇಳುವೆನು

೧೫. ದೇಹದಲ್ಲಿ ಚರ್ಮವೇ ಮೊದಲಾದ ಸಪ್ತಧಾತುಗಳಿವೆ· ಇವುಗಳೆಲ್ಲಾ ಒಂದೇ ಸ್ತಿಮಿತಕ್ಕೆ ನಿಲ್ಲುವಂತೆ ಕಂಠ, ನಾಸಿಕಾ, ಇವುಗಳ ಅಗ್ರಭಾಗದಲ್ಲಿ ಪ್ರಣವ ಮಂತ್ರವನ್ನು ಅನುಸಂಧಾನ ಮಾಡಬೇಕು. ಇದರಿಂದ ದೇಹದಲ್ಲಿ ಅಗ್ನಿವೃದ್ಧಿಯಾಗುವುದು.

೧೬. ಶೀತಸಂಬಂಧವಾದ ಯಾವ ವ್ಯಾಧಿಗಳು ಬಂದೊದಗಿದರೂ ಯೋಗಿಯು ಈ ವಿಧವಾದ ಅಭ್ಯಾಸಬಲದಿಂದ ಆ ಅಡಚಣೆಗಳನ್ನು ನಿವಾರಿಸಿಕೊಳ್ಳಬೇಕು.

೧೭. ಯೋಗದಲ್ಲಿ ನಿರತನಾಗಿರುವ ಯೋಗಿಗೆ ಪಿತ್ತಸಂಬಂಧವಾದ ವ್ಯಾಧಿಗಳು ತಲೆದೋರಿದಾಗಲೆಲ್ಲಾ ಪ್ರಣವ ಮಂತ್ರ ಧ್ಯಾನವನ್ನೇ ಮಾಡಬೇಕು. ಅಲ್ಲದೆ ಮತ್ತೂ ಕೆಲವು ವಿಧಿಗಳನ್ನು ಹೇಳುತ್ತೇನೆ. ಕೇಳು.

೧೮. ಯೋಗಿಯು ಚಂದ್ರನಾಡಿಯಿಂದ ಪೂರಕಮಾಡಿಕೊಂಡು ಅಮೃತ ಬಿಂದು ಸ್ವರೂಪವಾದ ಶಿವಸ್ವರೂಪವನ್ನು ಧ್ಯಾನಮಾಡುತ್ತಾ ವಾಯುವನ್ನು ಬ್ರಹ್ಮರಂಧ್ರದೊಳಗೆ ನಿಲ್ಲಿಸಬೇಕು.

ಪ್ರವಿಶ್ಯ ಬ್ರಹ್ಮರಂಧ್ರೇಣ ದೇಹಂ ನಿರ್ವಾಣಜಂ ಸ್ಮರೇತ್ ।
ಶೀತಲೇನ ಸುಗಂಧೇನ ಹೃತ್ತತ್ವಂ ಚಾಪಿ ತೇನ ವೈ ॥ ೧೯ ॥

ಪೈತ್ತಿಕಾಶ್ಚೋಪಸರ್ಗಾಶ್ಚ ಭಾನುನಾ ತಿಮಿರಂ ಯಥಾ ।
ವಿಷಜ್ವರಜರಾದ್ಯಾಶ್ಚ ನಶ್ಯಂತ್ಯಭ್ಯಾಸತೋ ಧ್ರುವಂ ॥ ೨೦ ॥

ನಾಶಯೇದಂಧತಾಂ ಯೋಗೀ ದಿವ್ಯದೃಷ್ಟಿಃ ಪ್ರಜಾಯತೇ ।
ಉತ್ಕ್ಷಿಪ್ಯಾಪಾನಮುಸ್ಯಂ ಚ ಚಂದ್ರದೈವತ್ಯಯಾ ಪಿಬೇತ್ ॥ ೨೧ ॥

ಪೀತ್ವಾ ಪಾರ್ಥಿವತತ್ತ್ವೇನ ಸ್ತಂಭಂ ವಾಯೋರ್ವಿನಾಶಯೇತ್ ।
ಪುಷ್ಟಿರೇವಾತುಲಾ ತಸ್ಯ ಸ್ಥಿರತ್ವಂ ರುಜಹೀನತಾ ॥ ೨೨ ॥

ಹೃತ್ತತ್ತ್ವಂ ಚ ಸುಪೀತಾಭಂ ಅಮರತ್ವಂ ತಥಾಸ್ಮರನ್ ।
ಶ್ರೋತ್ರಮಾಕಾಶವಾಯ್ವೋಶ್ಚ ಅಸ್ತ್ರೈಕತ್ವಂ ವಿಚಿಂತಯೇತ್ ॥ ೨೩ ॥

---

೧೯. ಆ ಪೂರ್ಣಾಕ್ಷರ ಧ್ಯಾನವನ್ನು ಬ್ರಹ್ಮರಂಧ್ರದಲ್ಲಿ ಮುಗಿಸಬೇಕು. ಆಗ ದೇಹದಲ್ಲಿ ಎಲ್ಲಾ ಇಂದ್ರಿಯಗಳೂ ನಿಶ್ಚಲವಾಗಿ ಸ್ವಸ್ಥಾನದಲ್ಲಿ ನಿಲ್ಲುವುವು. ಇದರಿಂದ ಹೃತ್ತತ್ತ್ವವು ಶೀತಲವಾಗಿ ಸುಗಂಧದಿಂದ ಕೂಡಿದಂತೆ ಭಾಸವಾಗುವುದು.

೨೦. ಈ ಅಭ್ಯಾಸದಿಂದ ಸಮಸ್ತ ಪಿತ್ತದ ರೋಗಗಳೂ, ವಿಷಜ್ವರಗಳೂ, ಮುಪ್ಪಿನ ಕಾಯಿಲೆಗಳೂ, ಸೂರ್ಯನಿಂದ ಕತ್ತಲೆಯು ನಾಶವಾಗುವಂತೆ ನಾಶವಾಗುವುವು.

೨೧–೨೨. ಚಂದ್ರದೇವತಾಕವಾದ ಮಂತ್ರದಿಂದಲೇ ಪಾನೀಯವನ್ನು ಪಾನ ಮಾಡಬೇಕು. ಪಾರ್ಥಿವ ತತ್ತ್ವದಿಂದ ಅಪಾನವಾಯುವನ್ನು ಬಂಧಿಸಬೇಕು. ಚಂದ್ರ ನಾಡಿಯಿಂದ ಪೂರಕಮಾಡಿ ಶುದ್ಧವಾಯುವನ್ನು ಸುಷುಮ್ನಾ ನಾಡಿಯಲ್ಲಿ ನಿರೋಧಿಸಬೇಕು. ಇದರಿಂದ ಯೋಗಿಗೆ ಕುರುಡುತನವು ಹೋಗಿ ದಿವ್ಯದೃಷ್ಟಿಯು ಉಂಟಾಗುವುದು. ಅಲ್ಲದೆ ಸಮಸ್ತ ರೋಗಗಳನ್ನೂ ನಿವಾರಿಸಿಕೊಂಡು ದೇಹಪುಷ್ಟಿಯನ್ನು ಸಂಪಾದಿಸಬಹುದು.

೨೩. ಆಕಾಶ, ವಾಯು ಇವೆರಡು ತತ್ತ್ವಗಳನ್ನೂ ಏಕೀಕರಣಮಾಡಿ ಶ್ರೋತ್ರದಲ್ಲಿ ನಿಲ್ಲಿಸಬೇಕು. ಇದರಿಂದ ಹೃದಯ ತತ್ತ್ವವು ಸ್ವರ್ಣದಂತೆ ಕಾಂತಿಮತ್ತಾಗಿ ಅಮರತ್ವವನ್ನು ಪಡೆಯುವುದು.

ಮೋಚಯೇತ್ತಂ ಪುನರ್ವಾಯುಂ ಬಧಿರತ್ವವಿನಾಶನಂ ।
ಶೃಣೋತಿ ದೂರತಃ ಸರ್ವಂ ಶ್ರುತಧಾರೀ ಭವೇತ್ಸದಾ ॥ ೨೪ ॥

ವಿಯನ್ಮಯೋಽಥ ಸಂಚಾರೀ ಸತತಾಭ್ಯಾಸಯೋಗತಃ ।
ಸರೋಜಂ ರಸನಾಯಾಂ ಚ ತದ್ದ್ರಷ್ಟಾರಂ ಸಕರ್ಣಿಕಂ ॥ ೨೫ ॥

ಸ್ಮೃತ್ವಾ ಮಧ್ಯೇ ಪುನರ್ಧ್ಯಾಯೇತ್ ಶುಕ್ಲವರ್ಣಾಂ ಸರಸ್ವತೀಂ ।
ಜಡತ್ವಂ ಚ ಶಿರೋರೋಗಂ ಮುಖರೋಗಾನ್ವಿನಾಶಯೇತ್ ॥ ೨೬ ॥

ಪ್ರಜ್ಞಾ ಚೈವ ಸ್ಮೃತಿರ್ಮೇಧಾ ಕವಿತ್ವಂ ಬುದ್ಧಿರುತ್ತಮಾ ।
ಸ್ತಂಭನಂ ದುಷ್ಟಸತ್ವಾನಾಂ ಸರ್ವವಾಯುಂ ಜಯೇತ್ಸದಾ ॥ ೨೭ ॥

ಹೃತ್ಸರೋಜಗತಂ ದೇವಂ ಅಷ್ಟಾದಶಭುಜೈರ್ಯುತಂ ।
ನೀಲಾರುಣಂ ಮಹಾಕಾಯಂ ತ್ರಿದೃಕ್‌ಚಂದ್ರಜಟಾಧರಂ ॥ ೨೮ ॥

---

೨೪. ಮತ್ತು ಹೃದಯತತ್ತ್ವದಲ್ಲಿ ಸ್ತಂಭನಮಾಡಿದ್ದ ವಾಯುವನ್ನು ಕಿವಿಯ ಮೂಲಕ ಹೊರಪಡಿಸಬೇಕು. ಇದರಿಂದ ಕಿವುಡು ನಾಶವಾಗಿ ದೂರದ ಶಬ್ದವನ್ನು ಸಹ ಕೇಳುವಂತಹ ಸಾಮರ್ಥ್ಯ ಬರುವುದು.

೨೫. ಅಭ್ಯಾಸಬಲದಿಂದ ಆಕಾಶತತ್ತ್ವದಲ್ಲಿ ವಾಯುವನ್ನು ಸಂಚರಿಸುತ್ತಾ ಕೇಸರಗಳಿಂದ ಕೂಡಿದ ಕಮಲವನ್ನು ನಿಲ್ಲಿಸಿದಂತೆ ರಸನಾ ವ್ಯಾಪಾರವನ್ನು ನಿಲ್ಲಿಸಿ ವಾಯುವನ್ನು ಅಲ್ಲಿ ಸಂಚರಿಸಬೇಕು

೨೬. ಆ ಕಮಲದ ಮಧ್ಯದಲ್ಲಿ ಶುಕ್ಲವರ್ಣವುಳ್ಳ ಸರಸ್ವತಿಯು ನೆಲಸಿರುವಳೆಂಬ ಭಾವನೆಯಿಂದ ಶಾರದೆಯನ್ನು ಧ್ಯಾನಿಸಬೇಕು. ಇದರಿಂದ ಆಲಸ್ಯವೂ, ಶಿರೋರೋಗವೂ ಮುಖದ ರೋಗಗಳೂ ನಿವಾರಣೆಯಾಗುತ್ತವೆ.

೨೭. ಈ ವಿಧವಾದ ಸರಸ್ವತಿಯ ಧ್ಯಾನದಿಂದಲೂ, ವಾಯುನಿರೋಧಶಕ್ತಿಯಿಂದಲೂ, ಯೋಗಿಯು, ವಿಶೇಷ ಪ್ರತಿಭೆಯನ್ನೂ, ಸ್ಮರಣಶಕ್ತಿಯನ್ನೂ ಕವಿತಾ ಸಾಮರ್ಥ್ಯವನ್ನೂ, ಉತ್ತಮವಾದ ಬುದ್ಧಿಯನ್ನೂ, ದುಷ್ಟಪ್ರಾಣಿಗಳನ್ನು ತಡೆದು ನಿಲ್ಲಿಸುವ ತೇಜಸ್ಸನ್ನೂ ಸಂಪಾದಿಸುವನು,

೨೮–೩೦. ಅಲ್ಲದೆ ಯೋಗಿಯು ತನ್ನ ಹೃದಯಕಮಲದಲ್ಲಿ ಪರಮೇಶ್ವರನನ್ನು ಧ್ಯಾನಿಸಬೇಕು. ಧ್ಯಾನಕಾಲದಲ್ಲಿ ಪರಮೇಶ್ವರನಿಗೆ ಹದಿನೆಂಟು ಭುಜಗಳೂ, ನೀಲಿ ಮತ್ತು ಕೆಂಪು ಬಣ್ಣಗಳಿಂದ ಕೂಡಿದ ದೇಹವೂ, ಮೂರು ಕಣ್ಣುಗಳೂ, ಶಿರಸ್ಸಿನಲ್ಲಿ

ಸಿಂಹಚರ್ಮಾಂಬರಂ ಭೀಮಂ ಸರ್ವಾಭರಣಭೂಷಿತಂ ।
ಭುಜಂಗಹಾರಾಭರಣಂ ಸರ್ಪಕಂಕಣನೂಪುರಂ ॥ ೨೯ ॥

ಜ್ವಾಲಾಮಾಲಾಕುಲಂ ದೀಪ್ತಂ ಭಾಭಾಸಿತದಿಗಾನನಂ ।
ಅಭೇದ್ಯಂ ವಿಜಯಂ ರೌದ್ರಂ ಅಕ್ಷೋಭ್ಯಂ ತ್ರಿದಶೇಶ್ವರಂ ॥ ೩೦ ॥

ಕಪಾಲಮಾಲಿನಂ ಚೋಗ್ರಂ ಭೀಮಂ ದಂಷ್ಟ್ರಾಕರಾಲಿನಂ ।
ಅಸ್ತ್ರೈರ್ವ್ಯಗ್ರಕರಂ ದೇವಂ ಅಮೋಘೈರ್ವಹ್ನಿಕಾರುಣ್ಯೈಃ ॥ ೩೧ ॥

ಸ್ಮರಣಾದ್ಯಜನಾಚ್ಚೈವ ತೈಜಸೈರ್ವಿಘ್ನನಾಶನಂ ।
ಶೂಲಮುದ್ಗರವಜ್ರೇಷು ದಂಡಕಾರ್ಮುಕಶಕ್ತ್ಯಪಿ ॥ ೩೨ ॥

ಪಸ್ಮಾಂತೇ ದಕ್ಷಿಣೇ ಭಾಗೇಽವಿನಾಶಂ ಪರಮೇಶ್ವರಂ ।
ಪರಿಘಧ್ವಜಖಟ್ವಾಂಗೈರಂಕುಶಂ ಚ ಧನುರ್ಗದಾಂ ॥ ೩೩ ॥

ಚಂದ್ರ ಮತ್ತು ಜಡೆ ಇವುಗಳೂ ಇವೆಯೆಂದು ಭಾವಿಸಬೇಕು. ಅಲ್ಲದೆ ಸಿಂಹದ ಚರ್ಮವನ್ನು ಹೊದ್ದು ಸಮಸ್ತ ಆಭರಣಗಳಿಂದ ಅಲಂಕೃತನಾಗಿ ಸರ್ಪವನ್ನೇ ಹಾರವನ್ನಾಗಿ ಮಾಡಿಕೊಂಡು, ಕೈಗೂ ಕಾಲಿಗೂ ಸರ್ಪಗಳನ್ನೇ ಬಿಗಿದಿರುವನೆಂದು ತಿಳಿಯಬೇಕು. ಪರಮೇಶ್ವರನ ಸುತ್ತಲೂ ತೇಜಸ್ಸಿನ ಉರಿಯು ಜ್ವಾಲೆಯಂತೆ ಸರ್ವತ್ರ ಹರಡಿರುತ್ತದೆ. ಪರಮೇಶ್ವರನು ಅಭೇದ್ಯನು. ಜಯಶಾಲಿಯು. ರುದ್ರರೂಪಿಯು. ಸಮಸ್ತ ದೇವತೆಗಳಿಗೂ ಒಡೆಯನು.

೩೧. ಪರಮೇಶ್ವರನು ಕಪಾಲಗಳನ್ನೆ ಮಾಲೆಯನ್ನಾಗಿ ಮಾಡಿಕೊಂಡಿರುವನು ಭಯಂಕರ ಸ್ವರೂಪಿಯು, ಕೋರೆದಾಡೆಗಳಂದ ಭಯಂಕರನೂ ಆಗಿರುವನು. ಬೆಂಕಿಯನ್ನುಗುಳುವಂತಹ ಉತ್ತಮವಾದ ಅಸ್ತ್ರಗಳಿಂದ ಕೂಡಿರುವ ಸ್ವಾಮಿಯು.

೩೨. ಮಹೇಶ್ವರನ ಕೈಯಲ್ಲಿ ತ್ರಿಶೂಲ, ಮುದ್ಗರ, ವಜ್ರಾಯುಧ, ಬಾಣ, ದಂಡಾಯುಧ, ಬಿಲ್ಲು ಶಕ್ತ್ಯಾಯುಧ, ಕತ್ತಿ ಇವುಗಳು ಸರ್ವದಾ ವಿಜೃಂಭಿಸುತ್ತವೆ ಇಂತಹ ಪರಮೇಶ್ವರನ ಸ್ಮರಣೆಯಿಂದಲೂ ಅರ್ಚನೆಯಿಂದಲೂ ಸಮಸ್ತ ವಿಘ್ನಗಳೂ ನಾಶವಾಗುವುವು.

೩೩. ಹೃದಯಪದ್ಮದಲ್ಲಿ ಈ ರೀತಿಯಾಗಿ ಪರಶಿವನನ್ನು ಧ್ಯಾನಿಸಿ, ಅವನ ಬಲಭಾಗದಲ್ಲಿ ಪರಿಘ, ಧ್ವಜ, ಖಟ್ವಾಂಗ, ಅಂಕುಶ, ಧನುಸ್ಸು, ಗದೆ ಎಂಬ ಆಯುಧಗಳಿರುತ್ತವೆ ಎಂದು ಭಾವಿಸಬೇಕು.

ಜ್ವಾಲಾನನೇನ ಪಾಶೇನ ವಾಮಭಾಗೇऽಭಯಪ್ರದಂ ।
ಅನೇನ ಧ್ಯಾನಯೋಗೇನ ಸರ್ವವಿಘ್ನಾನ್ನಿವಾರಯೇತ್ ॥ ೩೪ ॥

ವಶಂ ನಯೇಜ್ಜಗತ್ಸರ್ವಮಾಪದ್ಯಪಿ ಮಹೇಶ್ವರಃ ।
ಸಮ್ಯಗ್ದರ್ಶನಸಂಪನ್ನೋ ನಾಭಿಭೂಯೇತ ಕರ್ಮಭಿಃ ॥ ೩೫ ॥

ಯೋಗವಿದ್ಯೋಗಯುಕ್ತಾತ್ಮಾ ಪರಂ ನಿರ್ವಾಣಮೃಚ್ಛತಿ ।
ಆದಿತ್ಯಮಂಡಲಂ ಪದ್ಮೇ ಸೌಮ್ಯಂ ವೈ ಪಾವಕಂ ತತಃ ॥ ೩೬ ॥

ಆತ್ಮನೋ ಹೃದ್ಗುಹಾವಾಸಂ ಸಂಚಿಂತ್ಯೈವಂ ಮಹಾಮುನಿಃ ।
ತತ್ರ ದೇವಂ ಪರಂ ಶಾಂತಂ ಧ್ಯಾಯೇದೀಶಂ ಸುನಿರ್ಮಲಂ ॥ ೩೭ ॥

ಜಗದ್ವ್ಯಾಪ್ಯ ಸ್ಥಿತಂ ಕೃತ್ಸ್ನಂ ಕಾಲಾಕಾಲವಿವರ್ಜಿತಂ ।
ವಿಯದ್ದೇಶೇ ಹೃತ್ಕುಂಜೇ ವಾ ಯೋಗೀ ಯೋಗವಿದಾಂ ವರಃ ॥ ೩೮ ॥

---

೩೪. ಎಡ ಗೈಯಲ್ಲಿ ಜ್ವಾಲೆಗಳಿರುವ ಪಾಶಾಯುಧವನ್ನು ಧರಿಸಿರುವನು". ಇವೇ ಮೊದಲಾದ ಧ್ಯಾನದಿಂದ ಯೋಗಿಯು ಸಮಸ್ತ ವಿಘ್ನಗಳನ್ನೂ ಸುಲಭವಾಗಿ ಕಳೆದುಕೊಳ್ಳಬಹುದು.

೩೫. ಮಹೇಶ್ವರನು ಎಂತಹ ವಿಪತ್ತಿನಲ್ಲಿಯೂ ಸಮಸ್ತ ಲೋಕಗಳನ್ನೂ ವಶವನ್ನಾಗಿಮಾಡಿಕೊಡುವನು. ಅವನು ಅಂತಹ ಸಮರ್ಥನು. ಆದ್ದರಿಂದಲೇ ಸಮಸ್ತ ದರ್ಶನಗಳನ್ನೂ ತಿಳಿದುಕೊಂಡು ಸಮಸ್ತ ಕರ್ಮಗಳನ್ನು ಈಶ್ವರತೃಪ್ತಿಗಾಗಿ ಮಾಡುತ್ತಿರಬೇಕು.

೩೬. ಯೋಗಿಯಾದವನು ತನ್ನ ಹೃದಯಪದ್ಮದಲ್ಲಿ ಸೂರ್ಯನನ್ನೂ, ಚಂದ್ರನನ್ನೂ, ಅಗ್ನಿಯನ್ನೂ ಅನುಸಂಧಾನಮಾಡಿದರೆ ಆ ದೇವತಾನುಗ್ರಹದಿಂದ ಸಂಪೂರ್ಣ ಜ್ಞಾನಿಯಾಗಿ ಮೋಕ್ಷವನ್ನು ಪಡೆಯುವನು.

೩೭. ಯೋಗಿಯು ತನ್ನ ಹೃದಯವೇ ಪರಮಾತ್ಮನ ಗುಹೆಯೆಂದರಿತು, ಅಲ್ಲಿ ಪರಮೇಶ್ವರನು ವಾಸಿಸುತ್ತಿರುವನೆಂದು ತಿಳಿದು ಆ ಹೃದಯ ಕಮಲದಲ್ಲಿ ಶಾಂತಾತ್ಮನೂ ನಿರ್ಮಲನೂ ಆದ ಪರಮೇಶ್ವರನನ್ನು ಧ್ಯಾನಿಸಬೇಕು.

೩೮. ಅಲ್ಲದೆ ಯೋಗಿಯು ತನ್ನ ಹೃದಯದಲ್ಲಾಗಲಿ, ಆಕಾಶತತ್ತ್ವವಾದ ಬ್ರಹ್ಮರಂಧ್ರದಲ್ಲಾಗಲಿ ಕಾಲಾತೀತನಾದ ಮಹಾದೇವನನ್ನು ಭಕ್ತಿಯಿಂದ ಅನುಸಂಧಾನ ಮಾಡಬಹುದು.

ಈಶ್ವರಂ ಚಿಂತಯೇತ್ ಸ್ಥಾಣುಂ ಜ್ಞಾನಮಾನಂದವಿಗ್ರಹಂ ।
ಉಭಾವಪಿ ಸ್ಥಿರೀಕೃತ್ಯ ಯೋಗೀ ಮೋಕ್ಷಾಯ ಕಲ್ಪತೇ ॥ ೩೯ ॥

ಬಾಹ್ಯೇ ಚಿತ್ತಂ ಸಮಾರೋಪ್ಯ ವಾಯೋಃ ಪರಮುಕಾರಯುತ್ ।
ತತೋ ದ್ವಾರಾಣಿ ಸಂಯಮ್ಯ ಬ್ರಹ್ಮರಂಧ್ರೇಲಯಂ ಗತಃ ॥ ೪೦ ॥

ಘೃತಂ ಘೃತೇಷ್ವೇವ ಯಥಾ ನಿಯುಕ್ತಂ ಪ್ರಯಾತಿ ಚೈಕ್ಯಾದವಿಶೇಷಭಾವಂ
ತಥೈವ ಲೀನೋ ನ ಭವೇತ್ಸ ಭೂಯಃ ಪರೇ ಚತುರ್ಥೇ ತ್ವನಯಾ ಚ
ಯುಕ್ತ್ಯಾ॥ ೪೧ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಶಿವಸ್ಕಂದಸಂವಾದೇ
ಸಾತ್ವಿಕರಾಜಸವಿಘ್ನಾದಿ ಕಥನಂ ನಾಮ
ತ್ರಯೋದಶೋಽಧ್ಯಾಯಃ

---

೩೯. ಈಶ್ವರನನ್ನು ಸ್ಥಾಣುರೂಪಿಯನ್ನಾಗಿಯೂ, ಜ್ಞಾನವಿಗ್ರಹನನ್ನಾಗಿಯೂ ಭಜಿಸಬೇಕು. ಈ ಎರಡು ವಿಧವಾದ ಆಕಾರದಿಂದ ಉಪಾಸನೆಮಾಡುವುದೂ ಮೋಕ್ಷಕ್ಕೆ ಸಾಧಕವಾಗುವುದು.

೪೦. ಹೊರಗಿನ ಮನಸ್ಸನ್ನು ಬಿಗಿಹಿಡಿದು ವಾಯುವನ್ನು ಹೃದಯದ ಒಳಗೆ ಅಡಗಿಸಬೇಕು. ಯಾವರಂಧ್ರದಿಂದಲೂ ವಾಯುವನ್ನು ಹೊರಗೆಬಿಡದೆ ಬ್ರಹ್ಮ ರಂಧ್ರದಲ್ಲಿ ವಾಯುವನ್ನು ನಿಲ್ಲಿಸಬೇಕು. ಅದನ್ನೇ ಲಯವೆನ್ನುವರು.

೪೧. ತುಪ್ಪವು ತುಪ್ಪದಲ್ಲಿ ಹೇಗೆ ಲೀನವಾಗುವುದೋ, ಹಾಗೇ ಪರಮಾತ್ಮ ನಲ್ಲಿ ನಮ್ಮ ಅಂತಃಕರಣವನ್ನು ಅಡಗಿಸಿ ಲೀನವನ್ನಾಗಿ ಮಾಡಿಕೊಳ್ಳಬೇಕು. ಹಾಗೆ ಮಾಡುವುದರಿಂದ ಅವನಿಗೆ ಪುನರ್ಜನ್ಮವು ಇರದೆ ಸಾಕ್ಷಾತ್ಪರಮೇಶ್ವರನ ಸಾಯುಜ್ಯ ವು ದೊರೆಯುವುದು.

ಹೀಗೆ ಬ್ರಹ್ಮ ಪುರಾಣೋಪಪುರಾಣವಾದ ಸೌರದಲ್ಲಿ ಶಿವ ಮತ್ತು ಕುಮಾರಸ್ವಾಮಿಯ ಸಂವಾದದಲ್ಲಿ ಸಾತ್ವಿಕ, ರಾಜಸ, ತಾಮಸ ವಿಘ್ನಗಳ ಸ್ವರೂಪವು ಈ ಹದಿಮೂರನೆಯ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿದೆ.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ಚತುರ್ದಶೋಽಧ್ಯಾಯಃ

॥ ಸೂತ ಉವಾಚ ॥

ವ್ರತಾನಿ ಸಂಪ್ರವಕ್ಷ್ಯಾಮಿ ಶೃಣುಧ್ವಂ ಮುನಿಪುಂಗವಾಃ ।
ತತ್ರ ಕೃಷ್ಣಾಷ್ಟಮೀ ಪುಣ್ಯಾ ಸರ್ವಪಾಪಪ್ರಣಾಶನೀ ॥ ೧ ॥

ಕೃಷ್ಣಾಷ್ಟಮೀ ವ್ರತಾನ್ನಾನ್ಯತ್ ವ್ರತಮಸ್ತಿ ವಿಭೂತಿದಂ ।
ಕೃಷ್ಣಾಷ್ಟಮೀವ್ರತಂ ಕೃತ್ವಾ ಬ್ರಹ್ಮಾ ಬ್ರಹ್ಮತ್ವಮಾಪ್ನುಯಾತ್ ॥ ೨ ॥

ವಿಷ್ಣುತ್ವಂ ಪ್ರಾಪ್ತವಾನ್ವಿಷ್ಣುಃ ಸುರೇಶತ್ವಂ ಶಚೀಪತಿಃ ।
ಕುಬೇರೋ ಯಕ್ಷರಾಜತ್ವಂ ನಿಯಂತೃತ್ವಂ ಯಮಃ ಸ್ವಯಂ ॥ ೩ ॥

ಹದಿನಾಲ್ಕನೆಯ ಅಧ್ಯಾಯವು.

೧. ಪುನಃ ಸೂತಮಹರ್ಷಿಗಳು ಶೌನಕಾದಿಗಳನ್ನು ಕುರಿತು ಕೆಲವು ವ್ರತಗಳ ಮಹಿಮೆಗಳನ್ನು ಹೇಳಲಾರಂಭಿಸಿದರು. "ಎಲೈ ಮುನಿವರ್ಯರೇ, ವ್ರತಗಳು ಅನೇಕ ವಿವೆ. ಅದರಲ್ಲಿ ಕೃಷ್ಣಾಷ್ಟಮೀ ವ್ರತವೆಂಬುದು ಸರ್ವಪಾಪಹರವಾದದ್ದು.

೨. ವ್ರತಗಳಲ್ಲಿ ಕೃಷ್ಣಾಷ್ಟಮೀ ವ್ರತಕ್ಕೆ ಸಮನಾದದ್ದು ಮತ್ತೊಂದಿಲ್ಲ. ಬ್ರಹ್ಮನು ತಾನು ಬ್ರಹ್ಮಪದವಿಯನ್ನು ಹೊಂದಲು ಈ ಕೃಷ್ಣಾಷ್ಟಮೀ ವ್ರತವನ್ನು ಮಾಡಿದನು.

೩. ಈ ವ್ರತವನ್ನಾಚರಿಸಿ, ವಿಷ್ಣುವು ವಿಷ್ಣುಪದವಿಯನ್ನೂ, ಇಂದ್ರನು ದೇವ ರಾಜಪದವಿಯನ್ನೂ, ಕುಬೇರನು ಯಕ್ಷರಾಜಪದವಿಯನ್ನೂ, ಯಮನು ತಾನು ಯಮರಾಜ್ಯಾಧಿಕಾರವನ್ನೂ ಸಂಪಾದಿಸಿಕೊಂಡರು.

ಚಂದ್ರಶ್ಚಂದ್ರತ್ವಮಾಪನ್ನೋ ಗಣೇಶತ್ವಂ ಗಣಾಧಿಪಃ ।
ಸ್ಕಂದಃ ಸೇನಾಪತಿತ್ವಂ ಚ ತಥಾ ಚಾನ್ಯೇ ಗಣೇಶ್ವರಾಃ ॥ ೪ ॥

ಕೃತ್ವಾ ಚೈಶ್ವರ್ಯಮಾಪನ್ನಾಃ ಸೌಭಾಗ್ಯಂ ದೇವವಲ್ಲಭಾಃ ।
ವ್ರತಸ್ಯಾಸ್ಯ ಪ್ರಭಾವೇನ ಲಕ್ಷ್ಮ್ಯಾಃ ಪತಿರಭೂದ್ಧರಿಃ ॥ ೫ ॥

ಯಯಾತಿಃ ಸಾರ್ವಭೌಮತ್ವಂ ತಥಾ ಚಾನ್ಯೇ ನೃಪೋತ್ತಮಾಃ ।
ಋಷಯೋ ಮುನಯಃ ಸಿದ್ಧಾಃ ಗಂಧರ್ವಾಣಾಂ ಚ ಕನ್ಯಕಾಃ ॥ ೬ ॥
ಕೃತ್ವಾ ಚೈವ ಪರಾಂ ಸಿದ್ಧಿಂ ಪ್ರಾಪ್ತಾಶ್ಚ ಮುನಿಪುಂಗವಾಃ ।

ನಂದೀಶ್ವರೇಣ ಯತ್ಪ್ರೋಕ್ತಂ ನಾರದಾಯ ಮಹಾತ್ಮನೇ ॥ ೭ ॥
ಕೃಷ್ಣಾಷ್ಟಮೀವ್ರತಂ ಶ್ರೇಷ್ಠಂ ಸರ್ವಕಾಮಫಲಪ್ರದಂ ।

ಮೇರೋರ್ಯದ್ದಕ್ಷಿಣಂ ಶೃಂಗಂ ಸುರಾಸುರನಮಸ್ಕೃತಂ ।
ತತ್ರ ನಂದೀಶ್ವರಂ ದೃಷ್ಟ್ವಾ ಸರ್ವಜ್ಞಂ ಶಂಭುವಲ್ಲಭಂ ॥ ೮ ॥

---

೪. ಚಂದ್ರನು ಆಹ್ಲಾದಕರನಾದುದೂ, ವಿನಾಯಕನು ಗಣಾಧಿಪನಾದುದೂ, ಕುಮಾರಸ್ವಾಮಿಯು ಸೇನಾಧ್ಯಕ್ಷನಾದುದೂ, ಇನ್ನೂ ಗಣಗಳಿಗೆ ಒಡೆಯರಾದವರು ಪದವಿಯನ್ನು ಉಳಿಸಿಕೊಂಡುದೂ ಈ ವ್ರತಾಚರಣೆಯಿಂದಲೇ.

೫. ದೇವಲೋಕದ ಸ್ತ್ರೀಯರು ಸಹ ಈ ವ್ರತವನ್ನು ಮಾಡಿ ಸಮಸ್ತ ಸೌಭಾಗ್ಯಗಳನ್ನೂ ಸಂಪಾದಿಸಿದರು. ಹೆಚ್ಚೇನು. ಸಾಕ್ಷಾಲ್ಲಕ್ಷ್ಮೀದೇವಿಯೂ ಈ ವ್ರತವನ್ನು ಮಾಡಿಯೇ ವಿಷ್ಣುವನ್ನು ಪತಿಯನ್ನಾಗಿ ಹೊಂದಿದಳು.

೬. ಯಯಾತಿ, ಮತ್ತು ಇನ್ನೂ ಇತರ ಸಾರ್ವಭೌಮರು ರಾಜಶ್ರೇಷ್ಠರಾದದ್ದು ಈ ವ್ರತಪ್ರಭಾವದಿಂದಲೇ. ಇದೂ ಅಲ್ಲದೆ ಸಮಸ್ತ ಋಷಿಗಳೂ, ಸಿದ್ಧ ಗಂಧರ್ವರೂ, ಅಪ್ಸರಸ್ತ್ರೀಯರೂ, ಇನ್ನೂ ಇತರ ಸಂನ್ಯಾಸಿಗಳೂ ಸಹ ಈ ವ್ರತವನ್ನು ಮಾಡಿ ಫಲವನ್ನು ಪಡೆದು ಮುಕ್ತರಾಗಿದ್ದಾರೆ.

೭. ಈ ವ್ರತದ ವಿಧಾನವನ್ನು ಹಿಂದೆ ನಂದೀಶ್ವರನು ಮಹಾತ್ಮನಾದ ನಾರದನಿಗೆ ಹೇಳಿದ್ದನು. ಅಂತಹ ಶ್ರೇಷ್ಠವಾದ ಈ ಕೃಷ್ಣಾಷ್ಟಮೀ ವ್ರತವನ್ನು ನಿಮಗೆ ನಾನು ತಿಳಿಸುವೆನು.

೮. ಹಿಂದೆ ಒಂದುಸಾರಿ ಪ್ರಿಯಭಕ್ತನಾದ ನಂದೀಶ್ವರನು ದೇವರಾಕ್ಷಸರಿಂದ ಸೇವಿಸಲ್ಪಡುವವನಾಗಿ ಮೇರುಪರ್ವತದ ಬಲಭಾಗದ ಶಿಖರದಲ್ಲಿ ಸಂತೋಷದಿಂದ ಕುಳಿತಿದ್ದನು.

ಉಪಾಸ್ಯಮಾನಂ ಮುನಿಭಿಃ ಸ್ತೂಯಮಾನಂ ಮರುದ್ಗಣೈಃ ॥ ೯ ॥
ಸರ್ವಾನುಗ್ರಹಕರ್ತಾರಂ ಸ್ತುತ್ವಾ ತು ವಿವಿಧೈಃ ಸ್ತವೈಃ ।
ಅಬ್ರವೀತ್ಪ್ರಣಿಪತ್ಯಾಥ ದಂಡವನ್ನಾರದೋ ಮುನಿಃ ॥ ೧೦ ॥

॥ ನಾರದ ಉವಾಚ ॥

ಭಗವನ್ ಸರ್ವತತ್ತ್ವಜ್ಞ ಸರ್ವೇಷಾಮಭಯಪ್ರದ ।
ಕೇನ ವ್ರತೇನ ಚೀರ್ಣೇನ ತಪೋವೃತ್ತಿಃ ಪ್ರಜಾಯತೇ ॥ ೧೧ ॥

ಸೌಭಾಗ್ಯಂ ಕಾಂತಿಮೈಶ್ವರ್ಯಮಪತ್ಯಂ ಚ ಯಶಸ್ತಥಾ ।
ಶಾಶ್ವತೀಂ ಮುಕ್ತಿಮಂತೇ ಚ ಪಶುಪಾಶವಿಮೋಚನೀಂ ॥ ೧೨ ॥
ಭಗವನ್ ತದ್ವ್ರತಂ ಬ್ರೂಹಿ ಕಾರುಣ್ಯಾಚ್ಛಂಕರಪ್ರಿಯಂ ।

೯–೧೦. ಮುನಿಗಳು ಆ ನಂದೀಶ್ವರನ ಸುತ್ತಲೂ ಕುಳಿತು ಸೇವಿಸುತ್ತಿದ್ದರು. ಮರುದ್ಗಣಗಳು ಹೊಗಳುತ್ತಿದ್ದರು. ಈ ವಿಧವಾದ ಸ್ತುತಿಪರಂಪರೆಗಳಿಂದ ತೃಪ್ತನಾಗಿ ನಂದೀಶ್ವರನು ಅವರೆಲ್ಲರಿಗೂ ವರಗಳನ್ನು ಕೊಡುತ್ತಿದ್ದನು. ಇಂಥ ನಂದೀಶ್ವರನಿಗೆ ನಾರದ ಮುನಿಯು ಸಾಷ್ಟಾಂಗ ನಮಸ್ಕಾರಮಾಡಿ ಹೀಗೆ ಕೇಳಿಕೊಂಡನು.

೧೧. "ಸಮಸ್ತ ತತ್ತ್ವಗಳನ್ನೂ ತಿಳಿದು ಸರ್ವರಿಗೂ ಅಭಯವನ್ನು ಕೊಡುತ್ತಿರುವ ನಂದೀಶ್ವರನೇ, ಯಾವ ವ್ರತಾಚರಣೆಯಿಂದ ತಪಸ್ಸಿನ ಪರಮಫಲವು ಮನುಷ್ಯರಿಗೆ ದೊರೆಯುವುದು?

೧೨. ಅಲ್ಲದೆ ಯಾವ ವ್ರತವನ್ನು ಮಾಡಿದರೆ ಭಕ್ತರು ಸಕಲಸೌಭಾಗ್ಯವನ್ನೂ, ಪುತ್ರಸಂಪತ್ತನ್ನೂ, ಯಶಸ್ಸನ್ನೂ, ಕೊನೆಗೆ ಮೋಕ್ಷವನ್ನೂ ಹೊಂದಬಹುದು? ಯಾವ ವ್ರತವು ಪರಮೇಶ್ವರನಿಗೆ ಬಹಳ ಪ್ರಿಯವಾದದ್ದು? ಪಶುಗಳ ದುಃಖವನ್ನು ನಿವಾರಿಸುವಂತಹ ವ್ರತವಾವುದು? ಅದನ್ನು ನನಗೆ ತಿಳಿಸಬೇಕು" ಎಂದು ನಾರದಮಹರ್ಷಿಯು ಕೇಳಿಕೊಳ್ಳಲಾಗಿ.

॥ ನಂದೀಶ್ವರ ಉವಾಚ ॥

ಕೃಷ್ಣಾಷ್ಟಮೀವ್ರತಂ ಶ್ರೇಷ್ಠಂ ಅಸ್ತಿ ದೇವಋಷೇ ಶೃಣು ।
ಗಣೇಶತ್ವಂ ಮಯಾ ಲಬ್ಧಂ ಯೇನ ಚೀರ್ಣೇನ ನಾರದ ॥ ೧೩ ॥

ಮಾಸೇ ಮಾರ್ಗಶಿರೇ ಪ್ರಾಪ್ತೇ ಕೃಷ್ಣಾಷ್ಟಮ್ಯಾಂ ಜಿತೇಂದ್ರಿಯಃ ।
ಅಶ್ವತ್ಥದಂಡಕಾಷ್ಠೇನ ಕೃತ್ವಾ ವೈ ದಂತಧಾವನಂ ॥ ೧೪ ॥

ಸ್ನಾನಂ ಕೃತ್ವಾ ಚ ವಿಧಿವತ್ತರ್ಪಣಂ ಚೈವ ನಾರದ ।
ಆಗತ್ಯ ಭವನಂ ಪಶ್ಚಾತ್ ಪೂಜಯೇಚ್ಛಂಕರಂ ಪ್ರಭುಂ ॥ ೧೫ ॥

ಗೋಮೂತ್ರಂ ಪ್ರಾಶ್ಯ ವಿಧಿವದುಪವಾಸೀ ಭವೇನ್ನಿಶಿ ।
ಅತಿರಾತ್ರಸ್ಯ ಯಜ್ಞಸ್ಯ ಫಲಮಷ್ಟಗುಣಂ ಭವೇತ್ ॥ ೧೬ ॥

ಸರ್ಪಿಷಃ ಪ್ರಾಶನಂ ಪೌಷೇ ದಂತಕಾಷ್ಠಂ ಚ ತತ್ಸ್ಮೃತಂ ।
ಪೂಜಯೇಚ್ಛಂಭುನಾಮಾನಂ ಭಗವಂತಂ ಮಹೇಶ್ವರಂ ॥ ೧೭ ॥

---

೧೩. ನಂದೀಶ್ವರನು "ಎಲೈ ದೇವ ಋಷಿಯಾದ ನಾರದನೇ, ಶಿವಪ್ರೀತಿಕರವಾದ ಕೃಷ್ಣಾಷ್ಟಮಿಯೆಂಬ ವ್ರತವೊಂದಿರುವುದು. ಅದನ್ನು ಆಚರಿಸಿಯೇ ನಾನು ಈಗ ಸಕಲ ಗಣಗಳಿಗೂ ಅಧಿಪತಿಯಾಗಿರುವೆನು. ಅದರ ವಿಧಾನವು ಹೇಗೆಂದರೆ,

೧೪. ಮಾರ್ಗಶಿರಮಾಸದ ಕೃಷ್ಣಾಷ್ಟಮಿಯ ದಿವಸ, ವ್ರತಮಾಡುವವನು ಜಿತೇಂದ್ರಿಯನಾಗಿ, ಅರಳೀಮರದ ಕಡ್ಡಿಯಿಂದ ಮೊದಲು ದಂತಧಾವನವನ್ನು ಮಾಡಿಕೊಳ್ಳಬೇಕು.

೧೫. ಅನಂತರ ವಿಧಿವತ್ತಾಗಿ ಸ್ನಾನಮಾಡಿ ತರ್ಪಣಾದಿಗಳನ್ನು ಮಾಡಿಕೊಂಡು ಮನೆಗೆ ಬಂದು ವಿಧಿಯನ್ನನುಸರಿಸಿ ಶ್ರೀ ಶಂಕರನನ್ನು ಪೂಜಿಸಬೇಕು.

೧೬. ಅನಂತರ ಗೋಮೂತ್ರವನ್ನು ಪ್ರಾಶನಮಾಡಿ ದೇಹಶುದ್ಧಿಯನ್ನು ಪಡೆಯಬೇಕು. ರಾತ್ರಿಯಲ್ಲಿ ಉಪವಾಸಮಾಡಬೇಕು. ಹೀಗೆ ಮಾಡುವುದರಿಂದ ಅತಿರಾತ್ರಯಾಗದ ಫಲಕ್ಕೆ ಎಂಟರಷ್ಟು ಫಲವನ್ನು ಹೊಂದಬಹುದು.

೧೭. ಪುಷ್ಯಮಾಸದ ಕೃಷ್ಣಾಷ್ಟಮಿಯ ದಿನವೂ ಘೃತಪ್ರಾಶನಮಾಡಿ ಅದೇ ಕಾಷ್ಠದಿಂದ ದಂತಧಾವನಮಾಡಬೇಕು. ಅನಂತರ ಶಂಭುನಾಮಕನಾದ ಪರಮೇಶ್ವರನನ್ನು ಆರಾಧಿಸಬೇಕು.

ವಾಜಪೇಯಾಷ್ಟಕಫಲಂ ಪ್ರಾಪ್ನೋತಿ ಶ್ರದ್ಧಯಾನ್ವಿತಃ ।
ಮಾಘೇ ವಟಸ್ಯ ಕಥಿತಂ ಗೋಕ್ಷೀರಂ ಪ್ರಾಶನಂ ಸ್ಮೃತಂ ॥ ೧೮ ॥

ಮಹೇಶ್ವರಂ ಸುಸಂಪೂಜ್ಯ ಗೋಮೇಧಸ್ಯಾಷ್ಟಕಂ ಫಲಂ ।
ಫಾಲ್ಗುನೇ ಚ ತದೇವೋಕ್ತಂ ಕಾರ್ಯಂ ವೈ ಪ್ರಾಶನಂ ಚ ತತ್ ॥ ೧೯ ॥
ಸಂಪೂಜಯೇನ್ಮಹಾದೇವಂ ರಾಜಸೂಯಾಷ್ಟಕಂ ಫಲಂ ।
ಕಾಷ್ಠಮೌದುಂಬರಂ ಚೈತ್ರೇ ಪ್ರಾಶನೇ ವರ್ಜಿತಾ ಜನಾಃ ॥ ೨೦ ॥
ಪೂಜಯೇತ್ ಸ್ಥಾಣುನಾಮಾನಂ ಅಶ್ವಮೇಧಫಲಂ ಲಭೇತ್ ॥
ಶಿವಂ ಸಂಪೂಜ್ಯ ವೈಶಾಖೇ ಪೀತ್ವಾ ಚೈವ ಕುಶೋದಕಂ ।
ನರಮೇಧಾಷ್ಟಕಫಲಂ ಪ್ರಾಪ್ನೋತ್ಯೇವ ಹಿ ನಾರದ ॥ ೨೧ ॥

---

೧೮. ಈವಿಧವಾದ ಆರಾಧನೆಯಿಂದ ಮನುಷ್ಯನು ಎಂಟು ವಾಜಪೇಯಯಾಗಗಳ ಫಲವನ್ನು ಹೊಂದುವನು. ಹಾಗೆಯೇ ಮಾಘಮಾಸದ ಕೃಷ್ಣಾಷ್ಟಮಿಯ ದಿನದಲ್ಲೂ ಆಲದಮರದ ಕಡ್ಡಿಯಿಂದ ದಂತಧಾವನಮಾಡಿ ಹಸುವಿನ ಹಾಲನ್ನು ಪ್ರಾಶನ ಮಾಡಬೇಕು.

೧೯. ಅನಂತರ ಈಶ್ವರನ ಆರಾಧನೆಮಾಡಬೇಕು. ಇದರಿಂದ ಎಂಟು ಗೋಮೇಧಯಾಗಗಳ ಫಲವನ್ನು ಪಡೆಯಬಹುದು. ಅದೇರೀತಿ ಫಾಲ್ಗುಣಮಾಸದ ಅಷ್ಟಮಿಯಲ್ಲಿಯೂ, ಅದೇ ಗೋಕ್ಷೀರವನ್ನು ಪ್ರಾಶನಮಾಡಿ ಪರಮೇಶ್ವರನನ್ನು ಆರಾಧಿಸಬೇಕು. ಹೀಗೆ ಫಾಲ್ಗುಣಮಾಸದ ವ್ರತದಿಂದ ಎಂಟು ರಾಜಸೂಯಯಾಗಗಳ ಫಲವನ್ನು ಹೊಂದಬಹುದು.

೨೦. ಅತ್ತೀಮರದ ಕಡ್ಡಿಯಿಂದ ಚೈತ್ರಮಾಸದಲ್ಲಿ ದಂತಧಾವನಮಾಡಿಕೊಂಡು ಯಾವ ಆಹಾರದ ಪ್ರಾಶನವೂ ಇಲ್ಲದೆ ಮಹಾದೇವನನ್ನು ಅರ್ಚಿಸಿದರೆ ಅಶ್ವಮೇಧಯಾಗದ ಫಲವು ದೊರೆಯುವುದು.

೨೧. ಹಾಗೆಯೇ ವೈಶಾಖಮಾಸದ ಕೃಷ್ಣಾಷ್ಟಮಿಯದಿನದಲ್ಲೂ, ಕುಶೋದಕವನ್ನು ಪಾನಮಾಡಿ ಶಿವನನ್ನು ಆರಾಧಿಸಿದರೆ, ಎಂಟು ನರಮೇಧಯಾಗಗಳ ಫಲವನ್ನು ಪಡೆಯಬಹುದು.

ಜ್ಯೇಷ್ಠೇ ಪ್ಲಾಕ್ಷಂ ಭವೇತ್ಕಾಷ್ಠಂ ಪೂಜ್ಯಃ ಪಶುಪತಿರ್ವಿಭುಃ ।
ಗವಾಂ ಶೃಂಗೋದಕಂ ಪ್ರಾಶ್ಯ ಸ್ವಪೇದ್ದೇವಸ್ಯ ಸನ್ನಿಧೌ ॥ ೨೨ ॥
ಗವಾಂ ಕೋಟಿಪ್ರದಾನಸ್ಯ ಯತ್ಪುಣ್ಯಂ ತದವಾಪ್ನುಯಾತ್ ॥ ೨೩ ॥

ಆಷಾಢೇ ಚೋಗ್ರನಾಮಾನಂ ಇಷ್ಟ್ವಾ ಪ್ರಾಶ್ಯ ಚ ಗೋಮಯಂ ।
ಸೌತ್ರಾಮಣ್ಯಾಸ್ತು ಯಜ್ಞಸ್ಯ ಫಲಮಷ್ಟಗುಣಂ ಭವೇತ್ ॥ ೨೪ ॥

ಪಾಲಾಶಂ ಶ್ರಾವಣೇ ಪ್ರೋಕ್ತಂ ಶರ್ವಂ ಸಂಪೂಜ್ಯ ನಾರದ ।
ಪ್ರಾಶಯಿತ್ವಾರ್ಕಪತ್ರಾಣಿ ಕಲ್ಪಂ ಶಿವಪುರೇ ವಸೇತ್ ॥ ೨೫ ॥

ಮಾಸೇ ಭಾದ್ರಪದೇಽಷ್ಟಮ್ಯಾಂ ತ್ರ್ಯಂಬಕಂ ಸಂಪ್ರಪೂಜಯೇತ್ ।
ಪ್ರಾಶನಂ ಬಿಲ್ವಪತ್ರಸ್ಯ ಸರ್ವದೀಕ್ಷಾಫಲಂ ಭವೇತ್ ॥ ೨೬ ॥

೨೨-೨೩. ಜ್ಯೇಷ್ಠಮಾಸದಲ್ಲಿ ಬಸರೀಮರದ ಕಾಷ್ಠದಿಂದ ದಂತಧಾವನ ಮಾಡಿಕೊಂಡು ಪೂಜ್ಯನಾದ ಪಶುಪತಿಯನ್ನಾರಾಧಿಸಬೇಕು. ಅನಂತರ ಹಸುವಿನ ಕೋಡನ್ನು ತೊಳೆದ ನೀರಿನಿಂದ ತೃಪ್ತನಾಗಿ ದೇವರ ಸನ್ನಿಧಿಯಲ್ಲಿಯೇ ಮಲಗಿರ ಬೇಕು. ಹೀಗೆ ಮಾಡಿದರೆ ಕೋಟಿಗೋದಾನಗಳ ಪುಣ್ಯವು ಲಭಿಸುವುದು.

೨೪. ಆಷಾಢಮಾಸದ ಅಷ್ಟಮಿಯದಿನವೂ, ಉಗ್ರನಾಮಕನಾದ ಈಶ್ವರ ನನ್ನು ಪೂಜಿಸಿ ಗೋಮಯಪ್ರಾಶನದಿಂದ ದಿನವನ್ನು ಕಳೆಯಬೇಕು. ಹೀಗೆ ಮಾಡು ವುದರಿಂದ ಸುತ್ರಾಮಯಾಗದ ಫಲವನ್ನು ಅನಾಯಾಸವಾಗಿ ಹೊಂದಬಹುದು.

೨೫. ಶ್ರಾವಣಮಾಸದಲ್ಲಿ ಮುತ್ತುಗದ ಕಡ್ಡಿಯು ದಂತಧಾವನಕ್ಕೆ ಶ್ರೇಷ್ಠ ವಾದದ್ದೆಂದು ಹೇಳಲ್ಪಟ್ಟಿದೆ. ಶರ್ವನಾಮಕನಾದ ಶಿವನೇ ಪೂಜ್ಯದೇವತೆ. ಇದಾದ ನಂತರ ಎಕ್ಕದ ಎಲೆಗಳನ್ನು ತಿಂದು ವ್ರತವನ್ನು ಪೂರ್ತಿಗೊಳಿಸಿದರೆ ಆತನು ಒಂದು ಕಲ್ಪಪರ್ಯಂತ ಕೈಲಾಸದಲ್ಲಿ ವಾಸಮಾಡುವನು.

೨೬. ಭಾದ್ರಪದ ಬಹುಳ ಅಷ್ಟಮಿಯದಿನವೂ, ಸ್ನಾನಾದಿಗಳಿಂದ ಶುದ್ಧನಾಗಿ ತ್ರ್ಯಂಬಕನೆಂಬ ಹೆಸರುಳ್ಳ ಈಶ್ವರನನ್ನು ಅರ್ಚಿಸಬೇಕು. ಬಿಲ್ವಪತ್ರಪ್ರಾಶನದಿಂದ ವ್ರತವನ್ನು ಪೂರ್ತಿಗೊಳಿಸಬೇಕು. ಇದರಿಂದ ಸಮಸ್ತಯಾಗಗಳ ಫಲವನ್ನು ಹೊಂದಬಹುದು.

ಆಶ್ವಿನೇ ಜಂಬುವೃಕ್ಷಸ್ಯ ದಂತಕಾಷ್ಠಮುದೀರಿತಂ ।
ಈಶ್ವರಂ ಪೂಜಯೇದ್ಭಕ್ತ್ಯಾ ಪ್ರಾಶಯೇತ್ತಂಡುಲೋದಕಂ ॥ ೨೭ ॥

ಪೌಂಡರೀಕಸ್ಯ ಯಜ್ಞಸ್ಯ ಫಲಮಷ್ಟಗುಣಂ ಲಭೇತ್ ।
ಮಾಸೇ ತು ಕಾರ್ತಿಕೇಽಷ್ಟಮ್ಯಾಂ ಈಶಾನಾಖ್ಯಂ ಪ್ರಪೂಜಯೇತ್ ॥ ೨೮ ॥

ಪಂಚಗವ್ಯಂ ಸಕೃತ್ಪೀತ್ವಾ ಅಗ್ನಿಷ್ಟೋಮಫಲಂ ಲಭೇತ್ ।
ವರ್ಷಾಂತೇ ಭೋಜಯೇದ್ವಿಪ್ರಾನ್ ಶಿವಭಕ್ತಿಪರಾಯಣಾನ್ ॥೨೯ ॥

ಪಾಯಸಂ ಮಧುಸಂಯುಕ್ತಂ ಘೃತೇನ ಸುಪರಿಪ್ಲುತಂ ।
ಶಕ್ತ್ಯಾ ಹಿರಣ್ಯಂ ವಾಸಾಂಸಿ ಭಕ್ತ್ಯಾ ತೇಭ್ಯೋ ನಿವೇದಯೇತ್ ॥ ೩೦ ॥
ದೇವಾಯ ದದ್ಯಾದ್ದಧ್ಯನ್ನಂ ವಿತಾನಧ್ವಜಚಾಮರಂ ।
ಕೃಷ್ಣಾಂ ಪಯಸ್ವಿನೀಂ ಗಾಂ ಚ ಘಂಟಾಂ ಕಂಚುಕವಾಸಸೀ ॥ ೩೧ ॥

---

೨೭. ಆಶ್ವಯುಜ ಮಾಸದಲ್ಲಿ ಅತ್ತಿಯಮರದ ಕಡ್ಡಿಯಿಂದಲೇ ದಂತಧಾವನ ಮಾಡಿಕೊಂಡು ಈಶ್ವರನನ್ನು ಪೂಜಿಸಿ ಅನಂತರ ಅಕ್ಕಿತೊಳೆದ ನೀರನ್ನು ಕುಡಿಯ ಬೇಕು.

೨೮. ಹಾಗೆ ಮಾಡುವುದರಿಂದ ಪೌಂಡರೀಕಯಾಗದ ಎಂಟರಷ್ಟು ಫಲವು ಸಿಕ್ಕುವುದು. ಹಾಗೆಯೇ ಕಾರ್ತಿಕಮಾಸದ ಅಷ್ಟಮಿಯ ದಿನವೂ ಈಶಾನನೆಂಬ ಹೆಸರಿನ ಪರಮೇಶ್ವರನನ್ನು ಪೂಜಿಸಬೇಕು.

೨೯. ಆರಾಧನೆಯ ಅನಂತರ ಪಂಚಗವ್ಯವನ್ನು ಕುಡಿದು ವ್ರತಪೂರ್ತಿಮಾಡಿದರೆ ಅಗ್ನಿಷ್ಟೋಮಯಾಗದ ಫಲವನ್ನು ಪಡೆಯಬಹುದು. ಹೀಗೆ ಒಂದು ವರ್ಷಕಾಲ ಪ್ರತಿ ತಿಂಗಳಲ್ಲಿಯೂ ವ್ರತವನ್ನು ಮಾಡಿ ಕೊನೆಯಲ್ಲಿ ಶಿವಭಕ್ತಿಪರಾಯಣರಾಗಿರುವ ಬ್ರಾಹ್ಮಣರನ್ನು ಅನ್ನದಾನದಿಂದ ತೃಪ್ತಿಪಡಿಸಬೇಕು.

೩೦. ಭೋಜನಾನಂತರ ಬ್ರಾಹ್ಮಣರಿಗೆ ಜೇನುತುಪ್ಪ, ತುಪ್ಪ, ಪಾಯಸ, ಸುವರ್ಣ, ವಸ್ತ್ರಗಳು ಇವುಗಳನ್ನು ದಾನವಾಗಿ ಕೊಡಬೇಕು.

೩೧. ದೇವರಿಗೆ ಮೊಸರನ್ನದ ನಿವೇದನವನ್ನು ಮಾಡಬೇಕು. ಅಲ್ಲದೆ ಚಾಮರ, ಮೇಲ್ಕಟ್ಟು, ಧ್ವಜ, ಕರಿಯಬಣ್ಣದ ಹಾಲುಕರೆಯುವ ಹಸು, ಘಂಟೆ, ಕಂಚುಕ, ವಸ್ತ್ರ ಇವೇ ಮೊದಲಾದುವುಗಳನ್ನು ಭಕ್ತಿಯಿಂದ ಅರ್ಪಿಸಬೇಕು.

ಸರತ್ನಾಂ ತಾಮ್ರಕಲಶೀಂ ಗಾಮಲಂಕೃತ್ಯ ನಾರದ ।
ಅಲಂಕಾರಂ ಚ ವಸ್ತ್ರಂ ಚ ದಕ್ಷಿಣಾಂ ಚ ಸ್ವಶಕ್ತಿತಃ ॥ ೩೨ ॥

ಕಲ್ಪಕೋಟಿಶತಂ ಸಾಗ್ರಂ ಶಿವಲೋಕೇ ಮಹೀಯತೇ ।
ಕೃಷ್ಣಾಷ್ಟಮೀವ್ರತಂ ಸಮ್ಯಕ್ ಪ್ರಾಪ್ತಂ ದೇವಋಷೇ ಮಯಾ ॥ ೩೩ ॥
ಯದುಕ್ತಂ ದೇವದೇವೇನ ದೇವ್ಯೈ ವಿಶ್ವಸೃಜಾ ಪುರಾ ॥ ೩೪ ॥

॥ ಸೂತ ಉವಾಚ ॥

ಏವಂ ನಂದೀಶ್ವರಾಚ್ಛೃತ್ವಾ ನಾರದೋ ಮುನಿಪುಂಗವಾಃ ।
ಕೃಷ್ಣಾಷ್ಟಮೀವ್ರತಂ ಪುಣ್ಯಂ ಯಯೌ ಬದರಿಕಾಶ್ರಮಂ ॥ ೩೫ ॥

ವ್ರತಸ್ಯಾಸ್ಯ ಪ್ರಭಾವಂ ಯಃ ಪಠೇದ್ವಾ ಶೃಣುಯಾದಪಿ ।
ಅತಿಸತ್ರಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತ್ಯನುತ್ತಮಂ ॥ ೩೬ ॥

---

೩೨. ರತ್ನಸಹಿತವಾದ ತಾಮ್ರದ ಕಲಶಗಳನ್ನು ದಾನಮಾಡಬೇಕು. ತನ್ನ ಶಕ್ತಿಯನ್ನು ಅನುಸರಿಸಿ ದಕ್ಷಿಣೆಯನ್ನೂ, ವಸ್ತ್ರಾಲಂಕಾರಗಳನ್ನೂ ಗೋದಾನವನ್ನೂ ಪಾತ್ರವರಿತು ದಾನಮಾಡಬೇಕು.

೩೩–೩೪. ಹೀಗೆ ಮಾಡಿದವನು ಶಿವಲೋಕದಲ್ಲಿ ಕೋಟಿಕಲ್ಪಪರ್ಯಂತವಾಗಿ ವಾಸಮಾಡುವನು. ಎಲೈ ದೇವಋಷಿಯಾದ ನಾರದನೇ, ಹಿಂದೆ ಇದೇ ವ್ರತದ ವಿಧಾನವು ಪಾರ್ವತಿಗೆ ಪರಮೇಶ್ವರನಿಂದ ಹೇಳಲ್ಪಟ್ಟಿತು. ಅದನ್ನೇ ಈಗ ನಿನಗೆ ತಿಳಿಯ ಹೇಳಿರುವೆನು.

೩೫. ಹೀಗೆ ನಾರದಮಹರ್ಷಿಯು ನಂದೀಶ್ವರನಿಂದ ಕೃಷ್ಣಾಷ್ಟಮೀ ವ್ರತದ ಮಹಿಮೆಯನ್ನು ಕೇಳಿ, ಸಂತುಷ್ಟನಾಗಿ ಬದರಿಕಾಶ್ರಮವನ್ನು ಕುರಿತು ಪ್ರಯಾಣ ಮಾಡಿದನು.

೩೬. ಈ ವ್ರತದ ಮಹಿಮೆಯನ್ನು ಕೇಳಿದವರೂ, ಓದಿದವರೂ ಸಹ ಅತಿ ಸತ್ರಯಾಗದ ಉತ್ತಮಫಲವನ್ನು ಪಡೆಯುವರು.

**ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಶ್ರೀ ಸೂತಶೌನಕ
ಸಂವಾದೇ ಕೃಷ್ಣಾಷ್ಟಮೀ ವ್ರತಂ ನಾಮ
ಚತುರ್ದಶೋಽಧ್ಯಾಯಃ**

ಇಲ್ಲಿಗೆ ಬ್ರಹ್ಮಪುರಾಣದ ಉಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ
ಸಂವಾದ ರೂಪವಾಗಿ ಕೃಷ್ಣಾಷ್ಟಮೀ ವ್ರತ ವಿಚಾರವೆಂಬ
ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಪಂಚದಶೋऽಧ್ಯಾಯಃ.

॥ ಸೂತ ಉವಾಚ ॥

ಅನ್ಯದ್ವ್ರತಂ ಪಾಪಹರಂ ದೇವದೇವಸ್ಯ ಚಕ್ರಿಣಃ ।
ಯದುಕ್ತಂ ಭಾನುನಾ ಪೂರ್ವಂ ಯಾಜ್ಞವಲ್ಕ್ಯಾಯ ಯೋಗಿನೇ ॥ ೧ ॥

॥ ಯಾಜ್ಞವಲ್ಕ್ಯ ಉವಾಚ ॥

ಜಯಾ ಚ ವಿಜಯಾ ಚೈವ ಕಿಂಫಲಾ ಕಿಂಪರಾಯಣಾ ।
ತಸ್ಯಾಂ ವಿಶಿಷ್ಟಂ ಯತ್ಪುಣ್ಯಂ ವದ ಕಾಶ್ಯಪನಂದನ ॥ ೨ ॥

॥ ಸೂರ್ಯ ಉವಾಚ ॥

ದ್ವಾದಶೀ ವಿಷ್ಣುದಯಿತಾ ದ್ವಾದಶೀ ವೈಷ್ಣವೀ ತಿಥಿಃ ।
ಶ್ರವಣೇನ ಸಮಾಯುಕ್ತಾ ಕದಾಚಿದ್ಯದಿ ಲಭ್ಯತೇ ॥ ೩ ॥

ಹದಿನೈದನೆಯ ಅಧ್ಯಾಯವು.

೧. "ಎಲೈ ವೈಶಂಪಾಯನ ಋಷಿಯೇ! ನಿಮಗೆ ಮತ್ತೊಂದು ವೈಷ್ಣವ ವ್ರತವನ್ನು ಹೇಳುವೆನು. ಇದನ್ನು ಹಿಂದೆ ಸೂರ್ಯದೇವನು ಯಾಜ್ಞವಲ್ಕ್ಯಋಷಿಗೆ ವಿವರಿಸಿ ಹೇಳಿದನು," ಎಂದು ಸೂತ ಮಹರ್ಷಿಯು ಶ್ರವಣದ್ವಾದಶೀ ವ್ರತವನ್ನು ವೈಶಂಪಾಯನಾದಿಗಳಿಗೆ ವಿವರಿಸಲಾರಂಭಿಸಿದನು.

೨. ಯಾಜ್ಞವಲ್ಕ್ಯಋಷಿಯು ಒಂದುಸಾರಿ ಸೂರ್ಯದೇವನನ್ನು ಕುರಿತು ಸ್ವಾಮಿಯೇ! ಜಯಾ, ವಿಜಯಾ, ಎಂಬ ಎರಡು ವ್ರತಗಳು ಎಂತಹ ಫಲವನ್ನು ಕೊಡುವುವು?. ಅವುಗಳನ್ನು ನಡೆಸುವ ವಿಧಾನವು ಹೇಗೆ? ಅದರಿಂದ ಬರುವ ಸುಕೃತಸ್ವರೂಪವೇನು ? ನನಗೆ ಅದನ್ನು ತಿಳಿಸಬೇಕು. ಎಂದು ಕೇಳಲಾಗಿ,

೩. ಸೂರ್ಯದೇವನು ಹೀಗೆ ಉಪದೇಶಿಸಿದನು. ದ್ವಾದಶೀ ಎಂಬುದು ವಿಷ್ಣುವಿಗೆ ಪ್ರೀತಿಪಾತ್ರವಾದ ತಿಥಿ. ವಿಷ್ಣುಪೂಜೆಯೇ ದ್ವಾದಶಿಯಲ್ಲಿ ಶ್ರೇಷ್ಠವಾದದ್ದು ಶ್ರವಣನಕ್ಷತ್ರ ಯುಕ್ತವಾದ ಆ ತಿಥಿಯನ್ನು ಶ್ರವಣದ್ವಾದಶೀ ಎನ್ನುವರು.

ಶುಕ್ಲಪಕ್ಷೇ ದ್ವಿಜಶ್ರೇಷ್ಠ ವಿಜಯಾ ಸಾ ಪ್ರಕೀರ್ತಿತಾ ।
ಉಪೋಷ್ಯಾ ಸಾ ಪ್ರಯತ್ನೇನ ಸರ್ವಪಾಪಪ್ರಣಾಶನೀ ॥ ೪ ॥

ಯಾ ತು ಪುಷ್ಯೇಣ ಸಂಯುಕ್ತಾ ಫಾಲ್ಗುನಸ್ಯ ಸಿತಾ ತು ವೈ ।
ಸಾ ಜಯಾ ದ್ವಾದಶೀ ನಾಮ ಸರ್ವಪಾಪಕ್ಷಯಂಕರೀ ॥ ೫ ॥

ಕೃತಾರ್ಥೋ ಜಾಯತೇ ಮರ್ತ್ಯಃ ತಾಮುಪೋಷ್ಯ ದ್ವಿಜೋತ್ತಮ ।
ತಸ್ಯಾಂ ಸ್ನಾತಃ ಸದಾ ಸ್ನಾತೋ ಭವೇದ್ವೈ ನಾತ್ರ ಸಂಶಯಃ ॥ ೬ ॥

ಸಂಪೂಜ್ಯ ವಸ್ತ್ರಪುಷ್ಪಾದ್ಯೈಃ ಫಲಂ ಸಾಗ್ರಂ ಸಮಶ್ನುತೇ ।
ಏಕಂ ಜಪ್ತ್ವಾ ಸಹಸ್ರಸ್ಯ ಜಪ್ತಸ್ಯಾಪ್ನೋತಿ ವೈ ಫಲಂ ॥ ೭ ॥

ದಾನಂ ಸಹಸ್ರಗುಣಿತಂ ತಥಾ ವೈ ವಿಪ್ರಭೋಜನಂ ।
ಹೋಮಶ್ಚೈವೋಪವಾಸಶ್ಚ ಸಹಸ್ರಸ್ಯ ಫಲಪ್ರದಃ ॥ ೮ ॥

---

೪. ಶುಕ್ಲಪಕ್ಷದ ದ್ವಾದಶೀತಿಥಿಯಲ್ಲಿ ಶ್ರವಣನಕ್ಷತ್ರವು ಯುಕ್ತವಾಗಿದ್ದರೆ ಆ ದಿನಕ್ಕೆ ವಿಜಯಾ ಎಂದು ಹೆಸರು. ಆ ದಿವಸ ಉಪವಾಸಮಾಡುವುದು ಸಮಸ್ತ ಪಾಪನಿವಾರಕವಾದದ್ದು.

೫. ಫಾಲ್ಗುಣ ಶುದ್ಧ ದ್ವಾದಶಿಯು ಪುಷ್ಯನಕ್ಷತ್ರದಿಂದ ಯುಕ್ತವಾದರೆ ಆ ತಿಥಿಯನ್ನು ಜಯಾ ದ್ವಾದಶೀ ಎನ್ನುವರು. ಆ ದಿನವು ಬಹಳ ಪವಿತ್ರವೂ ಪಾಪ ನಾಶಕವೂ ಆದದ್ದು.

೬. ಆ ದಿವಸ ಉಪವಾಸಮಾಡುವುದರಿಂದ ಮನುಷ್ಯನು ಧನ್ಯನಾಗುತ್ತಾನೆ. ಆ ತಿಥಿಯಲ್ಲಿ ವಿಧಿವತ್ತಾಗಿ ಸ್ನಾನಮಾಡುವುದರಿಂದ ನಿತ್ಯವೂ ಸ್ನಾನಮಾಡಿದ ಫಲವು ದೊರಕುತ್ತದೆ.

೭. ಆ ದಿವಸ ಮಹಾವಿಷ್ಣುವನ್ನು ವಸ್ತ್ರಪುಷ್ಪಾದಿಗಳಿಂದ ಪೂಜಿಸಿದರೆ ಸಂಪೂರ್ಣವಾದ ಪೂಜಾಫಲವು ಬರುವುದು. ಮೂಲಮಂತ್ರವನ್ನು ಅಂದು ಒಂದೇ ಸಾರಿ ಜಪಮಾಡಿದರೂ, ಸಹಸ್ರಮಂತ್ರಜಪದ ಪುಣ್ಯವು ಲಭಿಸುವುದು.

೮. ಶ್ರವಣದ್ವಾದಶಿಯಲ್ಲಿ ಮಾಡಿದ ದಾನವೂ, ಬ್ರಾಹ್ಮಣಭೋಜನವೂ, ಹೋಮವೂ, ಉಪವಾಸಾದಿಗಳೂ ಸಹಸ್ರಗುಣಿತವಾಗಿ ಫಲವನ್ನುಕೊಡುವುವು. ಅಂತೂ ದಾನಾದಿಗಳಿಗೆ ಆ ದಿನವು ಅತ್ಯಂತ ಶ್ರೇಷ್ಠವಾದದ್ದು.

ಋಚಮೇಕಾಮಧೀತೇ ಯೋ ವಿಪ್ರಃ ಶ್ರದ್ಧಾಸಮನ್ವಿತಃ ।
ಋಗ್ವೇದಸ್ಯ ಸಮಗ್ರಸ್ಯ ಸದ್ಯೈವ ಫಲಮಶ್ನುತೇ ॥ ೯ ॥

ಸಪ್ತಜನ್ಮಕೃತಂ ಪಾಪಂ ಸ್ವಲ್ಪಂ ವಾ ಯದಿ ವಾ ಬಹು ।
ತನ್ನಾಶಯತಿ ಗೋವಿಂದಃ ತಸ್ಯಾಮಭ್ಯರ್ಚ್ಯ ಯತ್ನತಃ ॥ ೧೦ ॥

ಯಶ್ಚೋಪವಾಸಂ ಕುರುತೇ ತಸ್ಯಾಂ ಸ್ನಾತೋ ದ್ವಿಜೋತ್ತಮ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ ॥ ೧೧ ॥

ಯಃ ಕೃತ್ವಾ ದ್ವಾದಶೀಮಿಮಾಂ ಕ್ಷಪಯೇದ್ಭಕ್ತಿಮಾನ್ನರಃ ।
ಬ್ರಹ್ಮಣೋ ದಿವಸಂ ಯಾವತ್ ತಾವತ್ಸ್ವರ್ಗೇ ಮಹೀಯತೇ ॥ ೧೨ ॥

ತಸ್ಮಿನ್ ದಿನೇ ತು ಸಂಪ್ರಾಪ್ತೇ ಯತ್ಕರ್ತವ್ಯಂ ಬ್ರವೀಮ್ಯಹಂ ।
ಏಕಾದಶ್ಯಾಂ ನಿರಾಹಾರೋ ದ್ವಾದಶ್ಯಾಂ ವಿಷ್ಣುಮರ್ಚಯೇತ್ ॥ ೧೩ ॥

---

೯. ಯಾವ ಬ್ರಾಹ್ಮಣನು ಆದಿನ ಋಗ್ವೇದದ ಒಂದು ಋಕ್ಕನ್ನಾದರೂ ಪಠಿಸುವನೋ ಅವನು ಪೂರ್ತಿ ಋಗ್ವೇದ ಪಾರಾಯಣದ ಫಲವನ್ನು ಹೊಂದುವನು

೧೦. ಆ ದ್ವಾದಶಿಯಲ್ಲಿ ಮಹಾವಿಷ್ಣುವನ್ನು ಭಕ್ತಿಯಿಂದ ಪೂಜಿಸಿದರೆ ಮಹಾ ವಿಷ್ಣುವು ಸುಪ್ರೀತನಾಗಿ ಭಕ್ತರ ಏಳು ಜನ್ಮಗಳ ಪಾಪರಾಶಿಯು ಎಷ್ಟೇ ಅಧಿಕ ವಾಗಿದ್ದರೂ, ಅಲ್ಪವಾಗಿದ್ದರೂ, ಅದನ್ನು ಸಂಪೂರ್ಣವಾಗಿ ನಾಶಮಾಡುವನು.

೧೧. ಯಾರು ಆ ದಿವಸ ವಿಧಿವತ್ತಾಗಿ ಸ್ನಾನಮಾಡಿ ಉಪವಾಸಮಾಡು ವರೋ ಅವರು ಸಮಸ್ತಪಾಪಗಳನ್ನೂ ಕಳೆದುಕೊಂಡು ವಿಷ್ಣುಲೋಕವನ್ನು ಹೊಂದುವರು.

೧೨. ಯಾವನು ಭಕ್ತಿಯಿಂದ ಆ ದ್ವಾದಶಿಯ ರಾತ್ರಿಯನ್ನು ಜಾಗರಣೆ ಯಿಂದ ಕಳೆಯುವನೋ, ಆತನು ಬ್ರಹ್ಮನ ಒಂದುದಿನಪರ್ಯಂತ ಸ್ವರ್ಗದಲ್ಲಿ ವಾಸ ಮಾಡುವನು.

೧೩. ಶ್ರವಣದ್ವಾದಶಿಯ ದಿವಸ ಮಾಡಬೇಕಾದ ವ್ರತದ ವಿಧಾನವನ್ನು ಈಗ ಹೇಳುವೆನು. ಹಿಂದಿನದಿವಸದ ಏಕಾದಶೀತಿಥಿಯಲ್ಲಿ ಉಪವಾಸಮಾಡಿ, ದ್ವಾದಶಿಯದಿನ ವಿಷ್ಣುವನ್ನು ಪೂಜಿಸಬೇಕು.

ಗಂಧಪುಷ್ಪೋಪಹಾರೈಶ್ಚ ವಿವಿಧೈರ್ವಿಧಿವನ್ನರಃ ।
ಮತ್ಸ್ಯಾಯ ಪಾದೌ ಪ್ರಥಮಂ ಕೂರ್ಮಾಯ ಚ ತಥಾ ಕಟಿಂ ॥ ೧೪ ॥

ವರಾಹಾಯೇತಿ ಜಠರಂ ನರಸಿಂಹಾಯ ವಾ ಉರಃ ।
ವಾಮನಾಯೇತಿ ವೈಕುಂಠಂ ಭುಜಂ ರಾಮದ್ವಯೇತಿ ಚ ॥ ೧೫ ॥

ಯಜೇದ್ರಾಮೇತಿ ಚ ಮುಖಂ ಪ್ರದ್ಯುಮ್ನಾಯೇತಿ ನಾಸಿಕಾಂ ।
ಕೃಷ್ಣನಾಮ್ನಾ ಚ ನೇತ್ರೇ ದ್ವೇ ಬುದ್ಧನಾಮ್ನಾ ತಥಾ ಶಿರಃ ॥ ೧೬ ॥

ಕಲ್ಕಿನಾಮ್ನಾ ತಥಾ ಕೇಶಾನ್ ವಾಮನೇತಿ ಚ ಸರ್ವತಃ ।
ಭಕ್ತ್ಯಾ ಚಾರಾಧ್ಯ ಗೋವಿಂದಂ ಗೋಪಾಲಂ ಚ ತಥಾ ನಿಶಿ ॥ ೧೭ ॥

ತತಸ್ತಸ್ಯಾಗ್ರತಃ ಶುದ್ಧಂ ನ್ಯಸೇತ್ ಕೃಷ್ಣಾಜಿನಂ ಬುಧಃ ।
ತಸ್ಯೋಪರಿ ತಿಲಾನಾಂ ತು ಕೃಷ್ಣಾನಾಮಾಢಕಂ ನ್ಯಸೇತ್ ॥ ೧೮ ॥

---

೧೪. ಮೊದಲು ಗಂಧ, ಹೂವು, ನೈವೇದ್ಯಾದಿಗಳಿಂದ ಸ್ವಾಮಿಯನ್ನು ಅರ್ಚಿಸಬೇಕು. ಅನಂತರ ಮತ್ಸ್ಯಾವತಾರಿಯಾದ ವಿಷ್ಣುವಿಗೆ ನಮಸ್ಕಾರವು ಎಂದು ಹೇಳುತ್ತಾ, ವಿಷ್ಣುವಿನ ಪಾದಗಳನ್ನು ಪೂಜಿಸಬೇಕು. ಹಾಗೆಯೇ ಕೂರ್ಮಾಯ ನಮಃ ಎಂಬ ಮಂತ್ರದಿಂದ ಕಟಿಪ್ರದೇಶವನ್ನು ಪೂಜಿಸಬೇಕು.

೧೫. ವರಾಹಾಯನಮಃ ಎಂಬ ಮಂತ್ರದಿಂದ ಜಠರಭಾಗವನ್ನೂ, ನರಸಿಂಹಾಯನಮಃ ಎಂಬ ಮಂತ್ರದಿಂದ ಎದೆಯನ್ನೂ, ವಾಮನಾಯನಮಃ ಎಂಬ ಮಂತ್ರದಿಂದ ವೈಕುಂಠನಾಯಕನಾದ ಪರಮಾತ್ಮನನ್ನೂ, ಶ್ರೀರಾಮ ಮತ್ತು ಪರಶುರಾಮಾಯನಮಃ ಎಂಬ ಮಂತ್ರಗಳಿಂದ ಎರಡುಭುಜಗಳನ್ನೂ ಅರ್ಚಿಸಬೇಕು.

೧೬. ರಾಮನ ಹೆಸರಿನಿಂದ ಸ್ವಾಮಿಯ ಮುಖವನ್ನೂ, ಪ್ರದ್ಯುಮ್ನನೆಂಬ ಹೆಸರಿನಿಂದ ಮೂಗನ್ನೂ, ಕೃಷ್ಣನೆಂಬನಾಮದಿಂದ ಎರಡು ಕಣ್ಣುಗಳನ್ನೂ, ಬುದ್ಧನೆಂಬ ಹೆಸರಿನಿಂದ ಶಿರಸ್ಸನ್ನೂ ಅರ್ಚಿಸಬೇಕು.

೧೭. ಕಲ್ಕಿನಾಮದಿಂದ ಕೂದಲುಗಳನ್ನೂ, ವಾಮನನೆಂಬ ಹೆಸರಿನಿಂದ ಸರ್ವಾಂಗಗಳನ್ನೂ, ಭಕ್ತಿಯಿಂದ ಅರ್ಚಿಸಬೇಕು. ಗೋಪಾಲಕನಾದ ಶ್ರೀಮಹಾವಿಷ್ಣುವನ್ನು ಈರೀತಿ ಆ ದ್ವಾದಶಿಯ ರಾತ್ರಿಯೂ ಭಕ್ತಿಯಿಂದ ಪೂಜಿಸಬೇಕು.

೧೮. ಹೀಗೆ ಅರ್ಚಿಸಿದಮೇಲೆ ದೇವದೇವನ ಮುಂಭಾಗದಲ್ಲಿ ಶುದ್ಧವಾದ ಕೃಷ್ಣಾಜಿನವನ್ನು ಹಾಸಬೇಕು. ಅದರಮೇಲೆ ಒಂದುಬಳ್ಳ ಕರೀಎಳ್ಳನ್ನು ಹರಡಬೆಕು.

ಮಧ್ಯತಃ ಪ್ರಸ್ಥಮೇಕಂ ತು ದರಿದ್ರಃ ಕುಡವಂ ತಥಾ ।
ತಿಲಾಲಾಭೇ ಯವಾಃ ಕಾರ್ಯಾ ಗೋಧೂಮಾಸ್ತದಲಾಭತಃ　　॥ ೧೯ ॥

ಸುಖಂ ತತ್ರ ಫಲಂ ಬ್ರಹ್ಮಂಸ್ತಿಲೈಃ ಪ್ರಾಪ್ನೋತಿ ಮಾನವಃ ।
ಸೌವರ್ಣಂ ರೌಪ್ಯತಾಮ್ರಂ ವಾ ಪಾತ್ರಂ ಕುರ್ಯಾತ್ ಸ್ವಶಕ್ತಿತಃ　　॥ ೨೦॥

ಪ್ರಚ್ಛಾದ್ಯ ಪಾತ್ರಂ ವಾಸೋಭಿರಹತೈಃ ಸುಪರೀಕ್ಷಿತೈಃ ।
ಸೌವರ್ಣಂ ವಾಮನಂ ಕೃತ್ವಾ ಸಾಕ್ಷಸೂತ್ರಕಮಂಡಲುಂ　　॥ ೨೧ ॥

ಯಥಾಶಕ್ತ್ಯಾ ಕೃತಂ ಹ್ರಸ್ವಂ ಕೃತಯಜ್ಞೋಪವೀತಿನಂ ।
ಏವಂ ರೂಪಂ ತು ತಂ ಕೃತ್ವಾ ವಾಮನಂ ಭಕ್ತಿಮಾನ್ನರಃ　　॥ ೨೨ ॥

ಸ್ಥಾಪಯೇತ್ತಂತುಪಾತ್ರಸ್ಥಂ ಭಕ್ತ್ಯಾ ಸಮ್ಯಗುಪೋಷಿತಃ ।
ಪುಷ್ಪೈಃ ಗಂಧೈಃ ಫಲೈರ್ಧೂಪೈಃ ಕಾಲೋತ್ಥೈರರ್ಚಯೇದ್ಧರಿಂ　　॥ ೨೩ ॥

---

೧೯. ಆ ಕೃಷ್ಣಾಜಿನದ ಮಧ್ಯದಲ್ಲಿ ಎಳ್ಳು ಒಂದುಬಳ್ಳ, ಸಾಧ್ಯವಿಲ್ಲದಿದ್ದರೆ ಒಂದು ಸೇರನ್ನಾದರೂ ಹಾಕಿರಬೇಕು. ಅದಕ್ಕೂ ಶಕ್ತಿಯಿಲ್ಲದ ದರಿದ್ರನು ಒಂದು ಸೊಲಿಗೆಯಷ್ಟನ್ನಾದರೂ ಹಾಕಬಹುದು. ಎಳ್ಳುಸಿಕ್ಕದಿದ್ದರೆ ಯವ (ಅಕ್ಕಿ), ಅದೂ ದೊರೆಯದಿದ್ದರೆ ಗೋಧಿ ಹೀಗೆ ಧಾನ್ಯಗಳನ್ನು ಇಡಬೇಕು.

೨೦. ಅದರಲ್ಲಿ ಎಳ್ಳನ್ನು ಹಾಕುವುದೇ ಅತ್ಯಂತ ಶ್ರೇಷ್ಠವು. ಅದರಿಂದ ಬರುವ ಫಲವೇ ಅಧಿಕ. ಆ ಎಳ್ಳಿನಮೇಲೆ ತನ್ನ ಶಕ್ತಿಯನ್ನನುಸರಿಸಿ ಚಿನ್ನದ ಅಥವಾ ಬೆಳ್ಳಿಯ ಅಥವಾ ತಾಮ್ರದ ಕಲಶವನ್ನು ಇಡಬೇಕು.

೨೧. ಆ ಕಲಶದಮೇಲೆ ಹರಿಯದಿರುವ ಹೊಸದಾದ ವಸ್ತ್ರಗಳನ್ನು ಹೊದಿಸಬೇಕು. ಕಲಶದೊಳಕ್ಕೆ ಚಿನ್ನದಿಂದ ನಿರ್ಮಿತವಾಗಿ, ಜಪಸರ, ಕಮಂಡಲು ಇವುಗಳನ್ನು ಹಿಡಿದಿರುವಂತಹ ವಾಮನ ಮೂರ್ತಿಯ ಪ್ರತಿಮೆಯನ್ನು ಹಾಕಬೇಕು.

೨೨. ಆ ಪ್ರತಿಮೆಯೂ ಸಹ ಚಿಕ್ಕದಾಗಿಯೇ ಇರಬೇಕು. ಯಜ್ಞೋಪವೀತವನ್ನು ಧರಿಸಿರುವಂತೆ ವಾಮನ ಮೂರ್ತಿಯನ್ನು ಕೆತ್ತಿಸಿರಬೇಕು. ಹೀಗೆ ವಾಮನ ಮೂರ್ತಿಯ ಆಕಾರದ ಪ್ರತಿಮೆಯನ್ನು ಆ ಪಾತ್ರೆಯೊಳಕ್ಕೆ ಹಾಕಬೇಕು.

೨೩. ಆ ಪ್ರತಿಮೆಯನ್ನು ದಾರದಿಂದ ಸುತ್ತಿರುವ ಕಲಶಕ್ಕೆ ಹಾಕಿಸಬೇಕು. ಆದಿನ ತಾನು ಉಪವಾಸದಿಂದಿದ್ದು, ಹೂವು, ಗಂಧ, ಹಣ್ಣು, ಧೂಪದೀಪಗಳಿಂದ ಶ್ರೀ ವಿಷ್ಣುವನ್ನು ಭಕ್ತಿಯಿಂದ ಅರ್ಚಿಸಬೇಕು.

ಪೂರ್ವೋಕ್ತಮಂತ್ರವಿಧಿನಾ ಭಕ್ಷ್ಯೈರ್ಭೋಜ್ಯೈಶ್ಚ ಭಕ್ತಿತಃ ।
ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹೋಽಥ ವಾಮನಃ ॥ ೨೪ ॥

ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧಃ ಕಲ್ಕೀ ಚ ತೇ ದಶ ।
ಏತೈರ್ಮಂತ್ರಪದೈರ್ದೇವಂ ನೈವೇದ್ಯೈಶ್ಚ ಪ್ರಪೂಜಯೇತ್ ॥ ೨೫ ॥

ಭಕ್ತಸ್ಯಾತ್ರ ವಿಶೇಷೇಣ ಫಲಂ ಕೋಟಿಗುಣೋತ್ತರಂ ।
ತತಸ್ತಸ್ಯ ಸಮೀಪೇ ತು ದಧಿಭಕ್ತಂ ಘಟೇ ನ್ಯಸೇತ್ ॥ ೨೬ ॥

ಕರಕಂ ವಾರಿಪೂರ್ಣಂ ಚ ಸುಗಂಧದ್ರವ್ಯಸಂಯುತಂ ।
ಛತ್ರಂ ಚೈವಾಕ್ಷಸೂತ್ರಂ ಚ ಪಾದುಕೇ ಗುಡಿಕಾಂ ತಥಾ ॥ ೨೭ ॥

ಏವಂ ಸಂಪೂಜ್ಯ ವಿಧಿವತ್ ದೇವದೇವಂ ಜನಾರ್ದನಂ ।
ಜಾಗರಂ ತತ್ರ ಕುರ್ವೀತ ಗೀತವಾದಿತ್ರನಾದಿತೈಃ ॥ ೨೮ ॥

೨೪-೨೫. ಹಿಂದೆ ಹೇಳಿದ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ ಎಂಬ ದಶನಾಮಗಳಿಂದ ಧ್ಯಾನಿಸಬೇಕು. ಅಲ್ಲದೆ ಧೂಪದೀಪ ನೈವೇದ್ಯಾದಿ ಷೋಡಶೋಪಚಾರಗಳಿಂದ ಪೂಜಿಸಬೇಕು.

೨೬. ಈ ವ್ರತದಲ್ಲಿ ಅನ್ನದಾನವು ವಿಶೇಷವಾದ ಫಲವನ್ನು ಕೊಡತಕ್ಕದ್ದು ಆದ್ದರಿಂದ ಆ ದೇವರ ಸಮೀಪದಲ್ಲಿ ಮೊಸರನ್ನದಿಂದ ಕೂಡಿದ ಪಾತ್ರೆಯನ್ನು ಇರಿಸಿ ನೈವೇದ್ಯಮಾಡಬೇಕು.

೨೭. ನೀರುತುಂಬಿದ ಕಮಂಡಲು ಸುಗಂಧದ್ರವ್ಯಗಳು, ಛತ್ರಿ, ಜಪಸರ, ಪಾದುಕ ಇವೇ ಮೊದಲಾದ ಪದಾರ್ಥಗಳಿಂದ ದೇವರನ್ನು ತೃಪ್ತಿಪಡಿಸಬೇಕು.

೨೮. ಹೀಗೆ ಪರಮಾತ್ಮನನ್ನು ವಿಧಿವತ್ತಾಗಿ ಅರ್ಚಿಸಿ, ರಾತ್ರಿಯೆಲ್ಲಾ ಗೀತವಾದ್ಯ ಧ್ವನಿಗಳಿಂದ ಭಜನೆಮಾಡುತ್ತ ಜಾಗರಣೆಮಾಡಬೇಕು.

ಏವಂ ಸರ್ವರಜನ್ಯಂತೇ ಪ್ರಭಾತೇ ವಿಮಲೇ ಸತಿ ।
ಪ್ರದೇಯಂ ಶಾಸ್ತ್ರವಿದುಷೇ ಬ್ರಾಹ್ಮಣಾಯ ಕುಟುಂಬಿನೇ ॥ ೨೯ ॥

ವಿಷ್ಣುಭಕ್ತಾಯ ಶಾಂತಾಯ ವಿಶೇಷೇಣ ಪ್ರದೀಯತೇ ।
ಗುರೌ ಚ ಸತಿ ನಾನ್ಯಸ್ಮೈ ದಾತವ್ಯಮಿತಿ ನಿಶ್ಚಿತಂ ॥ ೩೦ ॥

ವೇದಾಧ್ಯೇತ್ರೇ ಸಮಂ ದಾನರ ದ್ವಿಗುಣಂ ತದ್ವಿದೇ ತಥಾ ।
ಆಚಾರ್ಯೇ ದಾನಮೇಕಂ ತು ಸಹಸ್ರಗುಣಿತಂ ತಥಾ ॥ ೩೧ ॥

ಗುರೌ ಸತಿ ತತೋಽನ್ಯಸ್ಯ ವ್ರತ ಯಶ್ಚ ನಿವೇದಯೇತ್ ।
ಸ ದುರ್ಗತಿಮವಾಪ್ನೋತಿ ದತ್ತಂ ಭವತಿ ನಿಷ್ಫಲಂ ॥ ೩೨ ॥

---

೨೯. ರಾತ್ರಿಯನ್ನೆಲ್ಲಾ ಹೀಗೆ ಕಳೆದು ಬೆಳಗಾದಮೇಲೆ ಪರಿಶುದ್ಧಮನಸ್ಕನಾಗಿ ಆ ಕಲಶವಸ್ತ್ರಪ್ರತಿಮೆಗಳನ್ನೆಲ್ಲಾ ಶಾಸ್ತ್ರವೇತ್ತನಾಗಿರುವ ಕುಟುಂಬಿಯಾದ ಬ್ರಾಹ್ಮಣನಿಗೆ ದಾನಮಾಡಬೇಕು.

೩೦. ಈ ದಾನವನ್ನು ವಿಷ್ಣುಭಕ್ತನಾಗಿರುವ ಬ್ರಾಹ್ಮಣನಿಗೆ ದಾನಮಾಡುವುದೇ ಶ್ರೇಷ್ಠವು. ಸದ್ಗುರುವು ತನಗೆ ಒಬ್ಬನಿರುವಾಗ ದಾನವನ್ನು ಮತ್ತೊಬ್ಬನಿಗೆ ಕೊಡಬಾರದು. ಭಕ್ತಿಯಿಂದ ತನ್ನ ಗುರುವಿಗೇ ಅವುಗಳನ್ನು ಸಮರ್ಪಿಸಬೇಕು.

೩೧. ವೇದಾಧ್ಯಯನ ಮಾಡಿದವನಿಗೆ ಕೊಟ್ಟ ದಾನಕ್ಕಿಂತಲೂ, ವೇದಾರ್ಥವನ್ನು ತಿಳಿದಿರುವವನಿಗೆ ಕೊಡುವ ದಾನವು ದ್ವಿಗುಣಫಲವುಳ್ಳದ್ದು. ಜ್ಞಾನೋಪದೇಶಕನಾದ ಆಚಾರ್ಯನಿಗೆ ಕೊಡುವ ದಾನವಂತೂ ಸಹಸ್ರಗುಣಿತವಾಗಿ ಫಲವನ್ನು ಕೊಡುತ್ತದೆ.

೩೨. ಉಪದೇಶಕನಾದ ಗುರುವು ತನಗಿರುವಾಗ ಅವನನ್ನು ಬಿಟ್ಟು ಯಾರು ಇತರರಿಗೆ ದಾನಕೊಡುವರೋ ಅವರು ನರಕವನ್ನು ಹೊಂದುವರು. ಮತ್ತು ಅವರು ಕೊಟ್ಟ ದಾನವೂ ವ್ಯರ್ಥವೆನಿಸುವುದು.

ಅವಿದ್ಯೋ ವಾ ಸವಿದ್ಯೋ ವಾ ಗುರುರೇವ ಜನಾರ್ದನಃ ।
ಮಾರ್ಗಸ್ಥೋ ವಾ ವಿಮಾರ್ಗಸ್ಥೋ ಗುರುರೇವ ಸದಾಗತಿಃ ॥ ೩೩ ॥

ಪ್ರತಿಪನ್ನಂ ಗುರುಂ ಯಶ್ಚ ಮೋಹಾದ್ವಿಪ್ರತಿಪದ್ಯತೇ ।
ಸ ಜನ್ಮಕೋಟಿಂ ನರಕೇ ಪಚ್ಯತೇ ಪುರುಷಾಧಮಃ ॥ ೩೪ ॥

ಏವಂ ದತ್ವಾ ವಿಧಾನೇನ ಬ್ರಾಹ್ಮಣಾಯ ಚ ಭಕ್ತಿತಃ !
ಮಂತ್ರೇಣಾನೇನ ದಾತವ್ಯಂ ಪುರಾಣಪಠಿತೇನ ಚ ॥ ೩೫ ॥
ಮಂತ್ರೇಣ ಪ್ರತಿಗೃಹ್ಣೀಯಾದ್ಬ್ರಾಹ್ಮಣಶ್ಚ ದ್ವಿಜೋತ್ತಮ ।
ವಾಮನೋ ಬುದ್ಧಿದೋ ದಾತಾ ದ್ರವ್ಯಸ್ಥೋ ವಾಮನಃ ಸ್ವಯಂ ॥ ೩೬ ॥
ವಾಮನೋಽಸ್ಯ ಪ್ರದಾತಾ ವೈ ವಾಮನಾಯ ನಮೋನಮಃ(ದಾನಮಂತ್ರಃ)

---

೩೩. ತನ್ನಗುರು, ವಿದ್ಯಾವಂತನಾಗಲಿ, ಅಥವಾ ಅಲ್ಪವಿದ್ಯೆಯುಳ್ಳವನೇ ಆಗಲಿ, ಅವನಲ್ಲಿ ಗುರುಭಾವನೆಯನ್ನು ಇಡಬೇಕು. ಸನ್ಮಾರ್ಗದಲ್ಲಿರಲಿ, ಅಪಮಾರ್ಗದಲ್ಲಿ ನಡೆಯುತ್ತಿರಲಿ, ತನಗೆ ಗುರುವೆಂದೆನಿಸಿದವನಲ್ಲಿ ಗುರುಭಕ್ತಿಯನ್ನು ತೋರ್ಪಡಿಸಬೇಕು.

೩೪. ಯಾರು ತನ್ನ ನಿಜವಾದ ಗುರುವನ್ನು ಅಜ್ಞಾನದಿಂದ ನಿಂದಿಸುವರೋ, ಮತ್ತು ಸದ್ಗುರುವಿನಲ್ಲಿ ಇಲ್ಲದ ಆಪಾದನೆಗಳನ್ನು ಹೊರಿಸುವರೋ, ಅವರು ಕೋಟಿ ಜನ್ಮಪರ್ಯಂತ ನರಕದಲ್ಲಿ ನಿಂತು ಅಧಮಪುರುಷರೆನಿಸಿಕೊಳ್ಳುವರು.

೩೫. ಹೀಗೆ ಸತ್ಪಾತ್ರನಾದ ಬ್ರಾಹ್ಮಣನಿಗೆ ವಿಧಿವತ್ತಾಗಿ ಪುರಾಣದಲ್ಲಿ ಉಕ್ತವಾಗಿರುವ ಮಂತ್ರದಿಂದ ಕಲಶಾದಿಗಳನ್ನು ದಾನಮಾಡಬೇಕು.

೩೬. ದಾನವನ್ನು ಸ್ವೀಕರಿಸುವವನೂ ಸಹ ಮಂತ್ರಪೂರ್ವಕವಾಗಿಯೇ ತೆಗೆದುಕೊಳ್ಳಬೇಕು. ದಾನಮಾಡುವ ಮಂತ್ರದ ಅರ್ಥವೇನೆಂದರೆ, “ನಮಗೆ ಸದ್ಬುದ್ಧಿಯನ್ನೂ, ದ್ರವ್ಯಾದಿಗಳನ್ನೂ ಕೊಟ್ಟವನು ಸಾಕ್ಷಾದ್ವಾಮನಮೂರ್ತಿಯು. ಈ ದಾನವಸ್ತುವಿನಲ್ಲಿರುವವನೂ ವಾಮನನೇ. ವಾಮನಮೂರ್ತಿಯೇ ಈಗ ದಾನ ಕೊಡುತ್ತಿರುವವನು. ದಾತೃಪ್ರತಿಗ್ರಹೀತೃಗಳೂ ವಾಮನಸ್ವರೂಪಿಗಳೇ. ಇಂತಹ ವಾಮನ ಮೂರ್ತಿಗೆ ನಮಸ್ಕಾರವು” ಎಂಬುದೇ ದಾನಮಂತ್ರಾರ್ಥ. ಈ ಮಂತ್ರವನ್ನು ದಾನಕೊಡುವವನು ಹೇಳಬೇಕು.

ವಾಮನಃ ಪ್ರತಿಗೃಹ್ಣಾತಿ ವಾಮನೋ ಮೇ ದದಾತಿ ಚ ।
ವಾಮನಸ್ತಾರಕೋ ದ್ವಾಭ್ಯಾಂ ವಾಮನಾಯ ನಮೋನಮಃ ॥ ೩೭ ॥

(ಇತಿ ಪ್ರತಿಗ್ರಹಮಂತ್ರಃ)

ಅನ್ನಂ ಪ್ರಜಾಪತಿರ್ವಿಷ್ಣುರುದ್ರೇಂದ್ರಶಶಿಭಾಸ್ಕರಾಃ ।
ಅಗ್ನಿರ್ವಾಯುರ್ಯಮಶ್ಚೈವ ಪಾಪಂ ಹರತು ಮೇ ಸದಾ ॥ ೩೮ ॥

(ಇತ್ಯನ್ನದಾನಮಂತ್ರಃ)

ಪರ್ಜನ್ಯೋ ವರುಣಸ್ಸೂರ್ಯಃ ಸಲಿಲಂ ಕೇಶವಶ್ಶಿವಃ ।
ತ್ವಷ್ಟಾ ಯಮೋ ವೈಶ್ರವಣಃ ಪಾಪಂ ಹರತು ಮೇ ಸದಾ ॥ ೩೯ ॥

(ಇತಿ ಸಲಿಲದಾನಮಂತ್ರಃ)

ವಿಪ್ರಾಣಾಂ ಭೋಜನಂ ದತ್ವಾ ಯಥಾಶಕ್ತ್ಯಥ ದಕ್ಷಿಣಾಂ ।
ಪೃಷದಾಜ್ಯಂ ಚ ಸಂಪ್ರಾಶ್ಯ ಪಶ್ಚಾದ್ಭುಂಜೀತ ವಾಗ್ಯತಃ ॥ ೪೦ ॥

---

೩೭. "ವಾಮನಮೂರ್ತಿಯೇ ಈ ದಾನವನ್ನು ಸ್ವೀಕರಿಸುತ್ತಿದ್ದಾನೆ. ಇದನ್ನು ಈಗ ವಾಮನಮೂರ್ತಿಯೇ ನನಗೆ ಕೊಡುತ್ತಿದ್ದಾನೆ. ದಾನಕೊಡುವ ಮತ್ತು ದಾನ ತೆಗೆದುಕೊಳ್ಳುವ ನಮ್ಮಿಬ್ಬರನ್ನು ರಕ್ಷಿಸುವವನು ವಾಮನನೇ ಆಗಿರುತ್ತಾನೆ. ಇಂಥ ವಾಮನಮೂರ್ತಿಗೆ ನಮಸ್ಕಾರವು" ಎಂಬುದು ದಾನಪ್ರತಿಗ್ರಹಮಂತ್ರದ ಅರ್ಥವು. ಈ ಮಂತ್ರವನ್ನು ದಾನ ತೆಗೆದುಕೊಳ್ಳುವವನು ಹೇಳಬೇಕು.

೩೮. "ಅನ್ನವೇ ಬ್ರಹ್ಮನು. ವಿಷ್ಣು, ರುದ್ರ, ಇಂದ್ರ, ಸೂರ್ಯ, ಚಂದ್ರರು ಇವರೆಲ್ಲರೂ ಅನ್ನದ ಸ್ವರೂಪಗಳೇ. ಅಗ್ನಿ, ವಾಯು, ಯಮ, ಈ ದೇವತೆಗಳು ಅನ್ನಾಭಿಮಾನಿಗಳು. ಆದ್ದರಿಂದ ಈ ಅನ್ನದಾನದಿಂದ ದೇವತೆಗಳೆಲ್ಲರೂ ನನ್ನ ಪಾಪವನ್ನು ನಿವಾರಿಸಲಿ". ಈ ಅರ್ಥದ ಮಂತ್ರವನ್ನು ಅನ್ನದಾನಮಾಡುವಾಗ ಹೇಳಬೇಕು.

೩೯. ನೀರನ್ನು ದಾನಮಾಡುವುದರಿಂದ ಪರ್ಜನ್ಯನೂ, ವರುಣನೂ, ಯಮನೂ, ಸೂರ್ಯನೂ, ಕೇಶವನೂ, ಶಿವನೂ, ತ್ವಷ್ಟೃ, ವೈಶ್ರವಣ, ಇವರೇ ಮೊದಲಾದ ದೇವತೆಗಳು ಪ್ರಸನ್ನರಾಗಿ ನನ್ನ ಪಾಪಗಳನ್ನು ಹೋಗಲಾಡಿಸಲಿ" ಎಂದು ನೀರನ್ನು ದಾನಮಾಡುವಾಗ ಹೇಳಬೇಕು.

೪೦. ಈ ರೀತಿ ದಾನಧರ್ಮಾದಿಗಳನ್ನು ಮಾಡಿ, ಬ್ರಾಹ್ಮಣ ಸಮಾರಾಧನೆಯನ್ನು ನಡೆಸಿ, ಯಥಾಶಕ್ತಿ ದಕ್ಷಿಣಾದಿಗಳಿಂದ ಅವರನ್ನು ತೃಪ್ತಿಪಡಿಸಿ, ಹವಿಶ್ಶೇಷವಾದ ತುಪ್ಪವನ್ನು ತಾನು ಭುಜಿಸಿ ವಾಙ್ನಿಯಮದಿಂದ ಊಟಮಾಡಬೇಕು.

ಭೂಯೋ ಯಥೇಚ್ಛಯಾ ರಾತ್ರೌ ಸರ್ವತ್ರೈಷ ವಿಧಿಃ ಸ್ಮೃತಃ ।
ಸಮಾಪಿತೇ ವ್ರತೇ ತಸ್ಮಿನ್ ಬ್ರಹ್ಮನ್ ಶೃಣು ಚ ಯತ್ಫಲ ॥ ೪೧ ॥

ಬ್ರಹ್ಮಣಃ ಪ್ರಲಯಂ ಯಾವತ್ ತಾವತ್ಸ್ವರ್ಗೇ ಮಹೀಯತೇ ।
ಬ್ರಹ್ಮಲೋಕಾದಿಲೋಕೇಷು ಭುಕ್ತ್ವಾ ಭೋಗಾನನೇಕಶಃ ॥ ೪೨ ॥

ಪುನಃ ಸ್ವರ್ಗಾದ್ಭುವಂ ಪ್ರಾಪ್ಯ ಜಾಯತೇ ಮಹತಾಂ ಕುಲೇ ।
ಸಪ್ತದ್ವೀಪಾಧಿಪತ್ಯಂ ಚ ಪ್ರಾಪ್ನುಯಾನ್ನಾತ್ರ ಸಂಶಯಃ ॥ ೪೩ ॥

ಸರ್ವಾನ್ ಕಾಮಾನವಾಪ್ನೋತಿ ತತೋ ಮುಕ್ತಿಂ ಚ ಗಚ್ಛತಿ ।
ಇಂದ್ರಸ್ಯಾವರಜೋ ದೇವೋ ರಮಾಹೃದಯನಂದನಃ
ಬಲಿರ್ಬದ್ಧಸ್ತ್ವಯಾ ದೇವ ಗೃಹಾಣಾರ್ಘ್ಯಂ ತು ವಾಮನ ॥ ೪೪ ॥
(ಇತ್ಯರ್ಘ್ಯ ಮಂತ್ರಃ)

---

೪೧. ಪುನಃ ಆ ದಿನ ರಾತ್ರಿಯಲ್ಲಿಯೂ ಊಟಮಾಡಬಹುದು. ವ್ರತದ ನಿಯಮವು ಈ ರೀತಿಯಾಗಿದೆ. ಭಕ್ತಿಶ್ರದ್ಧೆಯಿಂದ ವ್ರತವನ್ನು ಹೀಗೆ ಮುಗಿಸಿದರೆ ಮುಂದೆ ಅದರಿಂದ ಬರುವ ಫಲವನ್ನು ಹೇಳುತ್ತೇನೆ, ಕೇಳು.

೪೨. ಬ್ರಹ್ಮನಿಂದ ಸೃಷ್ಟವಾದ ಜಗತ್ತೆಲ್ಲವೂ ಪ್ರಲಯವಾಗುವವರೆಗೂ ಈ ವ್ರತವನ್ನು ಆಚರಿಸಿದವನು ಸ್ವರ್ಗದಲ್ಲಿ ವಾಸಿಸುವನು. ಅಲ್ಲದೆ ಬ್ರಹ್ಮಲೋಕವೇ ಮೊದಲಾದ ಪುಣ್ಯಲೋಕಗಳಲ್ಲಿ ಒದಗುವ ಸೌಖ್ಯಗಳನ್ನೆಲ್ಲಾ ಸುಲಭವಾಗಿ ಪಡೆಯುವನು.

೪೩. ಸ್ವರ್ಗಸುಖವನ್ನನುಭವಿಸಿ ಪುನಃ ಆತನು ಭೂಮಿಯಲ್ಲಿ ಉತ್ತಮಕುಲದಲ್ಲಿ ಜನಿಸುವನು. ಭೂಲೋಕದಲ್ಲಿಯೇ ಏಳು ದ್ವೀಪಗಳ ಒಡೆತನವನ್ನು ಹೊಂದಿ ಕೀರ್ತಿಶಾಲಿಯಾಗುವನು. ಇದರಲ್ಲಿ ಸಂಶಯವಿಲ್ಲ.

ಹೀಗೆ ಆತನು ಎಲ್ಲಾ ಐಹಿಕ ಭೋಗಗಳನ್ನೂ ಅನುಭವಿಸಿ ಕೊನೆಗೆ ಮೋಕ್ಷವನ್ನು ಪಡೆಯುವನು.

೪೪. ಇಂದ್ರನ ತಮ್ಮನೂ, ಲಕ್ಷ್ಮಿಗೆ ಮೆಚ್ಚಿನ ಪತಿಯೂ, ಬಲಿಚಕ್ರವರ್ತಿಯನ್ನು ಕಟ್ಟಿದವನೂ ಆದ ವಾಮನ ಮೂರ್ತಿಯೇ, ನೀನು ಈ ಅರ್ಘ್ಯವನ್ನು ಸ್ವೀಕರಿಸು, ಎಂದು ಪ್ರಾರ್ಥಿಸುತ್ತಾ ಅರ್ಘ್ಯ ಪ್ರದಾನಮಾಡಬೇಕು.

ಇತೀದಂ ಶೃಣುಯಾನ್ನಿತ್ಯಂ ಪಠೇದ್ವ್ರತಮನುತ್ತಮಂ ।
ವಿಮುಕ್ತಸ್ಸರ್ವಪಾಪೇಭ್ಯಃ ಶ್ರವಣದ್ವಾದಶೀಫಲಾತ್ ॥ ೪೫ ॥

ಇತಿ ಶ್ರೀಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಯಾಜ್ಞವಲ್ಕ್ಯ ಸಂವಾದೇ ಶ್ರವಣದ್ವಾದಶೀ ವ್ರತಕಥನಂ ನಾಮ ಪಂಚದಶೋಽಧ್ಯಾಯಃ

---

೪೫. ಈ ಉತ್ತಮವಾದ ಶ್ರವಣದ್ವಾದಶೀ ಫಲವನ್ನೂ, ಅದರ ವಿಚಾರವನ್ನೂ ಯಾವನು ನಿತ್ಯವೂ ಪಠಿಸುವನೋ ಅವನು ಸರ್ವಪಾಪಗಳಿಂದ ವಿಮುಕ್ತನಾಗುವನು.

ಹೀಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತ ಮತ್ತು ಯಾಜ್ಞವಲ್ಕ್ಯ ಋಷಿಗಳ ಸಂವಾದರೂಪವಾಗಿ ಶ್ರವಣದ್ವಾದಶೀ ವ್ರತಮಹಿಮೆಯು ಈ ಹದಿನೈದನೆಯ ಅದ್ಯಾಯದಲ್ಲಿ ಮುಗಿಯಿತು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ಷೋಡಶೋಽಧ್ಯಾಯಃ

॥ ಸೂತ ಉವಾಚ ॥

ಅನ್ಯದ್ವ್ರತಮಿದಂ ವಕ್ಷ್ಯೇ ಶೃಣುಧ್ವಂ ಮುನಿಪುಂಗವಾಃ ।
ಸೌಭಾಗ್ಯವರ್ಧನಂ ಪುಣ್ಯಂ ಮಹಾಪಾತಕನಾಶನಂ ॥ ೧ ॥

ಸರ್ವದುಷ್ಟೋಪಶಮನಂ ಸರ್ವೈಶ್ವರ್ಯಪ್ರದಂ ಶಿವಂ ।
ಯಂ ಯಂ ಕಾಮಯತೇ ಕಾಮಂ ತಂ ತಂ ಪ್ರಾಪ್ನೋತಿ ಮಾನವಃ ॥ ೨ ॥

ಪುರಾ ದೇವೇನ ರುದ್ರೇಣ ದಗ್ಧಃ ಕಾಮೋ ದುರಾಸದಃ ।
ಉಪೋಷಿತಾ ತಿಥಿಸ್ತೇನ ತೇನಾನಂಗತ್ರಯೋದಶೀ ॥ ೩ ॥

ಹದಿನಾರನೆಯ ಅಧ್ಯಾಯವು-

೧. ಎಲೈ ಶೌನಕಾದಿಗಳೇ, ಮಹಾಪಾಪಗಳನ್ನು ನಿವಾರಿಸಿ, ಸಕಲಸನ್ಮಂಗಳವನ್ನು ಕೊಡುವಂತಹ ಮತ್ತೊಂದು ವ್ರತವನ್ನು ನಿಮಗೆ ಬೋಧಿಸುವೆನು. ಕೇಳಿರಿ, ಎಂದು ಸೂತಮಹರ್ಷಿಗಳು ಮತ್ತೊಂದು ವ್ರತಮಹಿಮೆಯನ್ನು ಹೇಳಲು ಆರಂಭಿಸಿದರು.

೨. ಈಗ ನಾನು ಹೇಳಲಿರುವ ವ್ರತವು ಸರ್ವದುರಿತಗಳನ್ನು ನಿವಾರಿಸತಕ್ಕದ್ದು. ಸಮಸ್ತ ಐಶ್ವರ್ಯಗಳನ್ನೂ ಒದಗಿಸತಕ್ಕದ್ದು. ಮನುಷ್ಯನು ಯಾವ ಯಾವ ಉದ್ದೇಶಕ್ಕಾಗಿ ಈ ವ್ರತವನ್ನು ಆಚರಿಸುವನೋ, ಆಯಾ ಇಷ್ಟಾರ್ಥಗಳನ್ನೆಲ್ಲಾ ಸುಲಭವಾಗಿ ಪಡೆಯುವನು.

೩. ಹಿಂದೆ ಪರಮೇಶ್ವರನು ಅತ್ಯಂತ ಶೂರನಾದ ಮನ್ಮಥನನ್ನು ತನ್ನ ನೇತ್ರಾಗ್ನಿಯಿಂದ ಸುಟ್ಟನಷ್ಟೆ. ಆ ನಿಮಿತ್ತವಾಗಿಯೇ ಅನಂಗತ್ರಯೋದಶೀ ಎಂಬ ವ್ರತವು ಸಿದ್ಧವಾಯಿತು.

ಶುಕ್ಲಪಕ್ಷೇ ತ್ರಯೋದಶ್ಯಾಂ ಮಾಸಿ ಮಾರ್ಗಶಿರೇ ದ್ವಿಜಾಃ ।
ಸ್ನಾನಂ ಕೃತ್ವಾಥ ವಿಧಿನಾ ಸೋಪವಾಸೋ ಜಿತೇಂದ್ರಿಯಃ ॥ ೪ ॥

ಭಕ್ತ್ಯಾ ತ್ವನನ್ಯಯಾ ದೇವಂ ಪೂಜಯೇಚ್ಛಶಿಶೇಖರಂ ।
ಪುಷ್ಪೈರ್ನಾನಾವಿಧೈರ್ಧೂಪೈರ್ನೈವೇದ್ಯೈಶ್ಚ ಫಲೈಸ್ತಥಾ ॥ ೫ ॥

ಶಂಭುನಾಮ್ನಾ ತಿಲೈರ್ಹೋಮಂ ಕುರ್ಯಾದಷ್ಟೋತ್ತರಂ ಶತಂ।
ಅನಂಗನಾಮ್ನಾ ಸಂಪೂಜ್ಯ ಮಧು ಪ್ರಾಶ್ಯ ಸ್ವಪೇನ್ನಿಶಿ ॥ ೬ ॥

ದಶಾನಾಮಶ್ವಮೇಧಾನಾಂ ಫಲಂ ಪ್ರಾಪ್ನೋತಿ ಮಾನವಃ ।
ಯೋಗೇಶ್ವರಂ ಸುಸಂಪೂಜ್ಯ ಪೌಷೇ ಪ್ರಾಶ್ನೀತ ಚಂದನಂ ॥ ೭ ॥

ರಾಜಸೂಯಸ್ಯ ಯಾಗಸ್ಯ ಫಲಮಾಪ್ನೋತಿ ಮಾನವಃ ॥
ನಾಟೇಶ್ವರಂ ಸುಸಂಪೂಜ್ಯ ಮಾಘಮಾಸೇ ಜಿತೇಂದ್ರಿಯಃ ॥ ೮ ॥

ಮೌಕ್ತಿಕಂ ಪ್ರಾಶ್ಯ ವಿಪ್ರೇಂದ್ರಾಃ ಫಲಂ ತಸ್ಯ ವದಾಮ್ಯಹಂ ।
ಬಹುಸ್ವರ್ಣಸ್ಯ ಯಜ್ಞಸ್ಯ ಫಲಂ ಶತಗುಣಂ ಭವೇತ್ ॥ ೯ ॥

---

೪. ಮಾರ್ಗಶೀರ್ಷಮಾಸದ ಶುದ್ಧ ತ್ರಯೋದಶಿಯ ದಿನದಲ್ಲಿ ವ್ರತವನ್ನು ಮಾಡಬೇಕು. ಆ ದಿವಸ ಸ್ನಾನಾದಿಗಳಿಂದ ಶುದ್ಧನಾಗಿ ಉಪವಾಸಮಾಡಿ ಇಂದ್ರಿಯಗಳನ್ನು ನಿಗ್ರಹಿಸಬೇಕು.

೫. ಅನಂತರ ಅನಂಗತ್ರಯೋದಶೀ ವ್ರತದ ಪ್ರಧಾನದೇವನಾದ ಚಂದ್ರಶೇಖರನನ್ನು ಭಕ್ತಿಯಿಂದ ನಾನಾವಿಧವಾದ ಪುಷ್ಪಗಳಿಂದಲೂ, ಫಲಗಳಿಂದಲೂ, ನೈವೇದ್ಯಾದಿಗಳಿಂದಲೂ ಅರ್ಚಿಸಬೇಕು.

೬. ಶಂಭುವಿನ ನಾಮಗಳಿಂದ, ನೂರೆಂಟು ತಿಲಹೋಮವನ್ನು ಮಾಡಬೇಕು. ಅನಂಗನೆಂಬ ಹೆಸರಿನಿಂದ ಪರಮೇಶ್ವರನನ್ನು ಪೂಜಿಸಿ, ಮಧುವನ್ನು ಪ್ರಾಶನಮಾಡಿ ರಾತ್ರಿ ನಿದ್ದೆಮಾಡಬೇಕು

೭. ಹೀಗೆ ವ್ರತಮಾಡುವವನು ಹತ್ತು ಅಶ್ವಮೇಧಯಾಗಗಳ ಫಲವನ್ನು ಹೊಂದುವನು. ಹಾಗೆಯೇ ಪುಷ್ಯಮಾಸದ ಶುದ್ಧ ತ್ರಯೋದಶೀ ದಿನದಲ್ಲಿಯೂ ಪರಮೇಶ್ವರನನ್ನು ಅರ್ಚಿಸಿ, ಚಂದನವನ್ನು ಪ್ರಾಶನೆಮಾಡಬೇಕು. ಇದರಿಂದ ರಾಜಸೂಯಯಾಗದ ಫಲವು ಲಭಿಸುವುದು.

೮-೯. ಮಾಘ ಶುದ್ಧ ತ್ರಯೋದಶೀ ದಿನದಲ್ಲಿ ಜಿತೇಂದ್ರಿಯನಾಗಿ, ಮುತ್ತುಗಳನ್ನು ಭಕ್ಷಣಮಾಡಿ, ವ್ರತವನ್ನು ಮುಗಿಸಿದರೆ ಬಹುಸ್ವರ್ಣ ಯಾಗದ ಫಲವು ದೊರಕುವುದು. ಆ ವ್ರತಕ್ಕೆ ಅಭಿಮಾನಿ ದೇವತೆಯು ನಾಟ್ಯೇಶ್ವರನು.

ಸಂಪೂಜ್ಯ ಫಾಲ್ಗುನೇ ವೀರಂ ಕಂಕೋಲಂ ಪ್ರಾಶಯೇನ್ನಿಶಿ ।
ಗೋಮೇಧಸ್ಯ ಫಲಂ ಪ್ರಾಪ್ಯ ಮೋದತೇ ದೇವರಾಡಿವ ॥ ೧೦ ॥

ಸುರೂಪಂ ನಾಮ ವೈ ಚೈತ್ರೇ ಚಿತ್ರರತ್ನವಿನಿರ್ಮಿತಂ ।
ಕರ್ಪೂರಂ ಪ್ರಾಶಯೇದ್ರಾತ್ರೌ ನರಮೇಧಫಲಂ ಲಭೇತ್ ॥ ೧೧ ॥

ವೈಶಾಖೇ ಚ ಮಹಾರೂಪಂ ದೇವೇಶಂ ಚ ಪ್ರಪೂಜಯೇತ್ ।
ಜಾತೀಫಲಂ ಚ ಸಂಪ್ರಾಶ್ಯ ಗೋಸಹಸ್ರಫಲಂ ಲಭೇತ್ ॥ ೧೨ ॥

ಜ್ಯೇಷ್ಠೇ ಪ್ರದ್ಯುಮ್ನನಾಮಾನಂ ಲವಂಗಂ ಪ್ರಾಶಯೇನ್ನಿಶಿ ।
ವಾಜಪೇಯಸ್ಯ ಯಜ್ಞಸ್ಯ ಫಲಮಷ್ಟಗುಣೋತ್ತರಂ ॥ ೧೩ ॥

ಉಮಾಭರ್ತೇತಿನಾಮಾನಮಾಷಾಢೇ ಸಂಪ್ರಪೂಜಯೇತ್ ।
ತಿಲೋದಕಂ ತು ಸಂಪ್ರಾಶ್ಯ ಪುಂಡರೀಕಫಲಂ ಲಭೇತ್ ॥ ೧೪ ॥

---

೧೦. ಫಾಲ್ಗುಣಮಾಸದ ಶುದ್ಧ ತ್ರಯೋದಶಿಯಲ್ಲಿ ವೀರನಾಮಕನಾದ ಪರಮೇಶ್ವರನನ್ನು ಪೂಜಿಸಬೇಕು. ಕಂಕೋಲಭಕ್ಷಣಮಾಡಿ ವ್ರತಸಮಾಪ್ತಿಮಾಡಿದರೆ, ಗೋಮೇಧಯಾಗದ ಫಲವು ಲಭಿಸುತ್ತದೆ.

೧೧. ಚೈತ್ರಶುದ್ಧ ತ್ರಯೋದಶೀ ತಿಥಿಯಲ್ಲಿ ಸುರೂಪನೆಂಬ ಹೆಸರುಳ್ಳ ಈಶ್ವರನನ್ನು ಅರ್ಚಿಸಬೇಕು. ನಾನಾ ರತ್ನಗಳಿಂದ ಪರಮೇಶ್ವರನ ವಿಗ್ರಹವನ್ನು ಮಾಡಿ ಪೂಜಿಸಬೇಕು. ರಾತ್ರಿಯಲ್ಲಿ ಕರ್ಪೂರ ಪ್ರಾಶನದಿಂದ ನಿದ್ರಿಸಿದರೆ, ನರಮೇಧಯಾಗದ ಫಲವು ಲಭಿಸುವುದು.

೧೨. ವೈಶಾಖಮಾಸದಲ್ಲಿ ಮಹಾರೂಪಿಯಾದ ಪರಮೇಶ್ವರನನ್ನು ಅರ್ಚಿಸಿ, ಜಾಜೀಫಲಭಕ್ಷಣಮಾಡಬೇಕು. ಇದರಿಂದ ಗೋಸಹಸ್ರಯಾಗದ ಫಲವು ಲಭಿಸುವುದು.

೧೩. ಜ್ಯೇಷ್ಠಮಾಸದಲ್ಲಿ, ಪ್ರದ್ಯುಮ್ನನೆಂಬ ಹೆಸರುಳ್ಳ ದೇವರನ್ನು ಅರ್ಚಿಸಿ ಲವಂಗವನ್ನು ತಿಂದು ರಾತ್ರಿಯನ್ನು ಕಳೆಯಬೇಕು ಇದರಿಂದ ವಾಜಪೇಯ ಯಾಗದ ಎಂಟರಷ್ಟು ಗುಣಗಳನ್ನು ಪಡೆಯುವರು.

೧೪. ಆಷಾಢಮಾಸದಲ್ಲಿ, ಉಮಾಭರ್ತನೆಂಬ ಹೆಸರಿನಿಂದ ಶಂಕರನನ್ನು ಅರ್ಚಿಸಿ, ಎಳ್ಳಿನ ನೀರನ್ನು ಕುಡಿದು ವ್ರತವನ್ನು ಮುಗಿಸಬೇಕು. ಇದನ್ನಾಚರಿಸಿದವನಿಗೆ ಪೌಂಡರೀಕಯಾಗದ ಫಲವು ದೊರಕುವುದು.

ಪೂಜಯೇಚ್ಛ್ರಾವಣೇ ಶೂಲಪಾಣಿನಂ ಪರಮೇಶ್ವರಂ ।
ಪ್ರಾಶಯೇದ್ಗಂಧತೋಯಂ ತು ಅಗ್ನಿಷ್ಟೋಮಫಲಂ ಲಭೇತ್ ॥ ೧೫ ॥

ಮಾಸೇ ಭಾದ್ರಪದೇ ವಿಪ್ರಾಃ ಸದ್ಯೋಜಾತಂ ಪ್ರಪೂಜಯೇತ್ ।
ಅಗರುಂ ಪ್ರಾಶಯಿತ್ವಾ ತು ಸರ್ವಯಜ್ಞಫಲಂ ಲಭೇತ್ ॥ ೧೬ ॥

ಮಾಸೇ ಚಾಶ್ವಯುಜೇ ಪ್ರಾಪ್ತೇ ತ್ರಿದಶಾಧಿಪತಿಂ ಯಜೇತ್ ।
ಸ್ವರ್ಣೋದಕಂ ತು ಸಂಪ್ರಾಶ್ಯ ಸ್ವರ್ಣಕೋಟಿಫಲಂ ಲಭೇತ್ ॥ ೧೭ ॥

ವಿಶ್ವೇಶ್ವರಂ ಚ ಕಾರ್ತಿಕ್ಯಾಂ ಪೂಜಯೇದ್ಭಕ್ತಿಸಂಯುತಃ ।
ಮದನಸ್ಯ ಫಲಂ ಪ್ರಾಶ್ಯ ಕಾಮವದ್ದ್ಯುತಿಮಾನ್ ಭವೇತ್ ॥ ೧೮ ॥

ಪ್ರತಿಮಾಸಂ ಪ್ರವಕ್ಷ್ಯಾಮಿ ದಂತಕಾಷ್ಠಾನಿ ವೈ ದ್ವಿಜಾಃ ।
ಮಲ್ಲಿಕಾ ಖಾದಿರಂ ಚೈವ ಪ್ಲಕ್ಷಾಪಾಮಾರ್ಗಜಂ ತಥಾ ॥ ೧೯ ॥

---

೧೫. ಶ್ರಾವಣಮಾಸದಲ್ಲಿ ಶೂಲಪಾಣಿಯೆಂಬ ನಾಮದಿಂದ ಪರಮೇಶ್ವರನನ್ನು ಆರಾಧಿಸಿ, ಗಂಧೋದಕವನ್ನು ಪಾನಮಾಡಿ ನಿದ್ರಿಸಬೇಕು. ಇದರಿಂದ ಅಗ್ನಿಷ್ಟೋಮಯಾಗದ ಫಲವು ಲಭಿಸುವುದು.

೧೬. ಭಾದ್ರಪದಮಾಸದ ತ್ರಯೋದಶಿಯಲ್ಲಿ ಸದ್ಯೋಜಾತನಾಮಕನಾದ ಪರಮೇಶ್ವರನನ್ನು ಪೂಜಿಸಬೇಕು. ಅಗರುವನ್ನು ಪ್ರಾಶನೆಮಾಡಿ ವ್ರತಸಮಾಪ್ತಿ ಮಾಡಿದರೆ ಸಮಸ್ತ ಯಜ್ಞದ ಫಲವೂ ದೊರೆತಂತಾಗುವುದು.

೧೭. ಆಶ್ವಯುಜ ಮಾಸದಲ್ಲಿ ತ್ರಿದಶಾಧಿಪತಿಯಾದ ಲೋಕೇಶ್ವರನನ್ನು ಅರ್ಚಿಸಿ, ಸುವರ್ಣೋದಕವನ್ನು ಪಾನಮಾಡಿ ವ್ರತವನ್ನು ಮುಗಿಸಿದರೆ ಸುವರ್ಣಯಾಗಗಳ ಕೋಟಿಸಂಖ್ಯೆಯ ಫಲವನ್ನು ಹೊಂದಬಹುದು.

೧೮. ಕಾರ್ತಿಕ ಮಾಸದಲ್ಲಿ ಭಕ್ತಿಯಿಂದ ವಿಶ್ವೇಶ್ವರಸ್ವಾಮಿಯನ್ನು ಅರ್ಚಿಸಬೇಕು. ಅಲ್ಲದೆ ರಸಭರಿತವಾದ ಹಣ್ಣನ್ನು ತಿಂದು ವ್ರತಮುಗಿಸಬೇಕು. ಇದರಿಂದ ವ್ರತಮಾಡಿದವನು ಮನ್ಮಥನಷ್ಟು ಸುಂದರನಾಗುವನು.

೧೯–೨೦. ಪ್ರತಿ ತಿಂಗಳಲ್ಲಿಯೂ ಅನಂಗತ್ರಯೋದಶಿಯದಿನದಲ್ಲಿ ಕ್ರಮವಾಗಿ ಈ ಕೆಳಗೆ ಹೇಳಿರುವಂತಹ ಕಾಷ್ಠಗಳಿಂದ ದಂತಧಾವನಮಾಡಿಕೊಳ್ಳಬೇಕು. ಮಾರ್ಗಶೀರ್ಷದಲ್ಲಿ ಮಲ್ಲಿಗೆಕಡ್ಡಿ, ಪುಷ್ಯದಲ್ಲಿ ಕಗ್ಗಲಿಯಕಡ್ಡಿ, ಮಾಘದಲ್ಲಿ ಬಸುರೀಮರದ

ಜಂಬೂದುಂಬರಜಾಶ್ವತ್ಥಂ ಮಾಲತೀ ವಟಜಂ ತಥಾ ।
ಕಾದಂಬಂ ಚ ತಥಾಪ್ಲಾಕ್ಷಂ ದೂರ್ವಾ ಚೈವ ಶಿರೀಷಜಂ ॥ ೨೦ ॥

ವಿಪ್ರಾಃ ಶೃಣುತ ಪುಷ್ಪಾಣಿ ನೈವೇದ್ಯಾನಿ ತಥೈವ ಚ ।
ಮಾಲತ್ಯಾಃ ಪ್ರಥಮಂ ತಾವತ್ ತತೋ ಮರುವಕಂ ತಥಾ ॥ ೨೧ ॥

ಕರವೀರಂ ತಥಾ ಕುಂದಮರ್ಕಪತ್ರಾಣಿ ಸುವ್ರತಾಃ ।
ತತೋ ಮಂದಾರಪುಷ್ಪಾಣಿ ಮಲ್ಲಿಕಾಕುಸುಮಾನಿ ಚ । ॥ ೨೨ ॥

ಕಾದಂಬಂ ಯೂಥಿಕಾಪುಷ್ಪಂ ಧತ್ತೂರಂ ಶತಪತ್ರಕಂ ।
ದೂರ್ವಾಂಕುರಾಣಿ ದೇಯಾನಿ ನೈವೇದ್ಯಾನಿ ಯಥಾಕ್ರಮಂ ॥ ೨೩ ॥

ಓದನಂ ಕೃಸರಂ ಚೈವ ಶರ್ಕರಾಮೋದಕಾಸ್ತಥಾ ।
ಕಂಸಾರಂ ಯಾವಕಾಸ್ತತ್ರ ತತಃ ಸೋಹಾಲಿಕಾ ಭವೇತ್ ॥ ೨೪ ॥

ಕಡ್ಡಿ. ಜ್ಯೇಷ್ಠದಲ್ಲಿ ಅಶ್ವತ್ಥಮರದಕಡ್ಡಿ, ಆಷಾಢದಲ್ಲಿ ಮಾಲತೀಬಳ್ಳಿಯಕಾಷ್ಠ, ಫಾಲ್ಗುಣದಲ್ಲಿ ಉತ್ತರಣೀ, ಚೈತ್ರದಲ್ಲಿ ನೇರಳೇ, ವೈಶಾಖದಲ್ಲಿ ಅತ್ತೀ, ಶ್ರಾವಣದಲ್ಲಿ ಆಲದಮರದಕಡ್ಡಿ, ಭಾದ್ರಪದದಲ್ಲಿ ಕರಂಬ (ಕಿರೀಚಲುಮರ) ಮರದ ಕಡ್ಡಿ, ಆಶ್ವಯುಜದಲ್ಲಿ ಪಣಿಯಾಲ, ಕಾರ್ತಿಕದಲ್ಲಿ ಶಿರೀಷ (ಬಾಗೇಹೂವಿನ) ವೃಕ್ಷದ ಕಡ್ಡಿ, ಹೀಗೆ ಆಯಾ ತಿಂಗಳಲ್ಲಿ ಆಯಾ ಜಾತಿಯ ಕಾಷ್ಠಗಳಿಂದ ದಂತಧಾವನಮಾಡಿ ಕೊಳ್ಳಬೇಕು.

೨೧–೨೩. ಹಾಗೆಯೇ ಪ್ರತಿ ತಿಂಗಳಲ್ಲಿಯೂ ಹೂವುಗಳೂ, ನಿವೇದನವಸ್ತುಗಳೂ ಬೇರೆ ಬೇರೆಯಾಗಿವೆ. ಮಾರ್ಗಶೀರ್ಷಮಾಸದಿಂದ ಕ್ರಮವಾಗಿ ಮಾಲತೀ ಪುಷ್ಪ, ಮರುಗ, ಕಣಿಗಲು, ಕುಂದ, ಎಕ್ಕದಹೂ, ಜಾಜೀಹೂವು, ಮಂದಾರಪುಷ್ಪ, ಮಲ್ಲಿಗೆ, ಕದಂಬಪುಷ್ಪ, ಸೇವಂತಿಗೆ, ದತ್ತೂರಿಹೂವು, ಕಮಲ, ಗರಿಕೆ, ಇವುಗಳನ್ನು ಪ್ರತಿತಿಂಗಳಲ್ಲಿಯೂ ಒಂದೊಂದು ತಿಂಗಳಲ್ಲಿ ಒಂದೊಂದು ಜಾತಿಯ ಪುಷ್ಪವನ್ನು ತಂದು ಅರ್ಚಿಸಬೇಕು.

೨೪–೨೫. ಅನ್ನ, ಹುಗ್ಗಿ, ಸಕ್ಕರೆ, ಕಡುಬು, ಕಂಸಾರ(?) ಗಂಜಿ, ಹೋಳಿಗೆ, ಪಂಚಭಕ್ಷ್ಯಗಳು, ಘೃತಭಕ್ಷ್ಯ, ಅಕ್ಕಿಯಿಂದಮಾಡಿದ ತಿಂಡಿಗಳು, ಉಂಡೆಗಳು, ಕೊನೆಯದಾದ ಕಾರ್ತಿಕಮಾಸದಲ್ಲಿ ನಾನಾವಿಧವಾದ ಅನ್ನಗಳು, ಹೀಗೆ ಕ್ರಮವಾಗಿ

ಪಂಚಖಾದ್ಯಂ ಪರಂ ಪ್ರೋಕ್ತಂ ಘೃತಪೂರಮನಂತರಂ ।
ಶಾಲಿಭಕ್ತೇನ ನೈವೇದ್ಯಂ ಗುಣಕಾಸ್ತದನಂತರಂ ॥ ೨೫ ॥
ನಾನಾವಿಧಾನ್ನಂ ನೈವೇದ್ಯಂ ಕಾರ್ತಿಕ್ಯಾಂ ಪರಿಕಲ್ಪಯೇತ್ ।
ಪೂಜಾನಾಮಾನಿ ವಕ್ಷ್ಯಾಮಿ ಶೃಣುಧ್ವಂ ಮುನಿಪುಂಗವಾಃ ॥ ೨೬ ॥
ಶಂಕರಾಯನಮಃ ಪಾದೌ ಗೌರ್ಯೈ ಗುಲ್ಫೇ ಶಿವಾಯ ಚ ।
ಶಿವಾಯೈ ಜಾನುನೀ ಪೂಜ್ಯ ಶಂಭವಾಯೋದ್ಭವಾಯ ಚ ॥ ೨೭ ॥
ಕಟಿಂ ಮನ್ಮಥನಾಶಾಯ ಮದನಾಯೈ ಸುರೇಶ್ವರೇ(?)
ನಾಭಿಂ ಭವಾಯ ಸಂಪೂಜ್ಯ ಭವಾನ್ಯೈನಮ ಇತ್ಯುಮಾಂ ॥ ೨೮ ॥
ವಕ್ಷೋದೇವಾದಿದೇವಾಯ ಅಪರ್ಣಾಯೈ ನಮಶ್ಶಿವಾಂ ।
ಸ್ತನೌ ವಿಶ್ವೇಶ್ವರಾಯೇತಿ ಸುರಕಾಂತ್ಯೈ ನಮೋನಮಃ ॥ ೨೯ ॥

ನೈವೇದ್ಯಗಳನ್ನು ಮಾಡಬೇಕು. ಅಂದರೆ ಪ್ರತಿ ತಿಂಗಳಲ್ಲಿಯೂ ಒಂದೊಂದು ವಿಧದ ಭಕ್ಷ್ಯವನ್ನು ಮಾಡಿ ನಿವೇದಿಸಬೇಕು.

೨೬-೩೨. ಎಲೈ ಋಷಿವರ್ಯರೇ, ಪೂಜಾ ವಿಧಾನವನ್ನು ಈಗ ಹೇಳುವೆನು ಕೇಳಿರಿ. ಶಂಕರಾಯನಮಃ ಗೌರ್ಯೈನಮಃ ಎಂದು ಪಾದಗಳನ್ನೂ, ಶಿವಾಯನಮಃ, ಶಿವಾಯೈನಮಃ ಎಂದು ಗುಲ್ಫವನ್ನೂ, ಶಂಭವೇ ಉದ್ಭವಾಯ, ಎಂದು ಜಾನು ಪ್ರದೇಶವನ್ನೂ, ಮನ್ಮಥನಾಶನಾಯ ಎಂದು ಕಟಿಯನ್ನೂ ಅರ್ಚಿಸಬೇಕು. ಮದನಾಯೈ, ಸುರೇಶ್ವರಾಯ, ಎಂದು ನಾಭಿಯನ್ನೂ, ಭವಾನ್ಯೈನಮಃ ಎಂದು ದೇವಿಯನ್ನೂ ಪೂಜಿಸಬೇಕು. ವಕ್ಷೋಜವನ್ನು ದೇವಾಧಿದೇವಾಯ, ಅಪರ್ಣಾಯೈ, ಎಂಬ ನಾಮಗಳಿಂದಲೂ, ಸ್ತನಭಾಗವನ್ನು ವಿಶ್ವೇಶ್ವರಾಯ, ಸುಕಾಂತ್ಯೈ ಎಂಬ ನಾಮಗಳಿಂದಲೂ, ಭೀಮೋಗ್ರರೂಪಿಯಾದವನು, ಎಂಬ ಭಾವದಿಂದ ಪರಮೇಶ್ವರನನ್ನೂ, ಗಿರಿಜಾ ಎಂಬ ಭಾವದಿಂದ ದೇವಿಯನ್ನೂ, ಕಂಠಭಾಗದಲ್ಲಿ ಅರ್ಚಿಸಬೇಕು. ತ್ರಿದಶವಂದ್ಯಾಯ, ತ್ರಿಶೂಲಿನ್ಯೈ, ಎಂಬ ನಾಮಗಳಿಂದ ಸ್ಕಂಧಪ್ರದೇಶವನ್ನೂ ಧೂರ್ಜಟಯೇ, ಧೂಸರಾಯೈ, ಎಂಬ ನಾಮಗಳಿಂದ ಬಾಹುಪ್ರದೇಶಗಳನ್ನೂ, ಶೂಲಧರಾಯ, ಶೂಲಿನ್ಯೈ ಎಂಬ ನಾಮಗಳಿಂದ ಹಸ್ತಗಳನ್ನೂ ವಾಮದೇವನೆಂಬ ಹೆಸರಿ

ಕಂಠಂ ಭೀಮೋಗ್ರರೂಪಾಯ ಗಿರಿಜಾಯೈ ನಮಶ್ಶಿವಾಂ ।
ಸ್ಕಂಧೌ ತ್ರಿದಶವಂದ್ಯಾಯ ತ್ರಿಶೂಲಿನ್ಯೈ ನಮಶ್ಶಿವಾಂ ॥ ೩೦ ॥
ಬಾಹೂ ಧೂರ್ಜಟಯೇತ್ಯುಕ್ತ್ವಾ ಧೂಸರಾಯೈ ನಮಶ್ಶಿವಾಂ ।
ಹಸ್ತೌ ಶೂಲಧರಾಯೇತಿ ಶೂಲಿನ್ಯೈ ನಮ ಇತ್ಯುಮಾಂ ॥ ೩೧ ॥
ಮುಖಂ ದೇವಸ್ಯ ಸಂಪೂಜ್ಯ ವಾಮದೇವೇತಿ ವಾಮತಃ ।
ವಾಮಾಯೈ ನಮ ಇತ್ಯುಕ್ತ್ವಾ ನಾಸಾಂ ಚೈವ ಕಪಾಲಿನೇ ॥ ೩೨ ॥
ಮೃಡಾನ್ಯೈ ನಮ ಇತ್ಯುಕ್ತ್ವಾ ಲಲಾಟಂ ಚೇಂದುಧಾರಿಣೇ ।
ಅಲಕಾಯೈ ನಮಃ ಪಶ್ಚಾತ್ ತ್ರಿನೇತ್ರಾಯ ನಮಸ್ತಥಾ ॥ ೩೩ ॥
ತ್ರ್ಯಕ್ಷ್ಯೈ ಸಂಪೂಜಯೇದ್ದೇವೀಂ ಶಿರೋ ಗಂಗಾಧರಾಯ ಚ।
ಕಾತ್ಯಾಯನೀಂ ತತಃ ಪೂಜ್ಯ ವ್ಯೋಮಕೇಶಾಯ ವೈ ನಮಃ । ॥ ೩೪ ॥
ಕೇಶಾನ್ ಸಂಪೂಜ್ಯ ವಿಧಿವತ್ ಕೇಶಿನ್ಯೈ ಚ ನಮೋನಮಃ ।
ಏವಂ ಸಂವತ್ಸರೇ ಪೂರ್ಣೇ ಸೌವರ್ಣಂ ಕಾರಯೇಚ್ಛಿವಂ ॥ ೩೫ ॥
ತಾಮ್ರಪಾತ್ರೇ ತು ಸಂಸ್ಥಾಪ್ಯ ಕಲಶೋಪರಿ ವಿನ್ಯಸೇತ್ ।
ಶುಕ್ಲವಸ್ತ್ರೇಣ ಸಂಛಾದ್ಯ ಸಂಪೂಜ್ಯ ವಿಧಿವದ್ದ್ವಿಜಾಃ ॥ ೩೬ ॥

ಸಿಂದ ದೇವರ ಮುಖಪ್ರದೇಶವನ್ನೂ, ಕಪಾಲಿನೇನಮಃ. ಮೃಡಾನ್ಯೈನಮಃ ಎಂಬ ನಾಮಗಳಿಂದ ಮೂಗಿನ ಪ್ರದೇಶವನ್ನೂ, ಚಂದ್ರಶೇಖರಾಯ, ಅಲಕಾಯೈ ಎಂಬ ನಾಮಗಳಿಂದ ಲಲಾಟ ಪ್ರದೇಶವನ್ನೂ ಅರ್ಚಿಸಬೇಕು.

೩೩–೩೫. ತ್ರಿನೇತ್ರಾಯ, ತ್ರ್ಯಕ್ಷ್ಯೈ ಎಂಬ ನಾಮಗಳಿಂದ ನೇತ್ರಭಾಗವನ್ನೂ ಗಂಗಾಧರಾಯ, ಕಾತ್ಯಾಯನ್ಯೈ ಎಂಬ ನಾಮಗಳಿಂದ ಶಿರಸ್ಸನ್ನೂ, ವ್ಯೋಮಕೇಶಾಯ, ಕೇಶಿನ್ಯೈ ಎಂಬ ನಾಮಗಳಿಂದ ಕೇಶಭಾಗವನ್ನೂ, ಭಕ್ತಿಯಿಂದ ಅರ್ಚಿಸಬೇಕು. ಹೀಗೆ ವತ್ಸರಪರ್ಯಂತವಾಗಿ ವ್ರತವನ್ನು ಮಾಡಬೇಕು. ಒಂದುವರ್ಷ ತುಂಬಿದಮೇಲೆ ಸುವರ್ಣದಿಂದ ಶಿವನ ವಿಗ್ರಹವನ್ನು ಮಾಡಿಸಬೇಕು.

೩೬. ತಾಮ್ರದ ಪಾತ್ರೆಯಲ್ಲಿ ಆ ವಿಗ್ರಹವನ್ನಿಟ್ಟು ಶುಕ್ಲವಸ್ತ್ರಾದಿಗಳಿಂದ ಆ ಕಲಶವನ್ನು ಆಚ್ಛಾದನೆಮಾಡಿ, ವಿಧಿವತ್ತಾಗಿ ಪೂಜಿಸಿ,

ಆಚಾರ್ಯಾಯಾಥ ತಂ ದದ್ಯಾದ್ವಿತ್ತಶಾಠ್ಯವಿವರ್ಜಿತಃ ।
ಕಲಶಾಃ ಸೋದಕಾ ದೇಯಾ ಬ್ರಾಹ್ಮಣೇಭ್ಯಃ ಸದಕ್ಷಿಣಾಃ ॥ ೩೭ ॥

ಬ್ರಾಹ್ಮಣಾನ್ ಭೋಜಯೇದ್ಭಕ್ತ್ಯಾ ಶಿವಭಕ್ತಿಪರಾಯಣಾನ್ ।
ಏವಂ ಕರೋತಿ ಯೋ ವಿಪ್ರೋ ಭಕ್ತ್ಯಾಽನಂಗತ್ರಯೋದಶೀಂ ॥ ೩೮ ॥

ಪ್ರಾಪ್ನೋತಿ ರಾಜ್ಯಂ ಸೌಭಾಗ್ಯಂ ಪುತ್ರಾಂಶ್ಚ ಚಿರಜೀವಿನಃ ।
ಶಿವಲೋಕಂ ಚ ಸಂಪ್ರಾಪ್ಯ ಶಂಭೋಃ ಪ್ರಿಯತಮೋ ಭವೇತ್ ॥ ೩೯ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ, ಶ್ರೀ ಸೌರೇ, ಸೂತಶೌನಕ
ಸಂವಾದೇ ಅನಂಗತ್ರಯೋದಶೀವ್ರತಕಥನಂ ನಾಮ
ಷೋಡಶೋಽಧ್ಯಾಯಃ

---

೩೭. ಆ ಕಲಶವಸ್ತ್ರಪ್ರತಿಮೆಗಳನ್ನು ಆಚಾರ್ಯನಿಗೆ ದಾನಮಾಡಬೇಕು. ಆ ಸಮಯದಲ್ಲಿ ವಿತ್ತಕಾರ್ಪಣ್ಯವನ್ನು ತೋರಿಸಬಾರದು. ಇನ್ನೂ ಇತರ ಕಲಶಗಳನ್ನು ನೀರಿನಿಂದ ತುಂಬಿ, ದಕ್ಷಿಣಾಸಹಿತವಾಗಿ ಬ್ರಾಹ್ಮಣರಿಗೆ ದಾನಮಾಡಬೇಕು.

೩೮. ಕೊನೆಯದಾಗಿ ಶಿವಭಕ್ತಿಯಲ್ಲಿ ನಿರತರಾಗಿರುವ ಬ್ರಾಹ್ಮಣರನ್ನೂ ಭೋಜನಾದಿಗಳಿಂದ ತೃಪ್ತಿಪಡಿಸಬೇಕು. ಹೀಗೆ ಅನಂಗತ್ರಯೋದಶೀ ವ್ರತವನ್ನು ಯಾರು ಭಕ್ತಿಯಿಂದ ಆಚರಿಸುವರೋ,

೩೯. ಅವರು ರಾಜ್ಯಸೌಖ್ಯವನ್ನೂ, ಚಿರಂಜೀವಿಗಳಾದ ಮಕ್ಕಳನ್ನೂ ಪಡೆದು ಕೊನೆಗೆ ಶಿವಲೋಕವನ್ನು ಸೇರಿ, ಅಲ್ಲಿ ಪರಮೇಶ್ವರನಿಗೆ ಅತ್ಯಂತ ಪ್ರೀತಿಪಾತ್ರರಾಗಿ ಆನಂದಿಸುತ್ತಾರೆ.

ಎಂಬಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ
ಸಂವಾದ ರೂಪವಾಗಿ ಅನಂಗತ್ರಯೋದಶೀ ವ್ರತ ವಿಧಾನವು
ಈ ಹದಿನಾರನೆಯ ಅಧ್ಯಾಯದಲ್ಲಿ ಮುಗಿಯಿತು.

॥ ಶ್ರೀಃ ॥

॥ ಶ್ರೀ ಶಿವಾಯನಮಃ॥

ಅಥ ಶ್ರೀ ಸೌರಪುರಾಣೇ ಸಪ್ತದಶೋಽಧ್ಯಾಯಃ.

॥ ಋಷಯ ಊಚುಃ ॥

ಯದುಕ್ತಂ ಭವತಾ ಸೂತ ನೈಷ್ಕಲಂ ಜ್ಞಾನಮುತ್ತಮಂ ।
ಶ್ರುತಂ ಚಾಖಿಲಮಸ್ಮಾಭಿರ್ಮನಾಂಸಿ ಹೃಷಿತಾನಿ ನಃ ॥ ೧ ॥

ಭಕ್ತಿಶ್ಚ ಶಾಶ್ವತೇ ಶಂಭೌ ಜಾತಾಽಸ್ಮಾಕಂ ಹಿ ಶಾಶ್ವತೀ ।
ವರ್ಣಾಶ್ರಮಾಚಾರವಿಧಿಂ ಇದಾನೀಂ ಬ್ರೂಹಿ ತತ್ತ್ವತಃ ॥ ೨ ॥

। ಸೂತ ಉವಾಚ ।

ಚತುರ್ಣಾಮಪಿ ವರ್ಣಾನಾಂ ವಿಧಿಂ ವಕ್ಷ್ಯಾಮಿ ಸುವ್ರತಾಃ ।
ಯದುಕ್ತಂ ಭಾನುನಾ ಪೂರ್ವಂ ಮನವೇ ಪರಮೇಷ್ಠಿನೇ ॥ ೩ ॥

ಹದಿನೇಳನೆಯ ಅಧ್ಯಾಯವು.

೧. ಸಮಸ್ತ ಋಷಿಗಳೂ ಸೂತಮಹರ್ಷಿಯನ್ನು ಕುರಿತು " ಮಹರ್ಷಿಯೇ ನೀನು ಇಲ್ಲಿನವರೆಗೂ ಉಪದೇಶಮಾಡಿದ ವಿಷಯಗಳಿಂದ ನಾವು ತುಷ್ಟರಾಗಿದ್ದೇವೆ. ನಮಗೆ ಸಂಪೂರ್ಣವಾದ ತಿಳಿವಳಿಕೆಯು ಬಂದಂತಾಯಿತು.

೨. ಪರಮೇಶ್ವರನಲ್ಲಿ ಸ್ಥಿರವಾದ ಭಕ್ತಿಯೂ ನಮಗೆ ದೊರೆಯಿತು. ಆದರೆ ಈಗ ವರ್ಣಾಶ್ರಮಧರ್ಮಗಳ ವಿಷಯಗಳನ್ನು ಕೇಳಲು ನಾವು ಇಷ್ಟಪಡುತ್ತೇವೆ. ಕೃಪೆಮಾಡಿ ತಿಳಿಸಬೇಕು " ಎಂದು ಕೇಳಿಕೊಳ್ಳಲು,

೩. ಸೂತಮಹರ್ಷಿಗಳು ಋಷಿಗಳನ್ನು ಕುರಿತು "ಎಲೈ ವ್ರತನಿಷ್ಠರಾದ ಮಹರ್ಷಿಗಳೇ. ಹಿಂದೆ ಸೂರ್ಯದೇವನು ವೈವಸ್ವತಮನುವಿಗೆ ಬೋಧಿಸಿದ ವರ್ಣಾಶ್ರಮ ಧರ್ಮಗಳನ್ನೇ ಈಗ ನಿಮಗೆ ಬೋಧಿಸಲು ಸಿದ್ಧನಾಗಿರುವೆನು, ಎಂದು ಹೇಳಲಾರಂಭಿಸಿದನು.

ಯೇನ ವಿಶ್ವೇಶ್ವರಃ ಶಂಭುಃ ಕರ್ಮಯೋಗರತೈಸ್ಸದಾ ।
ಆರಾಧ್ಯತೇ ನ ಚಾನ್ಯೇನ ಇತ್ಯೇಷಾ ವೈದಿಕೀ ಶ್ರುತಿಃ ॥ ೪ ॥

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಚತುರ್ಥಃ ಶೂದ್ರ ಉಚ್ಯತೇ ॥
ವರ್ಣಾಶ್ಚತ್ವಾರ ಏವೈತೇ ತ್ರಯ ಆದ್ಯಾ ದ್ವಿಜಾಃ ಸ್ಮೃತಾಃ ॥ ೫ ॥

ಗೃಹಸ್ಥೋ ಬ್ರಹ್ಮಚಾರೀ ಚ ವಾನಪ್ರಸ್ಥೋ ಯತಿಸ್ತಥಾ ।
ಚತ್ವಾರಶ್ಚಾಶ್ರಮಾಸ್ತೇಷಾಂ ಪಂಚಮೋ ನೋಪಪದ್ಯತೇ ॥ ೬ ॥

ಸರ್ವೇಷಾಮಾಶ್ರಮಾಣಾಂ ಚ ವಿಹಿತಂ ದಂಡಧಾರಣಂ ।
ನ ದಂಡೇನ ವಿನಾ ಕಶ್ಚಿದಾಶ್ರಮೀತಿ ನಿಗದ್ಯತೇ ॥ ೭ ॥

ಬ್ರಹ್ಮಚಾರೀ ಭವೇದ್ದಂಡೀ ಕೃಷ್ಣಾಜಿನಧರಸ್ತಥಾ ।
ಮೇಖಲೀ ಚ ತಥಾ ಮುಂಡೀ ಶಿಖೀ ವಾ ಯದಿ ವಾ ಜಟೀ ॥ ೮ ॥

ಭಿಕ್ಷಾಹಾರೇಣ ಸತತಂ ವರ್ತನಂ ತಸ್ಯ ಸುವ್ರತಾಃ ।
ಅಗ್ನಿಕಾರ್ಯಂ ತಥಾ ಕುರ್ಯಾತ್ ಸಾಯಂಪ್ರಾತರ್ಯಥಾವಿಧಿ ॥ ೯ ॥

---

೪. ಪರಮೇಶ್ವರನ ಆರಾಧನೆಯಲ್ಲಿ ಯಾರು ಸ್ಥಿರಬುದ್ಧಿಯುಳ್ಳವರಾಗುವರೋ ಅವರು ನಿಜವಾಗಿಯೂ ಸಂಸ್ಕೃತರಾದವರೆಂದು ಹೇಳಬೇಕು. ಅಸಂಸ್ಕೃತರಾದವರಿಗೆ ಈಶ್ವರಾರಾಧನೆಯಲ್ಲಿ ಮನಸ್ಸೇ ಬರುವುದಿಲ್ಲ.

೫. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಎಂಬುದಾಗಿ ವರ್ಣಗಳು ನಾಲ್ಕು ವಿಧಗಳು. ಅವುಗಳಲ್ಲಿ ಮೊದಲನೆಯ ಮೂರು ಜಾತಿಯವರಿಗೆ ದ್ವಿಜರೆಂದು ಹೆಸರು.

೬. ದ್ವಿಜರಿಗೆಲ್ಲಾ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸವೆಂಬ ನಾಲ್ಕು ಆಶ್ರಮಗಳುಂಟು. ಐದನೆಯ ಆಶ್ರಮವೆಂಬುದು ಅವರಿಗಿಲ್ಲ.

೭. ಎಲ್ಲಾ ಆಶ್ರಮಗಳಿಗೂ ದಂಡಧಾರಣೆಯು ವಿಹಿತವಾಗಿದೆ. ದಂಡವಿಲ್ಲದೆ ಯಾವ ಆಶ್ರಮಿಯೂ ಇರಕೂಡದು ಎಂದು ನಿಯಮವಿದೆ.

೮. ಬ್ರಹ್ಮಚಾರಿಯೂ ಅವನವನ ಜಾತ್ಯನುಗುಣವಾಗಿ ದಂಡವನ್ನು ಧರಿಸಬೇಕು. ಕೃಷ್ಣಾಜಿನ, ಮೇಖಲ ಇವು ನಿತ್ಯವೂ ಧರಿಸುವ ವಸ್ತುಗಳು. ಅವನಿಗೆ ಶಿಖೆಯಾಗಲಿ, ಜಟೆಯಾಗಲಿ, ಇರಬಹುದು.

೯. ಬ್ರಹ್ಮಚಾರಿಯು ಭಿಕ್ಷಾನ್ನದಿಂದಲೇ ಯಾವಾಗಲೂ ಜೀವಿಸಬೇಕು. ಪ್ರಾತಸ್ಸಾಯಂಕಾಲಗಳಲ್ಲಿ ತಪ್ಪದೆ ಅಗ್ನಿಕಾರ್ಯಮಾಡಬೇಕು.

ಅಗ್ನಿಕಾರ್ಯಪರಿತ್ಯಾಗೀ ಪತಿತಸ್ಸರ್ವಕರ್ಮಸು ।
ಸ್ನಾತ್ವಾ ಸಂತರ್ಪ್ಯ ದೇವಾದೀನ್ ದೇವತಾಭ್ಯರ್ಚನಂ ತತಃ ॥ ೧೦ ॥

ಅಭಿವಾದನಶೀಲಃ ಸ್ಯಾದ್ವೃದ್ಧೇಷು ಚ ಯಥಾಕ್ರಮಂ ।
ಕೃತೇಽಭಿವಾದನೇ ಕುರ್ಯಾನ್ನೈವ ಪ್ರತ್ಯಭಿವಾದನಂ ॥ ೧೧ ॥

ಕರೋತಿ ನಾಭಿವಾದ್ಯೋಽಸೌ ಯಥಾ ಶೂದ್ರಸ್ತಥೈವ ಸಃ ।
ಆಧ್ಯಾತ್ಮಿಕಂ ವೈದಿಕಂ ವಾ ತಥಾ ಲೌಕಿಕಮೇವ ವಾ ॥ ೧೨ ॥

ಆದದೀತ ಗುರೋರ್ಯಸ್ಮಾತ್ ತಂ ಪೂರ್ವಮಭಿವಾದಯೇತ್ ।
ಅಸಾವಹಮಿತಿ ಬ್ರೂಯಾತ್ ಪ್ರತ್ಯುತ್ಥಾಯ ಯವೀಯಸಃ ॥ ೧೩ ॥

ನಾಭಿವಾದ್ಯಾಸ್ತು ವಿಪ್ರೇಣ ಕ್ಷತ್ರಿಯಾದ್ಯಾಃ ಕಥಂಚನ ।
ಶಿಷ್ಟಾನಾಂ ಚ ಗೃಹಾನ್ನಿತ್ಯಂ ಭಿಕ್ಷಾಮಾಹೃತ್ಯ ಸುವ್ರತಃ ॥ ೧೪ ॥

---

೧೦. ಯಾವ ಬ್ರಹ್ಮಚಾರಿಯು ಅಗ್ನಿಕಾರ್ಯವನ್ನು ಬಿಟ್ಟಿರುವನೋ, ಅವನು ಸರ್ವಕರ್ಮಕ್ಕೂ ಅನರ್ಹನು. ಸ್ನಾನ, ದೇವತಾರಾಧನೆ ಇವೆಲ್ಲವೂ ಬ್ರಹ್ಮಚಾರಿಯ ಮುಖ್ಯಧರ್ಮಗಳು.

೧೧. ಬ್ರಹ್ಮಚಾರಿಯು ಯಾವಾಗಲೂ ದೊಡ್ಡವರಲ್ಲಿ ವಿಧೇಯನಾಗಿದ್ದು ಅವರಿಗೆ ಅಭಿವಾದನ ಮಾಡಬೇಕು. ಬ್ರಹ್ಮಚಾರಿಯು ನಮಸ್ಕಾರಮಾಡಿದರೆ ದೊಡ್ಡವರು ಅವರಿಗೆ ಪ್ರತಿನಮಸ್ಕಾರ ಮಾಡಬಾರದು.

೧೨. ಬ್ರಹ್ಮಚಾರಿ ಮತ್ತು ಶೂದ್ರ ಇವರಿಬ್ಬರೂ ತಮಗಿಂತ ದೊಡ್ಡವರಾಗಿರುವವರನ್ನು ವಂದಿಸಿದರೆ ದೊಡ್ಡವರು ಇವರಿಗೆ ಪ್ರತಿಯಾಗಿ ನಮಸ್ಕರಿಸಬಾರದು. ಆದರೆ ಬ್ರಹ್ಮಚಾರಿಯು ಸದ್ಗುರುವಿನಿಂದ ಆತ್ಮವಿದ್ಯೆಯನ್ನಾಗಲಿ, ವೇದವನ್ನಾಗಲಿ, ಲೌಕಿಕವಾದ ಶಾಸ್ತ್ರಗಳನ್ನಾಗಲಿ ಅಭ್ಯಾಸಮಾಡುತ್ತಿದ್ದರೆ ಅಂತಹ ಗುರುವಿಗೆ ಮೊದಲು ಬ್ರಹ್ಮಚಾರಿಯು ವಂದಿಸಬೇಕು.

೧೪. ಬ್ರಹ್ಮಚಾರಿಯು ಗುರುಗಳಿಗೆ ನಮಸ್ಕರಿಸುವಾಗ ನಾನು ಇಂತಹವನು ಎಂದು ಹೆಸರು ಕುಲಗಳನ್ನು ಹೇಳುತ್ತಾ ವಂದಿಸಬೇಕು. ಬ್ರಾಹ್ಮಣನಾದವನು ಕ್ಷತ್ರಿಯರೇ ಮೊದಲಾದ ಉಳಿದ ಮೂರು ಜಾತಿಯವರಿಗೂ ನಮಸ್ಕರಿಸಬಾರದು. ಬ್ರಹ್ಮಚಾರಿಯು ಶಿಷ್ಟರಾದವರ ಮನೆಯಿಂದ ಭಿಕ್ಷಾನ್ನವನ್ನು ತಂದು ಜೀವಿಸಬೇಕು.

ನಿವೇದ್ಯ ಗುರವೇಽಶ್ನೀಯಾತ್ ವಾಗ್ಯತಸ್ತದನುಜ್ಞಯಾ ।
ಭೈಕ್ಷೇಣ ವರ್ತನಂ ನಿತ್ಯಂ ನೈಕಾನ್ನಾದೀ ವ್ರತೀ ಭವೇತ್ ॥ ೧೫ ॥
ಉಪವಾಸಸಮಾ ಭಿಕ್ಷಾ ಪ್ರೋಕ್ತಾ ವೈ ಬ್ರಹ್ಮಚಾರಿಣಾಂ ।
ಅನಾರೋಗ್ಯಮನಾಯುಷ್ಯಮಸ್ವರ್ಗ್ಯಂ ಚಾತಿಭೋಜನಂ ॥ ೧೬ ॥
ಅಪುಣ್ಯಂ ಲೋಕವಿದ್ವಿಷ್ಟಂ ತಸ್ಮಾತ್ತತ್ಪರಿವರ್ಜಯೇತ್ ।
ಪ್ರಾಙ್ಮುಖೋಽನ್ನಾದಿ ಭುಂಜೀತ ಸೂರ್ಯಾಭಿಮುಖ ಏವ ವಾ ॥ ೧೭ ॥
ನಾದ್ಯಾದುದಙ್ಮುಖೋ ನಿತ್ಯಂ ವಿಧಿರೇಷ ಸನಾತನಃ ।
ಪಾದೌ ಪ್ರಕ್ಷಾಳ್ಯ ವಿಧಿವತ್ ಆಚಮ್ಯ ಪ್ರಯತೋ ದ್ವಿಜಃ ॥ ೧೮ ॥
ಭುಂಜೀತ ಮೌನೀ ಸತತಂ ಸ್ಮರೇದ್ದೇವಂ ಸನಾತನಂ ।
ಸೋಪಾನತ್ಕೋ ಜಲಸ್ಥೋ ವಾ ನೋಷ್ಣೀಷೀ ಚಾಚಮೇದ್ಬುಧಃ ॥ ೧೯ ॥

---

೧೫. ಬ್ರಹ್ಮಚಾರಿಯು ತಾನು ಬೇಡಿದ ಭಿಕ್ಷಾನ್ನವನ್ನು ಗುರುವಿಗೆ ನಿವೇದಿಸಿ ಅವನಪ್ಪಣೆಯನ್ನು ಪಡೆದು ತಾನು ಭುಜಿಸಬೇಕು. ಬ್ರಹ್ಮಚರ್ಯವ್ರತದಲ್ಲಿರುವವನು ಎಂದಿಗೂ ಒಂದು ಹೊತ್ತು ಊಟಮಾಡಿ ಮತ್ತೊಂದು ಹೊತ್ತಿನಲ್ಲಿ ಉಪವಾಸ ಮಾಡಬಾರದು.

೧೬. ಏಕೆಂದರೆ ಬ್ರಹ್ಮಚಾರಿಯು ಭಿಕ್ಷಾನ್ನದಿಂದ ಜೀವಿಸಿದರೆ, ಅವನು ಉಪವಾಸವ್ರತದಿಂದ ಜೀವಿಸಿದಂತೆಯೇ ಆಗುವುದು. ಹಾಗೆಯೇ ಬ್ರಹ್ಮಚಾರಿಗೆ ಅತಿಭೋಜನವೂ ನಿಷಿದ್ಧವಾದದ್ದು. ಅವನಿಗೆ ಅತಿ ಭೋಜನವು ಅನಾರೋಗ್ಯವನ್ನೂ ಆಯುಃಕ್ಷೀಣತೆಯನ್ನೂ, ನರಕಪ್ರಾಪ್ತಿಯನ್ನೂ ಒದಗಿಸತಕ್ಕದ್ದಾಗುವುದು.

೧೭. ಅತಿ ಭೋಜನವು ಯಾವಾಗಲೂ ಪುಣ್ಯಪ್ರದವಲ್ಲ. ಮತ್ತು ಜನಸಾಮಾನ್ಯಕ್ಕೂ ಜುಗುಪ್ಸಾದಾಯಕವು. ಆದ್ದರಿಂದ ಬ್ರಹ್ಮಚಾರಿಯು ಖಂಡಿತವಾಗಿಯೂ ಅದನ್ನು ಬಿಡಬೇಕು. ಅಲ್ಲದೆ ಊಟಮಾಡುವಾಗ ಬ್ರಹ್ಮಚಾರಿಯು ಪೂರ್ವಾಭಿಮುಖವಾಗಿಯೋ ಅಥವಾ ಸೂರ್ಯನಿಗೆ ಎದುರಾಗಿಯೋ ಕುಳಿತು ಭೋಜನಮಾಡಬೇಕು. ಉತ್ತರದಿಕ್ಕಿಗೆ ಯಾವಾಗಲೂ ಅಭಿಮುಖನಾಗಿ ಕುಳಿತು ಭೋಜನಮಾಡಬಾರದು. ಇದು ಶಿಷ್ಟರ ನಿಯಮ.

೧೮–೧೯. ಬ್ರಾಹ್ಮಣನು ಭೋಜನಾನಂತರ ವಿಧಿವತ್ತಾಗಿ ಆಚಮನಮಾಡಬೇಕು. ಊಟಮಾಡುವಾಗ ಮೌನದಿಂದಿರಬೇಕು. ಪರಮಾತ್ಮನನ್ನು ಆಗಾಗ್ಯೆ ಸ್ಮರಿಸುತ್ತಿರಬೇಕು. ಪಾದರಕ್ಷೆ ಹಾಕಿಕೊಂಡಾಗಲಿ, ನೀರಿನಲ್ಲಿ ನಿಂತಾಗಲಿ, ರುಮಾಲು ಮೊದಲಾದ ಶಿರೋವಸ್ತ್ರಗಳನ್ನು ಧರಿಸಿಕೊಂಡಾಗಲಿ ಆಚಮನಮಾಡಬಾರದು.

ನ ಚೈವ ವರ್ಷಧಾರಾಭಿ ರ್ನ ತಿಷ್ಠನ್ ಪ್ರಲಪನ್ನ ಚ ।
ಪ್ರಾಶ್ನೀಯಾತ್ರಿರಪಃ ಪೂರ್ವಂ ಬ್ರಾಹ್ಮೇಣ ಪ್ರಯತೋ ದ್ವಿಜಃ ॥ ೨೦ ॥

ಸಂವೃತಾಂಗುಷ್ಠಮೂಲೇನ ಮುಖಂ ಚೈವ ಮುಪಸ್ಪೃಶೇತ್ ।
ಅಂಗುಷ್ಠಾನಾಮಿಕಾಭ್ಯಾಂ ಚ ಸಂಸ್ಪೃಶೇನ್ನಯನದ್ವಯಂ ॥ ೨೧ ॥

ಅಂಗುಷ್ಠತರ್ಜನೀಭ್ಯಾಂ ಚ ಸಂಸ್ಪೃಶೇನ್ನಾಸಿಕಾಪುಟೇ ।
ಕನಿಷ್ಠಾಂಗುಷ್ಠಯೋಗೇನ ಸ್ಪೃಶೇತ್ ಶ್ರೋತ್ರಯುಗಂ ದ್ವಿಜಃ ॥ ೨೨ ॥

ಸರ್ವಾಭಿರಂಗುಲೀಭಿಶ್ಚ ಹೃದಯಂ ಚ ತಲೇನ ವಾ ।
ಸಂಸ್ಪೃಶೇದ್ವೈ ಶಿರಸ್ತದ್ವತ್ ಅಂಗುಷ್ಠೇನಾಥವಾ ಸ್ವಯಂ ॥ ೨೩ ॥

ವಿನ್ಯಸ್ಯ ದಕ್ಷಿಣೇ ಕರ್ಣೇ ಬ್ರಹ್ಮಸೂತ್ರಮುದಙ್ಮುಖಃ ।
ದಿವಾ ಮೂತ್ರಪುರೀಷೇ ಚ ಶರ್ವರ್ಯಾಂ ದಕ್ಷಿಣಾಮುಖಃ ॥ ೨೪ ॥

---

೨೦. ಮಳೆಯು ಸುರಿಯುತ್ತಿರುವಾಗ, ಅಥವಾ ತಾನು ನಿಂತುಕೊಂಡಿರುವಾಗ, ಅಳುತ್ತಿರುವಾಗ ಊಟಮಾಡಬಾರದು. ಊಟಕ್ಕೆ ಮುಂಚೆ ಯಾವಾಗಲೂ ಮೂರು ಸಾರಿ ನೀರನ್ನು ಕುಡಿದೇ ಅಂದರೆ ಆಚಮನಮಾಡಿಯೇ ಊಟವನ್ನು ಆರಂಭಿಸಬೇಕು.

೨೧. ಆಚಮನಾನಂತರದಲ್ಲಿ, ಹೆಬ್ಬೆರಳಿನ ತುದಿಯಿಂದ ಮುಖವನ್ನು ಸ್ಪರ್ಶಮಾಡಬೇಕು. ಅಂಗುಷ್ಠ ಮತ್ತು ಅನಾಮಿಕಾ ಬೆರಳುಗಳಿಂದ ಎರಡು ಕಣ್ಣುಗಳನ್ನೂ ಸ್ಪರ್ಶಮಾಡಬೇಕು. ಇದು ಆಚಮನಾನಂತರದಲ್ಲಿ ಮಾಡಬೇಕಾದ ವಿಧಿ.

೨೨. ಹಾಗೆಯೇ ಅಂಗುಷ್ಠ ಮತ್ತು ತರ್ಜನೀ ಬೆರಳುಗಳಿಂದ, ಮೂಗುಗಳ ಮೇಲ್ಭಾಗವನ್ನು ಸ್ಪರ್ಶಮಾಡಬೇಕು. ಆಮೇಲೆ ಅಂಗುಷ್ಠ ಮತ್ತು ಕನಿಷ್ಠಿಕೆಗಳಿಂದ ಎರಡು ಕಿವಿಗಳನ್ನೂ ಮುಟ್ಟಿಕೊಳ್ಳಬೇಕು.

೨೩. ಎಲ್ಲಾ ಅಂಗುಲಿಗಳಿಂದಲೂ, ಹೃದಯವನ್ನು ಮುಟ್ಟಬೇಕು. ಅಥವಾ ಅಂಗೈಯಿಂದ ಹೃದಯವನ್ನು ಆಚ್ಛಾದಿಸಿಕೊಳ್ಳಬಹುದು. ಅಂಗುಷ್ಠದಿಂದಲೋ, ಪಾಣಿತಲದಿಂದಲೋ ಶಿರಸ್ಸನ್ನು ಮುಟ್ಟಿಕೊಳ್ಳಬೇಕು.

೨೪. ಮಲಮೂತ್ರವಿಸರ್ಜನೆಯ ಕಾಲದಲ್ಲಿ ಬಲಗಿವಿಯ ಮೇಲೆ ಯಜ್ಞೋಪವೀತವನ್ನು ಇರಿಸಿಕೋಡು, ಹಗಲಿನಲ್ಲಿ ಉತ್ತರಾಭಿಮುಖವಾಗಿಯೂ, ರಾತ್ರಿಯಲ್ಲಿ ದಕ್ಷಿಣಾಭಿಮುಖವಾಗಿಯೂ ಕುಳಿತುಕೊಳ್ಳಬೇಕು.

ಆಚ್ಛಾದ್ಯ ಪರ್ಣೈರ್ವಸುಧಾಂ ತೃಣೈರ್ವಾ ಮೌನಸಂಯುತಃ ।
ಶಿರಃ ಪ್ರಾವೃತ್ಯ ವಿಪ್ರೇಂದ್ರಾ ನಾನ್ಯಥಾ ಚ ಕದಾಚನ ॥ ೨೫ ॥

ಪಥಿ ಗೋಷ್ಠೇ ನದೀತೀರೇ ಛಾಯಾಯಾಂ ಕೂಪಸನ್ನಿಧೌ ।
ತುಷಾಂಗಾರಕಪಾಲೇಷು ನ ಕ್ಷೇತ್ರೇ ನ ಚತುಷ್ಪಥೇ ॥ ೨೬ ॥

ನೋದ್ಯಾನೇ ನ ಶ್ಮಶಾನೇ ಚ ನ ಪಶ್ಯಂಸ್ತಾರಕಾದಿಕಾನ್ ।
ನ ಚೈವಾಭಿಮುಖಃ ಸ್ತ್ರೀಣಾಂ ಗುರುಬ್ರಾಹ್ಮಣಯೋರ್ಗವಾಂ ॥ ೨೭ ॥

ಶೌಚಂ ಪಶ್ಚಾತ್ಪ್ರಕುರ್ವೀತ ಗಂಧಲೇಪಕ್ಷಯಾವಧಿ ।
ಆಂತರಂ ಮನಸಃ ಶುದ್ಧಿರ್ಯಥಾ ಭವತಿ ತದ್ದ್ವಿಜಾಃ ॥ ೨೮ ॥

ಜಿತೇಂದ್ರಿಯಃ ಸ್ಯಾತ್ಸತತಂ ವಶ್ಯಾತ್ಮಾಕ್ರೋಧನಃ ಶುಚಿಃ ।
ಪ್ರಯುಂಜೀತ ಸದಾ ವಾಚಂ ಮಧುರಾಂ ಹಿತಭಾಷಿಣೀಂ ॥ ೨೯ ॥

---

೨೫. ಮಲವಿಸರ್ಜನೆಯ ಸ್ಥಳದಲ್ಲಿ ಮೊದಲು ಎಲೆಯನ್ನಾಗಲಿ, ಹುಲ್ಲನ್ನಾಗಲಿ, ಹಾಸಬೇಕು. ತಲೆಯನ್ನು ವಸ್ತ್ರದಿಂದ ಮುಚ್ಚಿ ಮೌನವಾಗಿ ಕುಳಿತು ಮಲವಿಸರ್ಜನೆ ಮಾಡಬೇಕು. ಹೀಗಲ್ಲದೆ ಬೇರೆ ಯಾವ ರೀತಿಯಿಂದಲೂ ಮಲವಿಸರ್ಜನೆಯನ್ನು ಮಾಡುವುದು ತಪ್ಪು.

೨೬. ದಾರಿಯಲ್ಲಿ, ದನಗಳನ್ನು ಕಟ್ಟುವ ಸ್ಥಳದಲ್ಲಿ, ನದಿಯ ದಡದಲ್ಲಿ, ಮರದ ನೆರಳಿನಲ್ಲಿ ಬಾವಿಯ ಹತ್ತಿರ, ಬತ್ತದ ಹೊಟ್ಟು, ಬೆಂಕಿ, ತಲೆಯ ಬುರುಡೆ, ಹೊಲ, ನಾಲ್ಕುದಾರಿಗಳು ಕೂಡುವ ಸ್ಥಳ, ಇಂತಹ ಸ್ಥಳಗಳಲ್ಲಿ ಎಂದಿಗೂ ಮಲಮೂತ್ರವಿಸರ್ಜನೆಯನ್ನು ಮಾಡಬಾರದು.

೨೭. ಉದ್ಯಾನವನ, ಸ್ಮಶಾನ ಇವುಗಳಲ್ಲಿಯೂ, ಅಂತರಿಕ್ಷದಲ್ಲಿ ನಕ್ಷತ್ರಾದಿಗಳನ್ನು ನೋಡುತ್ತಲೂ, ಗುರು, ಬ್ರಾಹ್ಮಣ, ಗೋವು, ಸ್ತ್ರೀಯರು ಇವರ ಎದುರಿನಲ್ಲಿಯೂ ಮಲಮೂತ್ರಾದಿಗಳನ್ನು ವಿಸರ್ಜಿಸಬಾರದು.

೨೮. ದುರ್ಗಂಧವು ನಿಲ್ಲದಂತೆಯೂ, ಮಲಾದಿಗಳು ದೇಹದಲ್ಲಿ ಅಂಟಿಕೊಳ್ಳದಂತೆಯೂ ಶುದ್ಧನಾಗಿರುವುದಕ್ಕಾಗಿ ಶೌಚಕರ್ಮವನ್ನು ಮಾಡಿಕೊಳ್ಳಬೇಕು. ಈ ಶೌಚವು ಕೇವಲ ಬಾಹ್ಯಶುದ್ಧಿಗಾಗಿ ಮಾತ್ರವಲ್ಲ. ಇದರಿಂದ ಆಂತರ್ಯಶುದ್ಧಿಯೂ ಆಗುವುದು.

೨೯. ಬ್ರಹ್ಮಚಾರಿಯು ಯಾವಾಗಲೂ ಜಿತೇಂದ್ರಿಯನಾಗಿ, ಸರ್ವರಿಗೂ ಮಾನ್ಯನಾಗಿ ಕ್ರೋಧವಿಲ್ಲದವನಂತೆ ಶುಚಿಯಾಗಿರಬೇಕು. ತಾನು ಮತ್ತೊಬ್ಬರೊಡನೆ ಮಾತನಾಡುವಾಗ, ಹಿತವಾಗಿ ಮಧುರವಾಗಿರುವಂತೆ ವ್ಯವಹಾರಮಾಡಬೇಕು.

ಪರೋಪಘಾತಂ ಪೈಶೂನ್ಯಂ ಕಾಮಂ ಲೋಭಂ ತಥೈವ ಚ ।
ದ್ಯೂತಂ ಜನಪರೀವಾದಂ ಸ್ತ್ರೀಪ್ರೇಕ್ಷ್ವೇಲಾಲಂಭನಂ ತಥಾ ॥ ೩೦ ॥

ಗಂಧಮಾಲ್ಯಂ ರಸಂ ಛತ್ರಂ ವರ್ಜಯೇದ್ದಂತಧಾವನಂ ।
ಸರ್ವಂ ಪರ್ಯುಷಿತಂ ವರ್ಜ್ಯಂ ಕೃತಂ ಚ ಲವಣಂ ತಥಾ ॥ ೩೧ ॥

ಮಲಾಪಕರ್ಷಣಂ ಸ್ನಾನಂ ಶೂದ್ರಾದ್ಯೈರಭಿಭಾಷಣಂ ।
ಗುರೋರವಜ್ಞಾಂ ಸತತಂ ಬ್ರಹ್ಮಚಾರೀ ವಿವರ್ಜಯೇತ್ ॥ ೩೨ ॥

ಉದಕುಂಭಂಸುಮನಸೋ ಗೋಶಕೃನ್ಮೃತ್ತಿಕಾಂ ಕುಶಾನ್ ।
ಗುರ್ವರ್ಥಮಾಹರೇನ್ನಿತ್ಯಂ ಭೈಕ್ಷಂ ಚಾಹರಹಶ್ಚರೇತ್ ॥ ೩೩ ॥

ಆಚಮ್ಯ ಸಂಯುತೋ ನಿತ್ಯಂ ಅಧೀಯೀತ ಹ್ಯುದಙ್ಮುಖಃ ।
ಉಪಸಂಗೃಹ್ಯ ತತ್ಪಾದೌ ವೀಕ್ಷ್ಯಮಾಣೋ ಗುರೋರ್ಮುಖಂ ॥ ೩೪ ॥

---

೩೦. ಮತ್ತೊಬ್ಬರಿಗೆ ಯಾವಾಗಲೂ ಹಿಂಸೆಯನ್ನು ಕೊಡಬಾರದು. ಚಾಡಿ ಹೇಳಬಾರದು. ಕಾಮ, ಅತ್ಯಾಸೆ, ಜೂಜು, ಜನರ ನಿಂದೆಗಳು, ಸ್ತ್ರೀಕ್ರೀಡೆ, ಇವೇ ಮೊದಲಾದುವುಗಳನ್ನು ಬಿಡಬೇಕು.

೩೧. ಗಂಧ, ಹೂವು, ರಸದ್ರವ್ಯಗಳು, ಛತ್ರಿ, ಇವೇ ಮೊದಲಾದುವುಗಳನ್ನು ಸೇವಿಸಬಾರದು. ದಂತಧಾವನವು ಬ್ರಹ್ಮಚಾರಿಗೆ ಅಷ್ಟು ಮುಖ್ಯವಲ್ಲ. ಯಾವ ಪದಾರ್ಥವನ್ನೇ ಆಗಲಿ ತಂಗಳಾದ್ದನ್ನು ತಿನ್ನಬಾರದು. ಕ್ಷಾರವಸ್ತುಗಳನ್ನು ಹೆಚ್ಚಾಗಿ ಭುಜಿಸಬಾರದು.

೩೨. ಬ್ರಹ್ಮಚಾರಿಯು, ಮಲಾಪಕರ್ಷಣಸ್ನಾನವನ್ನು ಮಾಡಬಾರದು. ಶೂದ್ರಾದಿಗಳೊಡನೆ ವ್ಯವಹರಿಸಬಾರದು. ಗುರುತಿರಸ್ಕಾರವನ್ನು ಎಂದಿಗೂ ಯೋಚಿಸಬಾರದು. ಮಲಾಪಕರ್ಷಣವೆಂದರೆ ಶುಚ್ಯರ್ಥವಾಗಿ ಮಾಡುವ ಸ್ನಾನ.

೩೩. ಗುರುಗಳಿಗೋಸ್ಕರ, ನಿತ್ಯವೂ, ನೀರಿನ ಗಡಿಗೆಗಳನ್ನೂ, ಪುಷ್ಪಾದಿಗಳನ್ನೂ ಗೋಮಯ, ಮೃತ್ತಿಕೆ, ದರ್ಭೆ, ಇವೇ ಮುಂತಾದ ವಸ್ತುಗಳನ್ನು ಪ್ರತಿನಿತ್ಯವೂ ತಂದುಕೊಡುತ್ತಿರಬೇಕು.

೩೪. ಬ್ರಹ್ಮಚಾರಿಯು ಅಧ್ಯಯನಮಾಡುವುದಕ್ಕೆ ಮುಂಚೆ ನಿಯಮದಿಂದ ಆಚಮನವನ್ನು ಮಾಡಬೇಕು. ಅನಂತರ ಗುರುವಿನ ಪಾದವನ್ನು ಸ್ಪರ್ಶಮಾಡಿ, ಗುರುಮುಖವನ್ನೇ ನೋಡುತ್ತಾ ಉತ್ತರಾಭಿಮುಖನಾಗಿ ಕುಳಿತು ಅಧ್ಯಯನ ಮಾಡಬೇಕು.

ಸರ್ವೇಷಾಮೇವ ಭೂತಾನಾಂ ವೇದಶ್ಚಕ್ಷುಃ ಸನಾತನಂ ।
ವೇದಃ ಶ್ರೇಯಸ್ಕರಃ ಪುಂಸಾಂ ನಾನ್ಯ ಇತ್ಯಬ್ರವೀದ್ರವಿಃ ॥ ೩೫ ॥

ಅನಧೀತ್ಯ ದ್ವಿಜೋ ಯಸ್ತು ಶಾಸ್ತ್ರಾಣಿ ಸುಬಹೂನ್ಯಪಿ ।
ಶೃಣೋತಿ ಬ್ರಾಹ್ಮಣೋ ನಾಸೌ ನರಕಾಣಿ ಪ್ರಪದ್ಯತೇ ॥ ೩೬ ॥

ನಾಧೀತವಿದ್ಯೋ ಯೋ ವಿಪ್ರ ಆಚಾರೇಷು ಪ್ರವರ್ತತೇ ।
ನಾಽಽಚಾರಫಲಮಾಪ್ನೋತಿ ಯಥಾ ಶೂದ್ರಸ್ತಥೈವ ಸಃ ॥ ೩೭ ॥

ನಿತ್ಯಂ ನೈಮಿತ್ತಿಕಂ ಕಾಮ್ಯಂ ಯಚ್ಚಾನ್ಯತ್ಕರ್ಮ ವೈದಿಕಂ ।
ಅನಧೀತಸ್ಯ ವಿಪ್ರಸ್ಯ ಸರ್ವಂ ಭವತಿ ನಿಷ್ಫಲಂ ॥ ೩೮ ॥

ಅನಧೀತಸ್ಯ ವಿಪ್ರಸ್ಯ ಪುತ್ರೋ ವಾಧ್ಯಯನಾನ್ವಿತಃ ।
ಶೂದ್ರಪುತ್ರಃ ಸ ವಿಜ್ಞೇಯೋ ನ ವೇದಫಲಮಶ್ನುತೇ ॥ ೩೯ ॥

---

೩೫. ಸಮಸ್ತ ಪ್ರಾಣಿಗಳಿಗೂ, ಸಮಸ್ತ ಜಗತ್ತಿಗೂ ವೇದಗಳೇ ಕಣ್ಣುಗಳು. ವೇದವು ಸನಾತನವಾದದ್ದು. ಮತ್ತು ಪುರುಷರಿಗೆ ವೇದಾಧ್ಯಯನಕ್ಕಿಂತ ಶ್ರೇಯಸ್ಕರವಾದುದು ಮತ್ತೊಂದಿಲ್ಲ.

೩೬. ಯಾವನು ಬ್ರಾಹ್ಮಣನಾಗಿ, ಅನೇಕ ಶಾಸ್ತ್ರಗಳಲ್ಲಿ ಒಂದನ್ನಾದರೂ ಅಧ್ಯಯನ ಮಾಡುವುದಿಲ್ಲವೋ, ಅಥವಾ ಶಾಸ್ತ್ರಾರ್ಥಗಳನ್ನು ಕೇಳಲು ಇಷ್ಟಪಡುವುದಿಲ್ಲವೋ ಅಂಥವನು ನರಕವನ್ನು ಪಡೆಯುತ್ತಾನೆ. ಅಲ್ಲದೆ ಅವನು ಬ್ರಾಹ್ಮಣನೆನಿಸಿಕೊಳ್ಳುವುದಿಲ್ಲ.

೩೭. ಯಾರು ಶಾಸ್ತ್ರಾದಿಗಳಿಂದ ವಿಧಿಯನ್ನು ತಿಳಿಯದೆ ಆಚಾರಕರ್ಮಗಳಲ್ಲಿ ನಿರತರಾಗುವರೋ, ಅವರು ಶೂದ್ರರಂತೆ ಸಂಪೂರ್ಣವಾದ ಕರ್ಮಫಲವನ್ನು ಹೊಂದಲಾರರು.

೩೮. ವೇದೋಕ್ತವಾದ ನಿತ್ಯಕರ್ಮಗಳನ್ನಾಗಲಿ, ನೈಮಿತ್ತಿಕ ಕರ್ಮಗಳನ್ನಾಗಲಿ, ಕಾಮ್ಯಗಳನ್ನೇ ಆಗಲಿ ನಡೆಸುವವನು ಖಂಡಿತವಾಗಿ ಅಧ್ಯಯನಮಾಡಿರಬೇಕು. ಅಧ್ಯಯನಮಾಡದೇ ಮಾಡಿದ ಈ ಕರ್ಮಗಳೆಲ್ಲವೂ ವ್ಯರ್ಥವಾಗುವುವು

೩೯. ಅಧ್ಯಯನಮಾಡದಿರುವವನು ಶೂದ್ರನಿಗೆ ಸಮ. ಅವನ ಮಗನು ಸಾಕ್ಷಾತ್ತಾಗಿ ಅಧ್ಯಯನಮಾಡಿದ್ದರೂ ಸಹ, ಅವನನ್ನು ಶೂದ್ರಪುತ್ರನೆಂದೇ ಭಾವಿಸಬೇಕು. ವೇದಾಧ್ಯಯನ ಫಲವನ್ನು ಆತನು ಎಂದಿಗೂ ಹೊಂದಲಾರನು.

ವೇದಂ ವೇದೌ ತಥಾ ವೇದಾನ್ ವೇದಾಂಶ್ಚ ಚತುರೋ ದ್ವಿಜಾಃ ।
ಅಧೀತ್ಯ ಗುರವೇ ದತ್ವಾ ದಕ್ಷಿಣಾಂ ಚ ಭವೇದ್ಗೃಹೀ ॥ ೪೦ ॥

ರೂಪಲಕ್ಷಣಸಂಯುಕ್ತಾಂ ಕನ್ಯಾಮುದ್ವಹಯೇತ್ತತಃ ।
ಅಮಾತೃಗೋತ್ರಪ್ರಭವಾಮಸಮಾನಾರ್ಷಗೋತ್ರಜಾಂ ॥ ೪೧ ॥

ಮಾತೃತಃ ಪಂಚಮಾದೂರ್ಧ್ವಂ ಪಿತೃತಃ ಸಪ್ತಮಾತ್ತಥಾ ।
ಅಗೋತ್ರಕುಲಸಂಪನ್ನಾಂ ರೋಗಹೀನಾಂ ಸುರೂಪಿಣೀಂ ॥ ೪೨ ॥

ಮಾತೃತಃ ಪಂಚಮಾದರ್ವಾಕ್ ಪಿತೃತಃ ಸಪ್ತಮಾತ್ತಥಾ ।
ಕನ್ಯಾಂ ವಿವಾಹಯೇದ್ಯಸ್ತು ಗುರುತಲ್ಪೀ ಭವೇದ್ಧಿ ಸಃ ॥ ೪೩ ॥

ಬ್ರಾಹ್ಮೇಣೈವ ವಿವಾಹೇನ ದೈವೇನಾಪಿ ತಥೈವ ಚ ।
ಆರ್ಷಂ ವೈ ಕೇಚಿದಿಚ್ಛಂತಿ ಧರ್ಮಕಾರ್ಯೇಷು ಗರ್ಹಿತಂ ॥ ೪೪ ॥

---

೪೦. ಬ್ರಾಹ್ಮಣನಾದವನು ನಾಲ್ಕು ವೇದಗಳಲ್ಲಿ ಒಂದನ್ನಾಗಲಿ, ಎರಡನ್ನಾಗಲಿ ಅಥವಾ ಎಲ್ಲಾ ವೇದಗಳನ್ನಾಗಲಿ ಕ್ರಮವಾಗಿ ಅಧ್ಯಯನಮಾಡಿ, ಅಧ್ಯಯನಾನಂತರ ದಲ್ಲಿ ಗುರುಗಳಿಗೆ ದಕ್ಷಿಣೆಯನ್ನು ಸಮರ್ಪಿಸಬೇಕು.

೪೧. ಹೀಗೆ ನಿಯಮಾಧ್ಯಯನವಾದಮೇಲೆ ತಾಯಿಯ, ಮತ್ತು ತಂದೆಯ ಗೋತ್ರಗಳಲ್ಲಿ ಹುಟ್ಟದಿರುವ, ರೂಪಲಕ್ಷಣಾದಿಗಳಿಂದ ಕೂಡಿದ ಕನ್ಯೆಯನ್ನು ವಿವಾಹ ವಾಗಬೇಕು. ಮಾತಾಪಿತೃಗೋತ್ರದ ಕನ್ಯೆಯು ವಿವಾಹಕ್ಕೆ ಯೋಗ್ಯಳಲ್ಲವೆಂದು ಉಕ್ತವಾಗಿದೆ.

೪೨. ತಾಯಿಯ ವಂಶದಲ್ಲಿ ಐದು ತಲೆಗಿಂತಲೂ, ತಂದೆಯ ವಂಶದಲ್ಲಿ ಏಳು ತಲೆ ಗಳಿಗಿಂತಲೂ ಹಿಂದಿನದಾದ ವಂಶದಲ್ಲಿ, ಗೋತ್ರಭಿನ್ನರಾದವರಲ್ಲಿ ಜನಿಸಿದ ಆರೋಗ್ಯವಂತಳಾದ ಕನ್ಯೆಯೇ ವಿವಾಹಕ್ಕೆ ಯೋಗ್ಯಳು.

೪೩. ತಾಯಿಯ ವಂಶದಲ್ಲಿ ಐದು ತಲೆಗಿಂತಲೂ, ತಂದೆಯ ವಂಶದಲ್ಲಿ ಏಳನೇ ತಲೆಗಿಂತಲೂ ಈಚಿನ ವಂಶದಲ್ಲಿ ಜನಿಸಿದ ಸ್ತ್ರೀಯನ್ನು ಮದುವೆಮಾಡಿ ಕೊಂಡರೆ ಅವನು ಗುರುಪತ್ನೀಗಮನಮಾಡಿದಷ್ಟು ಪಾಪವನ್ನು ಹೊಂದುವನು.

೪೪. ಬ್ರಾಹ್ಮವಿವಾಹ, ದೈವವಿವಾಹ, ಇವೆರಡು ರೀತಿಯ ವಿವಾಹಗಳೇ ಶ್ರೇಷ್ಠವಾದದ್ದು. ಕೆಲವರು ಆರ್ಷವಿವಾಹವನ್ನು ಅಂದರೆ ಋಷಿಸಂಬಂಧಿಗಳೊಡನೆ ವಿವಾಹವಾಗುವುದನ್ನು ಧರ್ಮವಿರುದ್ಧವೆಂದು ಹೇಳುವರು.

ಧಾರಯೇದ್ವೈಣವೀಂ ಯಷ್ಟಿಮಂತರ್ವಾಸಸ್ತಥೋತ್ತರಂ ।
ಯಜ್ಞೋಪವೀತದ್ವಿತಯಂ ಸೋದಕಂ ಚ ಕಮಂಡಲುಂ　　|| ೪೫ ||

ಛತ್ರಂ ಚೋಷ್ಣೀಶಮಮಲಂ ಪಾದುಕೇ ವಾಪ್ಯುಪಾನಹೌ ।
ರೌಕ್ಮೇ ಚ ಕುಂಡಲೇ ನಿತ್ಯಂ ಕೃತ್ತಕೇಶನಖಃ ಶುಚಿಃ　　|| ೪೬ ||

ಶುಕ್ಲಾಂಬರಧರೋ ನಿತ್ಯಂ ಸುಗಂಧಃ ಪ್ರಿಯದರ್ಶನಃ ।
ನ ಜೀರ್ಣಮಲವದ್ವಾಸಾ ಭವೇದ್ವೈ ವಿಭವೇ ಸತಿ　　|| ೪೭ ||

ಋತುಗಾಮೀ ಭವೇದ್ವಿಪ್ರೋ ನಿಷಿದ್ಧತಿಥಿವರ್ಜಿತಃ ।
ಷಷ್ಠ್ಯಷ್ಟಮ್ಯೌ ಪಂಚದಶೀ ಮಮಾವಾಸ್ಯಾಂ ಚತುರ್ದಶೀಂ　　|| ೪೮ ||

ಬ್ರಹ್ಮಚಾರೀ ಭವೇನ್ನಿತ್ಯಂ ಜನ್ಮರ್ಕ್ಷೇ ಚ ವಿಶೇಷತಃ ।
ಆದದೀತಾವಸಥ್ಯಾಗ್ನಿಂ ಜುಹುಯಾಜ್ಜಾತವೇದಸಂ　　|| ೪೯ ||

---

೪೫. ಗೃಹಸ್ಥಧರ್ಮವನ್ನು ಆಶ್ರಯಿಸಿದ ಮೇಲೆ ಬಿದಿರುದೊಣ್ಣೆಯನ್ನು ಧರಿಸಿರಬೇಕು. ಸರ್ವದಾ ಉಡುವ ಮತ್ತು ಹೊದಿಯುವ ಎರಡು ಬಟ್ಟೆಗಳನುಟ್ಟಿರಬೇಕು. ಯಾವಾಗಲೂ ಯಜ್ಞೋಪವೀತಗಳನ್ನೂ ನೀರಿನಿಂದ ಕೂಡಿದ ಕಮಂಡಲುವನ್ನೂ ಹೊಂದಿರಬೇಕು.

೪೬. ಗೃಹಸ್ಥನು ಛತ್ರಿ, ರುಮಾಲು, ಪಾದರಕ್ಷೆ, ಸುವರ್ಣಮಯವಾದ ಕುಂಡಲಗಳು ಇವುಗಳನ್ನು ಯಾವಾಗಲೂ ಧರಿಸಿರಬೇಕು. ತಲೆಗೂದಲು, ಉಗುರು, ಮುಂತಾದುವುಗಳನ್ನು ಆಗಾಗ್ಯೆ ಕತ್ತರಿಸಿಕೊಳ್ಳಬೇಕು. ಶೌಚಕರ್ಮಗಳಲ್ಲಿ ವಿಶೇಷವಾಗಿ ಮನಗೊಡಬೇಕು.

೪೭. ಗೃಹಸ್ಥನು ಸಾಕಾದಷ್ಟು ಅನುಕೂಲವನ್ನು ಪಡೆದಿರುವಾಗ, ಶುಕ್ಲವಸ್ತ್ರಧಾರಿಯಾಗಿಯೂ, ಸುಗಂಧವಸ್ತುಗಳಿಂದ ಕೂಡಿದವನಾಗಿಯೂ ಇರಬೇಕು. ಜೀರ್ಣವಾದ ಮತ್ತು ಕೊಳೆಯಾದ ಬಟ್ಟೆಗಳನ್ನು ದೂರಮಾಡಬೇಕು.

೪೮. ವಿಪ್ರನು ಷಷ್ಠೀ, ಅಷ್ಟಮೀ, ಪೂರ್ಣಿಮಾ, ಅಮಾವಾಸ್ಯಾ, ಚತುರ್ದಶಿ, ಇವೇ ಮೊದಲಾದ ನಿಷಿದ್ಧವಾದ ತಿಥಿಗಳನ್ನು ಬಿಟ್ಟು ಉಳಿದ ತಿಥಿಗಳಲ್ಲಿ ಋತುಸ್ನಾತಳಾದ ಸ್ವಪತ್ನಿಯನ್ನು ಭೋಗಿಸಬೇಕು.

೪೯. ಬ್ರಹ್ಮಚಾರಿಯು ನಿತ್ಯದಲ್ಲೂ ವಿಶೇಷವಾಗಿ ತನ್ನ ಜನ್ಮನಕ್ಷತ್ರದಿನದಲ್ಲಿಯೂ, ಅವಸಥ್ಯವೆಂಬ ಅಗ್ನಿಯನ್ನು ಆರಾಧಿಸಬೇಕು. ಅಂದರೆ ಸರ್ವದಾ ಅಗ್ನಿಪೂಜಕನಾಗಿರಬೇಕು.

ವೇದೋದಿತಂ ಸ್ವಕಂ ಕರ್ಮ ನಿತ್ಯಂ ಕುರ್ಯಾದತಂದ್ರಿತಃ ।
ಅಕುರ್ವಾಣಃ ಪತತ್ಯಾಶು ನಿರಯಾನತಿಭೀಷಣಾನ್ ॥ ೫೦ ॥

ಕುರ್ಯಾದ್ಗೃಹ್ಯಾಣಿ ಕರ್ಮಾಣಿ ಸಂಧ್ಯೋಪಾಸನಮೇವ ಚ ।
ಸಖ್ಯಂ ಸಾಮಾಧಿಕೈಃ ಕುರ್ಯಾದುಪೇಯಾದೀಶ್ವರಂ ಸದಾ ॥ ೫೧ ॥

ಪಾಪಂ ನ ಗೂಹಯೇದ್ವಿದ್ವಾನ್ನ ಧರ್ಮಂ ಖ್ಯಾಪಯೇತ್ ಕ್ವಚಿತ್ ।
ವಯಸಃ ಕರ್ಮಣೋಽರ್ಥಸ್ಯ ಶ್ರುತಸ್ಯಾಭಿಜನಸ್ಯ ಚ ॥ ೫೨ ॥

ವೇಷವಾನ್ ಬುದ್ಧಿಸಾದೃಶ್ಯಮಾಚರನ್ವಿಚರೇತ್ಸದಾ ।
ಶ್ರುತಿಸ್ಮೃತ್ಯುದಿತಃ ಸಮ್ಯಕ್ಸಾಧುಭಿರ್ಯಶ್ಚ ಸೇವಿತಃ ॥ ೫೩ ॥

ತಮಾಚಾರಂ ನಿಷೇವೇತ ಸಾಧೂನ್ವಕ್ಷ್ಯಾಮಿ ಸಾಂಪ್ರತಂ ।
ಗಂಗಾಯಮುನಯೋರ್ಮಧ್ಯೇ ಮಧ್ಯದೇಶಃ ಪ್ರಕೀರ್ತಿತಃ ॥ ೫೪ ॥

---

೫೦. ವೇದೋಕ್ತವಾಗಿರುವ ತನ್ನ ನಿತ್ಯಕರ್ಮಗಳನ್ನು ಸೋಮಾರಿತನ ಮಾಡದೆ, ಉತ್ಸಾಹದಿಂದ ಮಾಡಬೇಕು. ಗೃಹಸ್ಥನಾಗಿ ಕರ್ಮಬಾಹಿರನಾದರೆ ಅವನು ಅತಿ ಭಯಂಕರವಾದ ನರಕಗಳನ್ನು ಸೇರುವನು.

೫೧. ಗೃಹಸ್ಥರಿಗೆ ಹೇಳಿರುವ ಕರ್ಮಗಳು ಗೃಹ್ಯಗಳು. ಅವುಗಳನ್ನೂ ಸಂಧ್ಯಾವಂದನ ಔಪಾಸನ ಮೊದಲಾದ ನಿತ್ಯಕರ್ಮಗಳನ್ನೂ ಮಾಡಿಕೊಂಡು ಸಾತ್ವಿಕರೊಂದಿಗೆ ಬೆರೆಯುತ್ತಾ ಪರಮೇಶ್ವರನನ್ನು ಸರ್ವದಾ ಆರಾಧಿಸುತ್ತಿರಬೇಕು.

೫೨. ಜ್ಞಾನಿಯಾದವನು ತಾನು ಮಾಡಿದ ಪಾಪಕೆಲಸವನ್ನು ಮುಚ್ಚಬಾರದು. ಧರ್ಮಕಾರ್ಯಗಳನ್ನು ಮಾಡಿದ್ದೇನೆಂದು ಹೊಗಳಿಕೊಳ್ಳಬಾರದು. ಹಾಗೆಯೇ ತನ್ನ ವಯಸ್ಸು, ಕರ್ಮ, ಹಣ, ವಿದ್ಯೆ, ಸಚ್ಚರಿತ್ರೆ, ಇವೇ ಮೊದಲಾದುವುಗಳನ್ನು ವಿಶೇಷವಾಗಿ ಹೇಳಿಕೊಳ್ಳಬಾರದು.

೫೩. ತಾನು ಹೊಂದಬೇಕಾಗಿರುವ ವೇಷಭೂಷಣಗಳು ತನ್ನ ಬುದ್ಧಿಗೆ ಸಮಾನವಾಗಿರಬೇಕು. ಅಲ್ಲದೆ ವೇದಶಾಸ್ತ್ರಗಳಿಗೆ ವಿರುದ್ಧವಾಗಿರಬಾರದು. ಸಾಧುಗಳು ಅದನ್ನು ಪ್ರೀತಿಸುವಂತಿರಬೇಕು.

೫೪. ಅಲ್ಲದೆ ಯಾವ ವೇಷಭೂಷಣಾದಿಗಳು ಶಿಷ್ಟಸಮ್ಮತವಾಗಿವೆಯೋ, ಆ ವೇಷಾದಿಗಳನ್ನೇ ಆಚಾರಶೀಲನು ಹೊಂದಿರಬೇಕು. ಇನ್ನು ಸಾಧುಗಳು ಯಾರು ಎಂಬುದನ್ನು ವಿವರಿಸುವೆನು. ಗಂಗಾ, ಯಮುನಾನದಿಗಳ ಮಧ್ಯಭಾಗವನ್ನೇ ಪವಿತ್ರವಾದ ಮಧ್ಯದೇಶವೆನ್ನುವರು.

ತತ್ರೋತ್ಪನ್ನಾ ದ್ವಿಜಾ ಯೇ ವೈ ಸಾಧವಸ್ತೇ ಪ್ರಕೀರ್ತಿತಾಃ ।
ಯಸ್ತೈರನುಷ್ಠಿತೋ ಧರ್ಮಃ ಶ್ರುತಿಸ್ಮೃತ್ಯೋಶ್ಚ ಸಂಗತಃ ॥ ೫೫ ॥

ಸದಾಚಾರಃ ಸ ವೈ ಪ್ರೋಕ್ತೋ ದೇವದೇವೇನ ಶಂಭುನಾ ।
ಕುರುಕ್ಷೇತ್ರಾಶ್ಚ ಮತ್ಸ್ಯಾಶ್ಚ ಪಾಂಚಾಲಾಃ ಶೂರಸೇನಜಾಃ ॥ ೫೬ ॥

ಏತೇ ದೇಶಾಃ ಪುಣ್ಯದೇಶಾಃ ಸರ್ವೇ ಚಾನ್ಯೇ ಚ ನಿಂದಿತಾಃ ।
ದೇಶೇಷ್ವೇತೇಷು ನಿವಸೇದ್ಬ್ರಾಹ್ಮಣೈರ್ಧರ್ಮಕಾಂಕ್ಷಿಭಿಃ ॥ ೫೭ ॥

ಅತ್ರೈವ ದೃಶ್ಯತೇ ಧರ್ಮೋ ನಾನ್ಯತ್ರೇತ್ಯಬ್ರವೀದ್ರವಿಃ
ಅಂಗವಂಗಕಳಿಂಗಾಂಶ್ಚ ಸೌರಾಷ್ಟ್ರಂ ಗುರ್ಜರಂ ತಥಾ ॥ ೫೮ ॥

ಆಭೀರಂ ಕೌಂಕಣಂ ಚೈವ ದ್ರಾವಿಡಂ ದಕ್ಷಿಣಾಪಥಂ !
ಆಂಧ್ರಂ ಚ ಮಾಗಧಂ ಚೈವ ದೇಶಾನೇತಾಂಶ್ಚವರ್ಜಯೇತ್ ॥ ೫೯ ॥

---

೫೫. ಆ ಮಧ್ಯದೇಶದಲ್ಲಿರುವ ಬ್ರಾಹ್ಮಣರೇ ಸಾಧುಗಳು. ಅವರಿಂದ ನಡೆಸಲ್ಪಡುವ ಧರ್ಮವೆಲ್ಲವೂ ಶ್ರುತಿಸ್ಮೃತಿಗಳಿಗೆ ಸಮ್ಮತವಾದದ್ದು.

೫೬. ಅವರಿಂದ ಆಚರಿಸಲ್ಪಡುವ ಧರ್ಮವನ್ನೆ ದೇವದೇವನಾದ ಶಂಭುವು ಉತ್ತಮವಾದದ್ದೆಂದು ಹೇಳಿರುವನು. ಹಾಗೆಯೇ ಕುರುಕ್ಷೇತ್ರದವರೂ, ಮತ್ಸ್ಯರೂ ಪಾಂಚಾಲದೇಶದವರೂ, ಶೂರಸೇನರೂ ಸಹ ಪವಿತ್ರರಾದವರೇ.

೫೭. ಮೇಲೆ ಹೇಳಿದ ಕುರುಕ್ಷೇತ್ರಾದಿದೇಶಗಳು ಪುಣ್ಯದೇಶಗಳೆಂದು ಪ್ರಸಿದ್ಧಿಗೊಂಡಿವೆ. ಆದ್ದರಿಂದ ಈ ದೇಶಗಳಲ್ಲಿ ಧರ್ಮಕಾಂಕ್ಷಿಗಳಾದ ಬ್ರಾಹ್ಮಣರು ನೆಲಸಬೇಕು.

೫೮–೫೯. ಈ ದೇಶಗಳನ್ನು ಬಿಟ್ಟು ಬೇರೆ ದೇಶಗಳು ಬ್ರಾಹ್ಮಣರ ವಾಸಕ್ಕೆ ಯೋಗ್ಯವಾದವುಗಳಲ್ಲ. ಅಂಗ, ವಂಗ, ಕಳಿಂಗ, ಸೌರಾಷ್ಟ್ರ, ಗುರ್ಜರ, ಆಭೀರ, ಕೊಂಕಣ, ದ್ರಾವಿಡ, ದಕ್ಷಿಣಾಪಥ, ಆಂಧ್ರ, ಮಾಗಧ, ಮುಂತಾದ ದೇಶಗಳಲ್ಲಿ ಖಂಡಿತವಾಗಿಯೂ ಬ್ರಾಹ್ಮಣರು ವಾಸಮಾಡಕೂಡದು.

ನಿತ್ಯಂ ಸ್ವಾಧ್ಯಾಯಶೀಲಃ ಸ್ಯಾತ್ಪಂಚಯಜ್ಞಪರಾಯಣಃ ।
ಶಾಂತೋ ದಾಂತೋ ಜಿತಕ್ರೋಧೋ ಲೋಭಮೋಹವಿವರ್ಜಿತಃ ॥೬೦ ॥

ಸಾವಿತ್ರೀಜಾಪ್ಯನಿರತಃ ಶಿವಭಕ್ತಿಪರಾಯಣಃ ।
ಶ್ರಾದ್ಧಕೃದ್ದಾನನಿರತಃ ಕ್ಷಮಾಯುಕ್ತೋ ದಯಾಲುಕಃ ॥ ೬೧ ॥

ಗೃಹಸ್ಥಸ್ತು ಸಮಾಖ್ಯಾತೋ ನ ಗೃಹೇಣ ಗೃಹೀ ಭವೇತ್ ।
ನ ಶರೀರಂ ವಿನಾ ದೇವಃ ಪೂಜ್ಯತೇ ಗಿರಿಜಾಪತಿಃ ॥ ೬೨ ॥

ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥೋಥ ವಾ ಯತಿಃ ।
ಶಿವಭಕ್ತಿಯುತಂ ಕರ್ಮ ಕುರ್ವನ್ಮುಚ್ಯೇತ ಬಂಧನಾತ್ ॥ ೬೩ ॥

---

೬೦. ಗೃಹಸ್ಥನಾದವನು ನಿತ್ಯವೂ ವೇದಾಧ್ಯಯನಪೂರ್ವಕವಾಗಿ ಪಂಚಯಜ್ಞಗಳನ್ನು ನೆರವೇರಿಸುತ್ತಿರಬೇಕು. ಸ್ವಭಾವದಲ್ಲಿ ಶಾಂತನಾಗಿಯೂ, ಉದಾರನಾಗಿಯೂ, ಕೋಪಗಳನ್ನು ಜಯಿಸಿದವನಾಗಿಯೂ, ಲೋಭಮೋಹಾದಿಗಳನ್ನು ಬಿಟ್ಟವನಾಗಿಯೂ ಇರಬೇಕು.

೬೧. ಸಾವಿತ್ರೀನಾಮಕವಾದ ಗಾಯತ್ರೀಜಪವನ್ನು ತಪ್ಪದೆಮಾಡುತ್ತಿರಬೇಕು. ಪರಮೇಶ್ವರನಲ್ಲಿ ದೃಢಭಕ್ತಿಯಿಟ್ಟು ಪಿತೃಶ್ರಾದ್ಧ, ತರ್ಪಣಾದಿಗಳನ್ನು ಮಾಡುತ್ತಾ, ದಯಾಳುವಾಗಿ ಕ್ಷಮಾಶೀಲನಾಗಿ ಇರುವುದೇ ಗೃಹಸ್ಥನ ಧರ್ಮ.

೬೨. ಈ ವಿಧವಾದ ಧರ್ಮಗಳಿಂದ ಕೂಡಿರುವವನೇ ಗೃಹಸ್ಥನು. ಗೃಹದಲ್ಲಿರುವವನು ಗೃಹಸ್ಥನಲ್ಲ. ಆದರೆ ಗೃಹವೂ ಬೇಕು. ಏಕೆಂದರೆ ಪರಮೇಶ್ವರನೂ ಸಹ ತಾನೂ ದೇಹಿಯಾಗಿಯೇ ಗಿರಿಜಾಪತಿಯೆನಿಸಿಕೊಂಡಿರುವನು. ಅದರಂತೆ ಮನುಷ್ಯರಿಗೂ, ದೇಹ, ಗೇಹ, ಇವುಗಳು ಧರ್ಮಸಾಧನೆಗೆಮುಖ್ಯ ಉಪಾಧಿಗಳು.

೬೩. ಅಂತೂ, ಬ್ರಹ್ಮಚಾರಿಯಾಗಲಿ, ಗೃಹಸ್ಥನಾಗಲಿ, ವಾನಪ್ರಸ್ಥನೇ ಆಗಲಿ, ಸಂನ್ಯಾಸಿಯೇ ಆಗಲಿ ಭಕ್ತಿಯಿಂದ ಯಾರು ಪರಮೇಶ್ವರನನ್ನು ಅರ್ಚಿಸುವರೋ ಅವರು ಸಮಸ್ತ ಬಂಧನಗಳಿಂದಲೂ ಬಿಡಲ್ಪಡುವರೆಂಬುದರಲ್ಲಿ ಸಂಶಯವಿಲ್ಲ

ಇತಿ ಶ್ರೀಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಶ್ರೀ ಸೂತಶೌನಕ ಸಂವಾದೇ ವರ್ಣಾಶ್ರಮಾಚಾರವಿಧಿಕಥನಂ ನಾಮ ಸಪ್ತದಶೋಽಧ್ಯಾಯಃ

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕಸಂವಾದ ರೂಪವಾಗಿ ವರ್ಣಾಶ್ರಮಾಚಾರವಿಧಿಯನ್ನು ತಿಳಿಸುವ ಹದಿನೇಳನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀ ಶಿವಾಯ ನಮಃ ||

ಅಥ ಶ್ರೀ ಸೌರಪುರಾಣೇ ಅಷ್ಟಾದಶಾಧ್ಯಾಯಃ

|| ಸೂತ ಉವಾಚ ||

ವದೇನ್ನೈವಾಪ್ರಿಯಂ ವಾಕ್ಯಂ ನಾನೃತಂ ನ ಚ ಮರ್ಮಭಿತ್ ।
ನ ಹಿಂಸ್ಯಾತ್ಸರ್ವಭೂತಾನಿ ನ ವೇದಾನಾಂ ಚ ಕುತ್ಸನಂ || ೧ ||

ಈಶ್ವರಃ ಸರ್ವಭೂತಾನಾಂ ಸಾಕ್ಷೀ ಯಸ್ಸರ್ವಕರ್ಮಣಾಂ ।
ಸ್ಮರಣಾನ್ಮೋಕ್ಷದಶ್ಶಂಭುಃ ತಸ್ಯ ನಿಂದಾಂ ವಿವರ್ಜಯೇತ್ || ೨ ||

ಶಾಸ್ತ್ರೇಷು ದೃಶ್ಯತೇ ಶುದ್ಧಿರ್ಮಹಾಪಾತಕಿನಾಮಪಿ ।
ನಿಂದಕಾನಾಂ ಮಹೇಶಸ್ಯ ಶುದ್ಧಿರ್ನ ಖಲು ದೃಶ್ಯತೇ || ೩ ||

ಹದಿನೆಂಟನೆಯ ಅಧ್ಯಾಯವು.

೧. ಯಾರ ಮನಸ್ಸನ್ನೂ ನೋಯಿಸುವಂತಹ ಮಾತನ್ನಾಡಬಾರದು. ಸುಳ್ಳನ್ನಾಗಲಿ, ವ್ಯಂಗ್ಯವಾಗಿ ಮನಸ್ಸನ್ನು ನೋಯಿಸುವಂತಹ ಮಾತುಗಳನ್ನಾಗಲಿ ಹೇಳಬಾರದು. ಯಾವ ಪ್ರಾಣಿಯನ್ನೂ ಹಿಂಸಿಸಬಾರದು. ವೇದಗಳನ್ನು ನಿಂದಿಸಬಾರದು.

೨. ಪರಮೇಶ್ವರನು ಸಮಸ್ತ ಪ್ರಾಣಿಗಳ ಪಾಪಪುಣ್ಯಕರ್ಮಗಳನ್ನು ಸಾಕ್ಷೀರೂಪದಿಂದ ನೋಡುತ್ತಿರುವನು. ಅಂಥ ಪರಮೇಶ್ವರನ ಸ್ಮರಣೆಯೇ ಸಾಕು, ಮನುಷ್ಯನಿಗೆ ಮೋಕ್ಷವನ್ನು ಒದಗಿಸುತ್ತದೆ. ಆದ್ದರಿಂದ ಎಂದೂ ಪರಮೇಶ್ವರನನ್ನು ಯಾವ ರೀತಿಯಿಂದಲೂ ನಿಂದಿಸಬಾರದು.

೩. ಮಹಾಪಾಪಗಳನ್ನು ಮಾಡಿದವರಿಗೆ ಧರ್ಮಶಾಸ್ತ್ರಗಳಲ್ಲಿ ಶುದ್ಧಿಯು ವಿಹಿತವಾಗಿದೆ. ಆದರೆ ಶಿವದೂಷಕರಿಗೆ ಎಲ್ಲಿಯೂ ಪ್ರಾಯಶ್ಚಿತ್ತವು ಉಕ್ತವಾಗಿಲ್ಲ. ಅವರು ಎಂದೂ ಮಹಾಪಾಪಿಗಳೇ ಆಗುವರು.

ಜಲಂ ತೃಣಂ ವಾ ಶಾಕಂ ವಾ ಮೃದಂ ವಾ ಕಾಷ್ಠಮೇವ ವಾ ।
ಪರಸ್ಯಾಪಹರನ್ ಜಂತುರ್ನರಕಂ ಪ್ರತಿಪದ್ಯತೇ ॥ ೪ ॥

ನಿತ್ಯಯಾಚನಕೋ ನ ಸ್ಯಾತ್ ಯಾಚಿತಂ ನೈವ ಯಾಚಯೇತ್ ।
ಪ್ರಾಣಾನಪಹರತ್ಯೇಷ ಯಾಚಕಸ್ತಸ್ಯ ದುರ್ಗತಿಃ ॥ ೫ ॥

ಗೃಹೀತವ್ಯಾನಿ ಪುಷ್ಪಾಣಿ ದೇವಾರ್ಚನವಿಧೌ ದ್ವಿಜೈಃ ।
ನೈಕಸ್ಮಾದೇವ ನಿಯತಮನನುಜ್ಞಾಯ ಕೇವಲಂ ॥ ೬ ॥

ತೃಣಂ ಕಾಷ್ಠಂ ಫಲಂ ಪುಷ್ಪಂ ಪ್ರಕಾಶಂ ವೈ ಹರೇದ್ಬುಧಃ ॥
ಧರ್ಮಾರ್ಥಂ ಕೇವಲಂ ವಿಪ್ರೋ ಹ್ಯನ್ಯಥಾ ಪತಿತೋ ಭವೇತ್ ॥ ೭ ॥

ತಿಲಮುದ್ಗಯವಾದೀನಾಂ ಮುಷ್ಟಿರ್ಗ್ರಾಹ್ಯಾ ಯದಿ ಸ್ಥಿತೈಃ ।
ಕ್ಷುಧಾರ್ತೈರ್ನಾನ್ಯಥಾ ವಿಪ್ರೈರ್ಧರ್ಮವಿದ್ಭಿರಿತಿ ಸ್ಥಿತಿಃ ॥ ೮ ॥

---

೪. ಮತ್ತೊಬ್ಬರ ವಶದಲ್ಲಿರುವ ನೀರು, ಹುಲ್ಲು, ತರಕಾರಿ ಅಥವಾ ಮಣ್ಣು ಸೌದೆ ಇವೇ ಮೊದಲಾದ ವಸ್ತುಗಳನ್ನು ಅಪಹರಿಸಬಾರದು. ಹಾಗೆ ಅಪಹಾರ ಮಾಡುವವರು ನರಕಕ್ಕೆ ಈಡಾಗುವರು.

೫. ಗೃಹಸ್ಥನಾದವನು ನಿತ್ಯವೂ ಯಾಚನೆಮಾಡಬಾರದು. ಅಲ್ಲದೆ ಒಂದು ಸಾರಿ ಯಾಚನೆಮಾಡಿದ ವಸ್ತುವನ್ನೇ ಪದೇ ಪದೇ ಕೇಳುತ್ತಿರಬಾರದು. ಹೀಗೆ ಅವಿವೇಕದಿಂದ. ಯಾಚನೆಮಾಡುತ್ತಿರುವ ಯಾಚಕನು ಕೊನೆಗೆ ಪ್ರಾಣಾಪಹಾರಕನಾಗುವನು.

೬. ಬ್ರಾಹ್ಮಣರು ದೇವರ ಅರ್ಚನೆಗಾಗಿ ಪುಷ್ಪಗಳನ್ನು ಗಿಡಗಳಿಂದ ಕೊಯ್ಯಬಹುದು. ಆದರೆ ನಿತ್ಯವೂ ಒಂದೇ ಗಿಡದಿಂದಲೇ ಯಜಮಾನರ ಅಪ್ಪಣೆಯಿಲ್ಲದೆಯೇ ಹೂವುಗಳನ್ನು ಕೊಯ್ಯಬಾರದು.

೭. ಬ್ರಾಹ್ಮಣನು, ತೃಣ, ಸೌದೆ, ಹೂವು, ಹಣ್ಣು, ಈ ವಸ್ತುಗಳನ್ನು ಆಯಾ ವಸ್ತುಗಳ ಯಜಮಾನರ ಎದುರಿನಲ್ಲಿಯೇ ತನ್ನ ಧರ್ಮಕಾರ್ಯಗಳಿಗಾಗಿ ತರಬೇಕು. ಹಾಗೇನಾದರೂ ಯಜಮಾನರ ಅಪ್ಪಣೆಯಿಲ್ಲದೆ ಸ್ವೇಚ್ಛೆಯಾಗಿ ಅಪಹರಿಸಿದರೆ ಆತನು ಪತಿತನಾಗುವನು.

೮. ಧರ್ಮಜ್ಞರಾದ ವಿಪ್ರರು ತಾವು ಹಸಿವಿನಿಂದ ಬಳಲುತ್ತಿರುವಾಗ, ಎಳ್ಳು, ಹೆಸರು, ಅಕ್ಕಿ ಮೊದಲಾದ ಧಾನ್ಯಗಳಲ್ಲಿ ಒಂದೊಂದು ಮುಷ್ಟಿಯಷ್ಟನ್ನು ಯಜಮಾನನ ಅಪ್ಪಣೆಯಿಲ್ಲದೆ ಸ್ವೀಕರಿಸಬಹುದು. ಇದು ಧರ್ಮವಿರುದ್ಧವಾಗುವುದಿಲ್ಲ.

ಪೈಶುನ್ಯಂ ಶುಷ್ಕವೈರಾಣಿ ವಿವಾದಂ ವರ್ಜಯೇತ್ಸದಾ ।
ಧಯಂತೀಂ ಗಾಂ ಪರಕ್ಷೇತ್ರೇ ನ ಚಾಚಕ್ಷೀತ ಕಸ್ಯಚಿತ್ ॥ ೧೩ ॥

ಬಹುಭಿರ್ನ ವಿರೋಧಂ ಚ ಕುರ್ಯಾನ್ನ ಕೃತಿಭಿಸ್ತಥಾ ।
ತಿಥಿಂ ಪಕ್ಷಸ್ಯ ನ ಬ್ರೂಯಾನ್ನಕ್ಷತ್ರಾಣಿ ನ ನಿರ್ದಿಶೇತ್ ॥ ೧೪ ॥

ನ ಪಾಪಂ ಪಾಪಿನಾಂ ಬ್ರೂಯಾತ್ತಥಾಽಪಾಪಮಪಾಪಿನಾಂ ।
ಸತ್ಯೇನ ತುಲ್ಯದೋಷೀ ಸ್ಯಾದಸತ್ಯೇನ ದ್ವಿದೋಷಭಾಕ್ ॥ ೧೫ ॥

ಯಾನಿ ಮಿಥ್ಯಾಽಭಿಶಸ್ತಾನಾಂ ಪತಂತ್ಯಶ್ರೂಣಿ ರೋದನಾತ್ ।
ತಾನಿ ಪುತ್ರಾನ್ ಪಶೂನ್ ಘ್ನಂತಿ ತೇಷಾಂ ಮಿಥ್ಯಾಭಿಶಂಸಿನಾಂ ॥ ೧೬ ॥

---

೧೩. ಗೃಹಸ್ಥನು ಚಾಡಿಹೇಳಬಾರದು. ವ್ಯರ್ಥವಾದ ದ್ವೇಷವನ್ನೂ, ಜಗಳವನ್ನೂ ಬಿಡಬೇಕು. ಮತ್ತೊಬ್ಬರ ಜಮೀನಿನಲ್ಲಿ ಮೇಯುತ್ತಿರುವ ಹಸುವನ್ನು ಕಂಡರೂ ಅದನ್ನು ಮತ್ತಾರಿಗೂ ಹೇಳಬಾರದು.

೧೪. ಬಹುಜನರೊಡನೆ ವಿರೋಧಮಾಡಿಕೊಳ್ಳಬಾರದು. ಸುಖಿಗಳಿಗೆ ತೊಂದರೆಕೊಡಕೂಡದು. ಸ್ವತಂತ್ರವಾಗಿ ತಿಳಿಯದೆ ತಿಥಿನಕ್ಷತ್ರಗಳನ್ನು ಹೇಳಬಾರದು. ಖಗೋಳಜ್ಞಾನವಿಲ್ಲದೆ .ನಕ್ಷತ್ರಗಳ ಅರಿವಿಲ್ಲದೆ ಯಾರಿಗೂ ನಕ್ಷತ್ರಗಳ ಹೆಸರನ್ನು ತಿಳಿಸಲು ಪ್ರಯತ್ನಿಸಬಾರದು.

೧೫. ಪಾಪಿಷ್ಠರ ಪಾಪಕರ್ಮಗಳನ್ನಾಗಲಿ, ಸುಕೃತಿಗಳ ಪುಣ್ಯಕಾರ್ಯಗಳನ್ನಾಗಲಿ ಯಾವಾಗಲೂ ಹೇಳುತ್ತಿರಬಾರದು. ನಿಜವನ್ನು ಹೇಳುವುದೂ ಕೆಲವು ವೇಳೆ ದೋಷವಾಗಬಹುದು. ಹಾಗಿರುವಾಗ ಇನ್ನು ಸುಳ್ಳು ಹೇಳುವುದರಿಂದ ಎರಡು ವಿಧವಾದ ದೋಷಗಳು ಒದಗುತ್ತವೆ ಎಂಬುದನ್ನು ಹೇಳಲೇಬೇಕಾಗಿಲ್ಲ.

೧೬. ಸುಳ್ಳುಹೇಳಿ, ಅದರಿಂದ ಪರರ ಮನಸ್ಸಿಗೆ ವ್ಯಥೆಯನ್ನುಂಟುಮಾಡಿ, ಅದರ ಮೂಲಕ ಅವರು ಅಳುತ್ತಾ ಕಣ್ಣೀರು ಸುರಿಸಿದರೆ ಸುಳ್ಳು ಹೇಳಿದವನ ಮಕ್ಕಳೂ, ಪಶುಗಳೂ ಸಹ ನಾಶವಾಗುವರು. ಆದ್ದರಿಂದ ಎಂದಿಗೂ ಯಾರೂ ಸುಳ್ಳು ಹೇಳಬಾರದು.

ಅನೃತಾತ್ಪಾರದಾರ್ಯಾಚ್ಚ ತಥಾಽಭಕ್ಷ್ಯಸ್ಯ ಭಕ್ಷಣಾತ್ ।
ಅಶ್ರೌತಧರ್ಮಾಚರಣಾತ್ ಕ್ಷಿಪ್ರಂ ನಶ್ಯತಿ ವೈ ಕುಲಂ ॥ ೯ ॥

ಜ್ಞಾನವೃದ್ಧಸ್ತಪೋವೃದ್ಧೋ ವಯೋವೃದ್ಧ ಇತಿ ತ್ರಯಃ ।
ಪೂರ್ವಂ ಪೂರ್ವೋಽಭಿವಾದ್ಯಸ್ಸ್ಯಾತ್ಪೂರ್ವಾಭಾವೇ ಪರಃ ಪರಃ ॥ ೧೦ ॥

ತ್ರಿಪುಂಡ್ರಧಾರೀ ಸತತಂ ಬ್ರಾಹ್ಮಣಸ್ಸರ್ವಕರ್ಮಸು ।
ಭಸ್ಮನೈವಾಗ್ನಿಹೋತ್ರಸ್ಯ ಶಿವಾಗ್ನಿಜನಿತೇನ ವಾ ॥ ೧೧ ॥

ನ ಮೂರ್ಖೈಸ್ಸಹ ಸಂವಾಸಃ ಪತಿತೈರ್ನ ಕದಾಚನ ।
ವೇದನಿಂದಾರತೈರ್ನೈವ ನ ಚಾಪೀಶ್ವರನಿಂದಕೈಃ ॥ ೧೨ ॥

---

೯. ಸುಳ್ಳು ಹೇಳುವುದೂ, ಪರಸ್ತ್ರೀಸಂಸರ್ಗಮಾಡುವುದೂ, ಅಭಕ್ಷ್ಯಭಕ್ಷಣಮಾಡುವುದೂ, ಶ್ರೌತಧರ್ಮಗಳನ್ನು ಆಚರಿಸದೆ ಇರುವುದೂ, ಬ್ರಾಹ್ಮಣನ ಕುಲಕ್ಷಯಕ್ಕೆ ಕಾರಣವಾಗುತ್ತವೆ.

೧೦. ಜ್ಞಾನದಲ್ಲಿ ಅಧಿಕನಾದವನು, ಜ್ಞಾನವೃದ್ಧನೆನಿಸುವನು. ಹಾಗೆಯೇ, ತಪಸ್ಸಿನಲ್ಲಿ, ವಯಸ್ಸಿನಲ್ಲಿ ದೊಡ್ಡವರಾದವರು, ತಪೋವೃದ್ಧ, ವಯೋವೃದ್ಧರೆನ್ನಿಸಿಕೊಳ್ಳುವರು. ಇವರಲ್ಲಿ ಜ್ಞಾನವೃದ್ಧನಿಗೆ ಮೊದಲು ವಂದಿಸಬೇಕು. ಅನಂತರ ತಪೋವೃದ್ಧ, ಆಮೇಲೆ ವಯೋವೃದ್ಧ ಎಂಬುದಾಗಿ ಕ್ರಮದಿಂದ ವಂದ್ಯರಾಗುವರು. ಇವರಲ್ಲಿ ಮೊದಲಿನವರು ದೊರಕದಿದ್ದಾಗ ಎರಡನೆಯವರೇ ಮೊದಲಿಗರಾಗುವರು.

೧೧. ಬ್ರಾಹ್ಮಣನು ಎಲ್ಲಾ ಕರ್ಮಗಳಲ್ಲಿಯೂ, ತ್ರಿಪುಂಡ್ರವನ್ನು ಧರಿಸಿದವನಾಗಿಯೇ, ಕರ್ಮಾನುಷ್ಠಾನಮಾಡಬೇಕು. ತ್ರಿಪುಂಡ್ರವನ್ನಾದರೋ, ಅಗ್ನಿಹೋತ್ರದ ಅಥವಾ ಶಿವನಿಗೆ ಆಹುತಿಕೊಟ್ಟ ಅಗ್ನಿಯಿಂದ ಹುಟ್ಟಿದಂತಹ ಭಸ್ಮದಿಂದಲೇ ರಚಿಸಿಕೊಳ್ಳಬೇಕು.

೧೨. ಮೂರ್ಖರು, ಪತಿತರು, ವೇದದೂಷಕರು, ಸ್ವಾಮಿದ್ರೋಹಿಗಳು, ಶಿವದ್ವೇಷಿಗಳು, ಇಂತಹವರೊಡನೆ ಎಂದಿಗೂ ಬ್ರಾಹ್ಮಣನು ವಾಸಮಾಡಲಾಗದು.

ಬ್ರಹ್ಮಹತ್ಯಾ ಸುರಾಪಾನಂ ಸ್ತೇಯಂ ಗುರ್ವಂಗನಾಗಮಃ ।
ದೃಷ್ಟಂ ವಿರೋಧನಂ ವೃದ್ಧೈಃ ನಾಸ್ತಿ ಮಿಥ್ಯಾಭಿಶಂಸಿನಿ ॥ ೧೭ ॥

ಮೌನಂ ಮದಂ ತಥಾ ಶೋಕಂ ದ್ವೇಷಂ ಚ ಪರಿವರ್ಜಯೇತ್ ।
ರವಿವಾರೇ ನ ಕುರ್ವೀತ ಭೃಷ್ಟಭೈರವಭಕ್ಷಣಂ ॥ ೧೮ ॥

ಧನಕಾಮೋ ಜನಃ ಸತ್ಯಂ ನಾತ್ರ ಕಾರ್ಯಾ ವಿಚಾರಣಾ ।
ರವಿವಾರೇ ತು ಲವಣಂ ವರ್ಜ್ಯಂ ಭೋಜನಪಾತ್ರಕೇ ॥ ೧೯ ॥

ತಥಾ ತೈಲೋಪಮರ್ದಂ ಚ ಧನಕಾಮೇನ ಭೂತಲೇ ।
ನ ಕುರ್ಯಾತ್ಕಸ್ಯಚಿತ್ಪೀಡಾಂ ಸುತಂ ಶಿಷ್ಯಂ ಚ ತಾಡಯೇತ್ ॥ ೨೦ ॥

---

೧೭. ಬ್ರಹ್ಮಹತ್ಯೆ, ಸುರಾಪಾನ, ಸುವರ್ಣಚೌರ್ಯ, ಗುರುಪತ್ನೀಗಮನ, ವೃದ್ಧರೊಡನೆ ವಿರೋಧ ಬಯಸುವುದು, ಇವೆಲ್ಲವೂ ಮಹಾಪಾಪಗಳು. ಸುಳ್ಳು ಹೇಳುವವನಿಗೆ ಮಾತ್ರ ಈ ಮಹಾಪಾಪಗಳು ಸೇರಲಾರವು. ಏಕೆಂದರೆ ಇವೆಲ್ಲಕ್ಕಿಂತಲೂ ಕ್ರೂರವಾದ ದೋಷವು ಮಿಥ್ಯಾಭಾಷಣದಲ್ಲಿರುತ್ತದೆ.

೧೮. ಯಾವಾಗಲೂ ಮೌನವಾಗಿರಬಾರದು. ಅಹಂಕಾರ, ದುಃಖ, ದ್ವೇಷಃ ಇವುಗಳನ್ನು ಸಂಪೂರ್ಣವಾಗಿ ಬಿಡಬೇಕು. ಭಾನುವಾರದ ದಿನ ಯಾವ ಕಟುವಾದ ಆಹಾರವನ್ನಾಗಲಿ ಭಕ್ಷಣಮಾಡಬಾರದು.

೧೯. ಧನಾಭಿಲಾಷೆಯುಳ್ಳವನು, ಭಾನುವಾರದ ದಿನದಲ್ಲಿ ತಾನು ಊಟ ಮಾಡುವ ವಸ್ತುಗಳಲ್ಲಿ ಲವಣವನ್ನು ತ್ಯಜಿಸಬೇಕು. ಇದರಿಂದ ಧನಪ್ರಾಪ್ತಿಯಾಗುವುದು. ಸಂಶಯವಿಲ್ಲ.

೨೦. ಹಾಗೆಯೇ ಧನಕಾಮಿಯಾದವನು ಭಾನುವಾರದಲ್ಲಿ ಅಭ್ಯಂಜನ ಸ್ನಾನಮಾಡಬಾರದು. ಆ ದಿನದಲ್ಲಿ ಯಾರಿಗೂ ಹಿಂಸೆಕೊಡಕೂಡದು. ಮಗನನ್ನಾಗಲಿ, ಶಿಷ್ಯನನ್ನಾಗಲಿ, ಅಕಾರಣವಾಗಿ ಆ ದಿನದಲ್ಲಿ ಹೊಡೆಯುವುದು ಧರ್ಮವಲ್ಲ.

ಅಪಾದ್ಯಮಿತ್ಯಪಾಮಾರ್ಗಂ ದೂರ್ವಾಂ ಸಂಗೃಹ್ಯ ದೂರ್ವಯಾ ।
ಜಲತೀರಂ ಸಮಾಸಾದ್ಯ ಶುಚೌ ದೇಶೇ ಸಮಾಹಿತಃ ॥ ೩೩ ॥

ಆದಿತ್ಯಾ ಇತಿ ಸಂಪ್ರೋಕ್ಷ್ಯ ಕೂಲಂ ತೀರ್ಥಸ್ಯ ಸುವ್ರತಃ ।
ಶುಚೌ ದೇಶೇ ಪ್ರತಿಷ್ಠಾಪ್ಯ ಗಾಯತ್ರ್ಯಾ ಪ್ರೋಕ್ಷಯೇತ್ತತಃ ॥ ೩೪

ಭಾಗದ್ವಯಂ ಸ ತಾಂ ಪಶ್ಚಾದೇಕಂ ದಿಕ್ಷು ವಿವರ್ಜಯೇತ್ ।
ಯತಇಂದ್ರಾದಿಮಂತ್ರೈಶ್ಚ ಚತುರ್ಭಿಸ್ತು ಯಥಾಕ್ರಮಂ ॥ ೩೫ ॥

ಅವಗಾಹ್ಯ ಜಲೇ ಪಶ್ಚಾತ್ತೀರೇ ಚೈವೋಪವಿಶ್ಯ ಚ ।
ಅವಶಿಷ್ಟೇನ ಭಾಗೇನ ಮಂತ್ರೈಶ್ಚಾಲೇಪಯೇತ್ಕ್ರಮಾತ್ ॥ ೩೬ ॥

ಅಕ್ಷೀಭ್ಯಾಮಿತಿಮಂತ್ರೇಣ ಮುಖಮಾಲೇಪಯೇದ್ಬುಧಃ ।
ಗ್ರೀವಾಭ್ಯಾಮಿತಿ ಚ ಗ್ರೀವಾಂ ತಲ್ಲಿಂಗೇನ ತಥಾ ಭುಜೌ ॥ ೩೭ ॥

---

೩೩. ಅಪಾದ್ಯಂ ಎಂಬ ಮಂತ್ರದಿಂದ ಉತ್ತರಿಣೀ ಕಡ್ಡಿಯನ್ನೂ, ದೂರ್ವಾ ಮಂತ್ರದಿಂದ ಹುಲ್ಲುಗರಿಕೆಯನ್ನೂ ತೆಗೆದುಕೊಂಡು, ಜಲಾಶಯದ ದಡಕ್ಕೆ ಶುದ್ಧ ಮನಸ್ಸಿನಿಂದ ಹೋಗಬೇಕು.

೩೪. ಆದಿತ್ಯಾ, ಎಂಬ ಮಂತ್ರದಿಂದ ಆ ಜಲಾಶಯದ ತೀರವನ್ನು ನೀರಿನಿಂದ ಪ್ರೋಕ್ಷಿಸಬೇಕು. ಅನಂತರ ಒಂದು ಶುಚಿಯಾದ ಸ್ಥಳವನ್ನು ಹುಡುಕಿ ಅದನ್ನು ಗಾಯತ್ರೀ ಮಂತ್ರದಿಂದ ಪ್ರೋಕ್ಷಣೆಮಾಡಬೇಕು.

೩೫. ತಾನು ತೆಗೆದುಕೊಂಡು ಹೋಗಿದ್ದ ಆ ಮಣ್ಣನ್ನು ಎರಡುಭಾಗಮಾಡಬೇಕು. ಅದರಲ್ಲಿ ಒಂದು ಭಾಗವನ್ನು ತೆಗೆದುಕೊಂಡು ಯತಇಂದ್ರ, ಎಂಬ ನಾಲ್ಕು ಮಂತ್ರಗಳಿಂದ ನಾಲ್ಕು ದಿಕ್ಕುಗಳಿಗೂ ಸ್ವಲ್ಪಸ್ವಲ್ಪವಾಗಿ ಎಸೆಯಬೇಕು.

೩೬. ಅನಂತರ ನೀರಿನೊಳಕ್ಕೆ ಇಳಿದು ಒಂದು ಸಾರಿ ಮುಳುಗಿ ದಡಕ್ಕೆ ಬಂದು ಕುಳಿತುಕೊಂಡು, ಉಳಿದ ಮೃದ್ಭಾಗದಿಂದ ಮಂತ್ರಪೂರ್ವಕವಾಗಿ ತನ್ನ ದೇಹವನ್ನೆಲ್ಲಾ ಲೇಪಿಸಿಕೊಳ್ಳಬೇಕು.

೩೭. ಅಕ್ಷೀಭ್ಯಾಂ ಎಂಬ ಮಂತ್ರದಿಂದ ಮುಖವನ್ನು ಆ ಮೃದ್ಭಾಗದಿಂದ ತೊಳೆದುಕೊಳ್ಳಬೇಕು. ಗ್ರೀವಾಭ್ಯಾಂ ಎಂಬ ಮಂತ್ರದಿಂದ ಕತ್ತನ್ನೂ ಉಳಿದ ಎರಡು ಮಂತ್ರಗಳಿಂದ ಭುಜಗಳನ್ನೂ ಶುದ್ಧಿಮಾಡಿಕೊಳ್ಳಬೇಕು.

ಶರೀರಂ ಯಜ್ಞಮುಕ್ತ್ವಾಽಥ ಹೃದಯಂ ಪರಿಲೇಪಯೇತ್ ।
ನಾಭಿಮಾನಂದನಂದೇತಿ ಶಿಷ್ಟಂ ಮೂರ್ಧ್ನಿ ವಿನಿಕ್ಷಿಪೇತ್ ॥ ೩೮ ॥

ಮೂರ್ಧಾನಮಿತಿ ಮಂತ್ರೇಣ ತಿಲದೂರ್ವಾಕ್ಷತಾದಿಕಂ ।
ಹಿರಣ್ಯಶೃಂಗಮಿತ್ಯುಕ್ತ್ವಾ ತೀರ್ಥಂ ಸಂಪ್ರಾರ್ಥ್ಯ ಬುದ್ಧಿಮಾನ್ ।
ಜಪೇಚ್ಛುದ್ಧಮತಿಃ ಪಶ್ಚಾತ್ಸೂಕ್ತಂ ಚೈವಾಘಮರ್ಷಣಂ ॥ ೩೯ ॥

ದ್ರುಪದಾಂ ಚ ಜಪೇದ್ದೇವೀಂ ಸರ್ವಪಾಪಪ್ರಣಾಶನೀಂ ।
ಇದಂ ತು ವಾರುಣಂ ಸ್ನಾನಂ ಮಂತ್ರಸ್ನಾನಮಥೋಚ್ಯತೇ ॥ ೪೦ ॥

ಆಗ್ನೇಯಂ ಭಸ್ಮನಾ ಸ್ನಾನಂ ವಾಯವ್ಯಂ ರಜಸಾ ಗವಾಂ ।
ದಿವ್ಯಮಾತಪವರ್ಷೇಣ ತತ್ತು ಕಾರ್ಯಮನಂತರಂ ॥ ೪೧ ॥

---

೩೮. ಅನಂತರ ಹೃದಯವನ್ನು, ಶರೀರಂ ಯಜ್ಞಂ ಎಂಬ ಮಂತ್ರಗಳಿಂದ ಮೃದ್ಗೋಮಯ ಲೇಪನಮಾಡಿಕೊಳ್ಳಬೇಕು. ಆನಂದನಂದ ಎಂಬ ಮಂತ್ರದಿಂದ ನಾಭಿಯನ್ನೂ ಉಳಿದ ಮೃತ್ತಿಕೆಗಳಿಂದ ತಲೆಯನ್ನೂ ಶುದ್ಧಿಮಾಡಿಕೊಳ್ಳಬೇಕು.

೩೯. ಮೂರ್ಧಾನಂದಿವೋ ಎಂಬ ಮಂತ್ರದಿಂದ ಎಳ್ಳು, ಗರಿಕೆ, ಅಕ್ಷತೆ ಇವೇ ಮೊದಲಾದುವುಗಳನ್ನು ಶಿರಸ್ಸಿನಲ್ಲಿಟ್ಟುಕೊಳ್ಳಬೇಕು. ಹಿರಣ್ಯಶೃಂಗವೆಂಬ ಮಂತ್ರ ಪುರಶ್ಚರಣೆಯಿಂದ ತೀರ್ಥಾಭಿಮಾನಿದೇವತೆಯಾದ ವರುಣನನ್ನು ಧ್ಯಾನಿಸಿ ಅನಂತರ ಅಘಮರ್ಷಣಸೂಕ್ತವನ್ನು ಪಠನಮಾಡಬೇಕು.

೪೦. ಸರ್ವಪಾಪಪ್ರಣಾಶಕರಳಾದ ದ್ರುಪದಾರೂಪಳಾದ ದೇವಿಯನ್ನು ಧ್ಯಾನಿಸಬೇಕು. ಅನಂತರ ಸಂಪೂರ್ಣವಾಗಿ ಪುನಃ ಸ್ನಾನಮಾಡಬೇಕು. ಈ ವಿಧವಾದ ಸ್ನಾನಕ್ಕೆ ವಾರುಣಸ್ನಾನವೆಂದು ಹೆಸರು. ಮಂತ್ರಸ್ನಾನವೆಂದರೆ ಕೇವಲ ಮಂತ್ರಪೂರ್ವಕವಾಗಿ ಮಾಡುವ ಸ್ನಾನವೆಂದರ್ಥ. ವಾರುಣಸ್ನಾನವನ್ನೇ ಮಂತ್ರಸ್ನಾನವೆನ್ನಬಹುದು.

೪೧. ಭಸ್ಮದಿಂದ ಶರೀರವನ್ನು ಲೇಪಿಸಿಕೊಳ್ಳುವುದು ಆಗ್ನೇಯಸ್ನಾನವು. ಗೋಧೂಳಿಯ ಲೇಪನವೇ ವಾಯುಸ್ನಾನವು. ಬಿಸಿಲಿನಿಂದ ತನ್ನ ದೇಹವನ್ನು ಕಾಯಿಸುವುದು ದಿವ್ಯಸ್ನಾನವೆನಿಸುವುದು. ಎಲ್ಲಾ ವಿಧವಾದ ಸ್ನಾನಗಳ ಅನಂತರವೇ ಈ ದಿವ್ಯಸ್ನಾನವನ್ನು ಮಾಡಬೇಕು.

ನ ನದೀಷು ನದೀಂ ಬ್ರೂಯಾತ್ಪರ್ವತೇಷು ಚ ಪರ್ವತಂ ।
ಪ್ರವಾಸೇ ಭೋಜನೇ ಚಾಪಿ ನೃತ್ಯಜೇತ್ಸಹಯಾಯಿನಂ ॥ ೨೧ ॥

ಶಿರೋಭ್ಯಂಗಾವಶಿಷ್ಟೇನ ತೈಲೇನಾಂಗಂ ನ ಲೇಪಯೇತ್ ।
ನ ಸರ್ಪಶಸ್ತ್ರೈಃ ಕ್ರೀಡೇತ ಸ್ವಾನಿ ಸ್ವಾನಿ ನ ಸಂಸ್ಪೃಶೇತ್ ॥ ೨೨ ॥

ನ ಸಂಹತಾಭ್ಯಾಂ ಪಾಣಿಭ್ಯಾಂ ಕಂಡೂಯೇದಾತ್ಮನಃ ಶಿರಃ
ನ ಲೌಕಿಕೈಃ ಸ್ತವೈಃ ದೇವಾಂಸ್ತೋಷಯೇದ್ಬಾಹ್ಯಜೈರಪಿ ॥ ೨೩ ॥

ನ ದಂತೈರ್ನಖರೋಮಾಣಿ ಛಿಂದ್ಯಾತ್ಸುಪ್ತಂ ನ ಬೋಧಯೇತ್ ।
ನ ಬಾಲಾತಪಮಾಸೇವೇತ್ ಪ್ರೇತಧೂಮಂ ವಿವರ್ಜಯೇತ್ ॥ ೨೪ ॥

---

೨೧. ನದಿಗಳಲ್ಲಿ ಸ್ನಾನಮಾಡುವಾಗ ಮತ್ತೊಂದು ನದಿಯ ಹೆಸರನ್ನಾಗಲಿ, ಪರ್ವತಗಳಲ್ಲಿ ಸಂಚರಿಸುವಾಗ ಮತ್ತೊಂದು ಪರ್ವತದ ಹೆಸರನ್ನಾಗಲಿ, ಹೇಳುವುದು ಧರ್ಮವಲ್ಲ. ಪ್ರಯಾಣಕಾಲದಲ್ಲಿ, ಊಟಮಾಡುವಾಗ, ಜೊತೆಗಾರನನ್ನು ಎಂದಿಗೂ ಬಿಡಕೂಡದು.

೨೨. ತಲೆಗೆ ಹಾಕಿಕೊಂಡು ಮಿಕ್ಕಿರುವ ಎಣ್ಣೆಯನ್ನು ಮೈಗೆ ಹಚ್ಚಿಕೊಳ್ಳ ಬಾರದು. ಸರ್ಪಗಳೊಡನೆಯೂ, ಶಸ್ತ್ರಗಳೊಡನೆಯೂ, ಯಾವಾಗಲೂ ಸರಸ ವಾಡಬಾರದು. ತನಗೆ ಸೇರಿದ ನಿಧಿಯನ್ನು ಯಾವಾಗಲೂ ಮುಟ್ಟುತ್ತಲೇ ಇರ ಬಾರದು.

೨೩. ಎರಡೂಕೈಗಳಿಂದ ಒಟ್ಟಾಗಿ ತನ್ನ ತಲೆಯನ್ನು ಕೆರೆದುಕೊಳ್ಳಬಾರದು. ಲೌಕಿಕವಾದ ಉಪಚಾರವನ್ನು ದೇವರಲ್ಲಿ ಹೇಳುತ್ತಾ ಶ್ರುತಿವಿರುದ್ಧವಾದ ಕರ್ಮ ಗಳಿಂದ ದೇವರನ್ನು ಪೂಜಿಸಲು ತೊಡಗಬಾರದು.

೨೪. ಹಲ್ಲುಗಳಿಂದ, ಉಗುರನ್ನಾಗಲಿ, ಕೂದಲುಗಳನ್ನಾಗಲಿ, ಕಚ್ಚಬಾರದು. ಮಲಗಿದ್ದವರನ್ನು ಎಚ್ಚರಿಸಬಾರದು. ಎಳೆಬಿಸಿಲನ್ನು ಕಾಯಬಾರದು. ಶವವನ್ನು ಸುಡುವಕಾಲದಲ್ಲಿ ಆ ಧೂಮವನ್ನು ಎಂದೂ ಸೇವಿಸಬಾರದು.

ನಾಶುದ್ಧೋಗ್ನಿಂ ಪರಿಚರೇನ್ನ ದೇವಾನ್ ಕೀರ್ತಯೇದೃಷೀನ್ ।
ನ ವಾಮಹಸ್ತೇನೋದ್ಧೃತ್ಯ ಪಿಬೇದ್ವಕ್ತ್ರೇಣ ವಾ ಜಲಂ ॥ ೨೫ ॥

ಕರೇಣೈಕೈನ ಯದ್ವಾರಿ ಪೀತಂ ತನ್ಮದಿರಾಸಮಂ ।
ವಿಶ್ವೇಶ್ವರಮುಮಾಕಾಂತಂ ವಿಶ್ವಾಂತರ್ಯಾಮಿನಂ ವಿಭುಂ ॥ ೨೬ ॥

ನ ಬ್ರಹ್ಮಾದ್ಯೈಃ ಸಮಂ ಬ್ರೂಯಾಚ್ಛಕ್ತಿಭಿರ್ನ ಚ ಪಾರ್ವತೀಂ ।
ಬ್ರೂಯಾದ್ಯದಿ ಸಮಂ ಶಂಭುಂ ಬ್ರಹ್ಮವಿಷ್ಣ್ವಾದಿಭಿಃ ಸುರೈಃ ॥ ೨೭ ॥

ಯಃ ಕಶ್ಚಿತ್ತಮಸಾऽವಿಷ್ಟಃ ಕದಾಚಿನ್ನೈವ ತಂ ಸ್ಪೃಶೇತ್ ।
ಸರ್ವಸ್ಮಾದಧಿಕಂ ಬ್ರೂಯಾದ್ಭಗವಂತಮುಮಾಪತಿಂ ॥ ೨೮ ॥

---

೨೫. ಅಶುಚಿಯಾಗಿರತಕ್ಕವನು ದೇವತೆಗಳನ್ನೂ ಅಗ್ನಿಯನ್ನೂ ಋಷಿಗಳನ್ನೂ ಸೇವಿಸಬಾರದು. ಎಡಗೈಯಲ್ಲಿ ನೀರನ್ನು ಕುಡಿಯಬಾರದು. ಬಾಯಿಂದಲೇ ನೀರನ್ನು ನೆಕ್ಕಿ ಕುಡಿಯಬಾರದು.

೨೬. ಒಂದು ಕೈಯಿಂದಲೇ ನೀರನ್ನು ಎತ್ತಿ ಕುಡಿಯಬಾರದು. ಹಾಗೆ ಕುಡಿದರೆ ಆ ನೀರು ಹೆಂಡಕ್ಕೆ ಸಮನಾಗುವುದು. ವಿಶ್ವೇಶ್ವರನೂ, ಪ್ರಪಂಚವ್ಯಾಪಿಯೂ, ವಿಭುಸ್ವರೂಪಿಯೂ ಆದ ಪರಮೇಶ್ವರನನ್ನು,

೨೭. ಬ್ರಹ್ಮಾದಿದೇವತೆಗಳೊಡನೆ ಸಮನೆಂದು ಭಾವಿಸಬಾರದು. ಪಾರ್ವತೀದೇವಿಯನ್ನು ಇತರ ಶಕ್ತಿದೇವಿಯರಿಗೆ ಸಮಳೆಂದು ಯೋಚಿಸಬಾರದು. ಹಾಗೆ ತಿಳಿಯದೆ ಪರಮೇಶ್ವರನನ್ನೂ, ಗೌರಿಯನ್ನೂ ಯಾರು ಸಾಮಾನ್ಯದೇವತೆಗಳೆಂದು ಭಾವಿಸುವರೋ,

೨೮. ಅವರು ಅಜ್ಞಾನಿಗಳು. ಅಂತಹವರು ಎಂದೂ ಪರಮೇಶ್ವರನನ್ನು ನೋಡಲಾರರು. ಸಮಸ್ತ ದೇವತೆಗಳಿಗೂ ಪರಮೇಶ್ವರನೇ ಒಡೆಯನು ಎಂಬ ಭಾವನೆ ಸರ್ವರಿಗೂ ಇರಬೇಕು. ಪರಮೇಶ್ವರನಲ್ಲಿ ಸರ್ವೋತ್ಕೃಷ್ಟತ್ವ ಬುದ್ಧಿಯಿಲ್ಲದವನನ್ನು ಯಾರೂಸ್ಪರ್ಶಮಾಡಬಾರದು.

ತಥಾ ದೇವೀಂ ಚ ಗಿರಿಜಾಂ ದ್ವಿಜೈಃ ಶ್ರೇಯೋಽರ್ಥಿಭಿಸ್ಸದಾ ।
ಪರಸ್ತ್ರಿಯಂ ನ ಭಾಷೇತ ನಾಯಾಜ್ಯಂ ಯಾಜಯೇದ್ದ್ವಿಜಾಃ ॥ ೨೯ ॥

ನ ದೇವಾಯತನಂ ಗಚ್ಛೇತ್ಕದಾಚಿಚ್ಚಾಪ್ರದಕ್ಷಿಣಂ ।
ನ ನಿಂದೇದ್ಯೋಗಿನಃ ಸಿದ್ಧಾನ್ ವ್ರತಿನೋ ನೋ ಯತೀಂಸ್ತಥಾ ॥ ೩೦ ॥

ನ ಚಾಕ್ರಾಮೇದ್ಗುರೋಶ್ಛಾಯಾಂ ನ ತಥಾಜ್ಞಾಂ ಗುರೋಸ್ಸದಾ ।
ವಕ್ಷ್ಯಮಾಣೇನ ವಿಧಿನಾ ಸ್ನಾನಂ ಕುರ್ಯಾತ್ಸಮಾಹಿತಃ ॥ ೩೧ ॥

ಭೂಮಿಂ ವ್ಯಾಹೃತಿಭಿಸ್ಸ್ಪೃಷ್ಟ್ವಾ ಖನಮಾನಂ ತು ಚಾಶಯಾ (?)
ಉದ್ಧೃತಾಸೀತಿ ಸಂಗೃಹ್ಯ ಗಂಧದ್ವಾರೇತಿ ಗೋಮಯಂ ॥ ೩೨ ॥

---

೨೯. ಹಾಗೆಯೇ ಶ್ರೇಯಸ್ಸನ್ನು ಬಯಸುವ ಬ್ರಾಹ್ಮಣರು ಪಾರ್ವತಿಯನ್ನು ಸಮಸ್ತ ದೇವಿಯರಿಗೂ ಒಡೆಯಳೆಂದು ಭಾವಿಸಬೇಕು. ಪರಸ್ತ್ರೀಯರೊಡನೆ ವಿಶೇಷವಾಗಿ ಮಾತನಾಡಬಾರದು. ಯಾಗಕ್ಕೆ ಅನಧಿಕಾರಿಗಳಾದವರಿಂದ ಯಾಗವನ್ನು ಮಾಡಿಸಬಾರದು.

೩೦. ಅಪ್ರದಕ್ಷಿಣಾಕಾರವಾಗಿ ಸುತ್ತಿಕೊಂಡು ದೇವಸ್ಥಾನಕ್ಕೆ ಯಾವಾಗಲೂ ಪ್ರವೇಶಮಾಡಬಾರದು. ಯೋಗಿಗಳನ್ನೂ, ಸಿದ್ಧರನ್ನೂ, ಯತಿಗಳನ್ನೂ, ವ್ರತಿಗಳನ್ನೂ, ಯಾವ ಕಾರಣದಿಂದಲೂ ನಿಂದಿಸಬಾರದು.

೩೧. ಗುರುಗಳ ನೆರಳಿನಲ್ಲಿ ಕೂರಬಾರದು. ಆ ನೆರಳನ್ನು ದಾಟಬಾರದು. ಗುರುಗಳ ಅಪ್ಪಣೆಯನ್ನು ಮೀರಬಾರದು. ಬ್ರಾಹ್ಮಣನು ನಿತ್ಯವೂ ತಪ್ಪದೆ ಸ್ನಾನ ಮಾಡಬೇಕು. ಸ್ನಾನವಿಧಿಯು ಮುಂದೆ ಸೂಕ್ಷ್ಮವಾಗಿ ವಿವರಿಸಲ್ಪಡುವುದು.

೩೨. ಸ್ನಾನವಿಧಿಯು ಹೇಗೆಂದರೆ, ವ್ಯಾಹೃತಿಮಂತ್ರದಿಂದ ಭೂಮಿಯನ್ನು ಮುಟ್ಟಿ ಅಗೆಯಬೇಕು. ಅಗೆದ ಮಣ್ಣಿನಲ್ಲಿ ಉದ್ಧೃತಾಸಿ ಎಂಬ ಮಂತ್ರದಿಂದ ಸ್ವಲ್ಪ ಮಣ್ಣನ್ನು ತೆಗೆದುಕೊಳ್ಳಬೇಕು. ಗಂಧದ್ವಾರಾಂ ಎಂಬ ಮಂತ್ರದಿಂದ ಸ್ವಲ್ಪ ಸಗಣಿಯನ್ನೂ ಸ್ವೀಕರಿಸಬೇಕು.

ಆರ್ದ್ರೇಣ ವಾಸಸಾ ಚಾನ್ಯನ್ಮಾನಸಂ ಶಿವಚಿಂತನಂ ।
ಸ್ನಾನಾನಾಂ ಚೈವ ಸರ್ವೇಷಾಂ ಮಾನಸಂ ಸ್ನಾನಮುತ್ತಮಂ ॥ ೪೨ ॥
ಸ್ನಾತ್ವಾಽಥಾಚಮ್ಯ ವಿಧಿವತ್ತರ್ಪಯೇಚ್ಚ ಸುರಾನ್ ಪಿತ್ರೂನ್ ।
ಪುನರಾಚಮ್ಯ ವಿಧಿನಾ ಮಾರ್ಜನಂ ಚ ಸಮಾಚರೇತ್ ॥ ೪೩ ॥
ದದ್ಯಾಜ್ಜಲಾಂಜಲಿಂ ಪಶ್ಚಾತ್ಸವಿತ್ರೇ ರುದ್ರರೂಪಿಣೇ ।
ತತೋ ದರ್ಭಾಸನೇ ಸ್ಥಿತ್ವಾ ಗಾಯತ್ರೀಂ ಪ್ರಜಪೇದ್ದ್ವಿಜಃ ॥ ೪೪ ॥
ತ್ರೈವರ್ಣಿಕಾನಾಂ ಸರ್ವೇಷಾಂ ಗಾಯತ್ರೀ ಪರಮಾ ಗತಿಃ ।
ಯದ್ಗಾಯತ್ರ್ಯಾಃ ಪರಂ ತತ್ತ್ವಂ ದೇವದೇವೋ ಮಹೇಶ್ವರಃ ॥ ೪೫ ॥
ಇತಿ ಜ್ಞಾತ್ವಾ ಜಪೇದ್ವಿದ್ವಾನ್ ಗಾಯತ್ರ್ಯಾಃ ಫಲಮಶ್ನುತೇ ।
ಯೋಽಹ್ಯನ್ಯಥಾ ತು ಮನುತೇ ಗಾಯತ್ರೀಂ ಶಿವರೂಪಿಣೀಂ ॥ ೪೬ ॥
ಪಚ್ಯತೇ ಸ ಮಹಾಘೋರೇ ನರಕೇ ಕಲ್ಪಸಂಖ್ಯಯಾ ।

---

೪೨. ಒದ್ದೆಬಟ್ಟೆಯನ್ನುಟ್ಟು, ಮನಸ್ಸಿನಲ್ಲಿ ಶಿವನನ್ನು ಸ್ಮರಿಸುವುದು ಮಾನಸ ಸ್ನಾನವೆನಿಸುವುದು. ಇದು ಎಲ್ಲಾ ಸ್ನಾನಗಳಿಗಿಂತಲೂ ಶ್ರೇಷ್ಠವಾದದ್ದು. ಇದರಲ್ಲಿ ಮನೋನೈರ್ಮಲ್ಯವು ಹೆಚ್ಚಾಗಿ ತೋರಿಬರುವುದು.

೪೩. ಹೀಗೆ ಸ್ನಾನಮಾಡಿ, ಆಚಮನದಿಂದ ಶುದ್ಧನಾಗಿ, ವಿಧಿವತ್ತಾಗಿ ದೇವತೆಗಳಿಗೂ ಪಿತೃಗಳಿಗೂ ಅರ್ಘ್ಯಪ್ರದಾನಮಾಡಬೇಕು. ಅನಂತರ ಪುನಃ ಆಚಮನಮಾಡಿ ವಿಧಿವತ್ತಾಗಿ ಮಾರ್ಜನೆಮಾಡಿಕೊಳ್ಳಬೇಕು.

೪೪. ಮಾರ್ಜನೆಯಾದಮೇಲೆ ರುದ್ರರೂಪಿಯಾದ ಸೂರ್ಯದೇವನಿಗೆ ಅರ್ಘ್ಯಪ್ರದಾನಮಾಡಬೇಕು. ಅನಂತರ ದರ್ಭಾಸನದಲ್ಲಿ ಕುಳಿತುಕೊಂಡು ಶುದ್ಧಮನಸ್ಸಿನಿಂದ ಗಾಯತ್ರೀಮಂತ್ರದ ಪುರಶ್ಚರಣೆಯನ್ನು ಮಾಡಬೇಕು.

೪೫. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ಮೂರು ವರ್ಣದವರಿಗೂ ಗಾಯತ್ರೀಮಂತ್ರವೇ ಪರಮಪವಿತ್ರವಾದದ್ದು. ಆ ಗಾಯತ್ರೀ ಮಂತ್ರದ ಪರಮತತ್ತ್ವವೇ ಪರಮೇಶ್ವರನ ಧ್ಯಾನವು. ಪರಮೇಶ್ವರನ ತೃಪ್ತಿಯೇ ಗಾಯತ್ರೀ ಜಪಕ್ಕೆ ಫಲವೆಂದರಿಯಬೇಕು.

೪೬. ಹೀಗೆ ಗಾಯತ್ರೀಮಂತ್ರವನ್ನು ಶ್ರೇಷ್ಠವೆಂದು ತಿಳಿದು ಯಾವನು ಜಪಿಸುವನೋ ಅವನೇ ಜ್ಞಾನಿಯು. ಆ ಗಾಯತ್ರೀಮಂತ್ರ ಜಪದ ಫಲವನ್ನನುಭವಿಸುವವನೂ ಆತನೇ. ಅಂಥ ಪವಿತ್ರವಾದ ಗಾಯತ್ರಿಯನ್ನು ಯಾವನು ಬೇರೆ ರೀತಿಯಾಗಿ ತಿಳಿಯುವನೋ, ಸಾಕ್ಷಾತ್ ಶಿವಸ್ವರೂಪವಾದ ಗಾಯತ್ರಿಗೆ ಯಾರು ಅನ್ಯಾರ್ಥವನ್ನು ಕಲ್ಪಿಸುವರೋ ಅಂತಹವರು ಅನೇಕ ಕಲ್ಪಪರ್ಯಂತವಾಗಿ ಭಯಂಕರವಾದ ನರಕದಲ್ಲಿ ಬೇಯುತ್ತಾರೆ.

ಪಾದಾಶ್ಚತ್ವಾರೋ ಗಾಯತ್ರ್ಯಾ ವೇದಾಶ್ಚತ್ವಾರ ಏವ ತೇ ॥ ೪೭ ॥
ವಿರಂಚಿ ವಿಷ್ಣುರುದ್ರೇಶಾಃ ಪಾದಾನಾಂ ದೇವತಾಃ ಕ್ರಮಾತ್ ।
ಏವಂ ಜ್ಞಾತ್ವಾ ವಿಧಾನೇನ ಗಾಯತ್ರೀಂ ವೇದಮಾತರಂ ॥ ೪೮ ॥

ಜಪೇನ್ಮಾಹೇಶ್ವರಂ ಜ್ಯೋತಿರ್ನಿತ್ಯಮೇವ ಪ್ರಕಾಶತೇ ।
ಉಪತಿಷ್ಠೇದಥಾದಿತ್ಯಂ ರುದ್ರರೂಪಿಣ ಮವ್ಯಯಂ । ॥ ೪೯ ॥

ಭಕ್ತ್ಯೈಃ ಸ್ತೋತ್ರೈಶ್ಚ ಮಂತ್ರೈಶ್ಚ ವೇದೇತಿಹಾಸಸಂಭವೈಃ
ಪಾವಮಾನಾನಿ ಸೂಕ್ತಾನಿ ಬ್ರಹ್ಮಯಜ್ಞಪ್ರಸಿದ್ಧಯೇ ॥ ೫೦ ॥

ಜಪೇತ್ಸಮಾಹಿತೋ ಭೂತ್ವಾ ರುದ್ರಾಂಶ್ಚೈವ ವಿಶೇಷತಃ ।
ಮೌನೇನಾಗತ್ಯ ಭವನಂ ಪೂಜಯೇಚ್ಛಿವಮವ್ಯಯಂ ॥ ೫೧ ॥

೪೭-೪೮. ಗಾಯತ್ರಿಯ ನಾಲ್ಕು ಪಾದಗಳು ನಾಲ್ಕು ವೇದಗಳಿಗೆ ಸಮವಾದವುಗಳು. ನಾಲ್ಕು ಪಾದಗಳಿಗೂ ಕ್ರಮವಾಗಿ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಇವರು ಅಧಿದೇವತೆಗಳು. ಈ ಭಾವನೆಯಿಂದ ವೇದಗಳಿಗೆ ಮೂಲಭೂತವಾದ ಗಾಯತ್ರಿಯನ್ನು ಸರ್ವರೂ ಜಪಿಸಬೇಕು.

೪೯. ಹೀಗೆ ಜಪಿಸುವವರಿಗೆ ಈಶ್ವರನ ತೇಜಸ್ಸು ನಿತ್ಯವೂ ಗೋಚರವಾಗುತ್ತದೆ. ಗಾಯತ್ರೀ ಜಪಾನಂತರದಲ್ಲಿ ಸಾಕ್ಷಾದ್ರುದ್ರರೂಪಿಯೂ, ಶಾಶ್ವತನೂ ಆದ ಆದಿತ್ಯನನ್ನು ಉಪಸ್ಥಾನಮಾಡಬೇಕು. ಅಂದರೆ ಭಕ್ತಿಯಿಂದ ಎದ್ದು ನಿಂತು ಮಂತ್ರಪೂರ್ವಕವಾಗಿ ಸ್ತುತಿಸಬೇಕು.

೫೦. ವೇದ, ಇತಿಹಾಸ, ಇವೇ ಮೊದಲಾದ ಗ್ರಂಥಗಳಲ್ಲಿ ಮಂತ್ರರೂಪದಿಂದ ಶ್ಲೋಕರೂಪದಿಂದ, ವಿಸ್ತೃತವಾಗಿರುವ ಸ್ತೋತ್ರಗಳಿಂದಲೂ, ಬ್ರಹ್ಮಯಜ್ಞಕರ್ಮದಲ್ಲಿ ಪ್ರಸಿದ್ಧಗಳಾಗಿರುವ ಪವಮಾನಸೂಕ್ತವೇ ಮೊದಲಾದುವುಗಳಿಂದಲೂ, ಸೂರ್ಯದೇವನನ್ನು ಪ್ರಾರ್ಥಿಸಬೇಕು. ಇದೇ ಸೂರ್ಯೋಪಸ್ಥಾನವು.

೫೧. ಹೀಗೆ ನದೀತೀರದಲ್ಲಿ ಸೂರ್ಯೋಪಸ್ಥಾನವಾದ ಮೇಲೆ ದೃಢಮನಸ್ಸುಳ್ಳವನಾಗಿ ಮೌನದಿಂದ ಮನೆಗೆ ಬಂದು ನಾಶರಹಿತನೂ, ಸನಾತನನೂ ಆದ ಪರಮೇಶ್ವರನನ್ನು ಪೂಜಿಸಬೇಕು. ಶಿವಾಲಯ ಅಥವಾ ತನ್ನ ಮನೆ ಇವೆರಡೂ ಶಿವಾರಾಧನೆಗೆ ಶ್ರೇಷ್ಠವೆನಿಸಿವೆ.

ಷಡಕ್ಷರೇಣ ಮಂತ್ರೇಣ ಮಾನಸ್ತೋಕ್ಯಾ ತಥೈವ ಚ ।
ಷಡಕ್ಷರಾತ್ಪರೋ ಮಂತ್ರೋ ವೇದೇಷು ಚ ಚತುರ್ಷ್ವಪಿ ॥ ೫೨ ॥
ನಾಸ್ತೀತ್ಯುವಾಚ ಭಗವಾನ್ ದೇವದೇವಃ ಸ್ವಯಂ ರವಿಃ ।
ಪತ್ರೈಃ ಪುಷ್ಪೈಃ ಫಲೈರ್ವಾಪಿ ದೂರ್ವಾಭಿರುದಕೈರಪಿ ॥ ೫೩ ॥
ನಾಸಂಪೂಜ್ಯ ಮಹಾದೇವಂ ಭುಂಜೀತ ಬ್ರಾಹ್ಮಣಸ್ಸದಾ ।

ಬ್ರಾಹ್ಮಣಕ್ಷತ್ರಿಯವಿಶಾಂ ಕರ್ಮಿಣಾಂ ಯೋಗಿನಾಮಪಿ ।
ಗತಿರ್ವಿಶ್ವೇಶ್ವರೋ ದೇವೋ ಭವೋ ನಾನ್ಯ ಇತಿ ಶ್ರುತಿಃ ॥ ೫೪ ॥
ಕುರ್ಯಾತ್ಪಂಚ ಮಹಾಯಜ್ಞಾನ್ ಗೃಹಸ್ಥಃ ಶ್ರದ್ಧಯಾನ್ವಿತಃ ॥

ಪಂಚಯಜ್ಞಪರಿತ್ಯಾಗಾದಾಶ್ರಮಾದವಹೀಯತೇ ।
ದೇವಯಜ್ಞೋ ಭೂತಯಜ್ಞಃ ಪಿತೃಯಜ್ಞಸ್ತಥಾ ಪರಃ ॥ ೫೫ ॥
ಮಾನುಷೋ ಬ್ರಹ್ಮಯಜ್ಞಶ್ಚ ಪಂಚಯಜ್ಞಾಃ ಪ್ರಕೀರ್ತಿತಾಃ ॥

---

೫೨. ಷಡಕ್ಷರೀಮಂತ್ರದಿಂದಾಗಲಿ, ಮಾನಸ್ತೋಕೆ ಎಂಬ ಮಂತ್ರದಿಂದಾಗಲಿ ವಿಶೇಷವಾಗಿ ಪರಶಿವನನ್ನು ಅರ್ಚಿಸಬೇಕು. ಷಡಕ್ಷರೀ ಮಂತ್ರವು ಉತ್ತಮೋತ್ತಮವಾದ ಮಂತ್ರವು. ಅದಕ್ಕಿಂತ ಶ್ರೇಷ್ಠವಾದದ್ದು ನಾಲ್ಕು ವೇದಗಳಲ್ಲಿಯೂ ದೊರಕಲಾರದು ಎಂದು ಸಾಕ್ಷಾತ್ ಸೂರ್ಯದೇವನೇ ಹೇಳಿರುವನು. ಆದುದರಿಂದ ಷಡಕ್ಷರೀ ಮಂತ್ರವು ಶಿವಾರಾಧನೆಗೆ ಶ್ರೇಷ್ಠವೆನಿಸಿದೆ.

೫೩. ಹೂವು, ಹಣ್ಣು, ಎಲೆ, ಹುಲ್ಲುಗರಿಕೆ, ಅಥವಾ ನೀರು ಇವುಗಳಿಂದಲೂ, ಅಥವಾ ಇವುಗಳಲ್ಲಿ ಯಾವುದಾದರೊಂದು ವಸ್ತುವಿನಿಂದಾದರೂ, ಮಹಾದೇವನನ್ನು ಪೂಜಿಸದೆ ಬ್ರಾಹ್ಮಣನಾದವನು ಭೋಜನಮಾಡಬಾರದು. ಶಿವಾರಾಧನೆಯಿಲ್ಲದೆ, ತಾನು ಊಟಮಾಡುವುದು ಮಹಾಪಾಪಕರ.

೫೪. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮೊದಲಾದ ಚಾತುರ್ವರ್ಣ್ಯದವರಿಗೂ, ಯೋಗಿಗಳಿಗೂ, ಸಹ ಮಹಾದೇವನಾದ ಪರಮೇಶ್ವರನೇ ಗತಿಯು. ಅವನಲ್ಲದೆ ಮತ್ತಾರೂ ಅವರನ್ನು ರಕ್ಷಿಸಲಾರರು. ಇದಲ್ಲದೆ, ಗೃಹಸ್ಥನಾದವನು ಪ್ರತಿದಿನವೂ ಐದು ಮಹಾಯಜ್ಞಗಳನ್ನೂ ನೆರವೇರಿಸುತ್ತಿರಬೇಕು.

೫೫. ದೇವಯಜ್ಞ, ಭೂತಯಜ್ಞ, ಪಿತೃಯಜ್ಞ ಮನುಷ್ಯಯಜ್ಞ, ಬ್ರಹ್ಮಯಜ್ಞ, ಇವೇ ಪಂಚಯಜ್ಞಗಳು. ಈ ಪಂಚಯಜ್ಞಗಳನ್ನು ನೆರವೇರಿಸದಿದ್ದವನು ಆಶ್ರಮಹೀನನಾಗುವನು. ಆದ್ದರಿಂದ ಪ್ರತಿಯೊಬ್ಬ ಗೃಹಸ್ಥನೂ ತಪ್ಪದೆ ಪಂಚಮಹಾಯಜ್ಞಗಳನ್ನು ನಡೆಸಬೇಕು.

ಕರ್ತವ್ಯೋ ವೈಶ್ವದೇವಸ್ತು ದೇವಯಜ್ಞ ಉದೀರಿತಃ ॥ ೫೭ ॥
ಹುತಶೇಷೇಣ ಭೂತೇಭ್ಯೋ ಬಲಿಂ ಭೂತಮುಖಂ ವಿದುಃ ।
ವಿಪ್ರಂ ತು ಭೋಜಯೇದೇಕಂ ಪಿತೄನುದ್ದಿಶ್ಯ ಯತ್ನತಃ ॥ ೫೮ ॥

ನಿತ್ಯಶ್ರಾದ್ಧಂ ತದುದ್ದಿಷ್ಟಂ ಪಿತೃಯಜ್ಞಂ ಪ್ರಚಕ್ಷತೇ ।
ಯಥಾಶಕ್ತ್ಯನ್ನಮುದ್ಧೃತ್ಯ ಪ್ರದದ್ಯಾದ್ಬ್ರಾಹ್ಮಣಾಯ ವೈ ॥ ೫೯ ॥

ಅತಿಥಿಂ ಪೂಜಯೇದ್ಭಕ್ತ್ಯಾ ಶಿವಭಾವಸಮನ್ವಿತಃ ।
ಸೋಽತಿಥಿಃ ಸ್ವರ್ಗಸೋಪಾನಮಿತಿ ದೇವೋ ಬ್ರವೀದ್ರವಿಃ ॥ ೬೦ ॥

ಪ್ರದದ್ಯಾದ್ವ್ರತಕಾರಂ ವಾ ಭಿಕ್ಷಾಂ ಚ ಭವಭಾವತಃ ।
ಅಕ್ಷಯಂ ತತ್ಫಲಂ ಪ್ರಾಹುರ್ಭವಭಾವೋ ಹಿ ದುರ್ಲಭಃ ॥ ೬೧ ॥

೫೭-೫೮. ವೈಶ್ವದೇವವನ್ನೇ ದೇವಯಜ್ಞವೆನ್ನುವರು. ಹೋಮಶೇಷದಿಂದ ಭೂತಗಳಿಗೆ ಕೊಡುವ ಬಲಿಯೇ ಭೂತಯಜ್ಞವೆನಿಸುವುದು. ಪಿತೃದೇವತೆಗಳ ತೃಪ್ತಿಗಾಗಿ ಒಬ್ಬ ಬ್ರಾಹ್ಮಣನನ್ನು ಕರೆದು ಭೋಜನಾದಿಗಳಿಂದ ತೃಪ್ತಿಪಡಿಸುವುದೇ ಪಿತೃಯಜ್ಞ.

೫೯. ಆ ಪಿತೃಯಜ್ಞವನ್ನೇ ನಿತ್ಯಶ್ರಾದ್ಧವೆನ್ನುವರು. ಪ್ರತಿದಿನವು ತನ್ನ ಶಕ್ತ್ಯನುಸಾರವಾಗಿ ಒಬ್ಬ ಬ್ರಾಹ್ಮಣನಿಗಾದರೂ ಅನ್ನದಾನಮಾಡಬೇಕು. ಅದರಿಂದ ಗೃಹಸ್ಥನು ತನ್ನ ಪಿತೃಗಳಿಗೆ ನಿತ್ಯಶ್ರಾದ್ಧಮಾಡಿದಂತಾಗುವುದು.

೬೦. ಅಕಸ್ಮಾತ್ತಾಗಿ ಮನೆಗೆ ಬಂದ ಅತಿಥಿಯನ್ನು ಶಿವನೆಂಬ ಭಾವನೆಯಿಂದ ಅರ್ಚಿಸಬೇಕು. ಆ ಅತಿಥಿಸೇವನೆಯೇ, ಸ್ವರ್ಗಕ್ಕೆ ಒಂದು ಮೆಟ್ಟಲು ಎಂದು ಭಗವಂತನಾದ ಸೂರ್ಯದೇವನು ಹೇಳಿರುವನು.

೬೧. ವ್ರತಾಚರಣೆಯಿಂದಿರುವವನಿಗೆ ಭಿಕ್ಷೆಯನ್ನು ಪರಮೇಶ್ವರನೆಂಬ ಭಾವನೆಯಿಂದ ನೀಡಬೇಕು. ಅದರ ಫಲವು ಅಕ್ಷಯವಾದದ್ದು. ಸರ್ವವಸ್ತುವಿನಲ್ಲಿಯೂ ಪರಮೇಶ್ವರನ ಭಾವನೆಬರುವುದು, ದುರ್ಲಭವು. ಅದು ಕೇವಲ ಜ್ಞಾನಿಗೆ ಮಾತ್ರ ಸಾಧ್ಯವಾಗುತ್ತದೆ.

ವೇದಾಭ್ಯಾಸರತೋ ನಿತ್ಯಂ ತದ್ವಿಚಾರರತೋ ಭವೇತ್ ।
ಬ್ರಹ್ಮಯಜ್ಞಸ್ಸಮುದ್ದಿಷ್ಟೋ ಬ್ರಹ್ಮಲೋಕಫಲಪ್ರದಃ ॥ ೬೨ ॥

ಏತಾನ್ ಕೃತ್ವೈವ ಸತತಂ ಭುಂಜೀತಾಶ್ರಮಧರ್ಮಿಭಿಃ ।
ಅನ್ಯಥಾ ಯೋ ಹಿ ಭುಂಕ್ತೇನ್ನಂ ಪ್ರೇತ್ಯ ಶೂಕರತಾಂ ವ್ರಜೇತ್ ॥ ೬೩ ॥

ಯದಿ ವಿಶ್ವೇಶ್ವರೇ ಸ್ಥಾಣೌ ಭಕ್ತಿರೇಕೈವ ನಿಶ್ಚಲಾ ।
ಕಿಂ ತೈಃ ಪಂಚಮಹಾಯಜ್ಞೈಃ ಅನ್ಯೈರ್ವಾ ವಿವಿಧೈರ್ಮಖೈಃ ॥ ೬೪ ॥

ಇತಿ ಶ್ರೀಬ್ರಹ್ಮಪುರಾಣೋಪಪುರಾಣೇ ಶ್ರೀಸೌರೇ ಸೂತಶೌನಕಸಂವಾದೇ ದ್ವಿಜಧರ್ಮಕಥನಂ ನಾಮ ಅಷ್ಟಾದಶೋಽಧ್ಯಾಯಃ

---

೬೨. ವೇದಾಧ್ಯಯನ ಮಾಡುವವನು ಯಾವಾಗಲೂ ವೇದಾರ್ಥವಿಚಾರ ದಲ್ಲಿ ನಿರತನಾಗಿರಬೇಕು. ಅದನ್ನೇ ಬ್ರಹ್ಮಯಜ್ಞವೆನ್ನುವರು. ಬ್ರಹ್ಮಯಜ್ಞವೆಂಬುದು ಬ್ರಹ್ಮಲೋಕದಸುಖವನ್ನು ಕೊಡತಕ್ಕದ್ದೆಂದು ಪ್ರಸಿದ್ಧವಾಗಿದೆ.

೬೩. ನಿತ್ಯವೂ ಈ ವಿಧವಾದ, ಗೃಹಸ್ಥಾಶ್ರಮಧರ್ಮ ರೂಪವಾದ ಪಂಚಮ ಹಾಯಜ್ಞಗಳನ್ನೂ ಮಾಡಿಯೇ ಗೃಹಸ್ಥನು ಭೋಜನಮಾಡಬೇಕು. ಹಾಗಿಲ್ಲವಾ ದರೆ ಆತನಿಗೆ ಹಂದಿಯ ಜನ್ಮವು ಪ್ರಾಪ್ತವಾಗುವುದು.

೬೪. ಆದರೆ ಸ್ಥಾಣುರೂಪಿಯಾದ ಪರಮೇಶ್ವರನಲ್ಲಿ ಅನನ್ಯವಾದ ಭಕ್ತಿ ಯೊಂದು ಭಕ್ತನಿಗೆ ಒದಗಿದರೆ, ಆಗ ಈ ಪಂಚಮಹಾಯಜ್ಞಗಳಾಗಲಿ, ಇನ್ನೂ ನಾನಾ ರೀತಿಯ ವ್ರತಾದಿಗಳಾಗಲಿ, ಕಾರ್ಯಕಾರಿಯಾಗಲಾರವು. ಭಕ್ತಿಯುಹುಟ್ಟು ವುದಕ್ಕೆ ಈ ಅನುಷ್ಠಾನಗಳು ಕಾರಣಗಳೇ ಹೊರತು, ಇವು ಸಾಕ್ಷಾನ್ಮೋಕ್ಷಕ್ಕೆ ಭಕ್ತಿಯಂತೆ ಎಂದಿಗೂ ಸಾಧನಗಳಾಗಲಾರವು. ಆದ್ದರಿಂದ ಎಲ್ಲಕರ್ಮಗಳಿಗಿಂತಲೂ ಭಕ್ತಿಯೇ ಶ್ರೇಷ್ಠವಾದುದೆಂದು ಧಾರಾಳವಾಗಿ ಹೇಳಬಹುದು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದ ರೂಪವಾಗಿ ಬ್ರಾಹ್ಮಣಧರ್ಮಕಥನವೆಂಬ ಹದಿನೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ಏಕೋನವಿಂಶೋಽಧ್ಯಾಯಃ

॥ ಸೂತ ಉವಾಚ ॥

ಶ್ರಾದ್ಧಂ ದರ್ಶೇಽಥ ಕರ್ತವ್ಯಮಷ್ಟಕಾಸ್ವಯನದ್ವಯೇ ।
ವಿಷುವೇ ಚ ವ್ಯತೀಪಾತೇ ತೀರ್ಥೇಷು ಚ ವಿಶೇಷತಃ ॥ ೧ ॥

ಪರೀಕ್ಷ್ಯ ಬ್ರಾಹ್ಮಣಾನ್ ಸಮ್ಯಗ್ವೇದವೇದಾಂಗಪಾರಗಾನ್ ।
ವಿಶೇಷಾನ್ ಶಿವಭಕ್ತಾಂಶ್ಚ ರುದ್ರಜಾಪ್ಯಪರಾಯಣಾನ್ ॥ ೨ ॥

ಅಭಾವೇ ಶಿವಭಕ್ತಾನಾಂ ಸದಾಚಾರರತಾನ್ ದ್ವಿಜಾನ್ ।
ಭೋಜಯೇತ್ ಶ್ರದ್ಧಯಾ ಶ್ರಾದ್ಧೇ ಶಿವಬುದ್ಧ್ಯಾ ಸಮಾಹಿತಃ ॥ ೩ ॥

ಹತ್ತೊಂಬತ್ತನೆಯ ಅಧ್ಯಾಯ.

೧. ಸೂತಮಹರ್ಷಿಗಳು ಶೌನಕಾದಿಗಳಿಗೆ ಇನ್ನು ಮುಂದೆ ಶ್ರಾದ್ಧವಿಧಿಯನ್ನು ಹೇಳಲಾರಂಭಿಸುವರು. ಶ್ರದ್ಧೆಯಿಂದ ಮಾಡುವ ಪಿತೃಕಾರ್ಯವೇ ಶ್ರಾದ್ಧ. ಆ ಶ್ರಾದ್ಧವನ್ನು ಅಮಾವಾಸ್ಯ,ಅಷ್ಟಕಗಳು, ಉತ್ತರಾಯಣ ದಕ್ಷಿಣಾಯನಕಾಲಗಳು, ಮೇಷ ತುಲಾ ಸಂಕ್ರಮಣಗಳು, ಮಹಾವ್ಯತೀಪಾತಗಳು, ತೀರ್ಥಪ್ರದೇಶಗಳು ಇಂತಹ ಕಾಲಗಳಲ್ಲಿ ವಿಶೇಷವಾಗಿ ಮಾಡಬೇಕು.

೨. ಶ್ರಾದ್ಧದಿನಗಳಲ್ಲಿ, ವೇದಶಾಸ್ತ್ರಾದಿಗಳನ್ನು ತಿಳಿದು ರುದ್ರಮಂತ್ರವನ್ನು ಜಪಿಸುವ, ಶಿವಭಕ್ತಿಪರಾಯಣರಾದ ಬ್ರಾಹ್ಮಣರನ್ನೇ ಭೋಜನಕ್ಕಾಗಿ ಆಹ್ವಾನಿಸಬೇಕು. ಇಂತಹ ಬ್ರಾಹ್ಮಣರೇ ಶ್ರಾದ್ಧಕ್ಕೆ ವಿಹಿತರಾದವರು.

೩. ವೇದಾಧ್ಯಯನ ಸಂಪನ್ನರು ದೊರೆಯದಿದ್ದರೆ, ಸದಾಚಾರವುಳ್ಳವರಾಗಿ ಶಿವನಲ್ಲಿ ಭಕ್ತಿಯಿಟ್ಟದ್ದ ಬ್ರಾಹ್ಮಣರನ್ನೇ, ಸಾಕ್ಷಾತ್ ಶಿವಸ್ವರೂಪರೆಂಬ ಭಾವನೆಯಿಂದ ಭೋಜನಕ್ಕೆ ಪ್ರಾರ್ಥಿಸಬೇಕು.

ವ್ರತೋಪವಾಸನಿರತಾಃ ಸೋಮಪಾಃ ಸಂಯತೇಂದ್ರಿಯಾಃ ।
ಅಗ್ನಿಹೋತ್ರಪರಾಃ ಶಾಂತಾ ಬಹ್ವೃಚಾ ಗುರುಪೂಜಕಾಃ ॥ ೪ ॥

ತ್ರಿಣಾಚಿಕೇತಾಃ ಶಿಶ್ಯಾಶ್ಚ ತ್ರಿಮಧುತ್ರಿಸುಪರ್ಣಿಕಾಃ ।
ಮಂತ್ರಬ್ರಾಹ್ಮಣವೇತ್ತಾರಃ ಪುರಾಣಸ್ಮೃತಿಪಾಠಕಾಃ ॥ ೫ ॥

ಅಧ್ಯಾತ್ಮಶಾಸ್ತ್ರನಿರತಾಃ ಬ್ರಾಹ್ಮಣಾಃ ಪಂಕ್ತಿಪಾವನಾಃ ।
ಏಕಂ ವಾ ಭೋಜಯೇದ್ವಿಪ್ರಂ ಶಿವಭಕ್ತಿಪರಾಯಣಂ ॥ ೬ ॥

ತೇನ ಪೂತಾ ಭವಂತ್ಯೇವ ಯೇ ಕೇಚಿತ್ಪಂಕ್ತಿದೂಷಕಾಃ ।
ವಧಬಂಧೋಪಜೀವೀ ಚ ವೃಷಲಃ ಶೂದ್ರಯಾಜಕಾಃ ॥ ೭ ॥

---

೪. ವ್ರತ, ಉಪವಾಸ, ಇವುಗಳಲ್ಲಿ ಆಸಕ್ತಿಯುಳ್ಳವರೂ, ಸೋಮಯಾಗ ಮಾಡಿರುವವರೂ, ಜಿತೇಂದ್ರಿಯರೂ ಅಗ್ನಿಹೋತ್ರಿಗಳೂ, ಶಾಂತಸ್ವಭಾವವುಳ್ಳ ಗುರು ಪೂಜಕರಾದ ಋಗ್ವೇದಿಗಳೂ ಶ್ರಾದ್ಧಭೋಜನಕ್ಕೆ ಶ್ರೇಷ್ಠರಾದವರು.

೫. ಕಠೋಪನಿಷತ್ತಿನಲ್ಲಿ ಹೇಳಿರುವಂತೆ ನಚಿಕೇತಾಗ್ನಿಯಲ್ಲಿ ಯಾಗಮಾಡಿ ರುವವರೂ, ಶಿಶ್ಯವೃತ್ತಿಯಿಂದ ತ್ರಿಸುಪರ್ಣಾದಿ ವೇದಭಾಗಗಳನ್ನು ಅಧ್ಯಯನ ಮಾಡಿ, ರುವವರೂ, ಮಂತ್ರಬ್ರಾಹ್ಮಣಗಳೆಂಬ ಶ್ರುತಿಯನ್ನು ಅಭ್ಯಾಸಮಾಡಿರುವವರೂ ಪುರಾಣ ಧರ್ಮಶಾಸ್ತ್ರ ಇವುಗಳನ್ನು ಅರಿತಿರುವವರೂ ಸಹ ಶ್ರಾದ್ಧನಿಮಂತ್ರಣಕೆ ಯೋಗ್ಯರಾದವರು.

೬. ಆತ್ಮವಿದ್ಯೆಯಲ್ಲಿ ಪರಿಣತರಾದ ಬಾಹ್ಮಣರು ಸಹಪಂಕ್ತಿ ಭೋಜನಕೆ ಶ್ರೇಷ್ಠರಾದವರು. ಸದಾಚಾರಿಯಾಗಿ ಶಿವಭಕ್ತಿಪರಾಯಣನಾಗಿರುವ ಒಬ್ಬ ಬ್ರಾಹ್ಮಣ ನಾದರೂ ಶ್ರಾದ್ಧಭೋಜನಕ್ಕೆ ಬೇಕು. ಅಂತೂ ಯೋಗ್ಯರಾದವರ ಸತ್ಕಾರವೇ ಶ್ರಾದ್ಧ ದಲ್ಲಿಮುಖ್ಯಧ್ಯೇಯ.

೭ ಯೋಗ್ಯನಾದ ಒಬ್ಬ ಬ್ರಾಹ್ಮಣನ ಸತ್ಕಾರ್ಯದಿಂದಲೇ, ಪಿತ್ರಾದಿಗಳು ಪವಿತ್ರ ರಾಗಿ ಮುಕ್ತರಾಗುವರು. ಇದರಲ್ಲಿಸಂಶಯವಿಲ್ಲ. ಆದರೆ ಹಿಂಸಾ, ಬಂಧನ, ಇವೇ ಮೊದ ಲಾದ ಕೆಲಸಗಳಿಂದ ಜೀವಿಸುವವರೂ, ಶೂದ್ರ ಸ್ತ್ರೀಯಲ್ಲಿ ಬ್ರಾಹ್ಮಣನಿಂದ ಜೀವಿಸಿದ ವರೂ, ಶೂದ್ರನಿಂದ ಯಾಗಮಾಡಿಸುವವರೂ ಆದ ಬ್ರಾಹ್ಮಣರು ಶ್ರಾದ್ಧ ಭೋಜ ನಕ್ಕೆ ಅನರ್ಹರು.

ವೇದವಿಕ್ರಯಿಣಶ್ಚೈವ ಶ್ರುತಿವಿಕ್ರಯಿಣಸ್ತಥಾ ।
ವೇದವಿಕ್ರಯಿಣಶ್ಚಾನ್ಯೇ ಕೋಪಿನಃ ಕುಂಡಗೋಲಕೌ ॥ ೮ ॥

ಕಾಯಸ್ಥಾ ಲಂಬಕರ್ಣಾಶ್ಚ ನಿತ್ಯಂ ರಾಜೋಪಸೇವಕಾಃ ।
ನಕ್ಷತ್ರತಿಥಿವಕ್ತಾರೋ ಭಿಷಕ್‌ಶಾಸ್ತ್ರೋಪಜೀವಿನಃ ॥ ೯ ॥

ವ್ಯಾಧಿನಃ ಕಾವ್ಯಕರ್ತಾರೋ ಗಾಯಕಾಶ್ಚೈವ ಗೋತ್ರಿಣಃ ।
ವೇದನಿಂದಾರತಾಶ್ಚೈವ ಕೃತಘ್ನಾಃ ಪಿಶುನಾಸ್ತಥಾ ॥ ೧೦ ॥

ಹೀನಾತಿರಿಕ್ತದೇಹಾಶ್ಚ ಶ್ರಾದ್ಧೇ ವರ್ಜ್ಯಾಃ ಪ್ರಯತ್ನತಃ ।
ಬ್ರಹ್ಮಹತ್ಯಾಮವಾಪ್ನೋತಿ ಯದಿ ಸ್ತ್ರೀಗಮನಂ ಭವೇತ್ ॥ ೧೧ ॥

---

೮. ವೇದಶಾಸ್ತ್ರಗಳನ್ನು ದ್ರವ್ಯಕ್ಕಾಗಿ ಮಾರುವವರೂ, ದ್ರವ್ಯಾಸೆಯಿಂದ ವೇದವನ್ನು ಹೇಳಿಕೊಡತಕ್ಕವರೂ, ಕೋಪಿಷ್ಠರೂ, ಗಂಡನಿರುವಾಗ ಬೇರೊಬ್ಬ ಪತಿಯಿಂದ ಹುಟ್ಟಿದ ಮಕ್ಕಳೂ, ಗಂಡಸತ್ತಮೇಲೆ ಬೇರೆಗಂಡನಿಂದ ಜನಿಸಿದ ಮಕ್ಕಳೂ ಶ್ರಾದ್ಧಭೋಜನಕ್ಕೆ ಅನರ್ಹರು.

೯. ಕಾರಕೂನಕೆಲಸದವರೂ, ಉದ್ದವಾದ ಕಿವಿಯುಳ್ಳವರೂ ಯಾವಾಗಲೂ ರಾಜಸೇವಾಸಕ್ತರಾದವರೂ, ತಿಥಿ ನಕ್ಷತ್ರಗಳನ್ನು ಹೇಳುತ್ತಾ ಜೀವಿಸುವವರೂ, ವೈದ್ಯ ವೃತ್ತಿಯಿಂದ ಧನಾರ್ಜನೆಮಾಡುವವರೂ ಶ್ರಾದ್ಧ ಭೋಜನಕ್ಕೆ ಯೋಗ್ಯರಲ್ಲ.

೧೦. ರೋಗಿಷ್ಠರೂ, ಕವಿಗಳೂ, ಸಂಗೀತಗಾರರೂ, ಸಗೋತ್ರದವರೂ, ವೇದ ದೂಷಕರೂ, ಉಪಕಾರಸ್ಮರಣೆಯಿಲ್ಲದವರೂ, ಚಾಡಿಕೋರರೂ ಶ್ರಾದ್ಧಕ್ಕೆ ಯೋಗ್ಯರೆನಿಸುವುದಿಲ್ಲ.

೧೧. ಹೀನಾಂಗವುಳ್ಳವರನ್ನು ಶ್ರಾದ್ಧದಲ್ಲಿ ಆಹ್ವಾನಿಸಕೂಡದು. ಅಂತೂ ಮೇಲೆ ಹೇಳಿದ ಲಕ್ಷಣವುಳ್ಳವರನ್ನು ಶ್ರಾದ್ಧ ಭೋಜನಕ್ಕೆ ಹೇಗೂ ಕರೆಯಬಾರದು ಅಲ್ಲದೆ ಶ್ರಾದ್ಧದಿನದಲ್ಲಿ ಕರ್ತನು ಸ್ತ್ರೀ ಸಂಭೋಗಮಾಡಿದ್ದೇ ಆದರೆ ಬ್ರಹ್ಮಹತ್ಯೆಗೆ ಸಮನಾದ ಪಾಪವನ್ನು ಪಡೆಯುವನು. ಆ ದಿವಸ ಬ್ರಹ್ಮಚರ್ಯದಿಂದಲೇ ಕಾಲ ಕಳೆಯಬೇಕು.

ಅಧ್ವಾನಂ ಕಲಹಂ ಕ್ರೋಧಂ ಪುತ್ರಭಾರ್ಯಾದಿತಾಡನಂ ।
ಶ್ರಾದ್ಧಭೋಜೀ ಭವೇದ್ಯೋ ಹಿ ತದ್ದಿನೇ ಪರಿವರ್ಜಯೇತ್ ॥ ೧೨ ॥

ಪ್ರಕ್ಷಾಳಯೇತ್ತತಃ ಪಾದೌ ಅರ್ಚಿತೇ ಮಂಡಲೇ ಶುಭೇ ।
ಚತುರಸ್ರಂ ಬ್ರಾಹ್ಮಣಸ್ಯ ಕ್ಷತ್ರಿಯಸ್ಯ ತ್ರಿಕೋಣಕಂ ॥ ೧೩ ॥

ವರ್ತುಲಂ ಚೈವ ವೈಶ್ಯಸ್ಯ ಶೂದ್ರಸ್ಯಾಭ್ಯುಕ್ಷಣಂ ಸ್ಮೃತಂ ।
ಉಪವೇಶ್ಯ ತತೋ ವಿಪ್ರಾನ್ ದತ್ವಾ ಚೈವ ಕುಶಾಸನಂ ॥ ೧೪ ॥

ಪಶ್ಚಾಚ್ಛ್ರಾದ್ಧಸ್ಯ ರಕ್ಷಾರ್ಥಂ ತಿಲಾಂಶ್ಚ ವಿಕಿರೇತ್ತತಃ ।
ವಿಶ್ವೇದೇವಾನಥಾಹೂಯ ವಿಶ್ವೇದೇವಾಸ ಇತ್ಯೃಚಾ ॥ ೧೫ ॥

ಶಂನೋದೇವ್ಯಾ ಜಲಂ ಕ್ಷಿಪ್ತ್ವಾ ಸಪವಿತ್ರೇ ತು ಭಾಜನೇ ।
ಯವಾನ್ ಯವೋಸೀತಿ ತಥಾ ಗಂಧಪುಷ್ಪಂ ಚ ನಿಕ್ಷಿಪೇತ್ ॥ ೧೬ ॥

---

೧೨ ಶ್ರಾದ್ಧ ಭೋಜನ ಮಾಡಿದವನು ಆ ದಿವಸ ಹೆಚ್ಚು ದೂರ ಪ್ರಯಾಣ ಮಾಡಬಾರದು. ಕೋಪದಿಂದ ಹೆಂಡತಿ ಮಕ್ಕಳನ್ನು ಹೊಡೆಯಬಾರದು. ಇವೆಲ್ಲವೂ ಭೋಕ್ತೃವಿನ ಧರ್ಮಗಳು.

೧೩ ಶ್ರಾದ್ಧದಿನದಲ್ಲಿ ಬ್ರಾಹ್ಮಣನನ್ನು ಚತುರಸ್ರಾಕಾರವಾದ ಮಂಡಲದ ಮೇಲೂ, ಕ್ಷತ್ರಿಯನನ್ನು ತ್ರಿಕೋಣಾಕಾರವಾದ ಮಂಡಲದ ಮೇಲೂ ನಿಲ್ಲಿಸಿ ಪಾದವನ್ನು ತೊಳೆಯಬೇಕು.

೧೪. ವೈಶ್ಯನನ್ನು ವರ್ತುಲಾಕಾರವಾದ ಮಂಡಲದ ಮೇಲೂ, ಶೂದ್ರನನ್ನು ಪ್ರೋಕ್ಷಿಸಿದ ಭೂಮಿಯಮೇಲೂ ನಿಲ್ಲಿಸಿ ಕಾಲನ್ನು ತೊಳೆಯಬೇಕು. ಹೀಗೆ ಪಾದಪ್ರಕ್ಷಾಳನೆ ಮಾಡಿದಮೇಲೆ, ದರ್ಭೆಯ ಆಸನದಲ್ಲಿ ಬ್ರಾಹ್ಮಣರನ್ನು ಕೂರಿಸಬೇಕು.

೧೫. ಆ ಮೇಲೆ ಶ್ರಾದ್ಧಸಂರಕ್ಷಣೆಗಾಗಿ ಎಳ್ಳನ್ನು ಸುತ್ತಲೂ ಎರಚಬೇಕು. ವಿಶ್ವೇದೇವಾಸ, ಎಂಬ ಮಂತ್ರದಿಂದ ವಿಶ್ವೇದೇವರುಗಳನ್ನು ಪ್ರಾರ್ಥಿಸಿ, ಅವರನ್ನು ಮೊದಲು ಆವಾಹನೆ ಮಾಡಬೇಕು.

೧೬. ಆ ಮೇಲೆ ಪವಿತ್ರದಿಂದ ಕೂಡಿದ ಎರಡು ಪಾತ್ರೆಗಳಲ್ಲಿ ಶಂನೋದೇವಿ, ಎಂಬ ಮಂತ್ರದಿಂದ ನೀರನ್ನು ಹಾಕಬೇಕು. ಅದರಲ್ಲಿ ಯವೋಸಿ, ಎಂಬ ಮಂತ್ರದಿಂದ ಯವಧಾನ್ಯವನ್ನೂ ಗಂಧಪುಷ್ಪಗಳನ್ನೂ ಹಾಕಬೇಕು. ಈ ಎರಡು ಪಾತ್ರೆಗಳ ಅರ್ಘ್ಯವು ವಿಶ್ವೇದೇವತೆಗಳಿಗೆ ತೃಪ್ತಿಯನ್ನು ಕೊಡತಕ್ಕದ್ದು.

ಯಾ ದಿವ್ಯಾ ಇತಿ ಮಂತ್ರೇಣ ಹಸ್ತೇಷ್ವರ್ಘ್ಯಂ ವಿನಿಕ್ಷಿಪೇತ್ ।
ಪ್ರದದ್ಯಾದ್ಗಂಧಮಾಲ್ಯಾದಿ ಧೂಪಂ ವಾಸಾಂಸಿ ಶಕ್ತಿತಃ ॥ ೧೭ ॥

ಅಪಸವ್ಯಂ ತತಃ ಕೃತ್ವಾ ಪಿತೄನಾವಾಹಯೇತ್ತತಃ ।
ಉಶಂತಸ್ತ್ವೇತಿ ಚ ಋಚಾ ಆವಾಹ್ಯ ತದನುಜ್ಞಯಾ ॥ ೧೮ ॥

ಜಪೇದಾಯಂತುನ ಋಚಂ ತಿಲೋಽಸೀತಿ ತಿಲಾಂಸ್ತಥಾ ।
ಕ್ಷಿಪೇದರ್ಘ್ಯಂ ಯಥಾಪೂರ್ವಂ ವಿಪ್ರಹಸ್ತೇ ಸಮಾಹಿತಃ ॥ ೧೯ ॥

ಸಂಸ್ರವಾನ್ ಪ್ರಕ್ಷಿಪೇತ್ಪಾತ್ರೇ ನ್ಯುಬ್ಜಂ ಚೈವ ಯಥಾ ಭವೇತ್ ।
ಪಿತೃಭ್ಯಃ ಸ್ಥಾನಮಸೀತಿ ತತೋಽಗ್ನೌಕರಣಂ ಮತಂ ॥ ೨೦ ॥

---

೧೭. ಯಾದಿವ್ಯಾಆಪಃ, ಎಂಬ ಮಂತ್ರದಿಂದ ವಿಶ್ವೇದೇವತೆಗಳನ್ನು ಆವಾಹನೆಮಾಡಿರುವ ಬ್ರಾಹ್ಮಣರಿಗೆ ಅರ್ಘ್ಯಪ್ರದಾನಮಾಡಬೇಕು. ಇದಾದಮೇಲೆ ಗಂಧಪುಷ್ಪಾದಿಗಳನ್ನು ಕೊಟ್ಟು ಧೂಪದೀಪಗಳಿಂದಲೂ ವಸ್ತ್ರಗಳಿಂದಲೂ ಸತ್ಕರಿಸಬೇಕು.

೧೮. ಆ ವಿಶ್ವದೇವರನ್ನು ಭಕ್ತಿಯಿಂದ ಅರ್ಚಿಸಿ, ಅವರ ಅಪ್ಪಣೆಯನ್ನು ಪಡೆದು, ಅಪಸವ್ಯದಿಂದ ಉಶಂತಸ್ತ್ವಾ, ಎಂಬ ಮಂತ್ರದಿಂದ ಪಿತೃದೇವತೆಗಳನ್ನು ಆವಾಹನೆ ಮಾಡಬೇಕು. ಸವ್ಯಭಾಗದಲ್ಲಿ ಯಜ್ಞೋಪವೀತವನ್ನಿಟ್ಟು ವಿಶ್ವೇದೇವತೆಗಳನ್ನೂ ಆರಾಧಿಸಬೇಕು. ಅಪಸವ್ಯಭಾಗದಿಂದ ಪಿತೃಗಳನ್ನು ಅರ್ಚಿಸಬೇಕು.

೧೯. 'ಆಯಂತುನಃ' ಎಂಬ ಋಕ್ಕಿನಿಂದ ಪಿತೃದೇವತೆಗಳನ್ನು ಧ್ಯಾನಮಾಡಬೇಕು. 'ತಿಲೋಽಸಿ' ಎಂಬ ಮಂತ್ರದಿಂದ ಎಳ್ಳನ್ನು ಹಾಕಿ ಉದಕದಿಂದ ಶುದ್ಧಿಮಾಡಿ ಅರ್ಘ್ಯವನ್ನು ಬ್ರಾಹ್ಮಣ ಹಸ್ತದಲ್ಲಿ ವಿಧಿವತ್ತಾಗಿ ಪ್ರದಾನ ಮಾಡಬೇಕು.

೨೦. ಅರ್ಘ್ಯಪ್ರದಾನ ಮಾಡಿದ ನೀರನ್ನು ಕೈಬೆರಳುಗಳ ಮೂಲಕ ಕೆಳಕ್ಕೆ ಜಾರುವಂತೆ ಮಾಡಿಕೊಂಡು, ಆ ಅರ್ಘ್ಯಪಾತ್ರೆಯನ್ನು, ಪಿತೃಭ್ಯಃ ಸ್ಥಾನಮಸೀ, ಎಂಬ ಮಂತ್ರದಿಂದ ಒಂದು ಸ್ಥಳದಲ್ಲಿ ಪ್ರತ್ಯೇಕವಾಗಿರಿಸಬೇಕು. ಅನಂತರ ಅಗ್ನೌಕರಣವನ್ನು ನಡೆಸತಕ್ಕದ್ದು.

ಅಗ್ನೌಕರಿಷ್ಯ ಇತ್ಯುಕ್ತ್ವಾ ಕುರುಷ್ವೇತ್ಯಭ್ಯನುಜ್ಞಯಾ ।
ಅನ್ನಂ ಘೃತಪ್ಲುತಂ ವಹ್ನೌ ಜುಹುಯಾತ್ಪಿತೃಯಜ್ಞವತ್ ॥ ೨೧ ॥

ಅಗ್ನೇರಭಾವಾದ್ವಿಪ್ರಸ್ಯ ಪಾಣೌ ಹೋಮಂ ವಿಧೀಯತೇ ।
ಮಹಾದೇವಸ್ಯ ಪುರತೋ ಗೋಷ್ಠೇ ವಾ ಶ್ರದ್ಧಯಾನ್ವಿತಃ ॥ ೨೨ ॥

ಪಿಂಡನಿರ್ವಾಪಣಂ ಕೃತ್ವಾ ಬ್ರಾಹ್ಮಣಾಂಶ್ಚೈವ ಭೋಜಯೇತ್ ।
ಕೇಚಿದಪ್ಯೇವಮಿಚ್ಛಂತಿ ನೈವ ಭಾನೋರ್ಮತಂ ದ್ವಿಜಾಃ ॥ ೨೩ ॥

ವಿವಿಧಂ ಪಾಯಸಂ ದದ್ಯಾದ್ಭಕ್ಷ್ಯಾಣಿ ಸುಬಹೂನ್ಯಪಿ ।
ಲೇಹ್ಯಂ ಚೋಷ್ಯಂ ತಥಾ ಕಾಮಪುಷ್ಪಮೇವ ಫಲಂವಿನಾ ॥೨೪ ॥

ವಿವಿಧಾನ್ಯಪಿ ಮಾಂಸಾನಿ ಪಿತೄಣಾಂ ಪ್ರೀತಿಪೂರ್ವಕಂ ।
ದತ್ತಾನ್ಯಪಿ ನಿಷಿದ್ಧಾನಿ ಶ್ರಾದ್ಧಂ ನೈವಾಕ್ಷಯಂ ಭವೇತ್ ॥ ೨೫ ॥

---

೨೧. ಅಗ್ನಿಯಲ್ಲಿ ಹೋಮ ಮಾಡುತ್ತೇನೆಂದು ಹೇಳಿ 'ಮಾಡು' ಎಂಬ ಪ್ರತಿವಚನವನ್ನು ಆ ಬ್ರಾಹ್ಮಣರಿಂದ ಪಡೆದು, ಘೃತಮಿಶ್ರವಾದ ಅನ್ನವನ್ನು ಅಗ್ನಿಯಲ್ಲಿ ಹೋಮ ಮಾಡಬೇಕು. ಪಿತೃಯಜ್ಞದ ಹೋಮವಿಧಿಯನ್ನೇ ಇಲ್ಲಿ ಅನುಸರಿಸಬೇಕು. ಇದನ್ನೇ ಅಗ್ನೌಕರಣವೆನ್ನುವರು

೨೨. ಅಗ್ನಿಯ ಅಭಾವದಲ್ಲಿ ಬ್ರಾಹ್ಮಣನ ಕೈಯಲ್ಲಿಯೋ, ಪರಮೇಶ್ವರನ ಸನ್ನಿಧಿಯಲ್ಲೋ, ಅಥವಾ ಗೋಸ್ಥಾನದಲ್ಲಿಯೋ ಶ್ರದ್ಧೆಯಿಂದ ಹೋಮಮಾಡಬೇಕು. ಇದೂ ಸಹ ಶಾಸ್ತ್ರಸಮ್ಮತವಾದದ್ದೇ.

೨೩. ಮೊದಲು ಪಿಂಡಪ್ರದಾನ ಮಾಡಿ ಅನಂತರ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕೆಂದು ಕೆಲವರು ಹೇಳುತ್ತಾರೆ. ಅದು ಸೂರ್ಯದೇವನಿಗೆ ಸಮ್ಮತ ವಾದುದಲ್ಲ. ಮೊದಲು ವಿಪ್ರ ಭೋಜನ, ಅನಂತರ ಪಿಂಡಪ್ರದಾನ, ಈ ಕ್ರಮವೇ ಸೂಕ್ತವಾದದ್ದು.

೨೪. ಭೋಜನ ಕಾಲದಲ್ಲಿ ನಾನಾವಿಧವಾದ ಭಕ್ಷ್ಯ ಭೋಜ್ಯಗಳನ್ನೂ, ಪಾಯಸಗಳನ್ನೂ, ಲೇಹ್ಯ ಚೋಷ್ಯಗಳನ್ನೂ ಅಪಕ್ವವಾದ, ಹೂವು, ಹಣ್ಣು ಇವು ಗಳನ್ನು ಬಿಟ್ಟು ರುಚಿ ರುಚಿಯಾದ ಆಹಾರಗಳನ್ನು ಭೋಜನಕ್ಕೆ ಉಪಯೋಗಿಸಬೇಕು.

೨೫. ಶ್ರಾದ್ಧಕಾಲದಲ್ಲಿ ಪಿತೃಗಳಿಗೆ ಮಾಂಸದ ಆಹಾರವನ್ನು ಕೊಡಬಹುದು. ಇದು ಶ್ರಾದ್ಧದಲ್ಲಿ ನಿಷಿದ್ಧವೆನಿಸುವುದಿಲ್ಲ. ಆದರೆ ಶಾಸ್ತ್ರನಿಷಿದ್ಧವಾದ ಕೆಲವು ಮಾಂಸ ಗಳನ್ನು ಉಪಯೋಗಿಸುವುದರಿಂದ, ಶ್ರಾದ್ಧವು ಸಂಪೂರ್ಣವಾಗಿ ಅಪವಿತ್ರವೆನಿಸುವುದು.

ನಾಶ್ನಾತಿ ಯೋ ದ್ವಿಜೋ ಮಾಂಸಂ ನಿಯುಕ್ತಃ ಪಿತೃಕರ್ಮಣಿ ।
ಸ ಪ್ರೇತ್ಯ ನರಕಂ ಯಾತಿ ಪಶುತ್ವಂ ಚ ಪ್ರಪದ್ಯತೇ ॥ ೨೬ ॥

ಧರ್ಮಶಾಸ್ತ್ರಂ ಪುರಾಣಂ ಚ ತಥಾಥರ್ವಶಿರಸ್ತಥಾ ।
ರುದ್ರಾಂಶ್ಚ ಪೌರುಷಂ ಸೂಕ್ತಂ ಬ್ರಾಹ್ಮಣಾಂಶ್ರಾವಯೇತ್ತತಃ ॥ ೨೭ ॥

ಭುಂಜೀರನ್ ಬ್ರಾಹ್ಮಣಾಸ್ಸರ್ವೇ ವಾಗ್ಯತಾ ಘೃತಭೋಜನಾಃ ।
ವಿಕಿರಂ ನಿಕ್ಷಿಪೇತ್ಪಶ್ಚಾಚ್ಛೇಷಮನ್ನಮಥಾಬ್ರವೀತ್ ॥ ೨೮ ॥

ಹಸ್ತಪ್ರಕ್ಷಾಳನಂ ದತ್ವಾ ಕುರ್ಯಾದ್ವೈ ಸ್ವಸ್ತಿವಾಚನಂ ।
ದದ್ಯಾದ್ವೈ ದಕ್ಷಿಣಾಂ ಶಕ್ತ್ಯಾ ಸ್ವಧಾಕಾರಮುದೀರಯೇತ್ ॥ ೨೯ ॥

---

೨೬. ಪಿತೃಕರ್ಮದಲ್ಲಿ ಆಹೂತನಾದ ಬ್ರಾಹ್ಮಣನು ಮಾಂಸ ಭೋಜನ ಮಾಡಲೇ ಬೇಕು. ಹಾಗೆ ಆತನು ಮಾಡದಿದ್ದರೆ ಆತನಿಗೆ ನರಕಪ್ರಾಪ್ತಿಯಾಗುವುದಲ್ಲದೆ ಪಶುಜನ್ಮವನ್ನು ಪಡೆಯುವನು.

೨೭. ಬ್ರಾಹ್ಮಣರ ಭೋಜನಕಾಲದಲ್ಲಿ ಧರ್ಮಶಾಸ್ತ್ರ, ಪುರಾಣ, ಅಥರ್ವ ಶಿರಸ್ಸು ಎಂಬ ಮಂತ್ರಭಾಗ, ಶ್ರೀರುದ್ರ, ಪುರುಷಸೂಕ್ತ ಇವೇ ಮೊದಲಾದುವುಗಳನ್ನು ಪಠನ ಮಾಡಬೇಕು. ಈ ಪವಿತ್ರವಾದ ಮಂತ್ರಗಳನ್ನು ಬ್ರಾಹ್ಮಣರಿಗೆ ಶ್ರವಣ ಮಾಡಿಸಬೇಕು.

೨೮. ಬ್ರಾಹ್ಮಣರು ಮೌನವಾಗಿ ಘೃತಮಿಶ್ರವಾಗಿ ಆಹಾರವನ್ನು ಸೇವಿಸಬೇಕು. ಆಮೇಲೆ ವಿಕಿರವನ್ನು ಮಂತ್ರಪೂರ್ವಕವಾಗಿ ಕೊಟ್ಟು ಶೇಷಾನ್ನವನ್ನು ಕೇಳಿ ಕೊಳ್ಳಬೇಕು.

೨೯. ಭೋಜನಾನಂತರ ಕೈತೊಳೆದುಕೊಂಡ ಮೇಲೆ ಸ್ವಸ್ತಿವಾಚನವನ್ನು ಹೇಳಿಸಿ, ತನ್ನ ಶಕ್ತಿಯನ್ನನುಸರಿಸಿ ದಕ್ಷಿಣೆಯನ್ನು ಕೊಡಬೇಕು. ಆಮೇಲೆ ಸ್ವಧಾಕಾರದಿಂದ ಅವರನ್ನು ತೃಪ್ತಿಪಡಿಸಬೇಕು.

ದಾತಾರೋ ನೋಽಭಿವರ್ಧಂತಾಂ ವಾಜೇವಾಜೇತಿ ವೈ ಋಚಂ ।
ಜಪ್ತ್ವಾ ತು ಬ್ರಾಹ್ಮಣಾಂಸ್ತುತ್ವಾ ನಮಸ್ಕೃತ್ಯ ವಿಸರ್ಜಯೇತ್ ॥ ೩೦ ॥

ಭೋಕ್ತಾ ಚ ಶ್ರಾದ್ಧದಸ್ತಸ್ಯಾಂ ರಜನ್ಯಾಂ ಮೈಥುನಂ ತ್ಯಜೇತ್ ।
ಸ್ವಾಧ್ಯಾಯಂ ಚ ತಥಾಧ್ವಾನಂ ಪ್ರಯತ್ನೇನ ವಿವರ್ಜಯೇತ್ ॥ ೩೧ ॥

ಅಧ್ವಗೋ ವ್ಯಸನೀ ಚೈವ ವಿಶೇಷೇಣ ಹ್ಯನಗ್ನಿಕಃ ।
ಆಮಶ್ರಾದ್ಧಂ ದ್ವಿಜಃ ಕುರ್ಯಾತ್ ದುರ್ಬಲಸ್ತು ಸದೈವ ಹಿ ॥ ೩೨ ॥

ಫಲೈರಪಿ ಚ ಮೂಲೈರ್ವಾ ಕುರ್ಯಾಚ್ಛ್ರಾದ್ಧಂ ಚ ನಿರ್ಧನಃ ।
ಸ್ನಾತ್ವಾ ತಿಲೋದಕೈರ್ವಾಽಪಿ ತರ್ಪಯೇಚ್ಛ್ರದ್ಧಯಾ ಪಿತೄನ್ ॥ ೩೩ ॥

---

೩೦. ಅನಂತರ "ನಮಗೆ ಅನ್ನದಾನ ಮಾಡುವವರು ಅಭಿವೃದ್ಧಿ ಹೊಂದಲಿ'. ಎಂದು ಪ್ರಾರ್ಥನೆ ಮಾಡಿ, ವಾಜೇವಾಜೇ, ಎಂಬಮಂತ್ರವನ್ನು ಜಪಿಸಿ, ಬ್ರಾಹ್ಮಣರನ್ನು ಹೊಗಳಿ, ಅವರಲ್ಲಿ ಆವಾಹನೆ ಮಾಡಿದ್ದ ಪಿತೃದೇವತೆಗಳನ್ನು ವಿಸರ್ಜನೆಮಾಡಬೇಕು'

೩೧. ಶ್ರಾದ್ಧಕರ್ತನೂ, ಶ್ರಾದ್ಧಭೋಜಿಯೂ, ಶ್ರಾದ್ಧನಡೆದ ರಾತ್ರಿಯಲ್ಲಿ ಸ್ತ್ರೀ ಸಂಭೋಗ ಮಾಡಬಾರದು. ವೇದಾಧ್ಯಯನ, ದೂರದೇಶಪ್ರಯಾಣ ಇವುಗಳನ್ನು ಬಿಡಬೇಕು. ಈ ಕರ್ಮಗಳಿಗೆ ಆ ದಿನವು ಅಷ್ಟು ಪ್ರಶಸ್ತವಾದುದಲ್ಲ.

೩೨. ಬ್ರಾಹ್ಮಣನು, ಮಾರ್ಗಮಧ್ಯದಲ್ಲಿದ್ದಾಗ, ವಿಶೇಷವಾಗಿ ವ್ಯಸನಾಕ್ರಾಂತನಾಗಿದ್ದಾಗ, ಪತ್ನೀರಹಿತನಾಗಿದ್ದಾಗ, ಆಮಶ್ರಾದ್ಧವನ್ನು ಮಾಡಬಹುದು. ದುರ್ಬಲನಾದ ಅಂದರೆ ಯಾವ ವಿಧವಾದ ಶಕ್ತಿಯೂ ಇಲ್ಲದ ವಿಪ್ರನು ಯಾವಾಗಲೂ ಆಮಶ್ರಾದ್ಧವನ್ನು ಮಾಡಬಹುದು.

೩೩. ಬಡವನಾದವನು, ಹಣ್ಣುಗಳಿಂದಲೋ, ಕಂದಮೂಲಗಳಿಂದಲೋ, ಆಹಾರಗಳನ್ನು ನಿರ್ಮಿಸಿ ಬ್ರಾಹ್ಮಣರಿಗೆ ಒಪ್ಪಿಸಿ ಶ್ರಾದ್ಧ ಮಾಡಬಹುದು. ಅದೂ ಸಾಧ್ಯವಿಲ್ಲದಿದ್ದರೆ ಶ್ರದ್ಧೆಯಿಂದ, ಸ್ನಾನಮಾಡಿ, ತಿಲೋದಕದಿಂದಲಾದರೂ ಪಿತೃದೇವತೆಗಳನ್ನು ತೃಪ್ತಿಪಡಿಸಬೇಕು.

ಶ್ರದ್ಧಯಾ ತು ಕೃತೇ ಶ್ರಾದ್ಧೇ ಭಗವಾನ್ ನೀಲಲೋಹಿತಃ ।
ಪ್ರೀತೋ ಭವತಿ ವಿಶ್ವಾತ್ಮಾ ವಿಶ್ವೇಶೋ ಹವ್ಯಕವ್ಯಭುಕ್　　　　॥ ೩೪ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಶ್ರಾದ್ಧವಿಧಿ ಕಥನಂ ನಾಮ ಏಕೋನ ವಿಂಶೋಧ್ಯಾಯಃ

---

೩೪. ಹೀಗೆ ಪಿತೃಶ್ರಾದ್ಧವನ್ನು ಯಾರು ಶ್ರದ್ಧೆಯಿಂದ ಮಾಡುವರೋ, ಅವರ ವಿಷಯದಲ್ಲಿ ಪರಮೇಶ್ವರನು ಸಂತುಷ್ಟನಾಗುವನು. ಅಲ್ಲದೆ ಹವ್ಯ ಮತ್ತು ಕವ್ಯಗಳನ್ನು ಸ್ವೀಕರಿಸಿ ಪ್ರಪಂಚರೂಪಿಯಾದ ಪರಶಿವನೇ ತೃಪ್ತನಾಗಿ ಪಿತೃಗಳಿಗೆ ಮೋಕ್ಷವನ್ನು ಕೊಡುವನು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದ ರೂಪವಾಗಿ ಶ್ರಾದ್ಧವಿಧಿ ವಿವರಣೆಯೆಂಬ ಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ ಶ್ರೀ ಶಿವಾಯನಮಃ॥

ಅಥ ಶ್ರೀ ಸೌರಪುರಾಣೇ ವಿಂಶೋಽಧ್ಯಾಯಃ.

॥ ಸೂತ ಉವಾಚ ॥

ಅಥ ಧರ್ಮೋ ವನಸ್ಥಾನಾಮುಚ್ಯತೇ ಶೃಣುತ ದ್ವಿಜಾಃ ।
ಪ್ರೀತೋ ಭವತು ಯೇನಾಸೌ ಭಗವಾನ್ ಭಗನೇತ್ರಹಾ ॥ ೧ ॥

ಶರೀರಮಾತ್ಮನೋ ದೃಷ್ಟ್ವಾ ಪಲಿತಾದ್ಯೈಶ್ಚ ದೂಷಿತಂ ।
ಪುತ್ರೇಷು ಭಾರ್ಯಾಂ ನಿಕ್ಷಿಪ್ಯ ವನಂ ಗಚ್ಛೇದ್ದ್ವಿಜೋತ್ತಮಃ ॥ ೨ ॥

ಫಲಮೂಲಾಶನೋ ನಿತ್ಯಂ ಪಂಚಯಜ್ಞಪರಾಯಣಃ ।
ಅತಿಥಿಂ ಪೂಜಯೇದ್ಭಕ್ತ್ಯಾ ಮತ್ವಾ ಶರ್ವ ಇತಿ ಶ್ರುತಿಃ ॥ ೩ ॥

ಇಪ್ಪತ್ತನೆಯ ಅಧ್ಯಾಯ.

೧. ಪುನಃ ಸೂತಮಹರ್ಷಿಗಳು ಶೌನಕಾದಿಗಳಿಗೆ ವಾನಪ್ರಸ್ಥಾಶ್ರಮದ ಧರ್ಮವನ್ನು ವಿವರಿಸಲಾರಂಭಿಸಿದರು. "ಎಲೈ ಬ್ರಾಹ್ಮಣರೇ ಈಗ ಹೇಳುವ ವಾನಪ್ರಸ್ಥ ಧರ್ಮವನ್ನು ಕೇಳಿರಿ. ಈ ಧರ್ಮದಿಂದ ಸಾಕ್ಷಾತ್ಪಾರ್ವತೀಪತಿಯು ತೃಪ್ತನಾಗುವನು.

೨. ಬ್ರಾಹ್ಮಣಶ್ರೇಷ್ಠರಾದವರು ತಮ್ಮ ಶರೀರವು ವಾರ್ಧಕಧರ್ಮದಿಂದ ಸುಕ್ಕಿ ಹೋಗಿರುವುದನ್ನು ಕಂಡು ತಮ್ಮ ಪತ್ನಿಯನ್ನು ಮಕ್ಕಳ ಸಂರಕ್ಷಣೆಗೆ ಬಿಟ್ಟು ತಾವು ಅರಣ್ಯ ಪ್ರವೇಶಮಾಡಬೇಕು.

೩. ಅಲ್ಲಿ ಗೆಡ್ಡೆ,ಗೆಣಸು, ಹಣ್ಣು ಇವುಗಳನ್ನೇ ಆಹಾರವನ್ನಾಗಿ ಮಾಡಿಕೊಂಡು ನಿತ್ಯವೂ ಪಂಚಯಜ್ಞಗಳನ್ನು ನೆರವೇರಿಸುತ್ತಾ, ಅತಿಥಿಗಳನ್ನು ಪರಮೇಶ್ವರನೆಂಬ ಬುದ್ಧಿಯಿಂದ ಸತ್ಕಾರಮಾಡುತ್ತಿರಬೇಕು.

ಅಷ್ಟೌ ಗ್ರಾಸಾಂಶ್ಚ ಭುಂಜೀತ ಚೀರವಾಸಾ ಭವೇಜ್ಜಟೀ।
ಭವೇತ್ತ್ರಿಷವಣಸ್ನಾಯೀ ನಿತ್ಯಂ ಸ್ವಾಧ್ಯಾಯತತ್ಪರಃ ॥ ೪ ॥

ದಯಾಂ ಚ ಸರ್ವಭೂತೇಷು ನ ಕುರ್ಯಾನ್ನಿಶಿ ಭೋಜನಂ।
ವರ್ಜಯೇದ್ಗ್ರಾಮಜಾತಾನಿ ಪುಷ್ಪಾಣಿ ಚ ಫಲಾನಿ ಚ ॥ ೫ ॥

ಯದಿ ಗಚ್ಛೇತ್ಸಪತ್ನೀಕೋ ಬ್ರಹ್ಮಚಾರ್ಯೇವ ಸರ್ವದಾ।
ಯದಿ ಗಚ್ಛೇದ್ಧನೀ ಭಾರ್ಯಾಂ ಪ್ರಾಯಶ್ಚಿತ್ತೀ ಭವೇದ್ದ್ವಿಜಃ ॥ ೬ ॥

ಆದಿಗರ್ಭೋ ಭವೇತ್ತಸ್ಯಾಃ ಸ ಚಂಡಾಲಸಮೋ ಭವೇತ್।
ಸರ್ವಭೂತಾನುಕಂಪೀ ಸ್ಯಾತ್ಸಂವಿಭಾಗರತಸ್ಸದಾ ॥ ೭ ॥

---

೪. ತಾನು ಜಟಾಧಾರಿಯಾಗಿ ನಾರುಬಟ್ಟೆಯನ್ನುಟ್ಟು ಒಂದು ದಿನಕ್ಕೆ ಎಂಟು ಕಬಳಗಳಂತೆ ತಿಂದುತೃಪ್ತನಾಗಿರಬೇಕು. ಅಂದರೆ ಮಿತಾಹಾರಿಯಾಗಿರಬೇಕು. ತ್ರಿಕಾಲದಲ್ಲಿಯೂ ಸ್ನಾನಮಾಡುತ್ತಾ ವೇದಾಧ್ಯಯನ ತತ್ಪರನಾಗಿ ಕಾಲಕಳೆಯುತ್ತಿರಬೇಕು.

೫. ಸಮಸ್ತ ಪ್ರಾಣಿಗಳಲ್ಲಿಯೂ ದಯೆಯನ್ನಿಡಬೇಕು. ರಾತ್ರಿಕಾಲದಲ್ಲಿ ಭೋಜನ ಮಾಡಬಾರದು. ಊರಿನ ಪ್ರದೇಶದಲ್ಲಿ ಹುಟ್ಟಿದ ಹೂವು, ಹಣ್ಣು ಇವುಗಳನ್ನು ಸೇವಿಸಬಾರದು.

೬. ಒಂದು ವೇಳೆ ಪತ್ನಿಯೊಡನೆಯೇ ವಾನಪ್ರಸ್ಥಾಶ್ರಮವನ್ನು ಹೊಂದಿದರೂ, ಪತ್ನೀಸುಖವನ್ನು ತ್ಯಜಿಸಬೇಕು. ಬ್ರಹ್ಮಚಾರಿಯಂತೆಯೇ ಇರಬೇಕು. ಹಾಗೇನಾದರೂ, ಸ್ತ್ರೀಸಂಭೋಗಮಾಡಿದ್ದೇಆದರೆ ಅಥವಾ ಹಣಗಾರನಂತೆ ವಾಸಮಾಡಿದ್ದೇ ಆದರೆ ಆಗ ಆತನಿಗೆ ಪ್ರಾಯಶ್ಚಿತ್ತವು ವಿಧಾಯಕವಾಗಿದೆ.

೭. ವಾನಪ್ರಸ್ಥಾಶ್ರಮದಲ್ಲಿರುವ ಯಾವನಿಂದ ಸ್ತ್ರೀಯು ಗರ್ಭವತಿಯಾಗುವಳೋ, ಆತನು ಚಂಡಾಲನಿಗೆ ಸಮನಾಗುವನು. ವಾನಪ್ರಸ್ಥಾಶ್ರಮದಲ್ಲಿರುವವನು ಸರ್ವದಾದಯಾಶೀಲನಾಗಿ, ದಾನಧರ್ಮಾದಿಗಳಲ್ಲಿ ಆಸಕ್ತನಾಗಿರಬೇಕು. ಆಸೆಯನ್ನು ಸಂಪೂರ್ಣವಾಗಿ ತೊರೆದಿರಬೇಕು.

ಪರಿವಾದಂ ಮೃಷಾವಾದಂ ನಿದ್ರಾಲಸ್ಯಂ ವಿವರ್ಜಯೇತ್ ।
ಶೀರ್ಣಪರ್ಣಾಶನೋ ವಾ ಸ್ಯಾತ್ ಕೃಚ್ಛ್ರೈರ್ವಾ ವರ್ತಯೇತ್ಸದಾ ॥ ೮ ॥

ಶಿವಪೂಜಾರತೋ ನಿತ್ಯಂ ಶಿವಧ್ಯಾನಪರಾಯಣಃ ।
ಏವಂ ಯೋ ವರ್ತತೇ ನಿತ್ಯಂ ವಾನಪ್ರಸ್ಥಾಶ್ರಮೇ ದ್ವಿಜಃ ॥ ೯ ॥

ಪರಾಂಗತಿಮವಾಪ್ನೋತಿ ದೇಹಾಂತೇ ಶಾಶ್ವತಂ ಪದಂ ।
ಯದಾ ಮನಸಿ ವೈರಾಗ್ಯಂ ಜಾಯತೇ ಸರ್ವವಸ್ತುಷು ॥ ೧೦ ॥

ತದಾ ಚ ಸಂನ್ಯಸೇದ್ವಿದ್ವಾನ್ ಅನ್ಯಥಾ ಪತಿತೋ ಭವೇತ್ ।
ವೇದಾಂತಾಭ್ಯಾಸನಿರತೋ ದಾಂತಃ ಶಾಂತೋ ಜಿತೇಂದ್ರಿಯಃ ॥ ೧೧ ॥

ಜೀರ್ಣಕೌಪೀನವಾಸಾಃ ಸ್ಯಾನ್ಮುಂಡೋ ನಗ್ನೋಽಥವಾ ಭವೇತ್ ।
ತ್ರಿದಂಡೀ ವಾ ಭವೇದ್ವಿದ್ವಾನ್ ಇತ್ಯೇಷಾ ವೈದಿಕೀ ಶ್ರುತಿಃ ॥ ೧೨ ॥

---

೮. ತಿರಸ್ಕಾರದ ಮಾತುಗಳನ್ನು, ಸುಳ್ಳುಹೇಳುವುದನ್ನೂ ನಿದ್ರಾಲಸ್ಯಾದಿಗಳನ್ನೂ ಬಿಡಬೇಕು. ಉದುರಿದ ಎಲೆ, ಹಣ್ಣು ಇವುಗಳನ್ನು ಭಕ್ಷಿಸಬೇಕು. ಅಥವಾ ಕೃಚ್ಛ್ರಚಾಂದ್ರಾಯಣ ವಿಧಿಯಿಂದ ಆಹಾರವನ್ನು ಸೇವಿಸುವವನಾಗಬೇಕು.

೯–೧೦. ಬ್ರಾಹ್ಮಣನು ವಾನಪ್ರಸ್ಥಾಶ್ರಮದಲ್ಲಿ ಶಿವಪೂಜಾಪರಾಯಣನಾಗಿಯೂ ಶಿವಧ್ಯಾನದಲ್ಲಿ ಆಸಕ್ತನಾಗಿಯೂ ವಾಸಿಸಬೇಕು. ಹೀಗಿದ್ದರೆ ಆತನು ದೇಹಾಂತದಲ್ಲಿ ಉತ್ತಮವಾದ ಗತಿಯನ್ನು ಹೊಂದುವನು. ಅಲ್ಲದೆ ಅದೇ ವಾನಪ್ರಸ್ಥಾಶ್ರಮದಲ್ಲಿ ವೈರಾಗ್ಯವನ್ನೂ ಸಂಪಾದಿಸಬೇಕು. ಸಮಸ್ತವಸ್ತುಗಳಲ್ಲಿಯೂ ನಿರಾಶೆಯುಂಟಾಗುವುದೇ ವೈರಾಗ್ಯವು.

೧೧. ಯಾವಾಗ ವಾನಪ್ರಸ್ಥಾಶ್ರಮದಲ್ಲಿ ವೈರಾಗ್ಯವು ಹುಟ್ಟುವುದೋ ಆಗಲೇ ಆತನು ಸಂನ್ಯಾಸಿಯಾಗಬೇಕು. ವೈರಾಗ್ಯವಿಲ್ಲದೆ ಸಂನ್ಯಾಸಿಯಾಗುವುದು ದೋಷವೆನಿಸುವುದು. ಸಂನ್ಯಾಸಧರ್ಮದಲ್ಲಿದ್ದು, ವೇದಾಂತಾದಿ ಆತ್ಮವಿದ್ಯೆಗಳಲ್ಲಿ ಅನುರಕ್ತನಾಗಿ ಜಿತೇಂದ್ರಿಯನಾಗಿ ಶಾಂತನಾಗಿರಬೇಕು.

೧೨. ಸಂನ್ಯಾಸಾಶ್ರಮದಲ್ಲಿ ಜೀರ್ಣವಾದ ವಸ್ತ್ರವನ್ನಾಗಲಿ, ಕೌಪೀನವನ್ನಾಗಲಿ ಧರಿಸಬೇಕು. ತಲೆಗೂದಲನ್ನು ಸಂಪೂರ್ಣವಾಗಿ ತೆಗಿಸಬೇಕು. ದಿಗಂಬರನಾಗಿದ್ದರೂ ಇರಬಹುದು. ತ್ರಿದಂಡ ಸಂನ್ಯಾಸವನ್ನು ಬೇಕಾದರೂ ಆಶ್ರಯಿಸಬಹುದು ಎಂದು ವೇದವು ವಿಧಿಸುತ್ತದೆ.

ನಿರ್ಮಮೋ ನಿರ್ಭಯೋ ನಿತ್ಯಂ ನೈಕಾನ್ನಾದೀ ಭವೇತ್ಕ್ವಚಿತ್ ।
ಸಮಃ ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ ॥ ೧೩ ॥

ಭೈಕ್ಷೇಣ ವರ್ತಯೇನ್ನಿತ್ಯಂ ನೈಕಾನ್ನಾದೀ ಭವೇತ್ಕ್ವಚಿತ್ ।
ಏಕಾನ್ನಾದೀ ಭವೇದ್ಯಸ್ತು ಕದಾಚಿಲ್ಲಂಪಟೋ ಯತಿಃ ॥ ೧೪ ॥

ನಿಷ್ಕೃತಿರ್ನೈವ ತಸ್ಯಾಸ್ತಿ ಧರ್ಮಶಾಸ್ತ್ರೇಷು ಸರ್ವಥಾ ।
ಭವೇತ್ತ್ರಿಷವಣಸ್ನಾಯೀ ಭಸ್ಮೋದ್ಧೂಲಿತವಿಗ್ರಹಃ ॥ ೧೫ ॥

ಪ್ರಣವಂ ಪ್ರಜಪೇನ್ನಿತ್ಯಂ ಮೋಕ್ಷಶಾಸ್ತ್ರಸ್ಯ ಚಿಂತಕಃ ।
ವೇದಾಂತಾಂಶ್ಚ ಪಠೇನ್ನಿತ್ಯಂ ತೇಷಾಮರ್ಥಾಂಶ್ಚ ಚಿಂತಯೇತ್ ॥ ೧೫ ॥

---

೧೩. ಸಂನ್ಯಾಸಿಯು ಮಮಕಾರವನ್ನೂ, ಭಯವನ್ನೂ ಸಂಪೂರ್ಣವಾಗಿ ಬಿಡಬೇಕು. ಜೀವಬ್ರಹ್ಮರಲ್ಲಿ ಅಭೇದವನ್ನು ಪರಿಗಣಿಸಿ ಜ್ಞಾನಿಯಾಗಿ ವರ್ತಿಸಬೇಕು. ಶತ್ರುಮಿತ್ರರಲ್ಲಿಯೂ, ಮಾನಾಪಮಾನಗಳಲ್ಲಿಯೂ ಒಂದೇ ವಿಧವಾದ ಭಾವನೆಯನ್ನಿಡಬೇಕು.

೧೪. ಭಿಕ್ಷಾವೃತ್ತಿಯಿಂದ ಜೀವಿಸಬೇಕು. ತಂದ ಭಿಕ್ಷಾನ್ನವನ್ನು ತಾನೊಬ್ಬನೇ ತಿನ್ನಬಾರದು. ಏಕಾಕಿಯಾಗಿ ಭೋಜನಮಾಡುವುದರಿಂದ ಮನಸ್ಸು ಚಂಚಲವಾಗಬಹುದು. ಇದು ಸಂನ್ಯಾಸಿಗೆ ವಿರುದ್ಧಧರ್ಮವೆನಿಸುವುದು.

೧೫. ಹಾಗೆ ಚಂಚಲ ಮನಸ್ಕನಾದರೆ ಆತನಿಗೆ ಮೋಕ್ಷವು ದೊರಕಲಾರದು, ಎಂದು ಧರ್ಮಶಾಸ್ತ್ರಗಳು ಹೇಳುತ್ತಿವೆ. ಆದ್ದರಿಂದ ತ್ರಿಕಾಲದಲ್ಲಿಯೂ ಸ್ನಾನ ಮಾಡುತ್ತಾ ಭಸ್ಮದಿಂದ ಬಳಿದ ದೇಹವುಳ್ಳವನಾಗಿ ಶಾಂತಮನಸ್ಕನಾಗಿ ಸರ್ವದಾ ಆತ್ಮಧ್ಯಾನದಲ್ಲಿರಬೇಕು.

೧೬. ಸಂನ್ಯಾಸಿಯು ನಿತ್ಯವೂ ಪ್ರಣವಜಪದಿಂದಲೇ ಮೋಕ್ಷವನ್ನು ಸಾಧಿಸಬೇಕು. ಪ್ರಣವವೇ ಸಂನ್ಯಾಸಿಗಳಿಗೆ ಮುಖ್ಯಮಂತ್ರ. ವೇದಾಂತಗಳಾದ ಉಪನಿಷತ್ತುಗಳನ್ನೂ, ಅವುಗಳ ಅರ್ಥವನ್ನೂ ಸರ್ವದಾ ಮನನಮಾಡುತ್ತಿರಬೇಕು.

ಆತ್ಮಾನಂ ಚಿಂತಯೇದ್ದೇವಂ ಈಶಾನಂ ವಿಭುಮವ್ಯಯಂ।
ಅನಂತಂ ನಿರ್ಗುಣಂ ಶಾಂತಂ ಪುರುಷಂ ಪ್ರಕೃತೇಃ ಪರಂ ॥ ೧೭ ॥

ಕಾರಣಂ ಸರ್ವಜಗತಾಂ ಆಧಾರಂ ಸರ್ವತೋಮುಖಂ।
ಚಿದ್ರೂಪಂ ಶಂಕರಂ ಸ್ಥಾಣುಮಾನಂದಮಜರಂ ವಿಭುಂ ॥ ೧೮ ॥

ಪ್ರೇರಕಂ ಸರ್ವಭೂತಾನಾಮೇಕಂ ಬ್ರಹ್ಮ ಮಹೇಶ್ವರಂ।
ಅಪ್ರಮೇಯಮನಾದ್ಯಂತಂ ಸ್ವಯಂಜ್ಯೋತಿಸ್ಸನಾತನಂ ॥ ೧೯ ॥

ತನ್ನಿಷ್ಠಸ್ತನ್ಮಯೋ ಭೂತ್ವಾ ಯೋಗಯುಕ್ತೋ ಮಹಾಮುನಿಃ।
ಅಚಿರೇಣೈವ ಕಾಲೇನ ಪರಂಬ್ರಹ್ಮಾಧಿಗಚ್ಛತಿ ॥ ೨೦ ॥

ದ್ವಿಜಸ್ಸಂನ್ಯಸನಾದೇವ ಪಾಪೇಭ್ಯ ಸ್ಸಂಪ್ರಮುಚ್ಯತೇ।
ಜ್ಞಾನೀ ಮೋಕ್ಷಮವಾಪ್ನೋತಿ ವಿರಾಟ್ಪದಮಖೇ ರತಃ ॥ ೨೧ ॥

---

೧೭. ಆತ್ಮನು ಯಾವಾಗಲೂ ಅನಂತನು, ನಿರ್ಗುಣನು, ಶಾಂತನು, ಪ್ರಕೃತಿಗಿಂತ ಭಿನ್ನವಾದಪುರುಷನು, ನಾಶರಹಿತನು, ಸರ್ವತ್ರವ್ಯಾಪಿಯು, ಈಶಾನರೂಪಿಯು ಎಂಬ ಭಾವನೆಯಿಂದ ಆತ್ಮಧ್ಯಾನಮಾಡುತ್ತಿರಬೇಕು.

೧೮. ಸಮಸ್ತಜಗತ್ತೇ ಆತ್ಮನು. ಸಮಸ್ತ ಲೋಕಕ್ಕೂ ಆತ್ಮನೇ ಆಧಾರ· ಆತ್ಮನು ಚಿತ್ಸ್ವರೂಪನು. ಶಂಕರನು ಸ್ಥಾಣುವು. ವಿಕಾರವಿಲ್ಲದ ಆನಂದಸ್ವರೂಪಿಯೇ ಆತ್ಮ, ಎಂಬ ಭಾವನೆಯೇ ಆತ್ಮಜ್ಞಾನವು.

೧೯. ಸಮಸ್ತ ಪ್ರಾಣಿಗಳಿಗೂ ಪ್ರೇರಕನೇ ಶಂಕರನು. ಆತ್ಮನು ಒಬ್ಬನೇ. ಆದಿ ಅಂತ್ಯ, ಇವುಗಳು ಆತ್ಮನಿಗಿಲ್ಲ. ಸ್ವಯಂಜ್ಯೋತಿಸ್ವರೂಪನಾಗಿ ಸನಾತನನಾಗಿ ಶೋಭಿಸುವವನೇ ಆತ್ಮನು.

೨೦. ಸಂನ್ಯಾಸಿಯಾದ ಯೋಗಿಯು, ತಾನೇ ಆತ್ಮನೆಂಬ ಭಾವನೆಯನ್ನು ಪಡೆದು ಆತ್ಮನಲ್ಲಿ ಲೀನನಾಗಬೇಕು. ಹೀಗೆ ಆತ್ಮಾನುಸಂಧಾನಮಾಡಿದರೆ, ಕೊನೆಗೆ ಆತನು ಸಾಕ್ಷಾತ್ಪರಬ್ರಹ್ಮಸ್ವರೂಪಿಯಾಗುವನು.

೨೧. ಬ್ರಾಹ್ಮಣನಾದವನು ಸಂನ್ಯಾಸಧರ್ಮದಿಂದಲೇ ಮೋಕ್ಷವನ್ನು ಪಡೆಯಬೇಕು. ಆತನ ಸರ್ವಪಾಪಗಳೂ ಆ ಸಂನ್ಯಾಸ ಧರ್ಮದಿಂದಲೇ ನಾಶವಾಗುವುವು. ಕೊನೆಗೆ ಅದೇ ಧರ್ಮದಿಂದ ಆತನು ವಿರಾಟಸ್ವರೂಪನಾದ ಪರಬ್ರಹ್ಮನಲ್ಲಿ ಲೀನನಾಗುವನು.

ಇತಿ ಸರ್ವಮಶೇಷೇಣ ಚಾತುರಾಶ್ರಮ್ಯಮೀರಿತಂ ।
ಯೋಽನುತಿಷ್ಠೇತ್ಪ್ರಯತ್ನೇನ ತಸ್ಯ ಶಂಭುಃ ಪ್ರಸೀದತಿ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀಸೌರೇ, ಸೂತಶೌನಕಸಂವಾದೇ ವಾನಪ್ರಸ್ಥಾದಿ ಧರ್ಮಕಥನಂ ನಾಮ ವಿಂಶೋಽಧ್ಯಾಯಃ ॥

---

೨೨. ಹೀಗೆ ನಾಲ್ಕು ಆಶ್ರಮದ ವಿಷಯವನ್ನೆಲ್ಲಾ ಸಂಪೂರ್ಣವಾಗಿ ನಿಮಗೆ ವಿವರಿಸಿರುವೆನು. ಯಾವಾತನು ಇಲ್ಲಿ ಹೇಳಿರುವಂತೆ ಸಂಪೂರ್ಣವಾದ ಅನುಷ್ಠಾನ ದಿಂದ ಈ ನಾಲ್ಕು ಆಶ್ರಮಗಳನ್ನೂ ಪರಿಪಾಲಿಸುವನೋ ಆತನೇ ಪರಮೇಶ್ವರನಿಗೆ ಪ್ರೀತಿಪಾತ್ರನಾಗುವನು. ಇದರಲ್ಲಿ ಸಂಶಯವಿಲ್ಲ.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಶ್ರೀ ಸೌರಪುರಾಣದಲ್ಲಿ ಸೂತಶೌನಕ ಸಂವಾದ ರೂಪವಾಗಿ ವಾನಪ್ರಸ್ಥಾಶ್ರಮಧರ್ಮನಿರೂಪಣೆಯೆಂಬ ಇಪ್ಪತ್ತನೆಯ ಅಧ್ಯಾಯವು ಸಂಪೂರ್ಣವಾದುದು.

॥ ಶ್ರೀ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಏಕೋನವಿಂಶೋಽಧ್ಯಾಯಃ.

॥ ಋಷಯ ಊಚುಃ ॥

ಕಥಂ ಭಗವತಾ ಸೂತ ಸರ್ಗ ಉಕ್ತೋ ವಿವಸ್ವತಾ ।
ಮನ್ವಂತರಾಣಿ ವಂಶಾಶ್ಚ ತೇಷಾಂ ಚ ಚರಿತಂ ತಥಾ ॥ ೧ ॥

ಪ್ರತಿಸರ್ಗಃ ಪುನಶ್ಚೈವ ಯಥಾ ಭವತಿ ಕೃತ್ಸ್ನಶಃ ।
ಬ್ರೂಹಿ ನಸ್ಸೂತ ಸಕಲಂ ಯಥಾ ವ್ಯಾಸಾಚ್ಛ್ರುತಂ ತ್ವಯಾ ॥ ೨ ॥

ಶೃಣುಧ್ವಂ ಋಷಯಃ ಸರ್ವೇ ಸ್ವೇಚ್ಛಾಲೀಲಾಂ ಮಹೇಶಿತುಃ ।
ಮಹಾದೇವಾತ್ಮಕಂ ಸರ್ವಂ ದೃಷ್ಟವ್ಯೇತಚ್ಚರಾಚರಂ ॥ ೩ ॥

ಇಪ್ಪತ್ತೊಂದನೆಯ ಅಧ್ಯಾಯ.

೧–೨. ಸಮಸ್ತ ಋಷಿಗಳೂ ಮತ್ತೆ ಸೂತಮಹರ್ಷಿಯನ್ನು ಕುರಿತು “ಸ್ವಾಮಿಯೇ, ಸೂರ್ಯದೇವನು ಹಿಂದೆ ವೈವಸ್ವತಮನುವಿಗೆ ಮನ್ವಂತರಗಳು, ವಂಶಚರಿತ್ರೆಗಳು ಸೃಷ್ಟಿಕ್ರಮಗಳು, ಲಯವಿಧಾನ, ಇವೇ ಮೊದಲಾದುವುಗಳ ವಿಚಾರವಾಗಿ ಏನನ್ನು ಬೋಧಿಸಿದನು? ಅದೆಲ್ಲವೂ ನಿನಗೆ ವ್ಯಾಸಮಹರ್ಷಿಯಿಂದ ಸಂಪೂರ್ಣವಾಗಿ ತಿಳಿದು ಬಂದಿದೆಯಷ್ಟೆ. ಕೃಪೆಮಾಡಿ ಆ ವಿಷಯಗಳೆಲ್ಲವನ್ನೂ ನಮಗೆ ತಿಳಿಸಬೇಕು”. ಎಂದು ಕೇಳಿಕೊಳ್ಳಲು

೩. ಸೂತಮಹರ್ಷಿಗಳು ಆ ವಿಷಯಗಳೆಲ್ಲವನ್ನೂ ಕ್ರಮವಾಗಿ ಋಷಿಗಳಿಗೆ ಹೇಳಲಾರಂಭಿಸಿದರು. “ಓ ಮಹರ್ಷಿಗಳೇ, ನಮ್ಮ ಕಣ್ಣುಗಳಿಗೆ ಕಾಣುವ ಚರಾಚರಾತ್ಮಕವಾದ ಈ ಜಗತ್ತೆಲ್ಲವೂ ಮಹೇಶ್ವರನ ಸ್ವೇಚ್ಛಾಲೀಲೆಯ ಪರಿಣಾಮ. ಜಗತ್ತೆಲ್ಲವೂ ನಿಜವಾಗಿ ಮಹೇಶ್ವರಸ್ವರೂಪವಾದದ್ದೇ.

ಕ್ಷೋಭ್ಯಂ ವಿಶ್ವಮಿದಂ ತೇನ ಕ್ಷೋಭಕೋ ಭಗವಾನ್ ಶಿವಃ ।
ಸ ಸಂಕೋಚವಿಕಾಶಾಭ್ಯಾಂ ಪ್ರಧಾನತ್ವೇ ವ್ಯವಸ್ಥಿತಃ ॥ ೪ ॥

ಕ್ಷೋಭ್ಯಮಾನಾತ್ಪ್ರಧಾನಾಚ್ಚ ಪುಂಸಃ ಪ್ರಾದುರಭೂದ್ದ್ವಿಜಾಃ ।
ಯದೇತದ್ವಿಸ್ತೃತಂ ಬೀಜಂ ಪ್ರಧಾನಪುರುಷಾತ್ಮಕಂ ॥ ೫ ॥

ಮಹತ್ತತ್ವಮಿತಿ ಪ್ರೋಕ್ತಂ ಬುದ್ಧಿತತ್ತ್ವಂ ತದುಚ್ಯತೇ ।
ಬುದ್ಧ್ಯಾದಯೋ ವಿಶೇಷಾಂತಾ ಅವ್ಯಕ್ತಾದೀಶ್ವರೇಚ್ಛಯಾ ॥ ೬ ॥

ಪುರುಷಾಧಿಷ್ಠಿತಾದೇವ ಜಜ್ಞಿರೇ ಮುನಿಪುಂಗವಾಃ ।
ಅಹಂಕಾರಸ್ತತೋ ಜಜ್ಞೇ ತನ್ಮಾತ್ರಾಣಿ ತತೋ ದ್ವಿಜಾಃ ॥ ೭ ॥

---

೪. ಆದರೆ ನಮಗೆ ಗೋಚರವಾಗುತ್ತಿರುವ ಈ ಪ್ರಪಂಚವೆಲ್ಲವೂ ನಾಶವಾಗತಕ್ಕದ್ದು. ಪ್ರಪಂಚದ ನಾಶಕನೇ ಪರಮೇಶ್ವರನು. ಪರಶಿವನ ಸಂಕೋಚವೇ ಪ್ರಳಯವೆನಿಸುವುದು. ವಿಕಾಸರೂಪವೇ ಲೋಕದಸೃಷ್ಟಿ. ಆದ್ದರಿಂದ ಲೋಕದ ಸೃಷ್ಟಿ ಮತ್ತು ಲಯಗಳಿಗೆ ಸಂಕೋಚವಿಕಾಸ ಕ್ರಿಯೆಗಳಿಂದ ಪರಶಿವನೇ ಪ್ರಧಾನನೆನಿಸಿರುವನು.

೫. ಈ ಅಸ್ಥಿರವಾದ ಜಗತ್ತಿನ ಸೃಷ್ಟಿಗೆ ಪ್ರಕೃತಿದ್ವಾರಾ ಪುರುಷನೇ ಮೂಲ ಕಾರಣನಾಗುವನು. ಪ್ರಕೃತಿಪುರುಷ ಸಂಬಂಧವೇ ಈ ವಿಶಾಲವಾದ ಜಗತ್ತು ಎಂದು ಸಾಂಖ್ಯರು ಹೇಳುವರು.

೬. ಪ್ರಕೃತಿಯಿಂದ ಮಹತ್ತತ್ತ್ವವೆಂಬುದು ವಿಸ್ತೃತರೂಪವಾಗಿ ಉಂಟಾಗುವುದು. ಅದನ್ನೇ ಬುದ್ಧಿತತ್ವವೆನ್ನುವರು. ಅದರಲ್ಲಿ ಬುದ್ಧಿಯೇ ಮೊದಲಾಗಿ ವಿಶೇಷಾಂತವಾದ ಏಕಾದಶೇಂದ್ರಿಯಗಳು, ಪಂಚತನ್ಮಾತ್ರಗಳು, ಈ ಹದಿನಾರು ಗುಣಗಳು, ಪ್ರಕೃತಿಸಂಬಂಧಿಯಾದ ಪುರುಷನ ಇಚ್ಛೆಯಂತೆ ಆವಿರ್ಭವಿಸುವುವು.

೭. ಹಾಗೆ ಪ್ರಕೃತಿಪುರುಷ ಸಂಪರ್ಕದಿಂದ ಈ ಬುದ್ಧ್ಯಾದಿಗಳು ಹುಟ್ಟಿದರೂ, ಇವನ್ನು ಪುರುಷಾಧಿಷ್ಠಿತಗಳನ್ನಾಗಿಯೇ ತಿಳಿದಿರುವರು. ಮಹತ್ತತ್ತ್ವದಿಂದ ಅಹಂಕಾರವು ಉತ್ಪತ್ತಿಯಾಯಿತು. ಸೂಕ್ಷ್ಮಪಂಚತನ್ಮಾತ್ರಗಳು ಅಹಂಕಾರದಿಂದ ಜನಿಸಿದುವು.

ತತೋ ಭೂತಾನಿ ಜಾತಾನಿ ಪ್ರೇರಿತಾನಿ ಶಿವೇಚ್ಛಯಾ ।
ಮನಸ್ತ್ವವ್ಯಕ್ತಜಂ ಪ್ರಾಹುಃ ಪ್ರೋಕ್ತಂ ತಚ್ಚೋಭಯಾತ್ಮಕಂ ॥ ೮ ॥
ವೈಕಾರಿಕಾದಹಂಕಾರಾತ್ಸರ್ಗೋ ವೈಕಾರಿಕೋ ಭವೇತ್ ।
ತೈಜಸಾನೀಂದ್ರಿಯಾಣ್ಯಾಹುಃ ದೇವಾ ವೈಕಾರಿಕಾ ದಶ ॥ ೯ ॥
ವೈಕಾರಿಕಾತ್ತೇಜಸಶ್ಚ ಭೂತಾದಿಶ್ಚೈವ ತಾಮಸಃ ।
ತ್ರಿವಿಧೋऽಯಮಹಂಕಾರಃ ಕಥ್ಯತೇ ತತ್ತ್ವಚಿಂತಕೈಃ ॥ ೧೦ ॥
ಭೂತಾದೇರಭವತ್ಸರ್ಗೋ ಭೂತತನ್ಮಾತ್ರಸಂಜ್ಞಿತಃ ।
ವಿಕುರ್ವಾಣಸ್ತು ಭೂತಾದಿಃ ಶಬ್ದಮಾತ್ರಂ ಸಸರ್ಜ ಹ ॥ ೧೧ ॥
ಆಕಾಶೋ ಜಾಯತೇ ತಸ್ಮಾತ್ತಸ್ಯ ಶಬ್ದೋ ಗುಣೋ ಮತಃ ।
ವ್ಯೋಮ ಚೈವ ವಿಕುರ್ವಾಣಂ ಸ್ಪರ್ಶಮಾತ್ರಂ ಸಸರ್ಜ ಹ ॥ ೧೨ ॥

---

೮. ಅನಂತರ ಈಶ್ವರನ ಇಷ್ಟವಂತೆಯೇ ಪಂಚತನ್ಮಾತ್ರಗಳಿಂದ ಸ್ಥೂಲವಾದ ಪಂಚಭೂತಗಳು ಹುಟ್ಟಿದುವು. ಅದರಲ್ಲಿ ಮನಸ್ಸನ್ನು ಪ್ರಕೃತಿಜವೆಂದು ಹೇಳುವರು ಆದರೆ ಮನಸ್ಸು ವಿಕೃತಿಯಲ್ಲ. ವ್ಯಕ್ತಾವ್ಯಕ್ತರೂಪವಾಗಿ ಉಭಯಾತ್ಮಕವಾದದ್ದು. ಅದು ಎರಡು ರೀತಿಯಿಂದಲೂ ಜಗಚ್ಚಾಲಕವಾಗುತ್ತದೆ.

೯. ಅಹಂಕಾರವು ಸಾತ್ವಿಕ, ರಾಜಸ, ತಾಮಸವೆಂದು ಮೂರುವಿಧ. ಅದರಲ್ಲಿ ಸಾತ್ವಿಕಾಹಂಕಾರವೇ ವೈಕಾರಿಕ. ಅದರಿಂದ ಸಾತ್ವಿಕವಾದ ಇಂದ್ರಿಯಗಳು ಉತ್ಪನ್ನವಾದವು. ರಾಜಸವೇ ತೈಜಸ. ಇದರಿಂದ ಪ್ರಕಾಶರೂಪಗಳಾದ ಪಂಚೇಂದ್ರಿಯಗಳು ಹುಟ್ಟಿದುವು ಅಂತೂ ರಾಜಸ, ಸಾತ್ವಿಕವಾದ ಅಹಂಕಾರಗಳಿಂದ ದಶ ಇಂದ್ರಿಯಗಳು ಸಿದ್ಧವಾದವು.

೧೦. ಸಾತ್ವಿಕವಾದ ಮತ್ತು ತೇಜೋರೂಪವಾದ ಅಹಂಕಾರದಿಂದ ಇಂದ್ರಿಯಗಳು. ತಮೋರೂಪವಾದ ಅಹಂಕಾರದಿಂದ ಭೂತಾದಿಗಳು, ಹೀಗೆ ಅಹಂಕಾರವು ವೈಕಾರಿಕವೆಂದೂ, ತೈಜಸವೆಂದೂ, ತಾಮಸವೆಂದೂ ಮೂರು ವಿಧಗಳಾಗಿವೆ ಎಂದು ತತ್ತ್ವಚಿಂತಕರಾದ ಋಷಿಗಳು ಹೇಳುತ್ತಾರೆ.

೧೧. ಸೂಕ್ಷ್ಮಪಂಚತನ್ಮಾತ್ರಗಳಿಂದಲೇ ಪಂಚಭೂತಮಯವಾದ ಈ ಸ್ಥೂಲ ಸೃಷ್ಟಿಯು ರಚಿಸಲ್ಪಟ್ಟಿದೆ. ಭೂತಾದಿಗಳು ಕಾರ್ಯಕಾರಿಯಾಗಲು ಮೊದಲೇ ಶಬ್ದವು ಸೃಷ್ಟವಾಯಿತು.

೧೨. ಆ ಶಬ್ದವೆಂಬ ಗುಣಕ್ಕೆ ಆಧಾರವಾಗಿ ಆಕಾಶವು ಸೃಷ್ಟಿಯಾಯಿತು. ಶಬ್ದ ಗುಣಕವಾದದ್ದು ಆಕಾಶ. ವಿಕೃತವಾದ ಆಕಾಶ ಸೃಷ್ಟಿಯಾದ ಮೇಲೆ ಸ್ಪರ್ಶಗುಣವೂ ಸೃಷ್ಟವಾಯಿತು.

ತಸ್ಮಾದುತ್ಪದ್ಯತೇ ವಾಯುಃ ಸ್ಪರ್ಶಸ್ತಸ್ಯ ಗುಣೋ ಭವೇತ್ ।
ಪವನಸ್ಯ ವಿಕುರ್ವಾಣೋ ರೂಪಮಾತ್ರಂ ಸಸರ್ಜ ಹ ॥ ೧೩ ॥

ತೇಜಶ್ಚೋತ್ಪದ್ಯತೇ ತಸ್ಮಾದ್ರೂಪಂ ತಸ್ಯ ಗುಣಂ ವಿದುಃ ।
ತೇಜಸ್ತ್ವೇವ ವಿಕುರ್ವಾಣಂ ರಸಮಾತ್ರಮಭೂತ್ತತಃ ॥ ೧೪ ॥

ಉತ್ಪದ್ಯಂತೇ ತತಶ್ಚಾಪೋ ರಸಸ್ತಾಸಾಂ ಗುಣೋ ಮತಃ ।
ವಿಕುರ್ವಂತ್ಯಸ್ತತಶ್ಚಾಪೋ ಗಂಧಮಾತ್ರಂ ಸಸರ್ಜಿರೇ ॥ ೧೫ ॥

ಗಂಧಾಚ್ಚ ಪೃಥಿವೀ ಜಾತಾ ಗಂಧಸ್ತಸ್ಯಾಸ್ತು ವೈ ಗುಣಃ
ಶಬ್ದಮಾತ್ರಂ ಯದಾಕಾಶಂ ಸ್ಪರ್ಶಮಾತ್ರಂ ಸಮಾವೃಣೋತ್ ॥ ೧೬ ॥

ದ್ವಿಗುಣಃ ಪ್ರೋಚ್ಯತೇ ವಾಯುಃ ಶಬ್ದಸ್ಪರ್ಶಾತ್ಮಕಃ ಸ್ಮೃತಃ ।
ತಥೈವ ವಿಯತೋ ರೂಪಂ ಶಬ್ದಸ್ಪರ್ಶೌ ಗುಣಾವುಭೌ ॥ ೧೭ ॥

---

೧೩. ಆ ಸ್ಪರ್ಶಗುಣಕ್ಕೆ ವಾಯುವೇ ಆಧಾರವಾಯಿತು. ವಾಯುವು ಸ್ಪರ್ಶ ಗುಣಪ್ರಧಾನವುಳ್ಳದ್ದು. ಈ ವಾಯು ಸೃಷ್ಟಿಯಾದ ಮೇಲೆ ರೂಪವು ನಿರ್ಮಿತವಾಯಿತು. ವಾಯುವಿಗೆ ರೂಪದ ಸಂಬಂಧ ತಪ್ಪಿಹೋಯಿತು.

೧೪. ರೂಪತನ್ಮಾತ್ರವು ತೇಜಸ್ಸನ್ನು ಆಶ್ರಯಿಸಿತು. ತೇಜಸ್ಸಿನ ಗುಣವು ರೂಪವೇ ಆಯಿತು. ಹೀಗೆ ತೇಜಸ್ಸು ಸೃಷ್ಟಿಯಾದ ಮೇಲೆ ರಸವು ಉತ್ಪತ್ತಿಯಾಯಿತು.

೧೫. ರಸತನ್ಮಾತ್ರಕ್ಕೆ ಆಶ್ರಯವಾಗಿ ನೀರು, ಆವಿರ್ಭವಿಸಿತು. ಆ ನೀರು ರಸಗುಣವುಳ್ಳದ್ದು. ಹೀಗೆ ರಸೋತ್ಪತ್ತಿಯಾದ ಮೇಲೆ ಗಂಧವು ಸೃಷ್ಟವಾಯಿತು.

೧೬. ಪೃಥಿವಿಯ ಗುಣವು ಗಂಧವು. ಗಂಧಾಶ್ರಯವಾದದ್ದು ಪೃಥಿವೀ. ಆಕಾಶದ ಮುಖ್ಯಗುಣವೆಂದರೆ ಶಬ್ದವೊಂದೇ. ಸ್ಪರ್ಶಾದಿಗಳು ಆಕಾಶದಲ್ಲಿಲ್ಲ.

೧೭. ವಾಯುವಿನಲ್ಲಿ ಆಕಾಶದ ಶಬ್ದಗುಣವೂ, ತನ್ನದೇ ಆದ ಸ್ಪರ್ಶಗುಣವೂ ಅಡಕವಾಗಿರುತ್ತದೆ. ಆದ್ದರಿಂದ ವಾಯುವು ಶಬ್ದಸ್ಪರ್ಶಗಳೆಂಬ ಎರಡು ಗುಣಗಳುಳ್ಳದ್ದಾಗಿದೆ.

ತೇಜಸ್ತತಸ್ಸ್ಯಾತ್ತ್ರಿಗುಣಂ ಸಶಬ್ದಸ್ಪರ್ಶರೂಪವತ್ ।
ರಸಮಾತ್ರಂ ಗುಣಾ ಸ್ಸರ್ವೇ ತ್ರಯ ಆದ್ಯಾ ಸಮಾವಿಶನ್ ॥ ೧೮ ॥

ಆಪಶ್ಚತುರ್ಗುಣಾಸ್ತೇನ ಗಂಧಮಾತ್ರಂ ಸಮಾವಿಶನ್ ।
ತಸ್ಮಾತ್ಪಂಚಗುಣಾ ಭೂಮಿರ್ಬಲಾ ಭೂತೇಷು ಕಥ್ಯತೇ ॥ ೧೯ ॥

ಪುರುಷಾಧಿಷ್ಠಿತತ್ವಾಚ್ಚ ಅವ್ಯಕ್ತಾನುಗ್ರಹೇಣ ಚ ।
ಮಹದಾದಿವಿಶೇಷಾಂತಾ ಹ್ಯಂಡಮುತ್ಪಾದಯಂತಿ ತೇ ॥ ೨೦ ॥

ತಸ್ಮಿನ್ ಕಾರ್ಯಂ ಚ ಕರಣಂ ಸಂಸಿದ್ಧಂ ಪರಮೇಷ್ಠಿನಃ ।
ಪ್ರಾಕೃತೇಂಡೇ ವಿರಂಚಿಸ್ತು ಕ್ಷೇತ್ರಜ್ಞೋ ಬ್ರಹ್ಮಸಂಜ್ಞಿತಃ ॥ ೨೧ ॥

ಸರ್ವೈಃ ಶರೀರೈಃ ಪ್ರಥಮಃ ಸ ವೈ ಪುರುಷ ಉಚ್ಯತೇ ।
ಆದಿಕರ್ತಾ ಸ ಭೂತಾನಾಂ ಬ್ರಹ್ಮಾಗ್ರೇ ಸಮವರ್ತತ ॥ ೨೨ ॥

---

೧೮. ಅಗ್ನಿಯಲ್ಲಿ ವಾಯುವಿಗಿಂತಲೂ ಒಂದು ರೂಪವೆಂಬ ಹೆಚ್ಚುಗುಣವಿದೆ ಆಕಾಶದ ಶಬ್ದಗುಣವೂ, ವಾಯುವಿನ ಸ್ಪರ್ಶಗುಣವೂ, ತೇಜಸ್ಸಿನ ರೂಪಗುಣವೂ ಒಟ್ಟಾಗಿ ಸೇರಿ ಅಗ್ನಿಯಲ್ಲಿ ಪ್ರವೇಶಿಸಿವೆ. ರಸಗುಣ ಮಾತ್ರ ಇದರಲ್ಲಿಲ್ಲ, ಆದ್ದರಿಂದ ತೇಜಸ್ಸು ಗುಣತ್ರಯಾತ್ಮಕವಾನದ್ದು.

೧೯. ರಸಗುಣವು ನೀರಿನ ಮುಖ್ಯಗುಣವು. ಅಲ್ಲದೆ ಹಿಂದಿನ ಶಬ್ದ, ಸ್ಪರ್ಶ ರೂಪ, ರಸ ಈ ನಾಲ್ಕುಗುಣಗಳೊಂದಿಗೆ ಗಂಧಗುಣವೂ ಸೇರಿ ಐದುಗುಣಗಳಾಗಿ, ಆ ಐದೂ ಭೂಮಿಯಲ್ಲಿ ಅಡಗಿರುತ್ತವೆ. ಆದ್ದರಿಂದ ಪಂಚಭೂತಗಳಲ್ಲಿ ಪಂಚಗುಣ ವಿಶಿಷ್ಟವಾದದ್ದು ಭೂಮಿಯು.

೨೦. ಈ ಪಂಚಭೂತಗಳಲ್ಲಿ ಪುರುಷನ ಪ್ರಕೃತಿಯ ಆಶ್ರಯವು ದೊರೆಯುವುದರಿಂದ ಮಹದಾದಿ ವಿಶೇಷಾಂತವಾದ ಹದಿನಾರು ತತ್ತ್ವಗಳು ಉಂಟಾಗುವುವು, ಈ ತತ್ತ್ವಗಳಿಂದ ಬ್ರಹ್ಮಾಂಡವು ಸೃಷ್ಟಿಯಾಗುವುದು.

೨೧. ಆ ಬ್ರಹ್ಮಾಂಡವಲ್ಲಿ ನಡೆಯುವ ಕಾರ್ಯವೂ, ಕಾರಣವೂ ಎಲ್ಲವೂ ಬ್ರಹ್ಮನದೇ ಆಗಿರುತ್ತದೆ. ಬ್ರಹ್ಮಾಂಡದ ಆರಂಭಕಾಲದಲ್ಲಿ ಪರಬ್ರಹ್ಮನಿಗೆ ವಿರಂಚಿ, ಪರಮೇಷ್ಠಿ ಎಂಬ ಹೆಸರುಗಳಿರುತ್ತವೆ. ಅವನಿಗೆ ಮಾತ್ರ ಬ್ರಹ್ಮಾಂಡ ಕ್ಷೇತ್ರದ ಅರಿವುಂಟು.

೨೨. ಶರೀರವನ್ನು ಪಡೆದವರಲ್ಲಿ ಮೊದಲು ಶರೀರಿಯಾದವನನ್ನೇ ಪುರುಷನೆನ್ನುವರು. ಆಪುರುಷನೇ ಸಮಸ್ತ ಪ್ರಾಣಿಗಳಿಗೂ ಮೊದಲನೆಯವನು. ಬ್ರಹ್ಮನ ಮುಂದೆ ನಿಲ್ಲುವವನೇ ಆತನು.

ಮೇರುರುಲ್ಬಂ ಭವೇತ್ತಸ್ಯ ಜರಾಯುಶ್ಚಾಪಿ ಪರ್ವತಾಃ ।
ಗರ್ಭೋದಕಂ ಸಮುದ್ರಾಶ್ಚ ತಸ್ಯಾಽಽಸನ್ಪರಮೇಷ್ಠಿನಃ ॥ ೨೩ ॥

ವಿಶ್ವಂ ತತ್ರಾಭವದ್ವಿಪ್ರಾಃ ಸದೇವಾಸುರಮಾನುಷಂ ।
ಅದ್ಭಿರ್ದಶಗುಣಾಭಿಸ್ತು ಬಾಹ್ಯತೋಽಂಡಂ ಸಮಾವೃತಂ ॥ ೨೪ ॥

ಆಪೋ ದಶಗುಣೇನೈವ ತೇಜಸಾ ಬಹಿರಾವೃತಾಃ ।
ತೇಜೋ ದಶಗುಣೇನೈವ ಬಾಹ್ಯತೋ ವಾಯುನಾಽಽವೃತಂ ॥ ೨೫ ॥

ಆಕಾಶೇನಾವೃತೋ ವಾಯುಃ ಖಂ ತು ಭೂತಾದಿನಾವೃತಂ ।
ಮಹತಾಚೈವ ಭೂತಾದಿರವ್ಯಕ್ತೇನಾವೃತೋ ಮಹಾನ್ ॥ ೨೬ ॥

ಏತೈರಾವರಣೈರಂಡಂ ಸಪ್ತಭಿಃ ಪ್ರಾಕೃತೈರ್ವೃತಂ ।
ಅವ್ಯಕ್ತಪ್ರಭವಂ ಸರ್ವಮಾನುಲೋಮ್ಯೇನ ಲೀಯತೇ ॥ ೨೭ ॥

---

೨೩. ಅನಂತರ ಬ್ರಹ್ಮನು ಮೇರುಪರ್ವತವನ್ನೂ ಜರಾಯುಜಗಳಾದ ಪ್ರಾಣಿಗಳನ್ನೂ ಪರ್ವತಾದಿಗಳನ್ನೂ, ಸಮುದ್ರದ ಗರ್ಭೋದಕವನ್ನು ಸೃಷ್ಟಿಮಾಡಿದನು. ಅಂದರೆ ಬ್ರಹ್ಮಮಯವೇ ಪರ್ವತಾದಿಗಳು.

೨೪. ಅನಂತರ ದೇವ, ರಾಕ್ಷಸ, ಮಾನುಷ, ಇವರಿಗೆ ಆಶ್ರಯವಾದ ವಿಶ್ವವನ್ನು ಸೃಷ್ಟಿಸಿ, ಪೃಥಿವಿಯ ಪ್ರಮಾಣದ ಹತ್ತರಷ್ಟು ಭಾಗ ನೀರನ್ನು ಬ್ರಹ್ಮಾಂಡದಲ್ಲಿ ನಿರ್ಮಾಣ ಮಾಡಿರುವನು.

೨೫. ನೀರಿನ ಭಾಗಕ್ಕಿಂತ ಹತ್ತರಷ್ಟು ತೇಜಸ್ಸನ್ನೂ, ತೇಜಸ್ಸಿಗೆ ಹತ್ತರಷ್ಟು ವಾಯುವನ್ನೂ, ನಿರ್ಮಾಣಮಾಡಿ ಬ್ರಹ್ಮಾಂಡವನ್ನು ಅದರ ಮಧ್ಯದಲ್ಲಿಟ್ಟನು. ಆ ಬ್ರಹ್ಮಾಂಡವು ವಾಯುವಿನಿಂದ ಆಚ್ಛಾದಿತವಾಗಿದೆ.

೨೬. ವಾಯುವನ್ನು ಆಕಾಶದಿಂದ ಮುಚ್ಚಿದನು. ಇಂಥ ಆಕಾಶವನ್ನು ಪಂಚ ಭೂತಗಳಿಂದ ತುಂಬಿದನು. ಅವ್ಯಕ್ತನಾದ ಮಹಾಭೂತಗಳಿಂದ ಕೂಡಿದ ಇಡೀ ಬ್ರಹ್ಮಾಂಡವೇ ಮಹಾಭೂತವೆನಿಸಿಕೊಂಡಿತು.

೨೭. ಈ ಏಳು ವಿಧವಾದ ಆವರಣಗಳಿಂದ ಬ್ರಹ್ಮಾಂಡವು ಆವರಿಸಲ್ಪಟ್ಟಿದೆ. ಪ್ರಲಯಕಾಲದಲ್ಲಿ ಈ ಆವರಣಗಳು ಅವ್ಯಕ್ತರೂಪಿಯಾದ ಆತ್ಮನಲ್ಲಿ ಕ್ರಮವಾಗಿ ಅಡಗಿ ಆತ್ಮಾಂತರ್ಭಾವನ್ನು ಹೊಂದುತ್ತದೆ.

ಗುಣಾಃ ಕಾಲವಶಾದೇವ ಭವಂತಿ ವಿಷಮಾಃ ಸಮಾಃ।
ಗುಣಸಾಮ್ಯೇ ಲಯೋ ಜ್ಞೇಯೋ ವೈಷಮ್ಯೇ ಸೃಷ್ಟಿರುಚ್ಯತೇ ॥ ೨೮ ॥

ಬ್ರಹ್ಮಾಂಡಮೇವ ವಿಪ್ರೇಂದ್ರಾ ಬ್ರಹ್ಮಣಃ ಕ್ಷೇತ್ರಮುಚ್ಯತೇ।
ಕ್ಷೇತ್ರಜ್ಞಶ್ಚ ಸ ಏವೋಕ್ತೋ ವಿರಂಚಿಶ್ಚ ಪ್ರಜಾಪತಿಃ ॥ ೨೯ ॥

ಸಹಸ್ರಕೋಟಯಸ್ಸಂತಿ ಬ್ರಹ್ಮಾದ್ಯಾಸ್ತಿರ್ಯಗೂರ್ಧ್ವಜಾಃ।
ಬ್ರಹ್ಮಾಣೋ ಹರಯೋ ರುದ್ರಾಸ್ತತ್ರ ತತ್ರ ವ್ಯವಸ್ಥಿತಾಃ ॥ ೩೦ ॥

ಆಜ್ಞಯಾ ದೇವದೇವಸ್ಯ ಮಹಾದೇವಸ್ಯ ಶೂಲಿನಃ।
ಬ್ರಹ್ಮಾಂಡಾ ನಾಮ ಸಂಖ್ಯಾನಾಂ ಬ್ರಹ್ಮವಿಷ್ಣುಹರಾತ್ಮನಾಂ ॥ ೩೧ ॥

ಉದ್ಭವೇ ಪ್ರಲಯೇ ಹೇತುರ್ಮಹಾದೇವ ಇತಿ ಶ್ರುತಿಃ।
ಅನಂತಶಕ್ತಿರ್ಭಗವಾನನಂತಮಹಿಮಾಸ್ಪದಃ ॥ ೩೨ ॥

---

೨೮. ಈ ಪಂಚಭೂತಗಳಲ್ಲಿರುವ ಗುಣಗಳು ಕಾಲಕ್ರಮದಲ್ಲಿ ಹೆಚ್ಚುಕಮ್ಮಿಯಾಗಿ ಬದಲಾವಣೆಯನ್ನು ಹೊಂದುವುವು. ಪಂಚಭೂತಗಳಲ್ಲಿ ಹೀಗೆ ಗುಣವು ಹೆಚ್ಚುಕಮ್ಮಿ ಕಂಡುಬಂದರೆ ಅದೇ ಸೃಷ್ಟಿಯೆನಿಸುವುದು. ಗುಣಸಾಮ್ಯವು ತೋರಿಬಂದರೆ ಅದೇ ಲಯವೆನಿಸುವುದು.

೨೯. ಈ ಬ್ರಹ್ಮಾಂಡವನ್ನು ಬ್ರಹ್ಮನ ಕ್ಷೇತ್ರವೆನ್ನುವರು. ಈ ಕ್ಷೇತ್ರದ ಸಂಪೂರ್ಣ ವಿಷಯವು ಬ್ರಹ್ಮನಿಗೆ ತಿಳಿದಿರುವುದರಿಂದ ಈ ಬ್ರಹ್ಮನನ್ನೇ ಕ್ಷೇತ್ರಜ್ಞ, ವಿರಂಚಿ, ಪ್ರಜಾಪತಿ ಎಂದು ಕರೆಯುವರು.

೩೦. ಹೀಗೆ ಬ್ರಹ್ಮಾಂಡಗಳು ಮೇಲೆ, ಕೆಳಗೆ,ಒಟ್ಟಾಗಿ,ಸಹಸ್ರಕೋಟಿ ಸಂಖ್ಯೆಯಲ್ಲಿರುತ್ತವೆ. ಪ್ರತಿ ಬ್ರಹ್ಮಾಂಡಕ್ಕೂ ಬೇರೆಬೇರೆ ಬ್ರಹ್ಮರು, ವಿಷ್ಣುಗಳೂ, ರುದ್ರರೂ ಆವಿರ್ಭವಿಸಿರುವರು.

೩೧–೩೨. ದೇವದೇವನಾದ ಪರಮೇಶ್ವರನ ಅಪ್ಪಣೆಯಿಂದ ಬ್ರಹ್ಮ, ವಿಷ್ಣು, ರುದ್ರರೆಂಬ ಮೂರ್ತಿತ್ರಯಗಳು ಅಲ್ಲಲ್ಲಿ ಆವಿರ್ಭವಿಸುವುವು. ಪ್ರಪಂಚದ ಸೃಷ್ಟಿಗೂ ನಾಶಕ್ಕೂ ಸಾಕ್ಷಾತ್ಪರಮೇಶ್ವರನೇ ಆದಿಕಾರಣನೆಂದೂ, ಪರಮೇಶ್ವರನಲ್ಲಿ ಅನಂತು ಶಕ್ತಿಯೂ, ಅನಂತಾನಂತವಾದ ಮಹಿಮೆಯೂ ಇರುವುದೆಂದು ಸಮಸ್ತ ಶ್ರುತಿಗಳು ಸಾರುತ್ತವೆ.

ಅನಂತೈಶ್ವರ್ಯಸಂಪನ್ನೋ ಮಹಾದೇವೋಂಬಿಕಾಪತಿಃ ।
ನ ತಸ್ಯ ಕರಣಂ ಕಾರ್ಯಂ ಕ್ರಿಯಾ ವಾ ವಿದ್ಯತೇ ದ್ವಿಜಾಃ ॥ ೩೩ ॥

ಸ್ವೇಚ್ಛಯಾ ಭಗವಾನೀಶಃ ಕ್ರೀಡತ್ಯದ್ರಿಜಯಾ ಸಹ ।
ಕಥಿತಃ ಪ್ರಾಕೃತಸ್ಸರ್ಗಃ ಸಂಕ್ಷೇಪಾನ್ಮುನಿಪುಂಗವಾಃ ॥ ೩೪ ॥

ಅಬುದ್ಧಿಪೂರ್ವಕಸ್ತ್ವೇಷ ಬ್ರಾಹ್ಮೀ ಸೃಷ್ಟಿರಥೋಚ್ಯತೇ ॥ ೩೫ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀಸೌರೇ ಸೂತಶೌನಕಸಂವಾದೇ
ಪ್ರಾಕೃತ ಸರ್ಗಕಥನಂ ನಾಮ ಏಕವಿಂಶೋಧ್ಯಾಯಃ

---

೩೩. ಎಲೈ ಶೌನಕಾದಿಗಳೇ! ಮಹಾದೇವನು ಅನಂತವಾದ ಐಶ್ವರ್ಯಸಂಪನ್ನನು. ಆ ಮಹಾದೇವನಿಗೆ ಕಾರಣವಾಗಲಿ, ಕಾರ್ಯವಾಗಲಿ, ಚೇಷ್ಟೆಗಳಾಗಲಿ, ಯಾವುವೂ ಕಂಡು ಬರುವುದಿಲ್ಲ.

೩೪–೩೫. ಭಗವಂತನಾದ ಪರಮೇಶ್ವರನು ಸ್ವೇಚ್ಛಾಚಾರಿಯಾಗಿ, ಹಿಮವಂತನ ಪುತ್ರಿಯಾದ ಪಾರ್ವತಿಯೊಡನೆ ವಿಹರಿಸುತ್ತಿದ್ದಾನೆ. ಇಂತಹ ಪರಮೇಶ್ವರನ ಲೀಲಾಮಯವಾದ ಪ್ರಾಕೃತಸೃಷ್ಟಿಕ್ರಮವನ್ನು ನಿಮಗೆ ಸಂಕ್ಷೇಪವಾಗಿ ವಿವರಿಸಿದ್ದೇನೆ. ಈ ವಿಧವಾದ ಸೃಷ್ಟಿಯನ್ನೇ 'ಬ್ರಾಹ್ಮೀಸೃಷ್ಟಿ" ಎಂದರೆ ಬ್ರಹ್ಮನಿರ್ಮಿತವಾದ ಸೃಷ್ಟಿಯೆನ್ನುವರು, ಎಂದು ಶೌನಕಾದಿಗಳಿಗೆ ಸೂತಮಹಾಮುನಿಗಳು ಹೇಳಿದರು.

ಹೀಗೆ ಬ್ರಹ್ಮಪುರಾಣದ ಉಪಪುರಾಣವಾದ ಸೌರದಲ್ಲಿ, ಸೂತಶೌನಕ
ಸಂವಾದರೂಪವಾಗಿ ಪ್ರಾಕೃತದಸೃಷ್ಟಿವಿಚಾರವೆಂಬ ಇಪ್ಪತ್ತೊಂವನೆಯ
ಅಧ್ಯಾಯವು ಮುಗಿದುದು

|| ೨೮ ||

|| ಶ್ರೀ ಶಿವಾಯನಮಃ ||

ಅಥ ಶ್ರೀ ಸೌರಪುರಾಣೇ ದ್ವಾವಿಂಶೋಽಧ್ಯಾಯಃ

|| ಸೂತ ಉವಾಚ ||

ಅಸಂಖ್ಯಾತಾನಿ ಕಲ್ಪಾನಿ ಗತಾನಿ ಬ್ರಹ್ಮಣೋ ದ್ವಿಜಾಃ ।
ಸಾಂಪ್ರತಂ ವರ್ತತೇ ಯಚ್ಚ ವಾರಾಹಮಿತಿ ಸಂಜ್ಞಿತಂ || ೧ ||

ವಿಸ್ತರಂ ತಸ್ಯ ವಕ್ಷ್ಯಾಮಿ ಶೃಣುಧ್ವಂ ಮುನಿಪುಂಗವಾಃ ।
ಶೃಣ್ವತಾಂ ಪಾಪಹಾನಿಃ ಸ್ಯಾಚ್ಛ್ರದ್ಧಯಾ ಸರ್ವದೇಹಿನಾಂ || ೨ ||

ಏಕಂ ಕಲ್ಪಮಹಃ ಪ್ರೋಕ್ತಂ ಬ್ರಹ್ಮಣಃ ಪರಮೇಷ್ಠಿನಃ ।
ರಾತ್ರಿಶ್ಚ ತಾವತೀ ಪ್ರೋಕ್ತಾ ಕಲ್ಪಮಾನಮಥೋಚ್ಯತೇ || ೩ ||

ಇಪ್ಪತ್ತೆರಡನೆಯ ಅಧ್ಯಾಯ.

೧. ಸೂತಮಹರ್ಷಿಗಳು ಪುನಃ ಶೌನಕಾದಿಗಳನ್ನು ಕುರಿತು "ಮುನಿಗಳೇ! ಹಿಂದೆ ನಾನು ಹೇಳಿದ ಬ್ರಹ್ಮನಿಗೆ ಲೆಕ್ಕವಿಲ್ಲದಷ್ಟು ಕಲ್ಪಗಳು ಕಳೆದುಹೋಗಿವೆ. ಈಗ ನಡೆಯುತ್ತಿರುವ ಕಲ್ಪಕ್ಕೆ ವರಾಹ ಕಲ್ಪವೆಂದು ಹೆಸರು.

೨. ವರಾಹಕಲ್ಪದ ವಿಷಯವನ್ನು ವಿಸ್ತಾರವಾಗಿ ನಿಮಗೆ ಹೇಳುತ್ತೇನೆ. ಇದನ್ನು ಭಕ್ತಿಯಿಂದ ಕೇಳಿದವರ ಪಾಪವೆಲ್ಲವೂ ಪರಿಹಾರವಾಗುವುದು.

೩. ನಮ್ಮ ಈ ಒಂದು ಕಲ್ಪಕಾಲವು ಬ್ರಹ್ಮನಿಗೆ ಒಂದು ಹಗಲು. ಅಷ್ಟೇ ಪ್ರಮಾಣವೇ ಬ್ರಹ್ಮನ ರಾತ್ರಿ. ಆದ್ದರಿಂದ ಬ್ರಹ್ಮನ ಒಂದು ದಿನವು ಎರಡು ಕಲ್ಪಗಳಿಗೆ ಸರಿಹೋಗುವುದು. ಒಂದು ಕಲ್ಪಮಾನವು ಎಷ್ಟೆಂದರೆ,

ಚತುರ್ಯುಗಾನಾಂ ಸಾಹಸ್ರಂ ಕಲ್ಪಮಾನಂ ನಿಗದ್ಯತೇ ।
ಶತತ್ರಯಂ ಷಷ್ಟ್ಯಧಿಕಂ ಕಲ್ಪಾನಾಂ ವರ್ಷಮುಚ್ಯತೇ || ೪ ||

ಚತುರ್ಮುಖಸ್ಯ ವಿಪ್ರೇಂದ್ರಾಃ ಪರಾಖ್ಯಂ ತಚ್ಛತಂ ಭವೇತ್ ।
ತದಂತೇ ಸರ್ವಭೂತಾನಾಂ ಪ್ರಕೃತೌ ವಿಲಯಃ ಸ್ಮೃತಃ || ೫ ||

ಪ್ರಾಕೃತಃ ಪ್ರಲಯಸ್ತೇನ ಕಥ್ಯತೇ ಕಾಲಚಿಂತಕೈಃ ।
ತ್ರಯಾಣಾಮಪಿ ದೇವಾನಾಂ ಪ್ರಕೃತೌ ವಿಲಯೋ ಭವೇತ್ || ೬ ||

ಪುನಃ ಕಾಲವಶಾತ್ತೇಷಾಮುತ್ಪತ್ತಿಃ ಕಥ್ಯತೇ ಬುಧೈಃ
ಕಾಲೋ ಹಿ ಭಗವಾನ್ ಶಂಭುರ್ಮಹಾದೇವ ಇತಿ ಶ್ರುತಿಃ || ೭ ||

ಸೃಜ್ಯಂತೇ ಬಹವೋ ರುದ್ರಾಶ್ಚಾನಂತಾಶ್ಚ ಚತುರ್ಮುಖಾಃ ।
ನಾರಾಯಣಾಹ್ಯಸಂಖ್ಯಾತಾ ದೇವದೇವೇನ ಶಂಭುನಾ || ೮ ||

---

೪. ನಾಲ್ಕು ಯುಗಗಳು ಒಂದು ಸಹಸ್ರಸಾರಿ ಪರಿವರ್ತಿತವಾದರೆ ಅದಕ್ಕೆ ಒಂದು ಕಲ್ಪವೆಂದು ಹೆಸರು. ಅಂತಹ ಮುನ್ನೂರರುವತ್ತು ಕಲ್ಪಗಳು ಬ್ರಹ್ಮನಿಗೆ, ಒಂದು ವರ್ಷವೆನಿಸುವುದು.

೫. ಅಂತಹ ನೂರುವರ್ಷಗಳು ಬ್ರಹ್ಮನ ಆಯುಸ್ಸೆಂದು ಗಣಿಸಲ್ಪಟ್ಟಿದೆ. ಹೀಗೆ ಬ್ರಹ್ಮನ ನೂರುವರ್ಷಗಳು ಕಳೆದಮೇಲೆ ಲೋಕದ ಸಮಸ್ತ ಭೂತಗಳೆಲ್ಲವೂ ಆ ಪ್ರಕೃತಿಯಲ್ಲಿ ಲಯವನ್ನು ಪಡೆಯುವುವು.

೬. ಈ ಪ್ರಲಯವನ್ನು ಕಾಲಜ್ಞರು ಪ್ರಾಕೃತಪ್ರಲಯವೆನ್ನುವರು. ಈ ಪ್ರಳಯದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಮೂರುಮೂರ್ತಿಗಳೂ ಸಹ ಪ್ರಕೃತಿಯಲ್ಲಿ ಐಕ್ಯಹೊಂದುವರು. ಪ್ರಕೃತಿರೂಪದಿಂದ ಜಗತ್ತುನಿಲ್ಲುವುದೇ ಪ್ರಾಕೃತಪ್ರಲಯ.

೭. ಹೀಗೆ ಕೆಲವು ಕಾಲದಮೇಲೆ ಅದರ ಉತ್ಪತ್ತಿಯು ಪುನಃ ಅಗುವುದು. ಕಾಲವೆಂಬುದೇ ಸಾಕ್ಷಾತ್ಪರಮೇಶ್ವರನು. ಸೃಷ್ಟಿಪ್ರಳಯಗಳಿಗೆ ಕಾಲರೂಪದಂತಿರುವವನೇ ಮಹಾದೇವನೆಂದು ವೇದಗಳು ಹೇಳುತ್ತಿವೆ.

೮. ದೇವದೇವನಾದ ಪರಮೇಶ್ವರನು ಅನೇಕ ಜನರುದ್ರರನ್ನೂ, ನಾನಾಸಂಖ್ಯೆಯ ಬ್ರಹ್ಮರನ್ನೂ, ಲೆಕ್ಕವಿಲ್ಲದಷ್ಟು ವಿಷ್ಣುಗಳನ್ನೂ ಸೃಷ್ಟಿಮಾಡುವನು. ಈ ಅಸಾಧಾರಣ ಸಾಮರ್ಥ್ಯವು ಪರಮೇಶ್ವರನಲ್ಲಿ ಮಾತ್ರಕಂಡುಬರುತ್ತದೆ.

ಸಂಹರ್ತಾ ಚ ಪುನಸ್ತೇಷಾಂ ಕಾಲರೂಪೀ ಮಹೇಶ್ವರಃ ।
ಪರಾರ್ಧಂ ಬ್ರಹ್ಮಣೋ ವಿಪ್ರಾ ಅತೀತಮಿತಿ ನಃ ಶ್ರುತಂ ॥ ೯ ॥

ಪಾದ್ಮಕಲ್ಪಮತೀತಂ ಯತ್ ತತ್ಪರಾರ್ಧಂ ದ್ವಿಜೋತ್ತಮಾಃ ।
ವಾರಾಹೋ ವರ್ತತೇ ಕಲ್ಪೋ ವಾರಾಹೋ ಯತ್ರ ಪದ್ಮಭೂಃ ॥ ೧೦ ॥

ಆಸೀದೇಕಾರ್ಣವಂ ಘೋರಂ ನಿರ್ವಿಭಾಗಂ ತಮೋಮಯಂ ॥
ಏಕಾರ್ಣವೇ ತದಾ ತಸ್ಮಿನ್ನಷ್ಟೇ ಸ್ಥಾವರಜಂಗಮೇ ॥ ೧೧ ॥

ಬ್ರಹ್ಮಾ ನಾರಾಯಣೋ ಭೂತ್ವಾ ಯೋಗನಿದ್ರಾಂ ಸಮಾಶ್ರಿತಃ ।
ಸುಷ್ವಾಪ ಸಲಿಲೇ ತಸ್ಮಿನ್ ಈಶ್ವರೇಚ್ಛಾಪ್ರಣೋದಿತ: ॥ ೧೨ ॥

ಮುನಯ: ಸತ್ಯಲೋಕಸ್ಥಾ ದೇವಂ ನಾರಾಯಣಂ ಪ್ರತಿ ।
ಇಮಂ ಚೋದಾಹರಂತ್ಯತ್ರ ಶ್ಲೋಕಂ ಮುನಿವರೋತ್ತಮಾಃ ॥ ೧೩ ॥

---

೯. ಹಾಗೆಯೇ ಮಹೇಶ್ವರನು ಕಾಲರೂಪಿಯಾಗಿ ಅವರೆಲ್ಲರನ್ನೂ ನಾಶ ಮಾಡುವನು. ಈ ಸಾಮರ್ಥ್ಯವೂ, ಮಹೇಶ್ವರನಿಗಿದೆ. ಈಗ ಈ ಬ್ರಹ್ಮಾಂಡದಲ್ಲಿ ಪರಬ್ರಹ್ಮನಿಗೆ ಮೊದಲನೆಯ ಪರಾರ್ಧವು ಕಳೆದುಹೋಗಿದೆ.

೧೦. ಮೊದಲನೆಯ ಪರಾರ್ಧದಲ್ಲಿ ಪದ್ಮಕಲ್ಪವೆಂಬುದು ಕಳೆದುಹೋಗಿದೆ. ಈಗ ನಡೆಯುತ್ತಿರುವುದು ವರಾಹಕಲ್ಪವು. ವಾರಾಹಕಲ್ಪವೆಂದರೆ,

೧೧. ಪ್ರಥಮ ಪರಾರ್ಧದ ಕೊನೆಯಲ್ಲಿ ಜಗತ್ತೆಲ್ಲವೂ ಜಲಮಯವಾಗಿ ಒಂದು ಸಮುದ್ರವಾಯಿತು. ಆ ಸಮುದ್ರಕ್ಕೆ ಕೊನೆಮೊದಲೇ ಇರಲಿಲ್ಲ. ಅದರಲ್ಲಿ ಸ್ಥಾವರ ಜಂಗಮರೂಪವಾದ ಜಗತ್ತೆಲ್ಲವೂ ಲೀನವಾಯಿತು.

೧೨. ಆಗ ಬ್ರಹ್ಮನು ಸಾಕ್ಷಾನ್ನಾರಾಯಣ ರೂಪಿಯಾಗಿ ಯೋಗನಿದ್ರೆಯನ್ನು ಆಶ್ರಯಿಸಿ, ಈಶ್ವರೇಚ್ಛೆಯಿಂದ ನೀರಿನಲ್ಲಿ ಮಲಗಿದನು.

೧೩. ಹೀಗೆ ಸ್ಥಾವರ ಜಂಗಮಾತ್ಮಕವಾದ ಜಗತ್ತು ಸಮುದ್ರದಲ್ಲಿ ಅಡಗಿದ ಮೇಲೆ ಸತ್ಯಲೋಕದಲ್ಲಿ ವಾಸಿಸುತ್ತಿದ್ದ ಋಷಿಗಳೆಲ್ಲರೂ, ನಾರಾಯಣನ ಸನ್ನಿಧಿಗೆ ಹೋಗಿ ಅಲ್ಲಿ ಈ ರೀತಿಯಾಗಿ ಭಗವಂತನನ್ನು ಪ್ರಾರ್ಥಿಸತೊಡಗಿದರು.

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ।
ಅಯನಂ ತಸ್ಯ ತಾಃ ಪ್ರೋಕ್ತಾಸ್ತೇನ ನಾರಾಯಣಃ ಸ್ಮೃತಃ ॥ ೧೪ ॥

ಏವಂ ಯುಗಸಹಸ್ರಾಂತೇ ಯೋಗನಿದ್ರಾಮುಪಾಸ್ಯ ವೈ
ಬ್ರಹ್ಮತ್ವಮಗ್ರಹೀದ್ದೇವಃ ಸೃಷ್ಟ್ಯರ್ಥಂ ಮುನಿಪುಂಗವಾಃ ॥ ೧೫ ॥

ಮಗ್ನಾಂ ಜಲಾಂತಃ ಪೃಥಿವೀಂ ಜ್ಞಾತ್ವಾ ದೇವಶ್ಚತುರ್ಮುಖಃ ।
ತಸ್ಯಾಸ್ತೂದ್ಧರಣಾರ್ಥಾಯ ವಾರಾಹಂ ರೂಪಮಾಸ್ಥಿತಃ ॥ ೧೬ ॥

ಅಪ್ರತರ್ಕ್ಯಮನೌಪಮ್ಯಂ ರೂಪಂ ಭಗವತಃ ಪರಂ ।
ಕ್ಷಣಾದ್ರಸಾತಲಂ ಗತ್ವಾ ಯಜ್ಞೇಶಃ ಪುರುಷೋತ್ತಮಃ ॥ ೧೭ ॥

೧೪–೧೫ " ಭಗವಂತನೇ! ನಾರಾ ಎಂದರೆ, ನೀರು ಎಂದರ್ಥ. ಅದನ್ನೇ ಸ್ಥಾನವನ್ನಾಗಿ ಉಳ್ಳ ನೀನು ಈಗ ನಾರಾಯಣನಾಗಿದ್ದೀಯೆ. ನಾರ ಶಬ್ದವಾಚ್ಯವಾದ ನೀರು ನರರ ಉತ್ಪತ್ತಿಗೆ ಮೂಲಕಾರಣವಾಗಿದೆ. ಇಂತಹ ನರರ ಸೃಷ್ಟಿಗೆ ಮೂಲಕಾರಣವಾದ ನಾರವನ್ನೇ ಅಯನ ಎಂದರೆ ಆಶ್ರಯವನ್ನಾಗಿ ಪಡೆದಿರುವುದರಿಂದಲೇ ನೀನು ಈಗ ನಾರಾಯಣನೆನಿಸಿಕೊಂಡಿರುವೆ," ಎಂದು ಬ್ರಹ್ಮಲೋಕದವರೆಲ್ಲರೂ ವಿಷ್ಣುವನ್ನು ಭಕ್ತಿಯಿಂದ ಧ್ಯಾನಮಾಡಲಾಗಿ ನಾರಾಯಣನು ಯೋಗನಿದ್ರೆಯನ್ನು ಬಿಟ್ಟು ಪುನಃ ಜಗತ್ತನ್ನು ಸೃಷ್ಟಿಮಾಡುವ ಉದ್ದೇಶದಿಂದ ಬ್ರಹ್ಮನ ಧರ್ಮವನ್ನು ತಾಳಿದನು.

೧೬. ಸಮುದ್ರದಲ್ಲಿ ಭೂಮಿಯು ಮುಳುಗಿರುವುದನ್ನು ತಿಳಿದು ಬ್ರಹ್ಮನು ಅದನ್ನು ಎತ್ತಿ ಮೇಲಕ್ಕೆ ತರಲೋಸುಗ ವರಾಹಮೂರ್ತಿಯ ಅವತಾರವನ್ನು ತಾಳಬೇಕಾಯಿತು.

೧೭. ಆ ವರಾಹಮೂರ್ತಿಯಾದರೋ ವರ್ಣನಾತೀತವಾಗಿತ್ತು. ಅಂಥ ಅಸದೃಶವಾದ ಮತ್ತು ಊಹೆಗೆ ಸಿಕ್ಕದಿರುವಂತಹ ವರಾಹ ರೂಪವೊಂದನ್ನು ಹೊಂದಿ ತಕ್ಷಣವೇ ಪಾತಾಳಲೋಕವನ್ನು ಪ್ರವೇಶಿಸಿದನು.ಪರಬ್ರಹ್ಮರೂಪಿಯಾದ ನಾರಾಯಣನು ಪುರುಷಶ್ರೇಷ್ಠನಲ್ಲವೇ?

ಅಭ್ಯುಜ್ಜಹಾರ ಧರಣೀಂ ದಂಷ್ಟ್ರಯಾ ಪರಮೇಶ್ವರಃ ।
ಸನಕಾದ್ಯೈಃ ಸ್ತೂಯಮಾನೋ ಭಗವಾನ್ ಹವ್ಯಕವ್ಯಭುಕ್ ॥ ೧೮ ॥

ಆಸೀದ್ಯಥಾವನಿಃ ಪೂರ್ವಂ ಸಂಸ್ಥಾಪ್ಯ ಚ ತಥಾ ಪುನಃ ।
ಕಲ್ಪಾಂತದಗ್ಧನಿಖಿಲಾನ್ ಪರ್ವತಾಂಶ್ಚ ಮಹೀಧರಃ ॥ ೧೯ ॥

ತತಶ್ಚಿಂತಯತಃ ಸೃಷ್ಟಿಂ ಕಲ್ಪಾದೌ ಪದ್ಮಜನ್ಮನಃ ।
ಅಬುದ್ಧಿಪೂರ್ವಕಸ್ಸರ್ಗಃ ಪ್ರಾದುರ್ಭೂತಸ್ತಮೋಮಯಃ ॥ ೨೦ ॥

ತಮೋ ಮೋಹೋ ಮಹಾಮೋಹಸ್ತಮಿಸ್ರಂ ಚಾಂಧಸಂಜ್ಞಿತಃ ।
ಅವಿದ್ಯಾ ಪಂಚಪರ್ವೈಷಾ ಪ್ರಾದುರ್ಭೂತಾ ಮಹಾತ್ಮನಃ ॥ ೨೧ ॥

---

೧೮. ಅಲ್ಲಿದ್ದ ಭೂಮಿಯನ್ನು ತನ್ನ ಕೋರೆದಾಡೆಗಳ ಮೇಲಿಟ್ಟುಕೊಂಡು ಮೇಲಕ್ಕೆತ್ತಿದನು. ಆ ಸಮಯದಲ್ಲಿ ಸನಕನೇ ಮೊದಲಾದ ಮಹರ್ಷಿಗಳೆಲ್ಲರೂ ಹವ್ಯಕವ್ಯಗಳನ್ನು ಸ್ವೀಕರಿಸುವಂತಹ ಈ ವರಾಹ ರೂಪಿಯಾದ ನಾರಾಯಣನನ್ನು ಬಹುವಾಗಿ ಸ್ತುತಿಸಿದರು.

೧೯. ಶ್ರೀಮನ್ನಾರಾಯಣನು ಭೂಮಿಯನ್ನು ಮೇಲಕ್ಕೆ ಎತ್ತಿತಂದು ಅದನ್ನು ಮೊದಲಿದ್ದ ಸ್ಥಳದಲ್ಲಿಯೇ ನಿಲ್ಲಿಸಿದನು. ಕಲ್ಪಾಂತಕಾಲದಲ್ಲಿ ಸುಟ್ಟು ಹೋಗಿದ್ದ ಅನೇಕ ವಸ್ತುಗಳನ್ನೂ ಪರ್ವತಾದಿಗಳನ್ನೂ ಮೊದಲಿದ್ದಂತೆಯೇ ಸ್ಥಾಪಿಸಿದನು.

೨೦. ಅನಂತರ ಬ್ರಹ್ಮಸ್ವರೂಪಿಯಾದ ನಾರಾಯಣನು ಸೃಷ್ಟಿಯ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿದೊಡನೆಯೇ, ಬುದ್ಧಿಗೆ ಆಶ್ರಯಕೊಡದಿರುವ ಅಂಧಕಾರವು ಜಗತ್ತನ್ನೆಲ್ಲಾ ಆವರಿಸಿತು. ಅಂದರೆ ಜಗತ್ತಿನ ಸೃಷ್ಟಿಗೆ ಮಾಯಾವಸ್ತುವು ಸಹಕಾರವಾಗಿ ಒಂದು ನಿಂತಿತು.

೨೧. ಆ ಅಂಧಕಾರವೇ ಅಜ್ಞಾನವೆಂಬುದು. ಅದನ್ನೇ ಮೋಹ, ಮಹಾಮೋಹ, ತಮಿಸ್ರ, ಅಂಧ, ಅವಿದ್ಯಾ ಎಂದು ಹೇಳುವರು. ಹೀಗೆ ಅವಿದ್ಯೆಯು ಐದು ಹೆಸರುಳ್ಳದ್ದಾಯಿತು. ಮಹಾತ್ಮನಾದ ನಾರಾಯಣನ ಇಚ್ಛೆಯಿಂದ ಅವಿದ್ಯೆಯು ಜಗತ್ತನ್ನೆಲ್ಲಾ ಆವರಿಸಿನಿಂತಿತು.

ಪಂಚಧಾऽವಸ್ಥಿತಃ ಸರ್ಗೋಽ ಧ್ಯಾಯತಃ ಸೋಽಭಿಮಾನಿನಃ ।
ಸಂವೃತ್ತಸ್ತಮಸಾತೀವ ಬೀಜಂ ತ್ವಗಿವ ಸರ್ವತಃ　　॥ ೨೨ ॥

ಅಂತರ್ಬಹಿಶ್ಚಾಪ್ರಕಾಶಃ ಸ್ತಬ್ಧೋ ನಿಸ್ಸಂಜ್ಞ ಏವ ಚ ।
ಮುಖ್ಯಾ ನಗಾ ಇತಿ ಪ್ರೋಕ್ತಾ ಮುಖ್ಯಸರ್ಗಸ್ತು ಸ ಸ್ಮೃತಃ　　॥ ೨೩ ॥

ತಂ ದೃಷ್ಟ್ವಾऽಸಾಧಕಂ ಸರ್ಗಮಮನ್ಯತ್ಕಮಲಾಸನಃ ।
ಪುನಶ್ಚಿಂತಯತಸ್ಸರ್ಗಂ ತಿರ್ಯಕ್ಸ್ರೋತೋಽಭ್ಯವರ್ತತ　　॥ ೨೪ ॥

ಯಸ್ಯ ತಿರ್ಯಕ್ಪ್ರವೃತ್ತ ಸ್ಸ ತಿರ್ಯಕ್‌ಶ್ರೋತಸ್ತತಃ ಸ್ಮೃತಃ ।
ಪಶ್ವಾದಯಸ್ಸಮಾಖ್ಯಾತಾ ಉತ್ಪಥಗ್ರಾಹಿಣಶ್ಚ ಯೇ　　॥ ೨೫ ॥

ತಮಪ್ಯಸಾಧಕಂ ದೃಷ್ಟ್ವಾ ದೇವದೇವಃ ಪಿತಾಮಹಃ ।
ಸಸರ್ಜಾನ್ಯಂ ಪುನಸ್ಸರ್ಗಂ ಊರ್ಧ್ವಶ್ರೋತಂ ತು ಸಾತ್ವಿಕಂ　　॥ ೨೬ ॥

---

೨೨. ಈ ಪಂಚವಿಧಮಾಯೊಸಂಬಂಧದಿಂದ ಪರಮಾತ್ಮನ ಸೃಷ್ಟಿಯೂ ಐದು ವಿಧವಾಗಿ ಪರಿಣಮಿಸಿತು. ಆ ಸೃಷ್ಟಿಕ್ರಮದಲ್ಲೆಲ್ಲಾ ಮಾಯೆಯು, ಬೀಜವನ್ನು ತೊಗಟೆಯು ಮುಚ್ಚುವಂತೆ ಸಂಪೂರ್ಣವಾಗಿ ಜಗತ್ತನ್ನು ಆವರಿಸಿಕೊಂಡಿತು.

೨೩. ಆದರಲ್ಲಿ ಮೊದಲನೆಯ ಸೃಷ್ಟಿಯೇ ಪರ್ವತಗಳ ಸೃಷ್ಟಿ. ಇವು ಒಳಗೂ ಹೊರಗೂ, ಯಾವವಿಧವಾದ ಕಾಂತಿಯನ್ನೂ ಪಡೆಯದೆ, ನಿಶ್ಚಲವಾಗಿ ನಿಶ್ಚೇತನವಾಗಿರತಕ್ಕವುಗಳು. ಇದನ್ನು ಮುಖ್ಯ ಸೃಷ್ಟಿಯೆನ್ನುವರು. ಈ ಸೃಷ್ಟಿಯೇ ಮೊದಲನೆಯದು.

೨೪. ಇದು ಅಷ್ಟಾಗಿ ಲೋಕದ ಬೆಳೆವಣಿಗೆಗೆ ಸಾಧಕವಲ್ಲವೆಂದು ತಿಳಿದು ಬ್ರಹ್ಮನು ಪುನಃ ಜ್ಞಾನಪ್ರಧಾನವಲ್ಲದ ತಿರ್ಯಗ್ಜಂತುಗಳನ್ನು ಸೃಷ್ಟಿಮಾಡಿದನು.

೨೫. ಅಜ್ಞಾನಿಗಳಾದ ಆ ಪ್ರಾಣಿಗಳು ಸ್ವೇಚ್ಛಾಚಾರಿಗಳಾಗಿ ಅಡ್ಡದಾರಿಯಲ್ಲಿಯೇ ಹೋಗತಕ್ಕವುಗಳಾದ್ದರಿಂದ ಮತ್ತು ಅವುಗಳ ಕಿವಿಗಳು ಅಡ್ಡಡ್ಡಲಾಗಿರುವುದರಿಂದಲೂ ಅವುಗಳನ್ನು ತಿರ್ಯಗ್ಜಂತುಗಳೆಂದೂ ಪಶುಗಳೆಂದೂ ಕರೆಯುವುದು ವಾಡಿಕೆಯಾಯಿತು.

೨೬. ಈ ಪಶುಸೃಷ್ಟಿಯು ಅಷ್ಟು ಕಾರ್ಯಕಾರಿಯಾಗಲಿಲ್ಲವೆಂದು ತಿಳಿದು ಪಿತಾಮಹನಾದ ಬ್ರಹ್ಮನು ಊರ್ಧ್ವಶ್ರೋತವಾದ ಅಂದರೆ ಜ್ಞಾನಪ್ರಧಾನವಾದ ವಸ್ತುಸೃಷ್ಟಿಯನ್ನೂ ಮಾಡಿದನು. ಅದನ್ನೆ ಸಾತ್ವಿಕವಾದ ದೇವಸೃಷ್ಟಿಯೆನ್ನಬಹುದು.

ದೇವಸರ್ಗ ಇತಿ ಪ್ರೋಕ್ತಃ ಪ್ರಕಾಶಾತ್ಮಾ ಸುಖಾಧಿಕಃ ।
ಪುನಶ್ಚಿಂತಯತೋಽನ್ಯಸ್ಮಾದರ್ವಾಕ್ ಶ್ರೋತಸ್ತ್ವಸಾಧಕಃ ॥ ೨೭ ॥

ಪ್ರಕಾಶಬಹುಲಾಸ್ಸರ್ವೇ ತಮೋಯುಕ್ತಾ ರಜೋಧಿಕಾಃ ।
ದುಃಖೋತ್ಕಟಾ ಸ್ಸತ್ವಯುಕ್ತಾ ಮನುಷ್ಯಾಃ ಪರಿಕೀರ್ತಿತಾಃ ॥ ೨೮ ॥

ಪುನಶ್ಚಿಂತಯತಸ್ತಸ್ಯ ಭೂತಸರ್ಗೋಽಭ್ಯಜಾಯತ ।
ಸಂವಿಭಾಗರತಾಃ ಕ್ರೂರಾಸ್ತೇ ಪರಿಗ್ರಾಹಿಣಃ ಸ್ಮೃತಾಃ ॥ ೨೯ ॥

ಏತೇ ಪಂಚಸಮಾಖ್ಯಾತಾಃ ಸರ್ಗಾ ದೇವೇನ ಭಾನುನಾ ।
ಮಹತಃ ಪ್ರಥಮಃ ಸರ್ಗೋ ಜ್ಞಾತವ್ಯೋ ಬ್ರಹ್ಮಣೋ ದ್ವಿಜಾಃ ॥ ೩೦ ॥

---

೨೭. ಈ ದೇವಸೃಷ್ಟಿಯಲ್ಲಿ ನಿರ್ಮಿತವಾದ ವಸ್ತುಗಳು ಪ್ರಕಾಶಮಯವಾಗಿಯೂ ಸುಖಪ್ರಧಾನಗಳಾಗಿಯೂ ಆದವು. ಇದೂ ಅಷ್ಟು ಮುಖ್ಯವಾಗಲಿಲ್ಲವೆಂದು ಭಾವಿಸಿ ಬ್ರಹ್ಮನು, ಅರ್ವಾಕ್‌ಶ್ರೋತ, ಎಂದರೆ, ಅಷ್ಟಾಗಿ ಜ್ಞಾನಪ್ರಧಾನವಲ್ಲದ ಅಜ್ಞಾನಾವೃತವಾದ ಪ್ರಾಣಿವರ್ಗಗಳನ್ನು ಸೃಷ್ಟಿಸಿದನು.

೨೮. ಆ ಪ್ರಾಣಿವರ್ಗವನ್ನೇ ಮನುಷ್ಯರೆನ್ನಬಹುದು. ಈ ಮನುಷ್ಯಜನ್ಮವು ಜ್ಞಾನದಿಂದ ಕೂಡಿರುತ್ತದೆ. ಆದರೆ ಆ ಜ್ಞಾನದಲ್ಲಿ ತಮೋಗುಣ, ರಜೋಗುಣ ಸತ್ವಗುಣ ಎಂಬ ಈ ಮೂರುಗುಣಗಳೂ ಬೇರೆ ಬೇರೆ ಪ್ರಮಾಣದಲ್ಲಿ ಸೇರಿಸಲ್ಪಟ್ಟಿವೆ. ದುಃಖಾತಿರೇಕವೂ, ಸತ್ತ್ವಗುಣಕ್ರಿಯೆಯೂ ಈಸೃಷ್ಟಿಯಲ್ಲಿ ಸಿಕ್ಕಿದ ಪ್ರಾಣಿವರ್ಗಗಳಲ್ಲಿ ಕಂಡುಬರುತ್ತಿದೆ. ಇಂತಹ ಗುಣವಿಶಿಷ್ಟರಾದವರನ್ನೇ ಮನುಷ್ಯರು ಎಂದು ಈಗ ಕರೆಯುತ್ತಿದ್ದೇವೆ.

೨೯. ಮನುಷ್ಯಸೃಷ್ಟಿಯಾದ ಮೇಲೆ ನಡೆದ ಸೃಷ್ಟಿಯೇ ಭೂತಸೃಷ್ಟಿ. ಆ ಭೂತಗಳು ಕ್ರೂರಿಗಳಾಗಿಯೂ, ಭೇದಿಸುವುದರಲ್ಲಿ ಸಮರ್ಥಗಳಾಗಿಯೂ, ಪ್ರತಿಯೊಂದು ವಸ್ತುಗಳನ್ನೂ ಪರಿಗ್ರಹಿಸತಕ್ಕವುಗಳಾಗಿಯೂ ಇರುತ್ತವೆ.

೩೦. ಹೀಗೆ ಬ್ರಹ್ಮನು ಮಾಡಿದ ಐದು ವಿಧವಾದ ಸೃಷ್ಟಿಗಳನ್ನೂ ಸೂರ್ಯದೇವನು ಮನುವಿಗೆ ವಿಸ್ತಾರವಾಗಿ ಹೇಳಿದನು. ಆ ಐದು ವಿಧವಾದ ಸೃಷ್ಟಿಗಳಲ್ಲಿ ಮೊದಲನೆಯ ಸೃಷ್ಟಿಯನ್ನೇ ಮಹಾಸೃಷ್ಟಿಯೆಂದು ತಿಳಿಯಬೇಕು.

ತನ್ಮಾತ್ರಾಣಾಂ ದ್ವಿತೀಯಸ್ತು ಭೂತಸರ್ಗಸ್ಸ ಉಚ್ಯತೇ ।
ವೈಕಾರಿಕಸ್ತೃತೀಯಸ್ತು ಪ್ರೋಕ್ತ ಐಂದ್ರಿಯಕೋ ದ್ವಿಜಾಃ ॥ ೩೧ ॥

ಇತ್ಯೇಷ ಪ್ರಾಕೃತಸ್ಸರ್ಗಃ ಸಂಭೂತೋ ಬುದ್ಧಿಪೂರ್ವಕಃ ।
ಚತುರ್ಥೋ ಮುಖ್ಯಸರ್ಗಸ್ತು ಮುಖ್ಯಾ ವೈ ಸ್ಥಾವರಾಃ ಸ್ಮೃತಾಃ ॥ ೩೨ ॥

ತಿರ್ಯಗ್ಯೋನ್ಯಸ್ತು ಯಃ ಪ್ರೋಕ್ತಸ್ತಿರ್ಯಗ್ಯೋನ್ಯಸ್ತು ಪಂಚಮಃ ।
ತಥೋರ್ಧ್ವಶ್ರೋತಸಾಂ ಷಷ್ಠೋ ದೇವಸರ್ಗಸ್ತು ಸ ಸ್ಮೃತಃ ॥ ೩೩ ॥

ತತೋರ್ವಾಕ್ಶ್ರೋತಸಾಂ ಸರ್ಗಃ ಸಪ್ತಮಸ್ಸ ತು ಮಾನುಷಃ ।
ಅಷ್ಟಮೋ ಭೌತಿಕಸ್ಸರ್ಗೋ ಭೂತಾದೀನಾಂ ದ್ವಿಜೋತ್ತಮಾಃ
ನವಮಶ್ಚೈವ ಕೌಮಾರಃ ಪ್ರಾಕೃತಾ ವೈಕೃತಾಸ್ತ್ವಿಮೇ ॥ ೩೪ ॥

---

೩೧. ಎರಡನೆಯ ಸೃಷ್ಟಿಯೇ ಭೂತಸೃಷ್ಟಿ. ಭೂತಸೃಷ್ಟಿಯೆಂದರೆ, ಪೃಥಿವ್ಯಾದಿ ಪಂಚಭೂತಗಳನ್ನು ಉತ್ಪತ್ತಿಮಾಡುವುದು. ವೈಕಾರಿಕವಾದ ಸೃಷ್ಟಿಯೇ ಮೂರನೆಯದು. ಅದೇ ಇಂದ್ರಿಯಗಳಿಂದ ಕೂಡಿದ ಸೃಷ್ಟಿ. ಪಂಚೇಂದ್ರಿಯಗಳು ವೈಕಾರಿಕವಾದ ಅಹಂಕಾರದಿಂದ ಸೃಷ್ಟವಾದವುಗಳು.

೩೨. ಬುದ್ಧಿಯನ್ನಿಟ್ಟು ಮಾಡಿದ ಈ ಸೃಷ್ಟಿಯನ್ನು ಪ್ರಾಕೃತ ಸೃಷ್ಟಿಯೆನ್ನಬಹುದು. ಅನಂತರ ನಡೆದ, ಮುಖ್ಯ ಸರ್ಗವಾದ ಪರ್ವತನೇ ಮೊದಲಾದ ಸ್ಥಾವರ ಸೃಷ್ಟಿಯು ನಾಲ್ಕನೆಯದು.

೩೩. ತಿರ್ಯಗ್ಜಂತುಗಳ ಸೃಷ್ಟಿಯೇ ಐದನೆಯದು. ಊರ್ಧ್ವಶ್ರೋತಸ್ಸುಳ್ಳ ಜ್ಞಾನಪ್ರಧಾನವಾದ ಸೃಷ್ಟಿಯೇ ಆರನೆಯದು. ಅದನ್ನು ದೇವಸೃಷ್ಟಿಯೆನ್ನುವರು.

೩೪. ಏಳನೆಯ ಸರ್ಗವೇ ಜ್ಞಾನಸಹಿತವಾದ ಮನುಷ್ಯ ಸೃಷ್ಟಿಯು. ಪಂಚಭೂತಗಳಿಂದ ಕೂಡಿದ ಸೃಷ್ಟಿಯು ಎಂಟನೆಯದು. ಪ್ರಾಕೃತವಾದ ಮತ್ತು ವಿಕೃತವಾದ ಕುಮಾರ ಸೃಷ್ಟಿಯೇ ಒಂಭತ್ತನೆಯದು.

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ವರಾಹಕಲ್ಪಪ್ರಾಕೃತಾದಿ ಸರ್ಗಕಥನಂ ನಾಮ ದ್ವಾವಿಂಶೋಽಧ್ಯಾಯಃ

ಹೀಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದ ರೂಪವಾಗಿ ವರಾಹ ಕಲ್ಪ ಮತ್ತು ಪ್ರಾಕೃತ ಸೃಷ್ಟಿ ಕಥನವೆಂಬ ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ತ್ರಯೋವಿಂಶೋಽಧ್ಯಾಯಃ

॥ ಸೂತ ಉವಾಚ ॥

ತತಸ್ಸಸರ್ಜ ಭಗವಾನ್ ದೇವೋಽಸಾವಾತ್ಮನಃ ಸುತಾನ್ ।
ಸನಾತನಂ ಚ ಸನಕಂ ಸನಂದನಮಥಾಪಿ ಚ ॥ ೧॥

ಶಂಭುಂ ಸನತ್ಕುಮಾರಂ ಚ ಪಂಚೈತಾನ್ ಪದ್ಮಸಂಭವಃ ।
ನ ಸೃಷ್ಟೌ ದಧಿರೇ ಬುದ್ಧಿಂ ಶಿವೈಕಧ್ಯಾನತತ್ಪರಾಃ ॥ ೨ ॥

ಸೃಷ್ಟೌ ತೇಷ್ವನಪೇಕ್ಷೇಷು ಮೋಹಾವಿಷ್ಟಃ ಪ್ರಜಾಪತಿಃ ।*
ತಪಸ್ತತಾಪ ಪರಮಂ ನ ಕಿಂಚಿತ್ಪ್ರತ್ಯಪದ್ಯತ ॥ ೩ ॥

ಇಪ್ಪತ್ತುಮೂರನೆಯ ಅಧ್ಯಾಯ.

೧-೨. ಸೂತಮಹರ್ಷಿಗಳು ಮುಂದಿನ ಸೃಷ್ಟಿಕ್ರಮವನ್ನು ವಿವರಿಸಲಾರಂಭಿಸಿದರು. ಅನಂತರ ಭಗವಂತನಾದ ಪರಬ್ರಹ್ಮನು, ಸನಕ, ಸನಂದನ, ಸನಾತನ, ಸನತ್ಕುಮಾರ, ಶಂಭು, ಎಂಬ ಹೆಸರುಳ್ಳ ಐದು ಜನ ಮಕ್ಕಳನ್ನು ಸೃಷ್ಟಿಮಾಡಿದನು. ಆ ಮಕ್ಕಳು ಯಾವಾಗಲೂ ಶಿವಧ್ಯಾನದಲ್ಲಿ ನಿರತರಾಗಿ ಸೃಷ್ಟಿಕಾರ್ಯದಲ್ಲಿ ಮನಸ್ಸಿಡುತ್ತಿರಲಿಲ್ಲ.

೩. ಹೀಗೆ ಮಕ್ಕಳು ಸೃಷ್ಟಿಕಾರ್ಯದಲ್ಲಿ ವಿಮುಖರಾಗಿರಲು ಅಜ್ಞಾನ ಮತ್ತು ಪ್ರೀತಿಯಿಂದ ಕೂಡಿದ ಬ್ರಹ್ಮನು ಬಹುಕಾಲ ತಪಸ್ಸು ಮಾಡಿದನು. ಆದರೆ ಆ ತಪಸ್ಸಿನಿಂದ ಯಾವ ಫಲವೂ ಬ್ರಹ್ಮನಿಗೆ ದೊರೆಯಲಿಲ್ಲ.

---

* ಈ ಶ್ಲೋಕವು ಕೆಲವು ಪ್ರತಿಗಳಲ್ಲಿಲ್ಲ.

ಗತೇ ಬಹುತಿಥೇ ಕಾಲೇ ಸಮಭೂತ್ ಕ್ರೋಧಮೂರ್ಛಿತಃ ।
ಪ್ರಾಣಾತ್ಮಕಃ ಸಮುದ್ಭೂತೋ ಲಲಾಟಾದ್ಬ್ರಹ್ಮಣೋ ಹರಃ ॥ ೪ ॥

ಕೇನಾಪಿ ಹೇತುನಾ ವಿಪ್ರಾಃ ಸೂರ್ಯಕೋಟಿಸಮಪ್ರಭಃ ।
ನಿಷ್ಕ್ರಾಮ ತತೋ ಭಿತ್ವಾ ಭಾಲಂ ಭಗವತೋ ವಿಧೇಃ ॥ ೫ ॥

ರೋದಯಿತ್ವಾಽಬ್ಜಜನ್ಮಾನಂ ತಸ್ಮಾದ್ರುದ್ರ ಇತಿ ಸ್ಮೃತಃ ।
ಅನ್ಯಾನಿ ಸಪ್ತನಾಮಾನಿ ಶೃಣುಧ್ವಂ ಮುನಿಪುಂಗವಾಃ ॥ ೬ ॥

ಭವಃ ಶರ್ವಸ್ತಥೇಶಾನಃ ಪಶೂನಾಂ ಪತಿರೇವ ಚ ।
ಭೀಮಶ್ಚೋಗ್ರೋ ಮಹಾದೇವ ಇತಿ ನಾಮಾನಿ ಸತ್ತಮಾಃ ॥ ೭ ॥

ಭೂಮಿರಾಪೋಽನಲೋ ವಾಯುರ್ವ್ಯೋಮ ಸೂರ್ಯಶ್ಚ ಚಂದ್ರಮಾಃ ।
ಅಷ್ಟಮೀ ದೀಕ್ಷಿತಸ್ತತ್ರ ಮೂರ್ತಿರೀಶಸ್ಯ ಶೂಲಿನಃ ॥ ೮ ॥

---

೪. ಬಹುಕಾಲ ಹಾಗೆಯೇ ಕಳೆದರೂ ತಪಸ್ಸಿನಿಂದ ಯಾವ ಪ್ರತಿಫಲವೂ ಬ್ರಹ್ಮನಿಗೆ ದೊರೆಯದಿದ್ದುದರಿಂದ ಬಹಳವಾಗಿ ಕೋಪ ಬಂದಿತು. ಕೋಪದ ವೇಗವು ಆತನಿಗೆ ಮೂರ್ಛೆಯನ್ನುಂಟುಮಾಡಿತು. ಆ ಮೂರ್ಛಾಕಾಲದಲ್ಲಿಯೇ ಬ್ರಹ್ಮನ ಹಣೆಯಿಂದ ಪರಮೇಶ್ವರನು ಪ್ರಾಣಸ್ವರೂಪಿಯಾಗಿ ಉದ್ಭವಿಸಿದನು.

೫–೬. ಕೋಟಿಸೂರ್ಯರಂತೆ ತೇಜಸ್ವಿಯಾದ ಪರಮೇಶ್ವರನು ಬ್ರಹ್ಮನ ಹಣೆಯನ್ನು ಭೇದಿಸಿಕೊಂಡು ಬಂದನು. ಬಹುಕಾಲ ಪ್ರತ್ಯಕ್ಷನಾಗದೆ ಕೊನೆಗೆ ಹಣೆಯನ್ನೊಡೆದು ಬಂದಿದ್ದರಿಂದ ಆ ವೇದನೆಯು ಬ್ರಹ್ಮನನ್ನು ರೋದನ ಮಾಡುವಂತೆ ಮಾಡಿತು. ಆ ಕಾರಣದಿಂದಲೇ ಈಶ್ವರನಿಗೆ ಅಂದಿನಿಂದ ರುದ್ರನೆಂದು ಹೆಸರಾಯಿತು. ಅಲ್ಲದೆ ಪರಶಿವನಿಗೆ ಇನ್ನೂ ಏಳು ಹೆಸರುಗಳಿವೆ.

೭. ಭವ, ಶರ್ವ, ಈಶಾನ, ಪಶುಪತಿ, ಭೀಮ, ಉಗ್ರ, ಮಹಾದೇವ ಎಂಬುದಾಗಿ ಪರಮೇಶ್ವರನಿಗೆ ಏಳು ಹೆಸರುಗಳು ಪ್ರತ್ಯೇಕವಾಗಿವೆ.

೮. ಪರಮೇಶ್ವರನಿಗೆ ಭೂಮಿ, ನೀರು, ಬೆಂಕಿ, ವಾಯು, ಆಕಾಶ, ಸೂರ್ಯ, ಚಂದ್ರ, ದೀಕ್ಷಿತ, ಎಂಬುದಾಗಿ ಎಂಟು ಮೂರ್ತಿಗಳಿವೆ. ಈ ಎಂಟು ವಸ್ತುಗಳೂ ಶಿವನಿಗೆ ಒಂದೊಂದು ದೇಹವಾಗಿವೆ.

ಯಾಭಿರ್ವ್ಯಾಪ್ತಮಿದಂ ವಿಶ್ವಂ ವಿಶ್ವಸ್ಯಾಸ್ಯ ಜಗನ್ಮಯಃ ।
ತೇನ ವಿಶ್ವೇಶ್ವರೋ ದೇವ ಇತಿ ನಾಮ್ನಾ ಶಿವಃ ಸ್ಮೃತಃ ॥ ೯ ॥

ಪ್ರಜಾಃ ಸೃಜೇತಿ ನಿರ್ದಿಷ್ಟಶ್ಚಂದ್ರಮೌಳಿರ್ವಿರಂಚಿನಾ ।
ಸಸರ್ಜ ಮನಸಾ ರುದ್ರಾನ್ ಆತ್ಮತುಲ್ಯಾನ್ಮಹೇಶ್ವರಃ ॥ ೧೦ ॥

ನೀಲಕಂಠಾಂಸ್ತ್ರಿನೇತ್ರಾಂಶ್ಚ ಜಟಾಮುಕುಟಮಂಡಿತಾನ್ ।
ವೃಷಧ್ವಜಾನ್ ವೀತರಾಗಾನ್ ಜರಾಮರಣವರ್ಜಿತಾನ್ * ॥ ೧೧ ॥

ಸರ್ವಜ್ಞಾನ್ ಶತಕೋಟೀಂಸ್ತಾನ್ ಸರ್ವಾನುಗ್ರಾಹಿಣಃ ಪರಾನ್ ।
ದೃಷ್ಟ್ವಾ ತಾನ್ ವಿವಿಧಾನ್ ರುದ್ರಾನ್ ವಿರಂಚಿಃ ಪ್ರಾಹ ಶಂಕರಂ ॥ ೧೨ ॥

---

೯. ಈ ಅಷ್ಟಮೂರ್ತಿಗಳೇ ಪ್ರಪಂಚದಲ್ಲೆಲ್ಲಾ ವ್ಯಾಪಿಸಿ, ಪ್ರಪಂಚವನ್ನು ಸಚೇತನವನ್ನಾಗಿ ಮಾಡಿವೆ. ಆದ್ದರಿಂದಲೇ ಪರಮೇಶ್ವರನನ್ನು ವಿಶ್ವೇಶ್ವರನೆಂದು ಕರೆಯುವರು. ಶಿವನಿಗೆ ವಿಶ್ವೇಶ್ವರನೆಂದು ಹೆಸರು ಬರಲು ಇದೇಕಾರಣ.

೧೦. ಹೀಗೆ ತನ್ನ ಹಣೆಯಿಂದ ಹುಟ್ಟಿದ ಈಶ್ವರನನ್ನು ಕಂಡು ಬ್ರಹ್ಮನು, ಸಂತೋಷಪಟ್ಟು ಪ್ರಜೆಗಳನ್ನು ಸೃಷ್ಟಿಸ ಬೇಕೆಂದು ಅಪ್ಪಣೆ ಮಾಡಿದನು. ಒಡನೆಯೇ ಈ ಕಾರ್ಯನಿರ್ವಾಹಕ್ಕಾಗಿ ಈಶ್ವರನು, ತನ್ನಷ್ಟೇ ಶೂರರಾದ ರುದ್ರರುಗಳನ್ನು ಮನಸ್ಸಿನಿಂದಲೇ ಸೃಷ್ಟಿಮಾಡಿದನು.

೧೧–೧೨. ಈಶ್ವರನ ಮನಸ್ಸಿನಿಂದ ಸಂಭೂತರಾದ ರುದ್ರರು ಈಶ್ವರನಂತೆಯೇ ಕತ್ತಿನಲ್ಲಿ ಕಪ್ಪುಬಣ್ಣವುಳ್ಳವರಾಗಿಯೂ, ಮೂರುಕಣ್ಣುಳ್ಳವರಾಗಿಯೂ ಇದ್ದರು. ಅವರಿಗೆ ಜಟಾಜೂಟಗಳೂ ಕಿರೀಟಗಳೂ ಪ್ರಕಾಶಿಸುತ್ತಿದ್ದುವು. ವೃಷಭಧ್ವಜರಾಗಿಯೂ, ಜಿತೇಂದ್ರಿಯರಾಗಿಯೂ, ಮುಪ್ಪು, ಸಾವು ಇವುಗಳಿಗೆ ಸಿಕ್ಕದವರಾಗಿಯೂ, ಸರ್ವಜ್ಞರಾಗಿಯೂ, ವಜ್ರಾಯುಧವುಳ್ಳವರಾಗಿಯೂ ಕಂಗೊಳಿಸುತ್ತಿದ್ದರು. ಸಮಸ್ತರನ್ನು ಅನುಗ್ರಹಿಸುವ ಸಾಮರ್ಥ್ಯವು ಅವರಿಗಿತ್ತು. ಇಂತಹ ಶಿವಸದೃಶರಾದ ರುದ್ರರನ್ನು ನೋಡಿ ಬ್ರಹ್ಮನು ಈಶ್ವರನೊಡನೆ ಹೀಗೆ ಹೇಳಿಕೊಂಡನು.

---

* ಈ ಶ್ಲೋಕವು ಕೆಲವು ಪ್ರತಿಗಳಲ್ಲಿಲ್ಲ.

ಜರಾಮರಣನಿರ್ಮುಕ್ತಾಮೀದೃಶೀಂ ಮಾ ಸೃಜಃ ಪ್ರಜಾಂ ।
ಸೃಜಸ್ವಾನ್ಯಾಂ ಸುರೇಶಾನ ಪ್ರಜಾಂ ಮೃತ್ಯುಸಮನ್ವಿತಾಂ ॥ ೧೩ ॥

ಬ್ರಹ್ಮಾಣಮಬ್ರವೀಚ್ಛಂಭುಃ ನಾಸ್ತಿಮೇತಾದೃಶೀಪ್ರಜಾ ।
ತತಃ ಪ್ರಭೃತಿ ವಿಶ್ವಾತ್ಮಾ ನ ಪ್ರಾಸೂತ ಶುಭಾಃ ಪ್ರಜಾಃ ॥ ೧೪ ॥

ರುದ್ರೈರಾತ್ಮಸಮುದ್ಭೂತೈಃ ಕ್ರೀಡಾಯುಕ್ತಸ್ತದಾಽಭವತ್ ।
ಸ್ಥಾಣುವನ್ನಿಶ್ಚಲೋ ಯಸ್ಮಾತ್ ಸ್ಥಿತಃ ಸ್ಥಾಣುರಿತಿ ಸ್ಮೃತಃ ॥ ೧೫ ॥

ಜ್ಞಾನಂ ವೈರಾಗ್ಯಮೈಶ್ವರ್ಯಂ ತಪಃ ಸತ್ಯಂ ಕ್ಷಮಾ ಧೃತಿಃ ।
ದ್ರಷ್ಟೃತ್ವಮಾತ್ಮಸಂಬೋಧೋ ಹ್ಯಧಿಷ್ಠಾತೃತ್ವಮೇವ ಚ ॥ ೧೬ ॥

---

೧೩. ಓ ಈಶ್ವರನೇ! ನೀನು ಹೀಗೆ ಮುಪ್ಪು ಸಾವುಗಳಿಲ್ಲದ ಪ್ರಜೆಗಳನ್ನು ಸೃಷ್ಟಿಮಾಡಬೇಡ. ಪ್ರಜೆಗಳು ಯಾವಾಗಲೂ ಮೃತ್ಯುವಿಗೆ ಸುಲಭವಾಗಿ ಸಿಕ್ಕುವಂತಿರಬೇಕು. ಅಂತಹ ನರಸೃಷ್ಟಿಯನ್ನು ಮಾಡು ಎಂದು ಕೇಳಿಕೊಂಡನು.

೧೪. ಇದನ್ನು ಕೇಳಿ ಪರಮೇಶ್ವರನು ಅಂಥ ಪ್ರಜಾ ಸೃಷ್ಟಿಯು ನನ್ನಿಂದ ಸಾಧ್ಯವಿಲ್ಲವೆಂದು ಹೇಳಿ ಅಂದಿನಿಂದ ಪ್ರಜಾಸೃಷ್ಟಿಕಾರ್ಯವನ್ನೇ ಬಿಟ್ಟು ಬಿಟ್ಟನು.

೧೫. ಅಲ್ಲದೆ ತಾನು ಸೃಷ್ಟಿಮಾಡಿದ ಮಹಿಮಾಶಾಲಿಗಳಾದ ರುದ್ರರೊಡನೆ ಆಟವಾಡುತ್ತಾ, ತಾನು ಮರದ ಬುಡದಂತೆ ಅಲ್ಲಾಡದೇ ಸ್ಥಿರವಾಗಿನಿಂತನು. ಅಂದಿನಿಂದ ಪರಮೇಶ್ವರನಿಗೆ ಸ್ಥಾಣು ಎಂಬ ಹೆಸರುಂಟಾಯಿತು. ಸ್ಥಾಣುವೆಂದರೆ ಮರದ ಬುಡ, ಎಂಬರ್ಥವೂ ಆಗುವುದು.

೧೬. ಜ್ಞಾನ, ವೈರಾಗ್ಯ, ಐಶ್ವರ್ಯ, ತಪಸ್ಸು, ಸತ್ಯ, ತಾಳ್ಮೆ, ಧೈರ್ಯ, ಎಲ್ಲವನ್ನೂ ಕಾಣುವ ಸಾಮರ್ಥ್ಯ, ಆತ್ಮನಿಗ್ರಹ, ಸರ್ವವಸ್ತುವಿನಲ್ಲಿಯೂ ಅಡಗಿರುವಿಕೆ, ಈ ಹತ್ತುಗುಣಗಳು ಪರಮೇಶ್ವರನಲ್ಲಿ ಸ್ಥಿರವಾಗಿಕಾಣುತ್ತವೆ. ಈ ದಶಗುಣಗಳು ಶಂಕರನ ನೈಸರ್ಗಿಕ ಗುಣಗಳು.

ಅವ್ಯಯಾನಿ ದಶೈತಾನಿ ನಿತ್ಯಂ ತಿಷ್ಠಂತಿ ಶಂಕರೇ ||
ಸ ಏವ ಭಗವಾನೀಶೋ ವಿಶ್ವೇಶೋ ನೀಲಲೋಹಿತಃ || ೧೭ ||

ತತಸ್ತಮಾಹ ಭಗವಾನ್ ಬ್ರಹ್ಮಾ ಸಂವೀಕ್ಷ್ಯ ಶಂಕರಂ ।
ಅನುಗೃಹ್ಯ ಯಥಾ ಮಾಂ ತ್ವಂ ಪುತ್ರತ್ವೇ ದತ್ತವಾನ್ ವರಂ || ೧೮ ||

ಅದ್ಯ ತತ್ಸಫಲಂ ಜಾತಂ ಚಿಂತಿತಂ ಯನ್ಮಯೇಪ್ಸಿತಂ ।
ಏವಂ ವಿಶ್ವೇಶ್ವರಂ ಶಂಭುಂ ಸಮಾಭಾಷ್ಯ ಚತುರ್ಮುಖಃ || ೧೯ ||
ಸ್ತೋತ್ರೇಣಾನೇನ ತುಷ್ಟಾವ ಶಿರಸ್ಯಾಧಾಯ ಚಾಂಜಲಿಂ ||

|| ಬ್ರಹ್ಮೋವಾಚ ||

ನಮಸ್ತೇಽಸ್ತು ಮಹಾದೇವ ನಮಸ್ತೇ ಪರಮೇಶ್ವರ ।
ನಮಃ ಶಿವಾಯ ದೇವಾಯ ನಮಸ್ತೇ ಬ್ರಹ್ಮರೂಪಿಣೇ || ೨೦ ||

ನಮೋಸ್ತು ತೇ ಮಹೇಶಾನ ನಮಃ ಶಾಂತಾಯ ಹೇತವೇ ।
ಪ್ರಧಾನಪುರುಷೇಶಾಯ ಯೋಗಾಧಿಪತಯೇ ನಮಃ || ೨೧ ||

೧೭-೧೮. ಅಂತಹ ದಶಮಹಾಗುಣಗಳಿಂದ ಕೂಡಿದವನೇ ಈಶ್ವರನು. ಆತನೇ ವಿಶ್ವೇಶ್ವರನು ಮತ್ತು ನೀಲಲೋಹಿತನು. ಇಂತಹ ಪರಮೇಶ್ವರನೊಡನೆ ಕಲೆತ ಬ್ರಹ್ಮನು, ಓ "ಪರಮೇಶ್ವರನೇ! ನೀನು ನನಗೆ ಪುತ್ರನಂತಾಗಿ ನನ್ನನ್ನು ಅನುಗ್ರಹಿಸಿರುವೆ. ನಾನು ನಿನ್ನಿಂದ ಪುತ್ರವಂತನಾಗಿರುವೆ

೧೯. ಈಗ ನನ್ನ ಇಷ್ಟಾರ್ಥವು ನೆರವೇರಿತು. ನಾನು ಧನ್ಯನಾದೆ," ಎಂದು ಹೇಳುತ್ತಾ ಅಂಜಲಿಬದ್ಧನಾಗಿ ಶಿರಸ್ಸಿನ ಮೇಲೆ ಅಂಜಲಿಯನ್ನಿಟ್ಟು ಮುಂದೆ ಹೇಳುವಂತೆ ಅನೇಕವಿಧವಾಗಿ ಸ್ತುತಿಸಲಾರಂಭಿಸಿದನು.

೨೦. ಓ ಮಹಾದೇವನೇ, ಪರಮೇಶ್ವರನೇ ಲೋಕರಕ್ಷಕನೇ! ಪರಬ್ರಹ್ಮಸ್ವರೂಪಿಯೇ ಶಂಭುವೇ! ನಿನಗೆ ನಮಸ್ಕಾರವು.

೨೧. ಮಹೇಶ್ವರನೂ, ಶಾಂತಾತ್ಮನೂ, ಆದ ಸ್ವಾಮಿಯೇ! ನಿನಗೆ ವಂದನೆ. ಪ್ರಧಾನ ಮತ್ತು ಪುರುಷರಿಗೆ ಮುಖ್ಯನಾಗಿ, ಯೋಗಶಾಸ್ತ್ರಕ್ಕೆ ಪ್ರಧಾನದೇವತೆಯಾಗಿರುವ ದೇವದೇವನೇ! ನಿನಗೆ ಎರಗುವೆನು.

ನಮಃ ಕಾಲಾಯ ರುದ್ರಾಯ ಮಹಾಗ್ರಾಸಾಯ ಶೂಲಿನೇ ।
ನಮಃ ಪಿನಾಕಹಸ್ತಾಯ ತ್ರಿನೇತ್ರಾಯ ನಮೋನಮಃ ॥ ೨೨ ॥

ನಮಸ್ತ್ರಿಮೂರ್ತಯೇ ತುಭ್ಯಂ ಬ್ರಹ್ಮಣೋ ಜನಕಾಯ ಚ ।
ಬ್ರಹ್ಮವಿದ್ಯಾಧಿಪತಯೇ ಬ್ರಹ್ಮವಿದ್ಯಾಪ್ರದಾಯಿನೇ ॥ ೨೩ ॥

ನಮೋ ವೇದರಹಸ್ಯಾಯ ಕಾಲಕಾಲಾಯ ತೇ ನಮಃ ।
ವೇದಾಂತಸಾರಸಾರಾಯ ನಮೋ ವೇದಾತ್ಮಮೂರ್ತಯೇ ॥ ೨೪ ॥

ನಮಶ್ಶುದ್ಧಾಯ ಬುದ್ಧಾಯ ಯೋಗಿನಾಂ ಗುರವೇ ನಮಃ ।
ಪ್ರಹೀಣಶೋಕೈರ್ವಿವಿಧೈರ್ಭೂತೈಃ ಪರಿವೃತಾಯ ತೇ ॥ ೨೫ ॥

ನಮೋ ಬ್ರಹ್ಮಣ್ಯದೇವಾಯ ಬ್ರಹ್ಮಾಧಿಪತಯೇ ನಮಃ ।
ತ್ರ್ಯಂಬಕಾಯ ಚ ದೇವಾಯ ನಮಸ್ತೇ ಪರಮೇಷ್ಠಿನೇ ॥ ೨೬ ॥

೨೨–೨೩. ಓ ಪರಮೇಶ್ವರನೇ, ನೀನು ಕಾಲಸ್ವರೂಪಿಯು, ನಿನ್ನ ಮುಖ್ಯ ಆಯುಧವು ತ್ರಿಶೂಲ, ಮತ್ತು ಪಿನಾಕ. ಅವುಗಳನ್ನು ನೀನು ಸರ್ವದಾ ಧರಿಸಿರುವೆ. ನಿನಗೆ ಕಣ್ಣುಗಳು ಮೂರು· ಹಾಗೆಯೇ ನಿನ್ನ ಮೂರ್ತಿಗಳೂ ಮೂರು. ಸೃಷ್ಟಿ, ಸ್ಥಿತಿ ಲಯ, ಕಾರ್ಯಗಳಿಗೆಸರಿಯಾಗಿ ಮೂರ್ತಿತ್ರಯಾತ್ಮಕನಾಗಿ ಕಂಡುಬರುತ್ತಿರುವೆ. ಬ್ರಹ್ಮನನ್ನು ಸೃಷ್ಟಿಸಿ ಬ್ರಹ್ಮವಿದ್ಯೆಯನ್ನು ಲೋಕಕ್ಕೆ ಬೋಧಿಸಿ ಪರಬ್ರಹ್ಮಸ್ವರೂಪದಿಂದ ತೋರುತ್ತಿರುವ ನಿನಗೆ ನಮಸ್ಕಾರವು.

೨೪–೨೫. ಎಲೈಕಾಲಕಾಲನೇ, ನೀನು ವೇದಗಳಿಗೆ ಆತ್ಮಸ್ವರೂಪನು. ಕಾಲನಿಗೆ ಕಾಲನಂತಿರುವವನು. ವೇದಾಂತಗಳ ಸಾರವೇ ನೀನು· ವೇದಮೂರ್ತಿಯೇ ನಿನ್ನ ಆಕಾರ. ಶುದ್ಧನೂ, ಬುದ್ಧನೂ, ಯೋಗಿಗಳಿಗೆ ಗುರುವೂ ನೀನೇ ಆಗಿರುವೆ. ನಿನ್ನನ್ನು ಆಶ್ರಯಿಸಿರುವವರೆಲ್ಲರೂ ಶೋಕಬಂಧನದಿಂದ ಮುಕ್ತರಾಗುವವರೇ. ಇಂಥ ಮಹಾಮಹಾಮಹಿಮನಾದ ನಿನ್ನನ್ನು ಭಕ್ತಿಯಿಂದ ವಂದಿಸುವೆನು.

೨೬–೨೭. ಬ್ರಹ್ಮವಿದ್ಯಾಪ್ರಧಾನದೇವತೆಯೂ, ಬ್ರಹ್ಮನಿಗೆ ಒಡೆಯನೂ ವಿರೂಪಾಕ್ಷನೂ, ಜಗತ್ಸೃಷ್ಟಿಕರ್ತನೂ ಆದ ನಿನಗೆ ನಮಸ್ಕಾರವು. ಪರಮೇಶ್ವರನೆ!

ನಮೋ ದಿಗ್ವಾಸಸೇ ತುಭ್ಯಂ ನಮೋ ಮುಂಡಾಯ ದಂಡಿನೇ ।
ಅನಾದಿಮಲಹೀನಾಯ ಜ್ಞಾನಗಮ್ಯಾಯ ತೇ ನಮಃ ॥ ೨೭ ॥

ನಮಸ್ತಾರಾಯ ತೀರ್ಥಾಯ ನಮೋ ಯೋಗರ್ದ್ಧಿಹೇತವೇ ।
ನಮೋ ಧರ್ಮಾಧಿಗಮ್ಯಾಯ ಯೋಗಗಮ್ಯಾಯ ತೇ ನಮಃ ॥ ೨೮ ॥

ನಮಸ್ತೇ ನಿಷ್ಪ್ರಪಂಚಾಯ ನಿರಾಭಾಸಾಯ ತೇ ನಮಃ
ಬ್ರಹ್ಮಣೇ ವಿಶ್ವರೂಪಾಯ ನಮಸ್ತೇ ಪರಮಾತ್ಮನೇ ॥ ೨೯ ॥

ತ್ವಯ್ಯೈವ ಸೃಷ್ಟಮಖಿಲಂ ತ್ವಯ್ಯೇವ ಸಕಲಂ ಸ್ಥಿತಂ ।
ತ್ವಯಾ ಸಂಹ್ರಿಯತೇ ವಿಶ್ವಂ ಪ್ರಧಾನಾಖ್ಯಂ ಜಗನ್ಮಮ ॥ ೩೦ ॥

ತ್ವಮೀಶ್ವರೋ ಮಹಾದೇವಃ ಪರಂಬ್ರಹ್ಮ ಮಹೇಶ್ವರಃ ।
ಪರಮೇಷ್ಠೀ ಶಿವಃ ಶಾಂತಃ ಪುರುಷೋ ನಿಷ್ಕಲೋ ಹರಃ ॥ ೩೧ ॥

ನಿನಗೆ ದಶದಿಕ್ಕುಗಳೇ ವಸ್ತ್ರಗಳು, ಸಂನ್ಯಾಸಿರೂಪದಿಂದ, ನಡೆದು, ಸಮಸ್ತ ಕಲ್ಮಶಗಳನ್ನೂ ನೀಗಿಕೊಂಡು ಶುದ್ಧಸ್ವರೂಪವನ್ನು ತಾಳಿ, ಕೇವಲಜ್ಞಾನಗೋಚರನಾಗಿರುವ ನಿನಗೆ ವಂದನೆಯು.

೨೮–೨೯. ಎಲೈ ಪರಮೇಶ್ವರನೇ, ನೀನು ಸಂಸಾರತಾರಕನು. ತೀರ್ಥದಂತೆ ಪರಮ ಪವಿತ್ರಾತ್ಮಕನು. ಯೋಗದ ಸಂಪತ್ತನ್ನು ಯೋಗಿಗಳಿಗೆ ಒದಗಿಸುವವನು ನೀನು. ಧರ್ಮವನ್ನನುಸರಿಸಿ ನಡೆದವರಿಗೂ, ಯೋಗಶಾಸ್ತ್ರನಿರತರಿಗೂ, ನೀನು ಸುಲಭನಾದವನು. ನಶ್ವರವಾದ ಜಗತ್ತಿಗೆ ನೀನು ಅಳವಡದಿದ್ದರೂ ಸರ್ವತ್ರ ಸರ್ವದಾ ವ್ಯಾಪಕನಾಗಿರುವವನು ನೀನು. ವಿಶ್ವರೂಪಿಯಾಗಿ ಪರಮಾತ್ಮನಾಗಿರುವ ನಿನ್ನನ್ನು ನಾನು ಸರ್ವದಾ ಭಜಿಸುತ್ತೇನೆ.

೩೦–೩೧. ಸಮಸ್ತ ಜಗತ್ತೂ ನಿನ್ನಿಂದಲೇ ಸೃಷ್ಟಿಸಲ್ಪಟ್ಟಿದೆ. ಸೃಷ್ಟವಾದ ಜಗತ್ತನ್ನು ರಕ್ಷಿಸುವವನೂ, ಕೊನೆಗೆ ನಾಶಮಾಡತಕ್ಕವನೂ, ನೀನೇ ಆಗಿರುವೆ. ಇಂತಹ ಮಹಿಮಾಶಾಲಿಯಾದ ನಿನಗೆ ಪ್ರಣಾಮವು.

ತ್ವಮಕ್ಷರಂ ಪರಂ ಜ್ಯೋತಿರೋಂಕಾರಃ ಪರಮೇಶ್ವರಃ ।
ತ್ವಮೇವ ಪುರುಷೋಽನಂತಃ ಪ್ರಧಾನಂ ಪ್ರಕೃತಿಸ್ತಥಾ ॥ ೩೨ ॥

ಭೂಮಿರಾಪೋಽನಲೋ ವಾಯುರ್ವ್ಯೋಮಾಹಂಕಾರ ಏವ ಚ ।
ಯಸ್ಯ ರೂಪಂ ನಮಸ್ಯಾಮಿ ಭವಂತಂ ಬ್ರಹ್ಮಸಂಜ್ಞಿತಂ ॥ ೩೩ ॥

ಯಸ್ಯ ದ್ಯೌರಭವನ್ಮೂರ್ಧಾ ಪಾದೌ ಪೃಥ್ವೀ ದಿಶೋ ಭುಜಾಃ ।
ಆಕಾಶಮುದರಂ ತಸ್ಮೈ ವಿರಾಜೇ ಪ್ರಣಮಾಮ್ಯಹಂ ॥ ೩೪ ॥

ಸಂತಾಪಯತಿ ಯೋ ನಿತ್ಯಂ ಸ್ವಭಾಭಿರ್ಭಾಸಯನ್ ದಿಶಃ ।
ಬ್ರಹ್ಮತೇಜೋಮಯಂ ವಿಶ್ವಂ ತಸ್ಮೈ ಸೂರ್ಯಾತ್ಮನೇ ನಮಃ ॥ ೩೫ ॥

ಹವ್ಯಂ ವಹತಿ ಯೋ ನಿತ್ಯಂ ರೌದ್ರೀ ತೇಜೋಮಯೀ ತನುಃ ।
ಕವ್ಯಂ ಪಿತೃಗಣಾನಾಂ ಚ ತಸ್ಮೈ ವಹ್ನ್ಯಾತ್ಮನೇ ನಮಃ ॥ ೩೬ ॥

೩೨–೩೩. ಪರಮೇಶ್ವರನೇ! ನೀನು ನಾಶರಹಿತನು. ಜ್ಯೋತಿಸ್ವರೂಪಿಯು, ಓಂಕಾರಾತ್ಮಕನು. ನಿನ್ನನ್ನೇ ಪ್ರಧಾನಪುರುಷನೆಂದೂ, ಪ್ರಕೃತಿಯೆಂದೂ, ಹೇಳುವರು. ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಅಹಂಕಾರ, ಇವುಗಳೆಲ್ಲವೂ ನಿನ್ನ ಅಂಶಗಳೇ. ನಾನು ಈಗ ನಮಸ್ಕರಿಸುತ್ತಿರುವುದು ಬ್ರಹ್ಮರೂಪಿಯಾದ ನಿನ್ನನ್ನೇ ಹೊರತು ಮತ್ತೆಯಾವ ಆಕಾರವನ್ನೂ ಅಲ್ಲ.

೩೪. ಪರಮೇಶ್ವರನೇ, ವಿಶಾಲವಾದ ಅಂತರಿಕ್ಷವೇ ನಿನಗೆ ತಲೆಯಾಗಿದೆ. ಭೂಮಿಯು ನಿನ್ನ ಎರಡು ಪಾದಗಳಾಗಿನಿಂತಿದೆ. ನಿನ್ನ ಭುಜಗಳೇ ಪ್ರಸಿದ್ಧವಾದ ದಿಕ್ಕುಗಳು. ಆಕಾಶವೇ ನಿನ್ನ ಹೊಟ್ಟೆ. ಇಂತಹ ವಿರಾಟ್‌ಸ್ವರೂಪಿಯಾದ ನಿನ್ನನ್ನು ನಾನು ನಮಸ್ಕರಿಸುತ್ತೇನೆ.

೩೫. ನಮ್ಮ ಕಣ್ಣಿಗೆ ಪ್ರತ್ಯಕ್ಷನಾಗಿ ಕಾಣುತ್ತಿರುವ ಯಾವ ಸೂರ್ಯನು ತನ್ನ ಕಿರಣಗಳಿಂದ ಈ ಸಮಸ್ತವಿಶ್ವವನ್ನೂ ಸಂತಾಪಗೊಳಿಸುತ್ತಿರುವನೋ, ಆ ಸೂರ್ಯರೂಪಿಯೇ ನೀನು, ಆದರೆ ನಿನ್ನ ತೇಜಸ್ಸು ಬ್ರಹ್ಮತೇಜಸ್ಸು. ಅಂತಹ ತೇಜೋರೂಪಿಯಾದ ನಿನಗೆ ವಂದನೆಯು.

೩೬. ತೇಜೋಮಯವಾದ ದೇಹದಿಂದ, ಹವ್ಯವನ್ನು ದೇವತೆಗಳಿಗೂ, ಕವ್ಯವನ್ನೂ ಪಿತೃಗಳಿಗೂ, ತಲಪಿಸಿತಕ್ಕವನು ಅಗ್ನಿಯು. ಅಂತಹ ಅಗ್ನಿಯನ್ನೇ ಒಂದು ಅಂಗವನ್ನಾಗಿ ಮಾಡಿಕೊಂಡಿರುವ ಸ್ವಾಮಿಯೇ, ನಿನಗೆ ವಂದನೆ.

ಆಪ್ಯಾಯಯತಿ ಯೋ ನಿತ್ಯಂ ಸ್ವಧಾಮ್ನಾ ಸಕಲಂ ಜಗತ್ ।
ಪೀಯತೇ ದೇವತಾಸಂಘೈಸ್ತಸ್ಮೈ ಚಂದ್ರಾತ್ಮನೇ ನಮಃ　　|| ೩೭ ||

ಬಿಭರ್ತ್ಯಶೇಷಭೂತಾನಿ ಯೋಽನ್ತಶ್ಚರತಿ ಸರ್ವದಾ ।
ಶಕ್ತಿರ್ಮಾಹೇಶ್ವರೀ ತುಭ್ಯಂ ತಸ್ಮೈ ವಾಯ್ವಾತ್ಮನೇ ನಮಃ　　|| ೩೮ ||

ಸೃಜತ್ಯಶೇಷಮೇವೇದಂ ಯಃ ಸ್ವಕರ್ಮಾನುರೂಪತಃ ।
ಸ್ವಾತ್ಮನ್ಯವಸ್ಥಿತಸ್ತಸ್ಮೈ ಚತುರ್ವಕ್ತ್ರಾತ್ಮನೇ ನಮಃ　　|| ೩೯ ||

ಯಃ ಶೇತೇ ಶೇಷಶಯನೇ ವಿಶ್ವಮಾವೃತ್ಯ ಮಾಯಯಾ ।
ಆತ್ಮಾನುಭೂತಿಯೋಗೇನ ತಸ್ಮೈ ವಿಶ್ವಾತ್ಮನೇ ನಮಃ　　|| ೪೦ ||

---

೩೭. ಯಾವ ಚಂದ್ರನು ನಿತ್ಯವೂ ತನ್ನ ಶೀತಕಿರಣಗಳಿಂದ ಜಗತ್ತನ್ನು ಶಾಂತಿಗೊಳಿಸಿ, ಅಮೃತಪಾನದಿಂದ ದೇವತೆಗಳನ್ನು ತೃಪ್ತಿಗೊಳಿಸುತ್ತಿರುವನೋ ಅಂತಹ ಚಂದ್ರನು ನಿನ್ನ ಅಷ್ಟದೇಹಗಳಲ್ಲಿ ಒಬ್ಬನಾಗಿರುವನು. ಚಂದ್ರಸ್ವರೂಪಿಯಾದ ದೇಹದಿಂದ ಆನಂದವನ್ನು ಕೊಡುತ್ತಿರುವ ನಿನಗೆ ವಂದನೆಯು.

೩೮. ವಾಯುವು ಪ್ರಪಂಚದಲ್ಲಿ ಸಮಸ್ತ ಪ್ರಾಣಿಗಳಲ್ಲಿಯೂ ಸಂಚರಿಸುತ್ತಿರುವನು. ಆ ವಿಧವಾದ ಸಂಚಾರಶಕ್ತಿಯೇ ಒಂದು ಮಹೇಶ್ವರನ ಶಕ್ತಿಯೆನ್ನಬಹುದು. ಇಂತಹ ಶಕ್ತಿಯನ್ನು ಕೊಟ್ಟು ವಾಯುರೂಪದಿಂದ ಕಾಣುತ್ತಿರುವ ನಿನಗೆ ನಮಸ್ಕಾರವು.

೩೯. ಅವರವರ ಕರ್ಮಾನುಸಾರವಾಗಿ ಆಯಾಜನ್ಮಗಳನ್ನಿತ್ತು ಸೃಷ್ಟಿಮಾಡುತ್ತಿರುವ, ಆತ್ಮಸ್ವರೂಪಿಯಾದ ಮತ್ತು ನಾಲ್ಕು ಮುಖಗಳಿಂದ ಕೂಡಿರುವ ಪರಬ್ರಹ್ಮನೇ ನೀನಾಗಿರುವೆ. ಇಂತಹ ಬ್ರಹ್ಮಸ್ವರೂಪಿಯಾದ ನಿನ್ನನ್ನು ವಂದಿಸುತ್ತೇನೆ.

೪೦. ತನ್ನ ಮಾಯಾಶಕ್ತಿಯಿಂದ ಪ್ರಪಂಚವನ್ನೇ ಆಕರ್ಷಿಸಿ, ಪ್ರಪಂಚವನ್ನೆಲ್ಲಾ ಮಾಯೆಯಲ್ಲಿ ಮುಳುಗಿಸಿ, ಶೇಷಶಾಯಿಯಾಗಿರುವ ಮಹಾವಿಷ್ಣುರೂಪಿಯೇ ನೀನಲ್ಲವೇ! ಆ ವಿಶ್ವಾತ್ಮಕನಾದ ನಿನ್ನನ್ನು ನಮಸ್ಕರಿಸುತ್ತೇನೆ.

ಬಿಭರ್ತಿ ಶಿರಸಾ ನಿತ್ಯಂ ದ್ವಿಸಪ್ತಭುವನಾತ್ಮಕಂ ।
ಬ್ರಹ್ಮಾಂಡಂ ಯೋಽಖಿಲಾಧಾರಂ ತಸ್ಮೈ ಶೇಷಾತ್ಮನೇ ನಮಃ ॥ ೪೧ ॥

ಯಃ ಪರಾಂತೇ ಪರಾನಂದಂ ಪೀತ್ವಾ ದಿವ್ಯೈಕಸಾಕ್ಷಿಣಾಂ ।
ನೃತ್ಯತ್ಯನಂತಮಹಿಮಾ ತಸ್ಮೈ ರುದ್ರಾತ್ಮನೇ ನಮಃ ॥ ೪೨ ॥

ಯೋಽಂತರಾ ಸರ್ವಭೂತಾನಾಂ ನಿಯಂತಾ ತಿಷ್ಠತೀಶ್ವರಃ ।
ತಂ ಸರ್ವಸಾಕ್ಷಿಣಂ ದೇವಂ ನಮಸ್ಯೇ ಪರಮಾತ್ಮನೇ ॥ ೪೩ ॥

ಯಸ್ಯ ಕೇಶೇಷು ಜೀಮೂತಾ ನದ್ಯಃ ಸರ್ವಾಂಗಸಂಧಿಷು ।
ಕುಕ್ಷೌ ಸಮುದ್ರಾಶ್ಚತ್ವಾರಸ್ತಸ್ಮೈ ವ್ಯೋಮಾತ್ಮನೇ ನಮಃ ॥ ೪೪ ॥

---

೪೧. ಹದಿನಾಲ್ಕು ಭುವನಗಳನ್ನೂ ತಲೆಯಲ್ಲಿ ಹೊತ್ತು ನಿತ್ಯವೂ ಬ್ರಹ್ಮಾಂಡಕ್ಕೆ ಆಧಾರನಾಗಿರುವವನು ಆದಿಶೇಷನು. ಅಂತಹ ಆದಿಶೇಷನೇ ನೀನು. ನಿನ್ನನ್ನಲ್ಲದೆ ಮತ್ತಾರನ್ನು ಈಗ ವಂದಿಸಲಿ ?

೪೨. ಪ್ರಳಯಕಾಲದಲ್ಲಿ ನೀನು ಆನಂದ ಸ್ವರೂಪನಾಗಿ, ದಿವ್ಯಚಕ್ಷುವಾಗಿ, ಅನಂತ ಮಹಿಮನಾಗಿ ಪರಮೇಶ್ವರನಾಗಿ ನಾಟ್ಯೇಶ್ವರನಾಗಿ ತೋರಿಬರುವೆ. ಅಂತಹ ಸಾಕ್ಷಾತ್ ರುದ್ರಸ್ವರೂಪಿಯಾದ ನಿನಗೆ ಎರಗುತ್ತೇನೆ.

೪೩. ಓ ಪರಮೇಶ್ವರನೇ, ನೀನು ಸಮಸ್ತ ಪ್ರಾಣಿಗಳಲ್ಲಿಯೂ ಒಂದೇ ಭಾವನೆಯಿಂದ ವರ್ತಿಸಿ, ಅವರು ಮಾಡುತ್ತಿರುವ ಸಮಸ್ತ ಕಾರ್ಯಗಳಿಗೂ ಸಾಕ್ಷಿಯಾಗಿ ನಿಂತಿದ್ದೀಯೆ. ಸರ್ವರ ಪಾಪಕಾರ್ಯಕ್ಕಾಗಿ ತಕ್ಕಂತೆ ಶಿಕ್ಷಾದಿಗಳನ್ನು ವಿಧಿಸುತ್ತಾ ಅವರಿಗೆ ಮಾರ್ಗದರ್ಶಿಯಾಗಿದ್ದೀಯೆ. ಅಂತಹ, ಪರಮಾತ್ಮನಾದ ನಿನಗೆ ವಂದನೆಯು.

೪೪. ಓ ಈಶ್ವರನೇ, ನೀನು ವ್ಯೋಮ ರೂಪಿಯು. ನಿನ್ನ ಕೇಶಪಾಶಗಳಲ್ಲಿ ಮೇಘಗಳು ಅಡಗಿವೆ. ಸರ್ವಾಂಗ ಸಂಧಿ ಪ್ರದೇಶಗಳಲ್ಲಿ ನದಿಗಳು ಉದ್ಭವಿಸುತ್ತವೆ. ಕುಕ್ಷಿಯಲ್ಲಿ ನಾಲ್ಕು ಸಮುದ್ರಗಳು ವಿರಾಜಿಸುತ್ತಿವೆ. ಸರ್ವವ್ಯಾಪಕನಾಗಿ, ಜಗತ್ತನ್ನಾವರಿಸಿರುವ ನಿನಗೆ ನಮಸ್ಕರಿಸುತ್ತೇನೆ.

ಯಂ ವಿನಿದ್ರಾ್ರಯತಶ್ವಾಸಾಃ ಸಂತುಷ್ಟಾಃ ಸಮದರ್ಶಿನಃ ।
ಜ್ಯೋತಿಃ ಪಶ್ಯಂತಿ ಯುಂಜಾನಾಸ್ತಸ್ಮೈ ಯೋಗಾತ್ಮನೇ ನಮಃ ॥ ೪೫ ॥

ಯಸ್ಯ ಭಾಸಾ ವಿಭಾತೀದಂ ತದಹಂ ತಮಸಃ ಪರಂ ।
ತತ್ತ್ವಂ ಸದಾ ನಿರಾಕಾರಂ ಚಿದ್ರೂಪಂ ಪರಮೇಶ್ವರಂ ॥ ೪೬ ॥

ಯಯಾ ಸಂತರತೇ ಮಾಯಾಂ ಯೋಗೀ ಸಂಕ್ಷೀಣಕಲ್ಮಶಃ ।
ಅಪರಾಂತಾಮಪರ್ಯಂತಃ ತಸ್ಮೈ ವಿದ್ಯಾತ್ಮನೇ ನಮಃ ॥ ೪೭ ॥

ನಿತ್ಯಾನಂದಂ ನಿರಾಧಾರಂ ನಿಷ್ಕಲಂ ಪರಮಂ ಶಿವಂ ।
ಪ್ರಪದ್ಯೇ ಪರಮಾತ್ಮಾನಂ ಭವಂತಂ ಪರಮೇಶ್ವರಂ ॥ ೪೮ ॥

---

೪೫. ಯೋಗಿಗಳು, ಶ್ವಾಸಧಾರಣೆಮಾಡಿ, ಅದರಿಂದ ತಾವು ತೃಪ್ತರಾಗಿ, ಜನರನ್ನೂ ನಿಷ್ಪಕ್ಷಪಾತ ಬುದ್ಧಿಯಿಂದ ಕಾಣುತ್ತಾ ಯೋಗಸಿದ್ಧಿಯನ್ನು ಪಡೆದು, ಕೊನೆಗೆ ಪರಜ್ಯೋತೀ ರೂಪನಾದ ನಿನ್ನನ್ನು ಪ್ರತ್ಯಕ್ಷವಾಗಿ ನೋಡುತ್ತಾರೆ. ಅಂತಹ ಯೋಗಿಗಳಿಗೆ ಯೋಗಿಯಾಗಿ ಯೋಗರೂಪಿಯಾಗಿರುವ ಪರಮೇಶ್ವರನೇ! ನಿನಗೆ ಶಿರಸಾ ನಮಸ್ಕರಿಸುವೆನು.

೪೬. ಯಾವ ಪರಮೇಶ್ವರನ ತೇಜಸ್ಸಿನಿಂದ ಜಗತ್ತೆಲ್ಲವೂ ಪ್ರಕಾಶಿಸುತ್ತಿದೆಯೋ, ಯಾರ ಮಹಿಮೆಯಿಂದ ಭಕ್ತರು ಅಜ್ಞಾನವನ್ನು ನೀಗಿಕೊಂಡು, ಸುಜ್ಞಾನವನ್ನು ಪಡೆಯುತ್ತಿರುವರೋ, ಅಂತಹ ನಿರಾಕಾರನೂ, ಜ್ಞಾನರೂಪಿಯೂ ಆದ ಮಹೇಶ್ವರನಿಗೆ ಪ್ರಣಾಮಮಾಡುತ್ತೇನೆ.

೪೭. ಜನರು ಯಾವ ವಿದ್ಯಾಬಲದಿಂದ, ಅಜ್ಞಾನವನ್ನು ಕಳೆದುಕೊಂಡು ಪಾಪರಹಿತರಾಗಿ, ಮೋಕ್ಷವನ್ನು ಅನುಭವಿಸುವರೋ, ಅಂತಹ ಅಪರಾಂತವಾದ, ನಾಶರಹಿತನಾದ ವಿದ್ಯಾರೂಪಿಯಾದ ಪರಮಾತ್ಮನಿಗೆ ವಂದನೆಯು.

೪೮. ಪರಮೇಶ್ವರನು, ನಿತ್ಯಾನಂದರೂಪನು. ಆಧಾರರಹಿತನು. ಸಕಲ ಕಲಾಪರಿಪೂರ್ಣನು. ಪರಮಮಂಗಳದಾಯಕನು. ಇಂಥ ಪರಮೇಶ್ವರರೂಪಿಯಾದ ಪರಮಾತ್ಮನನ್ನು ನಾನು ಭಜಿಸುತ್ತೇನೆ.

ಏವಂ ಸ್ತುತ್ವಾ ಮಹಾದೇವಂ ಬ್ರಹ್ಮಾ ತದ್ಭಾವಭಾವಿತಃ ।
ಪ್ರಾಂಜಲಿಃ ಪ್ರಣತಸ್ತಸ್ಥೌ ಗೃಣನ್ ಬ್ರಹ್ಮ ಸನಾತನಂ ॥ ೪೯ ॥

ತತಸ್ತಸ್ಯ ಮಹಾದೇವೋ ನಿತ್ಯಯೋಗಮನುತ್ತಮಂ ।
ಐಶ್ವರ್ಯಂ ಬ್ರಹ್ಮಸದ್ಭಾವಂ ವೈರಾಗ್ಯಂ ಚ ದದೌ ಹರಃ ॥ ೫೦ ॥

ಕರಾಭ್ಯಾಂ ಸುಶುಭಾಭ್ಯಾಂ ಚ ಉಪಸ್ಪೃಶ್ಯ ಮಹೇಶ್ವರಃ ।
ವ್ಯಾಜಹಾರ ಮಹಾದೇವಃ ಸೋಽನುಗೃಹ್ಯ ಪಿತಾಮಹಂ ॥ ೫೧ ॥

ಯತ್ತ್ವಯಾಽಭ್ಯರ್ಥಿತೋ ಬ್ರಹ್ಮನ್ ಪುತ್ರತ್ವೇಽಹಂ ಮಯಾ ಕೃತಂ ।
ತ್ವಮಿದಾನೀಂ ಮಮಾಽಽದೇಶಾತ್ಸೃಜಸ್ವ ವಿವಿಧಾಃ ಪ್ರಜಾಃ ॥ ೫೨ ॥

ತ್ರಿಧಾ ಭಿನ್ನೋಽಸ್ಮ್ಯಹಂ ಬ್ರಹ್ಮನ್ ಬ್ರಹ್ಮವಿಷ್ಣುಹರಾಖ್ಯಯಾ ।
ಸರ್ಗರಕ್ಷಾಲಯಗುಣೈಃ ನಿರ್ಗುಣೋಽಹಂ ನ ಸಂಶಯಃ ॥ ೫೩ ॥

---

೪೯. ಹೀಗೆ ಬ್ರಹ್ಮನು ಏಕಮನಸ್ಸಿನಿಂದ ಮಹಾದೇವನನ್ನು ಸ್ತೋತ್ರ ಮಾಡಿ, ಪರಮೇಶ್ವರನ ಎದುರಿನಲ್ಲಿ ಅಂಜಲಿಬದ್ಧನಾಗಿ ತದೇಕಧ್ಯಾನದಿಂದ ನಿಂತು ಬಿಟ್ಟನು.

೫೦. ಹೀಗೆ ಬ್ರಹ್ಮನಿಂದ ಸ್ತುತಿಸಲ್ಪಟ್ಟ ಮಹಾದೇವನು, ಸಂತುಷ್ಟನಾಗಿ, ಆ ಬ್ರಹ್ಮನಿಗೆ ಈಶ್ವರಾನುಗ್ರಹರೂಪವಾದ ಸುಜ್ಞಾನವನ್ನೂ, ವೈರಾಗ್ಯವನ್ನೂ ಅನುಗ್ರಹಿಸಿಕೊಟ್ಟನು. ಆಗ ಚತುರ್ಮುಖಬ್ರಹ್ಮನು ಸಂಪೂರ್ಣ ಜ್ಞಾನಿಯಾದನು.

೫೧. ಅಲ್ಲದೆ, ಪವಿತ್ರವಾದ ತನ್ನ ಎರಡು ಕೈಗಳಿಂದಲೂ ಆ ಬ್ರಹ್ಮನನ್ನು ಮುಟ್ಟಿ, ಅನುಗ್ರಹಿಸಿ, ಪರಮೇಶ್ವರನು ಮುಂದೆ ಹೇಳುವಂತೆ ಬ್ರಹ್ಮನನ್ನು ಕುರಿತು ಕೆಲವು ಮಾತುಗಳನ್ನಾಡಿದನು.

೫೨. "ಎಲೈ ಬ್ರಹ್ಮನೇ ನಿನ್ನ ಕೋರಿಕೆಯಂತೆ ನಾನು ನಿನಗೆ ಈಗ ಮಗನಂತೆ ಆಗಿರುವೆನು. ಈಗ ನೀನು ನನ್ನ ವರಬಲದಿಂದ ನಾನಾವಿಧವಾದ ಪ್ರಜೆಗಳನ್ನು ಸೃಷ್ಟಿಸುವವನಾಗುವೆ.

೫೩. ಬ್ರಹ್ಮನೇ! ನಾನು ಬ್ರಹ್ಮ, ವಿಷ್ಣು, ಹರ ಎಂಬ ಮೂರ್ತಿಭೇದದಿಂದ, ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾಗಿ ತ್ರಿಮೂರ್ತಿಸ್ವರೂಪನೆನಿಸಿಕೊಂಡಿರುವೆನು. ಇಷ್ಟುಗುಣಗಳು ನನ್ನಲ್ಲಿ ಕಂಡುಬಂದರೂ ತಾತ್ವಿಕದೃಷ್ಟಿಯಿಂದ ನಾನು ನಿರ್ಗುಣಸ್ವರೂಪನಾಗಿಯೇ ಇರುವೆನು. ಇದರಲ್ಲಿ ಸಂದೇಹವಿಲ್ಲ,

ಸ ತ್ವಂ ಮಮಾಗ್ರತಃ ಪುತ್ರಃ ಸೃಷ್ಟಿಹೇತೋರ್ವಿನಿರ್ಮಿತಃ ।
ಮಮೈವ ದಕ್ಷಿಣಾದಂಗಾದ್ವಾಮಾಂಗಾತ್ಪುರುಷೋತ್ತಮಃ ॥ ೫೪ ॥

ಮಮೈವ ಹೃದಯಾದ್ರುದ್ರಃ ಸಂಜಾತಃ ಕಾಮರೂಪಧೃಕ್ ।
ಬ್ರಹ್ಮವಿಷ್ಣುಹರಾಖ್ಯಾನಾಂ ಯಃ ಪರಃ ಪರಮೇಶ್ವರಃ ॥ ೫೫ ॥

ತಂ ಮಹಾಂತಂ ಮಹಾದೇವಂ ಬ್ರಹ್ಮನ್ ಜಾನಂತಿ ಸೂರಯಃ ।
ಏವಂ ಬ್ರಹ್ಮಾಣಮಾಭಾಷ್ಯ ದತ್ವಾ ಚ ವಿವಿಧಾನ್ವರಾನ್ ॥ ೫೬ ॥

ಅಂತರ್ಹಿತೋಮಹಾದೇವಃ ಪಶ್ಯತಃ ಪದ್ಮಜನ್ಮನಃ ।
ಅನುಗ್ರಹಾತ್ತತಸ್ತಸ್ಯ ತಸ್ಮಾತ್ಜ್ಞಾನೋದಯೋ ಭವೇತ್ ॥೫೭ ॥

---

೫೪. ಪ್ರಪಂಚದ ಸೃಷ್ಟಿಗೋಸ್ಕರ ನನ್ನ ಬಲಭಾಗದ ಅಂಗದಿಂದ ನೀನೂ, ಎಡಭಾಗದ ಅವಯವದಿಂದ ಮಹಾವಿಷ್ಣುವೂ, ಜನಿಸಿರುವಿರಿ. ಈ ವಿಧವಾದ ನಿಮ್ಮಿಬ್ಬರ ಸೃಷ್ಟಿಗೆ ಉದ್ದೇಶವೇನೆಂದರೆ ಪ್ರಪಂಚ ನಿರ್ಮಾಣವೇಹೊರತು ಮತ್ತೆ ಬೇರೆಯಲ್ಲ.

೫೫. ನನ್ನ ಹೃದಯದಿಂದ ಕಾಮರೂಪಧರನಾದ ರುದ್ರನು ಜನಿಸಿರುವನು. ಹೀಗೆ ಬ್ರಹ್ಮ, ವಿಷ್ಣು, ರುದ್ರ ಎಂಬ ನಿಮ್ಮೆಲ್ಲರಿಗೂ ನಾನು ಪರಮೇಶ್ವರನಾಗಿ ಪ್ರಕಾಶಿಸುತ್ತಿದ್ದೇನೆ.

೫೬. ಅಯ್ಯಾ ಬ್ರಹ್ಮನೇ, ವಿದ್ವಾಂಸರಾದವರು ನನ್ನನ್ನು ಹೀಗೆ ತ್ರಿಮೂರ್ತಿಗಳಿಗೂ ಮೂಲಕಾರಣನಾದವನೆಂದು ತಿಳಿದಿರುವರು. ಇದೇ ನನ್ನ ಸ್ವರೂಪ. ಇದನ್ನು ನೀನು ನಂಬು''ಎಂಬುದಾಗಿ, ಪರಮೇಶ್ವರನು ತನ್ನ ವಿಷಯವನ್ನು ಬ್ರಹ್ಮನಿಗೆ ಹೇಳಿ ಮತ್ತೆ ಉತ್ತಮೋತ್ತಮವಾದ ಅನೇಕ ವರಗಳನ್ನಿತ್ತನು.

೫೭. ಹೀಗೆ ಹೇಳಿ ಬ್ರಹ್ಮನ ಎದುರಿನಲ್ಲಿಯೇ ಮಹೇಶ್ವರನು, ಅಂತರ್ಧಾನನಾದನು. ಪರಮೇಶ್ವರನ ಅನುಗ್ರಹಬಲದಿಂದ ಬ್ರಹ್ಮನು ಅಂದಿನಿಂದ ಮಹಾಜ್ಞಾನಿಯಾದನು.

ತತಶ್ಚ ಪಾಶನಿಚ್ಛಿತ್ತಿಃ ಶಿವ ಏವ ಭವೇತ್ತತಃ ।
ನಶ್ಯಂತಿ ವ್ಯಾಧಯಸ್ತಸ್ಯ ಗಲಗಂಡಗ್ರಹಾದಯಃ ॥ ೫೮ ॥

ಐಹಿಕೀಂ ಲಭತೇ ಸಿದ್ಧಿಂ ಚಿರಂಜೀವಿತ್ವಮೇವ ಚ ।
ಸರ್ವಪಾಪವಿನಿರ್ಮುಕ್ತಃ ಶಿವಲೋಕೇ ಮಹೀಯತೇ ॥ ೫೯ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಹರೋತ್ಪತ್ತ್ಯಾದಿ ಕಥನಂ ನಾಮ ತ್ರಯೋವಿಂಶೋಽಧ್ಯಾಯಃ

---

೫೮. ಆದ್ದರಿಂದ ಶೌನಕಾದಿ ಮಹರ್ಷಿಗಳೇ! ಈ ಪರಮೇಶ್ವರನ ಮಹಿಮೆಯನ್ನು ಯಾರು ಭಕ್ತಿಯಿಂದ ಕೇಳುವರೋ ಅವರು ಸಂಸಾರಪಾಶದಿಂದ ಬಿಡಲ್ಪಟ್ಟವರಾಗಿ ಸಾಕ್ಷಾತ್ ಶಿವಸ್ವರೂಪಿಗಳಾಗಿಯೇ ಆಗುವರು. ಅಲ್ಲದೆ ಐಹಿಕವಾಗಿ ಒದಗತಕ್ಕ ಗಲಗಂಡಿ, ಗ್ರಹ ಇವೇ ಮೊದಲಾದ ಕೆಟ್ಟವ್ಯಾಧಿಗಳು ಸಂಪೂರ್ಣವಾಗಿ ನಾಶವಾಗುವವು ಎಂಬುದರಲ್ಲಿ ಸಂದೇಹವಿಲ್ಲ.

೫೯. ಅಲ್ಲದೆ ಆಭಕ್ತರು ಭೂಲೋಕದಲ್ಲಿ ಚಿರಜೀವಿಗಳಾಗಿ ಸುಖವನ್ನನುಭವಿಸಿ ಪರಲೋಕದಲ್ಲಿ ಪಾಪಮುಕ್ತರಾಗಿ ಶಿವನ ಸಾನ್ನಿಧ್ಯವನ್ನು ಪಡೆಯುವರು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರದಲ್ಲಿ ಸೂತಶೌನಕ ಸಂವಾದ ರೂಪವಾಗಿ ಹರೋತ್ಪತ್ತಿಯೇ ಮೊದಲಾದ ವಿಷಯಗಳನ್ನೊಳಗೊಂಡ ಇಪ್ಪತ್ತಮೂರನೆಯ ಅಧ್ಯಾಯವು ಸಮಾಪ್ತವಾದುದು.

॥ ಶ್ರೀ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಚತುರ್ವಿಂಶೋಽಧ್ಯಾಯಃ.

॥ ಋಷಯ ಊಚುಃ ॥

ಕಥಂ ಸ ಭಗವಾನ್ ಶಂಭುಃ ಸರ್ವಸ್ಯಾದ್ಯೋಽಪಿ ಸನ್ವಿಭುಃ ।
ಚತುರ್ಮುಖಸ್ಯ ಪುತ್ರತ್ವಮಗಮತ್ಕೇನ ಹೇತುನಾ ॥ ೧ ॥

ದಕ್ಷಿಣಾಂಗಭವೋ ಬ್ರಹ್ಮಾ ಮಹಾದೇವಸ್ಯ ಶೂಲಿನಃ ।
ಕಥಂ ತತ್ಪದ್ಮಯೋನಿತ್ವಂ ವಿರಂಚೇರಿತಿ ನೋ ವದ ॥ ೨ ॥

॥ ಸೂತ ಉವಾಚ ॥

ಆಸೀದೇಕಾರ್ಣವೇ ಘೋರೇ ನಷ್ಟೇ ವೈ ಸಚರಾಚರೇ ।
ದೇವಾಶ್ಚ ದಾನವಾಶ್ಚೈವ ಮುನಯೋ ಮನವಸ್ತಥಾ ॥ ೩ ॥

ಇಪ್ಪತ್ತುನಾಲ್ಕನೆಯ ಅಧ್ಯಾಯ.

೧. ಶೌನಕಾದಿ ಋಷಿಗಳು ಮತ್ತೆ ಸೂತಮಹಾಮುನಿಗಳನ್ನು ಕುರಿತು ' ಮಹರ್ಷಿಯೇ ಲೋಕಕ್ಕೆ ಆದಿ ಪುರುಷನಾದ ಮತ್ತು ವಿಭುರೂಪಿಯಾದ ಮಹೇಶ್ವರನು, ಚತುರ್ಮುಖ ಬ್ರಹ್ಮನಿಗೆ ಮಗನಾದದ್ದು ಹೇಗೆ? ಏತಕ್ಕಾಗಿ?

೨. ಮಹೇಶ್ವರನ ಬಲಭಾಗದಿಂದ ಹುಟ್ಟಿದ ಬ್ರಹ್ಮನು ಪದ್ಮಯೋನಿಯಾದುದು ಹೇಗೆ? ಅಥವಾ ಪದ್ಮಯೋನಿಯೆಂದು ಬ್ರಹ್ಮನಿಗೆ ಹೆಸರು ಬರಲು ಕಾರಣವೇನು? ಈ ಕಥೆಯನ್ನು ನಮಗೆ ವಿಸ್ತರಿಸಿ ಹೇಳಬೇಕು ' ಎನ್ನಲು

೩–೪. ಸೂತಮಹರ್ಷಿಗಳು ಅವರ ಪ್ರಶ್ನೆಗೆ ಉತ್ತರ ರೂಪವಾಗಿ, ಕೆಲವು ವಿಷಯಗಳನ್ನು ವಿವರಿಸಲು ಆರಂಭಿಸಿದರು. ಹಿಂದೆ ಪ್ರಥಮಪರಾರ್ಧದಲ್ಲಿ ಲೋಕವೆಲ್ಲವೂ, ಚರಾಚರವಸ್ತುಗಳಿಂದ ಕೂಡಿ ಸಮುದ್ರದಲ್ಲಿ ಮುಳುಗಿ ಹೋಗಿದ್ದಾಗ,

ನಿರ್ವಿದ್ಯಂತೇ ಸದಾ ತಸ್ಮಿನ್ ಸಂಜಾತೇ ಪ್ರತಿಸಂಚರೇ ।
ನಾರಾಯಣೋ ಮಹಾಯೋಗೀ ಶೇತೇ ತಸ್ಮಿಂಸ್ತಮೋಮಯೇ ॥ ೪ ॥

ಯೋಗನಿದ್ರಾಂ ಸಮಾಸಾದ್ಯ ಶೇಷಾಹಿಶಯನೇ ದ್ವಿಜಾಃ ।
ಉದ್ಭೂತಂ ಪಂಕಜಂ ತಸ್ಯ ನಾಭೌ ಭಗವತೋ ಹರೇಃ ॥ ೫ ॥

ದಿವ್ಯಗಂಧಸಮೋಪೇತಂ ಶತಯೋಜನವಿಸ್ತೃತಂ ।
ತಸ್ಯೈವ ಶಯನಸ್ಥಸ್ಯ ದಿವ್ಯಂ ವರ್ಷಶತಂ ಗತಂ ॥ ೬ ॥

ಬ್ರಹ್ಮಾ ಜಗಾಮ ತಂ ದೇಶಂ ಯತ್ರಾಽಸ್ತೇ ಪುರುಷೋತ್ತಮಃ ।
ಸಮುತ್ಥಾಪ್ಯ ಚ ತಂ ಬ್ರಹ್ಮಾ ಕರೇಣ ಮಧುಸೂದನಂ ॥
ಮಾಯಯಾ ಮೋಹಿತೋ ಬ್ರಹ್ಮಾ ತಮುವಾಚ ಸುರೇಶ್ವರಂ ॥ ೭ ॥

ಅಸ್ಮಿನ್ನೇಕಾರ್ಣವೇ ಘೋರೇ ಶೇತೇ ಕೋಽತ್ರ ಭವಾನಹೋ ।
ಬ್ರೂಹೀತ್ಯುಕ್ತೋಽಬ್ರವೀದ್ವಿಷ್ಣುರ್ಬ್ರಹ್ಮಾಣಂ ತೇಜಸಾಂ ನಿಧಿಃ ॥ ೮ ॥

ದೇವತೆಗಳೂ, ರಾಕ್ಷಸರೂ, ಮುನಿಗಳೂ, ಮನುಗಳೂ ಅಲ್ಲಲ್ಲಿಯೇ ಅಡಗಿ ಹೋಗಿದ್ದರು. ಇಂತಹ ಮಹಾ ಪ್ರಳಯಕಾಲದಲ್ಲಿ ಯೋಗನಿದ್ರೆಯಿಂದ ಕೂಡಿದ ನಾರಾಯಣನು ಮಾಯಾ ಸಂಬಂಧಿಯಾಗಿ, ಜಲಮಧ್ಯವನ್ನೇ ಆಶ್ರಯಿಸಿ ನಿದ್ರಿಸಲಾರಂಭಿಸಿದನು.

೫. ಯೋಗನಿದ್ರೆಯಿಂದ ಕೂಡಿ ಸರ್ಪಶಯನನಾಗಿ ಮಲಗಿದ್ದಾಗ ಮಹಾ ವಿಷ್ಣುವಿನ ನಾಭಿಕಮಲದಿಂದ ಒಂದು ಕಮಲವು ಹುಟ್ಟಿತು.

೬. ಆ ಕಮಲವು ಶ್ರೇಷ್ಠವಾದ ವಾಸನೆಯುಳ್ಳದ್ದಾಗಿ, ನೂರು ಯೋಜನದಗಲವುಳ್ಳದ್ದಾಗಿತ್ತು. ವಿಷ್ಣುವೂ ದೇವಮಾನದ ನೂರುವರ್ಷ ಪರ್ಯಂತವಾಗಿ ನಿದ್ರಿಸುತ್ತಿದ್ದನು. ಅಲ್ಲಿಯವರೆಗೂ ಕಮಲವು ವಿಕಾಸವಾಗಿಯೇ ಇತ್ತು.

೭. ಆಗ ಬ್ರಹ್ಮನು ಮಹಾ ವಿಷ್ಣುವಿನ ಸಮೀಪಕ್ಕೆ ಬಂದು, ತನ್ನ ಕೈಗಳಿಂದ ಮಧುಸೂದನನನ್ನು ಹಿಡಿದು ಎಬ್ಬಿಸಿ ಕೂರಿಸಿದನು. ಅಲ್ಲದೆ ಬ್ರಹ್ಮನು ಮಾಯಾ ಮೋಹಿತನಾಗಿ ವಿಷ್ಣುವನ್ನು ಕುರಿತು,

೮. "ಅಯ್ಯಾ, ಈ ಘೋರವಾದ ಸಮುದ್ರ ಮಧ್ಯದಲ್ಲಿ ಮಲಗಿರುವ ನೀನು ಯಾರು? ಈಗಲೇ ಹೇಳು" ಎಂದು ಬ್ರಹ್ಮನು ಪ್ರಶ್ನಿಸಲು, ತೇಜೋನಿಧಿಯಾದ ಮಹಾವಿಷ್ಣುವು,

ನ ಜಾನಾಸಿ ಕಥಂ ಮೂಢ ಮಾಮಂತರ್ಯಾಮಿಣಂ ವಿಭುಂ ।
ಸರ್ವಸ್ಯಾದ್ಯಂ ಸುರಶ್ರೇಷ್ಠಂ ಜಾನೀಹೀತ್ಯಬ್ರವೀದ್ವಿಭುಃ ॥ ೯ ॥

ಏವಮುಕ್ತ್ವಾ ಪುನಶ್ಚಕ್ರೀ ಜಾನನ್ನಪಿ ಪಿತಾಮಹಂ ।
ಕೋ ಭವಾನಿತಿ ತಂ ಪ್ರಾಹ ಬ್ರಹ್ಮಾ ಹರಿಮಥಾಬ್ರವೀತ್ ॥ ೧೦ ॥

ಅಹಂ ವೈ ಸರ್ವಭೂತಾನಾಮಾದ್ಯಃ ಸರ್ವಜಗತ್ಪತಿಃ ।
ಬ್ರಹ್ಮಾಣಂ ಮಾಂ ಪರಂ ದೇವಂ ಜಾನೀಹಿ ಪುರುಷರ್ಷಭ ॥ ೧೧ ॥

ಚರಾಚರಾತ್ಮಕಂ ವಿಶ್ವಂ ಮಯಿ ತಿಷ್ಠತಿ ಸರ್ವದಾ ।
ಮಯ್ಯೇವ ವಿಲಯಶ್ಚಾಂತೇ ಪುನರೇವ ನ ಸಂಶಯಃ ॥ ೧೨ ॥

ಏವಂ ಪಿತಾಮಹೇನೋಕ್ತೋ ಭಗವಾನ್ ಕಮಲಾಪತಿಃ ।
ಪ್ರವಿಷ್ಟೋ ಬ್ರಹ್ಮಣೋ ದೇಹಂ ತತ್ರ ಲೋಕಾನ್ ದದರ್ಶ ಸಃ ॥ ೧೩ ॥

---

೯. "ಹೇ ಮೂಢನೇ, ನೀನು ಅಜ್ಞಾನಿಯು. ಸಮಸ್ತ ವಸ್ತುವಿನಲ್ಲಿಯೂ ಅಡಗಿರುವ ನನ್ನನ್ನು ನೀನು ತಿಳಿಯಲಾರದೇ ಹೋದೆಯಾ, ನಾನು ಲೋಕಕ್ಕೆ ಆದಿ ಪುರುಷನು, ದೇವಶ್ರೇಷ್ಠನು ಎಂಬುದನ್ನು ತಿಳಿ."

೧೦. ಎಂದು ಬ್ರಹ್ಮನಿಗೆ ಉತ್ತರಕೊಟ್ಟು ತಾನು ಅವನನ್ನು ಬ್ರಹ್ಮನೆಂದು ತಿಳಿದಿದ್ದರೂ, ಏನೂ ತಿಳಿಯದವನಂತೆ, "ಅಯ್ಯಾ ನೀನು ಯಾರು"? ಎಂದು ಪ್ರಶ್ನಿಸಲಾಗಿ, ಬ್ರಹ್ಮನು.

೧೧. ಓ ಪುರುಷಶ್ರೇಷ್ಠನೇ, ನಾನು ಸಮಸ್ತ ಪ್ರಾಣಿಗಳಿಗೂ ಮೊದಲನೆಯವನು. ಸರ್ವಲೋಕದ ಸೃಷ್ಟಿಕರ್ತನೂ ನಾನೇ. ನನ್ನನ್ನು ಪರಬ್ರಹ್ಮನೆಂದು ತಿಳಿ.

೧೨. ಈ ಚರಚರಾತ್ಮಕವಾದ ಪ್ರಪಂಚವೂ ನನ್ನಿಂದಲೇ ಸೃಷ್ಟಿಸಲ್ಪಡುತ್ತಿದೆ. ಕೊನೆಯಲ್ಲಿ ನನ್ನಲ್ಲಿಯೇ ಲಯವನ್ನೂ ಹೊಂದುತ್ತದೆ. ಇದರಲ್ಲಿ ಸಂಶಯ ಪಡಬೇಡ.

೧೩. ಎಂದು ವಿಷ್ಣುವಿನೊಡನೆ ತನ್ನ ಸಾಮರ್ಥ್ಯವನ್ನು ಹೇಳಿಕೊಳ್ಳಲು ಅದನ್ನು ಪರೀಕ್ಷಿಸಲು ಒಡನೆಯೇ ವಿಷ್ಣುವು ಬ್ರಹ್ಮನ ದೇಹದೊಳಕ್ಕೆ ಪ್ರವೇಶಿಸಿದನು. ಅಲ್ಲಿ ಸಮಸ್ತ ಲೋಕಗಳು ಅಡಗಿರುವುದನ್ನು ಕಂಡು ವಿಸ್ಮಿತನಾದನು.

ವಿಸ್ಮಿತಃ ಕಮಲಾಕಾಂತೋ ನಿರ್ಗತಶ್ಚ ವಿಧೇರ್ಮುಖಾತ್ ।
ಸಹಸ್ರಶೀರ್ಷಾ ಪುರುಷಃ ಪುನರ್ಬ್ರಹ್ಮಾಣಮಬ್ರವೀತ್ ॥ ೧೪ ॥

ವಿಧೇ ತ್ವಮಪಿ ಮದ್ದೇಹಂ ಪ್ರವಿಶ್ಯಾಶು ವಿಲೋಕಯ ।
ಚರಾಚರಾತ್ಮಕಾನ್ ಲೋಕಾನ್ ಸದೇವಾಸುರಮಾನುಷಾನ್ ॥ ೧೫ ॥

ತತೋ ವಿರಿಂಚಿರ್ಭಗವಾನ್ ಉದರಂ ಕಮಲಾಪತೇಃ ।
ಪ್ರವಿಶ್ಯ ಭುವನಾನ್ ಸರ್ವಾನ್ ದೃಷ್ಟ್ವಾಽಭೂದ್ವಿಸ್ಮಿತೋ ವಿಧಿಃ ॥ ೧೬ ॥

ನಾಪಶ್ಯನ್ನಿರ್ಗಮದ್ವಾರಂ ಪಿಹಿತಾನಿ ಚ ಚಕ್ರಿಣಾ ।
ತತೋಽಸೌ ನಾಭಿಪದ್ಮಸ್ಯ ನಾಲಮಾರ್ಗಮವಿಂದತ ॥ ೧೭ ॥

ತೇನ ಮಾರ್ಗೇಣ ನಿರ್ಗತ್ಯ ಬ್ರಹ್ಮಾ ಬ್ರಹ್ಮವಿದಾಂ ವರಃ ।
ರೇಜೇ ಪಂಕಜಮಧ್ಯಸ್ಥೋ ದೇವದೇವಃ ಪಿತಾಮಹಃ ॥ ೧೮ ॥

---

೧೪. ಹಾಗೆ ಆಶ್ಚರ್ಯಗೊಂಡ ವಿಷ್ಣುವು ಬ್ರಹ್ಮನ ಮುಖದಿಂದ ಹೊರಕ್ಕೆ ಬಂದು, ತಾನು ಸಹಸ್ರಶಿರಸ್ಸುಳ್ಳವನಾಗಿ ಪುನಃ ಬ್ರಹ್ಮನನ್ನು ಕುರಿತು, ಹೀಗೆಂದನು.

೧೫. ಎಲೈ ಬ್ರಹ್ಮನೇ ನೀನು ಈಗ ನನ್ನ ದೇಹದೊಳಪೊಕ್ಕು ನನ್ನ ದೇಹದೊಳಗಿರುವ ಚರಾಚರಾತ್ಮಕವಾದ ಜಗತ್ತನ್ನೂ ದೇವಾಸುರರನ್ನೂ ಮನುಷ್ಯರ ಗುಂಪನ್ನೂ ನೋಡು.

೧೬. ಎಂದು ಹೇಳಿದ ವಿಷ್ಣುವಿನ ಮಾತಿನಂತೆ ಬ್ರಹ್ಮನು ಮಹಾವಿಷ್ಣುವಿನ ಉದರವ ಒಳಪೊಕ್ಕೆ ಅಲ್ಲಿಯೂ ಸಮಸ್ತಲೋಕಗಳು ಇರುವುದನ್ನು ನೋಡಿ ಆಶ್ಚರ್ಯಪಟ್ಟನು.

೧೭. ಆದರೆ ವಿಷ್ಣು ಹೃದಯದಿಂದ ಹೊರಕ್ಕೆ ಬರಲು ಬ್ರಹ್ಮನಿಗೆ ದಾರಿಕಾಣದೇ ಹೋಯಿತು. ತಾನು ಪ್ರವೇಶಮಾಡಿದ್ದ ದ್ವಾರವು ಮುಚ್ಚಿಹೋಗಿತ್ತು. ಕೊನೆಗೆ ವಿಷ್ಣುವಿನ ನಾಭಿಕಮಲದಲ್ಲಿದ್ದ ಒಂದು ದ್ವಾರವನ್ನು ನೋಡಿದನು.

೧೮. ಆ ನಾಭಿಯು ಕಮಲದಂತೆ ವರ್ತುಲಾಕಾರವಾಗಿದ್ದಿತು. ಅದೇ ಮಾರ್ಗದಿಂದಲೇ ಬ್ರಹ್ಮನು ಹೊರಬಿದ್ದನು. ನಿರ್ಗಮನ ಕಾಲದಲ್ಲಿ ವಿಷ್ಣುವಿನ ನಾಭಿಕಮಲದ ಮಧ್ಯದಲ್ಲಿದ್ದ ಪರಬ್ರಹ್ಮನು ಕಮಲಮಧ್ಯಗತನಾಗಿರುವಂತೆ ಕಂಡುಬಂದನು.

ತಮಬ್ರವೀದ್ಗದಾಪಾಣಿರ್ಬ್ರಹ್ಮಾಣಮಮಿತದ್ಯುತಿಃ ।
ಲೀಲಾರ್ಥಮೇತತ್ಸಕಲಂ ಪಿತಾಮಹ ಕೃತಂ ಮಹತ್ ॥ ೧೯ ॥

ನ ಮಾತ್ಸರ್ಯಾತ್ಸುರಶ್ರೇಷ್ಠ ದ್ವಾರರೋಧೋ ಮಯಾ ಕೃತಃ
ತ್ವಮೇವ ಜಗತೋ ಮಾನ್ಯಃ ಸರ್ವಸ್ಯಾದ್ಯಃ ಪಿತಾಮಹಃ ॥ ೨೦ ॥

ಪುತ್ರತ್ವೇ ತ್ವಾಮಹಂ ಯಾಚೇ ದೇಹಿ ಮೇ ಕಮಲಾಸನ ।
ಪದ್ಮಯೋನಿರಿತಿ ಖ್ಯಾತಿಂ ಮತ್ಪ್ರಿಯಾರ್ಥಂ ಗಮಿಷ್ಯಸಿ ॥ ೨೧ ॥

ತತಃ ಸ್ವಯಂಭೂರ್ವಿಶ್ವಾದಿಶ್ಚಕ್ರಿಣೇ ವರಮುತ್ತಮಂ ।
ದತ್ವಾ ಪ್ರಹರ್ಷಮಗಮತ್ಸರ್ವಭೂತಾತ್ಮಕೋ ವಿಭುಃ ॥ ೨೨ ॥

ತತಸ್ತಮಬ್ರವೀದ್ವಿಷ್ಣುಂ ನಾಽಽವಾಭ್ಯಾಂ ವಿದ್ಯತೇ ಪರಂ ।
ತ್ವನ್ಮಯಂ ಮನ್ಮಯಂ ಸರ್ವಮೇಕಾ ಮೂರ್ತಿರ್ದ್ವಿಧಾ ಸ್ಥಿತಾ ॥ ೨೩ ॥

---

೧೯. ಆಗ ಬ್ರಹ್ಮನನ್ನು ನೋಡಿ ಗದಾಪಾಣಿಯಾದ ಮಹಾವಿಷ್ಣುವು "ಎಲೈ ಬ್ರಹ್ಮನೇ! ವಿನೋದಾರ್ಥವಾಗಿ ನಿನಗೆ ಹೀಗೆ ದಾರಿತಪ್ಪಿಸಿದೆನು. ಇದನ್ನು ನೀನು ಅನ್ಯಥಾ ತಿಳಿಯಬೇಡ.

೨೦. ನಿನ್ನ ಮೇಲೆ ಅಸೂಯೆಯಿಂದ ನಿನಗೆ ದ್ವಾರಸಿಕ್ಕದಂತೆ ನಾನು ಮಾಡಲಿಲ್ಲ. ನೀನು ಲೋಕಪೂಜ್ಯನು. ಪ್ರಪಂಚಕ್ಕೆ ಆದಿ ಭೂತನು. ಮತ್ತು ಸಮಸ್ತರಿಗೂ ಪಿತಾಮಹನಂತಿರುವವನು ನೀನೇ.

೨೧. ಈಗ ನೀನು ನನ್ನ ಮಗನಂತಾಗಬೇಕೆಂದು ನಿನ್ನನ್ನು ಬಹುವಾಗಿ ಕೇಳಿಕೊಳ್ಳುವೆನು ನನಗಾಗಿ ನೀನು ಪದ್ಮಯೋನಿಯೆಂಬ ಹೆಸರಿನಿಂದ ಕೀರ್ತಿಯನ್ನು ಗಳಿಸುವವನಾಗು" ಎಂದು ವಿಷ್ಣುವು ಕೇಳಿಕೊಳ್ಳಲು

೨೨ ಅನಂತರ ಬ್ರಹ್ಮನು, ಮಹಾವಿಷ್ಣುವಿಗೆ ಹಾಗೆಯೇ ಆಗಲೆಂದು ವರವನ್ನು ಕೊಟ್ಟು, ಅದರಿಂದ ಸಂತುಷ್ಟಾಂತರಂಗವುಳ್ಳವನಾದನು.

೨೩. ಆಮೇಲೆ ಬ್ರಹ್ಮನು ತನಗೂ, ವಿಷ್ಣುವಿಗೂ ಯಾವವಿಧವಾದ ವ್ಯತ್ಯಾಸವೂ ಇಲ್ಲವೆಂದೂ, ವಿಷ್ಣುಮಯವಾದದ್ದೆಲ್ಲಾ, ಬ್ರಹ್ಮಮಯವಾದದ್ದೆಂದೂ, ಬ್ರಹ್ಮ, ವಿಷ್ಣುಗಳ ಮೂರ್ತಿಯು ಎರಡಾದರೂ, ಒಂದೇ ಮೂಲವುಳ್ಳದ್ದೆಂದೂ ತಮ್ಮಿಬ್ಬರಿಗಿಂತ ಶ್ರೇಷ್ಠನಾದವನು ಮತ್ತೊಬ್ಬನಿಲ್ಲವೆಂದೂ, ವಿಷ್ಣುವಿನ ಎದುರಿನಲ್ಲಿ ಹೇಳಿದನು.

ಏವಂ ನಿಗದಿತೋ ವಿಷ್ಣುಃ ಬ್ರಹ್ಮಣಾ ಪರಮೇಷ್ಠಿನಾ ।
ವಿರಂಚೇಯಂ ಪ್ರತಿಜ್ಞಾ ತೇ ನಿಷ್ಫಲೈವ ಭವಿಷ್ಯತಿ ॥ ೨೪ ॥

ಕಿಂ ನ ಪಶ್ಯಸಿ ವಿಶ್ವೇಶಂ ಸ್ವಯಂ ಜ್ಯೋತಿ ಸ್ಸನಾತನಂ ।
ಸರ್ವಾತ್ಮಕಮುಮಾಕಾಂತಂ ಅನಾದಿನಿಧನಂ ಪರಂ ॥ ೨೫ ।

ಗಚ್ಛಾವಾಭ್ಯಾಂ ಪರಂ ದೇವಮಧಿಕಂ ಶರಣಂ ವಿಭೋ ।
ಏವಂ ಹರೇರ್ನಿಗದಿತಂ ಶ್ರುತ್ವಾ ಬ್ರಹ್ಮಾ ತಮಬ್ರವೀತ್ ॥ ೨೬ ॥

ಆವಾಭ್ಯಾಮಧಿಕಃ ಕಶ್ಚಿದ್ವಿದ್ಯೇತೇತಿ ಮುಧಾ ಹರೇ ।
ಭಾಷಸೇ ನಿದ್ರಯಾವಿಷ್ಟಃ ತ್ಯಜ ಮೋಹಂ ಮಹಾಮತೇ ॥ ೨೭ ॥

॥ ವಿಷ್ಣುರುವಾಚ ॥

ಮೈವಂ ವಿಧೇ ಯದಜ್ಞಾತ್ವಾ ಪರಂ ಭಾವಂ ಮಹೇಶ್ವರೇ ।
ಅಸ್ತೀತಿ ನಾಸ್ತ್ಯಭಾವಂ ತೇ ಬ್ರವೀಮಿ ಕಮಲಾಸನ ॥ ೨೮ ॥

---

೨೪. ಹೀಗೆ ಹೇಳಿದ ಪರಬ್ರಹ್ಮನ ಮಾತುಗಳನ್ನು ಕೇಳಿ ವಿಷ್ಣುವು "ಆಯ್ಯಾ ಬ್ರಹ್ಮನೇ ನಿನ್ನ ಅಭಿಪ್ರಾಯವು ತಪ್ಪು, ಇನ್ನು ನೀನು ಹಾಗೆ ಹೇಳಬೇಡ ನಿನ್ನ ಮಾತು ವ್ಯರ್ಥವಾದೀತು.

೨೫. ಸ್ವಯಂಪ್ರಕಾಶಕನೂ, ಸನಾತನನೂ ಆದ ಪರಮೇಶ್ವರನಿರುವುದನ್ನು ನೀನು ಮರೆತೆಯಾ? ಪರಮೇಶ್ವರನು ಆದ್ಯಂತರಹಿತನಾಗಿ ಪಾರ್ವತೀಪ್ರಿಯನಾಗಿ ಸರ್ವವ್ಯಾಪಿಯೆಂಬುದನ್ನು ಅರಿಯೆಯಾ!

೨೬. ಈಗ ನಾವಿಬ್ಬರೂ ಒಟ್ಟಾಗಿ ಹೋಗಿ ನಮ್ಮಿಬ್ಬರಿಗೂ ದೊಡ್ಡವನಾಗಿರುವ ಆ ಪರಮೇಶ್ವರನನ್ನು ಶರಣುಹೊಂದೋಣ, ನಡೆ," ಎಂದು ಹೇಳಿದನು. ಹೀಗೆ ಹೇಳಿದ ಮಹಾವಿಷ್ಣುವಿನ ಮಾತನ್ನು ಕೇಳಿ ಬ್ರಹ್ಮನು,

೨೭. "ಓ ಮಹಾವಿಷ್ಣುವೇ, ನಮ್ಮಿಬ್ಬರಿಗಿಂತ ಪ್ರಬಲನಾದವನು ಮತ್ತೊಬ್ಬನು ಖಂಡಿತವಾಗಿ ಇಲ್ಲ. ನಿನಗೆ ಎಲ್ಲೋ ನಿದ್ರೆಯ ಜಡ ತಪ್ಪಿಲ್ಲವೆಂದು ನನಗೆ ತೋರುತ್ತಿದೆ. ನಿಜವಾಗಿಯೂ ಪರಶಿವನು ನಮಗಿಂತ ಅಧಿಕನು" ಎಂದು ಹೇಳಲು.

೨೮. ವಿಷ್ಣುವು ಅದನ್ನು ಕೇಳಿ ಬ್ರಹ್ಮನೊಡನೆ ಹೀಗೆಹೇಳಲುಪಕ್ರಮಿಸಿದನು "ಬ್ರಹ್ಮನೇ ಹೀಗೆ ನೀನು ಪರಮೇಶ್ವರನಲ್ಲಿ ಅಲ್ಪಭಾವವನ್ನು ಇಡಬೇಡ. ಪರಮೇಶ್ವರನೇ ಲೋಕಪೂಜ್ಯನು ಅವನ ಮಹಿಮೆಯನ್ನು ನಿನಗೆ ಹೇಳುವೆನು ಕೇಳು.

ಮೋಹಿತಾತ್ಮಾ ನ ಸಂದೇಹೋ ಮಾಯಯಾ ಪರಮೇಷ್ಠಿನಃ |
ಮಾಯೀ ವಿಶ್ವಾತ್ಮಕೋ ರುದ್ರೋ ಮಾಯಾಶಕ್ತಿಸ್ತು ಶಾಂಕರೀ || ೨೯ ||

ಯಸ್ಮಾತ್ಸರ್ವಮಿದಂ ಬ್ರಹ್ಮನ್ ವಿಷ್ಣುರುದ್ರೇಂದ್ರಪೂರ್ವಕಂ |
ಮಹಾಭೂತೇಂದ್ರಿಯೈಃ ಸರ್ವೈಃ ಪ್ರಥಮಂ ಸಂಪ್ರಸೂಯತೇ || ೩೦ ||

ಸರ್ವೈಶ್ವರ್ಯೇಣ ಸಂಪನ್ನೋ ನಾಮ್ನಾ ಸರ್ವೇಶ್ವರಃ ಸ್ವಯಂ
ಸರ್ವೈರ್ಮುಮುಕ್ಷಿಭಿರ್ಧ್ಯೇಯಃ ಶಂಭುರಾಕಾಶಮಧ್ಯಗಃ || ೩೧ ||

ಯೋಗ್ರೇ ತ್ವಾಂ ವಿದಧೇ ಪುತ್ರಂ ತವ ವೇದಾಂಶ್ಚ ದತ್ತವಾನ್ |
ಯತ್ಪ್ರಸಾದಾತ್ತ್ವಯಾ ಲಬ್ಧಂ ಪ್ರಾಜಾಪತ್ಯಮಿದಂ ಪದಂ || ೩೨ ||

---

೨೯. ನಾನು ಈಗ ಬ್ರಹ್ಮನ ಮಾಯೆಯಿಂದ ಮೋಹಿತನಾಗಿರುವುದು ನಿಜ ಆದರೆ ಆ ಮಾಯೆಯು ವಿಶ್ವರೂಪಿಯಾದ ಪರಮೇಶ್ವರನದು. ಆ ಮಾಯಾಸಹಿತನಾದ ಪರಮೇಶ್ವರನೇ ಈಗ ಕಾಣುತ್ತಿರುವ ಪ್ರಪಂಚವು.

೩೦. ಈ ಪರಮೇಶ್ವರನಿಂದಲೇ ಬ್ರಹ್ಮ, ರುದ್ರ, ಇಂದ್ರ ಇವರೇ ಮೊದಲಾದವರೂ ಮತ್ತೂ ಸಮಸ್ತೇಂದ್ರಿಯಗಳಿಂದ ಕೂಡಿದ ಮಹಾಪ್ರಪಂಚವೂ ಜನಿಸಲ್ಪಟ್ಟಿದೆ.

೩೧. ಸರ್ವೇಶ್ವರನು ಸರ್ವಸಂಪತ್ತಿನಿಂದ ಕೂಡಿರುವವನು. ಮೋಕ್ಷಾರ್ಥಿಗಳೆಲ್ಲರೂ ಆಕಾಶಮಧ್ಯದಲ್ಲಿತೋರಿಬರುವ ಪರಮೇಶ್ವರನನ್ನೇ ಭಜಿಸಿ ಮೋಕ್ಷವನ್ನು ಸಂಪಾದಿಸುತ್ತಲಿರುವರು. ಅಂದರೆ ಆಕಾಶದಂತೆ ಸರ್ವೇಶ್ವರನು ಸರ್ವವ್ಯಾಪಿಯು ಎನ್ನಬಹುದು

೩೨. ಅಯ್ಯಾ ಬ್ರಹ್ಮನೇ! ಮೊದಲು ನಿನ್ನನ್ನು ಸೃಷ್ಟಿಸಿದವನು ಅವನೇ. ವೇದಗಳನ್ನು ನಿನಗೆ ಕೊಟ್ಟು ನಿನ್ನನ್ನು ಪರಮಜ್ಞಾನಿಯನ್ನಾಗಿ ಮಾಡಿರುವವನೂ ಆ ಲೋಕೇಶ್ವರನೇ. ಆ ಪರಮೇಶ್ವರನ ಅನುಗ್ರಹದಿಂದಲೇ ನೀನು ಪ್ರಜಾಸೃಷ್ಟಿಕರ್ತನೆನಿಸಿಕೊಂಡಿರುವೆ. ಈ ಪದವಿಯು ನಿನಗೆ ಒದಗಿರುವುದು ಆ ಪರಶಿವನಿಂದಲೇ.

ಏಕೋ ಬಹೂನಾಂ ಜಂತೂನಾಂ ನಿಷ್ಕ್ರಿಯಾಣಾಂ ಚ ಸತ್ಕ್ರಿಯಾಃ ।
ಯ ಏಕಂ ಬಹುಧಾ ಬೀಜಂ ಕರೋತಿ ಸ ಮಹೇಶ್ವರಃ ॥ ೩೩ ॥

ಜೀವೈರೇಭಿರಿಮಾನ್ ಲೋಕಾನ್ ಸರ್ವಾನೇಕೋ ಯ ಈಶತೇ ।
ಯ ಏಕೋ ಭಗವಾನ್ ರುದ್ರೋ ನ ದ್ವಿತೀಯೋಽಸ್ತಿ ಕಶ್ಚನ ॥ ೩೪ ॥

ಸದಾ ಜನಾನಾಂ ಹೃದಯೇ ಸಂನಿವಿಷ್ಟೋಽಪಿ ಯಃ ಪರೈಃ ।
ಅಲಕ್ಷ್ಯೋ ಲಕ್ಷಯನ್ ವಿಶ್ವಮಧಿತಿಷ್ಠತಿ ಸರ್ವದಾ ॥ ೩೫ ॥

ಯಸ್ತು ಕಾಲಾತ್ಮಯುಕ್ತಾನಿ ಕಾರಣಾನ್ಯಪಿ ಲೀಲಯಾ ।
ಅನಂತಶಕ್ತಿರೇಕಾತ್ಮಾ ಭಗವಾನಧಿತಿಷ್ಠತಿ ॥ ೩೬ ॥

ಯಸ್ಯ ಶಂಭೋಃ ಪರಾ ಶಕ್ತಿಃ ಭಾವಗಮ್ಯಾ ಮನೋಹರಾ ।
ನಿರ್ಗುಣಾ ಸ್ವಗುಣೈರೇವ ನಿಗೂಢಾ ನಿಷ್ಕಲಾ ಶಿವಾ ॥ ೩೭ ॥

---

೩೩. ಪರಮೇಶ್ವರನು ತಾನೊಬ್ಬನಾಗಿದ್ದರೂ, ವಿಧವಿಧವಾದ ಪ್ರಾಣಿಗಳಿಗೂ ಬೇರೆ ಬೇರೆ ರೂಪದಿಂದ ಆದಿಕಾರಣನಾಗಿ ಕಂಡುಬರುವನು. ಒಟ್ಟಿನಲ್ಲಿ ಸಕಲಕ್ರಿಯೆಗಳಿಗೂ ಆಶ್ರಯನು ಆತನೇ.

೩೪. ಅಸಂಖ್ಯಾತ ಪ್ರಾಣಿವರ್ಗದಿಂದ ತುಂಬಿರುವ ಈ ಲೋಕಗಳನ್ನು ಒಬ್ಬನೇ ಪರಮೇಶ್ವರನು ಸೃಷ್ಟಿಸ್ಥಿತಿಲಯಗಳಿಂದ ಆಳುತ್ತಿರುವನು. ಆ ರುದ್ರನನ್ನು ಬಿಟ್ಟರೆ ಮತ್ತೊಬ್ಬ ಅಷ್ಟುಸಮರ್ಥನು ದೊರೆಯಲಾರನು.

೩೫. ತಾನು ಸಮಸ್ತರ ಹೃದಯದಲ್ಲಿಯೂ ಅಡಗಿರುವನು. ಅಷ್ಟಾದರೂ ಮತ್ತೊಬ್ಬರಿಗೆ ಗೋಚರನಾಗಲಾರನು ತಾನುಮಾತ್ರ ಪ್ರಪಂಚವನ್ನೆಲ್ಲಾ ನೋಡುತ್ತಾ ಪ್ರಪಂಚದ ಸರ್ವಭಾಗದಲ್ಲಿ ವ್ಯಾಪಿಸಿರುವವನಾಗಿ ತೋರಿಬರುವನು.

೩೬. ಪ್ರಪಂಚದ ಬೆಳವಣಿಗೆಗೆ ಕಾಲರೂಪದಿಂದಲೂ, ಆತ್ಮರೂಪದಿಂದಲೂ, ತಾನು ಕಾರಣನಾಗಿರುವನು. ಅನಂತಶಕ್ತಿಸಂಪನ್ನನಾಗಿ, ಆತ್ಮರೂಪದಿಂದ ಕಾರ್ಯ ನಡೆಸುವನು. ಹೀಗೆ ಕಾರ್ಯಕಾರಣರೂಪನಾಗಿ ವಿರಾಜಿಸುತ್ತಿದ್ದಾನೆ.

೩೭. ಪರಮೇಶ್ವರನ ಶ್ರೇಷ್ಠವಾದ ಶಕ್ತಿಯು, ಮನುಷ್ಯರ ಭಾವನೆಗೆ ಮಾತ್ರ ಗೋಚರವಾಗುತ್ತದೆ. ಆ ಶಿವನ ಶಕ್ತಿಯನ್ನು ಅನುಸಂಧಾನಮಾಡುತ್ತಲಿದ್ದರೆ, ಭಕ್ತನ ಮನಸ್ಸು ಬಹಳವಾಗಿ ಸಂತೋಷಗೊಳ್ಳುವುದು. ಇಷ್ಟಾದರೂ ವ್ಯವಹಾರದಲ್ಲಿ ಕೆಲವು ಗುಣಗಳು ಶಿವನಲ್ಲಿ ತೋರಿ ಬಂದರೂ, ಸ್ವಯಂ ಶಿವಶಕ್ತಿಯು ನಿರ್ಗುಣವಾದದ್ದು ಗೂಢತಮವಾದದ್ದು. ಕಲಾರಹಿತವಾಗಿ ಮಂಗಳಕರವಾದದ್ದು.

ಏಷ ದೇವೋ ಮಹಾದೇವೋ ವಿಜ್ಞೇಯಸ್ತು ಸರ್ವದಾ ಜನೈಃ ।
ನ ತಸ್ಯ ಪರಮಂ ಕಿಂಚಿತ್ ಪದಂ ಸಮಧಿಗಮ್ಯತೇ ॥ ೩೮ ॥

ಅಯಮಾದಿರನಾದ್ಯಂತಃ ಸ್ವಭಾವಾದೇವ ನಿರ್ಮಲಃ ।
ಅನಂತಃ ಪರಿಪೂರ್ಣಶ್ಚ ಸ್ವೇಚ್ಛಾಧೀನಶ್ಚರಾಚರಃ ॥ ೩೯ ॥

ಉತ್ತರೋತ್ತರಭೂತಾನಾ ಮುತ್ತರಶ್ಚ ನಿರುತ್ತರಃ ।
ಅನಂತಮಹಿಮಾ ಭೂಮಿರಪರಿಚ್ಛಿನ್ನವೈಭವಃ ॥ ೪೦ ॥

ಅನೇನ ಚಿತ್ರಕೃತ್ಯೇನ ಪ್ರಥಮಂ ಸೃಜ್ಯತೇ ಜಗತ್ ।
ಅಂತಕಾಲೇ ಪುನಶ್ಚೇದಂ ಅಸ್ಮಿನ್ ಪ್ರಲಯಮೇಷ್ಯತಿ ॥ ೪೧ ॥

ದೃಷ್ಟಶ್ಚ ಪತಿತೈರ್ಮೂರ್ಖೈಃ ದುರ್ಜನೈರಪಿ ಕುತ್ಸಿತೈಃ ।
ಭಕ್ತೈರಂತರ್ಬಹಿಶ್ಚಾಪಿ ಪೂಜ್ಯಃ ಸಂಭಾವ್ಯ ಏವ ಚ ॥ ೪೨ ॥

---

೩೮. ಈ ಮಹೇಶ್ವರನೇ ದೇವಶ್ರೇಷ್ಠನೆಂದು ಸರ್ವರೂ ತಿಳಿಯಬೇಕು. ಈ ಮಹೇಶ್ವರನ ನಿಜಾಂಶವನ್ನು ಸ್ವಲ್ಪಮಟ್ಟಿಗಾದರೂ ತಿಳಿಯುವುದು. ಅತ್ಯಂತ ಕಷ್ಟವಾದ ಕೆಲಸ. ಈ ಕಷ್ಟಸಾಧ್ಯವಾದ ಕಾರ್ಯವನ್ನು ಸ್ವಲ್ಪಮಟ್ಟಿಗಾದರೂ ಸಾಧಿಸಲು ಮನುಷ್ಯನಿಗೆ ಸದ್ಭಾವನೆ ಇರಬೇಕು.

೩೯. ಈ ಮಹೇಶ್ವರನು ಆದಿ ಪುರುಷನು. ಆದ್ಯಂತರಹಿತನಾದವನು. ನಿರ್ಮಲ ಸ್ವಭಾವದವನು. ಅನಂತಗುಣಪರಿಪೂರ್ಣನು. ಚರಾಚರಾತ್ಮಕವಾದ ಪ್ರಪಂಚವನ್ನು ಸ್ವೇಚ್ಛೆಯಾಗಿ ನಡೆಸತಕ್ಕವನು.

೪೦. ಸಮಸ್ತ ಪ್ರಾಣಿಗಳಿಗೂ ಪರಮೇಶ್ವರನೇ ದೊಡ್ಡವನು. ಮತ್ತೊಬ್ಬನಿಲ್ಲ. ಸಮಸ್ತಮಹಿಮೆಗಳಿಗೂ ಆಶ್ರಯಸ್ಥಾನನು. ಪರಶಿವನ ವೈಭವವನ್ನು ಇಷ್ಟೇ ಎಂದು ನಿರ್ಧರಿಸಲು ಸಾಧ್ಯವಲ್ಲ.

೪೧. ಆಶ್ಚರ್ಯಕಾರಿಯಾದ ಪರಮೇಶ್ವರನು ಮೊದಲು ಜಗತ್ತನ್ನು ಸೃಷ್ಟಿ ಮಾಡುವನು. ಕೊನೆಯಲ್ಲಿ ಅದೇ ಜಗತ್ತನ್ನು ತನ್ನಲ್ಲಿಯೇ ಅಡಗಿಸಿಕೊಳ್ಳುವನು. ಆ ವಿಧವಾದ ಲಯವೇ ಪ್ರಲಯವೆನಿಸುವುದು.

೪೨. ಆ ಪರಶಿವನ ಭಕ್ತರು ಮೂಢರಾಗಿದ್ದರೂ, ದುಷ್ಟರಾಗಿದ್ದರೂ, ಕುಯುಕ್ತಿಯುಳ್ಳವರಾಗಿದ್ದರೂ, ಅವರಿಗೆ ಸುಲಭವಾಗಿ ದೃಶ್ಯನಾಗುವನು. ಅಂಥ ಭಕ್ತರು ಈ ಮಹಾಮಹಿಮನನ್ನು ಅಂತರಂಗ ಬಹಿರಂಗಗಳಲ್ಲಿ ಸರ್ವದಾ ಧ್ಯಾನಿಸುತ್ತಿರುವರು.

ತದೀಯಂ ತ್ರಿವಿಧಂ ರೂಪಂ ಸ್ಥೂಲಂ ಸೂಕ್ಷ್ಮಂ ತತಃ ಪರಂ ।
ಅಸ್ಮದಾದ್ಯೈಃಸುರೈರ್ದೃಶ್ಯಂ ಸ್ಥೂಲಂ ಸೂಕ್ಷ್ಮಂ ತು ಯೋಗಿಭಿಃ ॥ ೪೩ ॥

ತತಃ ಪರಂ ತು ಯನ್ನಿತ್ಯಂ ಜ್ಞಾನಮಾನಂದಮವ್ಯಯಂ ।
ತನ್ನಿಷ್ಠೈಸ್ತತ್ಪರೈರ್ಭಕ್ತೈಃ ದೃಶ್ಯೇತ ವ್ರತಮಾಸ್ಥಿತೈಃ ॥ ೪೪ ॥

ಬಹುನಾತ್ರ ಕಿಮುಕ್ತೇನ ಬ್ರಹ್ಮನ್ ಸರ್ವೇಶ್ವರೇ ಶಿವೇ ।
ಭಕ್ತಿರೇವ ಸದಾ ಕಾರ್ಯಾ ಯಯಾ ಯುಕ್ತೋ ವಿಮುಚ್ಯತೇ ॥ ೪೫ ॥

ಪ್ರಸಾದಾದೇವ ಸಾ ಭಕ್ತಿಃ ಪ್ರಸಾದೋ ಭಕ್ತಿಸಂಭವಃ ।
ಯಥೇಹಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ ॥ ೪೬ ॥

---

೪೩. ಪರಮೇಶ್ವರನ ರೂಪವು ಸ್ಥೂಲ, ಸೂಕ್ಷ್ಮ, ಪರ, ಎಂದು ಮೂರು ವಿಧಗಳಾಗಿವೆ. ನಮ್ಮಂತಹ ದೇವತೆಗಳಿಂದ ನೋಡಲ್ಪಡುವುದು ಆತನ ಸ್ಥೂಲರೂಪವು ಮಾತ್ರ. ಯೋಗಿಗಳು ಪರಶಿವನ ಸೂಕ್ಷ್ಮರೂಪವನ್ನು ನೋಡಬಲ್ಲರು.

೪೪. ಮೂರನೆಯದಾದ ಪರರೂಪವು ನಿತ್ಯವಾದದ್ದು ಮತ್ತು ಜ್ಞಾನಾನಂದಮಯವಾದದ್ದೇ. ಅದನ್ನು ಕೇವಲ ಜ್ಞಾನನಿಷ್ಠರಾದ, ವ್ರತಶಾಲಿಗಳಾದ ಭಕ್ತರು ಮಾತ್ರ ಕಾಣುವರು. ಇತರರಿಗೆ ಎಂದೂ ಗೋಚರವಾಗಲಾರದು.

೪೫. ಪರಬ್ರಹ್ಮನೇ. ಮಹೇಶ್ವರನ ವಿಷಯದಲ್ಲಿ ಹೆಚ್ಚು ಹೇಳತಕ್ಕದ್ದೇನು ? ಮುಖ್ಯವಾಗಿ ಆತನನ್ನು ಭಕ್ತಿಯಿಂದ ಭಜಿಸಬೇಕು. ಆ ಭಕ್ತಿಯಿಂದಲೇ ನಾವು ಪರಮೇಶ್ವರನ ಅನುಗ್ರಹವನ್ನು ಸಂಪಾದಿಸಬೇಕು. ಇಲ್ಲಿನವರೆಗೆ ಮುಕ್ತರಾಗಿರುವವರೆಲ್ಲರೂ ಶಿವಭಕ್ತಿಯ ಪ್ರಭಾವದಿಂದಲೇ.

೪೬. ಈಶ್ವರಾನುಗ್ರಹದಿಂದಲೇ ಭಕ್ತಿಹುಟ್ಟತಕ್ಕದ್ದು. ಭಕ್ತಿಯಿಂದಲೇ ಈಶ್ವರಾನುಗ್ರಹವು ಲಭಿಸುವುದು. ಮೊಳಕೆಯಿಂದಲೇ ಬೀಜ, ಬೀಜದಿಂದಲೇ ಮೊಳಕೆ, ಎಂಬ ಬೀಜ ವೃಕ್ಷನ್ಯಾಯದಂತೆ ಭಕ್ತಿ ಪ್ರಸಾದಗಳು ಕಂಡು ಬರುತ್ತಿವೆ.

ತಸ್ಯ ಪ್ರಸಾದಲೇಶೇನ ಪಶೋಃ ಪಾಶಪರಿಕ್ಷಯಃ ।
ತಸ್ಮಾತ್ಪಶುಪತಿಶ್ಶಂಭುಃ ಪಶವಸ್ತ್ವಸ್ಮದಾದಯಃ　　॥ ೪೭ ॥

ಸರ್ವೇಷಾಂ ಮುಕ್ತಿದಃ ಶಂಭುಃ ತೇಷಾಂ ಭಾವಾನುರೂಪತಃ ।
ಗರ್ಭಸ್ಥೋ ಮುಚ್ಯತೇ ಕಶ್ಚಿಜ್ಜಾಯಮಾನಸ್ತಥಾಪರಃ　　॥ ೪೮ ॥

ಬಾಲೋ ವಾ ತರುಣೋವಾಽಥ ವೃದ್ಧೋ ವಾ ಮುಚ್ಯತೇ ಪರಃ ।
ತಿರ್ಯಗ್ಯೋನಿಗತಃ ಕಶ್ಚಿತ್ ಮುಚ್ಯತೇ ನಾರಕೇ ಪರಃ　　॥ ೪೯ ॥

ಅಪರಸ್ತೂದರಪ್ರಾಪ್ತೋ ಮುಚ್ಯತೇ ಸ್ವಪದಕ್ಷಯಾತ್ ।
ಕಶ್ಚಿತ್ ಕ್ಷೀಣಪದೋ ಭೂತ್ವಾ ಪುನರಾವರ್ತ್ಯ ಮುಚ್ಯತೇ　　॥ ೫೦ ॥

---

೪೭. ಆ ಶಂಕರನ ಅನುಗ್ರಹ ಲೇಶದಿಂದಲೇ ಪಶುಗಳ ಬಂಧನವೆಲ್ಲಾ ನಾಶವಾಗುವುದು. ನಾವೇ ಪಶುಗಳು. ನಮ್ಮ ಬಂಧನವನ್ನು ನಿವಾರಿಸುವಂತಹ ಪರಮೇಶ್ವರನೇ ಪಶುಪತಿಯು. ಪಾಶಬದ್ಧರೆಲ್ಲರೂ ಪಶುಗಳೇ. ಇಂತಹ ಪಶುಗಳಿಗೆ ಶಿವಭಕ್ತಿಯೆಂಬುದೊಂದೇ ಪಾಪಮೋಚಕವಾಗತಕ್ಕದ್ದು.

೪೮. ಭಕ್ತರು ಅವರವರ ಭಾವಾನುಸಾರವಾಗಿ ಮೋಕ್ಷವನ್ನು ಪಡೆಯುವರು ಕೆಲವರು ಭಾವಾವೇಶದಿಂದ ಗರ್ಭದಲ್ಲಿಯೇ ಮುಕ್ತರಾಗುವರು. ಮತ್ತೆ ಕೆಲವರು ಜನ್ಮತಾಳಿ ಮೋಕ್ಷಕ್ಕೆ ಹೋಗುವರು. ಅಂತೂ ಸಮಸ್ತರಿಗೂ ಮೋಕ್ಷವನ್ನು ಕೊಡುವವನು ಆ ಪರಮೇಶ್ವರನು.

೪೯. ಕೆಲವರು ಭಕ್ತಿ ಭಾವವನ್ನು ಹೊಂದಿ, ಬಾಲ್ಯದಲ್ಲಿಯೇ, ಕೆಲವರು ತಾರುಣ್ಯದಲ್ಲಿ ಮತ್ತೆ ಕೆಲವರು ವಾರ್ಧಕ್ಯದಲ್ಲಿ ಶಿವಪದವನ್ನು ಹೊಂದುವರು. ಪಾಪಶೇಷದಿಂದ ನರಕವಾಸವನ್ನು ಅನುಭವಿಸಿ, ಪುನಃ ತಿರ್ಯಗ್ಜಂತುವಾಗಿ ಹುಟ್ಟಿದರೂ ಅಲ್ಲಿಯೂ ಭಕ್ತಿಯಿಂದ ವರ್ತಿಸಿದರೆ, ಶೀಘ್ರವಾಗಿ ಅಲ್ಲಿಂದಲೇ ಮೋಕ್ಷವನ್ನು ಸಂಪಾದಿಸಬಹುದು.

೫೦. ಮತ್ತೆ ಕೆಲವು ಜಂತುಗಳು ಉದರದಲ್ಲಿಯೇ ಇದ್ದು ಪರಮೇಶ್ವರನ ಅನುಗ್ರಹ ವಿಶೇಷದಿಂದ ಮೋಕ್ಷವನ್ನು ಪಡೆಯುವುವು. ಇನ್ನೂ ಕೆಲವು ಜನ್ಮಜನ್ಮಾಂತರಗಳಲ್ಲಿ ಪಾಪವನ್ನು ಕಳೆದುಕೊಂಡು, ಪುನಃ ಮೋಕ್ಷವನ್ನು ಹೊಂದುವುವು.

ಕಶ್ಚಿದೂರ್ಧ್ವಗತಸ್ತಸ್ಮಿನ್ ಸ್ಥಿತ್ವಾ ಸ್ಥಿತ್ವಾ ವಿಮುಚ್ಯತೇ ।
ತಸ್ಮಾನ್ನೈಕಪ್ರಕಾರೇಣ ನರಾಣಾಂ ಮುಕ್ತಿರಿಷ್ಯತೇ ॥ ೫೧ ॥

ಜ್ಞಾನಭಾವಾನುರೂಪೇಣ ಪ್ರಸಾದೇನೈವ ನಿರ್ವೃತಿಃ ।
ತ್ವಮೇಕಾ ಭಗವನ್ಮೂರ್ತಿಃ ಅನ್ಯಾ ನಾರಾಯಣೀ ಪರಾ ॥ ೫೨ ॥

ರೌದ್ರೀ ತೃತೀಯಾ ಕಥಿತಾ ಜಗತ್ಸಂಹಾರಕಾರಿಣೀ ।
ಏತಾಸಾಂ ಪ್ರೇರಕಶ್ಶಂಭುಃ ಸ್ವೇ ಸ್ವೇ ಕಾರ್ಯೇ ಚತುರ್ಮುಖ ॥ ೫೩ ॥

ನಿರ್ಗುಣೋಽಪಿ ಗುಣಾಧ್ಯಕ್ಷಃ ಸ್ವತಂತ್ರೈಶ್ವರ್ಯವಿಗ್ರಹಃ ।
ತಮೀಶ್ವರಂ ಮಹಾದೇವಂ ನ ಪಶ್ಯಸಿ ಕಥಂ ವಿಧೇ ॥ ೫೪ ॥

---

೫೧. ಇನ್ನೂ ಕೆಲವರು ಊರ್ಧ್ವ ಲೋಕವನ್ನು ಹೊಂದಿಯೂ, ಅಲ್ಲೂ ಶಾಂತಿಯನ್ನು ಪಡೆಯದೆ ಶಿವಾನುಗ್ರಹದಿಂದ ಶಿವನಸ್ಥಾನವನ್ನು ಹೊಂದುವರು. ಆದ್ದರಿಂದ ಮನುಷ್ಯರಿಗೆ ನಾನಾ ರೀತಿಯಿಂದ ಮುಕ್ತಿಕೊಡುವವನು ಪರಮೇಶ್ವರನೇ ಹೊರತು ಮತ್ತೆ ಬೇರೆಯಿಲ್ಲ.

೫೨. ಜ್ಞಾನ ಮತ್ತು ಅನುಸಂಧಾನ ಇವುಗಳಿಗನುಸಾರವಾಗಿ ಮನುಷ್ಯನು ಮೋಕ್ಷಸುಖವನ್ನನುಭವಿಸುವನು. ಅಯ್ಯಾ ಬ್ರಹ್ಮನೇ ! ಭಗವಂತನ ಮೂರ್ತಿಗಳಲ್ಲಿ ನೀನು ಒಬ್ಬನು, ಮತ್ತೊಬ್ಬನು ನಾರಾಯಣನಾದ ನಾನು.

೫೩. ಮೂರನೆಯ ಶಕ್ತಿಯೇ ಶಿವಶಕ್ತಿಯು. ಜಗತ್ತನ್ನು ನಾಶಮಾಡುವ ಶಕ್ತಿಯುಳ್ಳದ್ದು. ಈ ಶಕ್ತಿತ್ರಯಗಳಿಗೂ ಪ್ರೇರಕನಾಗಿ, ಅವುಗಳ ಕೆಲಸವನ್ನು ಅವುಗಳು ನಡೆಸುವಂತೆ ನೋಡಿ ಕೊಳ್ಳುತ್ತಲಿರುವ ಸ್ವಾಮಿಯೇ ಮಹಾದೇವನು.

೫೪. ಮಹೇಶ್ವರನು ಗುಣರಹಿತನಾಗಿದ್ದರೂ, ಗುಣಗಳಿಗೆ ಒಡೆಯನು ಐಶ್ವರ್ಯಸಿಧಿಯು. ಸ್ವೇಚ್ಛಾರೂಪಿಯು. ಇಂತಹ ಮಹಾಪ್ರಭುವಾದ ಈಶ್ವರನನ್ನು ನೀನು ಸರಿಯಾಗಿ ತಿಳಿದಿಲ್ಲ.

ದಿವ್ಯಂ ದದಾಮಿ ತೇ ಚಕ್ಷುಃ ಯೇನ ಪಶ್ಯಸಿ ತಂ ಶಿವಂ ।
ವಿಷ್ಣೋರ್ಭಗವತೋ ಬ್ರಹ್ಮಾ ದಿವ್ಯಂ ಚಕ್ಷುರವಾಪ ತು ॥ ೫೫ ॥

ಅಪಶ್ಯತ್ಸ ಮಹಾದೇವಂ ಪ್ರತ್ಯಕ್ಷಂ ಪುರತಃ ಸ್ಥಿತಂ ।
ಬ್ರಹ್ಮಾ ಲಬ್ಧ್ವಾ ಪರಂ ಜ್ಞಾನಂ ಐಶ್ವರಂ ನಿರ್ಗುಣಂ ಪರಂ ॥ ೫೬ ॥

ತಮೇವ ಶರಣಂ ಗತ್ವಾ ಸಂಸ್ತುತ್ಯ ವಿವಿಧೈಃ ಸ್ತವೈಃ ।
ಪ್ರೀತೋ ಭೂತ್ವಾ ಮಹಾದೇವಶ್ಚತುರ್ಮುಖಮಥಾಬ್ರವೀತ್ ॥ ೫೭ ॥

॥ ಈಶ್ವರ ಉವಾಚ ॥

ಸ್ತೋತ್ರೈ ರ್ಬಹುವಿಧೈರ್ಭಕ್ತ್ಯಾ ತೋಷಿತೋಽಹಂ ವಿಧೇ ತ್ವಯಾ ।
ಮುಕ್ತೋ ಭವಿಷ್ಯಸಿ ಕ್ಷಿಪ್ರಂ ಮತ್ಸಮಶ್ಚ ನ ಸಂಶಯಃ ॥ ೫೮ ॥

---

೫೫. ಆದ್ದರಿಂದ ಎಲೈ ಬ್ರಹ್ಮನೇ! ನಿನಗೆ ಪರಮೇಶ್ವರನು ಗೋಚರಿಸುವಂತಹ ದಿವ್ಯದೃಷ್ಟಿಯನ್ನು ಕೊಡುವೆನು. ಇದರಿಂದ ಪರಶಿವನ ಮಹಿಮೆಯನ್ನು ನೀನು ಕಾಣುವೆ." ಎಂದು ಮಹಾವಿಷ್ಣುವು ಪರಬ್ರಹ್ಮನಿಗೆ ದಿವ್ಯಚಕ್ಷುಸ್ಸನ್ನು ದಯಪಾಲಿಸಿದನು.

೫೬. ಈ ಚಕ್ಷುಸ್ಸಿನ ಪ್ರಭಾವದಿಂದ ಪರಬ್ರಹ್ಮನಿಗೆ ಪರಮೇಶ್ವರನ ಜ್ಞಾನವು ಸಂಪೂರ್ಣವಾಗಿ ಉಂಟಾಯಿತು. ಪರಶಿವನು ನಿರ್ಗುಣನು, ಜ್ಞಾನಸ್ವರೂಪಿಯು ಎಂಬ ಅರಿವುಂಟಾಯಿತು. ಕೂಡಲೇ ಪರಶಿವನು ಬ್ರಹ್ಮನಿಗೆ ಪ್ರತ್ಯಕ್ಷನಾದನು.

೫೭. ಒಡನೆಯೇ ಪರಬ್ರಹ್ಮನು ನಾನಾವಿಧವಾದ ಸ್ತೋತ್ರಗಳಿಂದ ಮಹಾದೇವನನ್ನು ಸ್ತುತಿಸಿದನು. ಅದರಿಂದ ಪರಮೇಶ್ವರನು ತುಷ್ಟನಾಗಿ ಬ್ರಹ್ಮನನ್ನು ಕುರಿತು ಹೀಗೆ ಹೇಳಿದನು.

೫೮. " ಓ ಬ್ರಹ್ಮನೇ ನಿನ್ನ ಬಹುವಿಧವಾದ ಭಕ್ತಿಪೂರ್ವಕಸ್ತೋತ್ರಗಳಿಂದ ನಾನು ತುಷ್ಟನಾಗಿರುವೆನು. ಇನ್ನು ನೀನೂ ಸಹ ಮುಕ್ತನಾಗಿ, ಮಹಿಮೆಯಲ್ಲಿ ನನ್ನ ಸಮನಾಗಿ ಆಗುವೆ.

ಮಯ್ಯೈವ ಸೃಷ್ಟಃ ಸೃಷ್ಟ್ಯರ್ಥಂ ತ್ವಮೇವ ಚ ಜನಾರ್ದನಃ ।
ವರಂ ದದಾಮಿ ತೇ ಬ್ರಹ್ಮನ್ ವರಯಸ್ವ ಯಥೇಪ್ಸಿತಂ ॥ ೫೯ ॥

ಏವಂ ಶಂಭೋರ್ನಿಗದಿತಂ ಶ್ರುತ್ವಾ ಚೈವ ಪಿತಾಮಹಃ ।
ವಿಷ್ಣುಂ ನಿರೀಕ್ಷ್ಯ ಪುರತಃ ಸ್ಥಿತಮಾಹ ಮಹೇಶ್ವರಂ ॥ ೬೦ ॥

॥ ಬ್ರಹ್ಮೋವಾಚ ॥

ಭಗವನ್ ದೇವದೇವೇಶ ಸರ್ವಜ್ಞ ಗಿರಿಜಾಪತೇ ।
ತ್ವಾಮೇವ ಪುತ್ರಮಿಚ್ಛಾಮಿ ತ್ವಯಾ ವಾ ಸದೃಶಂ ಸುತಂ ॥ ೬೧ ॥

ತ್ವನ್ಮಾಯಾಮೋಹಿತಶ್ಶಂಭೋ ನ ವೇದ್ಮಿ ತ್ವಾಂ ಪರಂ ಶಿವಂ ।
ನಮಾಮಿ ತವ ಪಾದಾಬ್ಜಂ ಯೋಗಿನಾಂ ಭವಭೇಷಜಂ ॥ ೬೨ ॥

---

೫೯. ಬ್ರಹ್ಮನೇ, ಜಗತ್ತನ್ನು ಸೃಷ್ಟಿಸಲು, ನಿನ್ನನ್ನೂ ನಾರಾಯಣನನ್ನೂ, ನಾನೇ ಮೊದಲು ಸೃಷ್ಟಿಮಾಡಿದೆನು. ಈಗ ನಿನಗೆ ಮತ್ತೆ ವರಕೊಡುವೆನು. ಬೇಕಾದ ವರವನ್ನು ಕೇಳಿಕೋ,"

೬೦. ಎಂದು ಹೇಳಿದ ಮಹೇಶ್ವರನ ಮಾತನ್ನು ಬ್ರಹ್ಮನು ಕೇಳಿ, ಎದುರಿನಲ್ಲಿ ನಿಂತಿದ್ದ ಮಹಾವಿಷ್ಣುವನ್ನು ನೋಡುತ್ತಾ ಪರಮೇಶ್ವರನೊಡನೆ ಹೀಗೆ ಹೇಳಿಕೊಂಡನು.

೬೧. ದೇವದೇವನಾದ ಪರಮೇಶ್ವರನೇ, ಸರ್ವಜ್ಞನೇ, ಪಾರ್ವತೀಪತಿಯೇ, ನನಗೆ ನೀನು ಪುತ್ರನಂತಾಗಬೇಕು. ಅಥವಾ ನಿನಗೆ ಸಮಾನನಾದ ಮಗನನ್ನಾದರೂ ನಾನು ಹೊಂದಬೇಕು. ಅಂತಹ ವರವನ್ನು ನನಗೆ ದಯಪಾಲಿಸು.

೬೨. ಶಂಭುವೇ, ನಿನ್ನ ಮಾಯೆಗೆ ನಾನು ಸಿಕ್ಕಿ, ನಿನ್ನನ್ನೇ ಸರಿಯಾಗಿ ಅರಿಯದಂದತೆ ಆಗಿರುವೆನು. ಯೋಗಿಗಳ ಆರಾಧ್ಯದೇವತೆಯಾಗಿ, ಅವರ ದುಃಖಗಳನ್ನು ನಿವಾರಿಸು ವಂತಹ ನಿನ್ನ ಪಾದ ಕಮಲಗಳಿಗೆ ನಾನು ಸಾಷ್ಟಾಂಗನಮಸ್ಕಾರ ಮಾಡುತ್ತೇನೆ.

ಶ್ರುತ್ವಾ ವಿರಂಚೇರ್ವಚನಂ ದೇವದೇವಃ ಪಿನಾಕಧೃಕ್ ।
ಬ್ರಹ್ಮಾಣಮಬ್ರವೀತ್ಪುತ್ರಂ ಸಮಾಲೋಕ್ಯಾಥ ಚಕ್ರಿಣಂ ॥ ೬೩ ॥

ಪ್ರಾರ್ಥಿತಂ ಯತ್ತ್ವಯಾ ಬ್ರಹ್ಮನ್ ತತ್ಕರಿಷ್ಯಾಮಿ ಪುತ್ರಕ ।
ಅಹಮಂಶೇನ ಭವಿತಾ ಪುತ್ರಸ್ತವ ಪಿತಾಮಹ ॥ ೬೪ ॥

ಜ್ಞಾನಂ ಮದ್ವಿಷಯಂ ಕ್ಷಿಪ್ರಂ ಭವಿಷ್ಯತಿ ತವಾನಘ ।
ಸೃಜ ತ್ವಂ ಮತ್ಪ್ರಸಾದೇನ ಚರಾಚರಮಿದಂ ಜಗತ್ ॥ ೬೫ ॥

ಏಷ ಯೋಗೀಶ್ವರಃ ಶಾರ್ಙ್ಗೀ ಮಮೈವಾಂಶೋ ನ ಸಂಶಯಃ ।
ಸಾಹಾಯ್ಯೇ ಭವಿತಾ ಬ್ರಹ್ಮನ್ ಮಮಾದೇಶಾತ್ತವಾನಘ ॥ ೬೬ ॥

ಏವಂ ದತ್ವಾ ವರಂ ಶಂಭುಃ ಬ್ರಹ್ಮಣೇ ದ್ವಿಜಸತ್ತಮಾಃ ।
ಅಥಾಬ್ರವೀತ್ ಹೃಷೀಕೇಶಂ ಪ್ರಾಂಜಲಿಂ ಪುರತಃ ಸ್ಥಿತಂ ॥ ೬೭ ॥

---

೬೩. ಹೀಗೆಂದು ಹೇಳಿದ ಬ್ರಹ್ಮನ ಮಾತುಗಳನ್ನು ಪಿನಾಕಪಾಣಿಯಾದ ಶಿವನುಕೇಳಿ ವಿಷ್ಣುವನ್ನು ನೋಡುತ್ತಾ ತನ್ನ ಪುತ್ರನಾದ ಬ್ರಹ್ಮನೊಡನೆ ಹೀಗೆಂದನು.

೬೪. ಅಯ್ಯಾ ಬ್ರಹ್ಮನೇ, ನಿನ್ನ ಪ್ರಾರ್ಥನೆಯನ್ನು ನಾನು ಈಗ ನೆರವೇರಿಸುವೆನು. ಒಂದು ಅಂಶದಿಂದ ನಾನೇ ನಿನ್ನ ಮಗನಾಗಿ ಜನಿಸುವೆನು. ಸಂಶಯ ಪಡಬೇಡ

೬೫. ಅಲ್ಲದೆ ನಿನಗೆ ಜಾಗ್ರತೆಯಾಗಿ ನನ್ನ ವಿಷಯವೆಲ್ಲವೂ ತಿಳಿದು ಬರುವುದು. ನೀನು ದಿವ್ಯಜ್ಞಾನಿಯಾಗುವೆ. ನನ್ನ ಅನುಗ್ರಹದಿಂದಲೇ ನೀನು ಈ ಚರಾಚರಾತ್ಮಕವಾದ ಜಗತ್ತನ್ನು ಸೃಷ್ಟಿಮಾಡುವವನಾಗು.

೬೬. ಈ ಯೋಗೀಶ್ವರನಾದ ಮಹಾವಿಷ್ಣುವೂ ಸಹ ನನ್ನ ಒಂದಂಶದಿಂದ ಉದ್ಭವಿಸಿದನು. ಇದರಲ್ಲಿ ಸಂಶಯ ಪಡಬೇಡ. ನನ್ನ ಅಪ್ಪಣೆಯಂತೆ ಈ ವಿಷ್ಣುವೂ ಸಹ ನಿನ್ನ ಸೃಷ್ಟಿಕಾರ್ಯಕ್ಕೆ ನೆರವಾಗುವನು.

೬೭. ಹೀಗೆ ಶಂಭುವು ಬ್ರಹ್ಮನಿಗೆ ವರವನ್ನು ದಯಪಾಲಿಸಿ, ಅಂಜಲಿಬದ್ಧನಾಗಿ ನಿಂತಿದ್ದ ವಿಷ್ಣುವಿನೊಡನೆ ಹೀಗೆ ಮಾತನಾಡಿದನು.

ವರಂ ವರಯ ದಾಸ್ಯಾಮಿ ತವ ನಾರಾಯಣಾವ್ಯಯ ।
ನಾವಾಭ್ಯಾಂ ವಿದ್ಯತೇ ಭೇದೋ ಮಚ್ಛಕ್ತಿಸ್ತ್ವಂ ನ ಸಂಶಯಃ ॥ ೬೮ ॥

ತ್ವನ್ಮಯಂ ಮನ್ಮಯಂ ಸರ್ವಮವ್ಯಕ್ತಂ ಪುರುಷಾತ್ಮಕಂ ।
ಜ್ಞಾನಜ್ಞೇಯಾತ್ಮಕಂ ವಿಶ್ವಂ ತ್ವನ್ಮಯಂ ಮನ್ಮಯಂ ಹರೇ ॥ ೬೯ ॥

ಜ್ಞಾತಾಽಹಂ ಜ್ಞಾನರೂಪಸ್ತ್ವಂ ಮಂತಾಽಹಂ ತ್ವಂ ಮತಿರ್ಹರೇ ।
ಪ್ರಕೃತಿಸ್ತ್ವಂ ಸುರಶ್ರೇಷ್ಠ ಪುರುಷೋಽಹಂ ನ ಸಂಶಯಃ ॥ ೭೦ ॥

ತ್ವಂ ಚಂದ್ರಮಾ ಅಹಂ ಸೂರ್ಯಃ ಶರ್ವರೀ ತ್ವಮಹಂ ದಿನಂ ।
ತ್ವಮೇವ ಮಾಯಾ ವಿಶ್ವಸ್ಯ ಮಾಯಾಹಂ ಪರಮಾ ವಿಭೋ ॥ ೭೧ ॥

ಏವಂ ಶಂಭೋರ್ವಚಃ ಶ್ರುತ್ವಾ ವಾಸುದೇವೋ ನಿರಂಜನಃ ।
ಅಬ್ರವೀತ್ಪರಮಾತ್ಮಾನಂ ಮಹಾದೇವಂ ದ್ವಿಜೋತ್ತಮಾಃ ॥ ೭೨ ॥

---

೬೮. ಅನಾದಿಯಾಗಿ, ನಾಶರಹಿತನಾಗಿರುವ ನಾರಾಯಣನೇ, ನೀನೂ ಬೇಕಾದ ವರವನ್ನು ಕೇಳಿಕೋ. ನನಗೂ ನಿನಗೂ ಭೇದವಿಲ್ಲ. ನೀನು ನನ್ನ ಶಕ್ತಿಯು.

೬೯. ಜಗತ್ತಿನಲ್ಲಿ ವಿಷ್ಣುಮಯವಾದದ್ದೆಲ್ಲಾ ಶಿವಮಯವು. ಶಿವಮಯವೆಲ್ಲಾ ವಿಷ್ಣುಮಯ. ಎರಡೂ ಅವ್ಯಕ್ತ ಮತ್ತು ಪುರುಷಗಳೇ. ಜ್ಞಾನಜ್ಞೇಯರೂಪವಾದ ಈ ಜಗತ್ತೆಲ್ಲವೂ ನಿನ್ನಲ್ಲಿಯೂ, ನನ್ನಲ್ಲಿಯೂ, ಭಾಸಮಾನವಾಗುತ್ತಿದೆ.

೭೦. ಜ್ಞಾನಾಶ್ರಯನು ನಾನಾದರೆ ಜ್ಞಾನಸ್ವರೂಪನು ನೀನು. ಮನಸ್ಸುಳ್ಳವನು ನಾನಾದರೆ ಮನಸ್ಸೇ ನೀನು. ದೇವಶ್ರೇಷ್ಠನಾದ ವಿಷ್ಣುವೇ! ನೀನು ಪ್ರಕೃತಿ, ನಾನು ಪುರುಷ, ಅಂತೂ ನಮ್ಮಿಬ್ಬರ ವಿಕಾರವೇ ಈ ಜಗತ್ತು. ಇದರಲ್ಲಿ ಸಂಶಯವಿಲ್ಲ.

೭೧. ನೀನು ಚಂದ್ರ, ನಾನು ಸೂರ್ಯ, ನೀನು ರಾತ್ರಿಯಂತೆ, ನಾನು ಹಗಲಿನಂತೆ. ನೀನು ಲೋಕದಲ್ಲಿ ಒಂದುಮಾಯೆಯನ್ನು ಬೀರಿದರೆ ಅದೇ ಮಾಯೆಗೆ ನಾನು ಸಿಕ್ಕುವೆನು. ನನ್ನ ಮಾಯೆಗೆ ನೀನೂ ಅಧೀನನಾಗುವೆ.

೭೨. ಹೀಗೆ ಹೇಳಿದ ಪರಮೇಶ್ವರನ ಮಾತುಗಳನ್ನು ಕೇಳಿ, ಮಹಾವಿಷ್ಣುವು ಪರಮಾತ್ಮನಾದ ಮಹಾದೇವನನ್ನು ಕುರಿತು ಹೀಗೆ ಹೇಳಿದನು.

ನಿಶ್ಚಲಾ ತ್ವಯಿ ಮೇ ಭಕ್ತಿರ್ಭವತ್ವವ್ಯಭಿಚಾರಿಣೀ ।
ವರೈಃ ಕಿಮನ್ಯೈರ್ಭಗವನ್ ಕರೋಮಿ ಸುರಪೂಜಿತ ॥ ೭೩ ॥

ಏವಮುಕ್ತಿಸ್ತ್ವಥಾಽಭಾಷ್ಯ ಸಮಾಲಿಂಗ್ಯ ಚ ಶಾರ್ಙ್ಗಿಣಂ ।
ಪಾಲಯೈತನ್ಮಮಾದೇಶಾತ್ ಇತ್ಯುಕ್ತ್ವಾಂತರ್ಹಿತೋ ಹರಃ ॥ ೭೪ ॥

ಅಭವದ್ಬ್ರಹ್ಮಣಃ ಪುತ್ರೋ ಯಥಾ ದೇವಸ್ತ್ರಿಲೋಚನಃ
ತಥಾ ಸರ್ವಮಶೇಷೇಣ ಕಥಿತಂ ಮುನಿಪುಂಗವಾಃ ॥ ೭೫ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಬ್ರಹ್ಮಪದ್ಮಯೋನಿತ್ವಾದಿಕಥನಂ ನಾಮ ಚತುರ್ವಿಂಶೋಽಧ್ಯಾಯಃ.

---

೭೩. "ಪರಮೇಶ್ವರನೇ! ನಿನ್ನಲ್ಲಿ ಶಾಶ್ವತವಾದ ಭಕ್ತಿಯೊಂದು ನನಗೆ ಯಾವಾಗಲೂ ಮೂಡುತ್ತಿರಲಿ, ಅದೇಸಾಕು. ಬೇರೆ ವರಗಳಿಂದ ನನಗೇನು"? ಎಂದು ವಿಷ್ಣುವು, ಹೇಳಲಾಗಿ,

೭೪. ಪರಮೇಶ್ವರನು ಹಾಗೆಯೇ ಆಗಲೆಂದು ಮಹಾವಿಷ್ಣುವನ್ನು ಆಲಿಂಗಿಸಿಕೊಂಡು, ನನ್ನ ಅಪ್ಪಣೆಯಂತೆ ಈ ಜಗತ್ತನ್ನು ರಕ್ಷಿಸು ಎಂದು ಹೇಳಿ, ಅಲ್ಲಿಯೇ ಮಾಯವಾದನು.

೭೫. ಪರಮೇಶ್ವರನು ಬ್ರಹ್ಮನಮಗನಾದದ್ದು ಹೇಗೆ ಎಂಬುದನ್ನು ನಾನು ಹಿಂದೆಯೇ ನಿಮಗೆ ವಿವರಿಸಿದ್ದೇನೆ. ಎಂದು ಸೂತಮಹರ್ಷಿಗಳು ಶೌನಕಾದಿಗಳಿಗೆ ಹೇಳಿದರು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದರೂಪವಾಗಿ ಬ್ರಹ್ಮನು ಪದ್ಮಯೋನಿಯಾದ ಕಥಾಭಾಗದ ವಿಸ್ತಾರದಲ್ಲಿ ಇಪ್ಪತ್ತುನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ಪಂಚವಿಂಶೋಽಧ್ಯಾಯಃ

॥ ಋಷಯ ಊಚುಃ ॥

ಕಥಂ ಭಗವತೀ ಗೌರೀ ಶಂಕರಾರ್ಧಶರೀರಿಣೀ ॥
ಪರಬ್ರಹ್ಮಾತ್ಮಿಕಾ ನಿತ್ಯಾ ಪರಮಾಽಽಕಾಶಮಧ್ಯಗಾ ॥ ೧ ॥

ಸರ್ವಶಕ್ತಿಮಯೀ ಶಾಂತಾ ನಿರ್ಗುಣಾ ನಿರುಪದ್ರವಾ ।
ಆದಿಮಧ್ಯಾಂತರಹಿತಾ ಸರ್ವೋಪಾಧಿವಿವರ್ಜಿತಾ ॥ ೨ ॥

ಇಪ್ಪತ್ತೈದನೆಯ ಅಧ್ಯಾಯ.

೧-೨. ಪುನಃ ಶೌನಕಾದಿ ಋಷಿಗಳು ಸೂತಮಹರ್ಷಿಗಳನ್ನು ಕುರಿತು "ಸ್ವಾಮಿಯೇ, ಪಾರ್ವತಿಯು ಶಂಕರನ ಅರ್ಧಾಂಗಿಯಾದುದು ಹೇಗೆ? ಗೌರೀದೇವಿಯು ಪರಬ್ರಹ್ಮರೂಪಿಯಾಗಿಯೂ, ನಿತ್ಯಶಾಂತಳಾಗಿಯೂ, ಆಕಾಶಮಧ್ಯವರ್ತಿನಿಯೂ ಅಲ್ಲವೆ? ಅಲ್ಲದೆ ಸಮಸ್ತಶಕ್ತಿಗಳಿಗೂ ಮೂಲಕಾರಣಳಾಗಿಯೂ, ನಿರ್ಗುಣಳೂ, ನಿರುಪದ್ರವಳೂ ಆದಿಮಧ್ಯಾಂತಶೂನ್ಯಳೂ, ಸರ್ವೋಪಾಧಿನಿರ್ಮುಕ್ತಳೂ ಆಗಿರುವ ಗೌರೀದೇವಿಯು ಹೇಗೆ ಪರಮೇಶ್ವರನ ಪತ್ನಿಯಾದಳು? ಸ್ವತಂತ್ರವಾದ ಶಕ್ತಿಯುಳ್ಳ ಸಾಕ್ಷಾದ್ಗೌರೀದೇವಿಯು ಪರಶಿವನ ಅರ್ಧಾಂಗಿಯಾದುದು ಹೇಗೆ?

ಸ್ವಭಾಭಿರ್ಭಾಸಯಂತೀದಂ ವಿಶ್ವಮೇತತ್ಸುರೇಶ್ವರೀ ।
ನಿತ್ಯಾನಂದಾ ನಿರಾಕಾರಾ ನಿರ್ವಿಭಾಗಾ ನಿರಂಜನಾ ॥ ೩ ॥

ಪೃಥಕ್ಶರೀರಮಕರೋತ್ಕಥಂ ಸಾ ಪರಮೇಶ್ವರೀ
ವಯಂ ತಚ್ಛ್ರೋತುಮಿಚ್ಛಾಮಃ ಸೂತ ವಕ್ತುಮಿಹಾರ್ಹಸಿ ॥ ೪ ॥

॥ ಸೂತ ಉವಾಚ ॥

ವಿಶ್ವೇಶ್ವರಾನ್ಮಹಾದೇವಾದ್ವರಂ ಲಬ್ಧ್ವಾ ಪಿತಾಮಹಃ ।
ಪ್ರಜಾಃ ಸಸರ್ಜ ಭಗವಾನ್ ನ ವ್ಯವರ್ಧಂತ ತಾಃ ಪ್ರಜಾಃ ॥ ೫ ॥

ದುಃಖಿತೋಽಭೂತ್ತದಾ ಬ್ರಹ್ಮಾ ಪ್ರಜಾ ದೃಷ್ಟ್ವಾ ತು ದುರ್ಬಲಾಃ ।
ಮೇನೇಽಕೃತಾರ್ಥಮಾತ್ಮಾನಂ ಪ್ರಾದುರ್ಭೂತಸ್ತತೋ ಹರಃ । ॥ ೬ ॥

೩–೪. ನಿತ್ಯಾನಂದರೂಪಿಣಿಯಾಗಿ, ಆತಂಕಗಳಿಲ್ಲದೆ ಪಾಪರಹಿತಳಾಗಿ, ಶುದ್ಧಸ್ವಭಾವದವಳಾದ ಪಾರ್ವತಿಯು ತನ್ನ ತೇಜಸ್ಸಿನಿಂದ ಈ ಜಗತ್ತನ್ನೆಲ್ಲಾ ಪ್ರಕಾಶಗೊಳಿಸುತ್ತಾ ತಾನು ದೇಹವನ್ನು ತಾಳಿದುದು ಹೇಗೆ? ಸೂತಮಹರ್ಷಿಯೇ ಈ ಕಥಾಭಾಗವನ್ನು ದಯೆಯಿಂದ ನಮಗೆ ತಿಳಿಸಬೇಕು" ಎಂದು ಕೇಳಿಕೊಳ್ಳಲು,

೫. ಸೂತಮಹರ್ಷಿಗಳು ಕಥೆಯನ್ನು ಮುಂದುವರಿಸುತ್ತಾ ಹೀಗೆ ಹೇಳಿದರು. ಪರಮೇಶ್ವರನಿಂದ ವರವನ್ನು ಪಡೆದು ತೃಪ್ತನಾದ ಬ್ರಹ್ಮನು ಪ್ರಜಾಸೃಷ್ಟಿಯಲ್ಲಿ ನಿರತನಾಗಿ ಅನೇಕ ಸಂಖ್ಯೆಯಲ್ಲಿ ಪ್ರಜೆಗಳನ್ನು ಸೃಷ್ಟಿಸಿದನು. ಆದರೆ ಪ್ರಜೆಗಳು ಮಾತ್ರ ಬಲಿಷ್ಠರಾಗಿ ಬೆಳೆಯಲಿಲ್ಲ.

೬. ಅಂತಹ ದುರ್ಬಲರಾದ ಪ್ರಜೆಗಳನ್ನು ನೋಡಿ ಬ್ರಹ್ಮನು ದುಃಖಿತನಾಗಿ ತಾನು ಮಾಡಿದ ಕಾರ್ಯವು ವ್ಯರ್ಥವೆಂದು ಬಹುವಾಗಿ ಯೋಚಿಸುತ್ತಿದ್ದನು. ಆಗಲೇ ಪರಮೇಶ್ವರನು ಬ್ರಹ್ಮನಿಗೆ ಪ್ರತ್ಯಕ್ಷನಾಗಿ,

ಬ್ರಹ್ಮಾಣಮುಬ್ರವೀಚ್ಛಂಭುಃ ಜ್ಞಾತಂ ತ್ವದ್ದುಃಖಕಾರಣಂ ।
ಸರ್ವತಃ ಶರ್ಮಣೇ ಯತ್ರ ಭವಿಷ್ಯತಿ ತವಾನಘ ॥ ೭ ॥

ಕ್ರಿಯತಾಂ ವೈ ತಥೇತ್ಯುಕ್ತ್ವಾ ಕರ್ತುಂ ಸಮುಪಚಕ್ರಮೇ ।
ಅರ್ಧನಾರೀಶ್ವರೋ ದೇವಃ ಸ್ವಯಂ ವಿಶ್ವೇಶ್ವರಃ ಶಿವಃ ॥ ೮ ॥

ನಾರೀಭಾಗಾನ್ಮಹಾದೇವಃ ಸಸರ್ಜ ಪೃಥಗೀಶ್ವರೀಂ ।
ಬ್ರಹ್ಮಾತ್ಮಿಕಾಂ ಪರಾಂ ಶಕ್ತಿಂ ಕೋಟಿಬಾಲಾರ್ಕಭಾಸುರಾಂ ॥ ೯ ॥

ನ ತಸ್ಯಾ ವಿದ್ಯತೇ ಜನ್ಮ ಜಾತೇತಿ ಕಿಲ ಭಾತಿ ಯಾ ।
ಪರಂ ಭಾವಂ ನ ಜಾನಂತಿ ಯಸ್ಯಾ ಬ್ರಹ್ಮಾದಯಃ ಸುರಾಃ ॥ ೧೦ ॥

---

೭. ಬ್ರಹ್ಮನನ್ನು ಕುರಿತು "ಎಲೈ ಬ್ರಹ್ಮನೇ! ನಿನಗೆ ಒದಗಿರುವ ವ್ಯಥೆಯು ನನಗೆ ತಿಳಿಯಿತು. ಇನ್ನು ಮುಂದೆ ನೀನು ಮಾಡುವ ಕೆಲಸವೆಲ್ಲವೂ ನಿನಗೆ ಸುಖಪ್ರದವಾಗುವುದು, ಯೋಚಿಸಬೇಡ." ಎಂದು ವರವಿತ್ತನು.

೮–೯. ಅಲ್ಲದೆ ಪರಮೇಶ್ವರನು ತಾನೇ ಅರ್ಧನಾರೀಶ್ವರನಾಗಿದ್ದುದರಿಂದ, ತನ್ನ ನಾರೀ ಭಾಗವನ್ನು ತೆಗೆದು ಬೇರೆಯಾಗಿ ಸೃಷ್ಟಿಮಾಡಿದನು. ಸಾಕ್ಷಾತ್ಪರಮೇಶ್ವರನು ನಾರೀಭಾಗದಿಂದ ಅಲ್ಲಿನವರೆಗೆ ಒಬ್ಬನೇ ಆಗಿದ್ದನು. ಬ್ರಹ್ಮನ ಹಿತಕ್ಕಾಗಿ ಪಾರ್ವತಿಯನ್ನು ಪ್ರತ್ಯೇಕವಾಗಿ ಸೃಷ್ಟಿಮಾಡಿ ನಿಲ್ಲಿಸಿದನು. ಆ ಶಕ್ತಿಯಾದರೋ ಕೋಟಿಸೂರ್ಯರ ತೇಜಸ್ಸನ್ನು ಮೀರಿಸುವುದಾಗಿತ್ತು. ಇಂತಹ ಬ್ರಹ್ಮರೂಪಿಣಿಯಾದ ಪರಾಶಕ್ತಿಯು ಅಂದಿನಿಂದ ಬೇರೆಯಾಯಿತು. ಅಂದರೆ ಶಿವಮಯವಾದ ಶಕ್ತಿಯು ಶಿವನಿಂದ ಬಿಟ್ಟು ಹೊರಟು ಜಗನ್ಮಯವಾಗುವುದಕ್ಕೆ ಪ್ರಾರಂಭಿಸಿತು

೧೦. ಆದರೇನು? ಆ ಜಗನ್ಮಾತೆಗೆ ಜನ್ಮವೆಲ್ಲಿ ಬಂತು. ಈಗ ಉತ್ಪತ್ತಿಯಾದಳೆಂದು ತೋರಿದರೂ, ಆಕೆಗೆ ಆದಿಯಿಲ್ಲ. ಅಂತ್ಯವಿಲ್ಲ. ಬ್ರಹ್ಮನೇ ಮೊದಲಾದ ದೇವತೆಗಳೂ ಸಹ ಆಗೌರಿಯ ಮಹತ್ವವನ್ನು ತಿಳಿಯಲಾರರು. ಲೋಕದಚಾಲನೆಗಾಗಿ ಆ ಶಕ್ತಿಯ ಪೃಥಕ್ಕರಣವೇ ಹೊರತು ನಿಜವಾಗಿಯೂ ಗೌರಿಯು ಶಿವನಿಂದ ಬೇರೆಯಾದವಳು ಎಂದು ಹೇಳುವಂತಿಲ್ಲ.

ಯಸ್ಯಾಸ್ತು ಶಕ್ತಿಭಿರ್ವಾರ್ಚ್ಯಾ ಬ್ರಹ್ಮಾಂಡಾನಾಂ ಚ ಕೋಟಯಃ ।
ಭರ್ತುರಂಗಾದ್ವಿಭಕ್ತೇವ ದೃಷ್ಟ್ವಾ ಸ್ವಾಥ ವಿರಂಚಿನಾ ॥ ೧೧ ॥
ಅಬ್ರವೀತ್ ಪ್ರಾಂಜಲಿರ್ಭೂತ್ವಾ ವಿಶ್ವೇಶ್ವರೀಂ ಪಿತಾಮಹಃ ॥ ೧೨ ॥

॥ ಬ್ರಹ್ಮೋವಾಚ ॥

ತ್ವಾಂ ನಮಾಮಿ ಶಿವಾಂ ಶಾಂತಾಮೀಶ್ವರಾರ್ಧಶರೀರಿಣೀಂ ।
ಅನಾದ್ಯನಂತವಿಭವಾಂ ಮೂಲಪ್ರಕೃತಿಮೀಶ್ವರೀಂ ॥ ೧೩ ॥

ಜನ್ಮಮೃತ್ಯುಜರಾತೀತಾಂ ಜನ್ಮಮೃತ್ಯುಜರಾಪಹಾಂ ।
ಕ್ಷೇತ್ರಜ್ಞಾಶಕ್ತಿನಿಲಯಾಂ ಪರಮಾಕಾಶಮಧ್ಯಗಾಂ ॥ ೧೪ ॥

೧೧-೧೨. ಯಾವದೇವಿಯ ಶಕ್ತಿಯಿಂದ ಕೋಟ್ಯಾಂತರ ಬ್ರಹ್ಮಾಂಡಗಳು ಚಲಿಸುತ್ತಿವೆಯೋ, ಅಂತಹ ದೇವಿಯು ಪರಮೇಶ್ವರನ ಅಂಗದಿಂದ ವಿಭಕ್ತಳಾದ ದನ್ನು ಬ್ರಹ್ಮನು ನೋಡಿ, ಆಶ್ಚರ್ಯಪಟ್ಟು, ವಿಶ್ವೇಶ್ವರಿಯಾದ ಪಾರ್ವತಿಗೆ ನಮಸ್ಕರಿಸಿ ಮುಂದೆ ಹೀಗೆ ಸ್ತುತಿಸಲಾರಂಭಿಸಿದನು.

೧೩. ಎಲೈ ದೇವಿಯೇ, ನೀನು ಪರಮೇಶ್ವರನ ಅರ್ಧ ಶರೀರವು; ನಿನ್ನ ಸ್ವಭಾವವಾದರೋ ಶಾಂತಮಯವಾದದ್ದು. ಆದ್ಯಂತರಹಿತವಾದ ಶಕ್ತಿಯುಳ್ಳವಳು ನೀನು. ಅನಂತೈಶ್ವರ್ಯ ಸಂಪನ್ನೆಯು. ಪ್ರಪಂಚದ ಉತ್ಪತ್ತಿಗೆ ಪ್ರಕೃತಿಯಂತೆ ಮೂಲಭೂತಳಾದ ನಿನಗೆ ವಂದನೆಯು.

೧೪. ತಾಯಿಯೇ, ನೀನು ಜನ್ಮ, ಮೃತ್ಯು, ಮುಪ್ಪು, ಇವುಗಳಿಗೆ ದೂರಳಾದವಳು, ಮತ್ತು ಅವುಗಳನ್ನು ನಾಶಮಾಡುವಂತಹ ಮಹಿಮೆಯನ್ನೂ ನೀನು ಪಡೆದಿರುವೆ. ನೀನು ಕ್ಷೇತ್ರಜ್ಞಳು. ಮತ್ತು ಶಕ್ತಿಗೆ ಆಶ್ರಯಳು. ನಿರಾಕಾಶ ಮಧ್ಯಭಾಗದ ವಿಭುವಾಗಿ ನಿಂತಿದ್ದೀಯೆ. ಎಲ್ಲಾ ಲೋಕದಲ್ಲಿಯೂ ನೀನು ವ್ಯಾಪಿಸಿಯಾಗಿದ್ದೀಯೆ.

ಬ್ರಹ್ಮೇಂದ್ರವಿಷ್ಣುನಮಿತಾಮಷ್ಟಮೂರ್ತ್ಯರ್ಧಾಂಗಿನೀ ಮಜಾಂ ।
ಪ್ರಧಾನಪುರುಷಾತೀತಾಂ ಸಾವಿತ್ರೀಂ ವೇದಮಾತರಂ ॥ ೧೫ ॥

ಋಗ್ಯಜುಸ್ಸಾಮನಿಲಯಾಮೃಜ್ವೀಂ ಕುಂಡಲಿನೀಂ ಪರಾಂ ।
ವಿಶ್ವೇಶ್ವರೀಂ ವಿಶ್ವಮಯೀಂ ವಿಶ್ವೇಶ್ವರಪತಿವ್ರತಾಂ ॥ ೧೬ ॥

ವಿಶ್ವಸಂಹಾರಕರಣೀಂ ವಿಶ್ವಮಾಯಾಪ್ರವರ್ತಿನೀಂ ।
ಸರ್ಗಸ್ಥಿತ್ಯಂತಕರಿಣೀಂ ವ್ಯಕ್ತಾವ್ಯಕ್ತಸ್ವರೂಪಿಣೀಂ ॥ ೧೭ ॥

ಪಾಹಿ ಮಾಂ ದೇವದೇವೇಶಿ ಶರಣಾಗತವತ್ಸಲೇ ।
ನಾನ್ಯಾ ಗತಿರ್ಮಹೇಶಾನಿ ಮಮ ತ್ರೈಲೋಕ್ಯವಂದಿತೇ ॥ ೧೮ ॥

---

೧೫. ನಿನ್ನನ್ನು ಬ್ರಹ್ಮನೂ, ಇಂದ್ರನೂ, ವಿಷ್ಣುವೂ ಸಹ ವಂದಿಸುತ್ತಿರುವರು. ಅಷ್ಟಮೂರ್ತಿಯಾದ ಪರಮೇಶ್ವರನ ಅರ್ಧಾಂಗಿಯಾಗಿ ಪ್ರಕೃತಿಪುರುಷರಿಗಿಂತ ಭಿನ್ನಳಾಗಿರುವೆ. ಸಾವಿತ್ರಿಯೂ ವೇದಮಾತೆಯೂ ಎನಿಸಿಕೊಂಡು ಜಗತ್ತನ್ನೇ ರಕ್ಷಿಸುತ್ತಿರುವೆ. ಅಂತಹ ನಿನ್ನನ್ನು ನಮಸ್ಕರಿಸುವೆನು.

೧೬. ಋಕ್, ಯಜುಸ್ ಸಾಮವೆಂಬ ವೇದತ್ರಯಗಳಿಗೂ ನೀನು ಆಧಾರಳು. ಋಜುಗುಣ ಪ್ರಧಾನವಾದ ಕುಂಡಲಿನೀ ಎಂಬ ಶಕ್ತಿರೂಪಿಣಿಯು!, ನಿನ್ನನ್ನು ವಿಶ್ವೇಶ್ವರೀ, ವಿಶ್ವಮಯೀ, ವಿಶ್ವೇಶ್ವರ ಮಹಿಷೀ ಎಂದೂ, ಕರೆಯುವರು. ಪತಿವ್ರತಾ ಧರ್ಮವನ್ನು ಸುವ್ಯಕ್ತವಾಗಿ ತೋರ್ಪಡಿಸುವಳು ನೀನೇ ಆಗಿದ್ದೀಯೆ.

೧೭. ಪ್ರಪಂಚವನ್ನು ಸಂಹರಿಸುವಂತಹ ಶಕ್ತಿಯುಳ್ಳವಳು ನೀನು. ನಿನ್ನ ಮಾಯೆಯು ಪ್ರಪಂಚವನ್ನೆಲ್ಲಾ ಆವರಿಸಿಕೊಂಡಿದೆ. ಸೃಷ್ಟಿಸ್ಥಿತಿಲಯಗಳಿಗೆ ಮುಖ್ಯ ಕಾರಣಳಾಗಿ ವ್ಯಕ್ತ, ಅವ್ಯಕ್ತರೂಪದಿಂದ ನೀನು ವಿರಾಜಿಸುತ್ತಿರುವೆ.

೧೮. ಶರಣಾಗತವತ್ಸಲಳಾದ ದೇವದೇವಿಯೇ, ನನ್ನನ್ನು ರಕ್ಷಿಸು ತ್ರೈಲೋಕ್ಯ ಪೂಜ್ಯಳೇ ಈಗ ನಾನು ಅನಾಥನಂತಿದ್ದೇನೆ. ಮಹೇಶ್ವರಪತ್ನಿಯೇ! ನನ್ನನ್ನು ಉದ್ಧರಿಸುವವರು ಮತ್ತಾರೂ ಇಲ್ಲ. ನನ್ನನ್ನು ಕಾಪಾಡು.

ತ್ವಂ ಮಾತಾ ಮಮ ಕಲ್ಯಾಣಿ ಪಿತಾ ಸರ್ವೇಶ್ವರಃ ಶಿವಃ ।
ಸೃಷ್ಟೋಽಹಂ ತ್ರಿಪುರಘ್ನೇನ ಸೃಷ್ಟ್ಯರ್ಥಂ ಶಂಕರಪ್ರಿಯೇ ॥ ೧೯ ॥

ವಿವಿಧಾಶ್ಚ ಪ್ರಜಾ ಸೃಷ್ಟಾ ನ ವೃದ್ಧಿಮುಪಯಾಂತಿ ತಾಃ ।
ತತಃ ಪರಂ ಪ್ರಜಾಃ ಸರ್ವಾಃ ಮೈಥುನಪ್ರಭವಾಃ ಕಿಲ ॥ ೨೦ ॥

ಸಂವರ್ಧಯಿತುಮಿಚ್ಛಾಮಿ ಕೃತ್ವಾ ಸೃಷ್ಟಿಮತಃ ಪರಂ ।
ಶಕ್ತೀನಾಂ ಖಲು ಸರ್ವಾಸಾಂ ತ್ವತ್ತಃ ಸೃಷ್ಟಿಃ ಪ್ರವರ್ತತೇ ॥ ೨೧ ॥

ನೈವ ಸೃಷ್ಟಂ ತ್ವಯಾ ಪೂರ್ವಂ ಶಕ್ತೀನಾಂ ಯತ್ಕುಲಂ ಶಿವೇ ।
ಸರ್ವೇಷಾಂ ದೇಹಿನಾಂ ದೇವಿ ಸರ್ವಶಕ್ತಿಪ್ರದಾಯಿನೀ ॥ ೨೨॥

---

೧೯. ಎಲೈ ದೇವಿಯೇ! ನೀನೇ ನನಗೆ ತಾಯಿಯು. ಪರಮೇಶ್ವರನೇ ನನ್ನ ತಂದೆಯು. ಪರಮೇಶ್ವರನೇ ನನ್ನನ್ನು ಮೊದಲು ನಿರ್ಮಾಣಮಾಡಿರುವನಷ್ಟೆ. ಇದರಿಂದ ಲೋಕಕ್ಕೆ ಮಾತಾಪಿತೃಗಳಾದ ನೀವು ನನಗೂ ಮಾತಾಪಿತೃಗಳೇ,

೨೦. ನಾನು ಪರಶಿವನ ಅಪ್ಪಣೆಯಿಂದ ಪ್ರಜೆಗಳನ್ನು ಸೃಷ್ಟಿಮಾಡಿರುವೆನು. ಆದರೆ ಅವರು ಮಾತ್ರ ಬಲಗೊಂಡಿಲ್ಲ. ಎಲ್ಲಾ ಪ್ರಜೆಗಳೂ ಸ್ತ್ರೀಪುರುಷ ಸಂಯೋಗ ದಿಂದ ಪುನಃ ಪ್ರಜಾಸೃಷ್ಟಿಮಾಡುವ ಶಕ್ತಿಯನ್ನು ಇನ್ನೂ ಪಡೆದಿಲ್ಲ. ಹಾಗೆ ಸೃಷ್ಟಿ ಯಾಗದೇ ಹೋದರೆ ಜಗತ್ತು ವಿಶಾಲವಾಗುವುದಿಲ್ಲ.

೨೧. ಆ ಶಕ್ತಿಯನ್ನು ಪಡೆದು ಪ್ರಜಾಸಂತತಿಯು ವೃದ್ಧಿಯಾಗಲಿ ಎಂಬುದೇ ನನ್ನ ಅಭಿಮತ. ಅದಕ್ಕಾಗಿ ಎಲೈ ದೇವಿಯೇ! ನೀನು ಅವರೆಲ್ಲರಿಗೂ ಶಕ್ತಿಯನ್ನು ದಯಪಾಲಿಸುವವಳಾಗಬೇಕು.

೨೨. ಇಲ್ಲಿನವರೆಗೂ ನೀನು ಯಾವ ವಿಧವಾದ ಶಕ್ತಿಯ ಮಹಿಮೆಯನ್ನೂ ತೋರ್ಪಡಿಸಿಲ್ಲ. ಸರ್ವಶಕ್ತಿಮಯಿಯು, ನೀನೇ ಆಗಿರುವುದರಿಂದ ಸಮಸ್ತ ಪ್ರಾಣಿ ಗಳಿಗೂ ಶಕ್ತಿಪ್ರದಾತಳು ನೀನೇ ಅಲ್ಲವೇ?

ತ್ವಮೇವ ನಾತ್ರ ಸಂದೇಹಸ್ತಸ್ಮಾತ್ತ್ವಂ ವರದಾ ಭವ ।
ಮಮ ಸೃಷ್ಟಿವಿವೃದ್ಧ್ಯರ್ಥಮಂಶೇನೈಕೇನ ಶಾಶ್ವತೇ ॥ ೨೩ ॥

ಮಮ ಪುತ್ರಸ್ಯ ದಕ್ಷಸ್ಯ ಪುತ್ರೀ ಭವ ಶುಚಿಸ್ಮಿತೇ ।
ಪ್ರಾರ್ಥಿತಾ ವೈ ತದಾ ದೇವೀ ಬ್ರಹ್ಮಣಾ ಮುನಿಪುಂಗವಾಃ ॥ ೨೪ ॥

ಏಕಾಂ ಶಕ್ತಿಂ ಭ್ರುವೋರ್ಮಧ್ಯಾತ್ಸಸರ್ಜಾತ್ಮಸಮಪ್ರಭಾಂ ।
ಆಹ ತಾಂ ಪ್ರಹಸನ್ ಪ್ರೇಕ್ಷ್ಯ ದೇವೀಂ ವಿಶ್ವೇಶ್ವರೋ ಹರಃ ॥ ೨೫ ॥

ಬ್ರಹ್ಮಣೋ ವಚನಾದ್ದೇವಿ ಕುರು ತಸ್ಯ ಯಥೇಪ್ಸಿತಂ ।
ಆದಾಯ ಶಿರಸಾ ಶಂಭೋರಾಜ್ಞಾಂ ಸಾ ಪರಮೇಶ್ವರೀ ॥ ೨೬ ॥

ಅಭವದ್ದಕ್ಷದುಹಿತಾ ಸ್ವೇಚ್ಛಯಾ ಬ್ರಹ್ಮರೂಪಿಣೀ ।
ಪುನರಾದ್ಯಾ ಪರಾ ಶಕ್ತಿಃ ಶಂಭೋರ್ದೇಹಂ ಸಮಾವಿಶತ್ ॥ ೨೭ ॥

---

೨೩. ಶಕ್ತಿಪ್ರದಾಯಿನಿಯು ನೀನು ಎಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ಆದ್ದರಿಂದ ಎಲೈ ದೇವಿಯೇ! ನನ್ನ ಸೃಷ್ಟಿಕಾರ್ಯವು ಅಭಿವೃದ್ಧಿಹೊಂದಲು ನೀನು ನಿನ್ನ ಒಂದಂಶದಿಂದ ನನಗೆ ಸಹಾಯಮಾಡು. ಇದರಿಂದ ನನ್ನ ಸೃಷ್ಟಿಕಾರ್ಯವು ಇತೋಪ್ಯತಿಶಯವಾಗಿ ಮುಂದುವರಿಯುವುದು.

೨೪. ಮಂದಸ್ಮಿತೆಯುಳ್ಳ ಜನನಿಯೇ, ನನ್ನ ಮಗನಾದ ದಕ್ಷಬ್ರಹ್ಮನಿಗೆ ನೀನು ಮಗಳಾಗಿ ಜನಿಸು. ಇದರಿಂದ ನಾನು ನಿನ್ನ ಅನುಗ್ರಹಕ್ಕೆ ಪಾತ್ರನಾಗುವೆ. ಎಂದು ವಿಧವಿಧವಾಗಿ ಬ್ರಹ್ಮನು ಪ್ರಾರ್ಥಿಸಲಾಗಿ ಆಗ ದೇವಿಯು,

೨೫. ತನ್ನ ಎರಡು ಹುಬ್ಬುಗಳ ಮಧ್ಯದಿಂದ ಆತ್ಮಸದೃಶವಾದ ಒಂದು ಶಕ್ತಿಯನ್ನು ಸೃಷ್ಟಿಸಿದಳು. ಆ ಶಕ್ತಿಯು ಎದುರಿನಲ್ಲಿ ನಿಂತಿರುವುದನ್ನು ನೋಡಿ ಪರಮೇಶ್ವರನು ನಕ್ಕು, ಆ ಶಕ್ತಿಯನ್ನೇ ಕುರಿತು,

೨೬. ಎಲೈ ದೇವಿಯೇ ಬ್ರಹ್ಮನ ಪ್ರಾರ್ಥನೆಯಂತೆ ನೀನು ಅವನ ಸೃಷ್ಟಿಕಾರ್ಯಕ್ಕೆ ನೆರವಾಗಿ ನಿಲ್ಲು, ಬ್ರಹ್ಮನ ಇಷ್ಟಾರ್ಥವನ್ನು ಶೀಘ್ರವಾಗಿ ನೆರವೇರಿಸು ಎಂದು ಅಪ್ಪಣೆಮಾಡಲು, ಆ ಪರಮೇಶ್ವರಿಯ ಶಕ್ತಿಯು ತನ್ನ ಅಪ್ಪಣೆಯನ್ನು ಶಿರಸಾ ವಹಿಸಿ,

೨೭. ಒಡನೆಯೇ ಸ್ವೇಚ್ಛೆಯಿಂದಲೇ, ದಕ್ಷಬ್ರಹ್ಮನ ಪುತ್ರಿಯಾಗಿ ಜನಿಸಿದಳು. ಆದರೆ ದೇವಿಯ ಮೂಲಶಕ್ತಿಯು ಮಾತ್ರ ಪುನಃ ಪರಮೇಶ್ವರನ ದೇಹವನ್ನೇ ಪ್ರವೇಶಿಸಿತು.

ಅರ್ಧನಾರೀಶ್ವರೋ ದೇವೋ ವಿಭಾತೀತಿ ಹಿ ನಃ ಶ್ರುತಿಃ ।
ತತಃ ಪ್ರಭೃತಿ ವಿಪ್ರೇಂದ್ರಾಃ ಮೈಥುನಪ್ರಭವಾಃ ಪ್ರಜಾಃ ॥ ೨೮ ॥

ಏವಂ ವಃ ಕಥಿತಾ ವಿಪ್ರಾ ದೇವ್ಯಾಃ ಸಂಭೂತಿರುತ್ತಮಾ ।
ಪಠೇದ್ಯಃ ಶೃಣುಯಾದ್ವಾಪಿ ಸಂತತಿಸ್ತಸ್ಯ ವರ್ಧತೇ ॥ ೨೯ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಗೌರೀಪ್ರೃಥಕ್ಶರೀರತ್ವಾದಿಕಥನಂ ನಾಮ ಪಂಚವಿಂಶೋಽಧ್ಯಾಯಃ

---

೨೮. ಹೀಗೆ ಮೂಲಶಕ್ತಿಯು ಪುನಃ ಪರಶಿವನ ಅರ್ಧದೇಹವನ್ನು ಆಕ್ರಮಿಸಿದುದರಿಂದ ಪರಮೇಶ್ವರನು ಯಾವಾಗಲೂ ಅರ್ಧನಾರೀಶ್ವರನೆಂಬುದನ್ನು ವೇದಗಳು ಇಂದಿಗೂ ಹೊಗಳುತ್ತಿವೆ. ದೈವೀಶಕ್ತಿಯು ದಕ್ಷಪುತ್ರಿಯಾದ ಮೇಲೆ ಪ್ರಾಣಿಗಳು ಮೈಥುನದಿಂದ ಪ್ರಜೋತ್ಪಾದನೆಮಾಡುವ ಶಕ್ತಿಯನ್ನು ಪಡೆದವು.

೨೯. ಎಲೈ ಶೌನಕಾದಿಗಳೇ ! ಹೀಗೆ ದೇವಿಯ ಉತ್ಪತ್ತಿಯ ವಿಷಯವನ್ನು ನಿಮ್ಮಗಳಿಗೆ ವಿಸ್ತಾರವಾಗಿ ತಿಳಿಸಿರುವೆನು. ಈ ಕಥೆಯನ್ನು ಓದಿದವರೂ ಕೇಳಿದವರೂ ಪರಮೇಶ್ವರಾನುಗ್ರಹದಿಂದ ಶುಭಸಂತಾನವುಳ್ಳವರಾಗಿ ಆಗುತ್ತಾರೆ. ಎಂಬುದರಲ್ಲಿ ಸಂಶಯವೇ ಇಲ್ಲ.

ಇಲ್ಲಿಗೆ ಬ್ರಹ್ಮಪುರಾಣೋಪ ಪುರಾಣವಾದ ಸೌರಪುರಾಣದಲ್ಲಿ, ಸೂತಶೌನಕಸಂವಾದ ರೂಪವಾಗಿ ಗೌರಿಯು ಪ್ರತ್ಯಕ್ಷಳಾಗಿ ರೂಪ ತಾಳಿದ ಕಥೆಯನ್ನು ತಿಳಿಸುವ ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಷಡ್ವಿಂಶೋಽಧ್ಯಾಯಃ.

॥ ಸೂತ ಉವಾಚ ॥

ಹಿರಣ್ಯಗರ್ಭಃ ಶಿವಯೋರ್ಲಬ್ಧ್ವಾ ವರಮನುತ್ತಮಂ ।
ಅಸೃಜದ್ಭಗವಾನ್ ಬ್ರಹ್ಮಾ ಮರೀಚ್ಯಾದೀನಕಲ್ಮಷಾನ್ ॥ ೧ ॥

ಮರೀಚಿಭೃಗ್ವಂಗಿರಸಃ ಪುಲಸ್ತ್ಯಂ ಪುಲಹಂ ಕ್ರತುಂ ।
ದಕ್ಷಮತ್ರಿಂ ವಸಿಷ್ಠಂ ಚ ಸೋಽಸೃಜನ್ಮನಸಾ ವಿಭುಃ ॥ ೨ ॥

ದೇವಾಸುರಮನುಷ್ಯಾಂಶ್ಚ ಪಿತೄಂಶ್ಚಾಪಿ ಪ್ರಜಾಪತಿಃ ।
ಅಸೃಜತ್ಕ್ರಮಶಃ ಸರ್ವಾನ್ ಅಂಧಕಾರೇ ಚ ರಾಕ್ಷಸಾನ್ ॥ ೩ ॥

ಇಪ್ಪತ್ತಾರನೆಯ ಅಧ್ಯಾಯ.

೧. ಪಾರ್ವತೀಪರಮೇಶ್ವರರಿಂದ ಉತ್ತಮವಾದ ವರವನ್ನು ಪಡೆದ ಬ್ರಹ್ಮನು ಮರೀಚಿಯೇ ಮೊದಲಾದ ಸಾತ್ವಿಕರಾದ ಋಷಿಶ್ರೇಷ್ಠರನ್ನು ಮೊದಲುಸೃಷ್ಟಿ ಮಾಡಿದನು,"

೨. ಅನಂತರ ಮರೀಚಿ, ಭೃಗು, ಅಂಗಿರಸ, ಪುಲಸ್ತ್ಯ, ಪುಲಹ. ಕ್ರತು, ದಕ್ಷ ಅತ್ರಿ, ವಸಿಷ್ಠ ಇವರಿಷ್ಟು ಜನರನ್ನೂ ಬ್ರಹ್ಮನು ಮನಸ್ಸಿನಿಂದಲೇ, ಸೃಷ್ಟಿಮಾಡಿದನು.

೩. ಆಮೇಲೆ ದೇವತೆಗಳು, ರಾಕ್ಷಸರು, ಮನುಷ್ಯರು, ಪಿತೃಗಳು ಇವರನ್ನು ಕ್ರಮವಾಗಿ ಸೃಷ್ಟಿಸಲಾರಂಭಿಸಿದನು. ಅದರಲ್ಲಿ, ರಾಕ್ಷಸರನ್ನು ಮಾತ್ರ ಕತ್ತಲೆಯ ಲೋಕದಲ್ಲಿ ವಿಶೇಷವಾಗಿ ಸೃಷ್ಟಿಸಿದನು.

ಗಂಧರ್ವಾನ್ ಸ ತಥಾ ನಾಗಾನ್ ಯಕ್ಷಾಂಶ್ಚಾಪಿ ಸಹಸ್ರಶಃ ।
ಅಸೃಜನ್ಮುಖತೋ ವಿಪ್ರಾನ್ ಬಾಹುಭ್ಯಾಂ ಕ್ಷತ್ರಿಯಾನ್ ವಿಭುಃ　　|| ೪ ||

ಊರುದ್ವಯಾತ್ತಥಾ ವೈಶ್ಯಾನ್ ಪಾದಾಚ್ಛೂದ್ರಾನ್ ಸಸರ್ಜ ಹ ।
ಛಂದಾಂಸಿ ವೇದಾನ್ ಯಜ್ಞಾಂಶ್ಚ ಕಲ್ಪಸೂತ್ರಮತಃ ಪರಂ　　|| ೫ ||

ವೇದಾಂಗಾನಿ ತತಃ ಸೃಷ್ಟ್ವಾ ಮೈಥುನಪ್ರಭವಾಮತಃ ।
ಸೃಷ್ಟಿಂ ಕರ್ತುಂ ಮತಿಂ ಚಕ್ರೇ ದೇವದೇವಃ ಪಿತಾಮಹಃ　　|| ೬ ||

ಸ್ವಯಮಪ್ಯರ್ಧತೋ ನಾರೀ ತ್ವರ್ಧೇನ ಪುರುಷೋಽಭವತ್ ।
ಅರ್ಧೇನ ನಾರೀ ಯಾ ತಸ್ಮಾಚ್ಛತರೂಪಾಽಭ್ಯಜಾಯತ　　|| ೭ ||

---

೪. ಹಾಗೆಯೇ ಸಿದ್ಧರೂ, ಗಂಧರ್ವರೂ, ನಾಗಗಳು, ಯಕ್ಷರೂ ಇವರೇ ಮೊದಲಾದವರನ್ನು ಸೃಷ್ಟಿಸಿ, ತನ್ನ ಮುಖಭಾಗದಿಂದ ಬ್ರಾಹ್ಮಣರನ್ನೂ, ಎರಡು ತೋಳುಗಳಿಂದ ಕ್ಷತ್ರಿಯರನ್ನೂ ನಿರ್ಮಾಣಮಾಡಿದನು. ಅಷ್ಟು ಶೀಘ್ರವಾಗಿ ಇಷ್ಟಬಂದಂತೆ ಸೃಷ್ಟಿಮಾಡುವ ಶಕ್ತಿಯು ಪರಶಿವನಿಂದ ಬ್ರಹ್ಮನಿಗೆ ಒದಗಿಬಂದಿತು

೫. ತನ್ನ ಎರಡು ತೊಳುಗಳಿಂದ ವೈಶ್ಯರನ್ನೂ, ಕಾಲಿನಿಂದ ಶೂದ್ರರನ್ನೂ ಸೃಷ್ಟಿಮಾಡಿದನು. ಅನಂತರ ಲೋಕೋಪಕಾರದೃಷ್ಟಿಯಿಂದ ಛಂದಸ್ಸು, ವೇದ, ಯಜ್ಞ, ಕಲ್ಪಸೂತ್ರ ಇವೇ ಮೊದಲಾದ ಶಾಸ್ತ್ರಭಾಗಗಳನ್ನು ಸೃಜಿಸಿದನು.

೬. ಹಾಗೆಯೇ ಆರು ವೇದಗಳನ್ನೂ ನಿರ್ಮಾಣ ಮಾಡಿದನು. ಅಲ್ಲಿಂದ ಮುಂದೆ ಸ್ತ್ರೀ ಸಂಭೋಗಾದಿಗಳಿಂದ ಪ್ರಜಾವೃದ್ಧಿಯು ಆಗುವಂತಹ ಸೃಷ್ಟಿಯನ್ನು ಆರಂಭಿಸಿದನು. ಅಂದರೆ ಶಕ್ತಿಸಂಪನ್ನವಾದ ಪ್ರಾಣಿವರ್ಗವನ್ನು ಸೃಷ್ಟಿಸಿ ತನ್ಮೂಲಕ ಪ್ರಜಾವೃದ್ಧಿಯಾಗುವಂತೆ ಮಾಡಿದನು.

೭. ಅನಂತರ ಬ್ರಹ್ಮನು ಅರ್ಧಶರೀರದಲ್ಲಿ ಸ್ತ್ರೀಯಾಗಿಯೂ, ಉಳಿದರ್ಧ ಶರೀರದಲ್ಲಿ ಪುರುಷನಾಗಿಯೂ, ಇರುವ ರೂಪವೊಂದನ್ನು ತಾಳಿದನು. ಸ್ತ್ರೀದೇಹ ಭಾಗದಿಂದ ಶತರೂಪ ಯೆಂಬ ಸ್ತ್ರೀಯನ್ನು ಸೃಷ್ಟಿಮಾಡಿದನು.

ಸ್ವಾಯಂಭುವಂ ಮನುಂ ಬ್ರಹ್ಮಾ ಚಾರ್ಧೇನ ವಪುಷಾಽಸೃಜತ್ ।
ಶತರೂಪಾ ಚ ಯಾ ದೇವೀ ತಪಸ್ತಪ್ತ್ವಾ ಸುದುಶ್ಚರಂ ॥ ೮ ॥

ಅನ್ವಪದ್ಯತ ಭರ್ತಾರಂ ಮನುಂ ಸ್ವಾಯಂಭುವಂ ದ್ವಿಜಾಃ ।
ಪ್ರಿಯವ್ರತೋತ್ತಾನಪಾದೌ ಮನೋಃ ಸ್ವಾಯಂಭುವಾತ್ಸುತೌ ॥ ೯ ॥

ಮಹಾತ್ಮಾನೌ ಮಹಾವೀರ್ಯೌ ಶತರೂಪಾ ವ್ಯಜೀಜನತ್ ।
ದ್ವೇ ಕನ್ಯೇ ಲಕ್ಷಣೋಪೇತೇ ದ್ವಾಭ್ಯಾಂ ಸೃಷ್ಟಿರವರ್ಧತ ॥ ೧೦ ॥

ಆಕೂತಿಶ್ಚ ಪ್ರಸೂತಿಶ್ಚ ರುಚಯೇ ಪ್ರಥಮಾಂ ದದೌ ।
ಪ್ರಸೂತಿಂ ಚೈವ ದಕ್ಷಾಯ ಸ್ವಯಂ ದೇವೋ ಮನುರ್ವಿರಾಟ್ ॥ ೧೧ ॥

ಚತಸ್ರೋ ವಿಂಶತಿಃ ಕನ್ಯಾಃ ಪ್ರಸೂತ್ಯಾಂ ಸಂಬಭೂವಿರೇ ।
ಧರ್ಮಾಯ ಪ್ರದದೌ ದಕ್ಷಃ ಶ್ರದ್ಧಾದ್ಯಾ ವೈ ತ್ರಯೋದಶ ॥ ೧೨ ॥

---

೮. ತನ್ನ ಪುರುಷಾರ್ಧಭಾಗದಿಂದ ಸ್ವಾಯಂಭುವ ಮನುವನ್ನು ಸೃಷ್ಟಿ ಮಾಡಿದನು. ಸ್ತ್ರೀ ದೇಹಾರ್ಧದಿಂದ ಹುಟ್ಟಿದ ಶತರೂಪೆಯು ಒಡನೆಯೇ ಘೋರ ವಾದ ತಪಸ್ಸನ್ನಾಚರಿಸಿದಳು.

೯. ಇದರ ಫಲವಾಗಿ ಶತರೂಪಾದೇವಿಯು ಸ್ವಾಯಂಭಾವ ಮನುವನ್ನೇ ಪತಿಯನ್ನಾಗಿ ಪರಿಸಿದಳು. ಅವರಲ್ಲಿ ಪ್ರಿಯವ್ರತ, ಉತ್ತಾನಪಾದ, ಎಂಬ ಇಬ್ಬರು ಪುತ್ರರು ಜನಿಸಿದರು.

೧೦. ಅವರಿಬ್ಬರೂ, ಮಹಾತ್ಮರಾಗಿಯೂ ಮಹಾ ಬಲಶಾಲಿಗಳಾಗಿಯೂ ಇದ್ದರು. ಹಾಗೆಯೇ ಶತರೂಪೆಗೆ ಸರ್ವಲಕ್ಷಣಸಂಪನ್ನರಾದ ಇಬ್ಬರು ಹೆಣ್ಣು ಮಕ್ಕಳು ಜನಿಸಿದರು.

೧೧. ಆಕೂತಿ, ಪ್ರಸೂತಿ, ಎಂಬುವರೇ ಅವರಿಬ್ಬರು. ಅವರಲ್ಲಿ ಮೊದಲನೆ ಯವಳಾದ ಆಕೂತಿಯನ್ನು ರುಚಿ ಎಂಬುವನಿಗೂ, ಪ್ರಸೂತಿ ಎಂಬುವಳನ್ನು ದಕ್ಷ ಬ್ರಹ್ಮನಿಗೂ ಕೊಟ್ಟು ಸ್ವಾಯಂಭುವಮನುವೇ, ವಿವಾಹಮಾಡಿದನು.

೧೨. ಕಾಲಕ್ರಮದಲ್ಲಿ ಪ್ರಸೂತಿಯು ಇಪ್ಪತ್ತುನಾಲ್ಕು ಹೆಣ್ಣುಮಕ್ಕಳನ್ನು ಹೆತ್ತಳು. ಆ ಮಕ್ಕಳಲ್ಲಿ ಶ್ರದ್ಧೆಯೇ ಮೊದಲಾದ ಹದಿಮೂರು ಹೆಣ್ಣುಮಕ್ಕ ಳನ್ನು ಧರ್ಮನೆಂಬುವನಿಗೆ ಕೊಟ್ಟು ವಿವಾಹಮಾಡಿದನು.

ದದೌ ಸ ಭೃಗವೇ ಖ್ಯಾತಿಂ ಸತೀಂ ದೇವಾಯ ಶೂಲಿನೇ ।
ಮರೀಚಯೇ ಚ ಸಂಭೂತಿಂ ಸ್ಮೃತಿಮಂಗಿರಸೇ ತಥಾ ॥ ೧೩ ॥

ಪುಲಸ್ತ್ಯಾಯ ದದೌ ಪ್ರೀತಿಂ ಪುಲಹಾಯ ತಥಾ ಕ್ಷಮಾಂ ।
ಸಂತತಿಂ ಕ್ರತವೇ ಚೈವ ಅನಸೂಯಾಂ ತಥಾಽತ್ರಯೇ ॥ ೧೪ ॥

ವಸಿಷ್ಠಾಯ ದದಾವೂರ್ಜಾಂ ಸ್ವಧಾಂ ಪಿತೃಗಣಾಯ ಚ ।
ಪಾವಕಾಯ ತಥಾ ಸ್ವಾಹಾಂ ದದೌ ದಕ್ಷಃ ಪ್ರಜಾಪತಿಃ । ॥ ೧೫ ॥

ಭೃಗೋಃ ಖ್ಯಾತ್ಯಾಂ ಸಮುತ್ಪನ್ನಾ ಲಕ್ಷ್ಮೀರ್ನಾರಾಯಣಪ್ರಿಯಾ ।
ದೇವೌ ಧಾತಾವಿಧಾತಾರೌ ಮೇರೋರ್ಜಾಮಾತರೌ ಶುಭೌ ॥ ೧೬ ॥

ಆಯತಿರ್ನಿಯತಿಶ್ಚೈವ ಮೇರೋಃ ಕನ್ಯೇ ಮಹಾತ್ಮನಃ ।
ಬಭೂವತುಸ್ತಯೋಃ ಪುತ್ರೌ ಪ್ರಾಣಶ್ಚಾದ್ಯಶ್ಚ ಕಥ್ಯತೇ ॥ ೧೭ ॥

---

೧೩. ದಕ್ಷಬ್ರಹ್ಮನು ಹಾಗೆಯೇ, ಖ್ಯಾತಿಯನ್ನು ಭೃಗುಮಹರ್ಷಿಗೂ, ಸತೀ ದೇವಿಯನ್ನು ಪರಮೇಶ್ವರನಿಗೂ, ಸಂಭೂತಿಯನ್ನು ಮರೀಚಿಗೂ, ಸ್ಮೃತಿಯನ್ನು ಅಂಗೀರಸನಿಗೂ ಕೊಟ್ಟು ವಿವಾಹಮಾಡಿದನು.

೧೪. ಪುಲಸ್ತ್ಯನಿಗೆ ಪ್ರೀತಿಯೆಂಬುವಳನ್ನೂ, ಕ್ಷಮಾದೇವಿಯನ್ನು ಪುಲಹ ನಿಗೂ, ಸಂತತೀದೇವಿಯನ್ನು ಕ್ರತುವಿಗೂ, ಅತ್ರಿಮಹರ್ಷಿಗೆ ಅನಸೂಯಾದೇವಿ ಯನ್ನು ಕೊಟ್ಟು ಲಗ್ನಮಾಡಿದನು.

೧೫. ಊರ್ಜಾದೇವಿಯು ವಸಿಷ್ಠನಪತ್ನಿಯಾದಳು. ಸ್ವಧೆಯು ಪಿತೃ ಗಣಗಳಿಗೂ, ಸ್ವಾಹಾದೇವಿಯು ಅಗ್ನಿಗೂ, ದಕ್ಷಬ್ರಹ್ಮನ ಅನುಮತಿಯಂತೆ ಪತ್ನಿಯರಾದರು. ಅಂದರೆ ದಕ್ಷಬ್ರಹ್ಮನೇ ಅವರವರಿಗೆ ಕೊಟ್ಟು ವಿವಾಹವನ್ನು ಬೆಳೆ ಸಿದನು.

೧೬. ಭೃಗುಪತ್ನಿಯಾದ ಖ್ಯಾತಿಯೆಂಬುವಳಲ್ಲಿ ಸಾಕ್ಷಾಲ್ಲಕ್ಷ್ಮಿಯು ಜನಿಸಿ ದಳು. ಅವಳೇ ವಿಷ್ಣುಪತ್ನಿಯಾದ ಲಕ್ಷ್ಮಿಯು. ಧಾತಾ, ವಿಧಾತಾ ಎಂಬ ಇಬ್ಬರು ದೇವತೆಗಳು ಮೇರುಪರ್ವತದ ಅಳಿಯಂದಿರು.

೧೭. ಮಹಾತ್ಮನಾದ ಮೇರುವಿಗೆ ಆಯತಿ, ನಿಯತಿ, ಎಂಬಿಬ್ಬರು ಹೆಣ್ಣು ಮಕ್ಕಳಾದರು. ಅವರಿಬ್ಬರಿಗೂ ಇಬ್ಬರು ಗಂಡುಮಕ್ಕಳು ಹುಟ್ಟಿದರು. ಅವರಲ್ಲಿ ಮೊದಲನೆಯವನೇ ಪ್ರಾಣನೆಂಬುವನು.

ಮೃಕಂಡುರಥ ತತ್ಪುತ್ರೋ ಮಾರ್ಕಂಡೇಯೋ ಮೃಕಂಡುತಃ ।
ಅಭೂದ್ವೇದಶಿರಾನಾಮ ಪ್ರಾಣಸ್ಯ .ಮುನಿಸತ್ತಮಾಃ ॥ ೧೮ ॥

ಮರೀಚೇರಪಿ ಸಂಭೂತಿಃ ಪೌರ್ಣಮಾಸಮಸೂಯತ ।
ಕನ್ಯಾಚತುಷ್ಟಯಂ ಚೈವ ಶ್ರದ್ಧಾದೀನಾಂ ದ್ವಿಜೋತ್ತಮಾಃ ॥ ೧೯ ॥

ಕರ್ದಮಂ ಚಾಂಬರೀಷಂ ಚ ಪುಲಹಾತ್ಸುಷುವೇ ಕ್ಷಮಾ ।
ದುರ್ವಾಸಸಂ ತಥಾ ಸೋಮಂ ದತ್ತಾತ್ರೇಯಂ ಚ ಯೋಗಿನಂ ॥ ೨೦ ॥

ಅನಸೂಯಾ ತು ಸುಷುವೇ ಪುತ್ರಾನತ್ರೇರಕಲ್ಮಷಾನ್ ।
ಸಿನೀವಾಲೀಂ ಕುಹೂಂ ಚೈವ ರಾಕಾಮನುಮತಿಂ ತಥಾ ॥ ೨೧ ॥
ಸ್ಮೃತಿಶ್ಚಾಂಗಿರಸಃ ಪುತ್ರೀಃ ಸೂತೇ ಲಕ್ಷಣಸಂಯುತಾಃ ।

---

೧೮. ಮೃಕಂಡುವೇ ಎರಡನೆಯ ಮಗನು. ಆ ಮೃಕಂಡುವಿನ ಮಗನೇ ಮಾರ್ಕಂಡೇಯನು. ಪ್ರಾಣನೆಂಬುವನಿಗೆ ವೇದಶಿರಸ್ಸೆಂಬ ಮಗನು ಜನಿಸಿದನು

೧೯. ಮರೀಚಿ ಪತ್ನಿಯಾದ ಸಂಭೂತಿಯು ಪೌರ್ಣಮಾಸನೆಂಬ ಮಗನನ್ನು ಹೆತ್ತಳು. ಶ್ರದ್ಧೆಯೇ ಮೊದಲಾದ ಧರ್ಮರಾಯನ ಪತ್ನಿಯರಿಗೆ ನಾಲ್ಕು ಜನ ಹೆಣ್ಣುಮಕ್ಕಳು ಜನಿಸಿದರು.

೨೦. ಪುಲಹನ ಪತ್ನಿಯಾದ ಕ್ಷಮೆಯು ಕರ್ದಮ, ಅಂಬರೀಷ, ಎಂಬ ಮಕ್ಕಳನ್ನು ಪಡೆದಳು. ದುರ್ವಾಸ, ಸೋಮ, ದತ್ತಾತ್ರೇಯ, ಯೋಗಿ ಮೊದಲಾದ ಮಕ್ಕಳನ್ನು.

೨೧. ಅನಸೂಯೆಯು ಅತ್ರಿಮಹರ್ಷಿಯ ಸಂಪರ್ಕದಿಂದ ಪಡೆದಳು. ಅವರು ಶುದ್ಧಹೃದಯರಾಗಿ ಮಹಾತ್ಮರೆನಿಸಿಕೊಂಡರು. ಆಂಗಿರಸಪತ್ನಿಯಾದ ಸ್ಮೃತಿಯು ಸರ್ವಲಕ್ಷಣ ಸಂಪನ್ನರಾದ ಸಿನೀವಾಲೀ, ಕುಹೂ, ರಾಕಾ, ಅನುಮತಿ ಎಂಬ ಹೆಣ್ಣು ಮಕ್ಕಳನ್ನು ಹೊಂದಿದಳು.

ಪ್ರೀತ್ಯಾಂ ಪುಲಸ್ತ್ಯಾದಭವದ್ದತ್ತೋ ನಿರ್ಮಾನನ್ಯೈಃ * ಸುತಃ ॥
ಪೂರ್ವಜನ್ಮನಿ ಯೋಽಗಸ್ತ್ಯಃ ಖ್ಯಾತಃ ಸ್ವಾಯಂಭುವೇಽಂತರೇ ॥ ೨೨ ॥
ಪುತ್ರಾಣಾಂ ಷಷ್ಟಿಸಾಹಸ್ರಂ ಸಂತತಿಃ ಸುಷುವೇ ಕ್ರತೋಃ ॥ ೨೩ ॥

ವಾಲಖಿಲ್ಯಾ ಇತಿ ಖ್ಯಾತಾಃ ಸರ್ವೇ ತೇ ಚೋರ್ಧ್ವರೇತಸಃ ।
ವಸಿಷ್ಠಶ್ಚ ತಥೋರ್ಜಾಯಾಂ ಸಪ್ತ ಪುತ್ರಾನಜೀಜನತ್ ॥ ೨೪ ॥

ರಜೋ ಗೋತ್ರೋಽರ್ಧ್ವಬಾಹುಶ್ಚ ಸವನಶ್ಚಾನಘಸ್ತಥಾ ।
ಸುತಪಾಃ ಶುಕ್ಲ ಇತ್ಯೇತೇ ಪುಂಡರೀಕಾ ಚ ಕನ್ಯಕಾ ॥ ೨೫ ॥

ಬ್ರಹ್ಮಣಸ್ತನಯೋ ವಹ್ನಿರ್ಯೋಽಸೌ ರುದ್ರಾತ್ಮಕಃ ಸ್ಮೃತಃ ।
ತಸ್ಮಾತ್ಸ್ವಾಹಾ ಸುತಾಲ್ಲೇಭೇ ತ್ರೀನುದಾರಾನ್ ಗುಣಾಧಿಕಾನ್ ॥ ೨೬ ॥

ಪಾವಕಃ ಪವಮಾನಶ್ಚ ಶುಚಿರೇತೇಽಗ್ನಯಸ್ತ್ರಯಃ ।
ನಿರ್ಮಥ್ಯಃ ಪವಮಾನಶ್ಚ ವೈದ್ಯುತಃ ಪಾವಕಃ ಸ್ಮೃತಃ ॥ ೨೭ ॥

---

೨೩. ಪುಲಸ್ತ್ಯಋಷಿಯ ದೆಸೆಯಿಂದ ಪ್ರೀತಿಯು ನಿರ್ನಾಮನೆಂಬ ಮಗನನ್ನೂ, ಸ್ವಾಯಂಭುವಮನ್ವಂತರದಲ್ಲಿ ಪ್ರಸಿದ್ಧನಾಗಿದ್ದ ಅಗಸ್ತ್ಯನನ್ನೂ, ಮಕ್ಕಳನ್ನಾಗಿ ಪಡೆದಳು. ಹಾಗೆಯೇ ಕ್ರತುವಿನ ಸಂಪರ್ಕದಿಂದ ಸಂತತಿಯೆಂಬುವಳು ಅರುವತ್ತು ಸಾವಿರ ಮಕ್ಕಳನ್ನು ಪಡೆದಳು.

೨೪. ಅವರೇ ಊರ್ಧ್ವರೇತಸ್ಕರೆಂದು ಪ್ರಸಿದ್ಧರಾದ ವಾಲಖಿಲ್ಯಾದಿಗಳು. ವಸಿಷ್ಠನಿಗೆ ಊರ್ಜಾದೇವಿಯಲ್ಲಿ ಏಳುಜನ ಮಕ್ಕಳು ಜನಿಸಿದರು.

೨೫. ರಜಸ್ಸು, ಗೋತ್ರ, ಊರ್ಧ್ವಬಾಹು, ಸವನ, ಅನಘ, ಸುತಪಾ, ಶುಕ್ಲ, ಎಂಬ ಏಳುಜನ ಗಂಡುಮಕ್ಕಳೂ, ಪುಂಡರೀಕಾ ಎಂಬ ಹೆಣ್ಣುಮಗಳೂ, ವಸಿಷ್ಠರಿಗೆ ಇದ್ದರು.

೨೬. ಬ್ರಹ್ಮನಿಗೆ ಮಗನೆನಿಸಿಕೊಂಡಿದ್ದ ರುದ್ರಸಂಜ್ಞಕವಾದ ಅಗ್ನಿಯ ಹೆಂಡತಿಯೇ ಸ್ವಾಹಾದೇವಿಯು. ಆ ಸ್ವಾಹಾದೇವಿಗೆ ಮೂವರು ಗುಣವಂತರಾದ ಮಕ್ಕಳಾದರು. ಅವರು ಬಹು ಉದಾರರು.

೨೭. ಪಾವಕ, ಪವಮಾನ, ಶುಚಿ, ಎಂಬ ಮೂವರೇ ಅಗ್ನಿಪುತ್ರರು. ಅವರಲ್ಲಿ ಯಾಗದಲ್ಲಿ ಸ್ತುತ್ಯನಾದ ನಿರ್ಮಥ್ಯನೆಂಬುವನೇ ಪವಮಾನನು. ವೈದ್ಯುತನೇ ಪಾವಕಾಗ್ನಿಯು.

---

* ನಿರ್ನಾಮ, ನ್ಯೈ. ಎಂಬ ಪಾಠಾಂತರವಿದೆ.

ಸೂರ್ಯೇ ತಪತಿ ಯೋ ವಹ್ನಿಃ ಶುಚಿರಗ್ನಿರಿಹೇಷ್ಯತೇ ।
ಬಭೂವುಸ್ತೇ ಸಂತತೌ ತೇಷಾಂ ಚತ್ವಾರಿಂಶಚ್ಚ ಪಂಚ ಚ ॥ ೨೮ ॥

ಪಾವಕಾದ್ಯಾಸ್ತ್ರಯಶ್ಚೈತೇ ಚತ್ವಾರಿಂಶತ್ತಥಾ ನವ ।
ಯಜ್ಞೇಷು ಭಾಗಿನಸ್ಸರ್ವೇ ತಥಾ ಸರ್ವೇ ತಪಸ್ವಿನಃ ॥ ೨೯ ॥

ರುದ್ರಾರ್ಚನರತಾಃ ಸರ್ವೇ ತ್ರಿಪುಂಡ್ರಾಂಕಿತಮಸ್ತಕಾಃ ।
ಅಯಜ್ವಾನಶ್ಚ ಯಜ್ವಾನಃ ಪಿತರೋ ಬ್ರಹ್ಮಣಸ್ಸುತಾಃ ॥ ೩೦ ॥

ಅಗ್ನಿಷ್ವಾತ್ತಾ ಬರ್ಹಿಷದೋ ದ್ವಿಧಾ ತೇಷಾಂ ವ್ಯವಸ್ಥಿತಿಃ ।
ಸ್ವಧಾಽಸುಸುಷುವೇ ತೇಭ್ಯಃ ಕನ್ಯೇ ದ್ವೇ ಲೋಕವಿಶ್ರುತೇ ॥ ೩೧ ॥

---

೨೮. ಸೂರ್ಯನ ಮಧ್ಯದಲ್ಲಿ ಪ್ರಜ್ವಲಿಸುವ ಅಗ್ನಿಗೆ ಶುಚಿರಗ್ನಿ ಎಂದು ಹೆಸರು. ಆ ಅಗ್ನಿಗಳ ಸಂಪರ್ಕದಿಂದ ಸಂತತಿ ಎಂಬುವಳಲ್ಲಿ ನಾಲ್ವತ್ತೈದು ಜನ ಮಕ್ಕಳಾದರು.

೨೯. ಈ ಮೂರು ಅಗ್ನಿಗಳೂ, ನಾಲ್ವತ್ತೈದು ಅಗ್ನಿಪುತ್ರರೂ, ಪ್ರಧಾನಾಗ್ನಿಯೂ ಸೇರಿ ಒಟ್ಟು ನಲವತ್ತೊಂಬತ್ತು ಅಗ್ನಿಗಳು, ಯಜ್ಞದಲ್ಲಿ ಭಾಗವಹಿಸತಕ್ಕವುಗಳಾಗುತ್ತವೆ. ಅಲ್ಲದೆ ಈ ಅಗ್ನಿಗಳೆಲ್ಲವೂ ತಪಸ್ಸಿನಿಂದ ಶುದ್ಧವಾದವುಗಳು.

೩೦. ಈ ಬ್ರಹ್ಮಪುತ್ರರೆಲ್ಲರೂ, ರುದ್ರಾರ್ಚನೆಯಲ್ಲಿ ಆಸಕ್ತರಾಗಿ, ತ್ರಿಪುಂಡ್ರವನ್ನು ಹಣೆಯಲ್ಲಿ ಧರಿಸಿಕೊಂಡು, ಯಜ್ಞಯಾಗಾದಿಗಳಲ್ಲಿ ನಿರತರಾಗಿ ಸದ್ಧರ್ಮಾಚರಣೆಯಲ್ಲಿಯೇ ಕಾಲಕಳೆಯುತ್ತಿದ್ದರು. ಇವರು ಸರ್ವರಿಗೂ ಯಜ್ಞಯಾಗಾದಿಗಳಲ್ಲಿ ಮನಸ್ಸುಂಟಾಗುವಂತೆ ಮಾಡುತ್ತಿದ್ದರು.

೩೧. ಆ ಅಗ್ನಿಸಮೂಹವು, ಅಗ್ನಿಷ್ವಾತ್ತ, ಬರ್ಹಿಷದವೆಂದು ಎರಡುಗುಂಪಾಗಿರುತ್ತದೆ. ಸ್ವಧಾದೇವಿಯು ಅವರಿಂದ ಅನಂತರ ಲೋಕಪ್ರಸಿದ್ಧರಾದ ಇಬ್ಬರು ಹೆಣ್ಣುಮಕ್ಕಳನ್ನು ಹೆತ್ತಳು.

ಮೇನಾಂ ಚ ಧಾರಿಣೀಂ ತತ್ರ ಯೋಗವರ್ಗರತೇ ಉಭೇ ।
ಮೇನಾ ಹಿಮವತಸ್ಸೂತೇ ಮೈನಾಕಂ ಕ್ರೌಂಚಮೇವ ಚ ॥ ೩೨ ॥

ಗೌರೀಂ ಚ ಗಂಗಾಂ ಚ ತತಃ ಕನ್ಯೇ ದ್ವೇ ಲೋಕಮಾತರೌ ।
ಮೇರೋಸ್ತು ಧಾರಿಣೀ ಸೂತೇ ಮಂದರಂ ಚಾರುಕಂದರಂ ॥ ೩೩ ॥

ಮಹಾದೇವಪ್ರಿಯತಮಂ ನಾನಾಧಾತುವಿಚಿತ್ರಿತಂ ।
ಧಾರಿಣೀ ಸುಷುವೇ ವೇಲಾಂ ನಿಯತಿಂ ಚಾಯತಿಂ ತಥಾ ॥ ೩೪ ॥

ಸಾಗರಾತ್ಸುಷುವೇ ವೇಲಾ ಸಾಮುದ್ರೀಂ ನಾಮ ನಾಮತಃ ।
ಪ್ರಾಚೀನಬರ್ಹಿಷಾ ಸಾ ಚ ದಶಪುತ್ರಾನಜೀಜನತ್ ॥ ೩೫ ॥

ಪ್ರಾಚೇತಸ ಇತಿ ಖ್ಯಾತಾ ಸರ್ವೇ ಸ್ವಾಯಂಭುವೇಽಂತರೇ ।
ಭವಶಾಪಾದಭೂತ್ಪುತ್ರೋ ಯೇಷಾಂ ದಕ್ಷಃ ಪ್ರಜಾಪತಿಃ ॥ ೩೬ ॥

---

೩೨. ಮೇನೆ, ಧಾರಿಣಿ ಎಂಬಿಬ್ಬರೇ ಅವರು. ಅವರು ಯಾವಾಗಲೂ ಯೋಗ ಮಾರ್ಗದಲ್ಲಿ ನಿರತರಾಗಿರುತ್ತಿದ್ದರು. ಹಿಮವಂತನನ್ನು ವಿವಾಹವಾಗಿ ಮೇನಾದೇವಿಯು ಮೈನಾಕ ಮತ್ತು ಕ್ರೌಂಚ ಎಂಬ ಇಬ್ಬರು ಹೆಣ್ಣುಮಕ್ಕಳನ್ನು ಪಡೆದಳು.

೩೩. ಹಾಗೆಯೇ ಮೇನಾದೇವಿಗೆ ಗೌರೀ, ಗಂಗೆ ಎಂಬ ಇಬ್ಬರು ಹೆಣ್ಣು ಮಕ್ಕಳೂ ಜನಿಸಿದರು. ಮೇರುಪತ್ನಿಯಾದ ಧಾರಿಣೀದೇವಿಯು ಬಹುಸುಂದರವಾದ ರಮ್ಯಪ್ರದೇಶವುಳ್ಳ ಮಂದರಪರ್ವತರಾಜನನ್ನು ಪಡೆದಳು.

೩೪. ಆ ಮಂದರಪರ್ವತವು ಮಹಾದೇವನಿಗೆ ಅತ್ಯಂತ ಪ್ರಿಯವಾದದ್ದಾಗಿಯೂ ನಾನಾವಿಧವಾದ ಧಾತುಗಳಿಂದ ಚಿತ್ರಿತವಾಗಿಯೂ ಇದೆ. ಅನಂತರ ಅದೇ ಧಾರಿಣಿಯು ವೇಲೆ, ನಿಯತಿ, ಆಯತಿ, ಎಂಬ ಹೆಣ್ಣುಮಕ್ಕಳನ್ನ ಪಡೆದಳು.

೩೫. ವೇಲಾದೇವಿಯು ಸಮುದ್ರರಾಜನನ್ನು ಪತಿಯನ್ನಾಗಿ ಮಾಡಿಕೊಂಡು ಸಾಮುದ್ರೀ ಎಂಬ ಮಗಳನ್ನು ಪಡೆದಳು. ಆ ಸಾಮುದ್ರಿಯು ಇಂದ್ರನನ್ನು ವಿವಾಹ ಮಾಡಿಕೊಂಡು ಹತ್ತುಮಕ್ಕಳನ್ನು ಹೆತ್ತಳು.

೩೬. ಆ ಹತ್ತುಜನರೂ ಸ್ವಾಯಂಭುವ ಮನ್ವಂತರದಲ್ಲಿ ಪ್ರಾಚೇತಸರೆಂದು ಹೆಸರು ಪಡೆದರು. ಆ ಪ್ರಾಚೇತಸರಿಗೆ ಈಶ್ವರನ ಶಾಪಬಂದು, ಅಲ್ಲಿ ದಕ್ಷಪ್ರಜಾಪತಿ ಯೆಂಬುವನು ಉದ್ಭವಿಸಿದನು.

ಏಷಾ ದಕ್ಷಸ್ಯ ಕನ್ಯಾನಾಂ ಸಂತತಿಃ ಕಥಿತಾ ಮಯಾ ।
ಅಥೇದಾನೀಂ ಮನೋಃ ಪುತ್ರಸಂತತಿಂ ಕಥಯಾಮಿ ವಃ ॥ ೩೭ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಮರೀಚ್ಯಾದಿಸರ್ಗದಕ್ಷ ಕನ್ಯಾಸಂತತಿ ಕಥನಂ ನಾಮ ಷಡ್ವಿಂಶೋಽಧ್ಯಾಯಃ

---

೩೭. ಎಲೈ ಶೌನಕಾದಿ ಮಹರ್ಷಿಗಳೇ, ಇಲ್ಲಿನವರೆಗೆ ದಕ್ಷಬ್ರಹ್ಮನ ಹೆಣ್ಣು ಮಕ್ಕಳಿಂದ ಬೆಳೆದ ಸಂತಾನವನ್ನೆಲ್ಲಾ ವಿಸ್ತಾರವಾಗಿ ಹೇಳಿರುವೆನು. ಇನ್ನು ಮುಂದೆ, ಮನುವಂಶದ ರಾಜನ ಸಂತಾನವನ್ನೆಲ್ಲಾ ನಿಮಗೆ ವಿವರವಾಗಿ ಹೇಳುವೆನು. ಎಂದು ಸೂತಮಹರ್ಷಿಗಳು ಶೌನಕಾದಿಗಳಿಗೆ ಹೇಳಿದರು.

೩೬. ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರದಲ್ಲಿ ಸೂತಶೌನಕ ಸಂವಾದ ರೂಪವಾಗಿ, ಮರೀಚಿಯೇ ಮೊದಲಾದವರ, ಮತ್ತು ದಕ್ಷಬ್ರಹ್ಮನ ಕನ್ಯಾಸಂತತಿಯ ವಿಷಯವನ್ನು ವರ್ಣಿಸುವಂತಹ ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

॥ ೨೭ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಸಪ್ತವಿಂಶೋಽಧ್ಯಾಯಃ

॥ ಸೂತ ಉವಾಚ ॥

ಉತ್ತಾನಪಾದಸ್ಯ ಸುತೋ ಧ್ರುವೋ ನಾಮ ಮಹಾಮುನಿಃ ।
ಆರಾಧ್ಯ ಪರಮಂ ದೇವಂ ನಾರಾಯಣಮನಾಮಯಂ ॥ ೧ ॥

ನಿರ್ಮಮೋ ನಿರಹಂಕಾರಸ್ತನ್ನಿಷ್ಠಸ್ತತ್ಪರಾಯಣಃ ।
ಪ್ರಸಾದಾತ್ತಸ್ಯ ದೇವಸ್ಯ ಪ್ರಾಪ್ತವಾನ್ ಸ್ಥಾನಮುತ್ತಮಂ ॥ ೨ ॥

ಧ್ರುವಸ್ಯ ಪುತ್ರಾಶ್ಚತ್ವಾರಃ ಸೃಷ್ಟಿರ್ಧನ್ಯಸ್ತಥಾ ಪರಃ ।
ಹರ್ಯಃ ಶಂಭುರ್ಮಹಾತ್ಮಾನೋ ವೈಷ್ಣವಾಃ ಪ್ರಥಿತೌಜಸಃ ॥ ೩ ॥

ಇಪ್ಪತ್ತೇಳನೆಯ ಅಧ್ಯಾಯ.

೧. ಉತ್ತಾನಪಾದರಾಯನ ಮಗನಾದ ಧ್ರುವನು ಮಹಾಮಹಿಮನಾದ ಶ್ರೀಮನ್ನಾರಾಯಣನ ಪವಿತ್ರಮೂರ್ತಿಯನ್ನು ಉತ್ತಮವಾದ ತಪಸ್ಸಿನ ಕ್ರಮದಿಂದ ಆರಾಧಿಸಿದನು.

೨. ಧ್ರುವನು ಸ್ವಭಾವದಿಂದಲೇ ಮಮಕಾರವನ್ನೂ ಅಹಂಕಾರವನ್ನೂ ಬಿಟ್ಟವನಾಗಿ ತದೇಕಧ್ಯಾನದಿಂದ ಭಗವಂತನನ್ನು ಸೇವಿಸಿದನು. ಇದರಿಂದ ಭಗವಂತನು ಪ್ರಸನ್ನನಾಗಿ, ಧ್ರುವನಿಗೆ ಉತ್ತಮವಾದ ಮತ್ತು ಶಾಶ್ವತವಾದ ಸ್ಥಾನವೊಂದನ್ನು ಅನುಗ್ರಹಿಸಿದನು.

೩. ಧ್ರುವನಿಗೆ, ಸೃಷ್ಟಿ, ಧನ್ಯ, ಹರ್ಯ, ಶಂಭು ಎಂಬದಾಗಿ ನಾಲ್ವರು ಮಕ್ಕಳು ಜನಿಸಿದರು. ಅವರು ಕೇವಲ ವಿಷ್ಣುಭಕ್ತರಾಗಿ ಕಾಂತಿಯುತರಾಗಿ ಪ್ರಕಾಶಿಸುತ್ತಿದ್ದರು

ಛಾಯಾ ಪಂಚಸುತಾನ್ ಸೂತೇ ಸೃಷ್ಟೇರ್ಧರ್ಮಪರಾಯಣಾನ್ ||
ರಿಪುಂ ರಿಪುಂಜಯಂ ವಿಪ್ರಂ ವೃಷಲಂ ವೃಕತೇಜಸಂ || ೪ ||

ರಿಪೋರ್ಭಾರ್ಯಾ ತು ಬೃಹತೀ ಪ್ರಸೂತೇ ಚಕ್ಷುಷಂ ಸುತಂ ।
ಸೂತೇ ಪುಷ್ಕರಿಣೀ ಪುತ್ರಂ ಚಕ್ಷುಷಶ್ಚಾಕ್ಷುಷಂ ಮನುಂ || ೫ ||

ತದ್ವಂಶಜಾ ಅಸಂಖ್ಯಾತಾ ಅಂಗಕ್ರತು ಶಿವಾದಯಃ ।
ಅಂಗಾದ್ವೇನಸ್ತತೋ ವೈನ್ಯಸ್ತಸ್ಮಾತ್ಪೃಥುರಿತಿ ಸ್ಮೃತಃ || ೬ ||

ಖ್ಯಾತ: ಸ ಪೃಥಿವೀಪಾಲೋ ಯೇನ ದುಗ್ಧಾ ವಸುಂಧರಾ ।
ನ ತತ್ಸಮೋ ನೃಪಃ ಕಶ್ಚಿತ್ ವಿದ್ಯತೇ ಪೃಥಿವೀತಲೇ || ೭ ||

ವಾಸುದೇವಾರ್ಚನರತೋ ವಾಸುದೇವಪರಾಯಣಃ ।
ತಪಸಾಽಽರಾಧ್ಯ ಗೋವಿಂದಂ ಗೋವರ್ಧನಗಿರೌ ಶುಭೇ || ೮ ||

---

೪. ಸೃಷ್ಟಿಯೆಂಬವನ ಪತ್ನಿಯೇ ಛಾಯೆಯು. ಆಕೆಯು ಸದಾ ಧರ್ಮಿಷ್ಠರಾಗಿರುವಂತಹ ರಿಪು, ರಿಪುಂಜಯ, ವಿಪ್ರ, ವೃಷಲ, ವೃಕತೇಜಸ್ಸು ಎಂಬ ಎಂಬ ಐದು ಜನ ಮಕ್ಕಳನ್ನು ಪಡೆದಳು.

೫. ರಿಪುವೆಂಬವನು ಬೃಹತೀ ಎಂಬ ಪತ್ನಿಯಲ್ಲಿ ಚಕ್ಷುಸ್ಸೆಂಬ ಮಗನನ್ನು ಹೊಂದಿದನು. ಆ ಚಕ್ಷುಸ್ಸು, ಪುಷ್ಕರಿಣೀ ಎಂಬ ಹೆಂಡತಿಯೊಡನೆ ಚಾಕ್ಷುಷಮನುವೆಂಬ ಮಗನನ್ನು ಪಡೆದನು.

೬. ಚಾಕ್ಷುಷಮನುವಿನ ವಂಶದಲ್ಲಿ ಅಂಗ, ಕ್ರತು, ಶಿವ, ಇವರೇ ಮೊದಲಾದ ಅಸಂಖ್ಯಾತ ಪುತ್ರರು ಜನಿಸಿದರು. ಅದರಲ್ಲಿ ಅಂಗನೆಂಬುವನಿಂದ, ವೇನನೂ, ವೇನನಿಂದ, ವೈನ್ಯನೂ, ವೈನ್ಯನಿಂದ ಪೃಥುವೂ, ಹೀಗೆ ಕ್ರಮವಾಗಿ ಮಕ್ಕಳಾದರು.

೭. ಆ ಪೃಥುಚಕ್ರವರ್ತಿಯು ಭೂಮಿಯನ್ನು ಬಹಳ ವಿಚಕ್ಷಣೆಯಿಂದ ಆಳಿದನು. ಅವನ ಕಾಲದಲ್ಲಿ ಭೂಮಿಯು ಸರ್ವಸಂಪದ್ಭರಿತವಾಗಿ ಜನರಿಗೆ ಆನಂದದಾಯಕವಾಗಿತ್ತು. ಪೃಥ್ವಿಯಲ್ಲಿ ಅವನಷ್ಟು ಧರ್ಮದಿಂದ ರಾಜ್ಯವಾಳಿದವನು ಮತ್ತಾರೂ ಸಿಕ್ಕಲಾರರು.

೮. ಆ ಪೃಥುವು ಯಾವಾಗಲೂ ವಿಷ್ಣುಭಕ್ತನಾಗಿ, ವಿಷ್ಣುವಿನಲ್ಲಿ ಯಾವಾಗಲೂ ದೃಢಮನಸ್ಸಿಟ್ಟು ಒಂದುಸಾರಿ ಗೋವರ್ಧನ ಪರ್ವತದಲ್ಲಿ ಮಹಾವಿಷ್ಣುವನ್ನು ಕುರಿತು ಭಕ್ತಿಯಿಂದ ತಪಸ್ಸುಮಾಡಿದನು.

ಪ್ರೀತಸ್ತಮಬ್ರವೀದ್ವಿಷ್ಣುಃ ಪೃಥುಂ ಮುನಿವರೋತ್ತಮಃ ।
ಮತ್ಪ್ರಸಾದೇನ ರಾಜರ್ಷೇ ಪುತ್ರೌ ತವ ಭವಿಷ್ಯತಃ ॥ ೯ ॥

ಸಾರ್ವಭೌಮೌ ಮಹಾತ್ಮಾನೌ ಮದ್ಭಕ್ತೌ ಪಿತೃತತ್ಪರೌ ।
ಏವಂ ಲಬ್ಧವರೋ ರಾಜಾ ದೇವೇಶೇ ಪುರುಷೋತ್ತಮೇ ॥ ೧೦ ॥

ಆಸ್ಥಾಯ ಪರಮಾಂ ಭಕ್ತಿಂ ಭಗವದ್ಭಾವಮಾಶ್ರಿತಃ ।
ಪೃಥೋರ್ಭಾರ್ಯಾ ಮಹಾಭಾಗಾ ಕಾಲೇನ ಸುಷುವೇ ಸುತೌ ॥ ೧೧ ॥

ಶಿಖಂಡಿನಂ ಹವಿರ್ಧಾನಂ ಸುಶೀಲಶ್ಚ ಶಿಖಂಡಿನಃ ।
ಶ್ವೇತಾಶ್ವತರನಾಮಾನಂ ಶಿವಧ್ಯಾನೈಕತತ್ಪರಂ ॥ ೧೨ ॥

---

೯. ಆ ತಪಸ್ಸಿಗೆ ವಿಷ್ಣುವು ಮೆಚ್ಚಿ, ಪೃಥು ಚಕ್ರವರ್ತಿಗೆ ಪ್ರಸಿದ್ಧರಾದ ಇಬ್ಬರು ಮಕ್ಕಳು ಜನಿಸುವಂತೆ ಶ್ರೇಷ್ಠವಾದ ವರವನ್ನಿತ್ತನು.

೧೦. ಅಲ್ಲದೆ ಆ ಮಕ್ಕಳಿಬ್ಬರೂ ಮುಂದೆ ಚಕ್ರವರ್ತಿಗಳಾಗಿ, ಮಹಾತ್ಮರೆನಿಸಿಕೊಂಡು, ವಿಷ್ಣುಭಕ್ತರಾಗಿ ಪಿತೃಸೇವಾತತ್ಪರರಾಗುವರೆಂದು ವಿಷ್ಣುವು ಅಭಯಪ್ರಧಾನಮಾಡಿದನು. ಆದರಿಂದ ರಾಜನು ಸಂತುಷ್ಟನಾಗಿ ಸರ್ವದಾ ಮಹಾವಿಷ್ಣುವನ್ನೇ ಸ್ಮರಿಸುತ್ತಾ ತೃಪ್ತನಾಗಿದ್ದನು.

೧೧. ಹೀಗೆ ಭಕ್ತಿಪರವಶನಾಗಿ ಪೃಥುವು ಭಗವಂತನ ವರವನ್ನೇ ಎದುರು ನೋಡುತ್ತಿರಲು, ಪೃಥುಚಕ್ರವರ್ತಿಯ ಪತಿಯು ಕಾಲಕ್ರಮದಲ್ಲಿ ಇಬ್ಬರು ಪುಣ್ಯಶಾಲಿಗಳಾದ ಗಂಡುಮಕ್ಕಳನ್ನು ಹೆತ್ತಳು.

೧೨. ಅವರೇ ಶಿಖಂಡಿ, ಹವಿರ್ಧಾನ ಎಂಬುವರು. ಆ ಶಿಖಂಡಿಗೆ ಸುಶೀಲನೆಂಬ ಪುತ್ರನುದಯಿಸಿದನು. ಸುಶೀಲನು, ಶ್ವೇತಾಶ್ವತರ ನೆಂಬ ಶಿವಭಕ್ತಾಗ್ರೇಸರನನ್ನು ಸೇವಿಸಿ, ಅವನಿಂದ ಈಶ್ವರಸಂಬಂಧವಾದ ಜ್ಞಾನವನ್ನು ಪಡೆದನು, ಎಂದು ಸೂತಮಹರ್ಷಿಗಳು ಶೌನಕಾದಿಗಳಿಗೆ ಹೇಳಲು,

॥ ಋಷಯ ಊಚುಃ ॥

ಸುಶೀಲೇನ ಕಥಂ ರಾಜ್ಞಾ ಪ್ರಾಪ್ತಂ ಜ್ಞಾನಮನುತ್ತಮಂ ।
ವಯಂ ತಚ್ಛ್ರೋತುಮಿಚ್ಛಾಮೋ ಬ್ರೂಹಿ ಸೂತ ಮಹಾಮತೇ ॥ ೧೩ ॥

॥ ಸೂತ ಉವಾಚ ॥

ಯೋಽಸೌ ಶಿಖಂಡಿನಃ ಪುತ್ರೋ ಬ್ರಹ್ಮಚರ್ಯಾಶ್ರಮೇ ರತಃ ।
ಅಧೀತ್ಯ ವಿಧಿವದ್ವೇದಾನ್ ಪರಂ ವೈರಾಗ್ಯಮಾಸ್ಥಿತಃ ॥ ೧೪ ॥

ವಿಚಾರಃ ಶ್ರೇಯಸೇ ತಸ್ಯ ಕದಾಚಿತ್ಸಮಭೂದ್ದ್ವಿಜಾಃ ।
ಪ್ರವೃತ್ತಂ ಚ ನಿವೃತ್ತಂ ಚ ಕರ್ಮ ಯದ್ದ್ವಿವಿಧಂ ಪರಂ ॥ ೧೫ ॥

ತಯೋರಾತ್ಯಂತಿಕೀ ಮುಕ್ತಿರ್ಮಮ ಕೇನ ಭವಿಷ್ಯತಿ ।
ಇತಿ ಸಂಚಿಂತ್ಯ ಮನಸಾ ಜಗಾಮ ಹಿಮವದ್ಗಿರಿಂ ॥ ೧೬ ॥

---

೧೩. ಮತ್ತೆ ಕುತೂಹಲದಿಂದ ಶೌನಕಾದಿಗಳು ಸೂತಮಹರ್ಷಿಯನ್ನು ಕುರಿತು ಎಲೈ ಸೂತಮಹರ್ಷಿಗಳೇ, ಸುಶೀಲನೆಂಬ ರಾಜನು ಆ ಶ್ವೇತಾಶ್ವತರನ ಸಹಾಯದಿಂದ ಹೇಗೆ ಜ್ಞಾನಿಯಾದನೆಂಬುದನ್ನು ನಮಗೆ ವಿವರವಾಗಿ ತಿಳಿಸಬೇಕೆಂದು ಶೌನಕಾದಿಗಳು ಭಕ್ತಿಯಿಂದ ಕೇಳಿಕೊಳ್ಳಲು,

೧೪. ಸೂತನು ಹೀಗೆ ಹೇಳಲಾರಂಭಿಸಿದನು. "ಶಿಖಂಡಿಯ ಪುತ್ರನಾದ ಸುಶೀಲನು ಬ್ರಹ್ಮಚರ್ಯಾಶ್ರಮದಲ್ಲಿ ವಿಶೇಷಾಸಕ್ತಿಯನ್ನಿಟ್ಟು ವೇದವೇದಾಂತಗಳನ್ನು ವಿಧಿವತ್ತಾಗಿ ಅಧ್ಯಯನ ಮಾಡಿ ಹೆಚ್ಚಿನ ವೈರಾಗ್ಯವನ್ನು ಆಗಲೇ ಸಂಪಾದಿಸಿದನು.

೧೫. ಸುಶೀಲನು ಒಂದು ಸಾರಿ ತನ್ನ ಶ್ರೇಯಸ್ಸಿಗಾಗಿ ಕರ್ಮವಿಚಾರಮಾಡಿ ಕೊನೆಗೆ ಕರ್ಮವು ಪ್ರವೃತ್ತಿಕರ್ಮ ನಿವೃತ್ತಿಕರ್ಮ ಎಂದು ಎರಡು ವಿಧವಾಗಿದೆ ಯೆಂಬುದನ್ನು ತಿಳಿದುಕೊಂಡನು.

೧೬. ಅವೆರಡರಲ್ಲಿ ಯಾವುದು ಸಾಕ್ಷಾತ್ತಾಗಿ ಮೋಕ್ಷಸಾಧಕವಾಗುವುದು ಎಂಬುದನ್ನು ಮನಸ್ಸಿನಲ್ಲಿ ಯೋಚಿಸಿ, ಕೊನೆಗೆ ಅದನ್ನು ನಿರ್ಧರಿಸಲು ಹಿಮಾಚಲಕ್ಕೆ ಹೊರಟುಹೋದನು

ತತ್ರ ಧರ್ಮವನಂ ನಾಮ ಮುನಿಸಿದ್ಧೈರ್ನಿಷೇವಿತಂ ।
ಅಪಶ್ಯದ್ಯೋಗಿಭಿರ್ಜುಷ್ಟಂ ಮಹಾದೇವಕೃತಾಲಯಂ ॥ ೧೮ ॥

ಯತ್ರ ಸಿದ್ಧಾ ಮಹಾತ್ಮಾನೋ ಮರೀಚ್ಯಾದ್ಯಾ ಮಹರ್ಷಯಃ ।
ನಾರಾಯಣಶ್ಚ ಭಗವಾನ್ ತಥಾ ಚಾನ್ಯೇ ಸುರಾಸುರಾಃ ॥ ೧೯ ॥

ಸಮಾರಾಧ್ಯ ಮಹಾದೇವಂ ಸಿದ್ಧಿಂ ಪ್ರಾಪ್ತಾ ಹ್ಯನೇಕಶಃ ।
ಯತ್ರ ಮಂದಾಕಿನೀ ಗಂಗಾ ರಾಜತೇ ಹ್ಯಘಹಾರಿಣೀ ॥ ೨೦ ॥

ಅಪಶ್ಯದಾಶ್ರಮಂ ತಸ್ಯಾಸ್ತೀರೇ ಯೋಗೀಂದ್ರಸೇವಿತಂ ।
ಮಂದಾಕಿನೀ ಜಲೇ ತತ್ರ ಸ್ನಾತ್ವಾಭ್ಯರ್ಚ್ಯ ಮಹೇಶ್ವರಂ ॥ ೨೧ ॥

ಮಹಾದೇವಕಥಾಯುಕ್ತೈಃ ಸ್ತುತ್ವಾ ಸ ವಿವಿಧೈಃ ಸ್ತವೈಃ ।
ಧ್ಯಾಯಮಾನಃ ಕ್ಷಣಂ ತತ್ರ ಸ್ಥಿತೋ ವಿಶ್ವೇಶ್ವರಂ ಶಿವಂ ॥ ೨೨ ॥

---

೧೮. ಅಲ್ಲಿ ಧರ್ಮವನವೆಂಬ ಒಂದು ಪುಣ್ಯತಮವಾದ ಕ್ಷೇತ್ರವನ್ನು ಕಂಡನು. ಆ ವನದಲ್ಲಿ ಸಮಸ್ತ ಯೋಗಿಗಳೂ, ಸಿದ್ಧಮುನಿಗಳೂ, ಮಹಾದೇವನನ್ನು ಕುರಿತು ತಪಸ್ಸುಮಾಡುತ್ತಾ ವಾಸಿಸುತ್ತಿದ್ದರು. ಅದು ಅಂತಹ ಶಿವಕ್ಷೇತ್ರವಾಗಿತ್ತು.

೧೯. ಅಲ್ಲಿ ಮಹಾತ್ಮರಾದ ಮರೀಚಿಯೇ ಮೊದಲಾದ ಮಹರ್ಷಿವರ್ಯರು, ಸಾಕ್ಷಾತ್ ಶ್ರೀಮನ್ನಾರಾಯಣನೂ, ಇನ್ನೂ ಅನೇಕ ದೇವರಾಕ್ಷಸರೂ ಆ ಆಶ್ರಮದಲ್ಲಿಯೇ ವಾಸಿಸುತ್ತಾ ಮಹಾದೇವನನ್ನು ಆರಾಧಿಸುತ್ತಿದ್ದರು.

೨೦. ಆ ಆಶ್ರಮದಲ್ಲಿ ಅನೇಕ ಮಹರ್ಷಿಗಳು ಮಹಾದೇವನನ್ನು ಅರ್ಚಿಸಿ ಅದರಿಂದ ಸಿದ್ಧಿಯನ್ನು ಹೊಂದಿ ಮುಕ್ತರಾಗಿದ್ದರು. ಅಲ್ಲದೆ ಅಲ್ಲಿ ಜಗತ್ಪಾವನವಾದ ಗಂಗಾನದಿಯು ರಮ್ಯವಾಗಿ ಪ್ರವಹಿಸುತ್ತಿತ್ತು.

೨೧. ಆ ಗಂಗಾನದಿಯ ದಡದಲ್ಲಿಯೇ ಮಹಾಯೋಗಿಗಳೆಲ್ಲರೂ ತಪಸ್ಸ ಮಾಡುತ್ತಿರುವುದನ್ನು ಕಂಡು ತಾನೂ ಆ ಗಂಗಾನದಿಯಲ್ಲಿ ಸ್ನಾನಮಾಡಿ ಮಹೇಶ್ವರನನ್ನು ಅರ್ಚಿಸಲು ಆರಂಭಿಸಿದನು

೨೨. ವಿಧವಿಧವಾದ ಸ್ತೋತ್ರಗಳಿಂದ ಪರಮೇಶ್ವರನನ್ನು ಹೊಗಳಿದನು. ಶಿವಸಂಬಂಧವಾದ ಕಥೆಗಳನ್ನು ಬಹುವಾಗಿ ಶ್ರವಣಮಾಡಿದನು. ಹೀಗೆ ಸ್ವಲ್ಪಕಾಲ ನಿಶ್ಚಲಮನಸ್ಸಿನಿಂದ ವಿಶ್ವೇಶ್ವರನೂ, ಮಂಗಳ ಪ್ರದಾಯಕನೂ ಆದ ಪರಮೇಶ್ವರನನ್ನು ಧ್ಯಾನಿಸಿದನು.

ಶ್ವೇತಾಶ್ವತರನಾಮಾನಮಥಾಪಶ್ಯನ್ಮಹಾಮುನಿಂ ।
ಮಹಾಪಾಶುಪತಂ ಶಾಂತಂ ಜೀರ್ಣಕೌಪೀನವಾಸಸಂ ॥ ೨೩ ॥

ಭಸ್ಮೋದ್ಧೂಳಿತಸರ್ವಾಂಗಂ ತ್ರಿಪುಂಡ್ರತಿಲಕಾನ್ವಿತಂ ।
ಅಭಿವಂದ್ಯ ಮುನೇಃ ಪಾದೌ ಶಿರಸಾ ಪ್ರಾಂಜಲಿರ್ನೃಪಃ ॥ ೨೪ ॥

ಅಬ್ರವೀತ್ತಂ ಮುನಿಶ್ರೇಷ್ಠಂ ಸರ್ವಭೂತಾನುಕಂಪಿನಂ ।
ಅದ್ಯ ಧನ್ಯಃ ಕೃತಾರ್ಥೋಽಸ್ಮಿ ಸಫಲಂ ಜೀವಿತಂ ಮಮ ॥ ೨೫ ॥

ತಪಾಂಸಿ ಸಫಲಾನ್ಯೇವ ಜಾತಾನಿ ತವ ದರ್ಶನಾತ್ ।
ಭವಾಮಿ ತವ ಶಿಷ್ಯೋಽಹಂ ರಕ್ಷ ಸಂಸಾರಜಾದ್ಭಯಾತ್ ॥ ೨೬ ॥

ಯೋಗ್ಯತಾ ಮಮ ಚೇದಸ್ತಿ ಶಿಷ್ಯೋಽಹಂ ಭವಿತುಂ ತವ ।
ಸೋಽನುಗೃಹ್ಯಾಥ ಪುತ್ರತ್ವೇ ರಾಜಾನಂ ಮುನಿಪುಂಗವಃ ॥ ೨೭ ॥

---

೨೩. ಹಾಗಿರುವಾಗ ಒಂದು ಸಾರಿ ಅಲ್ಲಿಯೇ ಜೀರ್ಣವಾದ ಕೌಪೀನವೊಂತ್ರ ವಸ್ತ್ರವನ್ನು ಧರಿಸಿ, ಶಾಂತಸ್ವಭಾವದಿಂದ ಪರಮೇಶ್ವರನನ್ನೇ ಧ್ಯಾನಮಾಡುತ್ತಿದ್ದ ಶಿವಭಕ್ತಾಗ್ರೇಸರನಾದ ಶ್ವೇತಾಶ್ವತರನೆಂಬ ಮಹಾತ್ಮನೊಬ್ಬನನ್ನು ಸುಶೀಲನು ನೋಡಿದನು.

೨೪. ಆ ಮಹಾತ್ಮನ ದೇಹವೆಲ್ಲವೂ ಭಸ್ಮದಿಂದ ಬಳಿಯಲ್ಪಟ್ಟಿತ್ತು. ಹಣೆಯಲ್ಲಿ ತ್ರಿಪುಂಡ್ರದ ತಿಲಕವಿತ್ತು. ಇಂತಹ ತೇಜಸ್ವಿಯಾದ ಋಷಿಗೆ ಸುಶೀಲರಾಜನು ಭಕ್ತಿಪೂರ್ವಕವಾಗಿ ಎರಗಿ ಆತನ ಪಾದಗಳಿಗೆ ಸಾಷ್ಟಾಂಗ ಪ್ರಣಾಮಮಾಡಿದನು

೨೫. ಅತ್ಯಂತ ದಯಾಶಾಲಿಯಾದ ಆ ಮಹರ್ಷಿಯನ್ನು ಕುರಿತು ‘ ಸ್ವಾಮಿಯೇ ನಿಮ್ಮ ದರ್ಶನದಿಂದ ನಾನು ಇಂದು ಧನ್ಯನಾದೆನು. ನನ್ನ ಜೀವನವು ಸಾರ್ಥಕವಾಯಿತು.

೨೬. ನನ್ನ ತಪಸ್ಸು ಇಂದಿಗೆ ಸಫಲವಾಯಿತು. ನಿನಗೆ ನಾನು ಶಿಷ್ಯನಾಗುವೆನು. ಸಂಸಾರ ಸಂಬಂಧವಾದ ದುಃಖಗಳನ್ನು ನಿವಾರಿಸು.

೨೭. ನಾನು ನಿನಗೆ ಶಿಷ್ಯನಾಗಲು ಅರ್ಹನಾಗಿದ್ದರೆ, ಈಗಲೇ ನನ್ನನ್ನು ಶಿಷ್ಯನನ್ನಾಗಿ ಪರಿಗ್ರಹಿಸು” ಎಂದು ಅತಿ ವಿನಯದಿಂದ ಕೇಳಿಕೊಳ್ಳಲು ಶ್ವೇತಾಶ್ವತರ ಮುನಿಯು ಸಂತೋಷದಿಂದ ಆರಾಜನನ್ನು ಪುತ್ರಭಾವದಿಂದ ಶಿಷ್ಯನನ್ನಾಗಿ ಸ್ವೀಕರಿಸಿದನು.

ಕಾರಯಿತ್ವಾ ಸ ಸಂನ್ಯಾಸಂ ದದೌ ಯೋಗಮನುತ್ತಮಂ ।
ಯತ್ತತ್ಪಾಶುಪತಂ ಯೋಗಮಂತ್ಯಾಶ್ರಮಮಿತಿ ಶ್ರುತಂ　　॥ ೨೮ ॥

ಗುಹ್ಯಂ ತತ್ಸರ್ವವೇದೇಷು ವೇದವಿದ್ಭಿರನುಷ್ಠಿತಂ ।
ಅನುಗ್ರಹಾನ್ಮುನೇಸ್ತಸ್ಯ ಸೋಽಪಿ ಪಾಶುಪತೋಽಭವತ್　　॥ ೨೯ ॥

ವೇದಾಭ್ಯಾಸರತಶ್ಶಾಂತೋ ಭಸ್ಮನಿಷ್ಠೋ ಜಿತೇಂದ್ರಿಯಃ ।
ಸಂನ್ಯಾಸವಿಧಿಮಾಶ್ರಿತ್ಯ ಸುಶೀಲೋ ಮುಕ್ತಿಮಾನ್ ಭವೇತ್　　॥ ೩೦ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಉತ್ತಾನಪಾದ ಸಂತತ್ಯಾದಿ ಕಥನಂ
ನಾಮ ಸಪ್ತವಿಂಶೋಽಧ್ಯಾಯಃ.

---

೨೮. ಒಡನೆಯೇ ರಾಜನಿಗೆ ಸಂನ್ಯಾಸಧರ್ಮವನ್ನು ಉಪದೇಶಿಸಿ, ಸಂನ್ಯಾಸಾಶ್ರಮಕ್ಕೆ ಆ ರಾಜನನ್ನು ಪ್ರೇರಿಸಿ, ಆಗ ಪಾಶುಪತಯೋಗದ ಮಾರ್ಗವನ್ನೆಲ್ಲಾ ವಿಸ್ತಾರವಾಗಿ ಬೋಧಿಸಿದನು.

೨೯. ಪಾಶುಪತಯೋಗವು ಸರ್ವವೇದಗಳಲ್ಲಿಯೂ ಉಕ್ತವಾಗಿದೆ. ಆದರೆ ಅದು ಬಹಳ ಗುಟ್ಟಾದದ್ದು. ವೇದಜ್ಞರು ಮಾತ್ರ ಅದನ್ನು ಚೆನ್ನಾಗಿ ಅರಿತಿರುವರು ಅಂಥ ಪಾಶುಪತಯೋಗವನ್ನು ಸುಶೀಲರಾಜನು ಆ ಮಹರ್ಷಿಯ ಅನುಗ್ರಹದಿಂದ ಸಂಪೂರ್ಣವಾಗಿ ಅರಿತು, ಅದರಿಂದ ರಾಜನು ಸಾಕ್ಷಾತ್ಪಾಶುಪತನೇ ಆದನು. ಅಂದರೆ ಪಶುಪತಿಯಲ್ಲಿ ವಿಶೇಷ ಭಕ್ತಿಯುಳ್ಳವನಾದನು.

೩೦. ಅಂದಿನಿಂದ ಆ ರಾಜನು ವೇದಾಭ್ಯಾಸದಲ್ಲಿ ಆಸಕ್ತನಾಗಿ, ಭಸ್ಮಧಾರಿಯಾಗಿ ಜಿತೇಂದ್ರಿಯನಾಗಿ ಸಂನ್ಯಾಸಧರ್ಮವನ್ನು ರಕ್ಷಿಸಿಕೊಂಡು ಬಂದು ಕೊನೆಗೆ ಸಂಪೂರ್ಣವಾದ ಮೋಕ್ಷವನ್ನು ಪಡೆದನು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಶ್ರೀ ಸೌರಪುರಾಣವಲ್ಲಿ ಸೂತಶೌನಕಸಂವಾದ
ರೂಪವಾಗಿ ಉತ್ತಾನಪಾದರಾಜನ ವಂಶವೃತ್ತಾಂತವನ್ನು
ತಿಳಿಸುವ ಇಪ್ಪತ್ತೇಳನೆಯ ಅಧ್ಯಾಯವುಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ಅಷ್ಟಾವಿಂಶೋಽಧ್ಯಾಯಃ

॥ ಸೂತ ಉವಾಚ ॥

ಸ್ವಯಂಭುವಾ ಸಮಾದಿಷ್ಟಃ ಪೂರ್ವಂ ದಕ್ಷಃ ಪ್ರಜಾಪತಿಃ ।
ಪ್ರಜಾಃ ಸೃಜೇತಿ ಸರ್ಗಾದೌ ಸಸರ್ಜ ಚ ಸುರಾಸುರಾನ್ ॥ ೧ ॥

ಪ್ರಜಾಪತೇರ್ನೃವೀರಸ್ಯ ಕನ್ಯಾಽಸಿಕ್ನೀತಿ ವಿಶ್ರುತಾ ।
ಷಷ್ಟಿಂ ದಕ್ಷೋಽಸೃಜತ್ಕನ್ಯಾ ಅಸಿಕ್ನ್ಯಾಂ ವೈ ಪ್ರಜಾಪತಿಃ ॥ ೨ ॥

ದದೌ ಚ ದಶ ಧರ್ಮಾಯ ಕಶ್ಯಪಾಯ ತ್ರಯೋದಶ ।
ಸಪ್ತವಿಂಶತಿಂ ಸೋಮಾಯ ಚತಸ್ರೋಽರಿಷ್ಟನೇಮಿನೇ ॥ ೩ ॥

ಇಪ್ಪತ್ತೆಂಟನೆಯ ಅಧ್ಯಾಯವು.

೧. ಮುಂದಿನ ವಿಷಯವನ್ನು ತಿಳಿಸುವ ಇಷ್ಟದಿಂದ ಮತ್ತೆ ಸೂತಮಹರ್ಷಿಗಳು ಶೌನಕಾದಿಗಳನ್ನು ಕುರಿತು ಹೀಗೆ ಹೇಳಲಾರಂಭಿಸಿದರು.—ಹಿಂದೆ ಬ್ರಹ್ಮನು ದಕ್ಷಬ್ರಹ್ಮನನ್ನು ಕುರಿತು, "ನೀನು ಪ್ರಜಾಸೃಷ್ಟಿಮಾಡು" ಎಂದು ನೇಮಿಸಲಾಗಿ, ದಕ್ಷಬ್ರಹ್ಮನು ಅವನ ಅಪ್ಪಣೆಯಂತೆ ಮೊದಲು ದೇವರಾಕ್ಷಸರನ್ನು ಸೃಷಿ ಮಾಡಿದನು.

೨. ದಕ್ಷಬ್ರಹ್ಮನಿಗೆ ಅಸಿಕ್ನೀ ಎಂಬುವಳು ಪತ್ನಿಯಾದಳು. ಆಕೆಯಲ್ಲಿ ದಕ್ಷಬ್ರಹ್ಮನು ಅರುವತ್ತು ಜನ ಹೆಣ್ಣುಮಕ್ಕಳನ್ನು ಸೃಷ್ಟಿಮಾಡಿದನು.

೩. ಆ ಅರುವತ್ತು ಜನ ಹೆಣ್ಣುಮಕ್ಕಳಲ್ಲಿ ಹತ್ತು ಜನರನ್ನು ಧರ್ಮರಾಯನಿಗೂ, ಕಶ್ಯಪನಿಗೆ ಹದಿಮೂರು ಜನರನ್ನೂ, ಚಂದ್ರನಿಗೆ ಇಪ್ಪತ್ತೇಳು ಮಕ್ಕಳನ್ನೂ, ಅರಿಷ್ಟನೇಮಿಗೆ ನಾಲ್ವರು ಪುತ್ರಿಯರನ್ನೂ ಸಮರ್ಪಿಸಿದನು.

ದ್ವೇ ಚೈವ ಬಹುಪುತ್ರಾಯ ದ್ವೇ ಕೃಶಾಶ್ವಾಯ ಧೀಮತೇ।
ದ್ವೇ ಚೈವಾಂಗೀರಸೇ ತದ್ವತ್ ದದೌ ದಕ್ಷಃ ಪ್ರಜಾಪತಿಃ ॥ ೪ ॥
ಸಾಧ್ಯಾ ವಿಶ್ವಾ ಚ ಸಂಕಲ್ಪಾ ಮುಹೂರ್ತಾ ಚ ಹ್ಯರುಂಧತೀ।
ಮರುತ್ವತೀ ವಸುರ್ಭಾನುರ್ಲಂಬಾ ಜಾಮಿಾತಿ ತಾ ದಶ ॥ ೫ ॥
ಧರ್ಮಸ್ಯ ಪತ್ನ್ಯ ಸ್ತ್ವೇತಾಸ್ತಾಸಾಂ ಸಂತತಿರುಚ್ಯತೇ।
ಸಾಧ್ಯಾ ಬಭೂವುಃ ಸಾಧ್ಯಾಯಾಂ ವಿಶ್ವಾಯಾಂ ವಿಶ್ವದೇವತಾಃ ॥ ೬ ॥

---

೪. ಉಳಿದ ಹೆಣ್ಣುಮಕ್ಕಳಲ್ಲಿ ಇಬ್ಬರನ್ನು ಬಹುಪುತ್ರನೆಂಬುವನಿಗೂ, ಇಬ್ಬರನ್ನು ಬುದ್ಧಿಶಾಲಿಯಾದ ಕೃಶಾಶ್ವನೆಂಬವನಿಗೂ ಕೊಟ್ಟು ಲಗ್ನಮಾಡಿದನು. ಅನಂತರ ಅಂಗಿರಸನೆಂಬ ತಪಸ್ವಿಗೂ ದಕ್ಷಬ್ರಹ್ಮನು ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಕೊಟ್ಟು ವಿವಾಹ ಬೆಳೆಸಿದನು.

೫. ಮೊದಲು ಧರ್ಮಸ್ವರೂಪನಾದ ಧರ್ಮರಾಯನಿಗೆ ಕೊಟ್ಟು ಮದುವೆ ಮಾಡಿದ ಹತ್ತು ಜನ ಹೆಣ್ಣುಮಕ್ಕಳ ಹೆಸರುಗಳೇನೆಂದರೆ—೧. ಸಾಧ್ಯಾ, ೨. ವಿಶ್ವಾ ೩. ಸಂಕಲ್ಪಾ, ೪. ಮುಹೂರ್ತಾ, ೫. ಅರುಂಧತೀ, ೬. ಮರುತ್ವತೀ, ೭. ವಸು, ೮. ಭಾನು, ೯. ಲಂಬಾ, ೧೦. ಜಾಮಿಾ, ಇವರು.

೬. ಧರ್ಮನ ಹತ್ತು ಜನ ಪತ್ನಿಯರಿಂದ ದಕ್ಷಬ್ರಹ್ಮನ ಸಂತಾನವು ಬಹಳವಾಗಿ ಮುಂದುವರಿಯಿತು. ದೇವಗಣಗಳಲ್ಲಿ ಹೆಚ್ಚು ಸಂಖ್ಯೆಯಿಂದಿರುವ ಗಣಗಳೆಲ್ಲಾ ಈ ಸಂತಾನದಿಂದಲೇ ಹುಟ್ಟಿದವುಗಳು. ಸಾಧ್ಯಾದೇವಿಯಿಂದ ಸಾಧ್ಯರೂ ವಿಶ್ವಾದೇವಿಯಲ್ಲಿ ಸಮಸ್ತ ವಿಶ್ವೇದೇವತೆಗಳೂ ಜನಿಸಿದರು.

ಸಂಕಲ್ಪಾಯಾಸ್ತು ಸಂಕಲ್ಪೋ ಮುಹೂರ್ತಾಸ್ತು ಮುಹೂರ್ತಜಾಃ ।
ಆರುಂಧತ್ಯಾಸ್ತ್ವರುಂಧತ್ಯಾ ಮರುತ್ವತ್ಯಾಂ ಮರುತ್ವತಃ ॥ ೭ ॥
ವಸೋಸ್ತು ವಸವಃ ಪ್ರೋಕ್ತಾ ಭಾನೋಸ್ತೇ ಭಾನವಸ್ಸ್ಮೃತಾಃ ।
ಲಂಬಾಯಾಂ ಘೋಷನಾಮಾನೋ ನಾಗವೀಥೀಸ್ತು ಜಾಮಿಜಾಃ ॥ ೮ ॥
ಜ್ಯೋತಿಷ್ಮಂತಸ್ತ್ರಯೋ ದೇವಾ ವ್ಯಾಪಕಾಃ ಸರ್ವತೋ ದಿಶಂ ।
ವಸವಸ್ತೇ ಸಮಾಖ್ಯಾತಾಃ ಸರ್ವಭೂತಹಿತೈಷಿಣಃ ॥ ೯ ॥

---

೭. ಸಂಕಲ್ಪಾದೇವಿಯಲ್ಲಿ ಸಂಕಲ್ಪನೆಂಬುವನು ಉದ್ಭವಿಸಿದನು. ಮುಹೂರ್ತಾ ದೇವಿಯಿಂದ ಮುಹೂರ್ತರೆಂಬ ದೇವತಾವಿಶೇಷಗಳು ಸೃಷ್ಟವಾದುವು. ಅರುಂಧತಿ ಯಲ್ಲಿ ಜನಿಸಿದವರಿಗೆ ಆರುಂಧತ್ಯರೆಂದು ಹೆಸರಾಯಿತು. ಮರುತ್ವತೀದೇವಿಯಲ್ಲಿ ಮರುತ್ವತೀಯರೆಂಬ ದೇವತಾಸಂಘವು ಉದ್ಭವಿಸಿತು.

೮. ವಸುದೇವಿಯಿಂದ ಹುಟ್ಟಿದವರೇ ಅಷ್ಟವಸುಗಳು. ಇವರ ಹೆಸರುಗಳನ್ನು ಮುಂದೆ ಹೇಳುವೆನು. ಭಾನುದೇವಿಯ ಪುತ್ರರೇ ದ್ವಾದಶಾದಿತ್ಯರು. ಘೋಷಸಂಜ್ಞಕ ರಾದ ದೇವತಾವಿಶೇಷಗಳು ಲಂಬಾದೇವಿಯ ಉದರದಲ್ಲಿ ಜನಿಸಿದರು. ಧರ್ಮನ ಅತ್ಯಂತ ಕಿರಿಯ ಪತ್ನಿಯಾದ ಜಾಮಿದೇವಿಯಲ್ಲಿ ನಾಗವೀಥಿಗಳೆಂಬ ದೇವಗಣವು ಜನಿಸಿತು.

೯. ನಾಗವೀಥಿಗಳೆಂಬವರು ಮೂರು ಜನ ದೇವತೆಗಳು. ಅವರು ಬಹಳ ವಾಗಿ ತೇಜಶ್ಶಾಲಿಗಳು. ಸಮಸ್ತ ದಿಕ್ಕುಗಳಲ್ಲಿಯೂ ವ್ಯಾಪಿಸಿ ತಮ್ಮ ತೇಜಸ್ಸಿನಿಂದ ಸರ್ವವನ್ನು ಬೆಳಗಿಸುತ್ತಾರೆ. ಅಷ್ಟವಸ್ತುಗಳಾದರೋ ಸರ್ವ ಪ್ರಾಣಿಗಳಿಗೂ ಹಿತ ವನ್ನು ಬಯಸುತ್ತಾ ಸರ್ವರಿಗೂ ಹಿತೈಷಿಗಳೆಂದಿನಿಸಿರುವುವು.

ಆಪೋ ಲನಶ್ಚ ಸೋಮಶ್ಚ ಧ್ರುವಶ್ಚೈವಾನಲೋಽನಿಲಃ ।
ಪ್ರತ್ಯೂಷಶ್ಚ ಪ್ರಭಾಸಶ್ಚ ವಸವೋಽಷ್ಟೌ ಪ್ರಕೀರ್ತಿತಾಃ ॥ ೧೦ ॥

ಧ್ರುವಸ್ಯ ಪುತ್ರಃ ಕಾಲಸ್ಸ್ಯಾತ್ ಸರ್ವಲೋಕಭಯಂಕರಃ ।
ವಿಶ್ವಕರ್ಮಾ ಪ್ರಭಾಸಸ್ಯ ಧರ್ಮಸ್ಯೈಷಾ ತು ಸಂತತಿಃ ॥ ೧೧ ॥

ಅದಿತಿಶ್ಚ ದಿತಿಶ್ಚೈವ ದನುರಿತ್ಯಪರಾ ಮತಾ ।
ಅರಿಷ್ಟಾ ಸುರಸಾ ಪ್ರೋಕ್ತಾ ಸ್ವಧಾ ಸುರಭಿರೇವ ಚ ॥ ೧೨ ॥

ವಿನತಾ ಚ ತಥಾ ತಾಮ್ರಾ ಕದ್ರೂಃ ಕ್ರೋಧವಶಾ ತ್ವಿರಾ ।
ಮುನೇಶ್ಚ ಪತ್ನಯಸ್ತ್ವೇತಾಃ ಕಶ್ಯಪಸ್ಯ ದ್ವಿಜೋತ್ತಮಾಃ ॥ ೧೩ ॥

---

೧೦. ೧. ಆಪ, ೨. ನಲ, ೩. ಸೋಮ, ೪. ಧ್ರುವ, ೫. ಅನಲ, ೬ ಅನಿಲ, ೭. ಪ್ರತ್ಯೂಷ, ೮. ಪ್ರಭಾಸ, ಈ ಎಂಟು ಹೆಸರಿನ ದೇವತೆಗಳೇ ಅಷ್ಟ ವಸುಗಳು.

೧೧. ಅಷ್ಟವಸುಗಳಲ್ಲಿ ನಾಲ್ಕನೆಯವನಾದ ಧ್ರುವವಸುವಿನ ಮಗನೇ ಕಾಲನು. ಕಾಲನು ಸ್ವಭಾವದಿಂದಲೇ ಸರ್ವಲೋಕಗಳಿಗೂ ಭಯಜನಕನಾದನು. ಎಂಟನೆಯ ವಸುವಾದ ಪ್ರಭಾಸನಿಗೆ ವಿಶ್ವಕರ್ಮನೆಂಬ ಮಗನು ಜನಿಸಿದನು. ಹೀಗೆ ದಕ್ಷಬ್ರಹ್ಮನ ಅಳಿಯನಾದ ಧರ್ಮನ ಸಂತಾನವು ಜಗತ್ತಿನಲ್ಲೆಲ್ಲಾ ಈ ರೀತಿ ಪ್ರಸಿದ್ಧಿ ಗೊಂಡಿದೆ.

೧೨-೧೩. ದಕ್ಷಬ್ರಹ್ಮನು ತನ್ನ ಅರುವತ್ತು ಜನ ಹೆಣ್ಣು ಮಕ್ಕಳಲ್ಲಿ ಹಿಂದೆ ಹೇಳಿದ ಹತ್ತು ಜನ ಮಕ್ಕಳನ್ನು ಧರ್ಮನಿಗೆ ವಿವಾಹಮಾಡಿ ಕೊಟ್ಟನಷ್ಟೆ. ಅನಂತರ ಕಶ್ಯಪನಿಗೆ ಧಾರೆಯೆರೆದು ಕೊಟ್ಟ ಹದಿಮೂರು ಜನರ ಹೆಸರು ಈರೀತಿಯಾಗಿದೆ..

೧. ಅದಿತಿ, ೨. ದಿತಿ, ೩. ದನು, ೪. ಅಪರಾ, ೫. ಅರಿಷ್ಟಾ. ೬. ಸುರಸಾ ೭. ಸ್ವಧಾ, ೮. ಸುರಭಿ, ೯. ವಿನತಾ, ೧೦. ತಾಮ್ರಾ, ೧೧. ಕದ್ರೂಃ, ೧೨, ಕ್ರೋಧವಶಾ, ೧೩. ತ್ವಿರಾ, ।ಈ ಹದಿಮೂರು ಜನ ದಕ್ಷಬ್ರಹ್ಮನ ಪುತ್ರಿಯರು ಕಶ್ಯಪಮಹರ್ಷಿಗೆ ಪತ್ನಿಯರೆನಿಸಿದರು.

ಅಂಶುರ್ಧಾತಾ ಭಗಸ್ತ್ವಷ್ಟಾ ಮಿತ್ರೋಽಥ ವರುಣೋಽರ್ಯಮಾ ।
ವಿವಸ್ವಾನ್ ಸವಿತಾ ಪೂಷಾ ಅಂಶುಮಾನ್ವಿಷ್ಣುರೇವ ಚ ॥ ೧೪ ॥

ತುಷಿತಾ ನಾಮ ತೇ ಪೂರ್ವಂ ಚಾಕ್ಷುಷಸ್ಯಾಂತರೇ ಮನೋಃ ।
ಆದಿತ್ಯಾ ಅದಿತೇಃ ಪುತ್ರಾಃ ಪ್ರೋಕ್ತಾ ವೈವಸ್ವತೇಽಂತರೇ ॥ ೧೫ ॥

ಪುತ್ರದ್ವಯಂ ದಿತಿಃ ಸೂತೇ ಕಶ್ಯಪಾನ್ಮುನಿಪುಂಗವಾತ್ ।
ಹಿರಣ್ಯಕಶಿಪುಂ ತ್ವೇಕಂ ಹಿರಣ್ಯಾಕ್ಷಮನಂತರಂ ॥ ೧೬ ॥

ಹಿರಣ್ಯಕಶಿಪುರ್ಯೋಽಸೌ ಬ್ರಹ್ಮಣೋ ವರದರ್ಪಿತಃ ।
ಶಕ್ರಾದ್ಯಾ ದೇವತಾಃ ಸರ್ವಾಸ್ತೇನ ದೈತ್ಯೇನ ಬಾಧಿತಾಃ ॥ ೧೭ ॥
ಬ್ರಹ್ಮಾಣಂ ಶರಣಂ ಗತ್ವಾ ಪ್ರೋಚುಃ ಪ್ರಾಂಜಲಯಃ ಸುರಾಃ ।

೧೪-೧೫. ಅಂಶು, ಧಾತ, ಭಗ, ತ್ವಷ್ಟ್ರ, ಮಿತ್ರ, ವರುಣ, ಅರ್ಯಮಾ, ವಿವಸ್ವಾನ್, ಸವಿತಾ, ಪೂಷಾ, ಅಂಶುಮಾನ್, ವಿಷ್ಣು, ಈ ಹನ್ನೆರಡು ಜನರು ಚಾಕ್ಷುಷ ಮನ್ವಂತರದಲ್ಲಿ ತುಷಿತಾ, ಎಂಬ ಹೆಸರಿನಿಂದ ಇದ್ದರು. ಅವರೇ ವೈವಸ್ವತ ಮನ್ವಂತರಲ್ಲಿ ಅದಿತಿಯ ಮಕ್ಕಳಾಗಿ ದ್ವಾದಶಾದಿತ್ಯರೆಂದು ಪ್ರಸಿದ್ಧಿಗೊಂಡಿದ್ದಾರೆ.

೧೬. ಕಶ್ಯಪರ ಎರಡನೇ ಪತ್ನಿಯಾದ ದಿತೀದೇವಿಯು, ಹಿರಣ್ಯಕಶಿಪು ಹಿರಣ್ಯಾಕ್ಷರೆಂಬ ಇಬ್ಬರು ಗಂಡುಮಕ್ಕಳನ್ನು ಪಡೆದಳು.

೧೭. ಅವರಲ್ಲಿ ಹಿರಿಯವನಾದ ಹಿರಣ್ಯಕಶಿಪುವು ಬ್ರಹ್ಮನ ವರದಿಂದ ಕೊಬ್ಬಿದವನಾಗಿ ಇಂದ್ರನೇ ಮೊದಲಾದ ದೇವತೆಗಳನ್ನೆಲ್ಲಾ ಬಹುವಾಗಿ ಹಿಂಸಿಸಿದನು. ಆ ಹಿಂಸೆಯನ್ನು ತಾಳಲಾರದೆ ಸಮಸ್ತ ದೇವತೆಗಳೂ ಬ್ರಹ್ಮನ ಸಮೀಪಕ್ಕೆ ಹೋಗಿ ಕೈಜೋಡಿಸಿಕೊಂಡು ಹೀಗೆ ಪ್ರಾರ್ಥಿಸಲಾರಂಭಿಸಿದರು.

|| ದೇವಾ ಊಚುಃ ||

ದೇವದೇವ ಜಗನ್ನಾಥ ಚತುರ್ಮುಖ ಸುರೋತ್ತಮ || ೧೮ ||
ಹಿರಣ್ಯಕೇನ ದೈತ್ಯೇನ ಶಸ್ತ್ರಾಸ್ತ್ರೈಃ ಸೂದಿತಾ ವಯಂ ।
ದಾರಾಶ್ಚಾಪಹೃತಾಸ್ತೇನ ವಜ್ರಾದೀನ್ಯಾಯುಧಾನಿ ಚ || ೧೯ ||
ತ್ರಾಯಸ್ವಾಸ್ಮಾನ್ ಭಯತ್ರಸ್ತಾನ್ ಶರಣಂ ನಾನ್ಯದಸ್ತಿ ನಃ ।
ಏವಂ ಸುರೈರ್ನಿಗದಿತಂ ಶ್ರುತ್ವಾ ಚೈವ ಪಿತಾಮಹಃ || ೨೦ ||

ದೇವೈಸ್ಸಹ ಯಯೌ ತೂರ್ಣಂ ಯತ್ರಾಽಽಸ್ತೇ ವಿಷ್ಣುರವ್ಯಯಃ ।
ಸಂಸ್ತೂಯ ವಿವಿಧೈಃ ಸ್ತೋತ್ರೈಃ ಅಬ್ರವೀತ್ಕಮಲಾಸನಃ || ೨೧ ||

|| ಬ್ರಹ್ಮೋವಾಚ ||

ಹಿರಣ್ಯಕಶಿಪುರ್ದೇವ ಮದ್ವರೇಣಾತಿಗರ್ವಿತಃ ।
ಬಾಧತೇ ಸಕಲಾನ್ ದೇವಾನ್ ಮುನೀನ್ ನಿರ್ಧೂತಕಲ್ಮಷಾನ್ || ೨೨ ||

೧೮-೧೯. ಎಲೈ ದೇವ ದೇವನಾದ ಚತುರ್ಮುಖನೇ, ಹಿರಣ್ಯಕಶಿಪುವೆಂಬ ರಾಕ್ಷಸನು ನಮ್ಮನ್ನು ಅನೇಕ ವಿಧವಾದ ಶಸ್ತ್ರಾಸ್ತ್ರಗಳಿಂದ ನೋಯಿಸಿದ್ದಾನೆ. ನಮ್ಮ ಪತ್ನಿಯರನ್ನೆಲ್ಲಾ ಅಪಹರಿಸಿದ್ದಾನೆ. ವಜ್ರವೇ ಮೊದಲಾದ ನಮ್ಮ ಆಯುಧಗಳನ್ನೆಲ್ಲಾ ಕಿತ್ತುಕೊಂಡು ಹೋಗಿದ್ದಾನೆ. ಹೀಗೆ ನಾವು ಅವನಿಂದ ಬಹಳ ಘಾಸಿಗೊಂಡಿದ್ದೇವೆ.

೨೦. ಎಲೈ ಪರಬ್ರಹ್ಮನೇ ! ಹೀಗೆ ಕಷ್ಟಕ್ಕೆ ಸಿಕ್ಕಿ ಭಯಗ್ರಸ್ತರಾಗಿರುವ ನಮ್ಮನ್ನು ಕಾಪಾಡು. ನಮ್ಮನ್ನು ರಕ್ಷಿಸುವವರು ನೀನಲ್ಲದೆ ಮತ್ತಾರು ? ಎಂದು ದೇವತೆಗಳೆಲ್ಲರೂ ಏಕಕಂಠದಿಂದ ಕೇಳಿಕೊಳ್ಳಲು ಬ್ರಹ್ಮನು ಈ ದೇವತೆಗಳ ಗೋಳಾಟವನ್ನು ಕೇಳಿ,

೨೧. "ಸಮಸ್ತ ದೇವತೆಗಳನ್ನೂ ಜೊತೆಯಲ್ಲಿ ಕರೆದುಕೊಂಡು ವಿಷ್ಣುವು ವಾಸಿಸುತ್ತಿರುವ ಪ್ರದೇಶಕ್ಕೆ ಹೋಗಿ, ಅಲ್ಲಿ ಮಹಾವಿಷ್ಣುವನ್ನು ವಿವಿಧವಾದ ಸ್ತುತಿವಚನಗಳಿಂದ ಸ್ತುತಿಸಿ, ಬ್ರಹ್ಮನು ತನ್ನ ಕಷ್ಟವನ್ನು ಹೀಗೆಂದು ಹೇಳಿಕೊಂಡನು.

೨೨. ಎಲೈ ದೇವದೇವನಾದ ಮಹಾವಿಷ್ಣುವೇ! ನನ್ನ ವರಗಳಿಂದ ಕೊಬ್ಬಿರುವ ಹಿರಣ್ಯಕಶಿಪುವು ಈಗ ಸಮಸ್ತ ದೇವತೆಗಳನ್ನೂ, ಸಾಧುಗಳಾದ ಋಷಿಗಳನ್ನೂ ಬಹುವಾಗಿ ಪೀಡಿಸುತ್ತಿರುವನು.

ಯಸ್ತಂ ಹನಿಷ್ಯತಿ ಕ್ಷಿಪ್ರಂ ನ ತಂ ಪಶ್ಯಾಮಿ ಮಾಧವ ।
ತ್ವಮೇವ ಹಂತಾ ತಸ್ಯೇತಿ ಮತ್ವಾ ವಯಮುಪಾಗತಾ: ॥ ೨೩ ॥

ಹಂತುಮರ್ಹಸಿ ತಂ ಶೀಘ್ರಂ ದೇವಾನಾಂ ಕಾರ್ಯಸಿದ್ಧಯೇ ।
ಶ್ರುತ್ವಾ ನಾರಾಯಣೋ ವಾಕ್ಯಮೀರಿತಂ ತ್ರಿದಿವೌಕಸಾಂ ॥ ೨೪ ॥

ನರಸ್ಯಾರ್ಧತನುಂ ಕೃತ್ವಾ ಸಿಂಹಸ್ಯಾರ್ಧತನುಂ ತಥಾ ।
ನೃಸಿಂಹರೂಪೀ ಭಗವಾನ್ ಹಿರಣ್ಯಕಶಿಪೋಃ ಪುರೇ ॥ ೨೫ ॥

ಆವಿರ್ಬಭೂವ ಭಗವಾನ್ ದೇವೋ ನಾರಾಯಣಃ ಪ್ರಭುಃ ।
ಮುಂಚನ್ನಾದಂ ಮಹಾಘೋರ ಮಸುರಾಣಾಂ ಭಯಂಕರಂ ॥ ೨೬ ॥

ಹಿರಣ್ಯಕಶಿಪುರ್ದೃಷ್ಟ್ವಾ ನೃಸಿಂಹಮತಿಭೀಷಣಂ ।
ವಧಾಯ ಪ್ರೇಷಯಾಮಾಸ ಪ್ರಹ್ಲಾದಾದೀನ್ ಮಹಾಸುರಾನ್ ॥ ೨೭ ॥

---

೨೩. ಅವನನ್ನು ಜಾಗ್ರತೆಯಾಗಿ ಕೊಲ್ಲುವಂತಹವನು ಈಗ ಯಾವನೂ ಇಲ್ಲ. ಅವನನ್ನು ಕೊಲ್ಲುವಂತಹ ಧೀರನು ನೀನೊಬ್ಬನೇ ಎಂದು ತಿಳಿದು ನಾವೆಲ್ಲರೂ ಈಗ ನಿನ್ನಲ್ಲಿಗೆ ಬಂದಿದ್ದೇವೆ.

೨೪. ಮಹಾವಿಷ್ಣುವೇ, ದೇವತೆಗಳ ರಕ್ಷಣೆಗಾಗಿ, ಈಗಲೇ ಆ ಹಿರಣ್ಯಕಶಿಪುವನ್ನು ನೀನೇ ಕೊಲ್ಲುವನಾಗಬೇಕು” ಎಂದು ಬ್ರಹ್ಮನು ಪ್ರಾರ್ಥಿಸಲಾಗಿ, ಈ ದೇವತೆಗಳ ಆರ್ತವಾಣಿಯನ್ನು ಮಹಾವಿಷ್ಣುವು ಕೇಳಿ,

೨೫. ಅರ್ಧ ಶರೀರವನ್ನು ಮನುಷ್ಯಾಕಾರದಲ್ಲಿಯೂ, ಉಳಿದರ್ಧಭಾಗವನ್ನು ಸಿಂಹದ ಆಕಾರದಲ್ಲಿಯೂ ನಿರ್ಮಾಣಮಾಡಿಕೊಂಡು, ನೃಸಿಂಹ ವೇಷದಿಂದ ಹಿರಣ್ಯಕಶಿಪುವಿನ ಊರಿನಲ್ಲಿ ಬಂದು ನೆಲಸಿದನು.

೨೬. ಒಡನೆಯೇ ನೃಸಿಂಹಾಕಾರ ತಾಳಿದ ಶ್ರೀಮನ್ನಾರಾಯಣನು ರಾಕ್ಷಸರಿಗೆ ಎದೆಯೊಡೆಯುವಂತಹ ಒಂದು ಭಯಂಕರವಾದ ಧ್ವನಿಯಿಂದ ಆರ್ಭಟಿಸಿದನು. ಇದನ್ನು ಕೇಳಿ ಸಕಲ ರಾಕ್ಷಸರೂ ಭೀತರಾದರು.

೨೭. ಆಗ ಹಿರಣ್ಯಕಶಿಪುವು ಈ ಭಯಂಕರಾಕಾರನಾದ ನೃಸಿಂಹಮೂರ್ತಿಯನ್ನು ನೋಡಿ, ಇವನನ್ನು ಕೊಲ್ಲಲು ಮಹಾ ಶೂರರಾದ ಪ್ರಹ್ಲಾದನೇ ಮೊದಲಾದ ರಾಕ್ಷಸ ವೀರರನ್ನು ಕಳುಹಿದನು.

ಪ್ರಹ್ಲಾದಶ್ಚಾನುಹ್ಲಾದಶ್ಚ ಸಂಹ್ಲಾದೋ ಹ್ಲಾದ ಏವ ಚ ।
ಹಿರಣ್ಯಕಶಿಪೋಃ ಪುತ್ರಾಶ್ಚತ್ವಾರಃ ಪ್ರಥಿತೌಜಸಃ ॥ ೨೮ ॥

ನರಸಿಂಹೇನ ತೇ ಸಾರ್ಧಂ ಯುಯುಧುರ್ದಾನವಾಸ್ತದಾ ।
ಪ್ರಹ್ಲಾದಃ ಪ್ರಾಹಿಣೋದ್ಬ್ರಹ್ಮಮಸ್ತ್ರಂ ತಂ ನರಕೇಸರಿಂ ॥ ೨೯ ॥

ವೈಷ್ಣವಾಸ್ತ್ರಮನುಹ್ಲಾದಃ ಕೌಮಾರಂ ಚ ತಥಾ ಪರಃ
ಪ್ರಾಹಿಣೋದ್ಹ್ಲಾದ ಆಗ್ನೇಯಂ ತಥಾ ಚಾನ್ಯೇ ಮಹಾಸುರಾಃ ॥ ೩೦ ॥

ಚತ್ವಾರ್ಯಸ್ತ್ರಾಣಿ ಸಂಪ್ರಾಪ್ಯ ಭಗವಂತಂ ನೃಕೇಸರಿಂ ।
ಬಭೂವುಸ್ತಾನಿ ಭಗ್ನಾನಿ ಯಥಾ ವಜ್ರಾಹತಾ ದ್ರುಮಾಃ ॥ ೩೧ ॥

ಗೃಹೀತ್ವಾ ಚತುರಃ ಪುತ್ರಾನ್ ಹಸ್ತಾಭ್ಯಾಂ ನರಕೇಸರೀ ।
ಚಿಕ್ಷೇಪ ಗಗನಾದ್ಭೂಮೌ ಗೃಹೀತ್ವೈವಂ ಪುನಃ ಪುನಃ ॥ ೩೨ ॥

---

೨೮. ಪ್ರಹ್ಲಾದ, ಅನುಹ್ಲಾದ, ಸಂಹ್ಲಾದ, ಹ್ಲಾದ ಎಂಬುದಾಗಿ ಹಿರಣ್ಯಕಶಿಪುವಿಗೆ ನಾಲ್ಕು ಜನ ಮಕ್ಕಳಿದ್ದರು. ಅವರೆಲ್ಲರೂ ಬಹಳ ಪರಾಕ್ರಮಿಗಳೇ ಆಗಿದ್ದರು.

೨೯. ಆ ನಾಲ್ವರು ಪುತ್ರರೂ ನರಸಿಂಹಮೂರ್ತಿಯೊಡನೆ ಘೋರವಾಗಿ ಯುದ್ಧಮಾಡಿದರು. ಅದರಲ್ಲಿ ಪ್ರಹ್ಲಾದನು ಮಾತ್ರ ನೃಸಿಂಹಮೂರ್ತಿಯನ್ನು ಬಲಿಷ್ಠವಾದ ಬ್ರಹ್ಮಾಸ್ತ್ರದಿಂದ ಹೊಡೆದನು.

೩೦. ಅನುಹ್ಲಾದನು ವೈಷ್ಣವಾಸ್ತ್ರದಿಂದಲೂ, ಸಂಹ್ಲಾದನು ಕುಮಾರಾಸ್ತ್ರದಿಂದಲೂ, ಹ್ಲಾದನು ಆಗ್ನೇಯಾಸ್ತ್ರದಿಂದಲೂ, ಇನ್ನೂ ಉಳಿದ ರಾಕ್ಷಸರು ಬೇರೆ ಬೇರೆ ಅಸ್ತ್ರಗಳಿಂದಲೂ ನೃಸಿಂಹನನ್ನು ಬಹುವಾಗಿ ಘಾತಿಸಿದರು.

೩೧. ಈ ನಾಲ್ಕು ದಿವ್ಯಾಸ್ತ್ರಗಳೂ ಭಗವಂತನಾದ ನರಸಿಂಹನಲ್ಲಿ ವ್ಯರ್ಥವಾದುವು. ಅಲ್ಲದೆ ವಜ್ರಾಯುಧದಿಂದ ಹೊಡೆಯಲ್ಪಟ್ಟ ಮರಗಳಂತೆ ಆ ಅಸ್ತ್ರಗಳು ನರಸಿಂಹನನ್ನು ಮುಟ್ಟಿ ಮುಟ್ಟಿ ಕೆಳಕ್ಕೆ ಬಿದ್ದು ಚೂರು ಚೂರಾದವು.

೩೨. ಒಡನೆಯೇ ನರಸಿಂಹನು ಆ ನಾಲ್ವರು ರಾಕ್ಷಸಪುತ್ರರನ್ನೂ ತನ್ನ ನಾಲ್ಕು ಕೈಗಳಿಂದ ಹಿಡಿದು ಆಕಾಶದಿಂದ ನೆಲಕ್ಕೂ, ನೆಲದಿಂದ ಆಕಾಶಕ್ಕೂ ಪದೆ ಪದೇ ಎಸೆಯಲಾರಂಭಿಸಿದನು. ಹೀಗೆ ಆ ನಾಲ್ವರೂ ನೃಸಿಂಹನಿಂದ ಪರಾಜಿತರಾದರು.

ಏವಂ ತಾನ್ ವ್ಯಥಿತಾನ್ ದೃಷ್ಟ್ವಾ ಹಿರಣ್ಯಕಶಿಪುಃ ಸ್ವಯಂ ।
ಜಾಜ್ವಲ್ಯಮಾನಃ ಕೋಪೇನ ಯಯೌ ಯತ್ರ ನೃಕೇಸರೀ ॥ ೩೩ ॥

ವಿನಿವೃತ್ತೋಽಥ ಸಂಗ್ರಾಮಾತ್ಪ್ರಹ್ಲಾದೋ ದೈತ್ಯರಾಟ್ ತತಃ ।
ಜ್ಞಾತ್ವಾ ತು ಭಗವದ್ಭಾವಂ ನೃಸಿಂಹಸ್ವಾಮಿತೇಜಸಃ ।
ಧ್ಯಾತ್ವಾ ನಾರಾಯಣಂ ದೇವಂ ವಾರಯಾಮಾಸ ದಾನವಾನ್ ॥ ೩೪ ॥

ಏಷ ನಾರಾಯಣೋ ಯೋಗೀ ಪರಮಾತ್ಮಾ ಸನಾತನಃ ।
ಧ್ಯಾತವ್ಯೋ ನ ತು ಯೋದ್ಧವ್ಯೋ ಭವದ್ಭಿರಿತಿ ನಿಶ್ಚಿತಂ ॥ ೩೫ ॥

ಪುತ್ರೋದಿತಮನಾದೃತ್ಯ ಹಿರಣ್ಯಕಶಿಪುಃ ಪುನಃ ।
ಯುಯುಧೇ ಹರಿಣಾ ಸಾರ್ಧಂ ಯಾವದ್ವರ್ಷಶತತ್ರಯಂ ॥ ೩೬ ॥

---

೩೩. ಹೀಗೆ ಎಸೆಯಲ್ಪಡುತ್ತಿರುವ ತನ್ನ ನಾಲ್ವರು ಪುತ್ರರನ್ನೂ ಹಿರಣ್ಯಕಶಿಪುವು ನೋಡಿ ಉರಿಯುವ ಕೋಪದಿಂದ ಕೂಡಿ, ನೃಸಿಂಹಸ್ವಾಮಿಯು ಇದ್ದೆಡೆಗೆ ಓಡಿ ಬಂದನು.

೩೪. ಅಷ್ಟರಲ್ಲಿ ಪ್ರಹ್ಲಾದನು ಯುದ್ಧದಿಂದ ಹಿಂದಿರುಗಿ, ಸಾಕ್ಷಾತ್ ಶ್ರೀಮನ್ನಾರಾಯಣನೇ ನೃಸಿಂಹ ರೂಪದಲ್ಲಿರುವುದನ್ನು ಸುಜ್ಞಾನದಿಂದರಿತು ಆ ನರಸಿಂಹನ ಪರಾಕ್ರಮವನ್ನು ದೈತ್ಯರಿಗೆಲ್ಲಾ ವಿವರಿಸಿ, ರಾಕ್ಷಸರನ್ನು ಯುದ್ಧಕ್ಕೆ ಹೋಗದಂತೆ ತಡೆದನು.

೩೫. ಶ್ರೀಮನ್ನಾರಾಯಣನು ಲೋಕರಕ್ಷಕನು. ಪರಮಾತ್ಮನು ಆದಿ ಪುರುಷನು. ಈತನು ಈಗ ನೃಸಿಂಹರೂಪದಿಂದ ಇಲ್ಲಿಗೆ ಬಂದಿರುವನು. ಇಂಥವನನ್ನು ನಾವು ಧ್ಯಾನಿಸಬೇಕೇ ಹೊರತು ಇವನೊಡನೆ ಯುದ್ಧಮಾಡುವುದು ನ್ಯಾಯವಲ್ಲ ಎಂದು ಎಲ್ಲರಿಗೂ ಬೋಧಿಸಲಾರಂಭಿಸಿದನು.

೩೬. ಮಗನಮಾತನ್ನು ಲಕ್ಷ್ಯಮಾಡದೆ ಹಿರಣ್ಯಕಶಿಪುವು ಮುನ್ನೂರು ವರ್ಷಗಳ ಕಾಲ ಆ ನರಸಿಂಹರೂಪಿಯಾದ ಮಹಾವಿಷ್ಣುವಿನೊಡನೆ ಘೋರಯುದ್ಧ ಮಾಡಿದನು.

ಅಥ ವಿಶ್ವಾತ್ಮಕೋ ವಿಷ್ಣುಃ ಕ್ರೋಧಸಂರಕ್ತಲೋಚನಃ ।
ನಖೈರ್ವಿದಾರಯಾಮಾಸ ಹಿರಣ್ಯಕಶಿಪುಂ ತದಾ ॥ ೩೭ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀಸೌರೇ ಸೂತಶೌನಕ ಸಂವಾದೇ ಸುರಾಸುರಸೃಷ್ಟ್ಯಾದಿ ಕಥನಂ ನಾಮ ಅಷ್ಟಾವಿಂಶೋಽಧ್ಯಾಯಃ

---

೩೭. ಕೊನೆಯಲ್ಲಿ ಪ್ರಪಂಚಸ್ವರೂಪಿಯಾದ ಮಹಾವಿಷ್ಣುವು ಕೋಪದಿಂದ ಕೂಡಿದ ಕಣ್ಣುಗಳುಳ್ಳವನಾಗಿ ಹಿರಣ್ಯಕಶಿಪುವನ್ನು ಹಿಡಿದು ತನ್ನ ಉಗುರುಗಳಿಂದ ಬಗೆದು ಕೊಂದನು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದ ರೂಪವಾಗಿ ಸುರಾಸುರಸೃಷ್ಟ್ಯಾದಿಗಳನ್ನು ತಿಳಿಸುವ ಇಪ್ಪತ್ತೆಂಟನೆಯ ಅಧ್ಯಾಯವುಮುಗಿದುದು.

॥ ಶ್ರೀ ॥

॥ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಏಕೋನತ್ರಿಂಶೋಽಧ್ಯಾಯಃ.

॥ ಸೂತ ಉವಾಚ ॥

ಹತೇ ಹಿರಣ್ಯಕಶಿಪೌ ಪ್ರಹ್ಲಾದೋ ದೈತ್ಯಸತ್ತಮಃ ।
ಹಿರಣ್ಯಾಕ್ಷಂ ಮಹಾಬಾಹುಂ ರಾಜ್ಯೇ ಸಮಭಿಯೋಜಯತ್ ॥ ೧ ॥

ಸೋಽಪಿ ದೇವಾನ್ರಣೇ ಜಿತ್ವಾ ಸ್ವರ್ಗಾತ್ತೇ ವೈ ಪಲಾಯಿತಾಃ ।
ಹಿರಣ್ಯಾಕ್ಷೋ ಮಹಾದೇವಂ ತಪಸಾಽಽರಾಧ್ಯ ಚಾಂತಕಂ ॥ ೨ ॥

ಲೇಭೇ ಪುತ್ರಂ ಮಹಾಬಾಹುಂ ಸರ್ವಾಮರನಿಷೂದನಂ ।
ಹಿರಣ್ಯಾಕ್ಷಭಯಾದ್ದೇವಾಃ ಶಾರ್ಙ್ಗಿಣಂ ಶರಣಂ ಗತಾಃ ॥ ೩ ॥

ಇಪ್ಪತ್ತೊಂಬತ್ತನೆಯ ಅಧ್ಯಾಯ.

೧. ಹಿರಣ್ಯಕಶಿಪುವು ನರಸಿಂಹನಿಂದ ಹತನಾದ ಮೇಲೆ ಅವನ ಮಗನಾದ ಪ್ರಹ್ಲಾದನು, ತನ್ನ ಚಿಕ್ಕಪ್ಪನಾದ ಹಿರಣ್ಯಾಕ್ಷನನ್ನು ರಾಜ್ಯದ ಅಧಿಪತಿಯನ್ನಾಗಿ ಮಾಡಿದನು.

೨. ಆ ಹಿರಣ್ಯಾಕ್ಷನಾದರೋ, ಒಡನೆಯೇ ದೇವತೆಗಳ ಮೇಲೆ ಯುದ್ಧಕ್ಕೆ ಹೊರಟು ಅವರನ್ನು ಸೋಲಿಸಿ, ಸ್ವರ್ಗಲೋಕದಿಂದ ದೇವತೆಗಳನ್ನೆಲ್ಲರನ್ನೂ ಹೊಡೆದೋಡಿಸಿದನು. ಅಲ್ಲಿಂದ ಮುಂದೆ ಹೋಗಿ, ವಿಶೇಷಬಲಾಪೇಕ್ಷೆಯಿಂದ, ಯಮನಿಗೂ ಯಮನಂತಿರುವ ಮಹಾದೇವನನ್ನು ಕುರಿತು ತಪಸ್ಸು ಮಾಡಿದನು.

೩. ಆ ತಪಸ್ಸಿನ ಫಲವಾಗಿ ಹಿರಣ್ಯಾಕ್ಷನು ಶೂರನಾದ ಒಬ್ಬ ಮಗನನ್ನು ಪಡೆದನು. ಆ ಮಗನು ಸಮಸ್ತ ದೇವತೆಗಳಿಗೂ ಭಯಂಕರನಾಗಿಯೇ ಕಾಣುತ್ತಿದ್ದನು. ಆಗ್ಯಾಗ್ಯೆ ಹಿರಣ್ಯಾಕ್ಷನು ದೇವತೆಗಳನ್ನು ಬಹುವಾಗಿ ಪೀಡಿಸುತ್ತಿದ್ದುದರಿಂದ, ದೇವತೆಗಳೆಲ್ಲರೂ ಈ ಬಾಧೆಯನ್ನು ಸಹಿಸಲಾರದೆ ಶ್ರೀ ಮಹಾವಿಷ್ಣುವನ್ನು ಮರೆಹೊಕ್ಕರು.

ದೃಷ್ಟ್ವಾಥ ಭಗವಾನ್ ದೇವಾನ್ ಹಿರಣ್ಯಾಕ್ಷವಧಾಯ ವೈ ।
ವಾರಾಹಂ ರೂಪಮಾಸ್ಥಾಯ ಹಿರಣ್ಯಾಕ್ಷೋ ನಿಷೂದಿತಃ ॥ ೪ ॥

ಹತೇ ತಸ್ಮಿನ್ ಹಿರಣ್ಯಾಕ್ಷೇ ಪ್ರಹ್ಲಾದೋ ವೈಷ್ಣವಾಗ್ರಣೀಃ ।
ತ್ಯಕ್ತ್ವಾ ತು ತಾಮಸೀಂ ವೃತ್ತಿಂ ಸ್ವಕೀಯಂ ರಾಜ್ಯಮಾಸ್ಥಿತಃ ॥ ೫ ॥

ತತಃ ಕದಾಚಿದ್ದೇವಾನಾಂ ಮಾಯಯಾ ಮೋಹಿತೋಽಭವತ್ ।
ಕಂಚನ ಬ್ರಾಹ್ಮಣಂ ದೃಷ್ಟ್ವಾ ಕೃಶಾಂಗಂ ಗೃಹಮಾಗತಂ ॥ ೬ ॥

ಅವಜ್ಞಾಮಕರೋದ್ದೈತ್ಯಃ ಶಪ್ತಸ್ತೇನಾಗ್ರಜನ್ಮನಾ ।
ಬಲಂ ಯಸ್ಯ ಸಮಾಶ್ರಿತ್ಯ ದೈತ್ಯ ಮಾಮವಮನ್ಯಸೇ ॥ ೭ ॥

ಭಕ್ತಿರ್ವಿನಶ್ಯತು ಕ್ಷಿಪ್ರಂ ತವ ದೇವೇ ಜನಾರ್ದನೇ ।
ಇತಿ ಶಪ್ತ್ವಾ ಯಯೌ ವಿಪ್ರಃ ಸ್ವಾಶ್ರಮಂ ಮುನಿಪುಂಗವಾಃ ॥ ೮ ॥

---

೪. ಮಹಾವಿಷ್ಣುವು ಈ ದೇವತೆಗಳ ಕಷ್ಟಗಳನ್ನು ಕೇಳಿ, ಆ ಹಿರಣ್ಯಾಕ್ಷನನ್ನು ಕೊಲ್ಲಲೋಸುಗ ವರಾಹಾವತಾರಮಾಡಿ, ಅದೇ ವೇಷದಿಂದ ಹಿರಣ್ಯಾಕ್ಷನನ್ನು ಸಂಹಾರಮಾಡಿದನು.

೫. ಹಿರಣ್ಯಾಕ್ಷನು ನಾಶವಾಗಲು ವಿಷ್ಣುಭಕ್ತನಾದ ಪ್ರಹ್ಲಾದನು ತಾಮಸೀವೃತ್ತಿಯನ್ನು ಬಿಟ್ಟು, ಸಾತ್ತ್ವಿಕವೃತ್ತಿಯಿಂದ ತನ್ನ ರಾಜ್ಯವನ್ನು ಆಳಲು ಆರಂಭಿಸಿದನು. ಅಂದರೆ ಸದ್ಧರ್ಮದಿಂದ ರಾಜ್ಯವಾಳುತ್ತಿದ್ದನು.

೬. ಅನಂತರ ದೇವತೆಗಳು ಆ ಪ್ರಹ್ಲಾದನನ್ನು ದೇವಮಾಯೆಯಿಂದ ಅಜ್ಞಾನಿಯನ್ನಾಗಿ ಮಾಡಿದರು. ಮಾಯಾಮೋಹಿತನಾದ ಪ್ರಹ್ಲಾದನು ಒಂದು ದಿನ ತನ್ನ ಮನೆಗೆ ಕೃಶಾಂಗನಾಗಿ ಬಂದಿದ್ದ ಒಬ್ಬ ಬ್ರಾಹ್ಮಣನನ್ನು ಬಹಳವಾಗಿ ತಿರಸ್ಕರಿಸಿ, ಆತನನ್ನು ಹೀಯ್ಯಾಳಿಸಿದನು.

೭. ಆದರಿಂದ ಕುಪಿತನಾದ ಆ ಬ್ರಾಹ್ಮಣನು ಪ್ರಹ್ಲಾದನಿಗೆ ಶಾಪವಿತ್ತನು. "ಎಲೈ ರಾಜನೇ ನೀನು ಯಾವ ದೇವರ ವರಬಲದಿಂದ ಕೊಬ್ಬಿದವನಾಗಿ ನನ್ನನ್ನು ಹೀಗೆ ಹೀಯ್ಯಾಳಿಸಿದೆಯೋ, ಅಂಥ ಮಹಾವಿಷ್ಣುವಿನಲ್ಲಿ ನಿನ್ನ ಭಕ್ತಿಯು ಕಡಿಮೆಯಾಗಲಿ."

೮. ಎಂದು ಶಾಪಕೊಟ್ಟು ಆ ಬ್ರಾಹ್ಮಣನು ತನ್ನ ಆಶ್ರಮಕ್ಕೆ ಹೊರಟು ಹೋದನು.

ಅಥ ದೈತ್ಯಪತಿರ್ಯುದ್ಧಮಕರೋದ್ವಿಷ್ಣುನಾ ಸಹ ।
ಪಿತುರ್ವಧಮನುಸ್ಮೃತ್ಯ ದೇವಾಶ್ಚಾನ್ಯೇ ವಿನಿರ್ಜಿತಾಃ ॥ ೯ ॥

ಅನುಗ್ರಹಾದ್ಭಗವತಃ ಪೂರ್ವಸ್ಮಾತ್ ದೈತ್ಯರಾಟ್ ಪುನಃ ।
ತ್ಯಕ್ತ್ವಾ ಮಾಯಾಮಯಂ ಸರ್ವಂ ಶಾರ್ಙ್ಗಿಣಂ ಶರಣಂ ಯಯೌ ॥ ೧೦ ॥

ಅಭಿಷಿಚ್ಯಾಂಧಕಂ ರಾಜ್ಯೇ ಯೋಗಯುಕ್ತೋಽಭವತ್ಸ್ವಯಂ ।
ಅಥ ದೇವೋ ಮಹಾದೇವಃ ಶರಣ್ಯಃ ಸರ್ವದೇಹಿನಾಂ ॥ ೧೧ ॥

ಕೇನಾಪಿ ಹೇತುನಾ ಭಿಕ್ಷಾಮಕರೋದ್ಬ್ರಾಹ್ಮಣೈಃ ಸಹ ।
ಸಂಸ್ಥಾಪ್ಯ ಮಂದರೇ ದೇವೀಂ ಗಿರಿಜಾಂ ಗಿರಿಜಾಪತಿಃ ॥ ೧೨ ॥

ಸನಾರಾಯಣಕಾನ್ ದೇವಾನಕರೋತ್ಪಾರ್ಶ್ವಗಾನ್ ಶಿವಃ ।
ಸ್ತ್ರೀರೂಪಧಾರಿಣೋ ದೇವಾಃ ಸೇವಂತೇ ಪಾರ್ವತೀಂ ತದಾ ॥ ೧೩ ॥

---

೯. ಅನಂತರ ಪ್ರಹ್ಲಾದನು ಆ ಶಾಪದಿಂದ ವಿಷ್ಣುಭಕ್ತಿಶೂನ್ಯನಾಗಿ, ತನ್ನ ತಂದೆಯನ್ನು ವಿಷ್ಣುವು ಕೊಂದನೆಂಬ ಆಗ್ರಹದಿಂದ, ವಿಷ್ಣುವಿನ ಮೇಲೆಯೇ ಯುದ್ಧಕ್ಕೆ ತೆರಳಿದನು. ಅದಕ್ಕೆ ಮುಂಚೆ ಸಮಸ್ತ ದೇವತೆಗಳನ್ನೂ ಯುದ್ಧದಲ್ಲಿ ಸೋಲಿಸಿದನು. ದೇವತೆಗಳೆಲ್ಲರೂ ಸೇರಿ ತನ್ನ ತಂದೆಯನ್ನು ಕೊಂದರೆಂಬ ದ್ವೇಷವೇ ಪ್ರಧಾನವಾಗಿ ಅವನ ಹೃದಯದಲ್ಲಿ ನಿಂತಿತು.

೧೦. ಆದರೂ ಮಹಾವಿಷ್ಣುವಿನ ಅನುಗ್ರಹದಿಂದ ಪ್ರಹ್ಲಾದನಿಗೆ ಹಿಂದಿನ ಭಕ್ತಿಭಾವವು ಪುನಃ ಸ್ಮರಣೆಗೆ ಬಂದಿತು. ಆಗ ವಿಷ್ಣುವನ್ನು ಬಹಳವಾಗಿ ಧ್ಯಾನಿಸಿದನು. ಅದರಿಂದ ಪ್ರಹ್ಲಾದನು ಆ ದೇವಮಾಯೆಯನ್ನು ಕಳೆದುಕೊಂಡವನಾಗಿ ಮಹಾವಿಷ್ಣುವನ್ನೇ ಶರಣು ಹೊಂದಿದನು.

೧೧-೧೨. ಆಮೇಲೆ ಪ್ರಹ್ಲಾದನು ಹಿರಣ್ಯಾಕ್ಷನ ಮಗನಾದ ಅಂಧಕನನ್ನು ರಾಜನನ್ನಾಗಿಮಾಡಿ ತಾನು ಯೋಗಿಯಾಗಿ ಅರಣ್ಯವನ್ನು ಪ್ರವೇಶಿಸಿದನು. ಹೀಗಿರಲು ಒಂದು ಸಾರಿ ಮಹಾದೇವನಾದ ಪರಮೇಶ್ವರನು ಯಾವುದೋ ಕಾರಣದಿಂದ ಬ್ರಾಹ್ಮಣರೊಡನೆ ಭಿಕ್ಷಾಟನೆಗಾಗಿ ಹೊರಡಬೇಕಾಯಿತು. ಆ ಕಾಲದಲ್ಲಿ ಶಂಕರನು ತನ್ನ ಪತ್ನಿಯಾದ ಗೌರಿಯನ್ನು ಮಂದರಪರ್ವತದಲ್ಲಿರುವಂತೆ ಅಪ್ಪಣೆಮಾಡಿದನು.

೧೩. ಆ ಗೌರೀದೇವಿಯ ರಕ್ಷಣೆಗಾಗಿ ವಿಷ್ಣುವೇ ಮೊದಲಾದ ದೇವತೆಗಳನ್ನು ರಕ್ಷಕರನ್ನಾಗಿಮಾಡಿ ನೇಮಿಸಿದನು. ಅವರೆಲ್ಲರೂ ಸ್ತ್ರೀರೂಪವನ್ನು ಧರಿಸಿಕೊಂಡು ದೇವಿಯನ್ನು ಸರ್ವದಾ ಸೇವಿಸಲಾರಂಭಿಸಿದರು.

ಸಂಸ್ಥಾಪ್ಯ ನಂದಿಪ್ರಮುಖಾನಸಂಖ್ಯಾತಾನ್ ಗಣೇಶ್ವರಾನ್ ।
ಭೈರವಂ ಚ ಸಮಾದಿಶ್ಯ ನಂದಿನಂ ದ್ವಾರದೇಶತಃ ॥ ೧೪ ॥

ಏತಸ್ಮಿನ್ನಂತರೇ ಪ್ರಾಪ್ತೋ ಮಂದರಂ ಚಾಂಧಕಾಸುರಃ ।
ಆಹರ್ತುಕಾಮಃ ಶರ್ವಾಣೀಂ ತಂ ದೃಷ್ಟ್ವಾ ಕಾಲಭೈರವಃ ॥ ೧೫ ॥

ತಾಡಯಾಮಾಸ ಶೂಲೇನ ಪಪಾತ ಭುವಿ ಮೂರ್ಛಿತಃ ।
ಪುನರುತ್ಥಾಯ ವೇಗೇನ ಗದಾಮಾದಾಯ ದೈತ್ಯರಾಟ್ ॥ ೧೬ ॥

ಭೈರವಂ ತಾಡಯಾಮಾಸ ತಥಾ ಚಾನ್ಯಾನ್ ಗಣೇಶ್ವರಾನ್ ।
ದೃಷ್ಟ್ವಾ ತದದ್ಭುತಂ ಯುದ್ಧಂ ವಿಷ್ಣುರ್ದಾನವಮರ್ದನಃ ॥ ೧೭ ॥
ಅಸೃಜಚ್ಛಕ್ತಯೋ ದಿವ್ಯಾಸ್ತಾಭಿರ್ದೈತ್ಯಃ ಪರಾಜಿತಃ ।
ತತೋ ವಧಾಯ ಭಗವಾನ್ ರುದ್ರೋ ಮಂದರಪರ್ವತಂ ॥ ೧೮ ॥

---

೧೪. ಅಸಂಖ್ಯಾತವಾದ ಈಶ್ವರನ ಪ್ರಮಥಗಣಗಳೆಲ್ಲವೂ ಈ ಮಂದರಪರ್ವತದಲ್ಲಿಯೇ ದೇವಿಯ ರಕ್ಷಣೆಗಾಗಿ ಸಿದ್ಧವಾಗಿದ್ದುವು. ಗಣಾಧಿಪತಿಯಾದ ನಂದಿಯು, ಭೈರವನೊಡನೆ ಆ ಮಂದರಪರ್ವತದ ದ್ವಾರಪ್ರದೇಶವನ್ನು ರಕ್ಷಿಸುತ್ತಾ ನಿಂತನು.

೧೫. ಇದನ್ನು ಕೇಳಿದ ಅಂಧಕನು ಹೇಗಾದರೂ ಮಾಡಿ ಪಾರ್ವತಿಯನ್ನು ಅಪಹರಿಸ ಬೇಕೆಂಬ ಇಷ್ಟದಿಂದ ತಾನು ಆ ಮಂದರಪರ್ವತದ ಪ್ರದೇಶಕ್ಕೆ ಬಂದು ಅಲ್ಲಿ ದ್ವಾರಪಾಲಕನಾಗಿದ್ದ ಕಾಲಭೈರವನನ್ನು ಕಂಡನು.

೧೬. ಕಾಲಭೈರವನು ಇವನನ್ನು ನೋಡಿದೊಡನೆಯೇ ಕುಪಿತನಾಗಿ ಶೂಲಾಯುಧದಿಂದ ವೇಗವಾಗಿ ಆ ಅಂಧಕನನ್ನು ತಿವಿದನು. ಆ ಏಟಿಗೆ ಅಂಧಕನು ಮೂರ್ಛೆಬಿದ್ದು ಪುನಃ ಎಚ್ಚರಗೊಂಡು ತನ್ನ ಗದೆಯನ್ನು ಕೈಯಲ್ಲಿ ತೆಗೆದುಕೊಂಡನು

೧೭. ಮೊದಲು ಗದೆಯಿಂದ ಕಾಲಭೈರವನನ್ನು ಹೊಡೆದು ಘಾತಿಸಿ, ಆ ಮೇಲೆ ಸಮಸ್ತ ಪ್ರಮಥಗಣನಾಯಕರನ್ನೆಲ್ಲಾ ಸೋಲಿಸಿದನು. ಇಂತಹ ಅದ್ಭುತವಾದ ಯುದ್ಧವನ್ನು ರಾಕ್ಷಸಾರಿಯಾದ ವಿಷ್ಣುವು ನೋಡಿ,

೧೮. ಒಡನೆಯೇ ಕೆಲವು ದಿವ್ಯಶಕ್ತಿಗಳನ್ನು ನಿರ್ಮಾಣಮಾಡಿದನು. ಆ ಶಕ್ತಿಗಳು ಈ ಅಂಧಕನನ್ನು ಸೋಲಿಸಿ ಹಿಮ್ಮೆಟ್ಟಿಸಿದುವು. ಈ ಸಮಾಚಾರವನ್ನು ಪರಮೇಶ್ವರನು ಹೇಗೊ ತಿಳಿದು ಆ ಅಂಧಕನನ್ನು ಕೊಲ್ಲಲು ಮಂದರಪರ್ವತದ ಸಮೀಪಕ್ಕೆ ಬಂದು ಸೇರಿದನು.

ಪ್ರಾಪ್ತೋ ಯತ್ರ ಸ್ಥಿತಾ ದೇವೀ ದೇವೈಸ್ಸಹ ಗಣೇಶ್ವರೈಃ ।
ದೃಷ್ಟ್ವಾ ವಿಶ್ವೇಶ್ವರಂ ದೇವೀ ಶೀಘ್ರಂ ಪರಮಯಾ ಮುದಾ ॥ ೧೯ ॥

ನನಾಮ ಶಿರಸಾ ಭಕ್ತ್ಯಾ ಭರ್ತುಶ್ಚರಣಪಂಕಜಂ ।
ಪ್ರಣಮ್ಯ ದಂಡವದ್ವಿಷ್ಣುಂ ಯದ್ವೃತ್ತಂ ತನ್ನ್ಯವೇದಯತ್ ॥ ೨೦ ॥

ಶ್ರುತ್ವಾ ತದ್ವಿಸ್ಮಿತೋ ಭೂತ್ವಾ ದೇವ್ಯಾ ಸಹ ವರಾಸನೇ ।
ಉಪವಿಷ್ಟಸ್ತದಾ ಸರ್ವೇ ದೇವಾಃ ಪ್ರಾಂಜಲಯಃ ಸ್ಥಿತಾಃ ॥ ೨೧ ॥

ಅಥಾಸ್ಮಿನ್ನಂತರೇ ಪ್ರಾಪ್ತೋ ಹಿರಣ್ಯನಯನಾತ್ಮಭೂಃ ।
ಯುಯುಧೇ ಸಸುರೈಸ್ಸಾರ್ಧಂ ಮಾತೃಭಿಶ್ಚ ಗಣೈಸ್ಸಹ ॥ ೨೨ ॥

ತೇನ ತೇ ನಿರ್ಜಿತಾ ದೇವಾಃ ಶಕ್ರಾದ್ಯಾಃ ಸಹ ಮಾತೃಭಿಃ ।
ಯುದ್ಧಂ ತದದ್ಭುತಂ ದೃಷ್ಟ್ವಾ ಶಾರ್ಙ್ಗೀ ಶಂಕರಮಬ್ರವೀತ್ ॥ ೨೩ ॥

---

೧೯. ಅಲ್ಲಿ ದೇವಿಯು ದೇವತೆಗಳೊಡನೆಯೂ, ಪ್ರಥಮಗಣಗಳೊಡನೆಯೂ ಸುರಕ್ಷಿತವಾಗಿರುವುದನ್ನು ಕಂಡು ಸಂತೋಷಪಟ್ಟನು. ದೇವಿಯೂ ಸಹ ಹೆಚ್ಚು ಸಂತೋಷದಿಂದ ತನ್ನ ಪತಿಯನ್ನು ನೋಡಿದಳು.

೨೦. ಪತಿಯ ಪಾದಪದ್ಮಗಳಿಗೆ ಭಕ್ತಿಯಿಂದ ವಂದಿಸಿ, ವಿಷ್ಣುವಿಗೂ ಸಾಷ್ಟಾಂಗ ನಮಸ್ಕಾರಮಾಡಿ, ಅಲ್ಲಿ ನಡೆದ ಸಮಾಚಾರವನ್ನೆಲ್ಲಾ ಪತಿಗೆ ವಿಜ್ಞಾಪಿಸಿದಳು.

೨೧. ಆ ಗೌರೀದೇವಿಯ ಮಾತುಗಳನ್ನು ಕೇಳಿ ಪರಮೇಶ್ವರನು ಆಶ್ಚರ್ಯಪಟ್ಟು ದೇವಿಯ ಜೊತೆಯಲ್ಲಿಯೇ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಅಲ್ಲಿದ್ದ ಸಮಸ್ತ ದೇವತೆಗಳೂ ಸಾಲಾಗಿ ಕೈಜೋಡಿಸಿಕೊಂಡು ನಿಂತರು.

೨೨. ಅಷ್ಟರಲ್ಲಿಯೇ ಪುನಃ ಅಂಧಕಾಸುರನು ಸೈನ್ಯಸಮೇತನಾಗಿ ಪರಮೇಶ್ವರನ ಮೇಲೆ ಯುದ್ಧಕ್ಕೆ ಬಂದನು. ಅವನನ್ನು ಎದುರಿಸಿ ಸಮಸ್ತ ದೇವಗಣವೂ, ಮಾತೃದೇವಿಯರೂ ಯುದ್ಧಮಾಡಲಾರಂಭಿಸಿದರು.

೨೩. ಅಂಧಕನು ತನ್ನ ಪರಾಕ್ರಮದಿಂದ ಇಂದ್ರನೇ ಮೊದಲಾದ ದೇವತೆಗಳನ್ನೂ, ಮಾತೃಗಣಗಳನ್ನೂ ಆ ಯುದ್ಧದಲ್ಲಿ ಸೋಲಿಸಿದನು. ಇಂಥ ಘೋರವಾದ ಯುದ್ಧವನ್ನು ನೋಡಿ ಶ್ರೀ ವಿಷ್ಣುವು ಮಹೇಶ್ವರನೊಡನೆ ಹೀಗೆ ಹೇಳಿದನು.

ಯಥಾಽಸೌ ಹನ್ಯತೇ ದೈತ್ಯಸ್ತಥೋಪಾಯಂ ಕುರು ಪ್ರಭೋ ।
ಏವಂ ಹರೇರ್ವಚಶ್ಶ್ರುತ್ವಾ ಶಂಕರಃ ಕಾಲಭೈರವಂ ॥ ೨೪ ॥

ವಧಾಯ ಪ್ರೇರಯಾಮಾಸ ದೈತ್ಯೇಂದ್ರಸ್ಯ ಬಲೀಯಸಃ ।
ತತಃ ಸ ಭೈರವಃ ಶಂಭೋಃ ಶಿವಸ್ಯಾಜ್ಞಾಂ ವಿಧಾಯ ಚ ॥ ೨೫ ॥

ಆದಾಯ ಸಹಸಾ ಶೂಲಂ ಯಯೌ ದೈತ್ಯಸ್ಯ ಸಂಗರಂ ।
ಶೂಲಾಗ್ರೇಣ ವಿನಿರ್ಭಿದ್ಯ ನನರ್ತ ಸ್ವಾತ್ಮಲೀಲಯಾ ॥ ೨೬ ॥

ಶೂಲಾಗ್ರೇ ಸ್ಥಾಪಿತೇ ದೈತ್ಯೇ ಬ್ರಹ್ಮಾದ್ಯಾ ಮುನಯಸ್ತದಾ ।
ಅಸ್ತುವನ್ನಿವಿಧೈಃ ಸ್ತೋತ್ರೈರ್ಹರ್ಷೋ ಲೋಕಸ್ತದಾಽಭವತ್ ॥ ೨೭ ॥

---

೨೪. ಓ ಮಹೇಶ್ವರನೇ, ಈ ಅಂಧಕನು ಬಲುದುಷ್ಟನು. ಇವನನ್ನು ಕೊಲ್ಲುವಂತಹ ಉಪಾಯವೊಂದನ್ನು ಆಲೋಚಿಸು. ಇನ್ನು ನಿದಾನಮಾಡಬಾರದು'' ಎಂದು ಹೇಳಿದ ಮಹಾವಿಷ್ಣುವಿನ ಮಾತನ್ನು ಕೇಳಿ ಶಂಕರನು ಕಾಲಭೈರವನನ್ನು ಕರೆದು,

೨೫. ಅಂಧಕಾಸುರನನ್ನು ಕೊಲ್ಲುವಂತೆ ಅಪ್ಪಣೆಕೊಟ್ಟು ಕಳುಹಿಸಿದನು ಅನಂತರ ಕಾಲಭೈರವನು ಶಂಭುವಿನ ಅಪ್ಪಣೆಯನ್ನು ಶಿರಸಾವಹಿಸಿ,

೨೬. ತ್ರಿಶೂಲವನ್ನು ಕೈಯಲ್ಲಿ ಹಿಡಿದು ದೈತ್ಯರಾಜನಾದ ಅಂಧಕನನ್ನು ಎದುರಿಸಿ ಸೋಲಿಸಿದನು. ಕಾಲಭೈರವನು ಕೊನೆಗೆ ಶಿವಾನುಗ್ರಹಬಲದಿಂದ ಶೂಲಾಗ್ರವನ್ನು ಅವನ ಹೃದಯಕ್ಕೆ ಚುಚ್ಚಿ ತನ್ನದೇ ಆದ ಒಂದು ಲೀಲೆಯಿಂದ ನಾಟ್ಯವಾಡಲಾರಂಭಿಸಿದನು.

೨೭. ಅನಂತರ ಕಾಲಭೈರವನು ತನ್ನ ತ್ರಿಶೂಲದ ತುದಿಯಲ್ಲಿ ಅಂಧಕನ ದೇಹವನ್ನು ಚುಚ್ಚಿ ಮೇಲಕ್ಕೆತ್ತಿ ಹಿಡಿಯಲು ಆಗ ಬ್ರಹ್ಮನೇ ಮೊದಲಾದ ಮಹರ್ಷಿಗಳೆಲ್ಲರೂ ವಿಧವಿಧವಾಗಿ ಮಹೇಶ್ವರನನ್ನು ಸ್ತುತಿಸಲಾರಂಭಿಸಿದರು. ಲೋಕವೆಲ್ಲವೂ ಹರ್ಷಗೊಂಡಿತು.

|| ಅಂಧಕ ಉವಾಚ ||

ನಮಾಮಿ ಮೂರ್ಧ್ನಾ ಭಗವಂತಮೇಕಂ ।
ಸಮಾಹಿತಾ ಯಂ ವಿದುರೀಶತತ್ತ್ವಂ ।
ಪುರಾತನಂ ಪುಣ್ಯಮನಂತರೂಪಂ ।
ಕಾಲಂ ಕವಿಂ ಯೋಗವಿಯೋಗಹೇತುಂ || ೨೮ ||

ದಂಷ್ಟ್ರಾಕರಾಳಂ ದಿವಿ ನೃತ್ಯಮಾನಂ ।
ಹುತಾಶವಕ್ತ್ರಂ ಜ್ವಲನಾರ್ಕರೂಪಂ ।
ಸಹಸ್ರಪಾದಾಕ್ಷಿಶಿರೋಭಿಯುಕ್ತಂ ।
ಭವಂತಮೇಕಂ ಪ್ರಣಮಾಮಿ ರುದ್ರಂ || ೨೯ ||

ಜಯಾದಿದೇವಾಮರಪೂಜಿತಾಂಘ್ರೇ ।
ವಿಭಾಗಹೀನಾಮಲತತ್ತ್ವರೂಪ ।
ತ್ವಮಗ್ನಿರೇಕೋ ಬಹುಧಾ ವಿಭಜ್ಯಸೇ ।
ವಾದ್ಯಾದಿಭೇದೈರಖಿಲಾತ್ಮರೂಪಃ || ೩೦ ||

---

೨೮. ಆಗ ಅಂಧಕನು ದುಃಖದಿಂದ ಹೀಗೆ ಪರಮೇಶ್ವರನನ್ನು ಸ್ತುತಿಸಲಾರಂಭಿಸಿದನು. " ಓ ಪರಮೇಶ್ವರನೇ, ನಿನ್ನ ತತ್ತ್ವವನ್ನು ಯೋಗಿಗಳು ಸರಿಯಾಗಿ ತಿಳಿದು ಸರ್ವದಾ ನಿನ್ನನ್ನೇ ಸೇವಿಸುತ್ತಿರುವರು. ನೀನು ಆದ್ಯಂತರಹಿತನು. ಅನಂತ ರೂಪಿಯು. ಯೋಗಕ್ಕೂ, ವಿಯೋಗಕ್ಕೂ ಮೂಲಕಾರಣನಾದವನು. ಅಂಥ ನಿನಗೆ ನಮಸ್ಕಾರವು.

೨೯. ಮಹೇಶ್ವರನೇ! ನಿನ್ನ ಕೋರೆಹಲ್ಲುಗಳು ಭಯಂಕರವಾಗಿವೆ. ನಿನ್ನ ನಾಟ್ಯವು ಅಂತರಿಕ್ಷದಲ್ಲಿ ಬಹು ರಮಣೀಯವಾಗಿರುತ್ತದೆ. ಸೂರ್ಯಾಗ್ನಿಗಳಂತೆ ತೇಜಸ್ಸುಳ್ಳವನಾಗಿ ಸಹಸ್ರಪಾದ, ಸಹಸ್ರಾಕ್ಷ, ಸಹಸ್ರಶಿರಸ್ಸು ಇವುಗಳಿಂದ ಕೂಡಿರುವ ರುದ್ರರೂಪಿಯಾದ ನಿನಗೆ ವಂದನೆಯು.

೩೦. ಓ ಶಂಭುವೇ, ಜಯವಿಜಯರೇ ಮೊದಲಾದ ಸಮಸ್ತ ದೇವತೆಗಳಿಂದ ನಿನ್ನ ಪಾದವು ಸದಾ ಸೇವಿಸಲ್ಪಡುತ್ತಿದೆ. ನಿನ್ನನ್ನು ಪ್ರಪಂಚದಿಂದ ಬೇರೆಯಾದವನು ಎಂದು ಹೇಳಲು ಸಾಧ್ಯವಿಲ್ಲ. ಅಮಲತತ್ತ್ವರೂಪಿಯು ನೀನು. ನೀನೇ ಅಗ್ನಿಸ್ವರೂಪನು. ನೀನು ಅದ್ವಯನು. ಬೇರೆಬೇರೆ ರೂಪಗಳಿಂದ ಬೇರೆಬೇರೆಯಾಗಿ ಕಾಣುತ್ತಿರುವೆ. ಸರ್ವಕ್ಕೂ ಆತ್ಮಭೂತನಾದವನು ನೀನೇ.

ತ್ವಾಮೇಕಮಾಹುಃ ಪುರುಷಂ ಪುರಾಣಂ ।
ಆದಿತ್ಯವರ್ಣಂ ತಮಸಃ ಪರಸ್ತಾತ್ ।
ತ್ವಂ ಪಶ್ಯಸೀದಂ ಪರಿಪಾಸ್ಯಜಸ್ರಂ ।
ತ್ವಮಂತಕೋ ಯೋಗಿಗಣಾಭಿಜುಷ್ಟಃ ॥ ೩೧ ॥

ಏಕಾಂತರಾತ್ಮಾ ಬಹುಧಾ ನಿವಿಷ್ಟೋ ।
ದೇಹೇಷು ದೇಹಾದಿವಿಶೇಷಹೀನಃ ।
ತ್ವಮಾತ್ಮತತ್ತ್ವಂ ಪರಮಾರ್ಥಶಬ್ದಂ ।
ಭವಂತಮಾಹುಃ ಶಿವಮೇವ ಕೇಚಿತ್ ॥ ೩೨ ॥

ತ್ವಮಕ್ಷರಂ ಬ್ರಹ್ಮ ಪರಂ ಪವಿತ್ರಂ ।
ಆನಂದರೂಪಂ ಪ್ರಣವಾಭಿಧಾನಂ ।
ತ್ವಮೀಶ್ವರೋ ವೇದವಿದೇಷು ಸಿದ್ಧಃ ।
ಸ್ವಾಯಂಭುವೋಽಶೇಷವಿಶೇಷಹೀನಃ ॥ ೩೩ ॥

---

೩೧. ನಿನ್ನನ್ನು ಆದಿಪುರುಷನೆನ್ನುವರು. ಅಜ್ಞಾನಕ್ಕೆ ಸಿಲುಕದೆ ಜ್ಞಾನ ರೂಪಿಯಾಗಿ ನೀನು ಸೂರ್ಯನಂತೆ ಹೊಳೆಯುವೆ. ನೀನು ಈ ಪ್ರಪಂಚವನ್ನು ನೋಡುತ್ತಿದ್ದೀಯೆ. ಹಾಗೆಯೇ ಲೋಕರಕ್ಷಣೆಗೂ ಮನಸ್ಸನ್ನು ಕೊಟ್ಟಿರುವೆ. ಯೋಗಿವಂದ್ಯನಾಗಿರುವ ನಿನ್ನನ್ನೇ ಅಂತಕನೆನ್ನುವರು. ಜಗತ್ತೆಲ್ಲವೂ ನೀನೇ.

೩೨. ಎಲೈ ಪರಶಿವನೇ. ನೀನು ಒಬ್ಬನೇ ಆತ್ಮನಾದರೂ ಬೇರೆಬೇರೆ ರೂಪ ದಿಂದ ಬೇರೆಬೇರೆ ದೇಹಗಳಲ್ಲಿ ಅಡಗಿದ್ದೀಯೆ. ಆದರೂ ದೇಹದ ಸಂಬಂಧವನ್ನು ಮಾತ್ರ ನೀನು ಹೊಂದಿಲ್ಲ. ಆತ್ಮತತ್ತ್ವವೆನ್ನುವುದು ನಿನ್ನನ್ನೇ. ಪರಮಾರ್ಥಶಬ್ದ ವಾಚ್ಯನೂ ನೀನೇ. ನಿನ್ನನ್ನೇ ಶಿವನೆನ್ನುವರು.

೩೩. ನೀನೇ ಬ್ರಹ್ಮನು. ನಾಶರಹಿತನು. ಪವಿತ್ರರೂಪಿಯು. ಆನಂದ ಮಯನು. ಪ್ರಣವಸ್ವರೂಪಿಯು. ವೇದಜ್ಞರೆಲ್ಲರೂ ನಿನ್ನನ್ನು ಸಿದ್ಧಪುರುಷನೆನ್ನು ವರು. ಸ್ವಯಂಪ್ರಕಾಶಕನಾಗಿ, ಅಶೇಷರೂಪಿಯಾಗಿ ವಿಶೇಷಸ್ವಭಾವವಿಲ್ಲದ ನಿನ್ನನ್ನು ನಾನು ಶಿರಸಾ ವಂದಿಸುವೆನು.

ತ್ವಮಿಂದ್ರರೂಪೋ ವರುಣೋಗ್ನಿರೂಪೋ ।
ಹಂಸಃ ಪ್ರಾಣೋ ಮೃತ್ಯುರನ್ನಾಧಿಯಜ್ಞಃ ।
ಪ್ರಜಾಪತಿರ್ಭಗವಾನೇಕರೂಪೋ ।
ನೀಲಗ್ರೀವ ಸ್ತೂಯಸೇ ವೇದವಿದ್ಭಿಃ ॥ ೩೪ ॥

ನಾರಾಯಣಸ್ತ್ವಂ ಜಗತಾಮನಾದಿಃ ।
ಪಿತಾಮಹಸ್ತ್ವಂ ಪ್ರಪಿತಾಮಹಶ್ಚ ।
ವೇದಾಂತಗುಹ್ಯೋಪನಿಷತ್ಸು ಗೀತಃ ।
ಸದಾಶಿವಸ್ತ್ವಂ ಪರಮೇಶ್ವರೋಽಸಿ ॥ ೩೫ ॥

ನಮಃ ಪರಸ್ತಾತ್ತಮಸಃ ಪರಸ್ಮೈ ಪದಾತ್ಮನೇ ಪಂಚಪರಾಂತರಾಯ ।
ತ್ರಿಮೂರ್ತ್ಯತೀತಾಯ ನಿರಂಜನಾಯ ಸಹಸ್ರಶಕ್ತ್ಯಾಸನಸಂಸ್ಥಿತಾಯ ೩೬

---

೩೪. ಓ ಪರಮೇಶ್ವರನೇ, ನೀನೇ ಇಂದ್ರನು. ವರುಣನು. ಅಗ್ನಿಯು. ನಿನ್ನನ್ನೇ ಹಂಸನೆಂದೂ, ಪ್ರಾಣನೆಂದೂ, ಮೃತ್ಯುವೆಂದೂ, ಅನ್ನವೆಂದೂ, ಯಜ್ಞರೂಪಿಯೆಂದೂ, ಕರೆಯುವರು. ಓ ನೀಲಕಂಠನೇ ನಿನ್ನನ್ನು ವೇದಜ್ಞರಾದವರು ಪ್ರಜಾಪತಿಯೆಂದೂ. ಏಕರೂಪಿಯಾದ ಭಗವಂತನೆಂದೂ ಹೊಗಳುವರು.

೩೫. ಎಲೈ ಪರಮೇಶ್ವರನೇ, ನೀನು ಲೋಕಕ್ಕೆ ಆದಿಭೂತನು. ನೀನೇ ನಾರಾಯಣನು. ನಿನ್ನನ್ನೇ ಪಿತಾಮಹನೆಂದೂ, ಪ್ರಪಿತಾಮಹನೆಂದೂ ಹೇಳುವರು. ವೇದಾಂತಶಾಸ್ತ್ರದಲ್ಲಿಯೂ ಉಪನಿಷತ್ತುಗಳಲ್ಲಿಯೂ ನಿನ್ನನ್ನು ಬಹಳವಾಗಿ ಸ್ತುತಿಸಿರುವರು. ನೀನೇ ಪರಮೇಶ್ವರನು. ಸನ್ಮಂಗಳ ಪ್ರದಾಯಕನೂ ನೀನೇ.

೩೬. ಅಜ್ಞಾನಗುಣಕ್ಕಿಂತ ಭಿನ್ನನಾಗಿಯೂ, ಪರಾಪರಸ್ವರೂಪಿಯಾಗಿಯೂ, ಪಂಚತತ್ತ್ವಪೂರ್ಣನಾಗಿಯೂ, ತ್ರಿಮೂರ್ತಿಗಳಿಗೆಲ್ಲಾ ಶ್ರೇಷ್ಠನಾಗಿಯೂ ಪಾಪನಾಶಕನಾಗಿಯೂ ಸಹಸ್ರಶಕ್ತಿಯುಕ್ತನಾಗಿಯೂ ಇರುವಂತಹ ನಿನಗೆ ನಮಸ್ಕಾರವು.

ತ್ರಿಮೂರ್ತಯೇಽನಂತಪರಾತ್ಮಮೂರ್ತಯೇ ।
ಜಗನ್ನಿವಾಸಾಯ ಜಗನ್ಮಯಾಯ ।
ನಮೋ ಲಲಾಟಾರ್ಪಿತಲೋಚನಾಯ ।
ನಮೋ ಜನಾನಾಂ ಹೃದಿ ಸಂಸ್ಥಿತಾಯ ॥ ೩೭ ॥

ಫಣೀಂದ್ರಹಾರಾಯ ನಮೋಽಸ್ತು ತುಭ್ಯಂ ।
ಮುನೀಂದ್ರಸಿದ್ಧಾರ್ಚಿತಪಾದಪದ್ಮ ।
ಐಶ್ವರ್ಯಧರ್ಮಾಸನಸಂಸ್ಥಿತಾಯ ।
ನಮಃ ಪರಾಂತಾಯ ಭವೋದ್ಭವಾಯ ॥ ೩೮ ॥

ಸಹಸ್ರಚಂದ್ರಾರ್ಕಸಮೂಹಮೂರ್ತಯೇ ।
ನಮೋಽಗ್ನಿಚಂದ್ರಾರ್ಕತ್ರಿಲೋಚನಾಯ ।
ನಮೋಽಸ್ತು ಸೋಮಾಯ ಸ ಮಧ್ಯಮಾಯ ।
ನಮೋಽಸ್ತು ದೇವಾಯ ಹಿರಣ್ಯಬಾಹವೇ ॥ ೩೯ ॥

---

೩೭. ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಸ್ವರೂಪನಾಗಿಯೂ, ಲೋಕವ್ಯಾಪಕನಾಗಿಯೂ, ಲೋಕಸ್ವರೂಪಿಯಾಗಿಯೂ, ಹಣೆಯಲ್ಲಿ ಅಗ್ನಿನೇತ್ರವುಳ್ಳವನಾಗಿಯೂ ಇರುವಂತಹ ಸಮಸ್ತ ಹೃದಯವ್ಯಾಪಿಯಾಗಿರುವ ಪರಮೇಶ್ವರನೇ ನಿನಗೆ ಪ್ರಣಾಮವು.

೩೮. ನಿನಗೆ ಸರ್ಪವೇ ಒಂದು ಹಾರವಾಗಿದೆ. ನಿನ್ನ ಪಾದಪದ್ಮವು ಮುನೀಂದ್ರರಿಂದ ಅರ್ಚಿಸಲ್ಪಡುತ್ತಿದೆ. ಐಶ್ವರ್ಯ ಮತ್ತು ಧರ್ಮವೇ ನಿನಗೆ ಆಶ್ರಯಸ್ಥಾನ. ನೀನು ಪರಾಪರಸ್ವರೂಪಿಯು. ಸಂಸಾರದುಃಖಗಳನ್ನು ಹೊಂದದೆ ಸಂಸಾರಿಯಾಗಿರುವವನು ನೀನು. ಅಂಥ ನಿನ್ನನ್ನು ವಂದಿಸುವೆನು.

೩೯. ಓ ಮಹೇಶ್ವರನೇ, ನಿನ್ನ ತೇಜಸ್ಸು ಸಹಸ್ರ ಸೂರ್ಯಚಂದ್ರರ ಕಾಂತಿಯನ್ನು ಮೀರಿಸಿದೆ. ಸೂರ್ಯ, ಚಂದ್ರ, ಅಗ್ನಿ, ಈ ಮೂರು ತೇಜೋಮೂರ್ತಿಗಳೇ ನಿನ್ನ ಮೂರು ಕಣ್ಣುಗಳು. ಯಾವಾಗಲೂ ಪಾರ್ವತೀಸಮೇತನಾಗಿ ಅಂತರಿಕ್ಷಮಧ್ಯದಲ್ಲಿ ನೀನು ಸಂಚರಿಸುತ್ತಿರುವೆ. ನೀನು ಹಿರಣ್ಯಬಾಹುವಾದ ಮಹಾದೇವನಲ್ಲವೇ? ನಿನಗೆ ವಂದನೆಯು.

ನಮೋಽತಿಗುಹ್ಯಾಯ ಗುಹಾಂತರಾಯ ।
ವೇದಾಂತವಿಜ್ಞಾನವಿನಿಶ್ಚಿತಾಯ ।
ತ್ರಿಕಾಲಹೀನಾಮಲಧಾಮಧಾಮ್ನೇ ।
ನಮೋ ಮಹೇಶಾಯ ನಮಶ್ಶಿವಾಯ ॥ ೪೦ ॥

ಸ್ತವೇನಾನೇನ ಭಗವಾನ್ ಪ್ರೀತೋ ಭೂತ್ವಾಥ ಭೈರವಃ ।
ಅವರೋಪ್ಯ ಚ ಶೂಲಾಗ್ರಾದುವಾಚ ಪರಮೇಶ್ವರಃ ॥ ೪೧ ॥

ತ್ವಯಾಹಂ ಸ್ತೋತ್ರವರ್ಯೇಣ ತೋಷಿತೋ ದೈತ್ಯಪುಂಗವ ।
ಪ್ರೀತೋಽಸ್ಮಿ ತವ ದಾಸ್ಯಾಮಿ ಗಾಣಾಪತ್ಯಂ ಹಿ ದುರ್ಲಭಂ ॥ ೪೨ ॥

ನಂದೀಶ್ವರಸಮೋ ವತ್ಸ ಭೃಂಗೀ ನಾಮ ಗಣೋ ಭವ ।
ಏವಂ ಲಬ್ಧವರೋ ದೈತ್ಯಃ ಕೋಟಿಸೂರ್ಯಸಮಪ್ರಭಃ ॥ ೪೩ ॥

---

೪೦. ಅತ್ಯಂತ ನಿಗೂಢಾಕಾರನೂ, . ಗುಹಾಮಧ್ಯಸ್ಥಿತಿಯುಳ್ಳವನೂ, ವೇದಾಂತಶಾಸ್ತ್ರದಲ್ಲಿ ದೃಢವಾಗಿ ಸಿಕ್ಕತಕ್ಕವನೂ, ಕಾಲತ್ರಯಾತೀತನೂ, ಪರಿಶುದ್ಧವಾದ ತೇಜಸ್ಸಿಗೆ ಆಶ್ರಯಸ್ಥಾನನೂ ಆದ ಮಹೇಶ್ವರರೂಪಿಯಾದ ಪರಮೇಶ್ವರನಿಗೆ ನಮಸ್ಕಾರವು.

೪೧. ಹೀಗೆಂದು ಅಂಧಕಾಸುರನು ಬಹುವಾಗಿ ಪರಮೇಶ್ವರನನ್ನು ಸ್ತುತಿಸಲು ಆ ಸ್ತೋತ್ರಕ್ಕೆ ತುಷ್ಟನಾದ ಭೈರವನು ಅಂಧಕಾಸುರನನ್ನು ತನ್ನ ಶೂಲದಿಂದ ಕೆಳಕ್ಕೆ ಇಳಿಸಿದನು. ಇದನ್ನು ನೋಡಿ ಪರಮೇಶ್ವರನು,

೪೨. ಅಯ್ಯಾ ಅಂಧಕನೇ, ನಿನ್ನ ಸ್ತೋತ್ರಕ್ಕೆ ನಾನು ತೃಪ್ತಿಪಟ್ಟಿದ್ದೇನೆ. ಎಲೈ ದೈತ್ಯಶ್ರೇಷ್ಠನೇ, ನಿನಗೆ ನಾನು ನನ್ನ ಪ್ರಮಥಗಣಗಳ ಒಡೆತನವನ್ನು ಅನುಗ್ರಹಿಸಿದ್ದೇನೆ.

೪೩. "ಇನ್ನು ಮುಂದೆ ನೀನು ನಂದೀಶ್ವರನಿಗೆ ಸರಿಸಮನಾಗಿ, ಭೃಂಗಿ ಎಂಬ ಹೆಸರಿನಿಂದ ಗಣಾಧ್ಯಕ್ಷನಾಗು" ಎಂದು ಪರಮೇಶ್ವರನು ವರವನ್ನೀಯಲು ಒಡನೆಯೇ ಆ ರಾಕ್ಷಸನು ಈಶ್ವರ ವರಪ್ರಭಾವದಿಂದ ಕೋಟಿ ಸೂರ್ಯರಂತೆ ಪ್ರಕಾಶಿಸಲಾರಂಭಿಸಿದನು.

ನೀಲಕಂಠಸ್ತ್ರಿನೇತ್ರಶ್ಚ ವೃಷಕೇತುರ್ಜಟಾಧರಃ ।
ತಂ ದೃಷ್ಟ್ವಾ ದೇವತಾಸ್ಸರ್ವಾ ಹರ್ಷನಿರ್ಭರಮಾನಸಾಃ ॥ ೪೪ ॥

ತುಷ್ಟುವುರ್ಗಣರಾಜಂ ತಂ ಭೈರವಸ್ಯ ಸಮೀಪಗಂ ।
ಅಥ ಶಂಭೋಃ ಸಮೀಪಸ್ಥಾಂ ದೇವೀಂ ವಿಶ್ವೇಶ್ವರೀಂ ಶಿವಾಂ ॥ ೪೫ ॥

ಸಂಸ್ತೂಯ ಸರ್ವಭಾವೇನ ಶರಣಾಗತವತ್ಸಲಾಂ ।
ಪುತ್ರತ್ವೇ ಜಗೃಹೇ ದೈತ್ಯಂ ಪ್ರೀತೇನ ಮನಸಾ ಶಿವಾ ॥ ೪೬ ॥

ತತೋಽನುಜ್ಞಾಂ ಮಹೇಶಸ್ಯ ಲಬ್ಧ್ವಾಸೌ ಕಾಲಭೈರವಃ ।
ಮಾತೃಭಿಸ್ಸಹ ವಿಶ್ವಾತ್ಮಾ ಪಾತಾಲೇ ಸ್ವಪುರಂ ಯಯೌ ॥ ೪೭ ॥

ವಿಷ್ಣೋರ್ಭಗವತೀ ಮೂರ್ತಿರ್ಯತ್ರಾಸ್ತೇ ತಾಮಸೀ ಪರಾ ।
ಅಥ ತಾಂ ಭೈರವೋ ದೃಷ್ಟ್ವಾ ಮುದಾ ತಾಂ ಪರಿಷಸ್ವಜೇ ॥ ೪೮ ॥

---

೪೪. ಆ ಅಂಧಕನು ಶಿವವರಬಲದಿಂದ ನೀಲಕಂಠನಾಗಿಯೂ, ಮೂರು ಕಣ್ಣುಳ್ಳವನಾಗಿಯೂ, ಜಟಾಧಾರಿಯಾಗಿಯೂ, ವೃಷಭಧ್ವಜನಾಗಿಯೂ ಕಂಗೊಳಿಸಿದನು. ಇಂತಹ ಶಿವಭಕ್ತನಾದ ಅಂಧಕನನ್ನು ನೋಡಿ ಸಮಸ್ತ ದೇವತೆಗಳೂ ಸಹ ಸಂತುಷ್ಟಾಂತರಂಗವುಳ್ಳವರಾದರು.

೪೫. ಅಲ್ಲದೆ ಭೈರವನ ಪಕ್ಕದಲ್ಲಿ ನಿಂತಿದ್ದ ಈ ಗಣರಾಜನಾದ ಅಂಧಕನನ್ನು ಸಮಸ್ತ ದೇವತೆಗಳೂ ಸ್ತುತಿಸಲಾರಂಭಿಸಿದರು. ಆಗ ಅಂಧಕನು ಪರಶಿವನ ಸಮೀಪದಲ್ಲಿದ್ದ ಲೋಕೇಶ್ವರಿಯಾದ ದೇವಿಯನ್ನು ನೋಡಿ,

೪೬. ದೃಢಭಕ್ತಿಯಿಂದ ಆ ದೇವಿಯನ್ನು ಬಹಳವಾಗಿ ಹೊಗಳಿದನು. ಅನಂತರ ಶರಣಾಗತವತ್ಸಲೆಯಾದ ಆ ಗೌರೀದೇವಿಯು ರಾಕ್ಷಸನನ್ನು ಸಂತೋಷದಿಂದ ಮಗನನ್ನಾಗಿ ಪರಿಗ್ರಹಿಸಿದಳು.

೪೭. ಕಾಲಭೈರವನಾದರೋ ಮಹೇಶ್ವರನ ಅಪ್ಪಣೆಯನ್ನು ಪಡೆದು ಅವನನ್ನು ವಂದಿಸಿ, ಸಪ್ತಮಾತೃಕೆಗಳೊಡನೆ ಪಾತಾಳಲೋಕದಲ್ಲಿರುವ ತನ್ನ ಮನೆಯನ್ನು ಕುರಿತು ಪ್ರಯಾಣಮಾಡಿದನು.

೪೮. ಅಲ್ಲಿ ವಿಷ್ಣುಮಾಯೆಯಾದ ತಾಮಸೀರೂಪವಾದ ಭಗವತಿಯು ನೆಲಸಿದ್ದಳು. ಅಂಥ ತಾಮಸೀಮಾಯೆಯನ್ನು ಕಂಡ ಭೈರವನು ಸಂತೋಷದಿಂದ ಆ ಮಾಯೆಯನ್ನು ಆಲಂಗಿಸಿಕೊಂಡನು.

ಏಕೈವ ಮೂರ್ತಿರಭವತ್ತಯೋರ್ಭೈರವಶಾರ್ಙ್ಗಿಣೋಃ ।
ಕಾಲಾಗ್ನಿಭೈರವೋ ಯೋಽಸೌ ಸ ಏವ ನೃಹರಿಃ ಸ್ವಯಂ ॥ ೪೯ ॥

ಭಗವಾನ್ ನೃಹರಿರ್ಯೋಽಸೌ ಸ ಏವ ಕಿಲ ಭೈರವಃ ।
ನೃಹರೇಃ ಪೂಜನಾನ್ನೂನಂ ಪ್ರೀತೋ ಭವತಿ ಭೈರವಃ ॥ ೫೦ ॥

ಪೂಜನಾದ್ಭೈರವಸ್ಯೈವ ನೃಹರಿಃ ಪೂಜಿತೋ ಭವೇತ್ ।
ಯೇ ಪಶ್ಯಂತಿ ತಯೋರ್ಭೇದಂ ಮಾಯಯಾ ಮೋಹಿತಾ ಜನಾಃ ॥ ೫೧॥
ನಿರಯೇ ತೇ ವಿಪಚ್ಯಂತೇ ಯಾವದಾಭೂತಸಂಪ್ಲವಂ ॥ ೫೨ ॥

ತಸ್ಮಾತ್ಪೂಜ್ಯಾ ಸದಾ ಮೂರ್ತೀ ರುದ್ರನಾರಾಯಣಾತ್ಮಿಕಾ ।
ಪ್ರೀತಾ ಭೂತ್ವಾ ಭಗವತೀ ಭವತ್ಯಜ್ಞಾನಹಾರಿಣೀ ॥ ೫೩ ॥

ಏವಂ ಸಂಕ್ಷೇಪತಃ ಪ್ರೋಕ್ತೋ ಮಯಾಂಧಕವಧೋ ದ್ವಿಜಾಃ ।
ಪ್ರಾದುರ್ಭಾವೋ ಭೈರವಸ್ಯ ತಸ್ಯ ಚೈವ ಪರಾಕ್ರಮಃ ॥ ೫೪ ॥

---

೪೯. ಒಡನೆಯೇ ಕಾಲಭೈರವನು ವಿಷ್ಣುವಿನ ರೂಪವನ್ನೇ ತಾಳಿದನು ವಿಷ್ಣುಭೈರವರಿಗೆ ಅಭೇದಸ್ಥಿತಿಯುಂಟಾಯಿತು. ಆ ರೂಪವೇ ಕಾಲಾಗ್ನಿಭೈರವ ರೂಪು. ಅವನೇ ನೃಸಿಂಹರೂಪಿಯಾದ ಮಹಾವಿಷ್ಣುವು. ನೃಸಿಂಹಾವತಾರದ ನೃಸಿಂಹ ಮೂರ್ತಿಯೇ ಕಾಲಾಗ್ನಿಭೈರವ.

೫೧. ನರಸಿಂಹಸ್ವಾಮಿಯೇ ಕಾಲಭೈರವನು. ಇದರಲ್ಲಿ ಸಂಶಯವಿಲ್ಲ. ನೃಸಿಂಹಸ್ವಾಮಿಯ ಆರಾಧನೆಯಿಂದ ಭೈರವನು ತೃಪ್ತಿಹೊಂದುವನು.

೫೧-೫೨. ಭೈರವಾರಾಧನೆಯಿಂದ ನೃಸಿಂಹಸ್ವಾಮಿಯು ತುಷ್ಟನಾಗುವನು. ಯಾರು ಅಜ್ಞಾನಿಗಳಾಗಿ ಭೈರವನೃಸಿಂಹರಿಗೆ ಭೇದವನ್ನು ಕಲ್ಪಿಸುವರೋ, ಅವರು ನಿಜವಾಗಿಯೂ, ಆಪ್ರಳಯಾಂತವಾಗಿ ನರಕಕಷ್ಟವನ್ನನುಭವಿಸುವರು.

೫೩. ಆದ್ದರಿಂದ ಯಾವ ಮೂರ್ತಿಯನ್ನೇ ಆಗಲಿ ರುದ್ರ, ವಿಷ್ಣು ಇವರಿಬ್ಬರ ಅಭೇದಭಾವನೆಯಿಂದ ಪೂಜಿಸಬೇಕು. ಈ ಭಾವನೆಯಿಂದ ಪೂಜಿಸಿದರೆ ಭಗವತಿ ಯಾದ ಆದಿಶಕ್ತಿಯು ಪ್ರಸನ್ನಳಾಗಿ ಆ ಭಕ್ತರ ಅಜ್ಞಾನವನ್ನು ನಿವಾರಣೆ ಮಾಡುವಳು.

೫೪. ಎಲೈ ಶೌನಕಾದಿಗಳೇ, ನಾನು ಇಲ್ಲಿನವರೆಗೆ ಅಂಧಕನ ನಾಶವನ್ನೂ, ಭೈರವನ ಉತ್ಪತ್ತಿಯನ್ನೂ, ಅವನ ಅತಿಶಯವಾದ ಪರಾಕ್ರಮವನ್ನೂ ಸಂಕ್ಷೇಪ ವಾಗಿ ವಿವರಿಸಿರುವೆನು.

ಇಮಂ ಯಃ ಪಠತೇಽಧ್ಯಾಯಂ ಮಹಾದೇವಸ್ಯ ಸನ್ನಿಧೌ ।
ಸರ್ವಪಾಪವಿನಿರ್ಮುಕ್ತಃ ಶಿವಸ್ಯಾನುಚರೋ ಭವೇತ್ ॥ ೫೫ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಹಿರಣ್ಯಾಕ್ಷವಧಾದಿಕಥನಂ ನಾಮೋನ ತ್ರಿಂಶೋಽಧ್ಯಾಯಃ

---

೫೫. ಈ ಅಧ್ಯಾಯವನ್ನು ಯಾರು ಮಹಾದೇವನ ಸನ್ನಿಧಿಯಲ್ಲಿ ಭಕ್ತಿಯಿಂದ ಪಠಿಸುವರೋ ಅವರು ಪಾಪನಿರ್ಮುಕ್ತರಾಗಿ ಶಿವನ ಭೃತ್ಯರಾಗುವರೆಂಬುದರಲ್ಲಿ ಸಂಶಯವಿಲ್ಲ.

ಇಲ್ಲಿಗೆ ಬ್ರಹ್ಮಪುರಾಣದ ಉಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕರ ಸಂವಾದರೂಪವಾಗಿ, ಹಿರಣ್ಯಾಕ್ಷನ ವಧೆಯೇ ಮೊದಲಾದ ವಿಷಯುಗಳನ್ನೊಳಗೊಂಡ ಇಪ್ಪತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ತ್ರಿಂಶೋಽಧ್ಯಾಯಃ

॥ ಸೂತ ಉವಾಚ ॥

ಹಿರಣ್ಯಕಶಿಪೋಃ ಪುತ್ರಃ ಪ್ರಹ್ಲಾದೋ ದೈತ್ಯಸತ್ತಮಃ ।
ಅಂಧಕೇ ನಿಹತೇ ದೈತ್ಯೇ ತತ್ರ ರಾಜ್ಯೇ ಸ್ಥಿತಃ ಸ್ವಯಂ ॥ ೧ ॥

ಕೃತ್ವಾ ಸ ಸುಚಿರಂ ಕಾಲಂ ರಾಜ್ಯಂ ಪರಮಧಾರ್ಮಿಕಃ ।
ರಾಜ್ಯೇ ವಿರಕ್ತೋ ಮತಿಮಾನ್ ಶಮಾದಿಗುಣಸಂಯುತಃ ॥ ೨ ॥

ರಾಜ್ಯೇ ಮತಿಮತಾಂ ಶ್ರೇಷ್ಠೋ ಹ್ಯಭಿಷಿಚ್ಯ ವಿರೋಚನಂ ।
ತಪೋವನಂ ಗತಃ ಸೋಽಥ ವಾಸುದೇವಪರಾಯಣಃ ॥ ೩ ॥

ಮೂವತ್ತನೆಯ ಅಧ್ಯಾಯ.

೧. ಸೂತಮಹರ್ಷಿಗಳು ಶೌನಕಾದಿಗಳಿಗೆ ಕಥೆಯನ್ನು ಮುಂದುವರಿಸುತ್ತಾ ಹೀಗೆ ಹೇಳಿದರು.—ಹಿರಣ್ಯಕಶಿಪು ಪುತ್ರನಾದ ಪ್ರಹ್ಲಾದನು, ತನ್ನ ಚಿಕ್ಕಪ್ಪನ ಮಗನಾದ ಅಂಧಕನು ಹಾಗೆ ಪರಮೇಶ್ವರನಿಂದ ಮಡಿದುದನ್ನು ಕೇಳಿ ತಾನೇ ಪುನಃ ರಾಜನಾಗಿ ಬಂದು ನಿಂತನು.

೨. ಬಹುಕಾಲ ಧರ್ಮಿಷ್ಠನಾಗಿ ರಾಜ್ಯವನ್ನಾಳಿ ಕೊನೆಗೆ ಶಮಾದಿಗುಣಗಳನ್ನಾಶ್ರಯಿಸಿ ರಾಜ್ಯಭಾರನಿರ್ವಹಣದಲ್ಲಿ ವೈರಾಗ್ಯ ಹೊಂದಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಲು ಇಚ್ಛೆಪಟ್ಟನು.

೩. ರಾಜಶ್ರೇಷ್ಠನಾದ ಪ್ರಹ್ಲಾದನು ರಾಜ್ಯಾಧಿಕಾರವನ್ನು ಸಂಪೂರ್ಣವಾಗಿ ತನ್ನ ಮಗನಾದ ವಿರೋಚನನಿಗೆ ಒಪ್ಪಿಸಿ, ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿ ತಾನು ವಾಸುದೇವನನ್ನು ಭಜಿಸುತ್ತಾ ತಪೋವನವನ್ನು ಪ್ರವೇಶಿಸಿದನು.

ವಿರೋಚನಶ್ಚ ನಿಹತೋ ದೇವದೇವೇನ ಚಕ್ರಿಣಾ ।
ಬಲಿಸ್ತಸ್ಯಾಭವತ್ಪುತ್ರೋ ದೈತ್ಯೋ ಧರ್ಮಪರಾಯಣಃ ॥ ೪ ॥

ಬಧ್ವಾ ನೀತಸ್ಸಪಾತಾಳಂ ದೇವದೇವೇನ ಚಕ್ರಿಣಾ ।
ಬಾಣಾಸುರಸ್ತಸ್ಯ ಸುತೋ ಭಕ್ತೋ ವಿಶ್ವೇಶ್ವರೇ ಶಿವೇ ॥ ೫ ॥

ದತ್ತಂ ಭಗವತಾ ತಸ್ಮೈ ಗಾಣಾಪತ್ಯಮನುತ್ತಮಂ ।
ತಾರಶ್ಚ ಶಂಬರಶ್ಚೈವ ಕಪಿಲಃ ಶಂಕರಸ್ತಥಾ ॥ ೬ ॥
ಸ್ವರ್ಭಾನುರ್ವೃಷಪರ್ವಾ ಚ ಬಾಣಸ್ಯೈತೇ ಸುತಾ ದ್ವಿಜಾಃ ।

ಕಶ್ಯಪಾತ್ಸುರಸಾ ಜಜ್ಞೇ ಖೇಚರಾನ್ಮುನಿಪುಂಗವಾಃ ॥ ೭ ॥
ಅನಂತಾದ್ಯಾಃ ಕಾದ್ರವೇಯಾ ಬಲಿನೋ ಬಲವತ್ತರಾಃ ।
ಗಂಧರ್ವಾನ್ ಜನಯಾಮಾಸ ತಥಾಽರಿಷ್ಟಾ ತು ಕಶ್ಯಪಾತ್ ॥ ೮ ॥

---

೪. ಆಮೇಲೆ ವಿರೋಚನನನ್ನು ದೇವದೇವನಾದ ವಿಷ್ಣುವು ಯುದ್ಧದಲ್ಲಿ ಕೊಂದನು. ಅವನ ಮಗನಾದ ಬಲಿಚಕ್ರವರ್ತಿಯು ಬಹಳ ಧರ್ಮಿಷ್ಠನಾಗಿ ರಾಜ್ಯವಾಳಲಾರಂಭಿಸಿದನು

೫. ಪುನಃ ಮಹಾವಿಷ್ಣುವು ವಾಮನಾವತಾರಮಾಡಿ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ಮೆಟ್ಟಿದನು. ಅದಕ್ಕಾಗಿ ಬಲಿಯ ಮಗನಾದ ಬಾಣಾಸುರನು ಪರಮೇಶ್ವರನನ್ನು ಕುರಿತು ತಪಸ್ಸುಮಾಡಿ ಈಶ್ವರ ಭಕ್ತನಾದನು.

೬. ಇವನ ಭಕ್ತಿಗೆ ಮೆಚ್ಚಿ ಶಂಕರನು ಬಾಣಾಸುರನಿಗೆ ಗಾಣಾಪತ್ಯವನ್ನು ಕೊಟ್ಟನು. ಆಮೇಲೆ ಬಾಣಾಸುರನಿಗೆ ತಾರ, ಶಂಬರ, ಕಪಿಲ, ಶಂಕರ, ಸ್ವರ್ಭಾನು, ವೃಷಪರ್ವ ಎಂಬ ಆರು ಜನ ಪುತ್ರರಾದರು. ಅವರೆಲ್ಲರೂ ಬಹಳ ಶೂರರೇ ಆಗಿದ್ದರು.

೭-೮. ಕಶ್ಯಪರ ಸಂಪರ್ಕದಿಂದ ಸುರಸಾದೇವಿಯು ಗಂಧರ್ವರನ್ನೂ, ಕದ್ರೂದೇವಿಯು ಅನಂತನೇ ಮೊದಲಾದ ಅನೇಕ ಸರ್ಪಗಳನ್ನೂ ಪಡೆದರು. ಇವರು ಅತ್ಯಂತ ಬಲಿಷ್ಠರಾಗಿದ್ದರು. ಹಾಗೆಯೇ ಅರಿಷ್ಟಾದೇವಿಯು ಸಹ ಗಂಧರ್ವರೆಂಬ ಮಕ್ಕಳನ್ನು ಪಡೆದಳು.

ವಿನತಾ ಜನಯಾಮಾಸ ವಿಖ್ಯಾತೌ ಗರುಡಾರುಣೌ ।
ಸರ್ಪಶ್ವಾದೀನ್ ಸ್ಥಾವರಾಂತಾಂಶ್ಚ ತಥಾನ್ಯಾನ್ ಸುಷುವುರ್ದ್ವಿಜಾಃ ॥ ೯ ॥

ಸ್ಥಾವರಾನ್ ಜಂಗಮಾಂಶ್ಚೈವ ಸಮುತ್ಪಾದ್ಯಾಥ ಕಶ್ಯಪಃ ।
ಪುನಸ್ಸಂತಾನವೃದ್ಧ್ಯರ್ಥಂ ತತಾಪ ಪರಮಂ ತಪಃ ॥ ೧೦ ॥

ತಪಃಪ್ರಭಾವಾತ್ಸಂಭೂತೌ ವತ್ಸರಶ್ಚಾಸಿತಃ ಸುತೌ ।
ನೈಧ್ರುವೋ ವತ್ಸರಾಜ್ಜಾತೋ ರೈಭ್ಯಶ್ಚೈವ ಮಹಾಮತಿಃ ॥ ೧೧ ॥

ಅಸಿತಾದೇಕಪರ್ಣಾಯಾಂ ಸಮಭೂದ್ದೇವಲೋ ಮುನಿಃ ।
ಆರಾಧ್ಯ ದೇವಲಶ್ಶಂಭುಂ ಪರಾಂ ಸಿದ್ಧಿಮವಾಪ್ತವಾನ್ ॥ ೧೨ ॥
ಸುಮೇಧಾ ಸುಷುವೇ ಪುತ್ರಾನ್ನೈಧ್ರುವಾನ್ಕುಂಡಪಾಯಿನಃ ।
ಶಾಂಡಿಲ್ಯೋ ದೇವಲಾಜ್ಜಾತ ಏತೇಽಪತ್ಯಾಸ್ತು ಕಾಶ್ಯಪಾಃ ॥ ೧೩ ॥

---

೯. ವಿನತೆಯು ಗರುಡ, ಅರುಣ ಎಂಬ ಇಬ್ಬರು ಗಂಡುಮಕ್ಕಳನ್ನು ಹೆತ್ತಳು. ಕಶ್ಯಪಋಷಿಯ ಇತರ ಪತ್ನಿಯರು ಪಶುವೇ ಮೊದಲಾದಜಂಗಮ ಪ್ರಾಣಿಗಳನ್ನೂ ಪರ್ವತವೇ ಮೊದಲಾದ ಸ್ಥಾವರ ವಸ್ತುಗಳನ್ನೂ ಸೃಷ್ಟಿ ಮಾಡಿದರು.

೧೦. ಕಶ್ಯಪಋಷಿಯು ಹೀಗೆ ಸ್ಥಾವರಜಂಗಮವಸ್ತುಗಳನ್ನೆಲ್ಲಾ ಸೃಷ್ಟಿ ಮಾಡಿ, ಪುನಃ ಹೆಚ್ಚು ಸಂತಾನಾಪೇಕ್ಷೆಯಿಂದ ಉಗ್ರವಾಗಿ ತಪಸ್ಸುಮಾಡಿದನು.

೧೧. ಅನಂತರ ಕಶ್ಯಪನಿಗೆ ತಪಃಪ್ರಭಾವದಿಂದ ವತ್ಸರ, ಅಸಿತ, ಎಂಬ ಇಬ್ಬರು ಗಂಡು ಮಕ್ಕಳಾದರು. ವತ್ಸರನಿಗೆ ನೈಧ್ರುವ, ರೈಭ್ಯ ಎಂಬ ಇಬ್ಬರು ಪುತ್ರರು ಜನಿಸಿದರು.

೧೨-೧೩. ಅಸಿತನ ಹೆಂಡತಿಯು ಏಕಪರ್ಣಾ, ಅವಳ ಪುತ್ರನೇ ದೇವಲಋಷಿ. ಆ ಋಷಿಯು ಪರಮೇಶ್ವರನನ್ನು ಕುರಿತು ತಪಸ್ಸುಮಾಡಿ ಹೆಚ್ಚಿನ ಸಿದ್ಧಿಯನ್ನು ಪಡೆದನು. ಅದರ ಫಲವಾಗಿ ಶಾಂಡಿಲ್ಯಋಷಿಯು ದೇವಲನ ಮಗನಾದನು. ನೈಧ್ರುವನ ಹೆಂಡತಿಯು ಸುಮೇಧೆ. ಆಕೆಯು ಕುಂಡಪಾಯಿಗಳೆಂಬ ಮಕ್ಕಳನ್ನು ಪಡೆದಳು. ಇವರೆಲ್ಲರೂ ಕಶ್ಯಪರ ವಂಶಸ್ಥರೇ.

ತೃಣಬಿಂದುಸ್ತು ರಾಜರ್ಷಿಃ ಕನ್ಯಾಮಿಲವಿಲಾಭಿದಾಂ ।
ಪುಲಸ್ತ್ಯಾಯ ದದೌ ತಸ್ಯಾಂ ವಿಶ್ರವಾಸ್ಸಮಜಾಯತ ॥ ೧೪

ಪುಷ್ಪೋತ್ಕಟಾ ತಥಾ ವಾಕಾ ಕೈಕಸೀ ದೇವವರ್ಣಿನೀ ।
ಚತಸ್ರಃ ಪತ್ನಯಸ್ತಸ್ಯ ಪೌಲಸ್ತ್ಯಸ್ಯ ಮಹಾತ್ಮನಃ ॥ ೧೫ ॥

ಕುಬೇರೋ ದೇವವರ್ಣಿನ್ಯಾಂ ಕೈಕಸ್ಯಾಂ ರಾವಣಸ್ತಥಾ ।
ಕುಂಭಕರ್ಣಃ ಶೂರ್ಪಣಖಾ ತಥೈವ ಚ ವಿಭೀಷಣಃ ॥ ೧೬ ॥

ಪುಷ್ಪೋತ್ಕಟಾಯಾಮಭವನ್ ತ್ರಯಃ ಪುತ್ರಾಶ್ಚ ಕನ್ಯಕಾಃ ।
ಮಹೋದರಃ ಪ್ರಹಸ್ತಶ್ಚ ಮಹಾಪಾರ್ಶ್ವಸ್ತಥಾ ಪರಃ ॥ ೧೭ ॥

ತಥಾ ಕುಂಭೀನಖೀ ಕನ್ಯಾ ತಸ್ಯ ವಿಶ್ರವಸೋ ದ್ವಿಜಾಃ ।
ತ್ರಿಶಿರಾ ದೂಷಣಶ್ಚೈವ ವಿದ್ಯುಜ್ಜಿಹ್ವೋ ಮಹಾಬಲಃ ॥ ೧೮ ॥

---

೧೪. ರಾಜರ್ಷಿಯಾದ ತೃಣಬಿಂದುವಿನ ಮಗಳೇ ಇಲವಿಲಾದೇವಿಯು ಆಕೆಯು ಪುಲಸ್ತ್ಯನನ್ನು ವಿವಾಹಮಾಡಿಕೊಂಡು ವಿಶ್ರವಸ್ಸೆಂಬ ಮಗನನ್ನು ಹೆತ್ತಳು.

೧೫. ಪುಲಸ್ತ್ಯನ ಪುತ್ರನಾದ ಆ ವಿಶ್ರವಸ್ಸಿಗೆ ಪುಷ್ಪೋತ್ಕಟ, ವಾಕಾ, ಕೈಕಸೀ ದೇವವರ್ಣಿನೀ ಎಂಬ ನಾಲ್ವರು ಹೆಂಡತಿಯರಿದ್ದರು.

೧೬-೧೭. ದೇವವರ್ಣಿನಿ ಎಂಬುವಳಿಗೆ ಕುಬೇರನು ಮಗನಾದನು. ಕೈಕಸಿಯಲ್ಲಿ ರಾವಣ, ಕುಂಭಕರ್ಣ, ವಿಭೀಷಣರೆಂಬ ಮೂವರು ಗಂಡುಮಕ್ಕಳೂ ಶೂರ್ಪಣಖೆಯೆಂಬ ಹೆಣ್ಣುಮಗಳೂ ಜನಿಸಿದರು. ಪುಷ್ಪೋತ್ಕಟೆಯು ಉದರದಲ್ಲಿ ಮಹೋದರ, ಪ್ರಹಸ್ತ, ಮಹಾಪಾರ್ಶ್ವರೆಂಬ ಮೂವರು ಗಂಡುಮಕ್ಕಳೂ, ಕುಂಭೀನಖಿಯೆಂಬ ಮಗಳೊಬ್ಬಳೂ ಹುಟ್ಟಿದರು.

೧೮. ವಾಕಾದೇವಿಗೆ, ತ್ರಿಶಿರಸ್ಸು, ದೂಷಣ, ವಿದ್ಯುಜ್ಜಿಹ್ವರೆಂಬ ಪುತ್ರರು ಹುಟ್ಟಿದರು. ಇವರೆಲ್ಲರೂ ರಾಕ್ಷಸರು, ಮತ್ತು ನಿರ್ದಯವಾದ ಕರ್ಮಾಚರಣೆಯುಳ್ಳವರು.

ಪಾಕಾಯಾಮಭವನ್ ಪುತ್ರಾ ರಾಕ್ಷಸಾಃ ಕ್ರೂರಕರ್ಮಿಣಃ ।
ಭೂತಾ ಮೃಗಾಃ ಪಿಚಶ್ಚ ಸರ್ವೇ ವೈ ದಂಷ್ಟ್ರಿಣಸ್ತಥಾ ॥ ೧೯ ॥

ಪೌಲಸ್ತ್ಯಾ ಇತಿ ತೇ ಸರ್ವೇ ಮರಿಚೇಃ ಕಶ್ಯಪಸ್ಸುತಃ ॥
ಭೃಗೋಸ್ಸಕಾಶಾದಭವಚ್ಛುಕ್ರೋ ದೈತ್ಯಗುರುರ್ಮಹಾನ್ ॥ ೨೦ ॥

ಪ್ರಾಪ್ತಾ ಸಂಜೀವಿನೀ ವಿದ್ಯಾ ಯೇನ ಶುಕ್ರೇಣ ಧೀಮತಾ ।
ಮಹಾದೇವಂ ಸಮಾರಾಧ್ಯ ಪುರಾ ಬದರಿಕಾಶ್ರಮೇ ॥ ೨೧ ॥

ಜರಾಮರಣನಿರ್ಮುಕ್ತೋ ವಜ್ರಕಾಯೋ ಮಹಾಮುನಿಃ ।
ಯೋಗಾಚಾರ್ಯ ಇತಿ ಖ್ಯಾತಃ ಪ್ರಸಾದಾದ್ಗಿರಿಜಾಪತೇಃ ॥ ೨೨ ॥

ಅನಸೂಯಾ ತು ಸುಷುವೇ ಕ್ರಮಾತ್ಪುತ್ರತ್ರಯಂ ದ್ವಿಜಾಃ ।
ದತ್ತಾತ್ರೇಯಂ ಚಂದ್ರಮಸಂ ತಥಾ ದೂರ್ವಾಸಸಂ ಮುನಿಂ ॥ ೨೩ ॥

೧೯-೨೦. ಭೂತಗಳಿಗೂ, ಮೃಗಗಳಿಗೂ, ಪಿಶಾಚಿಗಳಿಗೂ, ಈ ರಾಕ್ಷಸರಿಗೂ ದಂಷ್ಟ್ರಿಗಳು ಅಂದರೆ ಕೋರೆಹಲ್ಲುಳ್ಳವರು ಎಂದು ಹೆಸರು. ಇವರೆಲ್ಲರೂ ಪುಲಸ್ತ್ಯನ ವಂಶದವರೇ. ಆದರೆ ಮರಿಚಿಯ ಮಗನು ಕಶ್ಯಪಋಷಿಯು. ಭೃಗುವಿನ ಮಗನು ಶುಕ್ರಾಚಾರ್ಯನು. ಈ ಶುಕ್ರಾಚಾರ್ಯನೇ ಪ್ರಸಿದ್ಧನಾದ ದೈತ್ಯಗುರುವು.

೨೧. ಶುಕ್ರಾಚಾರ್ಯನು ಬದರಿಕಾಶ್ರಮದಲ್ಲಿ ಮಹಾದೇವನನ್ನು ಕುರಿತು ತಪಸ್ಸುಮಾಡಿ, ಪರಮೇಶ್ವರನನ್ನು ಮೆಚ್ಚಿಸಿ ಸಂಜೀವಿನಿಯೆಂಬ ವಿದ್ಯೆಯನ್ನು ಸಂಪಾದಿಸಿದನು.

೨೨. ಆ ವಿದ್ಯಾಪ್ರಭಾವದಿಂದ ಶುಕ್ರಾಚಾರ್ಯನು ಮುಪ್ಪು, ಮರಣ, ಇವುಗಳ ಭಯವಿಲ್ಲದೆ, ವಜ್ರದಂತಹ ಕಠಿನವಾದ ದೇಹವುಳ್ಳವನಾಗಿ ಪರಮೇಶ್ವರನ ಭಕ್ತನಾಗಿ ಯೋಗಾಚಾರ್ಯನೆನಿಸಿಕೊಂಡನು.

೨೩. ದತ್ತಾತ್ರೇಯ, ಚಂದ್ರ, ದೂರ್ವಾಸ ಎಂಬ ಮೂವರು ಮಕ್ಕಳು ಅನಸೂಯೆಯಲ್ಲಿ ಅತ್ರಿಮಹರ್ಷಿಯಿಂದ ಹುಟ್ಟಿದರು.

ಆತ್ರೇಯಾ ಇತಿ ತೇ ಖ್ಯಾತಾ ನಿರಪತ್ಯಸ್ತಥಾ ಕ್ರತುಃ ।
ವಸಿಷ್ಠಾಯ ದದೌ ಕನ್ಯಾಂ ನಾರದೋ ಮುನಿಪುಂಗವಾಃ　　　　॥ ೨೪ ॥

ಅರುಂಧತೀಮರುಂಧತ್ಯಾಂ ಶಕ್ತಿರ್ನಾಮ ಬಭೂವ ಹ ।
ಶಕ್ತೇಃ ಪರಾಶರಸ್ತಸ್ಮಾತ್ಕೃಷ್ಣದ್ವೈಪಾಯನೋ ಮುನಿಃ　　　　॥ ೨೫ ॥

ದ್ವೈಪಾಯನಾಚ್ಛುಕೋ ಜಜ್ಞೇ ಪಂಚ ಪುತ್ರಾಃ ಶುಕಸ್ಯ ತೇ ।
ಭೂರಿಶ್ರವಾಃ ಪ್ರಭುಶ್ಶಂಭುಃ ಕೃಷ್ಣೋ ಗೌರಶ್ಚ ಪಂಚಮಃ　　　　॥ ೨೬ ॥

ಕನ್ಯಾ ಕೀರ್ತಿಮತೀ ನಾಮ ವಂಶಾ ಏತೇ ಪ್ರಕೀರ್ತಿತಾಃ ।
ಕಶ್ಯಪಾದದಿತಿರ್ಲೇಭೇ ಭಾಸ್ಕರಂ ತೇಜಸಾಧಿಕಂ　　　　॥ ೨೭ ॥

ಸಂಜ್ಞಾ ರಾಜ್ಞೀ ಪ್ರಭಾ ಛಾಯಾ ಭಾನೋರ್ಭಾರ್ಯಾಃ ಸ್ಮೃತಾಸ್ತ್ರಿಮಾಃ।
ಸೂತೇ ಸೂರ್ಯಾನ್ಮನುಂ ಸಂಜ್ಞಾ ಯಸ್ಯ ವಂಶೇಽಭವನ್ನೃಪಾಃ　　॥ ೨೮ ॥

---

೨೪. ಈ ಮೂವರಿಗೂ ಆತ್ರೇಯರೆಂಬ ಹೆಸರು ಪ್ರಸಿದ್ಧವಾಯಿತು. ಕ್ರತು ಎಂಬವನಿಗೆ ಮಾತ್ರ ಯಾರೂ ಮಕ್ಕಳಾಗಲಿಲ್ಲ. ವಸಿಷ್ಠನಿಗೆ ಕೊಟ್ಟಿದ್ದಂತಹ ಅರುಂಧತಿಯೆಂಬ ಕನ್ಯೆಯು ನಾರದನ ಪುತ್ರಿಯು.

೨೫. ಆ ಅರುಂಧತಿಯಲ್ಲಿ ಶಕ್ತಿಯೆಂಬುವನೂ, ಶಕ್ತಿಯಿಂದ ಪರಾಶರನೂ ಪರಾಶರಮಹರ್ಷಿಯಿಂದ ಕೃಷ್ಣದ್ವೈಪಾಯನ ಮಹರ್ಷಿಯೂ ಜನಿಸಿದರು.

೨೬. ವ್ಯಾಸಮಹರ್ಷಿಗೆ ಶುಕಮಹರ್ಷಿಯೆಂಬವನು ಮಗನಾದನು. ಆ ಶುಕಋಷಿಗೆ ಭೂರಿಶ್ರವ. ಪ್ರಭು, ಶಂಭು. ಕೃಷ್ಣ, ಗೌರ ಎಂಬ ಐದು ಜನ ಗಂಡು ಮಕ್ಕಳಾದರು.

೨೭. ಶುಕಋಷಿಗೆ ಕೀರ್ತಿಮತೀ ಎಂಬುವಳೊಬ್ಬಳೇ ಹೆಣ್ಣುಮಗಳು. ಹೀಗೇ ಈಒಂದು ವಂಶವು ವೃದ್ಧಿಯಾಯಿತು. ಕಶ್ಯಪನ ಮತ್ತೊಬ್ಬಳು ಪತ್ನಿಯಾದ ಅದಿತಿ ದೇವಿಗೆ ಅತ್ಯಂತ ತೇಜಸ್ವಿಯಾದ ಭಾಸ್ಕರನೆಂಬ ಮಗನು ಹುಟ್ಟಿದನು.

೨೮. ಸೂರ್ಯನಿಗೆ, ಛಾಯಾ, ಸಂಜ್ಞಾ, ಪ್ರಭಾ, ರಾಜೀ ಎಂಬ ನಾಲ್ವರು ಪತ್ನಿಯರು. ಅದರಲ್ಲಿ ಸಂಜ್ಞಾದೇವಿಯಿಂದ ಮನುಚಕ್ರವರ್ತಿಯು ಜನಿಸಿದನು. ಆತನೇ ಸಮಸ್ತ ರಾಜರಿಗೂ ಮೂಲಭೂತನಾದ ವೈವಸ್ವತಮನುವು.

ಯಮಂ ಚ ಯಮುನಾಂ ಚೈವ ರಾಜ್ಞೀ ರೇವಂತಮೇವಚ ।
ಪ್ರಭಾ ಪ್ರಭಾತಮಾದಿತ್ಯಾಚ್ಛಾಯಾ ಸಾವರ್ಣಿಮೇವ ಚ ॥ ೨೯ ॥

ಶನಿಂ ಚ ತಪತೀಂ ಚೈವ ವಿಷ್ಟಿಂ ಚೈವ ಯಥಾಕ್ರಮಾತ್ ।
ತಕ್ಷ್ವಾಕುರ್ನಭಗಶ್ಚೈವ ಧೃಷ್ಟಶ್ಶರ್ಯಾತಿರೇವ ಚ ॥ ೩೦ ॥

ನರಿಷ್ಯಂತಶ್ಚ ನಾಭಾಗೋ ಹ್ಯರಿಷ್ಟಃ ಕರುಷಸ್ತಥಾ ।
ವೃಷಧ್ವಜೋ ಮಹಾತೇಜಾ ನವ ವೈವಸ್ವತಾಃ ಸಮೆ ॥ ೩೧ ॥

ಇಲಾ ಜ್ಯೇಷ್ಠಾ ವರಿಷ್ಠಾ ಚ ಕನ್ಯಾ ಏತಾಸ್ತ್ರಯಸ್ಸ್ಮೃತಾಃ ।
ಇಕ್ಷ್ವಾಕೋಶ್ಚಾಭವತ್ಪುತ್ರೋ ವಿಕುಕ್ಷಿರಿತಿ ವಿಶ್ರುತಃ ॥ ೩೨ ॥

ತಸ್ಯ ಪುತ್ರಶತಂ ತ್ವಾಸೀತ್ಕಕುತ್ಸ್ಥೋ ಜ್ಯೇಷ್ಠ ಉರಿತಃ ।
ತಸ್ಮಾತ್ತುಸ್ಸಯೋಧನೋ ಜಜ್ಞೇ ಪೃಥುಸ್ತಸ್ಯ ಸುತೋಽಭವತ್ ॥ ೩೩ ॥

---

೨೯. ಯಮ, ಯಮುನಾ, ಇವರಿಬ್ಬರೂ ರಾಜ್ಞೀದೇವಿಯ ಮಕ್ಕಳು. ಪ್ರಭಾದೇವಿಯಲ್ಲಿ ರೇವಂತ, ಪ್ರಭಾತರೆಂಬ ಇಬ್ಬರು ಮಕ್ಕಳೂ, ಛಾಯಾದೇವಿಯಲ್ಲಿ ಸಾವರ್ಣಿ, ಮತ್ತು

೩೦. ಶನಿ, ತಪತಿ, ವಿಷ್ಟಿ ಎಂಬ ಹೆಸರಿನ ನಾಲ್ವರು ಪುತ್ರರು ಜನಿಸಿದರು. ಹೀಗೆ ಸೂರ್ಯನ ನಾಲ್ಕು ಜನ ಪತ್ನಿಯರೂ ಪುತ್ರವತಿಯರಾದರು.

೩೧. ಅದರಲ್ಲಿ ಮನುರಾಜನಿಗೆ ಇಕ್ಷ್ವಾಕು, ನಭಗ, ಧೃಷ್ಟ, ಶರ್ಯಾತಿ ನರಿಷ್ಯಂತ, ನಾಭಾಗ, ಅರಿಷ್ಟ, ಕರುಷ, ವೃಷಧ್ವಜ, ಎಂಬ ಒಂಭತ್ತು ಗಂಡು ಮಕ್ಕಳು ಹುಟ್ಟಿದರು. ಅವರೆಲ್ಲರೂ ಮಹಾತೇಜಸ್ವಿಗಳಾಗಿ, ವೈವಸ್ವತಮನುವಿಗೆ ಸಮನಾಗಿ ಪ್ರಕಾಶಿಸಿದರು.

೩೨. ಮನುವಿಗೆ ಇಲಾ, ಜ್ಯೇಷ್ಠಾ, ವರಿಷ್ಠಾ ಎಂಬ ಮೂವರು ಹೆಣ್ಣು ಮಕ್ಕಳಾದರು. ಇಕ್ಷ್ವಾಕುರಾಜನಿಗೆ ವಿಕುಕ್ಷಿಯೆಂಬ ಮಗನು ಹುಟ್ಟಿದನು.

೩೩. ಆ ವಿಕುಕ್ಷಿಗೆ ನೂರು ಜನ ಮಕ್ಕಳು. ಅವರಲ್ಲಿ ಹಿರಿಯವನು ಕಕುತ್ಸ್ಥನು. ಕಕುತ್ಸ್ಥನ ಮಗನು ಸುಯೋಧನನು. ಆತನ ಮಗನು ಪೃಥುವು.

ವಿಶ್ವಕಸ್ತಸ್ಯ ಪುತ್ರೋಽಭೂದ್ದಮಕಸ್ತಸ್ಯ ವೈ ಸುತಃ
ತಸ್ಮಾಚ್ಛರ್ಯಾತಿರಭವತ್ ಯುವನಾಶ್ವಶ್ಚ ತತ್ಸುತ: ॥ ೩೪ ॥

ಶ್ರಾವಸ್ತಿಸ್ತಸ್ಯ ಪುತ್ರೋಽಭೂಚ್ಛ್ರಾವಸ್ತೀ ಯೇನ ನಿರ್ಮಿತಾ ।
ತಸ್ಮಾತ್ಕುವಲಯಃ ಖ್ಯಾತೋ ಧುಂಧುಮಾರಿಸ್ತತೋಽಭವತ್ ॥ ೩೫ ॥

ಧುಂಧುಮಾರೇಸ್ತ್ರಯಃ ಪುತ್ರಾ ದೃಢಾಶ್ವಾದ್ಯಾ ಮಹೌಜಸಃ ।
ದೃಢಾಶ್ವಸ್ಯ ಚ ದಾಯಾದೋ ಹರಿಶ್ಚಂದ್ರಸ್ತತೋಽಭವತ್ ॥ ೩೬ ॥

ರೋಹಿತಸ್ತಸ್ಯ ಪುತ್ರೋಽಭೂದ್ರೋಹಿತಸ್ಯಾಪಿ ತತ್ಸುತಃ
ಧುಂಧುಸ್ತಸ್ಮಾದಭೂತ್ಪುತ್ರೌ ಧುಂಧೋಃ ಪುತ್ರೌ ಬಭೂವತುಃ ॥ ೩೭ ॥

ಸುದೇವೋ ವಿಜಯಶ್ಚೈವ ಕುರುಕೋ ವಿಜಯಾತ್ಸ್ಮೃತಃ ।
ವೃಕೋಽಥ ಕುರುಕಾಜ್ಜಜ್ಞೇ ತಸ್ಮಾದ್ಬಾಹುರಭೂತ್ಸುತಃ ॥ ೩೮ ॥

---

೩೪. ಪೃಥುವಿನ ಮಗನೇ ವಿಶ್ವಕನು. ವಿಶ್ವಕನ ಮಗ ದಮಕ. ದಮಕನಿಂದ ಶರ್ಯಾತಿಯೂ, ಶರ್ಯಾತಿಯಿಂದ ಯುವನಾಶ್ವನೂ ಜನಿಸಿದರು.

೩೫. ಯುವನಾಶ್ವನ ಮಗನೇ ಶ್ರಾವಸ್ತಿನಿರ್ಮಾಣಕನಾದ ಶ್ರಾವಸ್ತಿಯು. ಅವನಿಂದ ಕುವಲಯನೂ, ಕುವಲಯನಿಂದ ಧುಂಧುಮಾರಿಯೂ ಹುಟ್ಟಿದರು.

೩೬. ಧುಂಧುಮಾರನಿಗೆ ದೃಢಾಶ್ವನೇ ಮೊದಲಾದ ಮೂವರು ಮಕ್ಕಳಿದ್ದರು. ಅವರಲ್ಲಿ ದೊಡ್ಡವನಾದ ದೃಢಾಶ್ವನ ಮಗನೇ ಪ್ರಸಿದ್ಧನಾದ ಹರಿಶ್ಚಂದ್ರನು.

೩೭. ರೋಹಿತನು ಹರಿಶ್ಚಂದ್ರನ ಪುತ್ರನು. ರೋಹಿತನಿಗೆ ಧುಂಧು ಎಂಬುವನು ಮಗನಾದನು. ಅವನಿಗೆ ಇಬ್ಬರು ಮಕ್ಕಳಾದರು.

೩೮. ಅವರೇ ಸುದೇವ, ವಿಜಯ ಎಂಬುವರು. ಕುರುಕ ಎಂಬ ಮಗನು ವಿಜಯನಿಂದ ಜನಿಸಿದನು ಕುರುಕನಿಗೆ ವೃಕನೂ, ವೃಕನಿಗೆ ಬಾಹು ಎಂಬವನೂ ಮಕ್ಕಳೆನಿಸಿದರು.

ಸಗರಸ್ತಸ್ಯ ಪುತ್ರೋಽಭೂತ್ಪೌತ್ರಸ್ತಸ್ಯಾಂಶುಮಾನ್ ಸ್ಮೃತಃ ।
ತಸ್ಯ ಪುತ್ರೋ ದಿಲೀಪಸ್ತು ತಸ್ಮಾಜ್ಜಜ್ಞೇ ಭಗೀರಥಃ ॥ ೩೯ ॥

ಪ್ರೀತೋಽಭೂತ್ತಪಸಾ ಶಂಭುರ್ದದೌ ವರಮನುತ್ತಮಂ ।
ಗಂಗಾಂ ಬಭಾರ ಶಿರಸಾ ರಕ್ಷಾರ್ಥಂ ಜಗತಾಂ ಹರಃ ॥ ೪೦ ॥

ದಶಾಯುತಾನಾಂ ವರ್ಷಾಣಿ ದ್ವಿಸಹಸ್ರಂ ಶತದ್ವಯಂ ।
ಮಹಾದೇವಾದ್ವರಂ ಲಬ್ಧ್ವಾ ರಾಜ್ಯಂ ಕೃತ್ವಾ ಭಗೀರಥಃ ॥ ೪೧ ॥

ವಿರಕ್ತೋ ರಾಜ್ಯಭೋಗೇಭ್ಯೋ ವಿಶ್ವಂ ಮತ್ವೇಂದ್ರಜಾಲವತ್ ।
ಜಾಬಾಲಂ ಸಮನುಪ್ರಾಪ್ಯ ಯತ್ತತ್ಜ್ಞಾನಂ ಶಿವಾತ್ಮಕಂ ॥ ೪೨ ॥

ಮುನೇರನುಗ್ರಹಾಲ್ಲಬ್ಧ್ವಾ ಪರಾಂ ಸಿದ್ಧಿಂ ಗತೋ ನೃಪಃ ।
ಶ್ರುತಸ್ತಸ್ಯಾಭವತ್ಪುತ್ರೋ ನಾಭಾಗಸ್ತತ್ಸುತೋಽಭವತ್ ॥ ೪೩ ॥

---

೩೯. ಆ ಬಾಹುವಿಗೆ ಸಗರನೆಂಬ ಮಗನೂ, ಸಗರನಿಗೆ ಅಂಶುಮಂತನೂ ಅಂಶುಮಂತನಿಗೆ ದಿಲೀಪನೂ, ದಿಲೀಪನಿಗೆ ಭಗೀರಥನೂ ಪುತ್ರರಾದರು.

೪೦. ಭಗೀರಥನು ಬಹಳ ಭಕ್ತಿಯಿಂದ ಶಂಕರನನ್ನು ಕುರಿತು ತಪಸ್ಸು ಮಾಡಿದನು. ಅದಕ್ಕಾಗಿ ಶಂಭುವು ಅವನಿಗೆ ವರವನ್ನು ಕೊಟ್ಟು, ದೇವಗಂಗೆಯನ್ನು ಲೋಕರಕ್ಷಣಾರ್ಥವಾಗಿ ತನ್ನ ಶಿರಸ್ಸಿನಲ್ಲಿ ಧರಿಸಿದನು.

೪೧. ಭಗೀರಥನು ಅದೇ ಶಂಭುವಿನ ವರಬಲದಿಂದ ಸಹಸ್ರಾರು ವರ್ಷ ಪರ್ಯಂತವಾಗಿ ರಾಜ್ಯವನ್ನು ರಕ್ಷಿಸುತ್ತಾ ಸುಖವಾಗಿ ಧರ್ಮದಿಂದ ರಾಜ್ಯಭಾರಮಾಡಿಕೊಂಡಿದ್ದನು.

೪೨. ಕೊನೆಯಲ್ಲಿ ಪ್ರಪಂಚವು ಅಸ್ಥಿರವೆಂಬ ವಿವೇಕವನ್ನು ಪಡೆದು, ರಾಜ್ಯಭೋಗದಲ್ಲಿ ವಿರಕ್ತನಾಗಿ, ಜಾಬಾಲಋಷಿಯನ್ನು ಮರೆಹೊಕ್ಕು ಶಿವಸಂಬಂಧವಾದ ತತ್ತ್ವಜ್ಞಾನವನ್ನು ಸಂಪಾದಿಸಿದನು.

೪೩. ಹೀಗೆ ಭಗೀರಥನು ಋಷಿಯ ವರದಿಂದ ಸಿದ್ಧಿಯನ್ನು ಪಡೆದು ಮುಕ್ತನಾದನು. ಅವನಿಗೆ ಶ್ರುತನೆಂಬ ಮಗನಿದ್ದನು. ಆತನ ಮಗನೇ ನಾಭಾಗನು.

ಸಿಂಧುದ್ವೀಪಸ್ತತೋ ಜಜ್ಞೇ ಅಯುತಾಯುಸ್ತತೋಽಭವತ್ !
ಋತುಪರ್ಣಸ್ತು ತತ್ಪುತ್ರಃ ಸುಧಾಮಾ ತತ್ಸುತೋಽಭವತ್ ॥ ೪೪ ॥

ಯಸ್ಮೈ ದತ್ತಂ ಭಗವತಾ ಗಾಣಾಪತ್ಯಮನುತ್ತಮಂ ।
ಕಲ್ಮಾಷಪಾದಸ್ತತ್ಪುತ್ರಃ ಕ್ಷೇತ್ರಜಸ್ತತ್ಸುತೋಽಶ್ಮಕಃ ॥ ೪೫ ॥

ಋಷೇರ್ವಸಿಷ್ಠಾದ್ವಿಪೇಂದ್ರಾನ್ನಕುಲಸ್ತತ್ಸುತೋಽಭವತ್ ।
ನಕುಲಸ್ಯಾಭವತ್ಪುತ್ರೋ ನಾಮ್ನಾ ಶತರಥೋ ನೃಪಃ ॥ ೪೬ ॥

ಅಭೂದಿಲವಿಲಸ್ತಸ್ಮಾತ್ ವೃದ್ಧಶರ್ಮಾ ತತೋಽಭವತ್ ।
ತಸ್ಮಾದ್ವಿಶ್ವಸಹೋ ನಾಮ ಖಟ್ವಾಂಗಸ್ತತ್ಸುತೋಽಭವತ್ ॥ ೪೭ ॥

ದೀರ್ಘಬಾಹುಸ್ತತೋ ಜಜ್ಞೇ ರಘುಸ್ತಸ್ಯಾಽಭವತ್ಸುತಃ ।
ರಘೋರಜಸ್ತು ವಿಖ್ಯಾತೋ ರಾಜಾ ದಶರಥಸ್ತತಃ ॥ ೪೮ ॥

---

೪೪. ನಾಭಾಗದಿಂದ ಸಿಂಧುದ್ವೀಪನೂ, ಸಿಂಧುದ್ವೀಪನಿಂದ ಅಯುತಾಯುವೂ, ಅಯುತಾಯುವಿನಿಂದ ಋತುಪರ್ಣನೂ, ಋತುಪರ್ಣನಿಂದ ಸುಧಾಮನೂ ಜನಿಸಿದರು.

೪೫. ಆ ಸುಧಾಮನಿಗೆ ಕಲ್ಮಾಷಪಾದನೆಂಬುವನು ಮಗನಾದನು. ಸುಧಾಮನಿಗೆ ಪರಮೇಶ್ವರನು ಗಾಣಪತ್ಯ ಪದವಿಯನ್ನು ಕೊಟ್ಟಿದ್ದನು. ಅಂತಹ ಮಹಾಮಹಿಮನ ಮೊಮ್ಮಗನೂ, ಕಲ್ಮಾಷಪಾದನ ಮಗನೂ ಆಗಿದ್ದವನು ಕ್ಷೇತ್ರಜನು. ಆ ಕ್ಷೇತ್ರಜಪುತ್ರನೇ ಅಶ್ಮಕನು.

೪೬. ವಸಿಷ್ಠಮಹರ್ಷಿಗೆ ನಕುಲನೆಂಬ ಪುತ್ರನುದಯಿಸಿದನು. ನಕುಲನ ಪುತ್ರನೇ ಶತರಥನೆಂಬ ಪ್ರಸಿದ್ಧನಾದ ರಾಜನು.

೪೭. ಶತರಥನಿಗೆ ಇಲವಿಲನೆಂಬುವನು ಮಗನಾದನು. ಆತನಿಗೆ ವೃದ್ಧ ಶರ್ಮನೂ, ವೃದ್ಧಶರ್ಮನಿಗೆ ವಿಶ್ವಸಹನೂ, ವಿಶ್ವಸಹನಿಗೆ ಖಟ್ವಾಂಗನೂ ಪುತ್ರರೆನಿಸಿದರು.

೪೮. ಖಟ್ವಾಂಗನ ಮಗನು ದೀರ್ಘಬಾಹುವು. ದೀರ್ಘಬಾಹುವಿನ ಮಗನೇ ರಘುವು. ರಘುವಿನ ಪುತ್ರನೇ ಅಜನು. ಅಜಕುಮಾರನೇ ದಶರಥನು.

ತಸ್ಯ ಪುತ್ರಾಶ್ಚ ಚತ್ವಾರೋ ಧರ್ಮಜ್ಞಾ ಲೋಕವಿಶ್ರುತಾಃ ।
ರಾಮೋಽಥ ಭರತಶ್ಚೈವ ತೃತೀಯೋ ಲಕ್ಷ್ಮಣಸ್ಸ್ಮೃತಃ ॥ ೪೯ ॥

ಚತುರ್ಥಶ್ಚೈವ ಶತ್ರುಘ್ನೋ ರಾಮೋ ನಾರಾಯಣಸ್ಸ್ವಯಂ ।
ಧರ್ಮಜ್ಞಸ್ಸತ್ಯಸಂಕಲ್ಪೋ ಮಹಾದೇವಪರಾಯಣಃ ॥ ೫೦ ॥

ಸೀತಾ ತಸ್ಯಾಭವದ್ಭಾರ್ಯಾ ಪಾರ್ವತ್ಯಂಶಸಮುದ್ಭವಾ ।
ಜನಕೇನ ಪುರಾ ಗೌರೀ ತಪಸಾ ತೋಷಿತಾ ಯತಃ ॥ ೫೧ ॥

ಜನಕಾಯ ದದೌ ಶಂಭುಃ ಪ್ರೀತೋ ಧನುರನುತ್ತಮಂ ।
ತದ್ಧನುರ್ಭಂಜಯಾಮಾಸ ಜನಕಸ್ಯ ಗೃಹೇ ಸ್ಥಿತಂ ॥ ೫೨ ॥

ದೃಷ್ಟ್ವಾ ಪರಾಕ್ರಮಂ ತಸ್ಯ ರಾಮಸ್ಯ ಗುಣಶಾಲಿನಃ ।
ಜನಕಃ ಪ್ರದದೌ ತಸ್ಮೈ ಸೀತಾಂ ಬ್ರಹ್ಮವಿದಾಂ ವರಃ ॥ ೫೩ ॥

೪೯-೫೦. ದಶರಥನಿಗೆ ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ಧರ್ಮಿಷ್ಠರಾದ ನಾಲ್ವರು ಪುತ್ರರು ಜನಿಸಿದರು. ಅವರಲ್ಲಿ ಜ್ಯೇಷ್ಠನಾದ ಶ್ರೀರಾಮನೇ ಮಹಾವಿಷ್ಣುರೂಪಿಯು. ಆತನು ಯಾವಾಗಲೂ ಸತ್ಯಪರಾಯಣನಾಗಿ, ದೃಢಮನಸ್ಕನಾಗಿ ಮಹಾದೇವಭಕ್ತನಾಗಿದ್ದನು.

೫೧. ಜನಕರಾಜನೆಂಬುವನು ಭಕ್ತಿಯಿಂದ ಪಾರ್ವತಿಯನ್ನು ಆರಾಧಿಸಿದ ಮೇಲೆ ಆ ಗೌರಿಯ ಅನುಗ್ರಹದಿಂದ ಸೀತೆಯೆಂಬ ಪುತ್ರಿಯು ಜನಕನಿಗೆ ದೊರೆತಳು. ಸೀತೆಯು ಸಾಕ್ಷಾದ್ಗೌರೀದೇವಿಯ ಅಂಶಸಂಭವಳು. ಇಂತಹ ಸೀತೆಯು ರಾಮನಿಗೆ ಪತ್ನಿಯಾದಳು.

೫೨. ಶಂಭುವು ಹಿಂದೆ ದೇವರಾತನ ಮೂಲಕ ಜನಕನಿಗೆ ಶ್ರೇಷ್ಠವಾದ ಧನುಸ್ಸೊಂದನ್ನು ಕೊಟ್ಟಿದ್ದನು. ಅದು ಜನಕನ ಮನೆಯಲ್ಲಿಯೇ ಇತ್ತು. ಆ ಶಿವಧನುಸ್ಸನ್ನು ಶ್ರೀರಾಮನು ಸೀತಾಸ್ವಯಂವರ ಕಾಲದಲ್ಲಿ ಮುರಿದುಹಾಕಿದನು.

೫೩. ಈ ವಿಧವಾದ ಶ್ರೀರಾಮನ ಪರಾಕ್ರಮವನ್ನು ಕಂಡು ಜನಕರಾಜನು ಮೆಚ್ಚಿ, ತನ್ನ ಪುತ್ರಿಯಾದ ಸೀತೆಯನ್ನು ಗುಣಶಾಲಿಯಾದ ಶ್ರೀರಾಮನಿಗೆ ಕೊಟ್ಟು ವಿಧಿವತ್ತಾಗಿ ವಿವಾಹಮಾಡಿದನು.

ಪಿತ್ರಾ ಕೃತೋಽಭಿಷೇಕಾರ್ಥಂ ರಾಮೋ ರಾಜ್ಯಸ್ಯ ವೈ ಯದಾ ।
ವಾರಯಾಮಾಸ ಕೈಕೇಯೀ ತದಾ ರಾಜ್ಞಃ ಪ್ರಿಯಾ ವಧೂಃ ॥ ೫೪ ॥

ರಾಜಂಸ್ತ್ವಯಾ ವರೋ ದತ್ತಃ ಪೂರ್ವಮೇವ ಯತಃ ಪ್ರಭೋ ।
ರಾಜಾನಂ ಮತ್ಸುತಂ ತಸ್ಮಾದ್ಭಾರತಂ ಕರ್ತುಮರ್ಹಸಿ ॥ ೫೫ ॥

ಇತಿ ತಸ್ಯಾ ವಚಃ ಶ್ರುತ್ವಾ ರಾಜ್ಯೇ ತಮಭಿಷಿಚ್ಯ ಸಃ ।
ಪ್ರೇಷಯಾಮಾಸ ತಂ ರಾಮಂ ವನಂ ಪ್ರತಿ ಸಲಕ್ಷ್ಮಣಂ ॥ ೫೬ ॥

ವನಂ ಗತ್ವಾ ನಿವಸತೋ ಭಾರ್ಯಾಂ ದೃಷ್ಟ್ವಾಥ ರಾಕ್ಷಸಃ ।
ರಾವಣೋ ನಾಮ ಪೌಲಸ್ತ್ಯೋ ನೀತ್ವಾ ಲಂಕಾಂ ಪುನರ್ಯಯೌ ॥ ೫೭ ॥

ಅದೃಷ್ಟ್ವಾ ತಾಂ ತತಃ ಸೀತಾಂ ದುಃಖಿತೌ ರಾಮಲಕ್ಷ್ಮಣೌ ।
ಸಖ್ಯಂ ವಾನರರಾಜೇನ ಗತ್ವಾ ದಾಶರಥೀ ದ್ವಿಜಾಃ ॥ ೫೮ ॥

---

೫೪. ಸೀತಾವಿವಾಹಾನಂತರ ಶ್ರೀರಾಮನಿಗೆ ದಶರಥನು ರಾಜ್ಯಾಭಿಷೇಕ ಮಾಡಬೇಕೆಂದಿರುವಾಗ ಪ್ರೇಮಪಾತ್ರಳಾದ ಕೈಕೇಯಿಯು, ರಾಜನನ್ನು ತಡೆದು ಅಭಿಷೇಕವನ್ನು ನಿಲ್ಲಿಸಿದಳು.

೫೫. ಕೈಕೇಯಿಯು ದಶರಥನನ್ನು ಕುರಿತು "ಎಲೈ ರಾಜನೇ ನೀನು ಹಿಂದೆ ನನಗೆ ಎರಡು ವರಗಳನ್ನು ಕೊಟ್ಟಿದ್ದೆಯಲ್ಲವೇ ! ಅದರಲ್ಲಿ ಒಂದು ವರಕ್ಕೆ ನನ್ನ ಮಗನಾದ ಭರತನನ್ನು ರಾಜನನ್ನಾಗಿ ಮಾಡು" ಎಂದಳು.

೫೬. ಹೀಗಾಡಿದ ಕೈಕೇಯಿಯ ಮಾತುಗಳನ್ನು ಕೇಳಿ, ರಾಜ್ಯದಲ್ಲಿ ಭರತನನ್ನು ನಿಲ್ಲಿಸಲೋಸುಗ ದಶರಥನು ರಾಮಲಕ್ಷ್ಮಣರನ್ನು ಅರಣ್ಯಕ್ಕೆ ಕಳುಹಿಸಿದನು.

೫೭. ರಾಮನು ಕಾಡಿನಲ್ಲಿ ಭಾರ್ಯಾ ಮತ್ತು ಅನುಜರೊಡನೆ ವಾಸಿಸುತ್ತಿರುವಾಗ, ಪುಲಸ್ತ್ಯನ ವಂಶದಲ್ಲಿ ಹುಟ್ಟಿದ ರಾವಣನು ಸೀತೆಯನ್ನು ಎತ್ತಿಕೊಂಡು ಲಂಕಾಪಟ್ಟಣಕ್ಕೆ ಕರೆದುಕೊಂಡು ಹೋದನು

೫೮. ಇತ್ತಲಾಗಿ ರಾಮಲಕ್ಷ್ಮಣರು ಸೀತೆಯನ್ನು ಕಾಣದೆ ಬಹುವಾಗಿ ದುಃಖಿಸಿ ಕೊನೆಗೆ ಕಪಿರಾಜನಾದ ಸುಗ್ರೀವನ ಸ್ನೇಹವನ್ನು ಸಂಪಾದಿಸಿದನು.

ಸುಗ್ರೀವಸ್ಯ ಸಖಾ ವೀರೋ ಹನುಮಾನ್ನಾಮ ವಾನರಃ ।
ಗತ್ವಾಽಥ ರಾವಣಪುರೀಮಪಶ್ಯಜ್ಜನಕಾತ್ಮಜಾಂ ॥ ೫೯ ॥

ಅಶ್ರುಪೂರ್ಣೇಕ್ಷಣಾಂ ಸೀತಾಂ ಇಂದೀವರನಿಭಾನನಾಂ ।
ವಿಶ್ವಾಸಾರ್ಥಂ ದದೌ ತಸ್ಯೈ ರಾಮಸ್ಯೈನಾಂಗುಲೀಯಕಂ ॥ ೬೦ ॥

ದೃಷ್ಟ್ವಾಂಗುಲೀಯಕಂ ಸೀತಾ ಪ್ರಹೃಷ್ಟಾ ಚ ತದಾಽಭವತ್ ।
ಸಮಾಶ್ವಾಸ್ಯ ತತಃ ಸೀತಾಂ ಪ್ರಯಯೌ ರಾಘವಾಂತಿಕಂ ॥ ೬೧ ॥

ರಾಮಸ್ತಮಾಗತಂ ದೃಷ್ಟ್ವಾ ಪ್ರಹರ್ಷೋತ್ಫುಲ್ಲಲೋಚನಃ ।
ಶ್ರುತ್ವಾ ತದ್ವಚನಾದ್ವೃತ್ತಂ ಯುದ್ಧಾಯ ಕೃತನಿಶ್ಚಯಃ ॥ ೬೨ ॥

ಸೇತುಂ ಕೃತ್ವಾಥ ರಕ್ಷೋಭಿಃ ಯುದ್ಧಂ ಕೃತ್ವಾ ಮಹಾಮನಾಃ ।
ನಿಹತ್ಯ ರಾವಣಂ ರಾಮೋ ಭ್ರಾತೃಭಿಸ್ಸಹ ಸುವ್ರತಃ ॥ ೬೩ ॥

---

೫೯. ಸುಗ್ರೀವನ ಸ್ನೇಹಿತನಾದ ಹನುಮಂತನೆಂಬ ಕಪಿಶ್ರೇಷ್ಠನು, ಲಂಕಾ ಪಟ್ಟಣವನ್ನು ಪ್ರವೇಶಿಸಿ, ಅಲ್ಲಿ ಸೀತೆಯಿರುವುದನ್ನು ಗೊತ್ತು ಹಚ್ಚಿದನು.

೬೦. ಅಲ್ಲಿ ಸೀತೆಯು ರಾಮನಿಗಾಗಿ ಕೊರಗುತ್ತಾ ಕಣ್ಣೀರಿನಿಂದ ತುಂಬಿದ ಕಣ್ಣುಳ್ಳವಳಾಗಿದ್ದರೂ, ತೇಜಸ್ಸಿನಿಂದ ಕಮಲಮುಖಿಯಾಗಿಯೇ ಕಾಣುತ್ತಿದ್ದಳು. ಅಂತಹ ಸೀತೆಗೆ ತಾನು ರಾಮದೂತನೆಂದು ಭರವಸೆಕೊಡುವುದಕ್ಕಾಗಿ ಹನುಮಂತನು ರಾಮನು ಕೊಟ್ಟಿದ್ದ ಮುದ್ರೆಯುಂಗುರವನ್ನು ಕೊಟ್ಟನು.

೬೧. ಸೀತೆಯು ರಾಮನ ಮುದ್ರೆಯುಂಗುರವನ್ನು ಕಂಡು ಬಹಳವಾಗಿ ಸಂತೋಷಪಟ್ಟಳು. ಹನುಮಂತನು ನಾನಾವಿಧವಾದ ಭರವಸೆಯ ಮಾತುಗಳಿಂದ ಸೀತೆಯನ್ನು ಪುನಃ ಸಮಾಧಾನಗೊಳಿಸಿ, ಅಲ್ಲಿಂದ ರಾಮನ ಸಮೀಪಕ್ಕೆ ಬಂದು ಸೇರಿದನು.

೬೨. ಹನುಮಂತನಿಂದ ಸಮಸ್ತ ವಿಷಯಗಳನ್ನೂ ತಿಳಿದುಕೊಂಡ ಶ್ರೀರಾಮನು ಹರ್ಷಚಿತ್ತನಾಗಿ ಅಪರಾಧಿಯನ್ನು ಶಿಕ್ಷಿಸಲು ರಾವಣನ ಮೇಲೆ ಯುದ್ಧ ಹೂಡುವಂತೆ ದೃಢ ನಿಶ್ಚಯಮಾಡಿದನು.

೬೩. ಅಲ್ಲಿಯೆ ಲಂಕಾಪಟ್ಟಣಕ್ಕೆ ಸುಲಭವಾಗಿ ಸೈನ್ಯಸಮೇತ ಹೋಗಲು ಮಧ್ಯೆ ಇದ್ದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿಸಿದನು. ಅದರ ಮೂಲಕ ಲಂಕೆಗೆ ಹೋಗಿ ಅಲ್ಲಿ ರಾವಣನನ್ನು ಕೊಂದು ತಮ್ಮನೊಡನೆ ಸುಖವಾಗಿ ಹಿಂದಿರುಗಿದನು.

ಆನಯಾಮಾಸ ತಾಂ ಸೀತಾಂ ಅಶೋಕವನಮಧ್ಯಗಾಂ ।
ಪ್ರತಿಷ್ಠಾಪ್ಯ ಮಹಾದೇವಂ ಸೇತುಮಧ್ಯೇಽಥ ರಾಘವಃ ॥ ೬೪ ॥

ಲಬ್ಧವಾನ್ ಪರಮಾಂ ಭಕ್ತಿಂ ಶಿವೇ ಶಿವಪರಾಕ್ರಮಃ ।
ರಾಮೇಶ್ವರ ಇತಿ ಖ್ಯಾತೋ ಮಹಾದೇವಃ ಪಿನಾಕಧೃಕ್ ॥ ೬೫ ॥

ತಸ್ಯ ದರ್ಶನಮಾತ್ರೇಣ ಬ್ರಹ್ಮಹತ್ಯಾಂ ವ್ಯಪೋಹತಿ ।
ಅಭಿಷಿಕ್ತಸ್ತತೋ ರಾಜ್ಯೇ ರಾಮೋ ರಾಜೀವಲೋಚನಃ ॥ ೬೬ ॥

ಪಾಲಯನ್ ಪೃಥಿವೀಂ ಸರ್ವಾಂ ಧರ್ಮೇಣ ಮುನಿಪುಂಗವಾಃ ।
ಅಯಜದ್ದೇವದೇವೇಶಂ ಅಶ್ವಮೇಧೇನ ಶಂಕರಂ ॥ ೬೭ ॥

---

೬೪. ಅಶೋಕವನದ ಮಧ್ಯದಲ್ಲಿದ್ದ ಸೀತೆಯನ್ನು ಕರೆದುಕೊಂಡು ಹಿಂದಿರುಗಿ ಬರುವಾಗ ಸೇತುಮಧ್ಯದಲ್ಲಿ ಶಿವಪ್ರತಿಷ್ಠೆಯನ್ನು ಅತ್ಯಂತ ಹರ್ಷದಿಂದ ಶ್ರೀರಾಮನು ನೆರವೇರಿಸಿದನು.

೬೫. ಶಿವಪ್ರತಿಷ್ಠೆಯನ್ನು ನೆರವೇರಿಸಿದ ಮೇಲೆ ಶ್ರೀರಾಮನು ಈಶ್ವರಾರ್ಚನೆಯನ್ನು ಭಕ್ತಿಯಿಂದ ಕೈಗೊಂಡು ಆ ಸ್ಥಳವನ್ನು ಪವಿತ್ರಕ್ಷೇತ್ರವನ್ನಾಗಿಮಾಡಿದನು. ಅದೇ ಈಗ ಪ್ರಸಿದ್ಧಗೊಂಡಿರುವ ರಾಮೇಶ್ವರ. ಅಲ್ಲಿ ಪರಶಿವನು ಪಿನಾಕಧಾರಿಯಾಗಿ ಮಹಿಮಾಶಾಲಿಯಾಗಿ ನೆಲಸಿರುವನು.

೬೬. ರಾಮೇಶ್ವರ ಕ್ಷೇತ್ರದಲ್ಲಿ ಶಿವಲಿಂಗದರ್ಶನಮಾತ್ರದಿಂದಲೇ ಬ್ರಹ್ಮಹತ್ಯೆ ಮೊದಲಾದ ಮಹಾಪಾಪಗಳು ನಿವೃತ್ತಿಯಾಗುತ್ತವೆ. ಮುಂದೆ ಶ್ರೀರಾಮನು ತನ್ನ ರಾಜ್ಯಕ್ಕೆ ಪ್ರಯಾಣಮಾಡಿ, ಅಲ್ಲಿ ಪಟ್ಟಾಭಿಷಿಕ್ತನಾಗಿ ರಾಜ್ಯಭಾರ ಮಾಡಲಾರಂಭಿಸಿದನು.

೬೭. ಮತ್ತು ಸಮಸ್ತ ಭೂಮಿಯನ್ನು ಧರ್ಮದಿಂದ ರಕ್ಷಿಸಿದನು. ಅಲ್ಲದೆ ಶ್ರೇಷ್ಠವಾದ ಅಶ್ವಮೇಧಯಾಗವನ್ನು ನೆರವೇರಿಸಿ ಆ ಮೂಲಕ ಪರಮೇಶ್ವರನನ್ನು ಪೂಜಿಸಿದನು.

ತಸ್ಯ ಪ್ರಸಾದಾತ್ಸ್ವಪದಂ ಪ್ರಾಪ್ತವಾನಥ ರಾಘವಃ ।
ಏವಂ ಸಂಕ್ಷೇಪತಃ ಪ್ರೋಕ್ತಂ ರಾಮಸ್ಯ ಚರಿತಂ ಮಯಾ ॥ ೬೮ ॥

ಇದಂ ವಿಸ್ತರತೋ ವಿಪ್ರಾಃ ಪ್ರೋಕ್ತಂ ವಾಲ್ಮೀಕಿನಾ ಪುನಃ ।
ಕುಶಶ್ಚೈಕೋ ಲವಶ್ಚಾನ್ಯಃ ಪುತ್ರೌ ರಾಮಸ್ಯ ಸುವ್ರತೌ ॥ ೬೯ ॥

ಸತ್ಯಸಂಧೌ ಮಹಾವೀರ್ಯೌ ಮಹಾದೇವಪರಾಯಣೌ ।
ಅತಿಥಿಶ್ಚ ಕುಶಾಜ್ಜಜ್ಞೇ ನಿಷಧಸ್ತತ್ಸುತೋಽಭವತ್ ॥ ೭೦ ॥

ನಲಸ್ತಸ್ಯಾಭವತ್ಪುತ್ರೋ ನಭಸ್ತಸ್ಯಾಭವತ್ಸುತಃ ।
ತತಶ್ಚಂದ್ರಾವಲೋಕಶ್ಚ ತಾರಾಪೀಡಸ್ತತೋಽಭವತ್ ॥
ತತಶ್ಚಂದ್ರಗಿರಿರ್ನಾಮ ಭಾನುಜಿತ್ತತ್ಸುತೋಽಭವತ್ ॥ ೭೧ ॥

ಏತೇ ಸರ್ವೇ ನೃಪಾಃ ಪ್ರೋಕ್ತಾಃ ಇಕ್ಷ್ವಾಕುಕುಲಸಂಭವಾಃ ।
ಧರ್ಮಾತ್ಮಾನೋ ಮಹಾಸತ್ವಾಃ ಕೀರ್ತಿಮಂತೋ ದೃಢವ್ರತಾಃ ॥ ೭೨ ॥

---

೬೮. ಹೀಗೆ ಪರಮೇಶ್ವರಾನುಗ್ರಹದಿಂದ ಶ್ರೀರಾಮನು ಉತ್ತಮವಾದ ಸ್ಥಾನವನ್ನು ಪಡೆದನು. ಅಂಥ ಶ್ರೀರಾಮನ ಚರಿತ್ರೆಯನ್ನು ನಾನು ನಿಮಗೆ ಸಂಕ್ಷೇಪವಾಗಿ ವಿವರಿಸಿರುವೆನು.

೬೯. ಈ ಶ್ರೀರಾಮನ ದಿವ್ಯಚರಿತ್ರೆಯನ್ನು ವಾಲ್ಮೀಕಿಮಹರ್ಷಿಗಳು ಶ್ರೀರಾಮನ ಮಕ್ಕಳಾದ ಕುಶ, ಲವರಿಗೆ ವಿಸ್ತಾರವಾಗಿ ಹೇಳಿರುವರು.

೭೦. ಆ ಕುಶಲವರು ಸತ್ಯಸಂಧರಾಗಿಯೂ ಮಹಾದೇವನ ಭಕ್ತರಾಗಿಯೂ ಇದ್ದರು. ಕುಶನಿಗೆ ಅತಿಥಿ ಎಂಬವನೂ, ಅತಿಥಿಗೆ ನಿಷಧನೆಂಬುವನೂ ಮಕ್ಕಳಾದರು.

೭೧. ನಿಷಧನ ಮಗನು ನಲನು. ನಲನ ಪುತ್ರನೇ ನಭನು. ನಭನಿಗೆ ಚಂದ್ರಾವಲೋಕನೂ, ಚಂದ್ರಾವಲೋಕನಿಗೆ ತಾರಾಪೀಡನೂ, ತಾರಾಪೀಡನಿಗೆ ಚಂದ್ರಗಿರಿಯೂ, ಅವನಿಗೆ ಭಾನುಜಿತ್ತುವೂ ಮಕ್ಕಳೆನಿಸಿದರು.

೭೨. ಇವರೆಲ್ಲರೂ ಇಕ್ಷ್ವಾಕುವಂಶದ ರಾಜರು. ಈ ರಾಜರೆಲ್ಲರೂ ಅತ್ಯಂತ ಧರ್ಮಿಷ್ಠರಾಗಿಯೂ, ಮಹಾಶೂರರಾಗಿಯೂ, ಕೀರ್ತಿಶಾಲಿಗಳಾಗಿಯೂ ವ್ರತನಿಷ್ಠರಾಗಿಯೂ ರಾಜ್ಯವನ್ನಾಳಿದರು.

ಇಮಂ ಯಃ ಪಠತೇ ನಿತ್ಯಂ ಇಕ್ಷ್ವಾಕೋರ್ವಂಶಮುತ್ತಮಂ ।
ಸರ್ವಪಾಪವಿನಿರ್ಮುಕ್ತಃ ಸೂರ್ಯಲೋಕೇ ಮಹೀಯತೇ ॥ ೭೩ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಪ್ರಹ್ಲಾದ ರಾಜ್ಯಾರೋಹಣಾದೀಕ್ಷ್ವಾಕುಕುಲಸಂಭವ ನೃಪಮಾಲಿಕಾಂತ ಕಥನಂ ನಾಮ ತ್ರಿಂಶೋಽಧ್ಯಾಯಃ.

---

೭೩. ಈ ಇಕ್ಷ್ವಾಕುವಂಶದವರ ವಿಷಯವನ್ನೆಲ್ಲಾ ತಿಳಿಸುವಂತಹ ಈ ಅಧ್ಯಾಯವನ್ನು ಯಾರು ಭಕ್ತಿಯಿಂದ ಪಠಿಸುವರೋ ಅವರು ಸರ್ವಪಾಪಮುಕ್ತರಾಗಿ ಸೂರ್ಯಲೋಕವನ್ನು ಸೇರುವರೆಂಬುದರಲ್ಲಿ ಸಂದೇಹವೇ ಇಲ್ಲ.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಶ್ರೀ ಸೌರಪುರಾಣದಲ್ಲಿ ಸೂತ ಮತ್ತು ಶೌನಕರ ಸಂಭಾಷಣಾರೂಪವಾಗಿ, ಪ್ರಹ್ಲಾದನು ರಾಜ್ಯವನ್ನು ಪಡೆದದ್ದು ಮತ್ತು ಇಕ್ಷ್ವಾಕುವಂಶದ ರಾಜರ ಉತ್ಪತ್ತಿಯೇ ಮೊದಲಾದ ವಿಷಯುಗಳನ್ನೊಳಗೊಂಡ ಮೂವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಏಕತ್ರಿಂಶೋಽಧ್ಯಾಯಃ.

ಐಲಃ ಪುರೂರವಾಶ್ಚಾಸೀದ್ರಾಜಾ ಪರಮಧಾರ್ಮಿಕಃ ।
ಊರ್ವಶ್ಯಾಂ ಜನಯಾಮಾಸ ಷಟ್ ಪುತ್ರಾನ್ ಪ್ರಥಿತೌಜಸಃ ॥ ೧ ॥

ಆಯುರ್ಮಾಯುರಮಾಯುಶ್ಚ ವಿಶ್ವಾಯುಶ್ಚ ತತಃ ಪರಃ ।
ಶತಾಯುಶ್ಚ ಶ್ರುತಾಯುಶ್ಚ ಷಡೇತೇ ದೇವಯೋನಯಃ ॥ ೨ ॥

ಆಯೋಃ ಪಂಚಸುತಾ ಖ್ಯಾತಾ ಸ್ವರ್ಭಾನುತನಯಾತ್ಮಜಾಃ ।
ಜ್ಯೇಷ್ಠಸ್ತೇಷಾಮಭೂತ್ಪುತ್ರೋ ನಹುಷೋ ಲೋಕವಿಶ್ರುತಃ ॥ ೩ ॥

ಮೂವತ್ತೊಂದನೆಯ ಅಧ್ಯಾಯವು.

೧. ಹಿಂದೆ ಪುರೂರವಸ್ಸೆಂಬ ರಾಜನು ಅತ್ಯಂತ ಧರ್ಮಿಷ್ಠನಾಗಿ ರಾಜ್ಯವಾಳುತ್ತಿದ್ದನು. ಆತನ ಪತ್ನಿಯು ಊರ್ವಶಿಯು. ಆಕೆಯಲ್ಲಿ ಪುರೂರವನಿಗೆ ಆರು ಜನ ಮಕ್ಕಳಾದರು.

೨. ಆ ಆರು ಜನರಿಗೂ ಕ್ರಮವಾಗಿ ಆಯು, ಮಾಯು, ಅಮಾಯು, ವಿಶ್ವಾಯು, ಶತಾಯು, ಶ್ರುತಾಯು ಎಂದು ಹೆಸರುಗಳಿದ್ದವು. ಇವರೆಲ್ಲರೂ ದೇವಲೋಕದ ಊರ್ವಶಿಯಲ್ಲಿ ಜನಿಸಿದವರಾದುದರಿಂದ ಇವರು ದೇವಯೋನಿಗಳೆನಿಸಿದರು.

೩. ಆಯುವಿಗೆ ಐದು ಜನ ಮಕ್ಕಳು. ಅವರೆಲ್ಲರೂ ಸೂರ್ಯವಂಶೀಯರೇ. ಅವರಲ್ಲಿ ದೊಡ್ಡಮಗನೇ ಲೋಕಪ್ರಸಿದ್ಧನಾದ ನಹುಷಚಕ್ರವರ್ತಿಯು.

ಉತ್ಪನ್ನಾಃ ಪಿತೃಕನ್ಯಾಯಾಂ ನಹುಷಾತ್ಪಂಚ ಸೂನವಃ ।
ವಿರಜಾಯಾಂ ಮುನಿಶ್ರೇಷ್ಠಾ ಯಯಾತಿರಿತಿ ವಿಶ್ರುತಃ ॥ ೪ ॥

ದ್ವೇ ಚ ಭಾರ್ಯೇ ಯಯಾತೇಸ್ತು ಪ್ರಥಮಾ ಶುಕ್ರಕನ್ಯಕಾ ।
ದೇವಯಾನೀತಿ ವಿಖ್ಯಾತಾ ದ್ವಿತೀಯಾ ವೃಷಪರ್ವಣಃ ॥ ೫ ॥

ಸುತಾಽಸುರಸ್ಯ ಶರ್ಮಿಷ್ಠಾ ತಯೋರ್ವಕ್ಷ್ಯಾಮಿ ಸಂತತಿಂ ।
ದೇವಯಾನೀ ತು ಸುಷುವೇ ಯದುಂ ತುರ್ವಸುಮೇವ ಚ ॥ ೬ ॥

ದ್ರುಹ್ಯಂ ಚಾರುಂ ಚ ಪೂರುಂ ಚ ಶರ್ಮಿಷ್ಠಾ ಸುಷುವೇ ಸುತಾನ್ ।
ಅಭಿಷಿಚ್ಯ ಪುರುಂ ರಾಜಾ ಯವೀಯಾಂಸಮನಿಂದಿತಂ ॥ ೭ ॥

ವೈರಾಗ್ಯಯುಕ್ತೋ ಮತಿಮಾನ್ ಯಯಾತಿಃ ಪ್ರಯಯೌ ವನಂ ।
ಯೋಽಯಂ ಪ್ರಸಿದ್ಧಃ ಶತಜಿದ್ಯದೋಃ ಸಮಭವತ್ಸುತಃ ॥ ೮ ॥

---

೪. ನಹುಷನು ಪಿತೃಕನ್ಯೆಯರನ್ನು ವಿವಾಹವಾದನು. ಅವನಿಗೆ ಐದು ಜನ ಮಕ್ಕಳು. ಅವರಲ್ಲಿ ವಿರಜಾ ಎಂಬುವಳಲ್ಲಿ ಜನಿಸಿದವನೇ ಯಯಾತಿಯು.

೫-೬. ಯಯಾತಿಗೆ ಶುಕ್ರಾಚಾರ್ಯನ ಪುತ್ರಿಯಾದ ದೇವಯಾನಿ ಎಂಬವಳು ಹಿರಿಯ ಹೆಂಡತಿ. ವೃಷಪರ್ವನೆಂಬ ರಾಕ್ಷಸನ ಮಗಳಾದ ಶರ್ಮಿಷ್ಠೆಯು ಎರಡನೇ ಹೆಂಡತಿ. ಅವರಲ್ಲಿ ಹಿರಿಯವಳಾದ ದೇವಯಾನಿಯು ಯದು, ತುರ್ವಸು ಎಂಬ ಇಬ್ಬರು ಮಕ್ಕಳನ್ನು ಹೆತ್ತಳು.

೭. ಶರ್ಮಿಷ್ಠೆಯೆಂಬ ಎರಡನೇ ಹೆಂಡತಿಯಲ್ಲಿ ಚಾರು, ದ್ರುಹ್ಯ, ಪೂರು ಎಂಬ ಮೂವರು ಮಕ್ಕಳಾದರು. ಅವರಲ್ಲಿ ಕಿರಿಯವನಾದ ಪುರುವಿಗೆ ಯಯಾತಿಯು ರಾಜ್ಯಾಭಿಷೇಕಮಾಡಿದನು.

೮. ಕೊನೆಗೆ ಯಯಾತಿಯು ವೈರಾಗ್ಯಸಂಪನ್ನನಾಗಿ ವನಪ್ರಯಾಣಮಾಡಿದನು. ಆಗ ದೇವಯಾನಿಯ ಮಗನಾದ ಯದುವಿಗೆ ಶತಜಿತ್ ಎಂಬ ಮಗನ ಹುಟ್ಟಿದನು.

ಹೈಹಯಃ ಶತಜಿತ್ಪುತ್ರೋ ಧರ್ಮಸ್ತಸ್ಯ ಸುತಃ ಸ್ಮೃತಃ ।
ಧರ್ಮನೇತ್ರಸ್ಸುತಸ್ತಸ್ಯ ಧನಕಸ್ತತ್ಸುತೋಽಭವತ್ ॥ ೯ ॥

ಧನಕಸ್ಯ ತು ದಾಯಾದಃ ಕೃತವೀರ್ಯೋ ಮಹಾಯಶಾಃ ।
ಕಾರ್ತವೀರ್ಯಃ ಕೃತಾಗ್ನಿಶ್ಚ ಕೃತವರ್ಮಾ ತಥಾ ಪರಃ ॥ ೧೦॥

ಕಾರ್ತವೀರ್ಯಸ್ಯ ನೃಪತೇಃ ಪುತ್ರಾಣಾಂ ಚ ಶತಂ ತ್ವಭೂತ್ ।
ತತ್ರ ಪಂಚ ಮಹಾತ್ಮಾನಃ ಶೂರಸೇನಾದಯೋ ನೃಪಾಃ ॥ ೧೧ ॥

ಮಹಾದೇವಾಲ್ಲಬ್ಧವರಾ ಮಹಾದೇವಪರಾಯಣಾಃ ।
ಜಯಧ್ವಜಸ್ತು ಮತಿಮಾನ್ ನಾರಾಯಣಪರಾಯಣಃ ॥ ೧೨ ॥

ಜಯಧ್ವಜಸ್ಯ ದಾಯಾದಾಸ್ತಾಲಜಂಘಾ ಇತಿ ಸ್ಮೃತಾಃ ।
ತೇಷಾಂ ಜ್ಯೇಷ್ಠೋ ವೀತಿಹೋತ್ರಃ ಸರ್ವೇ ತೇ ಯಾದವಾಃ ಸ್ಮೃತಾಃ ॥

---

೯. ಶತಜಿತ್ತುವಿನಿಂದ ಹೈಹಯನೂ, ಹೈಹಯನಿಂದ ಧರ್ಮನೂ, ಅವನಿಂದ ಧರ್ಮನೇತ್ರನೂ, ಅವನಿಂದ ಧನಕನೂ ಹೀಗೆ ಕ್ರಮವಾಗಿ ಮಕ್ಕಳಾದರು.

೧೦. ಧನಕನ ಪುತ್ರನೇ ಕೃತವೀರ್ಯನು. ಆತನಿಗೆ ಕಾರ್ತವೀರ್ಯ, ಕೃತಾಗ್ನಿ, ಕೃತವರ್ಮಾ ಎಂಬ ಮೂವರು ಮಕ್ಕಳಾದರು.

೧೧. ಕಾರ್ತವೀರ್ಯನೆಂಬ ರಾಜನಿಗೆ ನೂರು ಜನ ಮಕ್ಕಳಾದರು ಅವರಲ್ಲಿ ಶೂರಸೇನನೇ ಮೊದಲಾದ ಐದು ಜನರು ಬಹಳ ಶೂರರಾಗಿ ಮಹಾತ್ಮರೆನಿಸಿಕೊಂಡರು.

೧೨. ಆ ಐವರೂ ಪರಮೇಶ್ವರನನ್ನು ಆರಾಧಿಸಿ, ಅವನ ಭಕ್ತರಾಗಿ ಅವನಿಂದ ವರವನ್ನು ಪಡೆದರು. ಜಯಧ್ವಜನೆಂಬುವನು ಮಾತ್ರ ವಿಷ್ಣುಭಕ್ತಿಯಿಂದ ವೈಷ್ಣವನಾದನು.

೧೩. ಜಯಧ್ವಜನಿಗೆ ಪ್ರಸಿದ್ಧರಾದ ತಾಲಜಂಘರೆಂಬುವರು ಮಕ್ಕಳಾದರು ಅವರಲ್ಲಿ ದೊಡ್ಡವನೇ ವೀತಿಹೋತ್ರನು. ಇವರೆಲ್ಲರಿಗೂ ಯಾದವರೆಂದು ಹೆಸರು. ಪ್ರಸಿದ್ಧವಾಗಿದೆ.

ವಿಶ್ರುತಸ್ತಸ್ಯ ದಾಯಾದಸ್ತಸ್ಯ ಪತ್ನೀ ಪತಿವ್ರತಾ ।
ರಮಮಾಣಸ್ತಯಾ ರಾಜಾ ಕದಾಚಿದ್ಯಮುನಾತಟೇ ॥ ೧೪ ॥

ಅಪಶ್ಯದುರ್ವಶೀಂ ತತ್ರ ವೀಣಾವಾದನಲಾಲಸಾಂ ।
ಊರ್ವಶೀಮಬ್ರವೀದ್ರಾಜಾ ಸ್ಮರಬಾಣೇನ ಪೀಡಿತಃ ॥ ೧೫ ॥

ತ್ವಯಾಹಂ ರಂತುಮಿಚ್ಛಾಮಿ ತ್ವಂ ಮಾಂ ರಂತುಮಿಹಾರ್ಹಸಿ ।
ಸಾ ನೃಪಸ್ಯ ವಚಃ ಶ್ರುತ್ವಾ ದೃಷ್ಟ್ವಾ ತಂ ಮದನೋಪಮಂ ॥ ೧೬ ॥

ಕ್ರೀಡಮಾನಾ ತದಾತೇನ ಚಿರಕಾಲಂ ಸಹೋರ್ವಶೀ ।
ಗತೇ ವರ್ಷಸಹಸ್ರೇ ತು ವಿರಕ್ತಃ ಕಾಮಭೋಗತಃ ॥ ೧೭ ॥

ಆಹೋರ್ವಶೀಂ ಗಮಿಷ್ಯಾಮಿ ಸ್ವಪುರೀಮಿತಿ ವಿಶ್ರುತಃ ।
ಭೋಗೇನ್ನೈತಾವತಾ ನಾಲಮವೋಚದಿತಿ ಸಾ ಪುನಃ ॥ ೧೮ ॥

---

೧೪. ವೀತಿಹೋತ್ರನಿಗೆ ವಿಶ್ರುತನೆಂಬ ಮಗನಾದನು. ಆತನ ಪತ್ನಿಯು ಮಹಾಪತಿವ್ರತೆಯು. ಇಂಥವಳೊಡನೆ ವಿಶ್ರುತನು ಒಂದು ಸಾರಿ ಯಮುನಾನದಿಯ ದಡದಲ್ಲಿ ಆಟವಾಡುತ್ತಿದ್ದನು.

೧೫. ಅಲ್ಲಿಯೇ ವೀಣೆಯನ್ನು ಬಾರಿಸುತ್ತ ಕುಳಿತಿದ್ದ ಊರ್ವಶಿಯೆಂಬ ದೇವಕನ್ಯೆಯನ್ನು ಈ ರಾಜನು ನೋಡಿ ಒಡನೆಯೇ ಕಾಮಮೋಹಿತನಾಗಿ ಅವಳಲ್ಲಿ ಆಸಕ್ತನಾದನು.

೧೬. ಅಲ್ಲಿಯೇ ಊರ್ವಶಿಯನ್ನು ಕುರಿತು, "ಊರ್ವಶಿಯೇ ನಿನ್ನೊಡನೆ ಸುಖದಿಂದಿರಲು ನನ್ನ ಮನಸ್ಸು ತವಕಗೊಳ್ಳುತ್ತಿದೆ. ನೀನು ಅದಕ್ಕೆ ಒಪ್ಪುವೆಯಾ" ಎಂದು ಪ್ರಾರ್ಥಿಸಲಾಗಿ ಊರ್ವಶಿಯು ಅತ್ಯಂತ ಸುಂದರನಾದ ಆ ರಾಜನನ್ನು ಕಂಡು,

೧೭. ಅವನ ಕೋರಿಕೆಯಂತೆ ತಾನು ಒಪ್ಪಿ ಅವನೊಡನೆ ಸಹಸ್ರ ವರ್ಷ ಪರ್ಯಂತ ಸುಖವಾಗಿದ್ದಳು. ಕೊನೆಯಲ್ಲಿ ಆ ರಾಜನಿಗೆ ಕಾಮಪಿಪಾಸೆಯು ಅಡಗಿ ವೈರಾಗ್ಯವು ಪ್ರಾಪ್ತವಾಯಿತು.

೧೮. ಅನಂತರ ಊರ್ವಶಿಯನ್ನು ಕುರಿತು, ತಾನು ತನ್ನ ಪಟ್ಟಣಕ್ಕೆ ಹೋಗುವೆನೆಂದು ಹೇಳಲು-ಆ ಊರ್ವಶಿಯು ಅಷ್ಟಕ್ಕೆ ತೃಪ್ತಿಪಡದೆ ತಾನು ಇನ್ನೂ ಅವನೊಡನೆ ಸುಖಪಡಬೇಕೆಂದು ಕೇಳಿಕೊಂಡಳು.

ನ ಗಂತವ್ಯಂ ತ್ವಯಾ ರಾಜನ್ ಸ್ಥಾತವ್ಯಂ ಪ್ರೀತಯೇ ಮಮ ।
ಅಬ್ರವೀತ್ತಾಂ ತತೋ ರಾಜಾ ಪುರೀಂ ಗತ್ವಾ ಯಶಸ್ವಿನೀಂ ॥ ೧೯ ॥

ಆಗಮಿಷ್ಯಾಮ್ಯಹಂ ಕ್ಷಿಪ್ರಮಹಂ ಪರಿಸರಂ ತವ ।
ಪ್ರಾಪ್ತಾನುಜ್ಞಸ್ತತೋ ರಾಜಾ ಜಗಾಮ ಸ್ವಪುರೀಂ ಪ್ರತಿ ॥ ೨೦ ॥

ದೃಷ್ಟ್ವಾ ಪತಿವ್ರತಾಂ ಭಾರ್ಯಾಮಬ್ರವೀದ್ಭಯವಿಹ್ವಲಃ ।
ಚೇಷ್ಟಿತಂ ತಸ್ಯ ಸಾ ಜ್ಞಾತ್ವಾ ಮಹಿಮ್ನಾ ಸ್ವೇನ ಭಾಮಿನೀ ॥ ೨೧ ॥

ಮಾಭೈಷೀರಿತಿ ತಂ ಪ್ರಾಹ ಭರ್ತಾರಂ ಸಾ ಪತಿವ್ರತಾ ।
ನ ದೋಷಸ್ತವ ರಾಜೇಂದ್ರ ಸರ್ವಂ ಕಾಮಸ್ಯ ಚೇಷ್ಟಿತಂ ॥ ೨೨ ॥

---

೧೯. ಅಲ್ಲದೆ ರಾಜನು ಅಲ್ಲಿಂದ ಕದಲಕೂಡದೆಂದೂ, ಅವಳ ಸಂತೋಷಾರ್ಥವಾಗಿ ಇನ್ನೂ ಬಹುಕಾಲ ಅಲ್ಲಿಯೇ ಇರಬೇಕೆಂದೂ ಕೇಳಿಕೊಂಡಳು. ಆ ಮಾತನ್ನು ಮೀರಲಾರದೆ ರಾಜನು ತನ್ನ ಊರಿಗೆ ಹೋಗಿ ಪುನಃ ಬರುವೆನೆಂದು ಭರವಸೆ ಕೊಟ್ಟನು.

೨೦. ಅಲ್ಲದೆ ತಾನು ಮಾತುಕೊಟ್ಟಂತೆ ಅತಿ ಜಾಗ್ರತೆಯಾಗಿ ಹಿಂದಿರುಗುವೆನೆಂದು ಭಾಷೆಕೊಟ್ಟು, ಅವಳ ಅನುಮತಿಯನ್ನು ಪಡೆದು ತನ್ನ ಪಟ್ಟಣವನ್ನು ಕುರಿತು ತೆರಳಿದನು.

೨೧. ಅಲ್ಲಿದ್ದ ತನ್ನ ಪರಮಪತಿವ್ರತೆಯಾದ ಹೆಂಡತಿಯಲ್ಲಿ ಈ ವಿಷಯವನ್ನೆಲ್ಲಾ ಅತ್ಯಂತ ಭಯದಿಂದ ಹೇಳಿಕೊಂಡನು. ಆಕೆಯು ತನ್ನ ಪತಿವ್ರತಾ ಮಹಿಮೆಯಿಂದ ಅವನ ವಿಷಯವನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡಳು.

೨೨. ಆಮೇಲೆ ಪತಿಯನ್ನು ಕುರಿತು "ರಾಜೇಂದ್ರನೇ ಈ ವಿಷಯಕ್ಕೆ ನೀನು ಹಿಂಜರಿಯಬೇಡ. ಇದು ನಿನ್ನ ತಪ್ಪಲ್ಲ. ಇದೆಲ್ಲಕ್ಕೂ ಕಾರಣನು ಮನ್ಮಥನು. ಮನ್ಮಥನ ಚೇಷ್ಟೆಯೇ ಈ ನಿನ್ನ ಮನಶ್ಚಾಂಚಲ್ಯಕ್ಕೆ ಕಾರಣ" ಎಂದು ರಾಜನನ್ನು ಮನ್ನಿಸಿದಳು.

ಕಾಮೇನ ಸ್ವರ್ಗಮಾಪ್ನೋತಿ ಕಾಮೇನ ನರಕಂ ತತಃ ।
ವಿಧಿನಾ ಸೇವಿತಃ ಕಾಮಃ ಸ್ವರ್ಗದಃ ಶ್ವಭ್ರಮನ್ಯಥಾ　　　॥ ೨೩ ॥

ತಸ್ಮಾತ್ತ್ವಯಾ ನರಪತೇ ವಿಧಿಂ ಹಿತ್ವಾ ಸ ಸೇವಿತಃ ।
ತಸ್ಮಾತ್ಪಾಪಂ ಮಹಜ್ಜಾತಂ ಕುರು ಪಾಪವಿಶೋಧನಂ　　　॥ ೨೪ ॥

ಭಾರ್ಯಾನಿಗದಿತಂ ಶ್ರುತ್ವಾ ಯಯೌ ಕಣ್ವಾಶ್ರಮಂ ಪ್ರತಿ ।
ಜ್ಞಾತ್ವಾ ತದ್ವಚನಾಚ್ಛುದ್ಧಿಂ ಜಗಾಮ ಹಿಮವದ್ಗಿರಿಂ　　　॥ ೨೫ ॥

ಮಾರ್ಗೇಽಪಶ್ಯತ್ಸ ಗಂಧರ್ವಂ ವಿಶ್ವಾವಸುಮರಿಂದಮಃ ।
ಸಕಾಂತಂ ಕ್ರೀಡಮಾನಂ ತಂ ಶೋಭಿತಂ ದಿವ್ಯಮಾಲಯಾ　　　॥ ೨೬ ॥

---

೨೩. ಕಾಮದಿಂದಲೇ ಸ್ವರ್ಗ. ಕಾಮದಿಂದಲೇ ನರಕ. ಶಾಸ್ತ್ರವಿಧಿಯನ್ನನುಸರಿಸಿ ಸೇವಿಸಲ್ಪಟ್ಟ ಕಾಮಾವಸ್ಥೆಯು ಸ್ವರ್ಗಸುಖವನ್ನು ಕೊಡುವುದು. ಸ್ವೇಚ್ಛೆಯಾಗಿ ಅನುಭವಿಸಿದ ಕಾಮವು ನರಕಕ್ಕೆ ಕಾರಣವಾಗುವುದು.

೨೪. ಆದ್ದರಿಂದ ಎಲೈ ರಾಜನೇ, ನೀನು ವಿಧಿಯನ್ನು ಬಿಟ್ಟು ಕಾಮಾಸಕ್ತನಾಗಿದ್ದೀಯೆ. ಆದ್ದರಿಂದ ಅತಿಯಾಗಿ ಪಾಪವನ್ನು ನೀನು ಗಳಿಸಿದವನಾಗಿರುವೆ. ಹೇಗಾದರೂ ಆ ಪಾಪನಿವಾರಣೆಗೆ ನೀನು ಪ್ರಯತ್ನಪಡು'' ಎಂದು ಹೆಂಡತಿಯು ರಾಜನಿಗೆ ಬೋಧಿಸಿದಳು.

೨೫. ಹೆಂಡತಿಯ ಈ ಮಾತುಗಳನ್ನು ಕೇಳಿ ರಾಜನು ಕಣ್ವರ ಆಶ್ರಮಕ್ಕೆ ಹೋಗಿ ಆ ಹೆಂಡತಿಯ ಮಾತಿನಿಂದಲೇ ತಾನು ಶುದ್ಧನಾದೆನೆಂದು ಭಾವಿಸಿ ಹಿಮಾಲಯಪರ್ವತವನ್ನು ಕುರಿತು ಪ್ರಯಾಣಮಾಡಿದನು.

೨೬. ದಾರಿಯಲ್ಲಿ ವಿಶ್ವಾವಸುವೆಂಬ ಶೂರಗಂಧರ್ವನು ತನ್ನ ಪ್ರೇಯಸಿಯಾದ ದಿವ್ಯಮಾಲೆಯೊಡನೆ ವಿಹರಿಸುತ್ತಿದ್ದುದನ್ನು ಕಂಡನು.

ದೃಷ್ಟ್ವಾ ಮಾಲಾಂ ಸ ರಾಜೇಂದ್ರಃ ಸಸ್ಮಾರಾಪ್ಸರಸಂ ತದಾ ।
ಊರ್ವಶ್ಯಾ ಏವ ಯೋಗ್ಯೈಷಾ ಮಾಲಾ ನಾನ್ಯಸ್ಯ ಕಸ್ಯಚಿತ್ ॥ ೨೭ ॥

ಏವಂ ಸಂಚಿಂತ್ಯ ಮನಸಾ ಮಾಲಾಮಾಹರ್ತುಮುದ್ಯತಃ ।
ತೇನ ಸಾರ್ಧಂ ಮಹದ್ಯುದ್ಧಂ ಗಂಧರ್ವೇಣ ನೃಪೋತ್ತಮಃ ॥ ೨೮ ॥

ಕೃತ್ವಾ ಗೃಹೀತ್ವಾ ತಾಂ ಮಾಲಾಂ ಜಗಾಮಾಪ್ಸರಸಂ ಪ್ರತಿ ।
ಅನ್ವಿಷ್ಯಮಾಣಃ ಸಕಲಾಂ ಬಭ್ರಾಮ ಸ ವಸುಂಧರಾಂ ॥ ೨೯ ॥

ವನಾನಿ ಪರ್ವತಾನ್ ದ್ವೀಪಾನ್ ಲೋಕಾನ್ ಸರ್ವಾನಶೇಷತಃ ।
ಅಟಿತ್ವಾಪಿ ಚ ನಾಪಶ್ಯತ್ ಊರ್ವಶೀಂ ರಾಜಪುಂಗವಃ ॥ ೩೦ ॥

ಅನುಗ್ರಹಾನ್ಮಹೇಶಸ್ಯ ಯಾ ತಿರೋಽಪ್ಯಸ್ತಿ ಖೇಚರೀ ।
ಭ್ರಮಮಾಣೋ ಮಹಲ್ಲೋಕೇ ಸೋಽಪಶ್ಯನ್ನಾರದಂ ಮುನಿಂ ॥ ೩೧ ॥

---

೨೭. ಅಲ್ಲಿದ್ದ ಮಾಲಾದೇವಿಯನ್ನು ಕಂಡು ಆ ರಾಜನು ತನ್ನ ಹೆಂಡತಿಯಾದ ಊರ್ವಶಿಯನ್ನು ಸ್ಮರಿಸಿಕೊಂಡನು. ಅಲ್ಲದೆ ಊರ್ವಶಿಯಂತೆಯೇ ಇವಳೂ ಸುಂದರಿಯಾಗಿರುವುದರಿಂದ ಇವಳು ನನ್ನನ್ನು ಸೇರಬೇಕೇ ಹೊರತು ಮತ್ತೊಬ್ಬನಿಗೆ ಈಕೆಯು ಯೋಗ್ಯಳಲ್ಲ,

೨೮. ಎಂದು ಯೋಚಿಸಿ ಮಾಲಾದೇವಿಯನ್ನು ಅಪಹರಿಸಲು ಇಷ್ಟವುಳ್ಳವನಾಗಿ, ಆ ಗಂಧರ್ವನೊಡನೆ ದೊಡ್ಡ ಯುದ್ಧವನ್ನೇ ಆರಂಭಿಸಿದನು.

೨೯. ಯುದ್ಧದಲ್ಲಿ ಜಯಶೀಲನಾದ ಆ ರಾಜನು ಮಾಲಾದೇವಿಯೊಡನೆ ಹೊರಟು ತನ್ನ ಮೊದಲನೆಯ ಪ್ರೇಯಸಿಯಾದ ಊರ್ವಶಿಯನ್ನು ಹುಡುಕುತ್ತಾ ಭೂಮಿಯಲ್ಲೆಲ್ಲಾ ಸುತ್ತಾಡಿದನು.

೩೦. ಅನೇಕ ಕಾಡುಗಳಲ್ಲಿ ಅಲೆದನು. ದ್ವೀಪಗಳಲ್ಲೆಲ್ಲಾ ಹುಡುಕಿದನು. ಸಮಸ್ತ ಲೋಕಗಳಲ್ಲಿಯೂ ಸಂಚರಿಸಿದನು. ಎಲ್ಲೆಲ್ಲೂ ಆ ಊರ್ವಶಿಯನ್ನು ಕಾಣದೆ ರಾಜನು ಬಹಳವಾಗಿ ಬಳಲಿ ನಿಂತನು.

೩೧. ಮಹೇಶ್ವರನ ಮಹಿಮೆಯ ವಶದಿಂದಲೇ ಆ ಊರ್ವಶಿಯು ಅಂತರ್ಧಾನಳಾಗಿದ್ದಳು. ಅವಳನ್ನು ಹುಡುಕುತ್ತಾ ರಾಜನು ಮಹರ್ಲೋಕದಲ್ಲಿ ಬರುತ್ತಿದ್ದ ನಾರದನನ್ನು ನೋಡಿದನು.

ಯಥಾವದಭಿವಾದ್ಯಾಥ ಲಜ್ಜಿತಃ ಪಾರ್ಶ್ವಗೋಽಭವತ್ ।
ಪೃಷ್ಟ್ವಾ ತು ಕುಶಲಂ ರಾಜ್ಞೀ ನಾರದೋ ಮುನಿಪುಂಗವಃ ॥ ೩೨ ॥

ಅಬ್ರವೀನ್ನಾರದಂ ರಾಜಾ ಚೋರ್ವಶೀದರ್ಶನೋತ್ಸುಕಃ ।
ಭಗವನ್ನಾಗತಃ ಕಸ್ಮಾತ್ ದೃಷ್ಟಾ ವಾಸ್ತಿ ಹಿ ತತ್ರ ತು ॥ ೩೩ ॥

ಅಸ್ತಿ ಚೇಚ್ಛ್ರೋತುಮಿಚ್ಛಾಮಿ ಬ್ರವೀತು ಬ್ರಹ್ಮಣಃ ಸುತಃ ।
ರಾಜ್ಞೋ ಮನೋಗತಂ ಸರ್ವಂ ವಿಜ್ಞಾಯ ಭಗವಾನ್ಮುನಿಃ ॥ ೩೪ ॥

ಯಥಾವತ್ಕುಶಲಂ ತಸ್ಯ ನಾರದಸ್ತ್ವ ತಥಾಬ್ರವೀತ್ ।
ಯತ್ರಾಸೀದುರ್ವಶೀ ದೇವೀ ಮೇರೋರ್ದಕ್ಷಿಣದೇಶತಃ ॥ ೩೫ ॥

ಸರಶ್ಚ ಮಾನಸಂ ನಾಮ ತತ್ರಾಹಂ ಮೇದಿನೀಪತೇ ।
ವಿರಂಚೇಃ ಕಾರ್ಯಮುದ್ದಿಶ್ಯ ಗತ್ವಾ ಪುನರಿಹಾಗತಃ ॥ ೩೬ ॥

---

೩೨. ಅಭಿವಾದನ ಪುರಸ್ಸರವಾಗಿ ನಾರದನನ್ನು ನಮಸ್ಕರಿಸಿ ಲಜ್ಜೆಯಿಂದ ಕೂಡಿದವನಾಗಿ ರಾಜನು ಅವನ ಪಕ್ಕದಲ್ಲಿ ನಿಂತುಕೊಂಡನು. ನಾರದನಾದರೋ ರಾಜನ ಕುಶಲಾದಿಗಳನ್ನು ಕೇಳಿದನು.

೩೩. ರಾಜನು ನಾರದನಿಗೆ ತನ್ನ ಇಷ್ಟಾರ್ಥವನ್ನು ಹೇಳುತ್ತಾ " ಸ್ವಾಮಿಯೇ ಈಗ ನಾನು ಊರ್ವಶಿಯನ್ನು ನೋಡಲು ಉತ್ಸುಕವುಳ್ಳವನಾಗಿದ್ದೇನೆ. ಇಷ್ಟು ಹುಡುಕಿದರೂ ಊರ್ವಶಿಯು ನನಗೆ ದೊರೆಯಲಿಲ್ಲ. ತಾವು ಬಂದ ದಾರಿಯಲ್ಲಿ ಏನಾದರೂ ಇದ್ದಳೇ ?

೩೪ ಹಾಗೇನಾದರೂ ದಾರಿಯಲ್ಲಿದ್ದರೆ ಅದನ್ನ ನನಗೆ ತಿಳಿಸಬೇಕು" ಎಂದು ವಿನಯದಿಂದ ಪ್ರಾರ್ಥಿಸಿಕೊಳ್ಳಲು, ಪೂಜ್ಯನಾದ ನಾರದಮಹರ್ಷಿಯು ಮಹಾರಾಜನ ಮನೋಭಿಪ್ರಾಯವನ್ನು ತಿಳಿದು,

೩೫. ರಾಜನಿಗೆ ಕ್ಷೇಮವಾಗುವಂತಹ ಕೆಲವು ಮಾತುಗಳನ್ನು ಹೇಳಿದನು. ಅಯ್ಯಾರಾಜನೇ, ಊರ್ವಶಿಯು ಮೇರುಪರ್ವತದ ದಕ್ಷಿಣಭಾಗದಲ್ಲಿ ನೆಲಸಿರುವಳು.

೩೬. ಅಲ್ಲಿಯೇ ಸುಂದರವಾದ ಮಾನಸ ಸರೋವರವಿರುವುದು. ನಾನು ಈಗ ಯಾವುದೋ ಒಂದು ಬ್ರಹ್ಮಕಾರ್ಯಕ್ಕಾಗಿ ಅಲ್ಲಿಗೆ ಹೋಗಿ ಅಲ್ಲಿಂದಲೇ ಈಗ ಬರುತ್ತಿರುವೆನು.

ಗಮಿಷ್ಯಾಮಿ ಪುನಸ್ತತ್ರ ಯತ್ರಾಽಽಸ್ತೇ ಸತ್ಯಲೋಕಪಃ ।
ಇತಿ ಶ್ರುತ್ವಾ ಮುನೇರ್ವಾಕ್ಯಂ ರಾಜಾನುಜ್ಞಾಪ್ಯ ನಾರದಂ ॥ ೩೭ ॥

ತಂ ಪ್ರದೇಶಂ ಗತಸ್ತೂರ್ಣಂ ತತ್ರಾಽಪಶ್ಯತ್ಸ ಚೋರ್ವಶೀಂ ।
ಮಾಲಾಂ ನಿವೇದಯಾಮಾಸ ಸಾ ತಯಾಲಂಕೃತಾಽಭವತ್ ॥ ೩೮ ॥

ರಮಮಾಣಸ್ತಯಾ ಸಾರ್ಧಂ ಗತಂ ವರ್ಷಶತಂ ಪುನಃ ।
ಕದಾಚಿತ್ತಮುಪೃಚ್ಛತ್ಸಾ ರಾಜಾನಂ ಮುನಿಪುಂಗವಾಃ ॥ ೩೯ ॥

ಸ್ವಕೀಯಂ ನಗರಂ ಗತ್ವಾ ಭವತಾ ತತ್ರ ಕಿಂ ಕೃತಂ ।
ಬ್ರೂಹಿ ರಾಜನ್ ಮಹಾಬಾಹೋ ಯದ್ಯಸ್ಮಿ ತವ ವಲ್ಲಭಾ ॥ ೪೦ ॥

ಇತಿ ಪೃಷ್ಟಸ್ತಯಾ ರಾಜಾ ಪ್ರೋವಾಚ ತದಶೇಷತಃ ।
ತಸ್ಯೇರಿತಮಥಾಕರ್ಣ್ಯ ರಾಜಾನಂ ಪ್ರತ್ಯಭಾಷತ ॥ ೪೧ ॥

---

೩೭. ಪುನಃ ಬ್ರಹ್ಮನಿರುವ ಆದೇ ಸ್ಥಳಕ್ಕೇ ನಾನು ಈಗ ಹೋಗಬೇಕೆಂದಿರುವೆನು, ಎಂದು ಹೇಳಿದ ಮಹರ್ಷಿಯು ಮಾತನ್ನು ರಾಜನು ಕೇಳಿ ನಾರದನನ್ನು ಬೀಳ್ಕೊಟ್ಟು,

೩೮. ಆ ಮಾನಸಸರೋವರದೆಡೆಗೆ ಶೀಘ್ರವಾಗಿ ಪ್ರಯಾಣಮಾಡಿದನು. ಅಲ್ಲಿ ಊರ್ವಶಿಯು ಇದ್ದುದನ್ನು ಕಂಡು, ತಾನು ಕರೆದುಕೊಂಡು ಹೋಗಿದ್ದ ಮಾಲಾದೇವಿಯನ್ನು ಅವಳಿಗೊಪ್ಪಿಸಿದನು. ಆಕೆಯು ಅವಳನ್ನು ಬಹುವಾಗಿ ಶೃಂಗರಿಸಿದಳು.

೩೯. ಹೀಗೆ ಆ ಮಾಲಾ ಮತ್ತು ಊರ್ವಶಿಯರೊಡನೆ ಕ್ರೀಡಿಸುತ್ತಾ ರಾಜನು ನೂರಾರು ವರ್ಷಗಳನ್ನು ಕಳೆದನು. ಒಂದು ಸಾರಿ ಊರ್ವಶಿಯು ರಾಜನನ್ನು ಕುರಿತು ಹೀಗೆ ಕೇಳಿದಳು.

೪೦. "ಎಲೈ ರಾಜನೆ, ನೀನು ನಿನ್ನ ಊರಿಗೆ ಹೋಗಿದ್ದಾಗ ಅಲ್ಲಿ ನಡೆದ ಸಮಾಚಾರವೇನು? ನನ್ನ ಮೇಲೆ ನಿನಗೆ ಅಭಿಮಾನವಿದ್ದರೆ ಎಲ್ಲವನ್ನೂ ನನಗೆ ತಿಳಿಸು" ಎಂದು ಪ್ರಶ್ನಿಸಿದಳು.

೪೧. ರಾಜನು ಅವಳ ಪ್ರಶ್ನೆಗೆ ಉತ್ತರವಾಗಿ ತನ್ನ ಊರಿನಲ್ಲಿ ನಡೆದ ಸಮಾಚಾರವನ್ನೆಲ್ಲಾ ವಿವರಿಸಿದನು. ಅದನ್ನೆಲ್ಲಾ ನಿದಾನವಾಗಿ ಕೇಳಿ ಊರ್ವಶೀದೇವಿಯು ರಾಜನಿಗೆ ಹೀಗೆ ಹೇಳಿದಳು.

ಇತ ಊರ್ಧ್ವಂ ಮಯಾ ಸಾರ್ಧಂ ಸ್ಥಾತವ್ಯಂ ನೈವ ಸುವ್ರತ ।
ಶಾಪಂ ದಾಸ್ಯತಿ ತೇ ಕಣ್ವೋ ಭಾರ್ಯಾ ತವ ಮಮಾನಘ ॥ ೪೨ ॥

ತಯಾ ಚೋಕ್ತೋಽಪಿ ತನ್ವಂಗ್ಯಾ ನ ತತ್ಯಾಜ ಹ ಊರ್ವಶೀಂ ।
ಜ್ಞಾತ್ವಾಽಥ ತಸ್ಯ ನಿರ್ಬಂಧಮಕರೋದಾತ್ಮನಸ್ತನುಂ ॥ ೪೩ ॥

ವಲಿಭಿಃ ಪಲಿತಾಕೀರ್ಣಾಂ ತಾಂ ದೃಷ್ಟ್ವಾ ರಾಜಸತ್ತಮಃ ।
ತತ್ಕ್ಷಣಾದುರ್ವಶೀಂ ತ್ಯಕ್ತ್ವಾ ತಪಸೇ ಕೃತನಿಶ್ಚಯಃ ॥ ೪೪ ॥

ದ್ವಾದಶಾಹಾನ್ಯಭೂದ್ರಾಜಾ ಕಂದಮೂಲಫಲಾಶನಃ ।
ತಾವತ್ಕಾಲಂ ಚ ವಾಯ್ವಾಶೀ ತತಃ ಕಣ್ವಾಶ್ರಮಂ ಯಯೌ ॥ ೪೫ ॥

ದೃಷ್ಟ್ವಾ ಮುನಿವರಂ ಶಾಂತಂ ಶಿವಧ್ಯಾನೈಕತತ್ಪರಂ ।
ಪ್ರಣಮ್ಯ ದಂಡವದ್ಭಕ್ತ್ಯಾ ಪ್ರಾಂಜಲಿಃ ಪಾರ್ಶ್ವಸಂಸ್ಥಿತಃ ॥ ೪೬ ॥

---

೪೨. ರಾಜನೇ ಇನ್ನು ಮುಂದೆ ನೀನು ನನ್ನ ಜೊತೆಯಲ್ಲಿರಕೂಡದು. ಹಾಗಿದ್ದದ್ದೇ ಆದರೆ ಕಣ್ವಋಷಿಯು ನಿನಗೂ, ನಿನ್ನ ಹೆಂಡತಿಯು ನನಗೂ, ಶಾಪ ಕೊಡುವರು.

೪೩. ಎಂದು ಊರ್ವಶಿಯು ಬಹು ವಿಧವಾಗಿ ಹೇಳಿದರೂ ರಾಜನು ಮಾತ್ರ ಊರ್ವಶಿಯನ್ನು ಬಿಡಲಾರದಾದನು. ಇದನ್ನು ಕಂಡು ಊರ್ವಶಿಯು ತನ್ನ ದೇಹದ ಸೌಂದರ್ಯವನ್ನು ಬದಲಾಯಿಸಿಕೊಂಡಳು.

೪೪. ಊರ್ವಶಿಯ ದೇಹವೆಲ್ಲವೂ ಒಡನೆಯೇ ಸುಕ್ಕಿಹೋಯಿತು. ಕೂದಲೆಲ್ಲವೂ ಬೆಳ್ಳಗಾಯಿತು. ಇಂಥ ಮುದುಕಿಯ ಅವಸ್ಥೆಯುಳ್ಳ ಊರ್ವಶಿಯನ್ನು ಕಂಡು ರಾಜನು ತತ್ಕ್ಷಣವೇ ವೈರಾಗ್ಯವನ್ನು ಪಡೆದು ತಪಸ್ಸುಮಾಡಲು ಸಿದ್ಧನಾದನು.

೪೫. ಮೊದಲು ಹನ್ನೆರಡು ದಿನ ಪರ್ಯಂತ ಗೆಡ್ಡೆಗೆಣಸುಗಳನ್ನು ತಿಂದು ದೇಹಶುದ್ಧಿಮಾಡಿಕೊಂಡು, ಅಷ್ಟೇ ದಿನಗಳು ವಾಯುಭಕ್ಷಣೆಯಿಂದ ಕಾಲಕಳೆದು ಆಮೇಲೆ ಕಣ್ವಾಶ್ರಮವನ್ನು ಕುರಿತು ತೆರಳಿದನು.

೪೬. ಅಲ್ಲಿ ಕಣ್ವಋಷಿಯು ಶಾಂತನಾಗಿ ಶಿವಾರ್ಚನಾಸಕ್ತನಾಗಿ ಕುಳಿತಿದ್ದನು. ಅಂಥ ಋಷಿಯನ್ನು ಸಾಷ್ಟಾಂಗಪ್ರಣಾಮಗಳಿಂದ ವಂದಿಸಿ ಪಕ್ಕದಲ್ಲಿ ನಿಂತುಕೊಂಡನು.

ಯದ್ವೃತ್ತಮಾತ್ಮನಸ್ಸರ್ವಂ ಮುನೇಃ ಸರ್ವಂ ನ್ಯವೇದಯತ್ ।
ಮುನಿರ್ವಿದಿತ್ವಾ ತತ್ಪಾಪಮಬ್ರವೀತ್ಪಾಪಶೋಧನಂ ॥ ೪೭ ॥

ಮುನಿನಾ ಪ್ರೇಷಿತೋ ರಾಜಾ ಗತ್ವಾ ವಾರಾಣಸೀಂ ಪುರೀಂ ।
ಸ್ನಾತ್ವಾ ಸಂತರ್ಪ್ಯ ಜಾಹ್ನವ್ಯಾಂ ದೃಷ್ಟ್ವಾ ವಿಶ್ವೇಶ್ವರಂ ಶಿವಂ ॥ ೪೮ ॥

ಮುಕ್ತೋಽಸಾವೇನಸೋ ರಾಜಾ ಜಗಾಮ ಸ್ವಪುರೀಂ ತದಾ ।
ವಸೂನಿ ಬ್ರಾಹ್ಮಣೇಭ್ಯಶ್ಚ ದತ್ವಾ ರಾಜ್ಯಮಪಾಲಯತ್ ॥ ೪೯ ॥

ಊರ್ವಶ್ಯಾಂ ವಿಶ್ರುತಾಜ್ಜಾತಾಃ ಸಪ್ತಪುತ್ರಾ ಮಹೌಜಸಃ ।
ಕ್ರೋಷ್ಟೋರ್ಯದುಸುತಸ್ಯಾಽಽಸನ್ವಂಶ್ಯಾಃ ಸತ್ಕೀರ್ತಿಶಾಲಿನಃ ॥ ೫೦ ॥

ಶೃಣುಧ್ವಂ ತಾನ್ ಮುನಿಶ್ರೇಷ್ಠಾ ಮುಖ್ಯಾನೇವ ನ ಚಾಪರಾನ್ ।
ಕ್ರೋಷ್ಟೋರ್ವಂಶೇ ಕ್ರಥಃ ಖ್ಯಾತೋ ಮಹಾಭೋಜಸ್ತತಃಪರಃ ॥ ೫೧ ॥

---

೪೭. ಅಲ್ಲದೆ ತಾನು ಮಾಡಿದ್ದ ಅಕಾರ್ಯಗಳನ್ನೆಲ್ಲಾ ತಪ್ಪದೆ ಹೇಳಿಕೊಂಡನು. ಋಷಿಯು ಅದೆಲ್ಲವನ್ನೂ ಕೇಳಿ ಪಾಪನಿವಾರಕವಾದ ಕೆಲವು ಪ್ರಾಯಶ್ಚಿತ್ತಕರ್ಮಗಳನ್ನು ಹೇಳಿದನು.

೪೮. ಅನಂತರ ಋಷಿಯಿಂದ ಅಪ್ಪಣೆಪಡೆದು ಕಾಶಿಗೆ ಹೋಗಿ, ಅಲ್ಲಿ ಗಂಗಾಸ್ನಾನಮಾಡಿ, ಪಿತೃತರ್ಪಣದಿಂದ ಪಿತೃಗಳನ್ನಾರಾಧಿಸಿ, ವಿಶ್ವೇಶ್ವರಸ್ವಾಮಿಯ ದರ್ಶನಮಾಡಿದನು.

೪೯. ಹೀಗೆ ರಾಜನು ತನ್ನ ಪಾಪಗಳನ್ನೆಲ್ಲಾ ಕಾಶಿಯಲ್ಲಿ ಕಳೆದುಕೊಂಡು ತನ್ನ ಊರನ್ನು ಸೇರಿ ಅಲ್ಲಿ ಬ್ರಾಹ್ಮಣರಿಗೆ ಅನೇಕವಾದ ದಾನಧರ್ಮಗಳನ್ನು ಮಾಡಿ ಸುಖವಾಗಿ ರಾಜ್ಯವಾಳಲಾರಂಭಿಸಿದನು.

೫೦. ಊರ್ವಶಿಯ ಹೊಟ್ಟೆಯಲ್ಲಿ ವಿಶ್ರುತನ ಮಕ್ಕಳಾಗಿ ಹುಟ್ಟಿದವರು ಏಳು ಜನರು. ಅವರೆಲ್ಲರೂ ಮಹಾತೇಜಸ್ವಿಗಳು. ಯದುವಿನ ಮಗನಾದ ಕ್ರೋಷ್ಟುವಿಗೆ ಕೀರ್ತಿಶಾಲಿಗಳಾದ ಅನೇಕ ಮಕ್ಕಳು ಜನಿಸಿದರು.

೫೧-೫೪. ಎಲೈ ಶೌನಕಾದಿಗಳೇ, ಯದುವಂಶದಲ್ಲಿ ಶ್ರೇಷ್ಠರಾದವರ ಹೆಸರನ್ನು ಮಾತ್ರ ಹೇಳುವೆನು ಕೇಳಿ. ಕ್ರೋಷ್ಟುವಿನ ವಂಶದಲ್ಲಿ ಕ್ರಥ, ಮಹಾಭೋಜ, ಸಾತ್ವತ, ವಿದರ್ಭ, ಕೋಶಲ, ,ಭೋಜ, ಸತ್ಯವಾಕ್, ಸತ್ಯಕ, ಸಾತ್ಯಕಿ,

ಸಾತ್ವತಶ್ಚ ತತಃ ಖ್ಯಾತೋ ವಿದರ್ಭಃ ಕೋಶಲಸ್ತಥಾ ।
ಭೋಜಶ್ಚ ಸತ್ಯವಾಕ್ಚೈವ ಸತ್ಯಕಃ ಸಾತ್ಯಕಿಸ್ತತಃ ॥ ೫೩ ॥

ಕ್ರಥಕಶ್ಚ ಸುಷೇಣಶ್ಚ ಸುಭೋಜೋ ನರವಾಹನಃ ।
ಆಹೂಕೋ ದೇವಕಶ್ಚೈವ ಶ್ರೀದೇವೋ ದೇವಸುವ್ರತಃ ॥ ೫೩ ॥

ಉಗ್ರಸೇನಶ್ಚ ಕಂಸಶ್ಚ ವಸುದೇವೋ ಮಹಾಯಶಾಃ ।
ಉಗ್ರಸೇನಸ್ಯ ಕನ್ಯಾಯಾಂ ದೇವಕ್ಯಾಂ ವಸುದೇವತಃ ॥ ೫೪ ॥

ಭೃಗೋಃ ಶಾಪವಶಾದ್ವಿಷ್ಣುಃ ಸಂಭೂತಸ್ತ್ರಿದಶೇಶ್ವರಃ ।
ರೋಹಿಣೀ ನಾಮ ಯಾ ಪತ್ನೀ ವಸುದೇವಸ್ಯ ಶೋಭನಾ ॥ ೫೫ ॥

ತಸ್ಯಾಂ ಸಂಕರ್ಷಣೋ ಜಾತೋ ಯೋಽನಂತಃ ಶೇಷಸಂಜ್ಞಿತಃ ।
ಷೋಡಶಸ್ತ್ರೀಸಹಸ್ರಾಣಿ ಪತ್ನಯೋ ಮಾಧವಸ್ಯ ಯಾಃ ॥ ೫೬ ॥

ಕ್ರಥಕ, ಸುಶೇಣ, ಸುಭೋಜ, ನರವಾಹನ, ಆಹೂಕ, ದೇವಕ, ಶ್ರೀದೇವ, ದೇವಸುವ್ರತ, ಉಗ್ರಸೇನ, ಕಂಸ, ವಸುದೇವ, ಇವರೇ ಮೊದಲಾದವರು ಪ್ರಸಿದ್ಧರಾದವರು.

೫೫. ಉಗ್ರಸೇನನ ಮಗಳಾದ ದೇವಕೀದೇವಿಯನ್ನು ವಸುದೇವನು ಮದುವೆಮಾಡಿಕೊಂಡನು. ಅವಳಲ್ಲಿ ಭೃಗುಮಹರ್ಷಿಯ ಶಾಪದಿಂದ ವಿಷ್ಣುವು ದೇವತೆಗಳಿಗೊಡೆಯನಾಗಿ ಜನಿಸಿದನು. ಹಾಗೆಯೇ ವಸುದೇವನಿಗೆ ರೋಹಿಣಿಯೆಂಬ ಮತ್ತೊಬ್ಬಳು ಹೆಂಡತಿಯಿದ್ದಳು.

೫೬. ಆ ರೋಹಿಣಿಯಲ್ಲಿ ಶೇಷನೆಂಬ ಹೆಸರುಳ್ಳ ಅನಂತನು ಬಲರಾಮನೆಂಬ ಹೆಸರಿನಿಂದ ಜನಿಸಿದನು. ವಸುದೇವ ಪುತ್ರನಾದ ಮಾಧವನಿಗೆ ಹದಿನಾರು ಸಹಸ್ರ ಹೆಂಡತಿಯರಿದ್ದರು.

ತಾಸು ಜಾತಾಹ್ಯಸಂಖ್ಯಾತಾ ಪ್ರದ್ಯುಮ್ನಪ್ರಮುಖಾಃ ಸುತಾಃ ।
ಕೃಷ್ಣೋऽಪಿ ದೇವಕೀಸೂನುಃ ಪರಮಾತ್ಮಾ ಸನಾತನಃ ॥ ೫೭ ॥

ಕೃತಕೃತ್ಯೋऽಪಿ ಯೋಗಾತ್ಮಾ ಮಾಯಾವೀ ವಿಶ್ವಭುಕ್ಸ್ವಯಂ ।
ತಥಾಪಿ ಪೂಜಯತ್ಯೇವ ಭಗವಂತಮುಮಾಪತಿಂ ॥ ೫೮ ॥

ಲಿಂಗೇ ಸರ್ವಾತ್ಮಕಂ ಮತ್ವಾ ಮಹಾದೇವಂ ಪಿನಾಕಿನಂ ।
ವರಾಂಶ್ಚ ವಿವಿಧಾಲ್ಲಬ್ಧ್ವಾ ತಸ್ಮಾದ್ದೇವಾನ್ಮಹೇಶ್ವರಾತ್ ॥ ೫೯ ॥

ಅಜೇಯಸ್ತ್ರಿಷು ಲೋಕೇಷು ದೇವದೇವೋ ಜನಾರ್ದನಃ ।
ನ ಕೃಷ್ಣಾದಧಿಕಸ್ತಸ್ಮಾದಸ್ತಿ ಮಾಹೇಶ್ವರಾಗ್ರಣೀಃ ॥ ೬೦ ॥

ತಸ್ಮಾತ್ತತ್ಪೂಜನಾಚ್ಛಂಭುರ್ಭವತ್ಯೇವ ಸುಪೂಜಿತಃ ।
ಹರೇರವಜ್ಞಾಕರಣಾದ್ಭವೇದೀಶಃ ಪರಾಙ್ಮುಖಃ ॥ ೬೧ ॥

---

೫೭. ಆ ಹದಿನಾರು ಸಹಸ್ರ ಸ್ತ್ರೀಯರಲ್ಲಿ ಪ್ರದ್ಯುಮ್ನನೇ ಮೊದಲಾದ ಅನೇಕ ಜನ ಮಕ್ಕಳು ಹುಟ್ಟಿದರು. ದೇವಕೀಸೂನುವಾದ ಶ್ರೀಕೃಷ್ಣನಾದರೋ ಸಾಕ್ಷಾತ್ಪರಮಾತ್ಮ ಸ್ವರೂಪಿಯು, ಮತ್ತು ಸನಾತನನಾದವನು.

೫೮. ಶ್ರೀಕೃಷ್ಣನು ಯೋಗಿಶ್ರೇಷ್ಠನಾದರೂ, ಕೃತಕೃತ್ಯನಾದರೂ, ಮಾಯೆಯಿಂದ ಪ್ರಪಂಚವನ್ನೇ ತನ್ನಲ್ಲಿ ಹುದುಕಿಸಿಟ್ಟವನಾದರೂ, ಭಗವಂತನಾದ ಪರಮೇಶ್ವರನನ್ನು ಮಾತ್ರ ಯಾವಾಗಲೂ ಪೂಜಿಸುತ್ತಿದ್ದನು.

೫೯. ಪರಮೇಶ್ವರನ ಲಿಂಗದಲ್ಲಿಯೇ ಸಮಸ್ತ ದೇವತೆಗಳೂ ಅಡಗಿರುವರೆಂದು ತಿಳಿದು ಶ್ರೀಕೃಷ್ಣನು ಭಕ್ತಿಯಿಂದ ಲಿಂಗಪೂಜೆಯನ್ನು ಮಾಡಿದನು. ಅದರಿಂದ ಪರಮೇಶ್ವರನ ಅನುಗ್ರಹವನ್ನು ಸಂಪಾದಿಸಿ ಅನೇಕ ಉತ್ತಮವಾದ ವರಗಳನ್ನು ಸಂಪಾದಿಸಿದನು.

೬೦. ದೇವದೇವನಾದ ಜನಾರ್ದನನು ಮೂರು ಲೋಕಗಳಲ್ಲಿಯೂ ಶೂರನಾದವನು. ಅದರಲ್ಲೂ ಮಹೇಶ್ವರ ಭಕ್ತರಲ್ಲಿ ಶ್ರೀಕೃಷ್ಣನಿಗಿಂತ ಶ್ರೇಷ್ಠನಾದವನು ಮತ್ತಾರೂ ಇಲ್ಲ. ಈಶ್ವರ ಭಕ್ತಿ, ಆಜನ್ಮಶೌರ್ಯ ಇವು ಅವನ ಸಹಜಗುಣಗಳಾಗಿದ್ದುವು.

೬೧. ಆದ್ದರಿಂದ ಶ್ರೀಕೃಷ್ಣನನ್ನು ಭಕ್ತಿಯಿಂದ ಅರ್ಚಿಸಿದರೆ ಭಕ್ತಪರಾಧೀನನಾದ ಪರಮೇಶ್ವರನು ತೃಪ್ತಿಗೊಳ್ಳುವನು ವಿಷ್ಣುವನ್ನು ದ್ವೇಷಿಸುವುದರಿಂದ ಪರಮೇಶ್ವರನೂ ಕೋಪಗೊಳ್ಳುವನು. ಇದರಿಂದಲೇ ಹರಿಹರರಿಗೆ ಎಂದೂ ಭೇದವನ್ನು ಕಲ್ಪಿಸಬಾರದು.

ತಸ್ಮಾತ್ಪೂಜ್ಯಃ ಸದಾ ಶಾರ್ಙ್ಗೀ ಮಹಾದೇವಪರಾಯಣೈಃ ।
ತದ್ಭಕ್ತೈಶ್ಚ ವಿಶೇಷೇಣ ಪ್ರೀತಯೇ ಗಿರಿಜಾಪತೇಃ ॥ ೬೨ ॥

ಏಷ ವಃ ಕಥಿತೋ ವಂಶೋ ಯದೋಃ ಸಂಕ್ಷೇಪತೋ ದ್ವಿಜಾಃ ।
ಸರ್ವಪಾಪಕ್ಷಯಕರಃ ಪಠತಾಂ ಶೃಣ್ವತಾಂ ಭವೇತ್ ॥ ೬೩ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಪುರುಯದುವಂಶ ಕಥನಂ ನಾಮೈಕ ತ್ರಿಂಶೋಽಧ್ಯಾಯಃ

---

೬೨. ಶಿವಭಕ್ತರಾದವರು ಮಹಾವಿಷ್ಣುವನ್ನೂ ಭಕ್ತಿಯಿಂದ ಆರಾಧಿಸಬೇಕು. ಇದರಿಂದ ಪರಮೇಶ್ವರನು ಸಂಪೂರ್ಣವಾಗಿ ತೃಪ್ತಿಗೊಳ್ಳುವನು. ಹಾಗೆಯೇ ವಿಷ್ಣುಭಕ್ತರು ಶಿವನನ್ನೂ ಪೂಜಿಸಬೇಕು.

೬೩. ಎಲೈ ಶೌನಕಾದಿಗಳೇ, ನಿಮಗೆ ನಾನು ಯದುವಂಶದವರ ವಿಚಾರವನ್ನೆಲ್ಲಾ ವಿವರಿಸಿರುವೆನು. ಇದನ್ನು ಕೇಳುವವರ ಮತ್ತು ಹೇಳುವವರ ಸಮಸ್ತ ಪಾಪಗಳೂ ನಿವಾರಣೆಯಾಗುವುವು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರದಲ್ಲಿ, ಸೂತಶೌನಕಸಂವಾದ ರೂಪವಾಗಿ, ಪುರುವಂಶ, ಯದುವಂಶದವರ ಕಥೆಯನ್ನು ತಿಳಿಸುವ ಮೂವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ದ್ವಾತ್ರಿಂಶೋಽಧ್ಯಾಯಃ.

ಮನ್ವಂತರಾಣಿ ವಕ್ಷ್ಯಾಮಿ ಶೃಣುಧ್ವಂ ಮುನಿಪುಂಗವಾಃ ।
ಮನವಃ ಷಡತೀತಾಸ್ತೇ ಸಪ್ತಮೋ ವರ್ತತೇ ಕಿಲ ॥ ೧ ॥

ತೇಷಾಂ ಸ್ವಾಯಂಭುವಸ್ತ್ವಾದ್ಯ ಸ್ತತಃ ಸ್ವಾರೋಚಿಷಃ ಸ್ಮೃತಃ ।
ಉತ್ತಮಸ್ತಾಮಸಶ್ಚೈವ ರೈವತಶ್ಚಾಕ್ಷುಷಸ್ತಥಾ ॥ ೨ ॥

ಸ್ವಾಯಂಭುವಂ ತು ಕಲ್ಪಾದೌ ಅಂತರಂ ಕಥಿತಂ ಮಯಾ ।
ಸ್ವಾರೋಚಿಷೇಽಂತರೇ ದೇವಾಸ್ತುಷಿತಾ ನಾಮ ತೇ ಸ್ಮೃತಾಃ ॥ ೩ ॥

ಮೂವತ್ತೆರಡನೆಯ ಅಧ್ಯಾಯ.

೧. ಎಲೈ ಶೌನಕಾದಿಗಳೇ ಇನ್ನು ನಿಮಗೆ ಮನ್ವಂತರಗಳ ವಿಷಯಗಳನ್ನು ತಿಳಿಸುವೆನು. ಈಗ ಆರು ಮನ್ವಂತರಗಳು ಕಳೆದುವು. ಏಳನೆಯ ಮನ್ವಂತರವು ನಡೆಯುತ್ತಿದೆ.

೨. ಆ ಮನ್ವಂತರಗಳಲ್ಲಿ ಮೊದಲನೆಯದು ಸ್ವಾಯಂಭುವಮನ್ವಂತರ. ಎರಡನೆಯದು ಸ್ವಾರೋಚಿಷವು. ಮೂರನೆಯದು ಉತ್ತಮವು. ನಾಲ್ಕನೆಯದು ತಾಮಸಮನ್ವಂತರ. ಐದು ಆರನೆಯವು ರೈವತ, ಚಾಕ್ಷುಷವೆಂಬ ಮನ್ವಂತರಗಳು.

೩. ಸ್ವಾಯಂಭುವ ಮನ್ವಂತರದ ವಿಷಯವನ್ನೆಲ್ಲಾ ಹಿಂದೆ ನಾನು ಹೇಳಿರುವೆನು. ಸ್ವಾರೋಚಿಷಮನ್ವಂತರದಲ್ಲಿ ತುಷಿತರೆಂಬ ದೇವತೆಗಳಿರುವರು. ಅವರು ಮಹಾ ಪ್ರಭಾವಶಾಲಿಗಳಾಗಿರುತ್ತಾರೆ.

ವಿಪಶ್ಚಿನ್ನಾಮ ದೇವೇಂದ್ರ ಋಷೀನ್ವಕ್ಷ್ಯಾಮಿ ಸಾಂಪ್ರತಂ ।
ಊರ್ಜಸ್ತಂಭಸ್ತಥಾ ಪ್ರಾಣೋ ದಾಂತೋಽಥ ಋಷಭಸ್ತಥಾ ॥ ೪ ॥
ತಿಮಿರಃ ಶಾರ್ವರೀವಾಂಶ್ಚ ಸಪ್ತೈವ ಋಷಯಃ ಸ್ಮೃತಾಃ ।
* ಉತ್ತರೇ ತ್ವಂತರೇ ದೇವಾಃ ಸುಧಾಮಾನೋ ದ್ವಿಜೋತ್ತಮಾಃ ।
ಪ್ರತರ್ದನಾಃ ಶಿವಾಃ ಸತ್ಯಾಸ್ತತಶ್ಚ ವಶವರ್ತಿನಃ ॥ ೫ ॥
ಏತೇಷಾಂಚ ಗಣಾಃ ಪ್ರೋಕ್ತಾ ಭವದ್ವಾದಶಭಿರ್ಗಣೈಃ ॥ ೬ ॥
ಸುದಾಂತಿರ್ನಾಮ ದೇವೇಂದ್ರೋ ಮಹಾಬಲಪರಾಕ್ರಮಃ ।
ರಜೋ ಗೋತ್ರೋಽರ್ಧಬಾಹುಶ್ಚ ಸವನಶ್ಚಾನಘಸ್ತಥಾ ॥ ೭ ॥
ಸುತಪಾಃ ಶುಕ್ರನಾಮಾಽಥ ಸಪ್ತೈತ ಋಷಯ ಸ್ಮೃತಾಃ ।
ಮರ್ತ್ಯಾಶ್ಚ ಸುಧಿಯಶ್ಚೈವ ತಾಮಸಸ್ಯಾಂತರೇ ಸುರಾಃ ।
ಜ್ಯೋತಿರ್ಧರ್ಮಃ ಪೃಥುಃ ಕಲ್ಪಶ್ಚೈತ್ರಾಗ್ನಿಃ ಸವನಸ್ತಥಾ ॥ ೮ ॥
ಪೀವರಶ್ಚ ಸಮಾಖ್ಯಾತಾಃ ಸಪ್ತೈತೇ ಋಷಯೋ ಮತಾ: ।
ಸ್ವಾಚ್ಛಿಬಿರ್ನಾಮ ದೇವೇಂದ್ರಃ ಸಿದ್ಧಚಾರಣಸೇವಿತಃ ॥ ೯ ॥

---

೪. ಸ್ವಾರೋಚಿಷಮನ್ವಂತರದಲ್ಲಿ ವಿಪಶ್ಚಿತ್ತೆಂಬವನೇ ದೇವೇಂದ್ರನು. ಆಗ ಊರ್ಜ, ಸ್ತಂಭ, ಪ್ರಾಣ, ದಾಂತ, ಋಷಭ, ತಿಮಿರ, ಶಾರ್ವರೀವಾನ್, ಎಂಬ ಸಪ್ತರ್ಷಿಗಳು ಇರುವರು.

೫. ಮೂರನೆಯದಾದ ಉತ್ತರ (ಮ) ಮನ್ವಂತರದಲ್ಲಿ ಸುಧಾಮರೆಂಬ ದೇವತೆಗಳಿರುವರು. ಈಶ್ವರನ ಪ್ರಮಥಗಣಗಳಲ್ಲಿ ಪ್ರತರ್ದನ, ಶಿವ, ಸತ್ಯ, ವಶವರ್ತೀ, ಇವೇಮೊದಲಾದ ಹನ್ನೆರಡು ಗಣಗಳು ಅತ್ಯಂತ ಪ್ರಸಿದ್ಧವಾದವುಗಳು.

೬-೭. ಆ ಮನ್ವಂತರದ ದೇವೇಂದ್ರನ ಹೆಸರು ಸುದಾಂತಿಯೆಂದು. ಆತನು ಮಹಾಪರಾಕ್ರಮಿಯು. ರಜಸ್ಸು, ಗೋತ್ರ, ಅರ್ಧಬಾಹು, ಸವನ, ಅನಘ, ಸುತಪ, ಶುಕ್ರ ಇವರೇ ಸಪ್ತಮಹರ್ಷಿಗಳು.

೮-೯. ನಾಲ್ಕನೆಯದಾದ ತಾಮಸಮನ್ವಂತರದಲ್ಲಿ ಮರ್ತ್ಯ, ಸುಧಿಯರೆಂಬ ದೇವತೆಗಳು ನೆಲಸಿರುವರು. ಜ್ಯೋತಿ, ಧರ್ಮ, ಪೃಥು, ಕಲ್ಪ, ಚೈತ್ರಾಗ್ನಿ, ಸವನ, ಪೀವರರೆಂಬ ಏಳು ಜನ ಮಹರ್ಷಿಗಳಿರುವರು. ಸಿದ್ಧರಿಂದಲೂ ಚಾರಣರಿಂದಲೂ ಸೇವಿಸಲ್ಪಟ್ಟ ಶಿಬಿಯೇ ದೇವೇಂದ್ರನು.

---

* ಕೆಲವು ಪ್ರತಿಗಳಲ್ಲಿ ಈ ಎರಡು ಶ್ಲೋಕಗಳಿಲ್ಲ.

ದೇವರಾಜ್ಯಂ ಪರಿತ್ಯಜ್ಯ ಪರಂ ವೈರಾಗ್ಯಮಾಶ್ರಿತಃ !
ಜ್ಞಾತ್ವೈವಾಶಾಶ್ವತಂ ಸರ್ವಂ ಬೃಹಸ್ಪತಿಮಥಾಬ್ರವೀತ್ ॥ ೧೦ ॥
ಭಗವನ್ ಕಿಂ ಕರೋಮೀದಂ ರಾಜ್ಯಂ ತುಚ್ಛಸುಖಂ ಯತಃ ।
ಕೈವಲ್ಯಂ ಲಭತೇ ಕೇನ ತನ್ಮೇ ಬ್ರೂಹಿ ಗುರೋ ಸ್ಫುಟಂ ॥ ೧೧ ॥

॥ ಬೃಹಸ್ಪತಿರುವಾಚ ॥

ಅಸ್ತ್ಯನಂತಗುಣಾವಾಸಃ ಪರಾನಂದೈಕವಿಗ್ರಹಃ ।
ಧ್ಯಾತಃ ಕೈವಲ್ಯದಃ ಪುಂಸಾಂ ಮಹಾದೇವೋ ನ ಚಾಪರಃ ॥ ೧೨ ॥

ಮೋಹಪಾಶನಿಬದ್ಧಾನಾಂ ಮಹಾಮೋಹಾತ್ಮತಾಂ ಹರೇತ್ ।
ಸ್ಮರಣಾನ್ಮೋಚಕಾಸ್ತೇಷಾಂ ಉಮಾಪತಿರಿತಿ ಶ್ರುತಿಃ ॥ ೧೩ ॥

---

೧೦. ಒಂದು ಸಾರಿ, ಆ ದೇವೇಂದ್ರನು ದೇವರಾಜ್ಯಭಾರದಲ್ಲಿ ವೈರಾಗ್ಯವನ್ನು ಹೊಂದಿ, ಪ್ರಪಂಚವೆಲ್ಲವೂ ಅಸ್ಥಿರವೆಂಬುವನ್ನು ತಿಳಿದು ಗುರುವಾದ ಬೃಹಸ್ಪತ್ಯಾಚಾರ್ಯರೊಡನೆ ಹೀಗೆ ಹೇಳಿಕೊಂಡನು.

೧೧. ಎಲೈ ಆಚಾರ್ಯನೇ, ಈ ರಾಜ್ಯಸುಖವು ಕ್ಷಣಿಕವಾದದ್ದು. ಸ್ಥಿರವಾದ ಸುಖವನ್ನು ಕೊಡತಕ್ಕದ್ದು ಮೋಕ್ಷ. ಅಂತಹ ಮೋಕ್ಷವನ್ನು ಪಡೆಯುವ ಉಪಾಯವೊಂದನ್ನು ಸ್ಫುಟವಾಗಿ ನನಗೆ ವಿವರಿಸಬೇಕೆಂದು ಕೇಳಿಕೊಳ್ಳಲು, ಅದಕ್ಕೆ ಬೃಹಸ್ಪತ್ಯಾಚಾರ್ಯರು ಹೀಗೆ ಹೇಳತೊಡಗಿದರು.

೧೨. "ದೇವೇಂದ್ರನೇ ಸರ್ವರಿಗೂ ಮೋಕ್ಷವನ್ನು ಕೊಡತಕ್ಕವನು ಪರಮೇಶ್ವರನು. ಆತನು ಸಂಪೂರ್ಣಗುಣಪರಿಪೂರ್ಣನು. ಆನಂದಮಯನಾದವನು. ಇವನಲ್ಲದೆ ಮೋಕ್ಷವನ್ನು ಕೊಡತಕ್ಕವನು ಮತ್ತೊಬ್ಬನಿಲ್ಲ.

೧೩. ಸಂಸಾರಮೋಹದಲ್ಲಿ ಮುಳುಗಿರುವ ಅಜ್ಞಾನಿಗಳಿಗೆ ಕೇವಲ ಸ್ಮರಣೆಯಿಂದಲೇ ಅವರ ಅಜ್ಞಾನವನ್ನು ಹೋಗಲಾಡಿಸಿ, ಅವರಿಗೆ ಮೋಕ್ಷಸುಖವನ್ನು ಒದಗಿಸುವವನು ಪರಮೇಶ್ವರನು ಎಂಬುದಾಗಿ ವೇದಗಳು ಕೂಗುತ್ತಿವೆ.

ಯದ್ಬ್ರಹ್ಮ ಪರಮಂ ಜ್ಯೋತಿಃ ಪ್ರತಿಷ್ಠಾಕ್ಷರಮದ್ವಯಂ ।
ಸರ್ವಾನುಗ್ರಾಹಿಣಂ ಶಂಭುಂ ತಮಾಶು ಶರಣಂ ವ್ರಜ || ೧೪ ||

ಸ ಜ್ಯೋತಿಷಾಂ ಪರಂ ಜ್ಯೋತಿಃ ಆನಂದಂ ತಮಸಃ ಪರಂ !
ನ ಯಸ್ಮಾದಧಿಕಂ ಕಿಂಚಿತ್ತತ್ತತ್ವಂ ವಿದ್ಧಿ ಶಂಕರಂ || ೧೫ ||

ತಂ ಜಾನೀಹಿ ಪರಂ ಬ್ರಹ್ಮ ವಿಶ್ವಾತ್ಮಾನಂ ಮಹೇಶ್ವರಂ ।
ತದಾತ್ಮಕತಯಾ ಸರ್ವಂ ಜಾನೀಹ್ಯಸುರಸೂದನ || ೧೬ ||

ಆತ್ಮಾನಂ ಯೇ ಹಿ ಮನ್ಯಂತೇ ವಿಭಿನ್ನಂ ತ್ರಿಪುರದ್ವಿಷಃ ।
ತೇ ಪಶ್ಯಂತ್ಯೇವ ತಂ ದೇವಾ ನಾಽಽವರ್ತಂತೇ ಪುನಃ ಪುನಃ || ೧೭ ||

ಸರ್ವಸ್ಮಾದಧಿಕಃ ಶಂಭುಃ ಪರಮಾತ್ಮಾ ಮಹೇಶ್ವರಃ ।
ಇತಿ ಯೇ ನಿಶ್ಚಿತಧಿಯಃ ಕೃತಾರ್ಥಾಸ್ತೇ ಸುರಾಧಿಪ || ೧೮ ||

---

೧೪. ಶಂಭುವೇ ಬ್ರಹ್ಮರೂಪಿಯು. ಆತನು ಕೇವಲ ತೇಜೋಮಯನಾದವನು. ನಾಶರಹಿತನು. ಅಕ್ಷರಾತ್ಮಕನು. ಸರ್ವರನ್ನೂ ಒಂದೇ ರೀತಿಯಿಂದ ಉದ್ಧರಿಸತಕ್ಕವನು. ಇಂಥವನನ್ನು ಜಾಗ್ರತೆಯಾಗಿ ಶರಣುಹೊಂದು.

೧೫. ಆ ಪರಮೇಶ್ವರನು ಲೋಕದಲ್ಲಿರುವ ತೇಜಸ್ಸುಗಳಿಗೆಲ್ಲಾ ತೇಜಸ್ಸನ್ನು ಕೊಡತಕ್ಕವನು. ಅಜ್ಞಾನವನ್ನು ಧ್ವಂಸಮಾಡಿ ಜನರಿಗೆ ಆನಂದವನ್ನು ಕೊಡತಕ್ಕವನು. ಲೋಕದಲ್ಲಿ ಶಿವತತ್ತ್ವಕ್ಕಿಂತ ದೊಡ್ಡದಾದತತ್ತ್ವವು ಮತ್ತೊಂದಿಲ್ಲ.

೧೬. ಎಲೈ ರಾಕ್ಷಸ ನಾಶಕನೇ, ಆ ಮಹೇಶ್ವರನನ್ನು ವಿಶ್ವರೂಪಿಯೆಂದೂ ಪರಬ್ರಹ್ಮಸ್ವರೂಪಿಯೆಂದೂ ತಿಳಿ. ಆ ಶಂಕರನೇ ಪ್ರಪಂಚರೂಪದಿಂದ ಭಾಸಮಾನವಾಗುತ್ತಿರುವನು.

೧೭. ಯಾರು ತ್ರಿಪುರಾರಿಯಾದ ಪರಶಿವನೇ ಆತ್ಮನು ಎಂಬ ಭಾವನೆಯಿಂದ ಯಾವಾಗಲೂ ಪರಮೇಶ್ವರನನ್ನೇ ಭಜಿಸುವರೋ, ಅವರು ಆ ಮಹೇಶ್ವರನ ಸಾನ್ನಿಧ್ಯವನ್ನೇ ಪಡೆದು ಪುನಃ ಜನ್ಮಾದಿಗಳನ್ನು ಹೊಂದಲಾರರು.

೧೮. ಎಲ್ಲರಿಗೂ ದೊಡ್ಡವನು ಶಂಭುವು. ಪರಮಾತ್ಮ, ಮಹೇಶ್ವರ ಎಂಬ ಹೆಸರಿನಿಂದ ಪ್ರಕಾಶಿಸುತ್ತಿರುವನು ಆತನೇ. ಯಾರು ಈ ಭಾವನೆಯಿಂದ ಆ ಮಹೇಶ್ವರನನ್ನು ಧ್ಯಾನಿಸುವರೋ, ಅವರು ನಿಜವಾಗಿಯೂ ಧನ್ಯರು.

ದರ್ಶನಂ ತಸ್ಯ ಕಾಂಕ್ಷಂತೇ ಹರಿಬ್ರಹ್ಮಾದಯಸ್ಸುರಾಃ ।
ಯೋಗಿನೋ ನಿಯತಾತ್ಮಾನಸ್ತಮೀಶಂ ಶರಣಂ ವ್ರಜ ॥ ೧೯ ॥

ಮಹದಾದಿವಿಶೇಷಾಂತಂ ಜಗದ್ಯಸ್ಮಿಲ್ಲಯಂ ವ್ರಜೇತ್ ।
ಪುನರುತ್ಪದ್ಯತೇ ಯಸ್ಮಾತ್ ತಂ ಜಾನೀಹಿ ಪಿನಾಕಿನಂ ॥ ೨೦ ॥

ಲೀಲಾವಿಲಸಿತಂ ಯಸ್ಯ ವಿಶ್ವಮೇತಚ್ಚರಾಚರಂ ।
ತದಭಾವಾಚ್ಚ ವಿಲಯಸ್ತಂ ಜಾನೀಹಿ ಮಹೇಶ್ವರಂ ॥ ೨೧ ॥

ಯಸ್ಯಾಜ್ಞಯಾ ಸ್ಥಿತೋ ಬ್ರಹ್ಮಾ ಜಗಜ್ಜನನಕರ್ಮಣಿ ।
ಹರಿಶ್ಚ ಪಾಲನೇ ರುದ್ರಃ ಸಂಹಾರೇ ಚ ಸ ಶೂಲಭೃತ್ ॥ ೨೨ ॥

ಯಸ್ಯ ಪ್ರಸಾದಲೇಶೇನ ಮರ್ತ್ಯಾ ಮರಣಧರ್ಮಿಣಃ ।
ಭವಂತ್ಯೇವ ಹಿ ತೇಽಮರ್ತ್ಯಾ ಭಜಂತೇ ವೃಷಭಧ್ವಜಂ ॥ ೨೩ ॥

---

೧೯. ಮಹೇಶ್ವರನ ದರ್ಶನವನ್ನು ಬಯಸಿ, ವಿಷ್ಣು, ಬ್ರಹ್ಮ ಮೊದಲಾದ ದೇವತೆಗಳೂ ಪರಮಯೋಗಿಗಳೂ, ಜಿತೇಂದ್ರಿಯರಾದವರೂ ಬಹುವಾಗಿ ಪ್ರಯತ್ನ ಪಡುತ್ತಿರುವರು. ಅಂತಹ ಪರಮಾತ್ಮನನ್ನು ನೀನು ಶರಣುಹೊಂದು.

೨೦. ಜಗತ್ತಿನಲ್ಲಿ ಅಣು, ಮಹದ್ವಸ್ತುಗಳೆಲ್ಲವೂ ಮಹತ್ತತ್ತ್ವದಿಂದ ಹಿಡಿದು ವಿಶೇಷತತ್ವದವರೆಗೆ ಎಲ್ಲಾ ತತ್ತ್ವಗಳು ಆ ಪರಮೇಶ್ವರನಲ್ಲಿಯೇ ಲಯಹೊಂದುವುವು. ಪುನಃ ಅವನಿಂದಲೇ ಹುಟ್ಟುವುವು. ಇಂಥ ಜಗದಾಧಾರಭೂತನು ಮಹೇಶ್ವರನು, ಎಂಬುದನ್ನು ಚೆನ್ನಾಗಿ ತಿಳಿದುಕೊ.

೨೧. ಈ ಚರಾಚರಾತ್ಮಕವಾದ ಪ್ರಪಂಚವೆಲ್ಲವೂ ಪರಮೇಶ್ವರನ ಲೀಲೆಯಿಂದ ನಡೆಯುತ್ತಿದೆ. ಯಾವಾಗ ಪರಮೇಶ್ವರನ ಆಗ್ರಹಕ್ಕೆ ಜಗತ್ತು ಪ್ರಾಪ್ತವಾಗುವುದೋ, ಆಗ ಪ್ರಲಯವಾಗುವುದು. ಇದೇ ಮಹೇಶ್ವರನ ಲೀಲೆ.

೨೨. ಬ್ರಹ್ಮನು ಸೃಷ್ಟಿಮಾಡುವುದೂ, ವಿಷ್ಣುವು ರಕ್ಷಣೆಮಾಡುವುದೂ ರುದ್ರನು ಜಗತ್ಸಂಹಾರಮಾಡುವುದೂ, ಪರಮೇಶ್ವರನ ಆಜ್ಞೆಯಿಂದಲೇ, ಎಂಬುದನ್ನು ಮರೆಯಬೇಡ.

೨೩. ಮರಣಕ್ಕೆ ತುತ್ತಾಗತಕ್ಕ ಮನುಷ್ಯರು ಮಹೇಶ್ವರನ ಅನುಗ್ರಹವನ್ನು ಸಂಪಾದಿಸಿದ್ದೇಆದರೆ, ಅವರು ಮರಣಕ್ಕೆ ಎಂದೂ ವಶರಾಗದೇ ಅಮರ್ತ್ಯರೆನಿಸುವರು. ಅದಕ್ಕಾಗಿಯೇ ಮನುಷ್ಯರು ಸರ್ವದಾ ಪರಮೇಶ್ವರನನ್ನು ಭಜಿಸುತ್ತಿರುವರು.

ಕ್ಷಣಂ ಮುಹೂರ್ತಮಥವಾ ಧ್ಯಾತಃ ಸಂಪೂಜಿತಃ ಸ್ಮೃತಃ ।
ಪ್ರದದಾತ್ಯಾಶು ಕೈವಲ್ಯಂ ಯಸ್ತಂ ಭಜ ಮಹೇಶ್ವರಂ || ೨೪ ||

ತಸ್ಯೈವ ಮೂರ್ತಯಸ್ತಿಸ್ರೋ ಬ್ರಹ್ಮವಿಷ್ಣುಹರಾ ಇತಿ ।
ಸರ್ಗರಕ್ಷಾಗುಣಲಯೈಃ ತಮೀಶಂ ಶರಣಂ ವ್ರಜ || ೨೫ ||

ಯಸ್ಯಾಂತಸ್ಸ್ಥಾನಿ ಭೂತಾನಿ ಯೇನೇದಂ ಭ್ರಾಮ್ಯತೇ ಜಗತ್ ।
ಬ್ರಹ್ಮೇತಿ ಚ ಜಗುರ್ವೇದಾಸ್ತಂ ರುದ್ರಂ ಶರಣಂ ವ್ರಜ || ೨೬ ||

ಯಜ್ಞೈರ್ಯ ಇಜ್ಯತೇ ದೇವೋ ಮುಕ್ತಯೇ ವೇದವಾದಿಭಿಃ ।
ಕರ್ಮಣಾಂ ಫಲದಸ್ತೇಷಾಂ ಶರಣಂ ವ್ರಜ ತಂ ಹರಂ || ೨೭ ||

---

೨೪. ಯಾವ ಪರಮೇಶ್ವರನನ್ನು ಸ್ಥಿರಚಿತ್ತದಿಂದ ಒಂದು ಕ್ಷಣಕಾಲವಾಗಲಿ, ಮುಹೂರ್ತ ಮಾತ್ರವಾಗಲಿ, ಭಜಿಸುವರೋ, ಅವರಿಗೆ ಮಹೇಶ್ವರನು ಜಾಗ್ರತೆಯಾಗಿ ಮೋಕ್ಷವನ್ನು ಕೊಡುವನು. ಅಂಥ ಮಹೇಶ್ವರನನ್ನು ನೀನೂ ಶರಣು ಹೊಂದು.

೨೫. ಪರಮೇಶ್ವರನ ಮೂರ್ತಿಯೇ ಬ್ರಹ್ಮ, ವಿಷ್ಣು, ರುದ್ರರೆಂಬುದಾಗಿ, ಮೂರು ರೂಪದಿಂದ ಕಾಣುತ್ತಿದೆ. ಆ ಮೂರ್ತಿಗಳೂ ಸೃಷ್ಟಿ, ಸ್ಥಿತಿ, ಲಯಗಳೆಂಬ ಮೂರು ಕಾರ್ಯಗಳನ್ನು ನಡೆಸುತ್ತಿರುವುವು. ಇಂತಹ ಮೂರ್ತಿತ್ರಯಾತ್ಮಕನಾದ ಪರಶಿವನನ್ನು ಮರೆಹೋಗು.

೨೬. ಲೋಕದ ಚರಾಚರ ವಸ್ತುಗಳೆಲ್ಲವೂ ಯಾರಲ್ಲಿ ಅಡಕವಾಗಿವೆಯೋ ಯಾರಿಂದ ಈ ಕಾಲಚಕ್ರವು ಸುತ್ತುತ್ತಿರುವುದೋ, ಅಂಥ ಬ್ರಹ್ಮಪದವಾಚ್ಯನಾದ ವೇದಪ್ರತಿಪಾದ್ಯನಾದ ರುದ್ರನನ್ನು ಶರಣುಹೊಂದು.

೨೭. ಯಜ್ಞಗಳಲ್ಲಿ ಯಾರನ್ನು ವಿಶೇಷವಾಗಿ ಆರಾಧಿಸುವರೋ, ವೇದಜ್ಞರಾದವರು ಮುಕ್ತಿಗಾಗಿ ಯಾರನ್ನೇ ನಂಬಿರುವರೋ, ಕರ್ಮಗಳಿಗೆ ವಿಶೇಷವಾದ ಫಲವನ್ನು ಯಾರು ಕೊಡಲು ಸಮರ್ಥರಿರುವರೋ, ಅಂಥ ಹರನೇ ಸರ್ವರಿಗೂ ರಕ್ಷಕನು.

ಯೇ ವಿನಿದ್ರಾ ಜಿತಶ್ವಾಸಾ ಧ್ಯಾಯಂತಿ ಕ್ಷೀಣಕರ್ಮಿಣಃ ।
ತೇಷಾಂ ಪ್ರಜಾಯತೇ ಯತ್ತತ್ತತ್ವಂ ವಿದ್ಧಿ ಚ ಶಾಂಕರಂ ॥ ೨೮ ॥

ಅಜ್ಞಾನರಜ್ಜ್ವಾ ಬದ್ಧಾನಾಂ ಮನುಷ್ಯಾದಿಶರೀರಿಣಾಂ ।
ಮಹಾದೇವಾದೃತೇ ನಾನ್ಯಂ ಶಕ್ರ ಪಶ್ಯಾಮಿ ಮೋಚಕಂ ॥ ೨೯ ॥

ತಸ್ಮಾತ್ತ್ವಂ ತಪಸಾ ಶಕ್ರ ಸಮಾರಾಧಯ ಶಂಕರಂ ।
ಪ್ರಸನ್ನೋ ದಾಸ್ಯತಿ ಪದಂ ತವ ಕೈವಲ್ಯಮುತ್ತಮಂ ॥ ೩೦ ॥

ಏವಂ ಗುರೋರ್ನಿಗದಿತಂ ಶ್ರುತ್ವಾ ಸುರಪತಿಸ್ತದಾ ।
ಸಮಾರಾಧಯಿತುಂ ದೇವಂ ಯಯೌ ಬದರಿಕಾಶ್ರಮಂ ॥ ೩೧ ॥

ತತ್ರ ಗತ್ವಾ ಜಟೀ ಭೂತ್ವಾ ಭಸ್ಮನಿಷ್ಠೋ ಜಿತೇಂದ್ರಿಯಃ ।
ಮಂದಾಕಿನೀಜಲೇ ಸ್ನಾತ್ವಾ ಭಸ್ಮ ಚೈವಾಭಿಮಂತ್ರ್ಯ ಚ ॥ ೩೨ ॥

---

೨೮. ಪಾಪಕರ್ಮಗಳನ್ನು ದೂರಮಾಡಿ, ಶ್ವಾಸಧಾರಣೆಯಿಂದ ಚಿತ್ತಶುದ್ಧಿ ಮಾಡಿಕೊಂಡು ಯೋಗಿಗಳು, ಯಾವ ಒಂದು ದಿವ್ಯಜ್ಞಾನವನ್ನು ಪಡೆಯುವರೋ, ಆ ದಿವ್ಯತತ್ತ್ವವೇ ಶ್ರೇಷ್ಠವಾದ ಶಂಕರತತ್ತ್ವ.

೨೯. ಎಲೈ ದೇವೇಂದ್ರನೇ. ಮನುಷ್ಯರಿಗೆ ಅಜ್ಞಾನವೆಂಬುದೇ ಒಂದು ಹಗ್ಗ. ಆ ಹಗ್ಗದ ಕಟ್ಟಿಗೆ ಒಳಪಟ್ಟವರು ಅದರಿಂದ ಬಿಡಿಸಿಕೊಳ್ಳುವುದು ಬಹುಕಷ್ಟ. ಈ ಕಷ್ಟವನ್ನು ಸುಲಭವಾಗಿ ನಿವಾರಣೆಮಾಡತಕ್ಕವನು ಪರಮೇಶ್ವರನಲ್ಲದೆ ಮತ್ತಾರೂ ಸಮರ್ಥರಿಲ್ಲ.

೩೦. ಆದ್ದರಿಂದ ಎಲೈ ಇಂದ್ರನೇ! ನೀನು ಈಗಲೇ ಪರಮೇಶ್ವರನನು ಕುರಿತು ತಪಸ್ಸುಮಾಡು. ಶಾಶ್ವತವಾದ ಮೋಕ್ಷವನ್ನು ನಿನಗೆ ಪರಮೇಶ್ವರನು ದಯ ಪಾಲಿಸುವನು.

೩೧. ಹೀಗೆಂದು ಹೇಳಿದ ಬೃಹಸ್ಪತ್ಯಾಚಾರ್ಯರ ಮಾತುಗಳನ್ನು ಕೇಳಿ ದೇವೇಂದ್ರನು ಮಹೇಶ್ವರನನ್ನು ಕುರಿತು ತಪಸ್ಸುಮಾಡಲು ಬದರಿಕಾಶ್ರಮಕ್ಕೆ ಪ್ರಯಾಣ ಮಾಡಿದನು.

೩೨. ಅಲ್ಲಿ ಜಟೆಯನ್ನು ಬೆಳೆಸಿಕೊಂಡು, ಭಸ್ಮಧಾರಿಯಾಗಿ, ಇಂದ್ರಿಯ ವ್ಯಾಪಾರಗಳನ್ನು ತ್ಯಜಿಸಿ, ಗಂಗಾಸ್ನಾನ, ಭಸ್ಮಾಭಿಮಂತ್ರಣ ಮುಂತಾದ ಕಲಾಪಗಳಿಂದ ತಪಸ್ಸಿಗೆ ಆರಂಭಿಸಿದನು.

ಅಗ್ನಿರಿತ್ಯಾದಿಮಂತ್ರೈಶ್ಚ ಸಮುದ್ಧೂಲ್ಯ ಚ ವಿಗ್ರಹಂ ।
ಪೂಜಯಾಮಾಸ ದೇವೇಶಂ ಪುಷ್ಪೈಃ ಪತ್ರೈರ್ಮನೋಹರೈಃ ॥ ೩೩ ॥

ಶೈವೀಂ ವಿದ್ಯಾಂ ಜಪನ್ನಾಸ್ತೇ ಶಿವಧ್ಯಾನೈಕತತ್ಪರಃ ।
ಏವಂ ಗತಾನಿ ವರ್ಷಾಣಿ ಸಹಸ್ರಾಣಿ ಚತುರ್ದಶ ॥ ೩೪ ॥

ತಪಸಾ ದೇವರಾಜಸ್ಯ ಪ್ರಸನ್ನೋಽಭೂತ್ತತಶ್ಶಿವಃ ।
ಪ್ರಾಹ ತ್ರಿಪುರಹಾ ಶಕ್ರಂ ವರಂ ಬ್ರೂಹಿ ಶತಕ್ರತೋ ॥ ೩೫ ॥

ತಪಸಾಽನೇನ ತೀವ್ರೇಣ ಪ್ರಸನ್ನೋಽಹಂ ತವಾನಘ ।
*** ಈಪ್ಸಿತಂ ತೇ ಪ್ರದಾಸ್ಯಾಮಿ ತವ ಯದ್ಯಪಿ ದುರ್ಲಭಂ ॥ ೩೬ ॥**
ಮಯಿ ಪ್ರಸನ್ನೇ ತು ಹರೇ ನ ಕಿಂಚಿದಪಿ ದುರ್ಲಭಂ ॥ ೩೭ ॥

ಏವಂ ಶಂಭೋರ್ವಚಃ ಶ್ರುತ್ವಾ ಸ್ತುತ್ವಾ ತಂ ವಿವಿಧೈಃ ಸ್ತವೈಃ ।
ಕೃತಾಂಜಲಿಪುಟೋ ಭೂತ್ವಾ ಪ್ರಣಮ್ಯಾಹ ಮಹೇಶ್ವರಂ ॥ ೩೮ ॥

---

೩೩. ಈಶ್ವರನ ವಿಗ್ರಹವನ್ನು ಅಗ್ನಿಸೂಕ್ತದಿಂದ ಶುದ್ಧಿಮಾಡಿ, ಅನಂತರ ಹೂವು, ಪತ್ರೆ, ನಿವೇದನ ಇವೇ ಮೊದಲಾದ ಉಪಚಾರಗಳಿಂದ ಶಂಭುವನ್ನು ಪೂಜಿಸಲಾರಂಭಿಸಿದನು.

೩೪. ಪೂಜೆಯಾದ ಮೇಲೆ ಶಿವಮಂತ್ರವನ್ನೇ ಜಪಿಸುತ್ತಾ ಶಿವಧ್ಯಾನದಲ್ಲಿಯೇ ಕಾಲಕಳೆಯುತ್ತಿದ್ದನು. ಹೀಗೆ ಹದಿನಾಲ್ಕುಸಹಸ್ರ ವರ್ಷಗಳನ್ನು ತಪಸ್ಸಿನಿಂದಲೇ ಕಳೆದನು.

೩೫. ಈ ದೇವೇಂದ್ರನ ತಪಸ್ಸಿಗೆ ಮಹೇಶ್ವರನು ಮೆಚ್ಚಿದನು. ಒಡನೆಯೇ ಪ್ರತ್ಯಕ್ಷನೂ ಆಗಿ "ಎಲೈ ದೇವೇಂದ್ರನೇ ನಿನ್ನ ಭಕ್ತಿಗೆ ಮೆಚ್ಚಿರುವೆನು. ವರವನ್ನು ಕೇಳು." ಎಂದು ಸಂತೈಸಿ.

೩೬. ಪುನಃ "ಎಲೈ ಶಕ್ರನೇ, ನಿನಗೆ ಪ್ರಸನ್ನನಾಗಿರುವೆನು. ನಿನ್ನ ಘೋರವಾದ ತಪಸ್ಸಿಗೆ ಮೆಚ್ಚಿರುವೆನು. ನಿನ್ನ ಇಷ್ಟವೇನು? ಕೇಳು ನಾನು ತೃಪ್ತನಾಗಿರುವಾಗ ನಿನಗೆ ದುರ್ಲಭವಾದ ವಸ್ತುವೊಂದೂ ಇರಲಾರದು."

೩೮. ಎಂದು ಹೇಳಿದ ಪರಮೇಶ್ವರನ ಮಾತುಗಳನ್ನು ಕೇಳಿ ಇಂದ್ರನು ನಾನಾಸ್ತೋತ್ರಗಳಿಂದ ಈಶ್ವರನನ್ನು ಸ್ತುತಿಸಿ, ಕೈಜೋಡಿಸಿ ನಿಂತು, ಶಂಕರನನ್ನು ಕುರಿತು ಹೀಗೆ ಕೇಳಿಕೊಂಡನು.

---

* ಈ ಶ್ಲೋಕವು ಕೆಲವು ಪ್ರತಿಗಳಲ್ಲಿಲ್ಲ.

॥ ಇಂದ್ರ ಉವಾಚ ॥

ಭಗವನ್ ಕೃತಕೃತ್ಯೋಽಸ್ಮಿ ಭವತೋ ದರ್ಶನಾಚ್ಛಿವ ।
ಅಲಮನ್ಯೈರ್ವರೈಃ ಶಂಭೋ ಭಕ್ತಿರ್ಭವತು ಮೇ ತ್ವಯಿ ॥ ೩೯ ॥

ತವ ಭಕ್ತ್ಯಮೃತಾಸ್ವಾದಪರಾನಂದಸ್ಯ ದೇಹಿನಃ ।
ಭವೇತ್ಕಷ್ಟಂ ಕುತಶ್ಶಂಭೋ ಪೂರ್ಣಕಾಮೋ ಯತೋ ಹಿ ಸಃ ॥ ೪೦ ॥

ತಾವದೇವಾಸ್ಥಿರಂ ಚೇತಃ ಪರಿಭ್ರಮತಿ ವಸ್ತುಷು ।
ನ ಯಾವತ್ತ್ವಯಿ ದೇವೇಶ ಭಕ್ತಿರ್ಭವತಿ ದೇಹಿನಃ ॥ ೪೧ ॥

ತಾವದೇವ ಭವಾಂಭೋಧಿರ್ದುಸ್ತರೋ ದೇಹಿನಾಂ ಹರ ।
ತವ ಪಾದಾಂಬುಜೇ ಭಕ್ತಿಃ ಪರಾ ಯಾವನ್ನ ಲಭ್ಯತೇ ॥ ೪೨ ॥

---

೩೯. "ಭಗವಂತನಾದ ಮಹೇಶ್ವರನೇ, ನಿನ್ನ ಅಮೋಘವಾದ ದರ್ಶನದಿಂದ ನಾನು ಧನ್ಯನಾಗಿರುವೆನು. ನನಗೆ ಮತ್ತಾವ ವರವೂ ಬೇಡ. ನಿನ್ನಲ್ಲಿ ಸರ್ವದಾ ನನಗೆ ಭಕ್ತಿಯುಂಟಾಗುವಂತೆ ಅನುಗ್ರಹಿಸು.

೪೦. ನಿನ್ನ ಭಕ್ತಿಯೆಂಬುದೇ ಅಮೃತ. ಅದನ್ನು ಪಾನಮಾಡಿದವರಿಗೆ ಕಷ್ಟವೆಲ್ಲಿ ಬಂತು ? ನಿನ್ನ ಭಕ್ತನು ಯಾವಾಗಲೂ ಪೂರ್ಣಕಾಮನಲ್ಲವೇ ?

೪೧. ಓ ಶಂಭುವೇ ಯಾವಾಗ ನಿನ್ನಲ್ಲಿ ದೃಢವಾದ ಭಕ್ತಿಯುಂಟಾಗುವುದೋ ಅಲ್ಲಿಂದ ಮುಂದೆ ಮನುಷ್ಯನು ಇತರ ಅಧ್ರುವವಾದ ವಸ್ತುಗಳನ್ನು ಕಣ್ಣೆತ್ತಿಯೂ ನೋಡಲಾರನು. ಜಿತೇಂದ್ರಿಯತ್ವವು ಉಂಟಾಗುವುದು ನಿನ್ನ ಅಚಲವಾದ ಭಕ್ತಿಯಿಂದಲೇ ಅಲ್ಲವೇ ?

೪೨. ಪ್ರಾಣಿಗಳಿಗೆ ಸಂಸಾರವೆಂಬುದೇ ಒಂದು ಕಷ್ಟ ಸಮುದ್ರ. ಅದನ್ನು ಸುಲಭವಾಗಿ ದಾಟಲು ನಿನ್ನ ಪಾದದಲ್ಲಿ ಉತ್ತಮವಾದ ಭಕ್ತಿಯನ್ನಿಡಬೇಕು. ಅಂತಹ ಈಶ್ವರಭಕ್ತಿಯು ಉಂಟಾಗುವತನಕ ಮನುಷ್ಯರು ಸಂಸಾರ ದುಃಖವನ್ನು ದಾಟಲಾರರು.

ತಾವತ್ಪತತಿ ಸಂಸಾರಗರ್ತೇ ಜಂತುಃ ಪುನಃ ಪುನಃ ।
ಯಾವನ್ನ ತವ ಕಾರುಣ್ಯಲೇಶೋ ಭವತಿ ಶಂಕರ ॥ ೪೩ ॥

ಸಂಸಾರವಿಷವೃಕ್ಷೋ ಯಃ ಸರ್ವತೋಽತಿಭಯಂಕರಃ ।
ತವ ಭಕ್ತಿಕುಠಾರೇಣ ಚ್ಛಿದ್ಯತೇ ನಾನ್ಯಥಾ ಶಿವ ॥ ೪೪ ॥

ಇತಿ ಶಕ್ರವಚಃ ಶ್ರುತ್ವಾ ಕಾರುಣ್ಯಾದವಲೋಕ್ಯ ತಂ ।
ಸಮುತ್ಸ್ಪೃಶ್ಯ ತು ಪಾಣಿಭ್ಯಾಂ ಗಾಣಪತ್ಯಂ ದದೌ ಶಿವಃ ॥ ೪೫ ॥

ವಿರಂಚಿಪ್ರಮುಖಾ ದೇವಾ ಜಾಯಂತೇ ಕರ್ಮಗೌರವಾತ್ ।
ಪ್ರಳಯೇ ಚ ವಿನಶ್ಯಂತಿ ಭವಂತಿ ಚ ಪುನಃ ಪುನಃ ॥ ೪೬ ॥

---

೪೩. ಸಂಸಾರವೆಂಬ ಹಳ್ಳದಲ್ಲಿ ಮುಳುಗಿ ತೇಲುತ್ತಿರುವ ಸಂಸಾರಿಯು, ಯಾವ ದಿವಸ ನಿನ್ನ ಕರುಣೆಗೆ ಪಾತ್ರನಾಗುವನೋ ಅಂದಿನಿಂದ ಅವನು ಮುಕ್ತನಾಗಿ ಭವಬಂಧನಗಳಿಂದ ಪಾರಾಗುವನು.

೪೪. ಸಂಸಾರವೆಂಬುದು ಒಂದು ಘೋರವಾದ ವಿಷವೃಕ್ಷ. ಅದು ಭಯಂಕರವಾಗಿ ಸರ್ವತ್ರ ಹರಡಿದೆ. ನಿನ್ನ ಭಕ್ತಿಯೆಂಬ ಕೊಡಲಿಯಿಂದಲ್ಲದೆ ಮತ್ತಾವುದರಿಂದಲೂ ಅದನ್ನು ಛೇದಿಸಲು ಸಾಧ್ಯವಿಲ್ಲ.''

೪೫. ಹೀಗೆ ಪ್ರಾರ್ಥಿಸಿದ ಇಂದ್ರನನ್ನು ಪರಮೇಶ್ವರನು ದಯಾದೃಷ್ಟಿಯಿಂದ ಸ್ಪರ್ಶಮಾಡಿ, ಅವನನ್ನು ಉದ್ಧರಿಸಿ ಕೊನೆಗೆ ತನ್ನ ಪ್ರಮಥಗಣಗಳ ಒಡೆತನವನ್ನು ದಯಪಾಲಿಸಿದನು.

೪೬. ಬ್ರಹ್ಮನೇ ಮೊದಲಾದ ದೇವಶ್ರೇಷ್ಠರು ಒಂದೊಂದು ಕಾರ್ಯನಿರ್ವಹಣೆಕ್ಕಾಗಿ ಸೃಷ್ಟಿಸಲ್ಪಡುವರು. ಆ ಕಾರ್ಯವು ಅವರಿಂದ ಸಂಪೂರ್ಣವಾಗಿ ಆದಮೇಲೆ ಪ್ರಳಯವಾಗುವುದು. ಆಗ ಅವರೆಲ್ಲರೂ ನಷ್ಟನಾಗುತ್ತಾರೆ. ಪುನಃ ಸೃಷ್ಟ್ಯಾದಿಯಲ್ಲಿ ಉದ್ಭವಿಸುವರು.

ಸ್ವರ್ಗಂ ಗತ್ವಾ ಗತಾಃ ಶ್ವಭ್ರಂ ತಿರ್ಯಕ್ತ್ವಂ ಚ ಮನುಷ್ಯತಾಂ ।
ಪುನರ್ವಿರಂಚ್ಯಾದಿಪದಮೇವಂ ಚಕ್ರಪರಂಪರಾ ॥ ೪೭ ॥

ಶಂಭೋರ್ಗಣೇಶ್ವರಾ ಯೇ ಚ ನಾವರ್ತಂತೇ ಭವೇ ಪುನಃ ।
ಭೋಗಾನ್ಯಥೇಪ್ಸಿತಾನ್ ಭುಕ್ತ್ವಾ ಶಂಭೋಃ ಸಾಯುಜ್ಯಮಾಪ್ನುಯಾತ್ ॥
॥ ೪೮ ॥

ಸ್ವೇಚ್ಛಾವಿಗ್ರಹಿಣಸ್ಸರ್ವೇ ಸ್ವೇಚ್ಛಾಚಾರಾ ಗಣೇಶ್ವರಾಃ ।
ಶಿವೇನ ಸಹ ತೇ ಭೋಗಾನ್ ಭುಕ್ತ್ವಾ ಯಾಂತಿ ಶಿವಂ ಪದಂ ॥ ೪೯ ॥

ಏವಂ ದತ್ವಾ ವರಂ ಶಂಭುರ್ಗಾಣಾಪತ್ಯಂ ಸುದುರ್ಲಭಂ ।
ಸುರರಾಜಾಯ ಶಿಬಯೇ ತತ್ರೈವಾಂತರ್ಹಿತೋಽಭವತ್ ॥ ೫೦ ॥

ಗಾಣಪತ್ಯಂ ವರಂ ಲಬ್ಧ್ವಾ ಶಿಬಿರ್ಭಗವತೋ ದ್ವಿಜಾಃ ।
ಆಜ್ಞಯಾ ತಸ್ಯ ದೇವಸ್ಯ ಜಗಾಮ ಸ್ವಪುರೀಂ ತತಃ ॥ ೫೧ ॥

---

೪೭. ಪುಣ್ಯಶಾಲಿಗಳನೇಕರು ಸ್ವರ್ಗಕ್ಕೆ ಹೋಗುವರು. ಅಲ್ಲಿಂದ ಪುನಃ ಭೂಲೋಕಕ್ಕೆ ಬೀಳುವರು. ಅಲ್ಲಿ ತಿರ್ಯಗ್ಯೋನಿಗಳಲ್ಲಿ ಜನಿಸುವರು. ಪುನಃ ಮನುಷ್ಯ ಜನ್ಮತಾಳುವರು. ಮುಂದೆ ಬ್ರಹ್ಮಪದವಿಗೂ ಏರುವರು. ಹೀಗೆ ಚಕ್ರದ ರೀತಿಯಿಂದ ಬೇರೆ ಬೇರೆ ಸ್ಥಾನಗಳಲ್ಲಿ ಸುತ್ತುತ್ತಿರುವರು.

೪೮. ಆದರೆ ಪರಶಿವನ ಪ್ರಮಥಗಣಾಧಿಪತಿಗಳು ಮಾತ್ರ ಹಾಗಲ್ಲ. ಅವರಿಗೆ ಸಂಸಾರದ ಪರಿವರ್ತನೆಯೇ ಇಲ್ಲ ಇಷ್ಟಬಂದ ಸುಖಗಳನ್ನೆಲ್ಲಾ ಅನುಭವಿಸಿ ಕೊನೆಗೆ ಪರಶಂಭುವಿನ ಸಾಯುಜ್ಯವನ್ನು ಪಡೆಯುವುದೇ ಅವರ ಮುಖ್ಯಕೆಲಸ.

೪೯. ಗಣಾಧಿಪತಿಗಳೆಲ್ಲರೂ, ತಮ್ಮ ಇಷ್ಟಬಂದಂತಹ ದೇಹವನ್ನು ಧರಿಸ ಬಹುದು. ಇಷ್ಟಬಂದಂತೆ ನಡೆಯಬಹುದು. ಶಿವನು ಹೊಂದಬಹುದಾದ ಭೋಗ ಭಾಗ್ಯಗಳನ್ನು ಅನುಭವಿಸಿ ಕೊನೆಗೆ ಶಿವನಲ್ಲಿಯೇ ಐಕ್ಯವಾಗಬಹುದು.

೫೦. ಹೀಗೆ ಶಂಭುವು ದೇವೇಂದ್ರನಾದ ಶಿಬಿಚಕ್ರವರ್ತಿಗೆ ತನ್ನ ಗಾಣಪತ್ಯ ಪ್ರದಾನರೂಪವಾದ ವರವನ್ನು ಕೊಟ್ಟು, ಅಲ್ಲಿಯೇ ಅಂತರ್ಧಾನನಾದನು.

೫೧. ಶಿಬಿಚಕ್ರವರ್ತಿಯು ಶಿವನಿಂದ ಗಾಣಪತ್ಯಪದವಿಯನ್ನು ಪಡೆದು ಆ ಮಹಾದೇವನ ಅಪ್ಪಣೆಯಂತೆ ತನ್ನ ಊರಿಗೆ ಪ್ರಯಾಣಮಾಡಿದನು.

ಮಹಾದೇವಾರ್ಚನರತೋ ಮಹಾದೇವಕಥಾರತಃ ।
ಸ್ಥಿತ್ವಾ ಮನ್ವಂತರಂ ತತ್ರ ಚಂಡೋ ನಾಮ ಗಣೋಽಭವತ್ ॥ ೫೨ ॥

ವೃಷಧ್ವಜಸ್ತ್ರಿನೇತ್ರಶ್ಚ ಜಟಾಜೂಟೇಂದುಮಂಡಿತಃ ।
ಶುದ್ಧಸ್ಫಟಿಕಸಂಕಾಶಶ್ಚತುರ್ಬಾಹುಸ್ತ್ರಿಶೂಲಭೃತ್ ॥ ೫೩ ॥

ಅಕ್ಷಮಾಲಾಧರಃ ಖಡ್ಗೀ ಸರ್ವೇಷಾಮಭಯಪ್ರದಃ ।
ದ್ವೀಪಿಚರ್ಮಾಂಬರಧರಃ ಸರ್ವಾಭರಣಭೂಷಿತಃ ॥ ೫೪ ॥
ರರಾಜ ಶಂಕರಪದೇ ನಂದೀಶ್ವರ ಇವಾಪರಃ ।

ಏತದ್ವಃ ಕಥಿತಂ ಸರ್ವಂ ಶಿಬೇಸ್ತು ಚರಿತಂ ದ್ವಿಜಾಃ !
ಸರ್ವಪಾಪಕ್ಷಯಕರಂ ಸರ್ವಸಿದ್ಧಿಪ್ರದಂ ನೃಣಾಂ ॥ ೫೫ ॥

---

೫೨. ಅಲ್ಲಿ ಯಾವಾಗಲೂ ಪರಮೇಶ್ವರನನ್ನೇ ಆರಾಧಿಸುತ್ತಾ, ಮಹಾದೇವನ ಕಥೆಯನ್ನೇ ಯಾವಾಗಲೂ ಶ್ರವಣಮಾಡುತ್ತಾ ಆ ಮನ್ವಂತರ ಕಾಲವನ್ನೆಲ್ಲಾ ಕಳೆದು ಕೊನೆಗೆ ಚಂಡನೆಂಬ ಗಣಾಧಿಪತಿಯಾದನು.

೫೩. ಆಗ ಶಿಬಿಯು ಪರಶಿವನಂತೆಯೇ ವೃಷಭಧ್ವಜನಾದನು. ಅವನಿಗೂ ಮೂರು ಕಣ್ಣುಗಳು ಬಂದುವು. ಶಿರಸ್ಸಿನಲ್ಲಿ ಜಟಾಜೂಟವೂ, ಹಣೆಯಲ್ಲಿ ಚಂದ್ರನೂ ಶೋಭಿಸಲಾರಂಭಿಸಿದುವು. ಶುದ್ಧವಾದ ಸ್ಫಟಿಕದಂತೆ ಶುಭ್ರವಾದ ಅಂಗವುಳ್ಳವನಾಗಿ, ನಾಲ್ಕು ತೋಳುಗಳನ್ನೂ, ಕೈಯ್ಯಲ್ಲಿ ತ್ರಿಶೂಲವನ್ನೂ ಹಿಡಿದು ಶೋಭಿಸಲಾರಂಭಿಸಿದನು.

೫೪. ಕತ್ತಿನಲ್ಲಿ ಜಪಸರವನ್ನೂ, ಕೈಯ್ಯಲ್ಲಿ ಖಡ್ಗವನ್ನೂ ಧರಿಸಿ, ಸರ್ವರಿಗೂ ಧೈರ್ಯವನ್ನು ತೋರ್ಪಡಿಸುತ್ತಾ ದೇವತ್ವವನ್ನು ಪಡೆದನು. ಮತ್ತು ಪರಮೇಶ್ವರನ ಸನ್ನಿಧಿಯಲ್ಲಿ ವ್ಯಾಘ್ರಚರ್ಮವನ್ನು ಹೊದ್ದು ಸರ್ವಾಭರಣಗಳಿಂದ ಅಲಂಕೃತನಾಗಿ ನಿಂತಿದ್ದರೆ, ಸಾಕ್ಷಾತ್ ನಂದೀಶ್ವರನಂತೆಯೇ ಕಾಣುತ್ತಿದ್ದನು.

೫೫. ಎಲೈ ಶೌನಕಾದಿಗಳೇ, ನಿಮಗೆ ಶಿಬಿಚಕ್ರವರ್ತಿಯ ಕಥೆಯನ್ನೆಲ್ಲಾ ವಿಸ್ತಾರವಾಗಿ ಹೇಳಿರುವೆನು. ಈ ಚರಿತ್ರೆಯು ಸಮಸ್ತರಿಗೂ ಪಾಪನಿವಾರಕವಾದದ್ದು. ಮತ್ತು ಸಕಲೇಷ್ಟಾರ್ಥಗಳನ್ನು ಒದಗಿಸತಕ್ಕದ್ದು.

ಶ್ರದ್ಧಯಾ ಯೋ ಪಠಂತೀದಂ ಶಿಬೇಸ್ತು ಚರಿತಂ ದ್ವಿಜಾಃ !
ಪ್ರಾಪ್ನುವಂತ್ಯಶ್ವಮೇಧಸ್ಯ ಫಲಮಿತ್ಯಬ್ರವೀದ್ರವಿಃ || ೩೬ ||

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಶಿಬಿನಾಮಧೇಯ ದೇವೇಂದ್ರಚರಿತ ಕಥನಂ ನಾಮ ದ್ವಾತ್ರಿಂಶೋಽಧ್ಯಾಯಃ.

---

೩೬. ಯಾರು ಈ ಶಿಬಿಚರಿತ್ರೆಯನ್ನು ಭಕ್ತಿಯಿಂದ ಪಠಿಸುವರೋ, ಅವರು ಅಶ್ವಮೇಧಯಾಗದ ಫಲವನ್ನು ಹೊಂದುವರೆಂದು ಸೂರ್ಯದೇವನು ವೈವಸ್ವತ ಮನುವಿಗೆ ಹೇಳಿದನು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕಸಂವಾದ ರೂಪವಾಗಿ, ಶಿಬಿನಾಮಕ ದೇವೇಂದ್ರನ ಕಥೆಯನ್ನು ತಿಳಿಸುವ ಮೂವತ್ತೆರಡನೆಯ ಅಧ್ಯಾಯವು ಮುಗಿದುದು.

|| ಶ್ರೀ ||

|| ಶ್ರೀ ಶಿವಾಯನಮಃ ||

ಅಥ ಶ್ರೀ ಸೌರಪುರಾಣೇ ತ್ರಯಸ್ತ್ರಿಂಶೋಽಧ್ಯಾಯಃ

|| ಸೂತ ಉವಾಚ ||

ವಿಭುರ್ನಾಮಾ ಭವೇದಿಂದ್ರೋ ರೈವತಸ್ಯಾಂತರೇ ದ್ವಿಜಾಃ ।
ವೈಕುಂಠಾದ್ಯಾಃ ಸ್ಮೃತಾ ದೇವಾ ಗಣಾಶ್ಚತ್ವಾರ ಈರಿತಾಃ || ೧ ||

ಹಿರಣ್ಯರೋಮಾ ವಿಶ್ವಶ್ರೀರೂರ್ಧ್ವಬಾಹು ಸ್ತಥೈವ ಚ ।
ಇಂದ್ರಬಾಹುಃ ಸುಬಾಹುಶ್ಚ ಪರ್ಜನ್ಯಶ್ಚ ಮಹಾಮುನಿಃ || ೨ ||
ಸಪ್ತೈತ ಋಷಯಃ ಪ್ರೋಕ್ತಾ ಪ್ರಿಯವ್ರತಕುಲೋದ್ಭವಾಃ ।

ಮನೋಜವಃ ಸುರೇಂದ್ರೋಽಭೂಚ್ಚಾಕ್ಷುಷೇಽಪ್ಯಂತರೇದ್ವಿಜಾಃ || ೩ ||
ಆಯೋಃ ಪ್ರಸೂತಾ ಭಾವಾದ್ಯಾಃ ಕಥಿತಾ ದೇವತಾಗಣಾಃ ।

ಮೂವತ್ತುಮೂರನೆಯ ಅಧ್ಯಾಯವು.

೧. ಸೂತಮಹರ್ಷಿಗಳು ಮತ್ತೆ ಶೌನಕಾದಿಗಳೊಡನೆ ಹೇಳುವುದೇನೆಂದರೆ, "ಎಲೈ ಶೌನಕಾದಿಗಳೇ, ರೈವತಮನ್ವಂತರದಲ್ಲಿ ವಿಭುವೆಂಬ ಹೆಸರುಳ್ಳ ದೇವೇಂದ್ರನು ವೈಕುಂಠವೇ ಮೊದಲಾದ ದೇವತೆಗಳಿಂದ ಕೂಡಿ ರಾಜ್ಯಭಾರ ಮಾಡುತ್ತಿದ್ದನು. ಆ ದೇವತೆಗಳು ನಾಲ್ಕು ಗುಂಪುಗಳಾಗಿದ್ದರು.

೨. ಅದೇ ರೈವತಮನ್ವಂತರದಲ್ಲಿ ಹಿರಣ್ಯರೋಮ, ವಿಶ್ವಶ್ರೀ, ಊರ್ಧ್ವಬಾಹು, ಇಂದ್ರಬಾಹು, ಸುಬಾಹು, ಪರ್ಜನ್ಯ, ಮಹಾಮುನಿ ಎಂದು ಏಳು ಜನ ಮಹರ್ಷಿಗಳಿದ್ದರು. ಅವರೆಲ್ಲರೂ ಪ್ರಿಯವ್ರತ ಕುಲದಲ್ಲಿ ಸಂಜನಿಸಿದವರಾಗಿದ್ದರು. ಅವರೇ ಆಗ ಸಪ್ತರ್ಷಿಗಳು.

೩. ಚಾಕ್ಷುಷಮನ್ವಂತರದಲ್ಲಿ ಮನೋಜವನೆಂಬುವನೇ ದೇವೇಂದ್ರನಾದನು. ಆಯುವಿನ ವಂಶೋತ್ಪನ್ನರೇ ದೇವತೆಗಳೆಂದು ಪ್ರಸಿದ್ಧರಾಗಿದ್ದರು. ಆ ದೇವಗಣಗಳಲ್ಲಿ ಭಾವನೇ ಮೊದಲಾದ ಅನೇಕ ಹೆಸರಿನ ದೇವತೆಗಳಿದ್ದರು.

ಸುಮೇಧಾ ವಿರಜಾಶ್ಚೈವ ಹವಿಷ್ಮಾನುತ್ತಮೋ ಬುಧಃ ॥ ೪ ॥
ಅತ್ರಿನಾಮಾ ಸಹಿಷ್ಣುಶ್ಚ ಸಪ್ತೈತ ಋಷಯಃ ಸ್ಮೃತಾಃ ।

ಪುತ್ರೋ ವಿವಸ್ವತೋ ವಿಪ್ರಾ ಮನುರ್ವೈವಸ್ವತಃ ಸ್ಮೃತಃ ॥ ೫ ॥
ಸಾಂಪ್ರತಂ ವರ್ತತೇ ಯೋಽಸೌ ತತ್ರ ದೇವಾನ್ ಬ್ರವೀಮ್ಯಹಂ ॥
ಮರುದ್ಗಣಾಸ್ತಥಾಽಽದಿತ್ಯಾ ರುದ್ರಾಶ್ಚ ವಸವಃಸ್ಮೃತಾಃ ॥ ೬ ॥

ಪುರಂದರಸ್ತು ದೇವೇಂದ್ರೋ ಬಭೂವಾಸುರದರ್ಪಹಾ ।
ವಸಿಷ್ಠಃ ಕಶ್ಯಪಶ್ಚಾತ್ರಿರ್ಜಮದಗ್ನಿಶ್ಚ ಗೌತಮಃ ॥ ೭ ॥
ವಿಶ್ವಾಮಿತ್ರೋ ಭರದ್ವಾಜಃ ಸಪ್ತೈತೇ ಋಷಯೋ ಮತಾಃ ।

ಮನ್ವಂತರಾಣ್ಯತೀತಾನಿ ವರ್ತಮಾನಂ ಮಯಾ ದ್ವಿಜಾಃ ।
ಕಥಿತಾನ್ಯಥ ವಕ್ಷ್ಯಾಮಿ ಶೃಣುಧ್ವಂ ಪ್ರತಿಸಂಚರಂ ॥ ೮ ॥

---

೪. ಆ ಚಾಕ್ಷುಷ ಮನ್ವಂತರದಲ್ಲಿ, ಸುಮೇಧಸ್ಸು, ವಿರಜ, ಹವಿಷ್ಮಂತ, ಉತ್ತಮ, ಬುಧ, ಅತ್ರಿ, ಸಹಿಷ್ಣು, ಎಂಬದಾಗಿ ಏಳು ಜನ ಮಹರ್ಷಿಗಳಿದ್ದರು. ಇವರು ಚಾಕ್ಷುಷ ಮನ್ವಂತರದ ಸಪ್ತಋಷಿಗಳು.

೫-೬. ಈಗ ನಡೆಯುತ್ತಿರುವುದು ವೈವಸ್ವತಮನ್ವಂತರ. ವಿವಸ್ವತನೆಂಬ ಸೂರ್ಯದೇವನ ಮಗನೇ ವೈವಸ್ವತನು. ಈ ವೈವಸ್ವತಮನ್ವಂತರದಲ್ಲಿರುವ ಮರುದ್ಗಣಗಳನ್ನೂ, ಆದಿತ್ಯರನ್ನೂ, ರುದ್ರರನ್ನೂ, ಅಷ್ಟವಸುಗಳನ್ನೂ ಈಗ ತಿಳಿಸುವೆನು.

೭. ಈ ಮನ್ವಂತರದಲ್ಲಿ ಪುರಂದರನೆಂಬುವನೇ ದೇವೇಂದ್ರನು. ವಸಿಷ್ಠ ಕಶ್ಯಪ, ಅತ್ರಿ, ಜಮದಗ್ನಿ, ಗೌತಮ, ವಿಶ್ವಾಮಿತ್ರ, ಭರದ್ವಾಜ, ಇವರೇ ಈ ಮನ್ವಂತರದ ಸಪ್ತರ್ಷಿಗಳು.

೮. ಹೀಗೆ ಅನೇಕ ಮನ್ವಂತರಗಳು ಕಳೆದುವು. ಈಗ ನಡೆಯುತ್ತಿರುವ ವೈವಸ್ವತ ಮನ್ವಂತರದ ವಿಷಯವನ್ನೂ ನಿಮಗೆ ತಿಳಿಸಿರುವೆನು. ಇನ್ನು ಮುಂದೆ ಮುಂದೆ ಪ್ರಳಯದ ವಿಷಯವನ್ನು ಸ್ವಲ್ಪಮಟ್ಟಿಗೆ ವಿವರಿಸುವೆನು ಕೇಳಿರಿ.

ಚತುರ್ಧಾ ಕಥಿತಃ ಸೋಽಪಿ ಪುರಾಣೇಽಸ್ಮಿನ್ ದ್ವಿಜೋತ್ತಮಾಃ ।
ನಿತ್ಯೋ ನೈಮಿತ್ತಿಕಶ್ಚೈವ ಪ್ರಾಕೃತಾತ್ಯಂತಿಕೌ ತಥಾ ॥ ೯ ॥

ಯೋಽಯಂ ಭೂತಕ್ಷಯೋ ಲೋಕೇ ನಿತ್ಯಂ ನಿತ್ಯಸ್ತು ಸ ಸ್ಮೃತಃ ॥ ೧೦ ॥
ಕಲ್ಪಾಂತೇ ಯಸ್ತು ಸಂಹಾರೋ ನೈಮಿತ್ತಿಕ ಇಹೋಚ್ಯತೇ ।

ಮಹದಾದ್ಯಂ ವಿಶೇಷಾಂತಂ ಸ ಯದಾ ಯಾತಿ ಸಂಕ್ಷಯಂ ।
ಪ್ರಾಕೃತಃ ಪ್ರತಿಸರ್ಗೋಽಯಂ ಕಥ್ಯತೇ ಮುನಿಭಿರ್ದ್ವಿಜಾಃ ॥ ೧೧ ॥

ಆತ್ಯಂತಿಕಸ್ತು ಪ್ರಲಯೋ ಜ್ಞಾನಾದೇವ ಸ ಜಾಯತೇ ।
ತಚ್ಚ ಜ್ಞಾನಂ ಮಹೇಶಸ್ಯ ಭಕ್ತಿಲಭ್ಯಮಿತಿ ಶ್ರುತಿಃ ॥ ೧೨ ॥

ಚತುರ್ಯುಗಸಹಸ್ರಾಂತೇ ಸಂಪ್ರಾಪ್ತೇ ಭೂತಸಂಕ್ಷಯೇ ।
ಅನಾವೃಷ್ಟಿಸ್ತತಸ್ತೀವ್ರಾ ಜಾಯತೇ ಶತವಾರ್ಷಿಕೀ ॥ ೧೩ ॥
ವೃಕ್ಷಗುಲ್ಮಲತಾಃ ಸರ್ವಾಃ ಪೃಥಿವ್ಯಾಂ ಯಾಂತಿ ಸಂಕ್ಷಯಂ ॥ ೧೪ ॥

---

೯. ಆ ಪ್ರಳಯವು ನಿತ್ಯ, ನೈಮಿತ್ತಿಕ, ಪ್ರಾಕೃತ, ಆತ್ಯಂತಿಕವೆಂದು ನಾಲ್ಕು ವಿಧವಾಗಿ ವಿಭಾಗಿಸಲ್ಪಟ್ಟಿದೆ, ಎಂದು ಈ ಪುರಾಣದಲ್ಲಿ ವಿವೃತವಾಗಿದೆ.

೧೦. ನಿತ್ಯವೂ ನಡೆಯತಕ್ಕ ಪ್ರಾಣಿನಾಶವೇ ನಿತ್ಯಪ್ರಳಯ. ಪ್ರತಿಕಲ್ಪದ ಕೊನೆಯಲ್ಲಿ ನಡೆಯುವ ಪ್ರಾಣಿನಾಶವು ನೈಮಿತ್ತಿಕ ಪ್ರಳಯವೆನಿಸುವುದು.

೧೧. ಮಹತ್ತತ್ತ್ವವೇ ಆದಿಯಾಗಿ ವಿಶೇಷಾಂತವಾಗಿರುವ ಸಮಸ್ತ ಭೂತಗಳ ನಾಶವೇ ಪ್ರಾಕೃತಪ್ರಳಯವು ಎಂದು ಸಮಸ್ತ ಋಷಿಗಳೂ ಹೇಳುವರು. ಕಲ್ಪಾಂತಗಳಲ್ಲಿ ಪ್ರಾಕೃತಪ್ರಳಯವಿರುವುದಿಲ್ಲ.

೧೨. ಜ್ಞಾನಬಲದಿಂದ ದೇಹತ್ಯಾಗಮಾಡಿ ಮೋಕ್ಷವನ್ನು ಪಡೆಯುವುದು ಆತ್ಯಂತಿಕ ಪ್ರಳಯವು. ಇದು ಈಶ್ವರ ಭಕ್ತರಿಗೆ ಮಾತ್ರ ದೊರಕುವುದೆಂದು ವೇದಗಳು ಸಾರುತ್ತಿವೆ.

೧೩-೧೪. ಸಹಸ್ರಸಾರಿ ನಾಲ್ಕು ಯುಗಗಳು ಪರಿವರ್ತನೆಯಾದಮೇಲೆ ಸಮಸ್ತ ಪ್ರಾಣಿಗಳೂ ನಾಶವಾಗುವುವು. ಅದಕ್ಕೆ ಮುಂಚೆ ನೂರು ವರ್ಷಕಾಲ ಅನಾವೃಷ್ಟಿಯುಂಟಾಗಿ ಮರ, ಬಳ್ಳಿ, ಪೊದರು ಇವೆಲ್ಲವೂ ದಗ್ಧವಾಗುವುವು.

ಗಭಸ್ತಿಮಾಲೀ ಭಗವಾನಥ ಸಪ್ತರಥೋऽಭವತ್ ।
ರಶ್ಮಿಭಿಸ್ಸಾಗರಾಂಭಾಂಸಿ ತದಾ ಪಿಬತಿ ಭಾಸ್ಕರಃ ॥ ೧೫ ॥

ದೀಪ್ತಾಶ್ಚ ರಶ್ಮಯಸ್ತೇನ ಭವಂತಿ ಮುನಿಪುಂಗವಾಃ ।
ಭವಂತಿ ಸೂರ್ಯಾಃ ಸಪ್ತೈತೇ ಸರ್ವತೋ ರಶ್ಮಿಸಂಕುಲಾಃ ॥ ೧೬ ॥

ತೇಷಾಂ ರಶ್ಮಿಪ್ರತಾಪೇನ ದಗ್ಧಾ ಭವತಿ ಮೇದಿನೀ ।
ದ್ವೀಪೈಶ್ಚ ಪರ್ವತೈಸ್ಸಾರ್ಧಂ ಸಾಗರೈಶ್ಚ ದ್ವಿಜೋತ್ತಮಾಃ ॥ ೧೭ ॥

ಸೂರ್ಯತೇಜೋಗ್ನಿದಗ್ಧಾನಾಂ ಭೂತಾನಾಂ ಚ ಪರಸ್ಪರಂ ।
ಏಕತ್ವಮುಪಜಾತಾನಾಮಗ್ನಿರೇಕಸ್ತತೋऽಭವತ್ ॥ ೧೮ ॥

ಜ್ವಾಲಾಭಿರಖಿಲಂ ವಿಶ್ವಂ ನಿರ್ದಹತ್ಯಾಶು ಪಾವಕಃ ।
ಸ ದಗ್ಧ್ವಾ ಪೃಥಿವೀಂ ಸರ್ವಾಂ ರುದ್ರತೇಜೋವಿಜೃಂಭಿತಃ ॥ ೧೯ ॥

---

೧೫. ಆಗಲೇ ಸೂರ್ಯದೇವನು ಏಳು ರಥಗಳಿಂದ ಕೂಡಿ, ತನ್ನ ಕ್ರೂರಕಿರಣಗಳಿಂದ ಸಮಸ್ತ ಸಮುದ್ರಗಳ ನೀರನ್ನೂ ಕುಡಿಯುವನು. ಅಂದರೆ ಸಮುದ್ರಗಳು ಸಹ ಒಣಗಿಹೋಗುವುವು.

೧೬. ಈ ಏಳು ರಥಗಳಲ್ಲೂ ಸೂರ್ಯನು ಏಳು ವಿಧವಾಗಿ ತನ್ನ ಉರಿಯುವ ಕಿರಣಗಳನ್ನು ಭೂಮಿಯ ಮೇಲಕ್ಕೆ ಎರಚುವನು. ಭೂಮಿಯೆಲ್ಲವೂ ಸೂರ್ಯಕಿರಣದಿಂದ ಆಚ್ಛಾದಿತವಾಗುವುದು.

೧೭. ಆ ಕಿರಣಗಳ ಸಂಘರ್ಷಣದಿಂದ ಭೂಮಿಯೆಲ್ಲವೂ ಸುಟ್ಟು ಭಸ್ಮವಾಗುವುದು. ಸಮಸ್ತ ದ್ವೀಪಗಳೂ, ಪರ್ವತಗಳೂ, ಸಾಗರಗಳೂ ಒಣಗಿಹೋಗುವುವು.

೧೮. ಹೀಗೆ ಸೂರ್ಯನ ತೇಜಸ್ಸಿನಿಂದ ಸಮಸ್ತವಾದ ಪಂಚಭೂತಗಳು ದಗ್ಧವಾಗಿ ಒಂದೇ ಆಕಾರಕ್ಕೆ ಬರುವುದು. ಆಗ ಪ್ರಲಯಕಾಲಾಗ್ನಿಯು ಸರ್ವತ್ರ ವ್ಯಾಪಿಸಿ,

೧೯. ತನ್ನ ಜ್ವಾಲಾಮಾಲೆಯಿಂದಲೂ ರುದ್ರನ ತೇಜಸ್ಸಿನಿಂದಲೂ ಸಮಸ್ತ ಪ್ರಪಂಚವನ್ನೂ ಕೂಡಿ ಸುಟ್ಟು ಭಸ್ಮಮಾಡುತ್ತದೆ.

ದಿವಂ ದಗ್ಧ್ವಾಥ ಪಾತಾಲಂ ದಂದಹೀತಿ ದ್ವಿಜೋತ್ತಮಾಃ ।
ಉತ್ತಿಷ್ಠಂತಿ ಶಿಖಾಸ್ತಸ್ಯ ಶತಯೋಜನಮಾಯತಾಃ ॥ ೨೦ ॥

ತೇಜಸಾ ತಸ್ಯ ಕಾಲಾಗ್ನೇರಗ್ನಿಃ ಸಂವರ್ತಕಃ ಸ್ವಯಂ ।
ದಗ್ಧ್ವಾ ಸ ಚತುರೋ ಲೋಕಾನ್ ಸಯಕ್ಷೋರಗರಾಕ್ಷಸಾನ್ ॥ ೨೧ ॥

ತಪ್ತಾಯಃಪಿಂಡವತ್ಸರ್ವಂ ಜಗದೇತತ್ಪ್ರಕಾಶತೇ ।
ಉತ್ತಿಷ್ಠಂತೇ ತತೋ ಮೇಘಾಸ್ತಡಿದ್ಭಿಶ್ಚ ಸಮಂತತಃ ॥ ೨೨ ॥

ಸಂವರ್ತಕೋಪಮಾಃ ಸರ್ವೇ ನಾನಾವರ್ಣಾ ಭಯಂಕರಾಃ ।
ಜಾಯಂತೇ ಭಾಸ್ಕರಾದ್ಘೋರಾ ರಾವಿಣೋ ಮುನಿಪುಂಗವಾಃ ॥ ೨೩ ॥

ತತೋ ವರ್ಷಂ ಪ್ರಮುಂಚಂತಿ ಬಿಂದುಭಿರ್ಗಜಸನ್ನಿಭೈಃ ।
ಬ್ರಹ್ಮಣಾ ಪ್ರೇರಿತಾ ವೃಷ್ಟಿರ್ಜಾಯತೇ ಶತವಾರ್ಷಿಕೀ ॥ ೨೪ ॥

---

೨೦. ಅದೇ ಅಗ್ನಿಯು ಭೂಮಿಯನ್ನು ಸುಟ್ಟು, ಅನಂತರ ಸ್ವರ್ಗ ಮತ್ತು ಪಾತಾಳಲೋಕಗಳನ್ನೂ ಸುಡುತ್ತದೆ. ಅಲ್ಲಿಂದ ಆ ಅಗ್ನಿಯ ಜ್ವಾಲೆಯು ನೂರು ಯೋಜನ ವಿಸ್ತಾರವುಳ್ಳದ್ದಾಗಿ ಹರಡುತ್ತದೆ.

೨೧. ಆ ಪ್ರಲಯಾಗ್ನಿಯಿಂದ ಸಂವರ್ತಕವೆಂಬ ಮತ್ತೊಂದು ಅಗ್ನಿಪ್ರಭೇದವು ಪ್ರಜ್ವಲಿಸಿ, ಯಕ್ಷ, ಉರಗ, ರಾಕ್ಷಸ, ಭೂ, ಈ ನಾಲ್ಕು ಲೋಕಗಳನ್ನೂ ಪುನಃ ದಹಿಸಲು ಆರಂಭಿಸುವುದು.

೨೨. ಆಗ ಭೂಮಿಯು ಕಾದಕಬ್ಬಿಣದ ಚಂಡಿನಂತೆ ಉರಿಯುತ್ತಿರುತ್ತದೆ. ಮೇಘಗಳೆಲ್ಲವೂ ಸರ್ವದಾ ಮಿಂಚಿನಿಂದ ಕೂಡಿ ಹೊಳೆಯುತ್ತಿರುತ್ತವೆ.

೨೩. ಪ್ರಳಯಕಾಲಕ್ಕೆ ತಕ್ಕಂತೆ ಸಮಸ್ತ ವಸ್ತುಗಳೂ ಭಯಂಕರವಾಗಿ ಕಾಣುತ್ತವೆ. ಸೂರ್ಯಕಿರಣಗಳಿಂದ ಕಾದು ಎಲ್ಲವೂ ಉಗ್ರವಾಗಿಯೇ ತೋರುತ್ತವೆ. ಇದು ಅಗ್ನಿಪ್ರಳಯ.

೨೪. ಇದಾದ ಮೇಲೆ ಬ್ರಹ್ಮಪ್ರೇರಿತವಾಗಿ ಆನೆಯ ಗಾತ್ರ ಹನಿಯುಳ್ಳ ಘೋರವಾದ ಮಳೆಯು ನೂರು ವರ್ಷ ಪರ್ಯಂತ ಬೀಳಲಾರಂಭಿಸುವುದು. ಇದು ಜಲಪ್ರಳಯ.

ಜಲೌಘೈರ್ನಾಶಮಾಯಾಂತಿ ತದಾ ಕಲ್ಪಾಂತಪಾವಕಾಃ ।
ದ್ವೀಪೈಶ್ಚ ಪರ್ವತೈರ್ಯುಕ್ತಾ ಪೃಥಿವೀ ಪೂರ್ಯತೇ ಜಲೈಃ ॥ ೨೫ ॥

ವಿಲೀಯತೇ ಧರಾ ಚೈವ ಸರ್ವಾ ಏವ ದ್ವಿಜೋತ್ತಮಾಃ ।
ತಸ್ಮಿನ್ನೇಕಾರ್ಣವೇ ಘೋರೇ ದೇವದೇವಃ ಪ್ರಜಾಪತಿಃ ॥ ೨೬ ॥

ಯೋಗನಿದ್ರಾಂ ಸಮಾಸ್ಥಾಯ ಶೇತೇ ಧ್ಯಾಯನ್ಮಹೇಶ್ವರಂ ।
ಏಷ ನೈಮಿತ್ತಿಕಃ ಪ್ರೋಕ್ತಃ ಪ್ರಲಯೋ ಮುನಿಪುಂಗವಾಃ ॥ ೨೭ ॥

ಅತಃ ಶೃಣುಧ್ವಂ ವಕ್ಷ್ಯಾಮಿ ಪ್ರಾಕೃತಃ ಪ್ರಲಯೋ ಯಥಾ ।
ಕಾಲಾಗ್ನಿರುದ್ರೋ ಭಗವಾನ್ ಪರಾರ್ಧದ್ವಿತಯೇ ಗತೇ ॥ ೨೮ ॥

ಬ್ರಹ್ಮಾಂಡಂ ಭಸ್ಮಸಾತ್ಕೃತ್ವಾ ತಾಂಡವಂ ನಾಟ್ಯಮಾಸ್ಥಿತಃ ।
ಪೀತ್ವಾ ತತ್ಪರಮಾನಂದಂ ಸಮಾಲೋಕ್ಯ ಗಿರೀಂದ್ರಜಾಂ ॥ ೨೯ ॥

---

೨೫. ಆ ವೃಷ್ಟಿಪ್ರವಾಹದಿಂದ ಕಲ್ಪಾಂತಕಾಲದ ಅಗ್ನಿಯು ನಾಶವಾಗುತ್ತದೆ. ಸಮಸ್ತ ದ್ವೀಪಗಳೂ, ಪರ್ವತಗಳೂ, ನೀರಿನಿಂದ ತುಂಬಲ್ಪಡುತ್ತವೆ.

೨೬. ಸಮಸ್ತ ಭೂಮಿಯು ನೀರಿನಲ್ಲಿ ಅಂತರ್ಹಿತವಾಗುತ್ತದೆ. ಲೋಕವೆಲ್ಲಾ ಒಂದು ಸಾಗರದಂತೆ ತೋರುತ್ತದೆ. ಅಂಥ ಜಲಮಯವಾದ ಪ್ರಪಂಚದಲ್ಲಿ ಜಗತ್ಪತಿಯಾದ ಪರಬ್ರಹ್ಮನು,

೨೭. ಯೋಗನಿದ್ರೆಯನ್ನು ಪಡೆದು, ಪರಮೇಶ್ವರನನ್ನು ಸ್ಮರಿಸುತ್ತಾ ಜಲದಲ್ಲಿ ನೆಲಸುವನು. ಇದನ್ನೇ ನೈಮಿತ್ತಿಕಪ್ರಲಯವೆನ್ನುವರು.

೨೮ ಎಲೈ ಶೌನಕಾದಿಗಳೇ, ಇನ್ನು ಪ್ರಾಕೃತಪ್ರಲಯದ ವಿಷಯವನ್ನು ಹೇಳುವೆನು ಕೇಳಿರಿ. ಎರಡು ಪರಾರ್ಧವರ್ಷಗಳು ಕಳೆದ ಮೇಲೆ ಕಾಲಾಗ್ನಿಸ್ವರೂಪನಾದ ರುದ್ರನು,

೨೯. ಬ್ರಹ್ಮಾಂಡವನ್ನೆಲ್ಲಾ ಭಸ್ಮವನ್ನಾಗಿಮಾಡಿ ತಾಂಡವನಾಟ್ಯವಾಡುವನು. ಆ ನಾಟ್ಯಾನಂದವನ್ನನುಭವಿಸುತ್ತಾ, ತನ್ನ ಪತ್ನಿಯಾದ ಪಾರ್ವತಿಯನ್ನು ನೋಡಿ ಶಾಂತನಾಗುವನು.

ಏಕಾ ಸಾ ಪರಮಾ ಶಕ್ತಿರ್ನಿತ್ಯಾ ಹೈಮವತೀ ಶಿವಾ ।
ಏಕಏವ ಮಹಾದೇವಸ್ತಯೋರ್ಭೇದೋ ನ ವಿದ್ಯತೇ ॥ ೩೦ ॥

ತಿಷ್ಠತ್ಯೇಕಾ ತದಾ ತಸ್ಮಿನ್ ಏಕಏವ ಮಹೇಶ್ವರಃ ।
ಪಾರ್ವತ್ಯಾ ಪರಯಾ ಶಕ್ತ್ಯಾ ನಾನ್ಯಃ ಕಶ್ಚಿದಿತಿ ಶ್ರುತಿಃ ॥ ೩೧ ॥

ಸಹಸ್ರಶೀರ್ಷಾ ಪುರುಷಃ ಸಹಸ್ರಾಕೃತಿರೀಶ್ವರಃ ।
ಸಹಸ್ರನಯನೋ ದೇವಃ ಸಹಸ್ರಚರಣಃ ಶಿವಃ ॥ ೩೨ ॥

ಸಹಸ್ರಬಾಹುರ್ವಿಶ್ವಾತ್ಮಾ ತ್ರಿಶೂಲೀ ದೀಪ್ತಲೋಚನಃ ।
ದಂಷ್ಟ್ರಾಕರಾಲವದನಃ ಪರಬ್ರಹ್ಮತನುಃ ಶಿವಃ ॥ ೩೩ ॥

ದಗ್ಧ್ವಾ ಬ್ರಹ್ಮಾದಿಕಂ ವಿಶ್ವಂ ಸ್ವತೇಜಸ್ಯಧಿತಿಷ್ಠತಿ ।
ಪೃಥಿವೀ ವಿಲಯಂ ಯಾತಿ ಸ್ವಗುಣೈರಪ್ಸು ಸಂಯುತಾ ॥ ೩೪ ॥

---

೩೦. ಪಾರ್ವತಿಯು ಪರಶಕ್ತಿಸ್ವರೂಪಳು. ನಿತ್ಯರೂಪಿಣಿಯು. ಮಹಾದೇವನು ಪ್ರಪಂಚರೂಪಿಯು. ಆದ್ದರಿಂದ ಶಿವಪಾರ್ವತಿಯರಿಗೆ ಎಂದೂ ಭೇದವಿಲ್ಲ.

೩೧. ಆ ಪ್ರಾಕೃತಪ್ರಳಯದಲ್ಲಿ ಪರಾಶಕ್ತಿರೂಪಿಣಿಯಾದ ಪಾರ್ವತಿಯೊಡನೆ ಪರಮೇಶ್ವರನೊಬ್ಬನೇ ನಿಲ್ಲುವನೆಂದು ವೇದಗಳು ಸಾರುತ್ತಿವೆ.

೩೨. ಪರಮೇಶ್ವರನಿಗೆ ಸಹಸ್ರ ತಲೆಗಳಿವೆ. ಸಹಸ್ರ ಆಕಾರಗಳಿವೆ. ಕಣ್ಣುಗಳು ಕಾಲುಗಳೂ ಸಹಸ್ರ ಸಂಖ್ಯೆಯಲ್ಲಿವೆ. ಇಂತಹ ಅಪ್ರಮೇಯನು ಪರಮೇಶ್ವರನು.

೩೩. ವಿಶ್ವರೂಪಿಯಾದ ಪರಶಿವನಿಗೆ ಸಹಸ್ರ ಬಾಹುಗಳಿವೆ. ಕೈಯ್ಯಲ್ಲಿ ತ್ರಿಶೂಲವಿದೆ. ಕಣ್ಣುಗಳು ತೇಜಸ್ಸಿನಿಂದ ತುಂಬಿವೆ. ಭಯಂಕರವಾದ ಕೋರೆ ದಾಡೆಗಳಿಂದ ಕೂಡಿ ಪರಶಿವನ ರೂಪು ಉಗ್ರವಾಗಿದೆ. ಹೀಗೆ ಪರಬ್ರಹ್ಮರೂಪಿಯಾದ ಈಶ್ವರನು ತೋರಿಬರುವನು.

೩೪ ಅಂತೂ ಪರಮೇಶ್ವರನು ಪ್ರಾಕೃತಪ್ರಳಯದಲ್ಲಿ ಚತುರ್ಮುಖ ಬ್ರಹ್ಮನೇ ಮೊದಲಾದ ಸಕಲ ಜಗತ್ತನ್ನೂ ನಾಶಮಾಡಿ ತನ್ನ ತೇಜಸ್ಸಿನಲ್ಲಿ ಮಾತ್ರ ತಾನು ಉಳಿದಿರುವನು. ಭೂಮಿಯಾದರೋ ತನ್ನ ಗಂಧಾದಿಗುಣಗಳನ್ನು ಕಳೆದು ಕೊಂಡು ನೀರಿನಲ್ಲಿ ಲೀನವಾಗುವುದು.

ಜಲಮಗ್ನೌ ಲಯಂ ಯಾತಿ ವಾಯೌ ತೇಜಶ್ಚ ಲೀಯತೇ ।
ವ್ಯೋಮ್ನಿ ವಾಯುರ್ಲಯಂ ಯಾತಿ ಭೂತಾದೌ ವ್ಯೋಮ ಲೀಯತೇ ॥

ಇಂದ್ರಿಯಾಣಿ ಚ ಸರ್ವಾಣಿ ತೈಜಸೇ ಯಾಂತಿ ಸಂಕ್ಷಯಂ ।
ವೈಕಾರಿಕೇ ದೇವಗಣಾಃ ಪ್ರಲಯಂ ಯಾಂತಿ ಸತ್ತಮಾ: ॥ ೩೬ ॥

ಅಹಂಕಾರೋ ಲಯಂ ಯಾತಿ ಮಹತಿ ತ್ರಿವಿಧಶ್ಚ ಯಃ ।
ಮಹತ್ತತ್ತ್ವಂ ಲಯಂ ಯಾತಿ ವಿರಂಚೌ ಮುನಿಪುಂಗವಾಃ ॥ ೩೭ ॥

ಅವ್ಯಕ್ತೇ ನಿಲಯಸ್ತಸ್ಯ ಬ್ರಹ್ಮಣಃ ಪದ್ಮಜನ್ಮನಃ ।
ಏವಂ ಭೂತೈಶ್ಚ ತತ್ತ್ವಾನಿ ಸಂಹೃತ್ಯ ಭಗವಾನ್ ಶಿವಃ ॥ ೩೮ ॥

ಆಸ್ತೆ ಸ ಭಗವಾನೇಕೋ ನ ದ್ವಿತೀಯೋಸ್ತಿ ಕಶ್ಚನ ।
ಇಚ್ಛಯಾ ಪಾರ್ವತೀಶಸ್ಯ ಪ್ರಲಯೋ ನಾನ್ಯಥಾ ದ್ವಿಜಾಃ ॥ ೩೯ ॥

---

೩೫. ನೀರು ಅಗ್ನಿಯಲ್ಲಿ ಲಯವಾಗುವುದು. ಅಗ್ನಿಯು ವಾಯುವಿನಲ್ಲಿ ಅಡಗುವುದು. ವಾಯುವು ಆಕಾಶದಲ್ಲಿ ಅಂತರ್ಭಾವವಾಗುವುದು. ಆಕಾಶವು ಸೂಕ್ಷ್ಮಪಂಚಭೂತಗಳಲ್ಲಿ ಐಕ್ಯವಾಗುವುದು.

೩೬. ಪಂಚೇಂದ್ರಿಯಗಳೂ ತೇಜಸ್ಸಿನಲ್ಲಿ ನಾಶವಾಗುವುವು. ದೇವಗಣಗಳೆಲ್ಲವೂ, ವಿಕಾರವಾದ ವಸ್ತುಗಳಂತೆ ನಷ್ಟವಾಗುವುವು.

೩೭. ಮೂರು ವಿಧವಾದ ಅಹಂಕಾರಗಳೂ, ಮಹತ್ತತ್ತ್ವದಲ್ಲಿ ಲಯವಾಗುವುವು. ಆ ಮಹತತ್ತ್ವವು ಬ್ರಹ್ಮನಲ್ಲಿ ಸೇರಿಹೋಗುವುದು.

೩೮. ಆ ಪದ್ಮೋದ್ಭವನಾದ ಬ್ರಹ್ಮನು ಅವ್ಯಕ್ತವಾದ ತತ್ತ್ವದಲ್ಲಿ ಅಂದರೆ ಪ್ರಕೃತಿಯಲ್ಲಿ ಅಂತರ್ಭಾವವನ್ನೈದುವನು. ಈ ತತ್ತ್ವಗಳನ್ನೆಲ್ಲಾ ನಾಶಗೊಳಿಸಿ ಪುರುಷರೂಪಿಯಾದ ಪರಶಿವನೊಬ್ಬನು ನಿಲ್ಲುವನು.

೩೯. ಪರಶಿವನು ನಿಜವಾಗಿಯೂ ಒಬ್ಬನು. ಅವನಿಗೆ ಸರಿಸಮನಾದ ದೇವರು ಮತ್ತಾರೂ ಇಲ್ಲ. ಈ ಸಮಸ್ತ ಪ್ರಲಯಗಳೂ ಸಹ ಈಶ್ವರೇಚ್ಛೆಯಿಂದಲೇ ನಡೆಯುತ್ತಿವೆ.

ಬ್ರಹ್ಮಾದೀನಾಂ ಪುನಃ ಸೃಷ್ಟಿರಿತ್ಯಾಹುಸ್ತತ್ತ್ವದರ್ಶಿನಃ ।
ತಸ್ಯೈವ ಶಕ್ತಯಸ್ತಿಸ್ರೋ ಬ್ರಹ್ಮವಿಷ್ಣುಮಹೇಶ್ವರಾಃ ॥ ೪೦ ॥

ಸರ್ವಸ್ಮಾದಧಿಕಸ್ತಾಭ್ಯಃ ಶೂಲಪಾಣಿರಿತಿ ಶ್ರುತಿಃ ।
ಏಕಮೇವ ಮಹಾದೇವಂ ವದಂತಿ ಬಹುಧಾ ಜನಾಃ ॥ ೪೧ ॥

ಬ್ರಹ್ಮಾಣಂ ಶಾರ್ಙ್ಗಿಣಂ ರುದ್ರಂ ವಾಯುಮಿಂದ್ರಂ ರವಿಂ ಶಶಿಂ ।
ಅಗ್ನಿಂ ಯಮಂ ಚ ವರುಣಂ ಜನಂ ಭೇದದೃಶೋ ಜನಾಃ ॥ ೪೨ ॥

ತತ್ತದ್ರೂಪಂ ಸಮಾಸ್ಥಾಯ ಭಗವಾನೇವ ಶಂಕರಃ ।
ಫಲಂ ದದಾತಿ ಸರ್ವೇಷಾಂ ಸರ್ವಶಕ್ತಿಮಯಃ ಶಿವಃ ॥ ೪೩ ॥

ತಸ್ಮಾತ್ಸರ್ವಾನ್ ಪರಿತ್ಯಜ್ಯ ಯಜೇದೇಕಂ ಮಹೇಶ್ವರಂ ।
ಆದಿಮಧ್ಯಾಂತ ರಹಿತಂ ನಿರ್ಗುಣಂ ತಮಸಃ ಪರಂ ॥ ೪೪ ॥

---

೪೦. ಪುನಃ ಈಶ್ವರೇಚ್ಛೆಯಿಂದ ಸೃಷ್ಟಿಯಾರಂಭವಾಗುವುದು. ಮತ್ತೆ ಈಶ್ವರಶಕ್ತಿಯು ಬ್ರಹ್ಮ, ವಿಷ್ಣು, ಮಹೇಶ್ವರ ರೂಪವಾಗಿ ಮೂರು ವಿಧವಾಗುವುದು.

೪೧. ಈ ಎಲ್ಲಾ ಶಕ್ತಿಗಳಿಗಿಂತ ಪರಮೇಶ್ವರ ಶಕ್ತಿಯೇ ಅಧಿಕವಾದದ್ದೆಂದು ವೇದಗಳೆಲ್ಲವೂ ಸಾರುವುವು. ಒಬ್ಬನೇ ಮಹಾದೇವನೇ ಅನೇಕ ರೂಪದಿಂದ ಕಾಣುತ್ತಿರುವನೆಂದು ಬಹು ಜನರು ಹೇಳುತ್ತಿರುವರು.

೪೨. ಆ ಮಹೇಶ್ವರನನ್ನೇ ಬ್ರಹ್ಮನೆಂದೂ, ವಿಷ್ಣುವೆಂದೂ, ರುದ್ರನೆಂದೂ, ವಾಯು, ಇಂದ್ರ, ಸೂರ್ಯ, ಚಂದ್ರ, ಅಗ್ನಿ, ಯಮ, ವರುಣ ಇವರೇ ಮೊದಲಾದ ದೇವತಾವಿಶೇಷಗಳೆಂದೂ, ತಿಳಿಯುತ್ತಾರೆ. ಭೇದಭಾವನೆಯಿಂದ ಇವರೆಲ್ಲರೂ ಬೇರೆಬೇರೆಯವರೆಂದೂ ತಿಳಿಯುವರು.

೪೩. ಆದರೂ ಶಂಕರನು ಅವರವರ ಭಾವನೆಯಂತೆ ಆಯಾ ರೂಪವನ್ನು ತಾಳಿಯೇ ಅವರವರಿಗೆ ಬೇಕಾದ ಫಲಗಳನ್ನು ಕೊಡುವನು. ಸರ್ವಶಕ್ತಿಮಯನಾದವನು ಶಂಕರನಲ್ಲವೇ ?

೪೪. ಆದ್ದರಿಂದ ಸರ್ವಕರ್ಮಗಳನ್ನೂ ಬಿಟ್ಟು ಆದಿ, ಮಧ್ಯ, ಅಂತ ಇವುಗಳನ್ನು ಹೊಂದದಿರುವ ನಿರ್ಗುಣರೂಪಿಯಾದ, ತಮೋಗುಣಕ್ಕೆ ದೂರನಾಗಿರುವ, ಮಹೇಶ್ವರನನ್ನು ಯಾವಾಗಲೂ ಆರಾಧಿಸಬೇಕು.

ಕ್ರಮೇಣ ಲಭ್ಯತೇಽನ್ಯೇಷಾಂ ಮುಕ್ತಿರಾರಾಧನೇ ದ್ವಿಜಾಃ ।
ಆರಾಧಯನ್ ಮಹೇಶಂ ತಂ ತಸ್ಮಿನ್ ಜನ್ಮನಿ ಮುಚ್ಯತೇ ॥ ೪೫ ॥

ಏಷ ವಃ ಕಥಿತೋ ವಿಪ್ರಾ ಯಥಾವತ್ಪ್ರತಿಸಂಚರಃ ।
ಯದೀರಿತಂ ಭಗವತಾ ಕಿಮನ್ಯಚ್ಛ್ರೋತುಮರ್ಹಥ ॥ ೪೬ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ನಿತ್ಯ, ನೈಮಿತ್ತಿಕ, ಪ್ರಾಕೃತಾತ್ಯಂತಿಕ ಪ್ರತಿಸಂಚರ ಕಥನಂ ನಾಮ ತ್ರಯಸ್ತ್ರಿಂಶೋಽಧ್ಯಾಯಃ

---

೪೫. ಉಳಿದ ದೇವತೆಗಳ ಆರಾಧನೆಯ ಫಲವಾಗಿ ಮೋಕ್ಷವು ಅನೇಕ ಜನ್ಮಗಳ ಅನಂತರ ದೊರಕಬಹುದು. ಆದರೆ ಮಹೇಶ್ವರಾರಾಧನೆಯಿಂದ ಮನುಷ್ಯನು ಅದೇ ಜನ್ಮದಲ್ಲಿಯೇ ಮುಕ್ತಿಯನ್ನು ಪಡೆಯುವನು.

೪೬. ಎಲೈ ಶೌನಕಾದಿಗಳೇ, ಇಲ್ಲಿನವರೆಗೆ ನಿಮಗೆ ಪ್ರಲಯದ ವಿಷಯವನ್ನೆಲ್ಲಾ ವಿವರವಾಗಿ ಹೇಳಿರುವೆನು. ಈ ವಿಷಯವನ್ನು ಹಿಂದೆ ಸೂರ್ಯದೇವನು ಮನುವಿಗೆ ಹೇಳಿದ್ದನು. ಮತ್ತೇನಾದರೂ ಕೇಳಲಿಷ್ಟವಿದ್ದಲ್ಲಿ ತಿಳಿಸಿರಿ. ಹೇಳುವೆನು ಎಂದು ಸೂತಮಹರ್ಷಿಗಳು ಶೌನಕಾದಿಗಳನ್ನು ಪ್ರೀತಿಯಿಂದ ಕೇಳಿದರು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ
ಸಂವಾದರೂಪವಾಗಿ, ನಿತ್ಯ, ನೈಮಿತ್ತಿಕ, ಪ್ರಾಕೃತ, ಆತ್ಯಂತಿಕ
ಪ್ರಲಯಗಳ ವಿಷಯಗಳನ್ನು ಬೋಧಿಸುವಂತಹ
ಮೂವತ್ತುಮೂರನೆಯ ಅಧ್ಯಾಯವು
ಮುಗಿದುದು.

॥ ಶ್ರೀ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಚತುಸ್ತ್ರಿಂಶೋಽಧ್ಯಾಯಃ.

ಸರ್ಗಶ್ಚ ಪ್ರತಿಸರ್ಗಶ್ಚ ವಂಶಾ ಮನ್ವಂತರಾಣಿ ಚ
ವಂಶಾನುಚರಿತಂ ಚೈವ ಶ್ರುತಂ ಸರ್ವಮಶೇಷತಃ ॥ ೧ ॥

ಇದಾನೀಂ ಶ್ರೋತುಮಿಚ್ಛಾಮಶ್ಚರಿತಂ ತ್ರಿಪುರದ್ವಿಷಃ ।
ಪುರಾಣಿ ತ್ರೀಣಿ ಭಗವಾನ್ ದದಾಹ ಸ ಕಥಂ ಪುರಾ ॥ ೨ ॥
ಲೀಲಯೈವೇಷುಣೈಕೇನ ಸೂತ ನೋ ವದ ಕೌತುಕಂ ॥

॥ ಸೂತ ಉವಾಚ ॥

ಶೃಣುಧ್ವಂ ಋಷಯಸ್ಸರ್ವೇ ಚರಿತಂ ಶೂಲಪಾಣಿನಃ ।
ಯಥೇರಿತಂ ಭಗವತಾ ಸೂರ್ಯೇಣ ಮನವೇ ಪುರಾ ॥ ೪ ॥

ಮೂವತ್ತುನಾಲ್ಕನೆಯ ಅಧ್ಯಾಯ.

೧. ಅನೇಕ ವಿಷಯಗಳನ್ನು ವಿಸ್ತಾರವಾಗಿ ತಿಳಿಸಿ ಸುಖದಿಂದ ಕುಳಿತಿದ್ದ ಸೂತಮಹರ್ಷಿಗಳನ್ನು ಕುರಿತು ಶೌನಕಾದಿಗಳು “ಎಲೈ ಮಹರ್ಷಿಯೇ, ನಮಗೆ ನೀವು ಇಲ್ಲಿನವರೆಗೆ ಸೃಷ್ಟಿ, ಪ್ರಳಯ, ವಂಶ, ಮನ್ವಂತರಗಳ ವಿಚಾರ, ವಂಶಾನುಚರಿತ, ಇವೇ ಮೊದಲಾದ ವಿಷಯಗಳನ್ನು ವಿಸ್ತಾರವಾಗಿ ತಿಳಿಸಿರುವಿರಿ.

೨. ಈಗ ನಾವು ಭಗವಂತನಾದ ಪರಶಿವನು ತ್ರಿಪುರಗಳನ್ನು ಒಂದೇ ಬಾಣದಿಂದ ನಾಶಮಾಡಿದ ಉತ್ತಮವಾದ ಕಥೆಯನ್ನು ಕೇಳಲಿಚ್ಛಿಸುತ್ತೇವೆ. ದಯೆಯಿಂದ ತಿಳಿಸಬೇಕು” ಎಂದು ಕೇಳಿಕೊಂಡರು.

೪. ಆಗ ಸೂತಮಹರ್ಷಿಗಳು ಆ ಋಷಿಗಳ ಕೋರಿಕೆಯಂತೆ ಹಿಂದೆ ಸೂರ್ಯನಾರಾಯಣನು ವೈವಸ್ವತಮನುವಿಗೆ ಹೇಳಿದ್ದ ಪರಶಿವನ ಕಥೆಯನ್ನೇ ವಿಸ್ತಾರವಾಗಿ ಹೇಳಲಾರಂಭಿಸಿದರು.

ಶೃಣ್ವತಾಂ ಸರ್ವಪಾಪಘ್ನಂ ಸರ್ವದುಷ್ಟನಿವಾರಣಂ ।
ಯತ್ತತ್ಸರ್ವಾಪದಾಂ ಹಂತಿ ಶ್ರೋತ್ರಪೀಯೂಷಮುತ್ತಮಂ ॥ ೫ ॥

ತಾರಕೋ ನಾಮ ಯೋ ದೈತ್ಯೋ ನಿಹತಃ ಶಕ್ತಿಪಾಣಿನಾ
ಆಸನ್ ಸುತಾಸ್ತ್ರಯಸ್ತಸ್ಯ ತ್ರೈಲೋಕ್ಯೈಶ್ವರ್ಯ ದರ್ಪಿತಾಃ ॥ ೬ ॥

ವಿದ್ಯುನ್ಮಾಲೀ ತಾರಕಾಕ್ಷಃ ಕಮಲಾಕ್ಷೋ ಮಹಾಬಲಃ
ತೇಪುಸ್ತಪೋ ಮಹಾಘೋರಂ ದಾನವಾಃ ಪ್ರಿಯಕಾಂಕ್ಷಯಾ ॥ ೭ ॥

ಯಮೈಕ್ಯ ನಿಯಮೈರ್ಯುಕ್ತಾ ಬಭೂವುರಸಿಲಾಸನಾಃ ।
ಪ್ರೀತಶ್ಚತುರ್ಮುಖಸ್ತೇಷಾಂ ಪ್ರದದೌ ವರಮುತ್ತಮಂ ॥ ೮ ॥

ದೇವಾಸುರಾಣಾಂ ಸರ್ವೇಷಾಮುವಧ್ಯತ್ವಂ ದ್ವಿಜೋತ್ತಮಾಃ ।
ಪುನಸ್ತೈರಮರೇಶತ್ವಂ ಯಾಚಿತಃ ಪದ್ಮಸಂಭವಃ ॥ ೯ ॥

---

೫. ಆ ಪರಶಿವನ ಕಥೆಯು ಕೇಳುವವರ ಪಾಪವನ್ನೆಲ್ಲಾ ನಿವಾರಣೆಮಾಡುತ್ತದೆ. ಸಮಸ್ತ ದೋಷಗಳನ್ನು ಹೋಗಲಾಡಿಸುತ್ತದೆ. ಕಿವಿಗೆ ಅಮೃತದಂತೆ ಸುಖವನ್ನುಂಟುಮಾಡುತ್ತದೆ. ಭಕ್ತರ ವಿಪತ್ತುಗಳೆಲ್ಲವೂ ಇದರಿಂದ ದೂರವಾಗುವುದು.

೬. ಹಿಂದೆ ದೇವೇಂದ್ರನು ತಾರಕನೆಂಬ ರಾಕ್ಷಸನನ್ನು ಕೊಂದುಹಾಕಿದನು. ಆ ರಾಕ್ಷಸನಿಗೆ ಮೂರು ಜನ ಮಕ್ಕಳಿದ್ದರು. ಅವರು ಮೂರು ಲೋಕಗಳಲ್ಲಿಯೂ ಶೂರರೆನಿಸಿಕೊಂಡು ಬಹು ದರ್ಪದಿಂದ ಮೆರೆಯುತ್ತಿದ್ದರು.

೭ ಅವರ ಹೆಸರು ವಿದ್ಯುನ್ಮಾಲೀ, ತಾರಕಾಕ್ಷ, ಕಮಲಾಕ್ಷ ಎಂದು. ಇವರು ಒಂದು ಸಾರಿ ಬ್ರಹ್ಮನನ್ನು ಕುರಿತು ಘೋರವಾಗಿ ತಪಸ್ಸುಮಾಡಿದರು. ಅದರ ಉದ್ದೇಶವಾದರೋ ರಾಕ್ಷಸರಿಗೆ ಹಿತವನ್ನು ಬಯಸುವುದೇ ಆಗಿತ್ತು.

೮. ಅವರು ತಪಸ್ಸುಮಾಡುವಾಗ, ಯಮನಿಯಮಾದಿಗಳಿಂದ ಕೂಡಿ, ಅನಿಲಾಹಾರದಿಂದ ದೇಹವನ್ನು ದಂಡಿಸಿ ಬ್ರಹ್ಮನನ್ನು ತೃಪ್ತಿಗೊಳಿಸಿದರು. ಆಗ ಬ್ರಹ್ಮನು ಇವರ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದನು.

೯. ದೇವತೆಗಳಿಂದಲೂ ರಾಕ್ಷಸರಿಂದಲೂ, ಮತ್ತೆ ಯಾರಿಂದಲೂ ಮರಣವಿಲ್ಲದಂತೆ ವರವನ್ನು ದಯಪಾಲಿಸಿದನು. ಆದರೆ ಅಷ್ಟಕ್ಕೆ ತೃಪ್ತರಾಗದೆ ಆ ರಾಕ್ಷಸರು ತಮಗೆ ದೇವೇಂದ್ರ ಪದವಿಬೇಕೆಂದು ಕೇಳಿಕೊಂಡರು.

ವರಮನ್ಯಂ ದೈತ್ಯವರ್ಯಾ ವೃಣೀಧ್ವಂ ಮನಸೇಪ್ಸಿತಂ ।
ದಾಸ್ಯಾಮಿ ತದಹಂ ಕ್ಷಿಪ್ರಮಿತಿ ಬ್ರಹ್ಮಾಬ್ರವೀತ್ಪುನಃ ॥ ೧೦ ॥

ಅಬ್ರುವಂಸ್ತೇ ವಿಚಾರ್ಯೈವಂ ಮಿಥಃ ಕಮಲಸಂಭವಂ ।
ಪುರಾಣಿ ತ್ರೀಣಿ ಲೋಕೇಶ ರಚಯಿತ್ವಾ ವಯಂ ಸದಾ ॥ ೧೧ ॥

ತ್ರೀನ್ ಲೋಕಾನ್ವಿಚರಿಷ್ಯಾಮಸ್ತ್ವತ್ತೋ ಲಬ್ಧವರಾ ವಿಭೋ ।
ತತೋ ವರ್ಷಸಹಸ್ರೇ ತು ಸಮೇಷ್ಯಾಮಃ ಪರಸ್ಪರಂ ॥ ೧೨ ॥

ಏಕೀಭಾವಂ ಗಮಿಷ್ಯಂತಿ ಪುರಾಣಿ ಚ ಸುರೋತ್ತಮ ।
ಯದಾ ಸಮೇತಾನ್ಯೇತಾನಿ ಯೋ ಹನ್ಯಾದ್ಭಗವಾಂಸ್ತದಾ ॥ ೧೩ ॥
ಏಕೇನೈವೇಷುಣಾ ದೇವ ಸ ನೋ ಮೃತ್ಯುರ್ಭವಿಷ್ಯತಿ ।
ಏವಮಸ್ತ್ವಿತಿ ತಾನುಕ್ತ್ವಾ ಬ್ರಹ್ಮಾಂತರ್ಧಾನಮಾಪ್ತವಾನ್ ॥ ೧೪ ॥
ತೇಷಾಂ ಮಯಸ್ತು ಕ್ರಮಶಶ್ಚಕ್ರೇ ತ್ರೀಣಿ ಪುರಾಣ್ಯಥ ॥

---

೧೦. ಅದಕ್ಕೆ ಬ್ರಹ್ಮನು ಆ ವರವನ್ನು ಬಿಟ್ಟು ಮತ್ತೆ ಯಾವುದನ್ನು ಕೇಳಿದರೂ ಕೊಡುವೆನೆಂದು ವಾಗ್ದಾನಮಾಡಿದನು.

೧೧. ಅನಂತರ ಈ ಮೂವರೂ ಒಟ್ಟಾಗಿ ಆಲೋಚಿಸಿ, ತಾವು ಮೂವರೂ ಪ್ರತ್ಯೇಕವಾಗಿ ಮೂರು ಊರುಗಳನ್ನು ಸೃಷ್ಟಿಸಿಕೊಳ್ಳುವುದಕ್ಕೆ ಅನುಜ್ಞೆ ಬೇಡಿದರು.

೧೨. ಅಲ್ಲದೆ ತಮ್ಮ ಇಷ್ಟಬಂದಂತೆ ಆ ಮೂರು ಊರುಗಳೂ ಸಂಚರಿಸುವಂತೆ ವರವನ್ನೂ ಬೇಡಿದರು. ಮತ್ತು ಸಹಸ್ರ ವರ್ಷಗಳು ಹೀಗೆ ಪ್ರತ್ಯೇಕವಾಗಿದ್ದು ಅನಂತರ ಈ ಮೂವರೂ ಒಟ್ಟುಗೂಡಬೇಕೆಂದೂ ಪ್ರಾರ್ಥಿಸಿಕೊಂಡರು.

೧೩. ಒಂದು ಸಹಸ್ರ ವರ್ಷಗಳು ಕಳೆದನಂತರ ಈ ಮೂರು ಪುರಗಳೂ ಒಂದಾಗಬೇಕೆಂದೂ, ಆಗ ಯಾವನು ಒಂದೇ ಬಾಣದಿಂದ ಈ ಮೂರು ಪಟ್ಟಣಗಳನ್ನೂ ನಾಶಗೈಯ್ಯುವನೋ ಅವನೇ ನಮಗೆ ಮೃತ್ಯುವಾಗಬೇಕೆಂದೂ ವರವನ್ನು ಬೇಡಿದರು.

೧೪. ಹಾಗೆಯೇ ಆಗಲೆಂದು ಬ್ರಹ್ಮನು ವರಕೊಟ್ಟು ಕಣ್ಮರೆಯಾದನು. ಒಡನೆಯೇ ರಾಕ್ಷಸಶಿಲ್ಪಿಯಾದ ಮಯಾಸುರನು ಈ ಮೂವರಿಗೂ ಮೂರು ಪಟ್ಟಣಗಳನ್ನು ಸೃಷ್ಟಿಮಾಡಿಕೊಟ್ಟನು.

ಪೃಥಿವ್ಯಾಮಾಯಸಂ ತ್ವಾಸೀದ್ರಾಜತಂ ಗಗನಾಂಗಣೇ ॥ ೧೫ ॥
ಸ್ವರ್ಗೇ ತು ಕಾಂಚನಮಯಮಸುರಾಣಾಂ ಪುರಂ ದ್ವಿಜಾಃ ।
ವಿಸ್ತಾರಾಯಾಮತಸ್ತೇಷಾಂ ಯೋಜನಾನಾಂ ಶತಂ ಭವೇತ್ ॥ ೧೬ ॥
ಆಯಸಂ ಯತ್ಪುರಂ ದಿವ್ಯಂ ವಿದ್ಯುನ್ಮಾಲೇಸ್ತದಾಭವತ್ ।
ರಾಜತಂ ತಾರಕಾಖ್ಯಸ್ಯ ಕಮಲಾಖ್ಯಸ್ಯ ಕಾಂಚನಂ ॥ ೧೭ ॥
ಮಯಸ್ಯ ತು ಗೃಹಂ ರಮ್ಯಂ ಪುರೇಷು ತ್ರಿಷು ವಿಸ್ತೃತಂ ।
ತತ್ರಾಸ್ತೇ ದಾನವಃ ಶ್ರೀಮಾನ್ ದೇವದಾನವಪೂಜಿತಃ ॥ ೧೮ ॥
ರಮ್ಯಂ ಪುರತ್ರಯಂ ರೇಜೇ ತ್ರೈಲೋಕ್ಯಮಿವ ಚಾಪರಂ ।
ವಿಮಾನೈಃ ಸೂರ್ಯಸಂಕಾಶೈಃ ಸಮಂತಾತ್ಪರಿಶೋಭಿತಂ ॥ ೧೯ ॥
ಗಜವಾಜಿಸಮಾಕೀರ್ಣಂ ಗೋಪುರಾಟ್ಟಾಲಮಂಡಿತಂ ।
ಸಿದ್ಧಚಾರಣಗಂಧರ್ವೈರ್ದಿವ್ಯಸ್ತ್ರೀಭಿರ್ವಿರಾಜಿತಂ ॥ ೨೦ ॥

೧೫-೧೬. ಆ ಮೂರು ಪುರಗಳಲ್ಲಿ ಒಂದು, ಭೂಲೋಕದಲ್ಲಿ ಕಬ್ಬಿಣದಿಂದಲೂ, ಮತ್ತೊಂದು ಗಗನಮಂಡಲದಲ್ಲಿ ಬೆಳ್ಳಿಯಿಂದಲೂ, ಮೂರನೆಯದು ಸ್ವರ್ಗದಲ್ಲಿ ಚಿನ್ನದಿಂದಲೂ ನಿರ್ಮಿತವಾದವು. ಅವುಗಳ ಉದ್ದ ಮತ್ತು ಅಗಲ ಎಂಬುದು ಒಂದು ನೂರು ಯೋಜನಪರಿಮಿತಿಯುಳ್ಳದ್ದಾಗಿತ್ತು.

೧೭. ವಿದ್ಯುನ್ಮಾಲಿಯು ಕಬ್ಬಿಣದ ನಗರವನ್ನೂ, ತಾರಕನು ಬೆಳ್ಳಿಯಪುರವನ್ನೂ, ಕಮಲಾಕ್ಷನು ಚಿನ್ನದ ಊರನ್ನೂ ತನ್ನದನ್ನಾಗಿಮಾಡಿಕೊಂಡರು.

೧೮. ಮಯನು ಮಾತ್ರ ಈ ಮೂರು ನಗರಗಳಲ್ಲಿಯೂ ಒಂದೊಂದು ಸುಂದರವಾದ ಮನೆಯನ್ನು ನಿರ್ಮಿಸಿಕೊಂಡು, ದೇವತೆಗಳಿಗೂ ರಾಕ್ಷಸರಿಗೂ ಬೇಕಾದವನಾಗಿ ಸುಖವಾಗಿ ವಾಸಮಾಡಿಕೊಂಡಿದ್ದನು.

೧೯. ಈ ಮೂರು ಊರುಗಳೂ ಮೂರು ಲೋಕಗಳಂತೆ ಶೋಭಿಸುತ್ತಿದ್ದುವು. ಪ್ರತಿ ಊರಿನಲ್ಲಿಯೂ, ಸೂರ್ಯನಂತೆ ಹೊಳೆಯುವ, ಅಂದವಾದ ಉಪ್ಪರಿಗೆ ಮನೆಗಳೂ ಅಲಂಕೃತವಾಗಿದ್ದುವು.

೨೦. ಆ ಊರುಗಳಲ್ಲಿ ಆನೆ ಕುದುರೆಗಳು ಗುಂಪಾಗಿ ದಹರಿಸುತ್ತಿದ್ದುವು. ಪ್ರತಿ ಮನೆಗೂ ಗೋಪುರಗಳೂ, ಮುಂದಿನ ಕೋಟೆಗಳೂ ಕಂಗೊಳಿಸುತ್ತಿದ್ದುವು. ಸಿದ್ಧರೂ, ಚಾರಣರೂ, ಗಂಧರ್ವರೂ, ಅಪ್ಸರಸ್ತ್ರೀಯರೂ ಸರ್ವದಾ ಅಲ್ಲಿ ಸಂಚರಿಸುತ್ತಿದ್ದರು.

ರಹಸ್ಯಾಯತನೈರ್ದಿವ್ಯೈರಗ್ನಿಹೋತ್ರೈರ್ಗೃಹೇ ಗೃಹೇ ।
ವೇದಾಧ್ಯಯನಸಂಪನ್ನೈಃ ಸಮಂತಾದುಪಶೋಭಿತಂ ॥ ೨೧ ॥

ಸರ್ವಾಃ ಪತಿವ್ರತಾಸ್ತತ್ರ ದಾನವಾನಾಂ ಸ್ತ್ರಿಯೋ ದ್ವಿಜಾಃ ।
ಮಹಾದೇವಾರ್ಚನರತೈಃ ದಾನವೈರುಪಶೋಭಿತಂ ॥ ೨೨ ॥

ತೇಷಾಂ ತಪಃಪ್ರಭಾವೇನ ಶಕ್ರಾದ್ಯಾಸ್ತನುತಾಂ ಗತಾಃ ।
ದೃಷ್ಟ್ವಾ ದೇವಾಸ್ತದೈಶ್ವರ್ಯಂ ಪುರಾಣಂ ದ್ವಿಜಸತ್ತಮಾಃ ॥ ೨೩ ॥
ದೇವಾಸ್ತತ್ತೇಜಸಾ ದಗ್ಧಾ ವಿಷ್ಣುಂ ಗತ್ವೇದಮಬ್ರುವನ್ ॥

॥ ದೇವಾ ಊಚುಃ ॥

ದೇವದೇವ ಜಗನ್ನಾಥ ತ್ರೈಲೋಕ್ಯಸ್ಯಾಭಯಪ್ರದ ।
ಪುರತ್ರಯಾಸುರಭಯಾದ್ಭವಾಂಸ್ತ್ರಾತುಮಿಹಾರ್ಹತಿ ॥ ೨೪ ॥

---

೨೧. ಆ ಊರುಗಳಲ್ಲಿ ಪ್ರತಿ ಮನೆಯಲ್ಲಿಯೂ, ರಹಸ್ಯಗೃಹಗಳೂ, ಅಗ್ನಿ ಶಾಲೆಗಳೂ, ಇರುತ್ತಿದ್ದುವು. ವೇದಾಧ್ಯಯನ ಸಂಪನ್ನರಾದವರು ಬಹು ಮಂದಿ ಅಲ್ಲಿ ವಾಸಮಾಡುತ್ತಿದ್ದರು. ಇವುಗಳಿಂದ ಆ ನಗರಗಳು ಬಹುವಾಗಿ ಹೊಳೆಯುತ್ತಿದ್ದುವು.

೨೨. ಅಲ್ಲಿದ್ದ ರಾಕ್ಷಸಸ್ತ್ರೀಯರೆಲ್ಲರೂ ಪತಿವ್ರತೆಯರಾಗಿದ್ದರು. ಸಮಸ್ತ ರಾಕ್ಷಸರೂ ದೇವಾರ್ಚನಪರಾಯಣರಾಗಿ ಕಾಲಕಳೆಯುತ್ತಿದ್ದರು.

೨೩. ಈ ರಾಕ್ಷಸರ ತಪೋಮಹಿಮೆಯಿಂದ ಇಂದ್ರನೇ ಮೊದಲಾದವರು ಕ್ಷೀಣರಾಗುತ್ತಾ ಬಂದರು. ಅವರ ಐಶ್ವರ್ಯವೆಲ್ಲವೂ ಕ್ಷಣಿಸುತ್ತಾ ಬಂತು. ಅವರ ತೇಜಸ್ಸೆಲ್ಲವೂ ರಾಕ್ಷಸರ ತೇಜಸ್ಸಿನಿಂದ ಮಂಕಾಗುತ್ತಾ ಬಂದಿತು.

೨೪. ಇದನ್ನು ನೋಡಿ ದೇವತೆಗಳೆಲ್ಲರೂ ಒಂದು ಸಾರಿ ಮಹಾವಿಷ್ಣುವನ್ನು ಸಂಧಿಸಿ, ಹೀಗೆ ಪ್ರಾರ್ಥಿಸಿದರು. "ಓ ದೇವದೇವನೇ, ಜಗತ್ಪತಿಯೇ, ಮೂರು ಲೋಕಗಳನ್ನೂ ರಕ್ಷಿಸತಕ್ಕವನೇ, ಈಗ ನಮಗೆ ಬಂದಿರುವ ತ್ರಿಪುರಾಸುರರ ಭಯವನ್ನು ಹೋಗಲಾಡಿಸು. ಕಷ್ಟಬಂದಾಗ ರಕ್ಷಿಸುವವರು ನೀನಲ್ಲದೆ ನಮಗೆ ಮತ್ತಾರಿರುವರು" ಎಂದು ಕೇಳಿಕೊಂಡರು.

ಏವಂ ಸುರಾಣಾಂ ವಚನಂ ಶ್ರುತ್ವಾ ದಾನವಮರ್ದನಃ ।
ಗೋವಿಂದಶ್ಚಿಂತಯಾಮಾಸ ಕಿಂ ಕಾರ್ಯಮಿತಿ ಚೇತಸಾ ॥ ೨೫ ॥

ಹಂತವ್ಯಾಸ್ತೇ ಕಥಂ ದೈತ್ಯಾ ಮಹಾದೇವಪರಾಯಣಾಃ ।
ಹರತೇಜೋಽಗ್ನಿನಿರ್ದಗ್ಧಪಾಪಾಸ್ತೇಽತ್ರ ನ ಸಂಶಯಃ ॥ ೨೬ ॥

ತ್ರೈಲೋಕ್ಯಮಪಿ ಯೋ ಹತ್ವಾ ಮಹಾದೇವಪರಾಯಣಃ ।
ಕಸ್ತಂ ನಿಹಂತಾ ತ್ರೈಲೋಕ್ಯೇ ವಿನಾ ಶಂಭೋರನುಗ್ರಹಾತ್ ॥ ೨೭ ॥

ಶಂಭುಪ್ರಸಾದಲೇಶೇನ ಖ್ಯಾತೋಽಸ್ಮಿ ಭುವನತ್ರಯೇ ।
ಬ್ರಹ್ಮಾ ಚ ದೇವಾ ದೈತ್ಯಾಶ್ಚ ಸಿದ್ಧಾಶ್ಚ ಮುನಯಸ್ತಥಾ ।
ಮನವೋ ರಾಕ್ಷಸಾಸ್ಸರ್ಪಾ ಗಂಧರ್ವಾಃ ಪಿತರಶ್ಚ ಯೇ ॥ ೨೮ ॥

ಮಾತರೋ ಗುಹ್ಯಕಾ ಭೂತಾಃ ಪಿಶಾಚಾ ಮಾನವಾಸ್ತಥಾ ।
ಭಗವಂತಂ ಮಹಾದೇವ ಮಸಂಪೂಜ್ಯ ಜಗತ್ತ್ರಯೇ ॥ ೩೦ ॥
ಸಿದ್ಧಿಮಿಚ್ಛಂತಿ ಯೇ ಮೂಢಾಸ್ತೇಸ್ಯುರ್ದುಃಖಸ್ಯ ಭಾಜನಂ ।

---

೨೫. ಹೀಗೆ ಕೇಳಿಕೊಂಡ ದೇವತೆಗಳನ್ನು ನೋಡಿ, ದಯಾಸಮುದ್ರನಾದ ಮಹಾವಿಷ್ಣುವು, ಇದಕ್ಕೆ ಏನುಪಾಯವೆಂದು ಮನಸ್ಸಿನಲ್ಲಿ ಯೋಚಿಸಲಾರಂಭಿಸಿದನು.

೨೬. ಅಲ್ಲದೆ ಆ ಮಹಾದೇವಭಕ್ತನಾದ ದೈತ್ಯರನ್ನು ಕೊಲ್ಲುವುದು ಹೇಗೆ ಅವರೆಲ್ಲರೂ ಶಿವತೇಜಸ್ಸಿನಿಂದ ತಮ್ಮ ಪಾಪಗಳನ್ನೆಲ್ಲಾ ಕಳೆದುಕೊಂಡು ತೇಜಶ್ಶಾಲಿಗಳಾಗಿರುವರಲ್ಲಾ ಎಂದು ವಿಷ್ಣುವು ಬಹುವಾಗಿ ಚಿಂತಿಸಿದನು.

೨೭. ಶಿವನಲ್ಲಿ ಭಕ್ತಿಯಿಟ್ಟಿರುವವನು ಮೂರು ಲೋಕವನ್ನೂ ಸುಲಭವಾಗಿ ಗೆಲ್ಲಬಹುದು. ಅವನನ್ನು ಎದುರಿಸಲು ಈಶ್ವರಾನುಗ್ರಹಬೇಕು. ಅವನ ಅನುಮತಿಯಿಲ್ಲದೆ ದುಷ್ಟರನ್ನು ನಿಗ್ರಹಿಸಲು ಯಾರಿಂದಲೂ ಸಾಧ್ಯವಿಲ್ಲ.

೨೮-೩೦. ಈಗ ನಾನೂ ಸಹ ಶಂಭುವಿನ ಪ್ರಸಾದಲೇಶದಿಂದ ಇಷ್ಟು ಜಗದ್ವಿಖ್ಯಾತನಾಗಿದ್ದೇನೆ. ಇನ್ನೂ, ಬ್ರಹ್ಮ, ದೇವತೆಗಳು, ದಾನವರು, ಸಿದ್ಧರು, ಮುನಿಗಳು, ಮನುಗಳು, ರಾಕ್ಷಸರು, ಸರ್ಪಗಳು, ಗಂಧರ್ವರು, ಪಿತೃಗಳೂ, ಮಾತೃದೇವತೆಯರು, ಗುಹ್ಯಕರು, ಭೂತಗಳು, ಪಿಶಾಚಿಗಳು, ಮಾನವರು ಇವರೆಲ್ಲರೂ ಪರಮೇಶ್ವರನ ಅನುಗ್ರಹದಿಂದಲೇ ಲೋಕಪೂಜ್ಯರಾಗಿರುವರು. ಶಿವನ ಅನುಗ್ರಹವಿಲ್ಲದೆ ದೊಡ್ಡವರಾಗಬೇಕೆನ್ನುವರು ನಿಜವಾಗಿಯೂ ಮೂಢರೇ ಸರಿ. ಅವರು ಕೊನೆಗೆ ದುಃಖಿಗಳಾಗುವರೇ ಹೊರತು ಎಂದಿಗೂ ಸುಖಿಗಳೆನಿಸುವುದಿಲ್ಲ.

ತಸ್ಮಾತ್ತಮೀಶಮುಗ್ರೇಣ ಯಜ್ಞೇನೇಷ್ಟ್ವಾ ಸುರೋತ್ತಮಂ ॥ ೩೧ ॥
ಹಂತವ್ಯಾ ದಾನವಾ ನೂನಮಿತ್ಯುಕ್ತ್ವಾ ಕಮಲಾಪತಿಃ ॥

ಮೇರೋರುತ್ತರತೋ ಗತ್ವಾ ಯಜ್ಞೇನಾಥ ಸದಾಶಿವಂ ।
ಇಷ್ಟ್ವಾ ವೈ ರುದ್ರಭಾಗೇನ ತತೋ ಭೂತಾ ವಿನಿರ್ಗತಾಃ ॥ ೩೨ ॥

ನಾನಾಯುಧಕರಾಃ ಸರ್ವೇ ತ್ರೈಲೋಕ್ಯದಹನಪ್ರಭಾಃ ।
ಭೂತಾಂಸ್ತಾನ್ ಪ್ರಸ್ಥಿತಾನ್ ದೃಷ್ಟ್ವಾ ದೇವೋ ನಾರಾಯಣೋಽಬ್ರವೀತ್

ಗತ್ವಾ ಪುರತ್ರಯಂ ಶೀಘ್ರಂ ದಗ್ಧ್ವಾ ಹತ್ವಾ ಮಹಾಸುರಾನ್ ॥ ೩೪ ॥
ನಿಶ್ಶೇಷಾನಸುರಾನ್ ಕೃತ್ವಾ ಪುನರಾಗಂತುಮರ್ಹಥ ॥
ಅಥ ವಿಷ್ಣೋರ್ವಚಃ ಶ್ರುತ್ವಾ ಭೂತವೃಂದಾ ಮಹಾಬಲಾಃ ॥ ೩೫॥

---

೩೧. ಆದ್ದರಿಂದ ಈಗ ದೊಡ್ಡ ಯಾಗವಲ್ಲಿ ಪರಮೇಶ್ವರನನ್ನು ಹವಿರ್ದಾನಗಳಿಂದ ತೃಪ್ತಿಗೊಳಿಸಿ, ಆ ಮೂಲಕ ಅವನ ಅನುಗ್ರಹವನ್ನು ಸಂಪಾದಿಸಿ ಅನಂತರ ರಾಕ್ಷಸರನ್ನು ನಾಶಮಾಡಬೇಕೆಂದು ಶ್ರೀಮನ್ನಾರಾಯಣನು,

೩೨. ಸಮಸ್ತ ಪ್ರಾಣಿಗಳನ್ನೂ, ಮೇರುಪರ್ವತದ ಉತ್ತರಭಾಗದಲ್ಲಿ ಯಜ್ಞ ಮಾಡಲು ಕಳುಹಿಸಿದನು. ಅಲ್ಲಿ ಪಂಚಭೂತಗಳೇ ಮೊದಲಾದ ಸರ್ವರೂ ರುದ್ರ ಭಾಗದಿಂದ ಯಾಗಮಾಡಿ ಹಿಂದಿರುಗಿ ಬಂದರು.

೩೩. ಆಗ ಅವರೆಲ್ಲರೂ ನಾನಾವಿಧವಾದ ಆಯುಧಗಳನ್ನು ಧರಿಸಿ, ಮೂರು ಲೋಕವನ್ನೂ ಸುಡುವಂತಹ ತೇಜಸ್ವಿಗಳಾಗಿದ್ದರು. ಅಂಥವರನ್ನು ಶ್ರೀವಿಷ್ಣುವು ನೋಡಿ, ಹೀಗೆ ಹೇಳಿದನು.

೩೪-೩೫. ಎಲೈ ಭೂತಗಳೇ, ಈಗಲೇ ನೀವು ತ್ರಿಪುರಗಳ ಸಮೀಪಕ್ಕೆ ಹೋಗಿ ಅಲ್ಲಿರುವ ರಾಕ್ಷಸರನ್ನೆಲ್ಲಾ ಧ್ವಂಸಮಾಡಿರಿ. ಅವರ ಪಟ್ಟಣಗಳನ್ನೆಲ್ಲಾ ನಾಶ ಮಾಡಿ ಹಿಂದಿರುಗಿ ಬನ್ನಿರಿ.'' ಎಂದು ವಿಷ್ಣುವು ಆಜ್ಞಾಪಿಸಲು ಭೂತಗಳು ಆ ವಿಷ್ಣುವಿನ ಮಾತನ್ನು ಕೇಳಿ,

ಹರಿಂ ಪ್ರಣಮ್ಯ ಪ್ರಯಯುಸ್ತನ್ನಿಯೋಗಾತ್ಪುರತ್ರಯಂ ।
ಭೂತಾ ಭಯಂಕರಾ ದೃಪ್ತಾ ಅಯುತಾಯುತಕೋಟಯಃ ॥ ೩೬ ॥

ಪುರತ್ರಯಮನುಪ್ರಾಪ್ಯ ಬಭೂವುರ್ನಷ್ಟಚೇತಸಃ ।
ಪರಾಜಿತಾಸ್ತತೋ ಭೂತಾ ದೈತ್ಯೈಃ ಸನ್ಮಾರ್ಗವರ್ತಿಭಿಃ ॥ ೩೭ ॥

ಪುನರಭ್ಯೇತ್ಯ ಶಕ್ರಾದ್ಯಾ ದೇವಂ ನಾರಾಯಣಂ ವಿಭುಂ ।
ಅಬ್ರುವಂಸ್ತ್ರಾಹಿ ಭಗವನ್ನಿರ್ಜಿತಾ ಭಯವಿಹ್ವಲಾಃ ॥ ೩೮ ॥

ಚಿಂತಯಾಮಾಸ ತಾನ್ ದೃಷ್ಟ್ವಾ ಶಕ್ರಾದೀನ್ ವಿಷ್ಣುರವ್ಯಯಃ ।
ಭವಿಷ್ಯತಿ ಕಥಂ ಕಾರ್ಯಂ ದೇವಾನಾಮಿತಿ ಸುವ್ರತಾಃ ॥ ೩೯ ॥

ನಾಭಿಚಾರೇಣ ನಾಶೋಽಸ್ತಿ ಧರ್ಮಿಷ್ಠಾನಾಂ ಮಹಾತ್ಮನಾಂ ।
ಏತೇ ದೈತ್ಯಾ ಮಹಾಭಾಗಾ ಸತ್ಯವ್ರತಪರಾಯಣಾಃ ॥ ೪೦ ॥

---

೩೬. ಮಹಾವಿಷ್ಣುವನ್ನು ವಂದಿಸಿ ಅವನ ಅಪ್ಪಣೆಯಂತೆ, ಹತ್ತಾರು ಕೋಟಿ ಸಂಖ್ಯೆಯ ಭೂತಗಳು ಭಯಂಕರಾಕಾರದಿಂದ ಕೂಡಿ, ದರ್ಪದಿಂದ ಕೊಬ್ಬಿದವರಾಗಿ ತ್ರಿಪುರಗಳನ್ನು ಕುರಿತು ಪ್ರಯಾಣಮಾಡಿದರು.

೩೭. ಅಷ್ಟು ಘೋರವಾಗಿ ಹೋದ ಭೂತಸಮೂಹವು, ಸನ್ಮಾರ್ಗಿಗಳಾದ ದೈತ್ಯರಿಂದ ಸ್ವಲ್ಪಕಾಲದಲ್ಲಿಯೇ ಸೋಲಿಸಲ್ಪಟ್ಟಿತು. ಅಂತೂ ಆಗ ಭೂತಗಳು ಸಂಪೂರ್ಣವಾಗಿ ಸೋತುಹೋದವು.

೩೮. ಇದನ್ನು ನೋಡಿ ಇಂದ್ರಾದಿಗಳು, ಪುನಃ ನಾರಾಯಣನ ಸಮೀಪಕ್ಕೆ ಓಡಿ ಬಂದು, ಅತ್ಯಂತ ಭಯದಿಂದ ಕೂಡಿದವರಾಗಿ "ಮಹಾವಿಷ್ಣುವೇ ರಕ್ಷಿಸು" ಎಂದು ಮೊರೆಯಿಟ್ಟರು.

೩೯. ಆಗ ಮಹಾವಿಷ್ಣುವು ಪುನಃ "ಈ ದೇವತೆಗಳ ಕಾರ್ಯವನ್ನು ಹೇಗೆ ಸುಲಭವಾಗಿ ಸಾಧಿಸಬಹುದು?" ಎಂದು ಯೋಚಿಸಲಾರಂಭಿಸಿದನು.

೪೦. ಧರ್ಮಮಾರ್ಗದಲ್ಲಿ ಸಂಚರಿಸಿ ಮಹಾತ್ಮರೆನಿಸಿಕೊಂಡವರನ್ನು ಮೋಸಕೃತ್ಯದಿಂದ ನಾಶಮಾಡಲು ಸಾಧ್ಯವಾಗುವುದಿಲ್ಲ. ಈ ರಾಕ್ಷಸರು, ಸತ್ಯ, ಧರ್ಮ, ಇವುಗಳನ್ನು ಪಾಲಿಸಿಕೊಂಡು ಬರುತ್ತಿರುವರು. ದೇವಭಕ್ತರಾಗಿ ಇರುವರು.

ಶ್ರೌತಸ್ಮಾರ್ತಕ್ರಿಯಾನಿಷ್ಠಾ ಮಹಾದೇವಾರ್ಚನೇ ರತಾಃ ।
ಮಾಯಯಾ ಮೋಹಯಿತ್ವೈವ ನಿಹಂತವ್ಯಾ ಮಹಾಸುರಾಃ ॥ ೪೧ ॥

ಹನಿಷ್ಯೇ ತ್ರಿಪುರಂ ಸರ್ವಮಿತಿ ಸಂಚಿಂತ್ಯ ಚೇತಸಾ ।
ಅಸೃಜನ್ಮಾಯಿನಂ ಶಾರ್ಙ್ಗೀ ಸ್ವಾತ್ಮದೇಹಾನ್ಮುನೀಶ್ವರಾಃ ॥ ೪೨ ॥

ದೃಷ್ಟಪ್ರತ್ಯಯಕೃಚ್ಛಾಸ್ತ್ರಂ ದದೌ ವಿಷ್ಣುಃ ಸುವಿಸ್ತರಂ ।
ಯಸ್ಮಿನ್ ಶರೀರಮೇವಾತ್ಮಾ ನಾಸ್ತಿ ಪಾರತ್ರಿಕೀ ಗತಿಃ ॥ ೪೩ ॥

ಸಂಘಾತಶ್ಚೇತಯತ್ಯೇವ ಸುರಾಯಾ ಮದಶಕ್ತಿವತ್ ।
ಅಪಹೃತ್ಯ ಪರದ್ರವ್ಯಂ ಕಾಮಸ್ತೇನೈವ ಸೇವ್ಯತೇ ॥ ೪೪ ॥

---

೪೧. ಅಲ್ಲದೆ ರಾಕ್ಷಸವೀರರು ಶ್ರುತಿ, ಸ್ಮೃತಿ, ಇವುಗಳನ್ನನುಸರಿಸಿ, ಮಹಾದೇವನನ್ನು ಪೂಜಿಸಿ ಅತ್ಯಂತ ಬಲಿಷ್ಠರಾಗಿರುವರು. ಇಂತಹವರನ್ನು ಮಾಯೆಯಿಂದ ಮೋಸಗೊಳಿಸಿಯೇ ನಾಶಮಾಡಬೇಕು.

೪೨. ಈ ತ್ರಿಪುರಗಳನ್ನೂ ಹೇಗಾದರೂ ಮಾಡಿ ನಾಶಮಾಡಲೇಬೇಕೆಂದು ಶ್ರೀವಿಷ್ಣುವು ಯೋಚನೆಮಾಡಿ, ತನ್ನ ದೇಹದಿಂದ ಮಾಯಾವಿಯೊಬ್ಬನನ್ನು ಸೃಷ್ಟಿ ಮಾಡಿದನು.

೪೩. ಆ ಮಾಯಾವಿಗೆ ಕೇವಲ ಪ್ರತ್ಯಕ್ಷಪ್ರಮಾಣವಾದ ಚಾರ್ವಾಕದರ್ಶನವನ್ನು ಉಪದೇಶಿಸಿದನು. ಆ ದರ್ಶನದಲ್ಲಿ ಶರೀರವೇ ಆತ್ಮ, ಶರೀರಕ್ಕೆ ಪರಲೋಕದ ಗತಿ ಮುಂತಾದುವುಗಳು ಯಾವುವೂ ಇಲ್ಲ. ಐಹಿಕಸುಖವೇ ನಿಜವಾದ ಸುಖ, ಎಂಬುದು ವಿಶೇಷವಾಗಿ ಉಕ್ತವಾಗಿದೆ.

೪೪. ಆ ಚಾರ್ವಾಕ ದರ್ಶನದ ಅಭ್ಯಾಸವು ಮದ್ಯದ ಅಮಲಿನಂತೆ ಜನರನ್ನು ಸ್ವೇಚ್ಛಾಚಾರಿಗಳನ್ನಾಗಿಮಾಡುತ್ತದೆ. ಪರದ್ರವ್ಯವನ್ನು ಅಪಹರಿಸಿ ಅದರಿಂದ ತಮ್ಮ ಇಷ್ಟಾರ್ಥವನ್ನು ತೃಪ್ತಿಮಾಡಿಕೊಳ್ಳುವ ಅಭಿಲಾಷೆಯು ಆ ದರ್ಶನದ ಸಹಾಯದಿಂದ ಹೆಚ್ಚುತ್ತದೆ.

ಶಾಸ್ತ್ರಂ ತದುಪದಿಶ್ಯೈವ ತ್ರಿಪುರಂ ಪ್ರತಿ ಸುವ್ರತಾಃ ।
ಪ್ರೇಷಯಾಮಾಸ ತಂ ವಿಷ್ಣುಃ ಸೋಽಪಿ ಮಾಯೀ ತಥಾ ಯಯೌ ॥ ೪೫ ॥

ಪುರತ್ರಯಂ ಪ್ರವಿಶ್ಯಾಥ ದಾನವಾ ಮೋಹಿತಾಸ್ತದಾ ।
ತತ್ಯಜುರ್ವೈದಿಕಂ ಕರ್ಮ ಭವೇ ಭಕ್ತಿಂ ಚ ಶಾಶ್ವತೀಂ ॥ ೪೬ ॥

ಪಾತಿವ್ರತ್ಯಂ ವಿಹಾಯೈವ ಸ್ವೈರಿಣ್ಯಶ್ಚ ಸ್ತ್ರಿಯಸ್ತದಾ ।
ನಾರದೋಽಪಿ ಯಯೌ ತತ್ರ ಸ್ವಶಿಷ್ಯೈಃ ಸಹಿತೋ ಮುನಿಃ ॥ ೪೭ ॥

ಮಾಯಾರೂಪಂ ಸಮಾಸ್ಥಾಯ ನಿಯೋಗಾಚ್ಚಕ್ರಿಣೋ ದ್ವಿಜಾಃ ।
ಸ್ತ್ರಿಯೋ ದೃಷ್ಟಫಲಾರ್ಥಿನ್ಯೋ ದೈತ್ಯಾ ದೃಷ್ಟಫಲಾರ್ಥಿನಃ ॥ ೪೮ ॥
ಬಭೂವುರುಪದೇಶೇನ ನಾರದಸ್ಯ ಮಹಾತ್ಮನಃ ।
ಪಾಷಂಡಮಾರ್ಗಭೂಯಿಷ್ಠಾ ವೇದಮಾರ್ಗವಿವರ್ಜಿತಾಃ ॥ ೪೯ ॥

---

೪೫. ಅಂಥ ಶಾಸ್ತ್ರವನ್ನು ವಿಷ್ಣುವು ಆ ಮಾಯಾವಿಗೆ ಉಪದೇಶಿಸಿ, ತ್ರಿಪುರಗಳಿಗೆ ಕಳುಹಿಸಿದನು. ಮಾಯಾವಿಯಾದರೋ ಶೀಘ್ರವಾಗಿ ಆ ಪಟ್ಟಣಗಳಿಗೆ ಬಂದು ಸೇರಿದನು.

೪೬, ಮಾಯಾವಿಯು ತನ್ನ ಶಾಸ್ತ್ರಬಲದಿಂದ ಆ ರಾಕ್ಷಸರನ್ನೆಲ್ಲಾ ಅಜ್ಞಾನಿಗಳನ್ನಾಗಿಮಾಡಿದನು. ಈ ಶಾಸ್ತ್ರಾಭ್ಯಾಸದಿಂದ ದಾನವರೆಲ್ಲರೂ, ವೈದಿಕವಾದ ಕರ್ಮಗಳನ್ನೆಲ್ಲಾ ದೂರಮಾಡಿದರು. ಪರಮೇಶ್ವರನಲ್ಲಿಟ್ಟಿದ್ದ ಶಾಶ್ವತವಾದ ಭಕ್ತಿಯನ್ನು ಮರೆತುಬಿಟ್ಟರು.

೪೭. ದಾನವಸ್ತ್ರೀಯರೆಲ್ಲರೂ ತಮ್ಮ ಪಾತಿವ್ರತ್ಯವನ್ನು ಸಂಪೂರ್ಣವಾಗಿ ಬಿಟ್ಟು, ಐಹಿಕಸುಖಾಭಿಲಾಷೆಯಿಂದ ಜಾರಿಣಿಯರಾದರು. ಆ ಕಾಲಕ್ಕೆ ಸರಿಯಾಗಿ ನಾರದನು ತನ್ನ ಶಿಷ್ಯರೊಡಗೂಡಿ ಆ ನಗರವನ್ನು ಪ್ರವೇಶಿಸಿದನು.

೪೮-೪೯. ಅಲ್ಲಿ ವಿಷ್ಣುವಿನ ಅಪ್ಪಣೆಯಂತೆ ನಾರದನೂ ಸಹ ಮಾಯಾರೂಪವನ್ನು ಪಡೆದು, ಸ್ತ್ರೀಪುರುಷ ಭೇದವಿಲ್ಲದೆ ಸರ್ವರಿಗೂ ಕೇವಲ ಪ್ರತ್ಯಕ್ಷಪ್ರಮಾಣವಾದ ಚಾರ್ವಾಕದರ್ಶನವನ್ನು ಉಪದೇಶಿಸಿದನು. ಈ ಉಪದೇಶದಿಂದ ಅವರೆಲ್ಲರೂ ವೈದಿಕಮಾರ್ಗವನ್ನು ದೂರಮಾಡಿ, ಪಾಷಂಡಿಗಳಂತೆ ಸ್ವೇಚ್ಛಾಚಾರಿಗಳಾದರು.

ಶಿವಾರ್ಚನಪರಿಭ್ರಷ್ಟಾಃ ಸಂಜಾತಾಃ ದಾನವಾಸ್ತದಾ ।
ಏವಂ ಸ ಭಗವಾನ್ ವಿಷ್ಣುರ್ಮಾಯಾರೂಪಧರೋ ವಿಭುಃ ॥ ೫೦ ॥

ಅಧರ್ಮಬಹುಲಂ ಕೃತ್ವಾ ತ್ರಿಪುರಂ ಮುನಿಪುಂಗವಾಃ ।
ಮಹಾದೇವಮನುಪ್ರಾಪ್ಯ ಶರಣಂ ಸರ್ವದೇಹಿನಾಂ ॥ ೫೧ ॥

ತುಷ್ಟಾವ ಸ್ತೋತ್ರವರ್ಯೇಣ ಭಗವಂತಂ ಸನಾತನಂ ।
ದಂಡವತ್ಪ್ರಣಿಪತ್ಯಾಽಽಹ ಜಲೇ ಸ್ಥಿತ್ವಾ ಸಮಾಹಿತಃ ॥ ೫೨ ॥

ನಮಃ ಸರ್ವಾತ್ಮನೇ ತುಭ್ಯಂ ಶಂಕರಾಯಾರ್ತಿಹಾರಿಣೇ ।
ರುದ್ರಾಯ ನೀಲಕಂಠಾಯ ಕದ್ರುದ್ರಾಯ ಪ್ರಚೇತಸೇ ॥ ೫೩ ॥

ಗತಿಸ್ತ್ವಂ ಸರ್ವದಾಸ್ಮಾಕಂ ನಾನ್ಯದ್ದೇವಾರಿಮರ್ದನ ।
ತ್ವಮಾದಿಸ್ತ್ವಮನಾದಿಸ್ತ್ವಮನಂತಶ್ಚಾಕ್ಷಯಃ ಪ್ರಭುಃ ॥ ೫೪ ॥

---

೫೦. ಶಿವಾರಾಧನೆಯಲ್ಲಿ ನಿರತರಾಗಿದ್ದ ಆ ದೈತ್ಯರೆಲ್ಲರೂ ವೈಷ್ಣವೀಮಾಯೆಗೆ ಸಿಕ್ಕಿದವರಾಗಿ, ಶಿವಾರಾಧನೆಯನ್ನು ದೂರಮಾಡಿ ಪಾಪಕರ್ಮಿಗಳಾಗುತ್ತಾ ಬಂದರು.

೫೧. ಹೀಗೆ ಮಾಯೆಯಿಂದ ಮಹಾವಿಷ್ಣುವು ಆ ತ್ರಿಪುರದ ದೈತ್ಯರನ್ನೆಲ್ಲಾ ಅಧರ್ಮಿಗಳನ್ನಾಗಿಮಾಡಿ, ಸರ್ವರಿಗೂ ರಕ್ಷಕನಾದ ಪರಮೇಶ್ವರನಲ್ಲಿಗೆ ಬಂದನು.

೫೨. ಅಲ್ಲಿ ಪರಶಿವನನ್ನು ದಿವ್ಯಸ್ತೋತ್ರಗಳಿಂದ ಸ್ತುತಿಸಿ, ಜಲಮಧ್ಯದಲ್ಲಿ ನಿಂತು ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರಮಾಡಿ ಹೀಗೆ ಹೊಗಳಲಾರಂಭಿಸಿದನು.

೫೩. ‘ಓ ಪರಮೇಶ್ವರನೇ, ನೀನು ಸರ್ವಾಂತರ್ಯಾಮಿಯು. ಭಕ್ತಜನರ ಪೀಡಾಪರಿಹಾರಕನು. ವಿಷಗ್ರೀವನಾಗಿ, ಜ್ಞಾನದಾಯಕನಾಗಿ, ಜಲಾಭಿಮಾನಿದೇವತೆಯಾಗಿರುವ ರುದ್ರದೇವನೇ, ನಿನಗೆ ನಮಸ್ಕಾರವು.

೫೪. ಶತ್ರುನಾಶಕನಾದ ಮಹೇಶ್ವರನೇ, ನೀನೇ ನಮಗೆಲ್ಲರಿಗೂ ರಕ್ಷಕನು. ಪ್ರಪಂಚಕ್ಕೆ ನೀನೇ ಆದಿಪುರುಷನು. ನಿನಗೆ ಮೊದಲಿನವನು ಯಾವನೂ ಇಲ್ಲ. ಹಾಗೆಯೇ ನಿನಗೆ ಅಂತವೂ ಇಲ್ಲ. ಕ್ಷೀಣಸ್ಥಿತಿಯೂ ಇಲ್ಲ. ಸರ್ವದಾ ಪ್ರಭುವಾಗಿ ವ್ಯಾಪಿಸಿರುವ ಪರಮಾತ್ಮನು ನೀನೇ ಅಲ್ಲವೆ?

ಪ್ರಕೃತಿಃ ಪುರುಷಃ ಸಾಕ್ಷಾದ್ದ್ರಷ್ಟಾ ಹರ್ತಾ ಜಗದ್ಗುರುಃ ।
ತ್ರಾತಾ ನೇತಾ ಜಗತ್ಯಸ್ಮಿನ್ ದ್ವಿಜಾತೀನ್ ದ್ವಿಜವತ್ಸಲಃ ॥ ೫೫ ॥

ವರದೋ ವಾಙ್ಮಯೋ ವಾಚ್ಯೋ ವಾಚ್ಯವಾಚಕವರ್ಜಿತಃ ।
ಧ್ಯೇಯೋ ಮುಕ್ತ್ಯರ್ಥಮೀಶಾನೋ ಯೋಗಿಭಿರ್ಯೋಗವಿತ್ತಮೈಃ ॥ ೫೬ ॥

ಹೃತ್ಪುಂಡರೀಕಸುಷಿರೇ ಯೋಗಿನಾಂ ಸಂಸ್ಥಿತಂ ಸದಾ ।
ವದಂತಿ ಸೂರಯಃ ಸಂತಂ ಪರಬ್ರಹ್ಮಸ್ವರೂಪಿಣಂ ॥ ೫೭ ॥

ಭವಂತಂ ತತ್ತ್ವಮಿತ್ಯಾಹುಸ್ತೇಜೋರಾಶಿಂ ಪರಾತ್ಪರಂ ।
ಪರಮಾತ್ಮಾನಮಿತ್ಯಾಹುರಸ್ಮಿನ್ ಜಗತಿ ಯದ್ವಿಭೋ ॥ ೫೮ ॥

ದೃಷ್ಟಂ ಶ್ರುತಂ ಸ್ಥಿತಂ ಸರ್ವಂ ಜಾಯಮಾನಂ ಜಗದ್ಗುರೋ ।
ಅಣೋರಲ್ಪತರಂ ಪ್ರಾಹುರ್ಮಹತೋಽಪಿ ಮಹತ್ತರಂ ॥ ೫೯ ॥

---

೫೫. ಸಾಂಖ್ಯಮತದಲ್ಲಿ ಪ್ರತಿಪಾದಿತವಾಗಿರುವ ಪ್ರಕೃತಿಯೂ, ಪುರುಷನೂ, ನೀನೇ. ಲೋಕಸೃಷ್ಟಿಕರ್ತನೂ, ಲೋಕನಾಶಕನೂ, ಲೋಕಪಾಲಕನೂ, ಬ್ರಾಹ್ಮಣವಾತ್ಸಲ್ಯವುಳ್ಳವನೂ ನೀನೇ ಅಲ್ಲವೇ? ಬ್ರಹ್ಮಮಾರ್ಗಗಾಮಿಗಳನ್ನು ನೀನಲ್ಲದೆ ಮತ್ತಾರು ರಕ್ಷಿಸರು?.

೫೬. ಓ ಶಂಭುವೇ, ವರವನ್ನು ಕೊಡುವವನೂ, ವಾಕ್ಸ್ವರೂಪನೂ, ವಾಕ್ಕುಗಳಿಂದ ಸ್ತುತಿಸಲರ್ಹನಾದವನೂ ನೀನೇ ಆಗಿರುವೆ. ಹಾಗಿದ್ದರೂ, ವ್ಯವಹಾರದಲ್ಲಿ ಕಂಡುಬರುವ ವಾಚ್ಯ, ವಾಚಕ, ವಸ್ತುಗಳಿಗಿಂತ ನೀನು ಭಿನ್ನನಾಗಿ ತೋರುವೆ. ಯೋಗಿಗಳು ತಮ್ಮ ಯೋಗದ ಮಹಿಮೆಯಿಂದ ನಿನ್ನ ಸ್ವರೂಪವನ್ನರಿತು, ಮೋಕ್ಷಸಂಪಾದನೆಗಾಗಿ ನಿನ್ನನ್ನೇ ಈಗ ಧ್ಯಾನಮಾಡುತ್ತಿರುವರು.

೫೭. ಯೋಗಿಗಳು ಪರಬ್ರಹ್ಮಸ್ವರೂಪಿಯಾದ ನಿನ್ನನ್ನು ತಮ್ಮ ಹೃದಯಕಮಲದ ಮಧ್ಯದಲ್ಲಿ ನಿಲ್ಲಿಸಿಕೊಂಡಿರುವರೆಂದು ವಿದ್ವಾಂಸರೆಲ್ಲರೂ ಹೇಳುತ್ತಿರುವರು.

೫೮. ಎಲೈ ಪರಶಿವನೇ ಲೋಕದಲ್ಲಿ ತೇಜೋರಾಶಿಯಾಗಿ ಪರಾತ್ಪರನಾಗಿ, ಪರಮಾತ್ಮಸ್ವರೂಪಿಯಾಗಿ ವಿರಾಜಿಸುತ್ತಿರುವನು ನೀನೇ ಎಂದು ಎಲ್ಲರೂ ಉದ್ಘೋಷಿಸುತ್ತಿರುವರು.

೫೯. ಜಗದ್ಗುರುವೇ, ನಮ್ಮ ಕಣ್ಣಿಗೆ ಕಾಣುವ ವಸ್ತುವೂ, ನಾವು ಕೇಳುವ ಪದಾರ್ಥಗಳೂ, ಎಲ್ಲೆಲ್ಲೂ ಇರುವ ದ್ರವ್ಯಗಳೂ, ಹುಟ್ಟಲಿರುವ ಅಖಿಲಪ್ರಪಂಚವೂ, ಇವೆಲ್ಲವೂ ನಿನ್ನ ವಿಕಾರಗಳೇ. ಅಣುವಿಗಿಂತಲೂ ಅಣುವಾಗಿ, ಮಹತ್ತಿಗಿಂತಲೂ ಮಹತ್ತಾಗಿ ಜಗದ್ವ್ಯಾಪ್ತಿಯಾಗಿರುವವನು ನೀನಲ್ಲವೆ?

ಸರ್ವತಃ ಪಾಣಿಪಾದಾಂತಂ ಸರ್ವತೋಽಕ್ಷಿಶಿರೋಮುಖಂ ।
ಮಹಾದೇವಮನಿರ್ದೇಶ್ಯಂ ಸರ್ವಜ್ಞಂ ತ್ವಾಮನಾಮಯಂ　　॥ ೬೦ ॥

ವಿಶ್ವರೂಪಂ ವಿರೂಪಾಕ್ಷಂ ಸದಾಶಿವಮನುತ್ತಮಂ ।
ಕೋಟಿಭಾಸ್ಕರಸಂಕಾಶಂ ಕೋಟಿಶೀತಾಂಶುಸಂನಿಭಂ　　॥ ೬೧ ॥

ಕೋಟಿಕಾಲಾಗ್ನಿಸಂಕಾಶಂ ಷಡ್ವಿಂಶಾತ್ಮಕಮೀಶ್ವರಂ ।
(ಷಟ್ತ್ರಿಂಶಾತ್ಮಕ) ಎಂಬ ಪಾಠಾಂತರವಿದೆ
ಪ್ರವರ್ತಕಂ ಜಗತ್ಯಸ್ಮಿನ್ ಪ್ರಕೃತೇಃ ಪ್ರಪಿತಾಮಹಂ　　॥ ೬೨ ॥

ವದಂತಿ ವರದಂ ದೇವಂ ಸರ್ವಾವಾಸಂ ಸ್ವಯಂಭುವಂ ।
ಶ್ರುತಯಃ ಶ್ರುತಿಸಾರಂ ತ್ವಾಂ ಶ್ರುತಿಸಾರವಿದಶ್ಚ ಯೇ　　॥ ೬೩ ॥

---

೬೦. ಎಲ್ಲೆಲ್ಲಿಯೂ, ಎಲ್ಲಾ ಪ್ರಾಣಿಗಳಿಗೂ, ಕಾಲು, ಕೈ, ಕಣ್ಣು, ಶಿರಸ್ಸು, ಮುಖ ಈ ಅಂಗಗಳಾಗಿರುವವನು ನೀನೇ. ಆದರೂ ಸರ್ವಜ್ಞನಾಗಿ ನಾಶರಹಿತನಾಗಿರುವ ನಿನ್ನನ್ನು ಮಾತ್ರ ತಿಳಿಯುವುದು ನಮಗೆ ಸುಲಭವಾಗಿಲ್ಲ.

೬೧. ಸದಾಶಿವನೇ! ಪ್ರಪಂಚವೆಲ್ಲವೂ ನಿನ್ನ ರೂಪೇ. ಸೋಮಸೂರ್ಯಾಗ್ನಿಲೋಚನನು ನೀನು. ಕೋಟಿ ಸೂರ್ಯನಂತೆ ತೇಜಸ್ಸುಳ್ಳವನಾದರೂ, ಕೋಟಿ ಚಂದ್ರರಂತೆ ಪ್ರಜೆಗಳಿಗೆ ಆನಂದದಾಯಕನಾಗಿರುವೆ.

೬೨. ನಿನ್ನ ತಾಪವು ಕೋಟಿ ಸಂಖ್ಯೆಯ ಪ್ರಲಯಾಗ್ನಿಗೆ ಸಮಾನವಾಗಿದೆ. ನಿನ್ನ ತತ್ತ್ವಗಳು, ಮೂವತ್ತಾರು ರೂಪಗಳಿಂದ ಜಗತ್ತನ್ನು ವ್ಯಾಪಿಸಿವೆ. ಹೆಚ್ಚೇನು ? ಈ ಜಗತ್ತಿಗೇ ನೀನೇ ಪ್ರವರ್ತಕನು. ಪ್ರಕೃತಿಗೂ ಪ್ರಕೃತಿಯಾಗಿರುವವನು ನೀನು.

೬೩. ವೇದಾರ್ಥವನ್ನು ಸಂಪೂರ್ಣವಾಗಿ ತಿಳಿದವರು ನಿನ್ನನ್ನು ಸರ್ವಾಶ್ರಯನೆಂದೂ, ಸ್ವಯಂ ಉತ್ಪನ್ನನಾದವನೆಂದೂ ಸರ್ವ ವರಗಳನ್ನು ಕೊಡಲು ಸಮರ್ಥನೆಂದೂ, ವೇದಗಳ ಮುಖ್ಯಸಾರವೇ ನೀನೆಂದೂ ಹೇಳುತ್ತಿರುವರು.

ಅದೃಷ್ಟಮಸ್ಮಾಭಿರನೇಕಮೂರ್ತೇ !
ದ್ವಿಧಾ ಕೃತಂ ಯದ್ಭವತಾ ಸು ಲೋಕೇ ।
ತದೇವ ದೈತ್ಯಾಸುರಭೂಸುರಾಶ್ಚ ।
ದೇವಾಸುರಾಃ ಸ್ಥಾವರಜಂಗಮಾಶ್ಚ ॥ ೬೪ ॥

ಪಾಹಿ ನಾನ್ಯಾ ಗತಿಃ ಶಂಭೋ ವಿನಿಹತ್ಯಾಸುರಾನ್ ಕ್ಷಣಾತ್ ।
ಮಾಯಯಾ ಮೋಹಿತಾಃ ಸರ್ವೇ ದೈತ್ಯಾಸ್ತೇ ಪರಮೇಶ್ವರ ॥ ೬೫ ॥

ಯಥಾ ತರಂಗಾಃ ಶಫರೀಸಮೂಹಾ ।
ಯುಧ್ಯಂತಿಚಾನ್ಯೋನ್ಯಮುಪಾಂನಿಧೌ ತು ।
ಜಡಾಶ್ರಯಾದೇವ ಜಡೀಕೃತಾಶ್ಚ ।
ಸುರಾಸುರಾಸ್ತದ್ವಿಜಯೇ ಹಿ ಸರ್ವೇ ॥ ೬೬ ॥

॥ ಸೂತ ಉವಾಚ ॥

ಯ ಇಮಂ ಪ್ರಾತರುಥ್ಥಾಯ ಶುಚಿರ್ಭೂತ್ವಾ ಪಠೇನ್ನರಃ ।
ಶೃಣುಯಾದ್ವಾ ಸ್ತವಂ ಪುಣ್ಯಂ ಸರ್ವಾನ್ ಕಾಮಾನವಾಪ್ನುಯಾತ್ ॥೬೭॥

---

೬೪. ಅನೇಕಮೂರ್ತಿಯಾದ ಜಗದ್ಗುರುವೇ, ನಮಗೆ ತಿಳಿಯದಂತೆ, ನೀನು ಎರಡು ತತ್ತ್ವಗಳಿಂದ ಲೋಕವನ್ನು ಎರಡು ರೂಪವಾಗಿ ಸೃಷ್ಟಿಸಿರುವೆ. ದೇವತೆಗಳು, ರಾಕ್ಷಸರು; ಸ್ಥಾವರವು, ಜಂಗಮವು; ಹೀಗೆ ಸೃಷ್ಟಿಕ್ರಮವೇ ಎರಡು ತೆರನಾಗಿದೆ.

೬೫. ಎಲೈ ಶಂಭುವೇ, ನಮಗೆ ರಕ್ಷಕರು ಈಗ ಯಾರೂ ಇಲ್ಲ. ನಮ್ಮನ್ನು ಹಿಂಸಿಸುತ್ತಿರುವ ಈ ರಾಕ್ಷಸರನ್ನು ನಾಶಮಾಡಿ ಲೋಕವನ್ನೇ ರಕ್ಷಿಸು. ಈಗ ರಾಕ್ಷಸರೆಲ್ಲರೂ ಮಾಯಾಮೋಹಿತರಾಗಿ ಅಧರ್ಮಿಗಳಾಗಿರುವರು.

೬೬. ಸಮುದ್ರದಲ್ಲಿ ಹುಟ್ಟುವ ಅಲೆಗಳು, ಮೀನುಗಳೂ, ಜಲವನ್ನಾಶ್ರಯಿಸಿ ಜಡವಸ್ತುಗಳಾಗಿ ಪರಸ್ಪರಜಯಾಪೇಕ್ಷೆಯಿಂದ ಹೇಗೆ ಹೋರಾಡುವುವೋ, ಹಾಗೆಯೇ ಈ ದೇವರಾಕ್ಷಸರು, ನನ್ನ ಮಾಯೆಗೆ ಅಧೀನರಾಗಿ ಜಯಾಭಿಲಾಷೆಯಿಂದ ಜಡರಾಗಿ ಪರಸ್ಪರ ಹೋರಾಡುತ್ತಿರುವರು ಎಂದು ವಿಷ್ಣುವು ಶಿವನನ್ನು ಬಹುವಾಗಿ ಪ್ರಾರ್ಥಿಸಿದನು.

೬೭. ಸೂತಮಹರ್ಷಿಗಳು ಶೌನಕಾದಿಗಳಿಗೆ ಈ ವಿಷ್ಣುಕೃತವಾದ ಶಿವಸ್ತೋತ್ರವು ಮಹಾಪುಣ್ಯಪ್ರದವಾದದ್ದೆಂದೂ, ಇದನ್ನು ನಿತ್ಯವೂ ಪ್ರಾತಃಕಾಲದಲ್ಲಿ ಪಠಿಸಿದವರು ಸಮಸ್ತ ಇಷ್ಟಾರ್ಥಗಳನ್ನೂ ಪಡೆಯುವರೆಂದೂ ಹೇಳಿದರು.

ಏವಂ ಸ್ತುತೋ ಮಹಾದೇವೋ ರುದ್ರಜಾಪ್ಯೇನ ಚಕ್ರಿಣಾ ।
ನಂದಿದತ್ತಕರಃ ಶಂಭುಃ ಸ್ವಯಂ ವಚನಮಬ್ರವೀತ್ ॥ ೬೮ ॥

॥ ಈಶ್ವರ ಉವಾಚ ॥

ಯುಷ್ಮತ್ಕಾರ್ಯಂ ಮಯಾ ಜ್ಞಾತಂ ವಿಷ್ಣೋರ್ಮಾಯಾಬಲಂ ತಥಾ ।
ತ್ರಿಪುರೇ ಚೈವ ಯದ್ವೃತ್ತಮಸುರಾಣಾಂ ಸುರೋತ್ತಮಾಃ ॥ ೬೯ ॥

ಸರ್ವೇ ಗತಸಮಾಚಾರಾ ವೇದಧರ್ಮವಿನಿಂದಕಾಃ ।
ದಾನವಾಸ್ತೇ ಯತೋ ಜಾತಾ ಸ್ತಸ್ಮಾದ್ವಧ್ಯಾ ಮಯಾ ತಥಾ ॥ ೭೦ ॥

ಏವಮುಕ್ತ್ವಾ ಮಹಾದೇವಃ ಸೋಮಃ ಸ್ಕಂದೇನ ನಂದಿನಾ ।
ಗಣೇಶ್ವರೈಶ್ಚ ಸಹಿತೋ ದಿವ್ಯಂ ಭವನಮಾವಿಶತ್ ॥ ೭೧ ॥

---

೬೮. ಮಹಾವಿಷ್ಣುವು ಮಹಾದೇವನನ್ನು ಬಹಳ ಭಕ್ತಿಯಿಂದ ಹೊಗಳಿದ ಮೇಲೆ, ಮಹೇಶ್ವರನು ನಂದೀಶ್ವರನ ಕೈಹಿಡಿದುಕೊಂಡು ಬಂದು ವಿಷ್ಣುವಿಗೆ ಪ್ರತ್ಯಕ್ಷ ನಾಗಿ ಹೀಗೆ ಹೇಳಲಾರಂಭಿಸಿದನು.

೬೯. ಎಲೈ ದೇವತೆಗಳೇ, ನಿಮ್ಮ ಅಭಿಪ್ರಾಯವು ನನಗೆ ತಿಳಿಯಿತು. ವಿಷ್ಣು ಮಾಯೆಗೆ ಸಿಕ್ಕಿ ತ್ರಿಪುರದ ರಾಕ್ಷಸರೆಲ್ಲರೂ ಅನಾಚಾರಿಗಳಾಗಿರುವುದನ್ನು ನಾನು ತಿಳಿದಿರುವೆನು.

೭೦. ಈಗ ಆ ದಾನವರೆಲ್ಲರೂ ಹಿಂದಿನ ತಮ್ಮ ಆಚಾರಗಳನ್ನೆಲ್ಲಾ ಬಿಟ್ಟು ಕೇವಲ ಸುಖಾಭಿಲಾಷಿಗಳಾಗಿ, ವೇದ, ಧರ್ಮ, ಇವುಗಳನ್ನು ದೂಷಿಸತಕ್ಕವರಾಗಿ ದುರಾಚಾರಿಗಳಾಗಿದ್ದಾರೆ. ಆದ್ದರಿಂದ ಅವರನ್ನು ಈಗ ಕೊಲ್ಲುವುದು ನ್ಯಾಯ ವಾಗಿದೆ.

೭೧. ಹೀಗೆ ಪರಮೇಶ್ವರನು ಮಹಾವಿಷ್ಣುವಿಗೆ ರಾಕ್ಷಸರನ್ನು ಕೊಲ್ಲುವುದಾಗಿ ಆಶ್ವಾಸನಕೊಟ್ಟು ಕುಮಾರಸ್ವಾಮಿ, ನಂದೀಶ್ವರ, ಗಣಾಧಿಪತಿಗಳು, ಇವರೊಡನೆ ಕೂಡಿ ತನ್ನ ದಿವ್ಯಗೃಹವನ್ನು ಪ್ರವೇಶಿಸಿದನು.

ಅಥ ಬ್ರಹ್ಮಾದಯೋ ದೇವಾ ದ್ವಾರಮಾಶ್ರಿತ್ಯ ತುಷ್ಟುವುಃ ।
ತತೋ ಗಣಾಗ್ರಣೀರ್ನಂದೀ ಶೂಲಹಸ್ತೋ ವಿನಿರ್ಗತಃ ॥ ೭೨ ॥

ಆಜ್ಞಯಾ ದೇವದೇವಸ್ಯ ತಂ ದೃಷ್ಟ್ವಾ ದೇವತಾಗಣಾಃ ।
ತುಷ್ಟುವುರ್ವಿವಿಧೈಃ ಸ್ತೋತ್ರೈರಭೀಷ್ಟಾರ್ಥಪ್ರದಾಯಿನಂ ॥ ೭೩ ॥

ವವರ್ಷುಃ ಪುಷ್ಪವರ್ಷಾಣಿ ನಂದಿನೋ ಮೂರ್ಧ್ನಿ ಖೇಚರಾಃ ।
ನಿಯೋಗಾದ್ವಜ್ರಿಣಃ ಸರ್ವೇ ನಂದೀ ತುಷ್ಟಸ್ತದಾಽಭವತ್ ॥ ೭೪ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ವಿದ್ಯುನ್ಮಾಲಿ ತಾರಕಾಕ್ಷ ಕಮಲಾಕ್ಷ ತಪ ಆದಿಕಥನಂ
ನಾಮ ಚತುಸ್ತ್ರಿಂಶೋಽಧ್ಯಾಯಃ.

---

೭೨. ಆಮೇಲೇ ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ ಆ ಮಹೇಶ್ವರನ ಮನೆಯ ಬಾಗಿಲಲ್ಲಿ ನಿಂತು ಈಶ್ವರನನ್ನು ವಿಧವಿಧವಾಗಿ ಹೊಗಳುತ್ತಿದ್ದರು. ಸ್ವಲ್ಪ ಹೊತ್ತಾದಮೇಲೆ ನಂದೀಶ್ವರನು ತ್ರಿಶೂಲವನ್ನು ಕೈಯ್ಯಲ್ಲಿ ಹಿಡಿದು ಈಶ್ವರಗೃಹದಿಂದ ಹೊರಕ್ಕೆ ಬಂದನು.

೭೩. ದೇವದೇವನಾದ ಪರಮೇಶ್ವರನ ಭಕ್ತನಾದ ನಂದೀಶ್ವರನನ್ನು ಆ ದೇವತೆಗಳೆಲ್ಲರೂ ವಿಧವಿಧವಾದ ಸ್ತೋತ್ರಗಳಿಂದ ಸ್ತುತಿಸಿದರು. ಏಕೆಂದರೆ ನಂದಿಯೂ ಸಹ ಭಕ್ತರ ಇಷ್ಟಾರ್ಥಗಳನ್ನು ಅನುಗ್ರಹಿಸಿ ಕೊಡತಕ್ಕವನೇ.

೭೪. ನಂದೀಶ್ವರನ ಮೇಲೆ ದೇವತೆಗಳೆಲ್ಲರೂ ಹೂವಿನ ಮಳೆಗರೆದರು. ದೇವೇಂದ್ರನ ಅಪ್ಪಣೆಯಂತೆ ದೇವತೆಗಳೆಲ್ಲರೂ ನಂದೀಶ್ವರನನ್ನು ಸ್ತುತಿಸಿ, ನಂದಿಯನ್ನು ಬಹಳವಾಗಿ ಸಂತೋಷಗೊಳಿಸಿದರು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣಗಳಲ್ಲಿ ಸೂತಶೌನಕ
ಸಂವಾದರೂಪವಾಗಿ ವಿದ್ಯುನ್ಮಾಲಿ, ತಾರಕಾಕ್ಷ, ಕಮಲಾಕ್ಷ, ಈ
ತ್ರಿಪುರಾಸುರರ ತಪಸ್ಸನ್ನು ವಿವರಿಸಿದ ಮೂವತ್ತುನಾಲ್ಕನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಪಂಚತ್ರಿಂಶೋಽಧ್ಯಾಯಃ.

॥ ಸೂತ ಉವಾಚ ॥

ಅಥ ನಂದೀಶ್ವರಃ ಪ್ರಾಹ ಬ್ರಹ್ಮಾದೀನ್ ಪರಯಾ ಮುದಾ ।
ಸಸಾರಥಿಂ ರಥಂ ಶಂಭೋಃ ಸಶರಂ ಕರ್ತುಮರ್ಹಥ ॥ ೧ ॥

ರಥಾರೂಢೋ ಮಹಾದೇವಸ್ತ್ರಿಪುರಂ ಸಂಹರಿಷ್ಯತಿ ।
ಅಥ ದೇವಾಧಿದೇವಸ್ಯ ನಿರ್ಮಿತೋ ವಿಶ್ವಕರ್ಮಣಾ ॥ ೨ ॥

ರಥಃ ಪರಮಶೋಭಾಢ್ಯಃ ಸರ್ವದೇವಮಯಃ ಶಿವಃ ॥
ಸೂರ್ಯಚಂದ್ರಾಸ್ಮೃತೌ ಚಕ್ರೇ ಅರಯಃ ಶಶಿನಃ ಕಲಾಃ ॥ ೩ ॥

ಮೂವತ್ತೈದನೆಯ ಅಧ್ಯಾಯವು.

೧. ಅನಂತರ ನಂದೀಶ್ವರನು ಬ್ರಹ್ಮನೇ ಮೊದಲಾದ ಸಮಸ್ತ ದೇವತೆಗಳನ್ನು ಕುರಿತು, "ಪರಮೇಶ್ವರನ ರಥವನ್ನು ಸಾರಥಿಯಿಂದಲೂ ಧನುರ್ಬಾಣಗಳಿಂದಲೂ ಸಿದ್ಧಗೊಳಿಸಿರಿ.

೨. ಅದೇ ರಥವನ್ನು ಏರಿ ಪರಮೇಶ್ವರನು ಸಾಕ್ಷಾತ್ತಾಗಿ ತ್ರಿಪುರಗಳನ್ನು ನಾಶಗೊಳಿಸುವನು" ಎಂದು ಹೇಳಲು ದೇವತೆಗಳೆಲ್ಲರೂ ಅದಕ್ಕೆ ಒಪ್ಪಿದರು. ಪರಶಿವನ ರಥವಾದರೋ ದೇವಶಿಲ್ಪಿಯಾದ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿತ್ತು. ಸರ್ವಾಲಂಕಾರಭೂಷಿತವಾಗಿತ್ತು. ಸರ್ವದೇವತೆಗಳಿಗೂ ಆವಾಸಸ್ಥಾನವಾಗಿ ಮಂಗಳಪ್ರದವಾಗಿತ್ತು.

೩-೪. ಆ ರಥಕ್ಕೆ ಸೂರ್ಯಚಂದ್ರರೇ ಎರಡು ಗಾಲಿಗಳಾಗಿದ್ದುವು. ಚಂದ್ರನ ಹದಿನಾರು ಕಲೆಗಳು ಆ ಚಕ್ರಗಳ ಅರೆಕಾಲುಗಳಾದವು. ಹನ್ನೆರಡು ಜನ

ಸೂಕ್ಷ್ಮಾರಾ ದ್ವಾದಶಾದಿತ್ಯಾಃ ನೇಮ್ಯಃ ಷಡೃತವಃ ಸ್ಮೃತಾಃ ।
ಅಂತರಿಕ್ಷಮಭೂತ್ತಸ್ಯ ಪುಷ್ಕರಂ ಮುನಿಪುಂಗವಾಃ ॥ ೪ ॥

ಮಂದರಶ್ಚಾಭವನ್ನೀಡಂ ಕೂಬರಂ ಕಥಯಾಮಿ ವಃ ।
ಉದಯಾದ್ರಿಸ್ತಥಾಸ್ತಾದ್ರಿರಧಿಷ್ಠಾನಮಥೋಚ್ಯತೇ ॥ ೫ ॥

ಮೇರುಃ ಕೇಸರಶೈಲಶ್ಚ ವೇಗಃ ಸಂವತ್ಸರಃ ಸ್ಮೃತಃ ।
ಅಯನೇ ಮೇಖಲೇ ಪ್ರೋಕ್ತೇ ಚಕ್ರಯೋರ್ಮುನಿಪುಂಗವಾಃ ॥ ೬ ॥

ಮುಹೂರ್ತಾ ಬಂಧುರಾಃ ಶಸ್ತಾಃ ರಥಸ್ಯ ದ್ವಿಜಸತ್ತಮಾಃ ।
ಘೋಣಾ ಕಾಷ್ಠಾಶ್ಚ ವಿಜ್ಞೇಯಾ ಅಕ್ಷದಂಡಃ ಕ್ಷಣಾ ದ್ವಿಜಾಃ ॥ ೭ ॥

ಕುಥಾ ನಿಮೇಷಾಃ ಕಥಿತಾಃ ಕಲಾಶ್ಚೈವ ಲವಾಃ ಸ್ಮೃತಾಃ ।
ದ್ಯೌರ್ವರೂಥಮಭೂತ್ತಸ್ಯ ಸ್ವರ್ಗಮೋಕ್ಷಾವುಭೌ ಧ್ವಜೌ ॥ ೮ ॥

ಸೂರ್ಯರು ಅವುಗಳ ಸಣ್ಣ ಅರೆಕಾಲುಗಳಾದರು. ಆರು ಋತುಗಳೇ ಚಕ್ರಗಳ ಅಂಬುಗಳು. ಅಂತರಿಕ್ಷವೇ ಆಯುಧಗಳ ಒರೆಯಾಯಿತು. ಹೀಗೆ ಒಂದೊಂದು ಭಾಗವನ್ನು ಒಬ್ಬೊಬ್ಬ ದೇವತೆಯು ಆಕ್ರಮಿಸಿದನು.

೫. ಮಂದರಪರ್ವತವೇ ಆ ರಥಕ್ಕೆ ಮಧ್ಯಭಾಗವಾಯಿತು. ಉದಯಪರ್ವತವು ತುದಿಯಾಗಿಯೂ ಅಸ್ತಪರ್ವತವು ಹಿನ್ನೆಲೆಯಾಗಿಯೂ ನಿಂತವು.

೬. ಮೇರುವೂ, ಕೇಸರಪರ್ವತವೂ, ಪೀಠಗಳಾದವು. ಸಂವತ್ಸರವೇ ವೇಗವಾಯಿತು. ಎರಡು ಅಯನಗಳೇ ಎರಡು ಚಕ್ರಗಳಿಗೆ ದೂರಿಯಾದವು.

೭. ಮುಹೂರ್ತಗಳೇ ರಥದ ಮುಂದಿನ ಪಾರಿಯಾಯಿತು. ಅಷ್ಟದಿಕ್ಕುಗಳೇ ಆ ರಥಕ್ಕೆ ಮೂಗುಮರಗಳಾದುವು. ಕ್ಷಣಗಳೇ ಬಾವುಟದ ಸ್ತಂಭವಾಯಿತು.

೮. ನಿಮಿಷಗಳು ಆಸನದ ಅಂಬುಗಳಾದವು. ಕಲೆಗಳು ರಥದ ಮೊಳೆಗಳಾದುವು. ರಥರಕ್ಷಣೆಗೆ ಹೊದಿಸುವ ಚರ್ಮವೇ ಅಂತರಿಕ್ಷವಾಯಿತು. ಸ್ವರ್ಗ, ಮೋಕ್ಷ, ಇವೆರಡೂ ಬಾವುಟಗಳಾದುವು.

ದಂಡೌ ಚ ಕರ್ಮವೈರಾಗ್ಯೇ ಮುಖಾ ದಂಡಾಶ್ರಯಾಃ ಸ್ಮೃತಾಃ ।
ಸಂಧಯೋ ದಕ್ಷಿಣಾಸ್ತಸ್ಯ ಯುಗಾಕ್ಷೌ ಶೃಣುತ ದ್ವಿಜಾಃ ॥ ೯ ॥

ಅರ್ಥಕಾಮೌ ದ್ವಿಜಶ್ರೇಷ್ಠಾ ಈಶಾ ದಂಡಸ್ತಥೋಚ್ಯತೇ ।
ಅವ್ಯಕ್ತಮಿತಿ ಯತ್ಪ್ರೋಕ್ತಂ ಬುದ್ಧಿಸ್ತಸ್ಯೈವ ವಿಡ್ವಲಃ ॥ ೧೦ ॥

ಅಹಂಕಾರೋ ಭವೇತ್ಕೋಣೋ ಭೂತಾನಿ ಬಲಮುತ್ತಮಂ ।
ಭೂಷಣಾನೀಂದ್ರಿಯಾಣಿ ಸ್ಯುರರ್ಥಂ ಚ ಗತಿರುತ್ತಮಾ ॥ ೧೧ ॥

ವೇದಾಸ್ತಸ್ಯ ಹಯಾಃ ಪ್ರೋಕ್ತಾಃ ಷಡಂಗಾನಿ ಚ ಭೂಷಣಂ ।
ಧರ್ಮಶಾಸ್ತ್ರಾಣಿ ಮೀಮಾಂಸಾ ಪುರಾಣಂ ನ್ಯಾಯ ಏವ ಚ ॥ ೧೨॥

ಬಾಣಾಶ್ರಯಾಕ್ಷಯಾಶ್ಚೈವ ಮಂತ್ರಾ ಘಂಟಾ ಇಹೇರಿತಾಃ ।
ರಥಂತರಂ ಚ ಛಂದಾಂಸಿ ದಿಶಃ ಪಾದಾ ರಥಸ್ಯ ತಾಃ ॥ ೧೩ ॥

---

೯. ಕರ್ಮ, ವೈರಾಗ್ಯ, ಇವೆರಡೂ ದಂಡಗಳಾದುವು. ಯಜ್ಞಗಳು ಆ ದಂಡಗಳಿಗೆ ಆಶ್ರಯಸ್ಥಾನವಾಗಿ ನಿಂತವು. ಯಜ್ಞಾಂಗವಾದ ದಕ್ಷಿಣೆಯೇ ಸಂಧಿಪ್ರದೇಶವಾಯಿತು.

೧೦. ಅರ್ಥ, ಕಾಮ, ಇವೆರಡೂ ಎರಡು ನೊಗಗಳಾದುವು. ಅವ್ಯಕ್ತವಾದ ಬುದ್ಧಿಯೇ ಮೂರ್ತಿಮತ್ತಾಗಿ ಆ ರಥದ ಮುಂದಿನ ನೊಗದ ಮರವಾಯಿತು.

೧೧. ಆ ರಥಕ್ಕೆ ಅಹಂಕಾರವೇ ಮೂಲೆಯಾಯಿತು. ಪಂಚಭೂತಗಳು ಆ ರಥದ ಸಾರದಂತೆ ನಿಂತವು. ಪಂಚೇಂದ್ರಿಯಗಳೇ ಅದಕ್ಕೆ ಒಡವೆಯಾದುವು. ಅರ್ಥ (ಅಂತಸ್ಸಾರ) ವೇ ಆ ರಥದ ದಿವ್ಯಗಮನವಾಯಿತು.

೧೨-೧೩. ನಾಲ್ಕು ವೇದಗಳೇ ನಾಲ್ಕು ಕುದುರೆಗಳಾದವು. ವೇದಾಂಗಗಳು ಆರೂ ಒಡವೆಗಳಾದವು. ಧರ್ಮಶಾಸ್ತ್ರ, ಮೀಮಾಂಸಾ, ಪುರಾಣ, ನ್ಯಾಯಶಾಸ್ತ್ರ ಇವುಗಳು ಅಕ್ಷಯಬಾಣಗಳನ್ನೊದಗಿಸುವ ಬತ್ತಳಿಕೆಗಳಾದವು. ಮಂತ್ರಗಳು ಗಂಟೆಗಳಾದುವು. ರಥಂತರವೇ ಮೊದಲಾದ ಛಂದೋಭಾಗಗಳು, ದಿಕ್ಕುಗಳು ಆ ರಥಕ್ಕೆ ಕಾಲುಗಳಂತೆ ಇದ್ದವು.

ಸರಿತಾಂ ಪತಯಸ್ತಸ್ಯ ರಥಕಂಬಲಿಕಾಃ ಸ್ಮೃತಾಃ ।
ಗಂಗಾದ್ಯಾಃ ಸರಿತಃ ಶುಭ್ರಾಃ ಸರ್ವಾಭರಣಭೂಷಿತಾಃ ॥ ೧೪ ॥

ಸರ್ವಾಃ ಸ್ತ್ರೀರೂಪಧಾರಿಣ್ಯಶ್ಚಾಮರಾಗ್ರಕರಾಃ ಶುಭಾಃ ।
ಸಪ್ತಾವಹಾದ್ಯಾಃ ಸೋಪಾನಾಃ ಸಾರಥಿರ್ಭಗವಾನಜಃ ॥ ೧೫ ॥

ಪ್ರತೋದಃ ಪ್ರಣವಸ್ತಸ್ಯ ಶೈಲೇಂದ್ರಃ ಕಾರ್ಮುಕಂ ತಥಾ ।
ಜ್ಯಾ ಭುಜಂಗಾಧಿಪಃ ಶ್ರೀಮಾನ್ ಘಂಟಾ ವೈ ಭಾರತೀ ಸ್ಮೃತಾ ॥ ೧೬ ॥

ಇಷುಸ್ತಸ್ಯಾಭವದ್ವಿಷ್ಣುಃ ಯಮಃ ಶಲ್ಯಂ ದ್ವಿಜೋತ್ತಮಾಃ ।
ಶರಸ್ಯ ತೈಕ್ಷ್ಣ್ಯಂ ಕಾಲಾಗ್ನಿರೇವಂ ದೇವಮಯೋ ರಥಃ ॥ ೧೭ ॥

ಅಥಾಽಽರುರೋಹ ಭಗವಾನ್ ದಿವ್ಯಂ ರಥಮನುತ್ತಮಂ ।
ಸ್ತೂಯಮಾನೋ ಮಹಾದೇವೋ ಮುನಿಸಂಘೈರ್ಮುನೀಶ್ವರಾಃ ॥ ೧೮ ॥

---

೧೪. ಸಮುದ್ರಗಳು ರಥಕ್ಕೆ ಹೊದಿಸುವ ಕಂಬಳಿಯಂತೆ ಆಚ್ಛಾದಕಗಳಾದುವು. ಗಂಗೆಯೇ ಮೊದಲಾದ ಸಮಸ್ತ ನದಿಗಳೂ ಸರ್ವಾಭರಣಭೂಷಿತಗಳಾಗಿ,

೧೫. ಸ್ತ್ರೀರೂಪವನ್ನು ತಾಳಿ ಕೈಯ್ಯಲ್ಲಿ ಚಾಮರಗಳನ್ನು ಹಿಡಿದು ಸ್ವಾಮಿಯನ್ನು ಸೇವಿಸುವವರಾದರು. ಆವಹವೇ ಮೊದಲಾದ ಏಳು ವಾಯುಗಳೂ, ಮುಂದೆ ಏಳು ಮೆಟ್ಟಲುಗಳಾದುವು. ಪೂಜ್ಯನಾದ ಬ್ರಹ್ಮನೇ ಸಾರಥಿಯಾದನು.

೧೬. ಪ್ರಣವವೇ ಚಾವಟಿಯಾಯಿತು. ಹಿಮವತ್ಪರ್ವತವೇ ಧನುಸ್ಸಾಯಿತು. ಆದಿಶೇಷನೇ ಮೌರ್ವೀಯಾದನು. ಸಾಕ್ಷಾತ್ಸರಸ್ವತಿಯೇ ಧ್ವನಿಮಾಡುವ ಗಂಟೆಯಾದಳು.

೧೭. ಯುದ್ಧದಲ್ಲಿ ಪರಮೇಶ್ವರನಿಗೆ ಬಾಣವಾಗಿ ವಿಷ್ಣುವೇ ನಿಂತನು. ಯಮನು ಮೊನೆಯಂತಾದನು. ಕಾಲಾಗ್ನಿಯೇ ಬಾಣದ ವೇಗವಾಯಿತು. ಹೀಗೆ ಆ ರಥವು ಸಮಸ್ತ ದೇವತೆಗಳಿಂದ ಆವೃತವಾಗಿ ಸಿದ್ಧವಾಯಿತು.

೧೮. ಪರಮೇಶ್ವರನು ದೇವರ್ಷಿಗಳಿಂದ ಸ್ತುತಿಸಲ್ಪಡುತ್ತಾ ಇಂತಹ ದಿವ್ಯ ರಥವನ್ನು ನಿಧಾನವಾಗಿ ಹತ್ತಿದನು.

ಸ್ವಕಾರ್ಯವಿಘ್ನಕರ್ತಾರಂ ದೇವಂ ದೃಷ್ಟ್ವಾ ವಿನಾಯಕಂ ।
ಸಂಪೂಜ್ಯ ಭಕ್ಷ್ಯಭೋಜ್ಯೈಶ್ಚ ಫಲೈಶ್ಚ ವಿವಿಧೈಃ ಶುಭೈಃ ॥ ೧೯ ॥

ಉಂಡೇರೈರ್ಮೋದಕೈಶ್ಚೈವ ಪುಷ್ಪೈರ್ದೀಪೈರ್ಮನೋಹರೈಃ ।
ಏವಂ ಸಂಪೂಜ್ಯ ಭಗವಾನ್ ಪುರಂ ದಗ್ಧುಂ ಜಗಾಮ ಹ ॥ ೨೦ ॥

ಶಂಭೋರಗ್ರೇ ಯಯುರ್ದೇವಾಸ್ತೇಷಾಮಗ್ರೇ ಗಣೇಶ್ವರಾಃ ।
ತೇಷಾಮಗ್ರೇಸರೋ ನಂದೀ ಸರ್ವಲೋಕನಮಸ್ಕೃತಃ ॥ ೨೧ ॥

ವಿಮಾನಂ ಕೋಟಿಸೂರ್ಯಾಭಮಾರುಹ್ಯ ಮುನಿಪುಂಗವಾಃ ।
ದೈತ್ಯಾನ್ ಪ್ರಹರ್ತುಂ ಶೈಲಾದಿಸ್ತ್ವರೇಣ ಪ್ರಯಯೌ ತದಾ ॥ ೨೨ ॥

ಸಮಂತಾತ್ಪ್ರಯಯುರ್ದೇವಾಃ ಸಾಯುಧಾಶ್ಚ ಸವಾಹನಾಃ ।
ಲೋಕಪಾಲಾಸ್ತಥಾಸಿದ್ಧಾ ಗಂಧರ್ವಾಪ್ಸರಸಾಂ ಗಣಾಃ ॥ ೨೩ ॥

---

೨೦. ರಥವನ್ನು ಹತ್ತಿದೊಡನೆಯೇ ಪರಮೇಶ್ವರನು ಕಾರ್ಯವಿಘ್ನಗಳನ್ನು ದೂರ ಮಾಡುವಂತಹ ವಿನಾಯಕನನ್ನು ಮೊದಲು ಪೂಜೆಮಾಡಿದನು. ವಿನಾಯಕನಿಗೆ ಸಮಸ್ತ ಭಕ್ಷ್ಯಭೋಜ್ಯಗಳನ್ನೂ ನಾನಾವಿಧವಾದ ಹಣ್ಣುಹಂಪಲುಗಳನ್ನು ಉಂಡೆ, ಕಡುಬು, ಮೊದಲಾದ ತಿಂಡೀ ಪದಾರ್ಥಗಳನ್ನೂ, ಅರ್ಪಿಸಿ, ಧೂಪದೀಪ ನೈವೇದ್ಯಾದಿಗಳಿಂದ ತೃಪ್ತಿಪಡಿಸಿದನು. ಅನಂತರ ಸಕಲ ಸನ್ನಾಹಗಳೊಡನೆ ಪ್ರಯಾಣಕ್ಕೆ ಸಿದ್ಧನಾದನು.

೨೧. ಅನಂತರ ಪರಮೇಶ್ವರನ ಮುಂದೆ ಸಮಸ್ತ ದೇವತೆಗಳೂ, ಅವರ ಮುಂದೆ ಪ್ರಮಥಾಧಿನಾಯಕರೂ, ಅವರೆಲ್ಲರಿಗೂ ಮುಂದಾಳಾಗಿ ನಂದೀಶ್ವರನೂ ತೇಜಸ್ವಿಗಳಾಗಿ ನಡೆದರು.

೨೨. ಕೋಟಿ ಸೂರ್ಯ ಪ್ರಕಾಶಮಾನಗಳಾದ ವಿಮಾನಗಳನ್ನೇರಿ ಶೈಲರಾಜನೇ ಮೊದಲಾದವರು ದೈತ್ಯನಾಶಕ್ಕಾಗಿ ತ್ವರೆಯಿಂದ ಪ್ರಯಾಣಮಾಡಿದರು.

೨೩. ಉಳಿದ ದೇವತೆಗಳೂ, ಲೋಕಪಾಲಕರೂ, ಸಿದ್ಧರೂ, ಗಂಧರ್ವರೂ, ಅಪ್ಸರಸ್ಸುಗಳೂ ಗುಂಪು ಗುಂಪಾಗಿ ವಾಹನ, ಆಯುಧ ಇವುಗಳಿಂದ ಕೂಡಿದವರಾಗಿ ಪರಮೇಶ್ವರನೊಡನೆಯೇ ಸಾಗಿದರು.

ಮುನಯಃ ಶಂಸಿತಾತ್ಮಾನೋ ಮಾತರೋ ಲೋಕಮಾತರಃ ।
ಸಮಂತಾದ್ದೇವದೇವಸ್ಯ ಕೃತಾಂಜಲಿಪುಟಾ ಯಯುಃ ॥ ೨೪ ॥

ಪುಷ್ಪವರ್ಷಾಣಿ ವವೃಷುಃ ಖೇಚರಾಶ್ಚಾರಣಾಸ್ತಥಾ ।
ಭೃಂಗೀ ಪುರತ್ರಯಂ ಹಂತುಂ ಲಕ್ಷಕೋಟಿಗಣೈರ್ವೃತಃ ॥ ೨೫ ॥

ಜಗಾಮ ಶಂಕುಕರ್ಣಶ್ಚ ಗೋಕರ್ಣಶ್ಚ ಮಹಾಬಲಃ ।
ಕುಂದದಂತೋ ಮಹಾಕಾಲೋ ಡಿಂಡೀ ಮುಂಡೀ ಗಣೇಶ್ವರಃ ॥ ೨೬ ॥

ಶತಜಿಹ್ವಃ ಸಹಸ್ರಾಕ್ಷೋ ವೀರಭದ್ರೋ ಮಹಾಬಲಃ ।
ಶಿವಾಖ್ಯೋ ವಿಶಿಖಶ್ಚೈವ ತಥಾ ಪಂಚಶಿಖೋ ಮಹಾನ್ ॥ ೨೭ ॥

ಶತಾಸ್ಯಶ್ಟಂಕಹಸ್ತಶ್ಚ ಪಿಶಾಚೀಶಃ ಪಿನಾಕಧೃಕ್ ।
ಏತೇ ಚಾನ್ಯೇ ಚ ಬಹವೋ ಗಣಾನಾಂ ಲಕ್ಷಕೋಟಯಃ ॥ ೨೮ ॥
ಸಮಂತಾತ್ಪರಿವಾರ್ಯೇಶಂ ತ್ರಿಪುರಂ ಹಂತುಮುದ್ಯತಾಃ ॥

---

೨೪. ಹರ್ಷಚಿತ್ತರಾದ ಋಷಿಗಳೂ, ಸಪ್ತಮಾತೃಕೆಯರೂ, ಲೋಕಮಾತೆಯರೂ, ಅಂಜಲಿಬದ್ಧರಾಗಿ ಪರಶಿವನನ್ನೇ ಸ್ತುತಿಸುತ್ತ ಸ್ವಾಮಿಯನ್ನು ಹಿಂಬಾಲಿಸಿದರು.

೨೫. ಗಗನಚಾರಿಗಳಾದ ಚಾರಣರು ಪರಶಿವನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ಭೃಂಗಿಯು ತ್ರಿಪುರಗಳನ್ನು ನಾಶಪಡಿಸಲು ಲಕ್ಷಕೋಟಿ ಸೈನ್ಯದಿಂದ ಕೂಡಿದವನಾಗಿ ಶಂಭುವನ್ನು ಅನುಸರಿಸಿದನು.

೨೬. ಶಂಕುಕರ್ಣ, ಗೋಕರ್ಣ, ಕುಂದದಂತ, ಮಹಾತಾಲ, ಡಿಂಡೀ, ಮುಂಡೀ ಇವರೆಲ್ಲರೂ ಗಣಾಧಿಪರಾಗಿ ಪ್ರಯಾಣಮಾಡಿದರು.

೨೭. ಇನ್ನೂ ಶತಜಿಹ್ವ, ಸಹಸ್ರಾಕ್ಷ, ವೀರಭದ್ರ, ಮಹಾಬಲ, ಶಿವ ವಿಶಿಖ, ಪಂಚಶಿಖ ಇವರೇ ಮೊದಲಾದ ಗಣನಾಯಕರು ಯುದ್ಧಕ್ಕೆ ಹೊರಟರು.

೨೮. ಶತಾಸ್ಯ, ಟಂಕಹಸ್ತ, ಪೀಶಾಚೀಶ, ಪಿನಾಕಧೃಕ್ ಇವರೂ ಸಹ ಪ್ರಮಥಾದಿ ನಾಯಕರು. ಇನ್ನೂ ಲಕ್ಷಕೋಟಿ ಸಂಖ್ಯೆಯ ಗಣಗಳಿಗೆ ಸೇನಾಪತಿಗಳಾದವರೂ ಸಹ ಒಟ್ಟುಗೂಡಿ ಪರಮೇಶ್ವರನ ಅನುಯಾಯಿಗಳಾಗಿ ತ್ರಿಪುರಾಸುರರನ್ನು ನಾಶಮಾಡಲು ಹೊರಟರು.

ಅಥ ವಿರಂಚಿ ಮುರಾರಿ ವಿಭಾವಸು ।
ಪ್ರಭೃತಿಭಿರ್ನತಪಾದಸರೋರುಹಃ ।
ಸಹ ತದಾ ಹಿ ಜಗಾಮ ತಯಾಽಂಬಯಾ ।
ಸಕಲಲೋಕ ಹಿತಾಯ ಪುರತ್ರಯಂ ॥ ೨೯ ॥

ದಗ್ಧುಂ ಸಮರ್ಥೋ ಮನಸಾ ಕ್ಷಣೇನ ।
ಚರಾಚರಂ ಸರ್ವಮಿದಂ ತ್ರಿಶೂಲೀ ॥
ಕಿಂತ್ವತ್ರ ದಗ್ಧುಂ ತ್ರಿಪುರಂ ಪಿನಾಕೀ
ಸ್ವಯಂ ಗತಸ್ತತ್ರ ಗಣೈಶ್ಚ ಸಾರ್ಧಂ ॥ ೩೦ ॥

ರಥೇನ ಕಿಂ ಚೇಷುವರೇಣ ತಸ್ಯ ।
ಗಣೈಶ್ಚ ಶಂಭೋಸ್ತ್ರಿಪುರಂ ದಿಧಕ್ಷತಃ ।
ಪುರತ್ರಯಂ ದಗ್ಧುಮಲುಪ್ತಶಕ್ತೇಃ ।
ಕಿಮೇತದಿತ್ಯಾಹು ರಜೇಂದ್ರ ಮುಖ್ಯಾಃ ॥ ೩೧ ॥

---

೨೯. ಇಂಥ ಪರಿವಾರವನ್ನು ಪಡೆದು ಪರಮೇಶ್ವರನು, ಪರಬ್ರಹ್ಮ, ಪರಮ ಪುರುಷ, ಪ್ರಕಾಶಮಾನನಾದ ಸೂರ್ಯ ಇವರೇ ಮೊದಲಾದವರಿಂದ ಸೇವಿಸಲ್ಪಡುವವನಾಗಿ ಪಾರ್ವತಿಯೊಡನೆ, ತ್ರಿಪುರಗಳನ್ನು ನಾಶಪಡಿಸಿ ಲೋಕರಕ್ಷಣೆ ಮಾಡಲು ಪ್ರಯಾಣ ಮಾಡಿದನು.

೩೦. ಈ ಚರಾಚರಾತ್ಮಕವಾದ ಪ್ರಪಂಚವನ್ನೆಲ್ಲಾ ಏಕಕಾಲದಲ್ಲಿಯೇ, ಯಾರಸಹಾಯವೂ ಇಲ್ಲದೆ ನಾಶಮಾಡುವಂತಹ ಮಹಾನುಭಾವನಾದ ಮಹೇಶ್ವರನು, ಈ ಅಲ್ಪವಾದ ತ್ರಿಪುರನಾಶಕ್ಕೆ ತನ್ನ ಪ್ರಮಥಗಣಗಳೊಡನೆ ಇಷ್ಟು ವಿಜೃಂಭಣೆಯಿಂದ ಪ್ರಯಾಣಮಾಡಿದ್ದಾನೆ.

೩೧. ಈ ಮಹೇಶ್ವರನಿಗೆ ಈ ರಥವು ಏತಕ್ಕೆ? ಬಾಣಗಳು ಯಾವ ಸಹಾಯ ಮಾಡಿಯಾವು? ಈ ಪ್ರಮಥಗಣಗಳಿಂದೇನು ಪ್ರಯೋಜನ? ತ್ರಿಪುರಗಳನಾಶಕ್ಕೆ ಇಷ್ಟು ವಸ್ತುಗಳೂ, ಶಂಕರನಿಗೆ ಬೇಕಾಗುತ್ತವೆಯೇ? ಇವೆಲ್ಲವೂ ಪರಶಿವನ ಲೀಲೆಯಲ್ಲವೇ? ಎಂದು ಬ್ರಹ್ಮನೇ ಮೊದಲಾದವರು ಹೇಳಿಕೊಳ್ಳುತ್ತಿದ್ದರು.

ಮನ್ಯೇ ಚ ನೂನಂ ಭಗವಾನ್ ಪಿನಾಕೀ
ಲೀಲಾರ್ಥಮೇತತ್ಸಕಲಂ ಪ್ರಹರ್ತುಂ ।
ವ್ಯವಸ್ಥಿತಶ್ಚೇತಿ ತಥಾಽನ್ಯಥಾ ಚೇದಾ ।
ಡಂಬರೇಣಾಽಥ ಫಲಂ ಕಿಮೇತತ್ ॥ ೩೨ ॥

ಅಥ ಪಾಣೌ ಸಮಾದಾಯ ಧನುರ್ದೇವೋ ಮಹೇಶ್ವರಃ ।
ಶರಂ ಸಂಧಾಯ ವೇಗೇನ ತ್ರಿಪುರಂ ಸಮಚಿಂತಯತ್ ॥ ೩೩ ॥

ತಸ್ಮಿನ್ ಕಾಲೇ ಪುಷ್ಯಯೋಗೇ ಪುರಾಣ್ಯೇಕತ್ವಮಾಯಯುಃ ।
ತದಾ ಸಮಭವದ್ವಿಪ್ರಾ ದೇವಾನಾಂ ತುಮುಲೋ ಮಹಾನ್ ॥ ೩೪ ॥

ದೇವಾಶ್ಚ ಮುನಯಸ್ಸರ್ವೇ ತುಷ್ಟುವುಃ ಪರಮೇಶ್ವರಂ ।
ನನೃತುರ್ಯಕ್ಷಗಂಧರ್ವಾಶ್ಚಾರಣಾಃ ಸಿದ್ಧಕಿನ್ನರಾಃ ॥ ೩೫ ॥

---

೩೨. ಅದು ನಿಜವೆ. ಏಕೆಂದರೆ ಸಮಸ್ತಲೋಕವನ್ನೂ ಲೀಲಾಮಾತ್ರದಿಂದ ನಾಶಮಾಡುವ ಸಾಮರ್ಥ್ಯವುಳ್ಳ ಪರಶಿವನಿಗೆ ಇವೆಲ್ಲವೂ ಒಂದು ಆಡಂಬರವೆಂದೇ ನಾನು ಭಾವಿಸುವೆನು, ಎಂದು ಸೂತಮಹರ್ಷಿಗಳು ಶೌನಕಾದಿಗಳಿಗೆ ಹೇಳಿದರು

೩೩. ಆ ಮೇಲೆ ಮಹೇಶ್ವರನು ತ್ರಿಪುರಗಳ ಸಮೀಪಕ್ಕೆ ಹೋಗಿ ಕೈಯಲ್ಲಿ ಧನುಸ್ಸನ್ನು ಹಿಡಿದು ಅದಕ್ಕೆ ತೀಕ್ಷ್ಣವಾದ ಬಾಣವನ್ನು ಹೂಡಿದನು.

೩೪. ಆ ಕಾಲಕ್ಕೆ ಸರಿಯಾಗಿ ಪುಷ್ಯನಕ್ಷತ್ರವು ಬಂದೊದಗಿತು. ಅದೇ ಸಮಯವೇ ಮೂರು ಊರುಗಳೂ ಒಟ್ಟಾಗಿ ಸೇರುವಕಾಲವಾಗಿತ್ತು. ಅದರಂತೆ ಒಟ್ಟುಗೂಡಲಾಗಿ, ಅದನ್ನು ಕಂಡು ದೇವತೆಗಳೆಲ್ಲರೂ ಕಾತರರಾದರು.

೩೫. ದೇವತೆಗಳೂ ಮುನಿಗಳೂ ಪರಮೇಶ್ವರನನ್ನೂ ವಿಧವಿಧವಾಗಿ ಸ್ತುತಿಸಲಾರಂಭಿಸಿದರು. ಯಕ್ಷರೂ, ಗಂಧರ್ವರೂ, ಚಾರಣರೂ, ಕಿನ್ನರರೂ, ಶಿವನ ಮುಂದೆ ನರ್ತನ ಮಾಡಲಾರಂಭಿಸಿದರು.

ಅಥಾಬ್ರವೀನ್ಮಹಾದೇವಂ ಬ್ರಹ್ಮಾ ಲೋಕಪಿತಾಮಹಃ ।
ಪುಷ್ಯಯೋಗಸ್ತ್ವನುಪ್ರಾಪ್ತೋ ಭಗವನ್ ಪಾರ್ವತೀಪತೇ ॥ ೩೬ ॥

ಪುರಾಣೀಮಾನಿ ದೇವೇಶ ಪೃಥಗ್ಭಾವಂ ನ ಯಾಂತಿ ವೈ ।
ಯೋಗೇಽಸ್ಮಿನ್ನೇವ ಭಗವನ್ ತ್ರಿಪುರಂ ದಗ್ಧುಮರ್ಹಸಿ ॥ ೩೭ ॥

ದೇವಾಶ್ಚ ದೈತ್ಯಾ ದೇವೇಶ ಸಮಾಸ್ತವ ಮಹೇಶ್ವರ ।
ಧರ್ಮಾತ್ಮಾನಃ ಸುರಾ ಯಸ್ಮಾತ್ಪಾಪಾತ್ಮಾನೋಽಸುರಾಸ್ತಥಾ ॥ ೩೮ ॥

ತಸ್ಮಾಲ್ಲೀಲಾಂ ವಿಹಾಯೈವ ಭಗವನ್ವಿಶ್ವಪೂಜಿತ ।
ತ್ರೈಲೋಕ್ಯಸ್ಯ ಹಿತಾರ್ಥಾಯ ತ್ರಿಪುರಂ ದಗ್ಧುಮರ್ಹಸಿ ॥ ೩೯ ॥

ಅಥಾನ್ವೈಕ್ಷತ ದೇವೇಶಃ ಪುರತ್ರಯಮವಜ್ಞಯಾ ।
ಭಸ್ಮಸಾದಭವದ್ವಿಪ್ರಾಃ ಪ್ರಭಾವಾತ್ಪರಮೇಷ್ಠಿನಃ ॥ ೪೦ ॥

---

೩೬. ಅನಂತರ ಪರಬ್ರಹ್ಮನು ಮಹಾದೇವದನ್ನು ಕುರಿತು "ಎಲೈ ಪಾರ್ವತಿ ಪತಿಯೇ, ಈಗ ಪುಷ್ಯಯೋಗವು ಒದಗಿದೆ. ಎಲ್ಲಾ ಊರುಗಳೂ ಇಲ್ಲಿ ಒಟ್ಟಾಗಿ ಸೇರಿವೆ.

೩೭. ದೇವೇಶನೇ, ಈ ಊರುಗಳು ಇನ್ನು ಬೇರೆಬೇರೆಯಾಗಲಾರವು. ಇದೇ ಸನ್ನಿವೇಶದಲ್ಲಿ ನೀನು ಈ ತ್ರಿಪುರಗಳನ್ನು ನಾಶಮಾಡಲು ಸಮರ್ಥನಾಗಿರುತ್ತೀಯೆ.

೩೮. ಎಲೈ ಪರಮಾತ್ಮನೇ, ನಿನಗೆ ದೇವತೆಗಳು ಹೇಗೋ ದೈತ್ಯರೂ ಹಾಗೆಯೇ ಭಕ್ತರಾಗಿರುವರು. ಆದರೆ ಧರ್ಮದಿಂದ ದೇವತೆಗಳು ನಡೆಯುತ್ತಿರುವರು. ದೈತ್ಯರು ಮಾತ್ರ ಅಧರ್ಮವನ್ನು ಆಶ್ರಯಿಸಿರುವರು.

೩೯. ಆದ್ದರಿಂದ, ಲೋಕಪೂಜ್ಯನೇ, ನೀನು ನಿಷ್ಪಕ್ಷಪಾತದಿಂದ ತ್ರಿಲೋಕವನ್ನು ರಕ್ಷಿಸಲು, ಈ ಅಧರ್ಮ ಭೂಯಿಷ್ಠವಾದ ತ್ರಿಪುರಗಳನ್ನು ಭಸ್ಮಮಾಡು." ಎಂದು ಬ್ರಹ್ಮನು ಪ್ರಾರ್ಥಿಸಲು,

೪೦. ಪರಮೇಶ್ವರನು ಬ್ರಹ್ಮನ ಈಪ್ರಭಾವಪೂರಿತವಾದ ವಾಣಿಯನ್ನು ಕೇಳಿ ಕೋಪದಿಂದ ಒಂದು ಸಾರಿ, ಆ ತ್ರಿಪುರಗಳನ್ನು ದೃಷ್ಟಿಯಿಟ್ಟು ನೋಡಿದನು. ಒಡನೆಯೇ ಆ ತ್ರಿಪುರಗಳೆಲ್ಲವೂ ಸುಟ್ಟುಹೋದವು.

ಅಥಾಬ್ರುವನ್ನುಪೇಂದ್ರಾದ್ಯಾ ಭಗವಂತಮುಮಾಪತಿಂ ।
ಕೃತಾಂಜಲಿಪುಟಾಸ್ಸರ್ವೇ ಸ್ತುವಂತೋಽಸ್ಯ ರಥೇ ಸ್ಥಿತಾಃ ॥ ೪೧ ॥

ದಗ್ಧಂ ಯದ್ಯಪಿ ದೇವೇಶ ತ್ರಿಪುರಂ ವೀಕ್ಷಣಾತ್ಪ್ರಭೋ ।
ದೇವಾನಾಂ ಕಾರ್ಯಸಿದ್ಧ್ಯರ್ಥಂ ಶರಂ ಮೋಕ್ತುಮಿಹಾರ್ಹಸಿ ॥ ೪೨ ॥

ಅಥ ಜ್ಯಾಂ ಧನುಷೋ ಮೃಜ್ಯ ಪ್ರಹಸನ್ ಭಗನೇತ್ರಹಾ ।
ಮುಮೋಚ ಬಾಣಂ ವೇಗೇನ ತ್ರಿಪುರಂ ಭಸ್ಮಸಾದಭೂತ್ ॥ ೪೩ ॥

ಯೇ ತತ್ರೇಶಾನನಿರತಾ ದೈತ್ಯಾಃ ಕ್ಷಪಿತಕಲ್ಮಷಾಃ ।
ಶಿವಲೋಕಂ ಗತಾಸ್ಸರ್ವೇ ಶಿವಸ್ಯಾನುಗ್ರಹಾದ್ದ್ವಿಜಾಃ ॥ ೪೪ ॥

---

೪೧. ಆಮೇಲೆ ವಿಷ್ಣುವೇ ಮೊದಲಾದ ದೇವತೆಗಳು ಭಗವಂತನಾದ ಪಾರ್ವತೀ ಪತಿಯನ್ನು ಭಜಿಸುತ್ತಾ ತಮ್ಮ ತಮ್ಮ ರಥಗಳಲ್ಲಿಯೇ ಕುಳಿತು ಪರಮೇಶ್ವರನನ್ನು ಅಂಜಲಿಬದ್ಧರಾಗಿ ಸ್ತುತಿಸಲಾರಂಭಿಸಿದರು.

೪೨. "ಓ ಸ್ವಾಮಿಯೇ, ನಿನ್ನ ಕ್ರೂರದೃಷ್ಟಿ ನಿಕ್ಷೇಪ ಮಾತ್ರದಿಂದಲೇ ಈ ತ್ರಿಪುರಗಳು ಭಸ್ಮವಾದವು. ಆದರೆ ದೇವತೆಗಳ ಕಾರ್ಯಸಾಧನೆಗಾಗಿ ಒಂದು ಬಾಣವನ್ನು ಪ್ರಯೋಗಿಸಬೇಕು" ಎಂದು ಕೇಳಿಕೊಂಡರು.

೪೩. ಒಡನೆಯೇ ಪರಮೇಶ್ವರನು ಬಾಣವನ್ನು ಧನುಷ್ಟಂಕಾರ ಪೂರ್ವಕವಾಗಿ ಹೂಡಿ, ತ್ರಿಪುರಗಳ ಮೇಲೆ ಪ್ರಯೋಗಿಸಿದನು. ಆ ಬಾಣಪ್ರಯೋಗದಿಂದ ತ್ರಿಪುರಗಳು ಭಸ್ಮವಾದವು.

೪೪. ಆ ಊರಿನಲ್ಲಿ ವಾಸಿಸುತ್ತಿದ್ದ ದೈತ್ಯರೆಲ್ಲರೂ, ಆ ಶಿವಬಾಣದಿಂದ ದಗ್ಧರಾಗಿ ಹೋದರು. ಅದರಿಂದ ಅವರು ತಮ್ಮ ಪಾಪಗಳನ್ನೆಲ್ಲಾ ಕಳೆದುಕೊಂಡರು ಹಿಂದೆ ಶಿವನಲ್ಲಿ ಅತ್ಯಂತ ಭಕ್ತಿಯುಳ್ಳವರಾಗಿದ್ದುದರಿಂದ ಅವರು ಶಿವಲೋಕವನ್ನೂ ಸೇರಿದರು.

ವಿರಂಚಿಪ್ರಮುಖಾ ದೇವಾ ಮುನಯಸ್ಸಿದ್ಧಕಿನ್ನರಾಃ ।
ವವಂದಿರೇ ಮಹಾದೇವಂ ದಂಡವತ್ಪ್ರಣಿಪತ್ಯ ತೇ ॥ ೪೫ ॥

॥ ಸೂತ ಉವಾಚ ॥

ಏವಂ ವಿಶ್ವೇಶ್ವರೋ ದೇವೋ ಭಗವಾನ್ ಪಾರ್ವತೀಪತಿಃ ।
ಬ್ರಹ್ಮಾದಿಭ್ಯೋ ವರಂ ದತ್ವಾ ಮಂದರಂ ಪ್ರಯಯೌ ಶಿವಃ ॥ ೪೬ ॥

ತತೋ ದೇವಾಃ ಪ್ರಮುದಿತಾಃ ಸ್ವಂ ಸ್ವಂ ಧಾಮ ಯಯುರ್ದ್ವಿಜಾಃ ।
ನಿರ್ವೈರಾಃ ಸ್ವಸ್ಥಮನಸಃ ಶಿವಸ್ಯಾನುಗ್ರಹಾತ್ ಸ್ಥಿತಾಃ ॥ ೪೭ ॥

ಏವಂ ಸಂಕ್ಷೇಪತಃ ಪ್ರೋಕ್ತಂ ದಗ್ಧಂ ಭಗವತಾ ಯಥಾ ।
ತ್ರಿಪುರಂ ಮುನಿಶಾರ್ದೂಲಾಃ ಪುಣ್ಯಾಖ್ಯಾನಮನುತ್ತಮಂ ॥ ೪೮ ॥

ಯಃ ಪಠೇದಿದಮಾಖ್ಯಾನಂ ಮಹಾದೇವಸ್ಯ ಸನ್ನಿಧೌ ।
ಸರ್ವಪಾಪವಿನಿರ್ಮುಕ್ತಃ ಶಿವಲೋಕೇ ಮಹೀಯತೇ ॥ ೪೯ ॥

---

೪೫. ಇದನ್ನು ನೋಡಿದ ಬ್ರಹ್ಮನೇಮೊದಲಾದ ದೇವತೆಗಳೂ, ಋಷಿಗಳೂ, ಸಿದ್ಧರೂ, ಕಿನ್ನರರೂ ಸಂತೋಷದಿಂದ ಮಹಾದೇವನಿಗೆ ಸಾಷ್ಟಾಂಗ ನಮಸ್ಕಾರವೆಸಗಿದರು.

೪೬. ಹೀಗೆ ವಿಶ್ವೇಶ್ವರನು ಆತ್ರಿಪುರಗಳನ್ನು ಧ್ವಂಸಮಾಡಿ ಬ್ರಹ್ಮಾದಿಗಳಿಗೆ ವರವನ್ನಿತ್ತು ತಾನು ಮಂದರಪರ್ವತವನ್ನು ಕುರಿತು ಪ್ರಯಾಣಮಾಡಿದನು.

೪೭. ದೇವತೆಗಳು ಸಂತೋಷಗೊಂಡವರಾಗಿ ತಮ್ಮ ತಮ್ಮ ಪ್ರದೇಶಗಳಿಗೆ ಹಿಂದಿರುಗಿದರು. ಪರಮೇಶ್ವರನ ಅನುಗ್ರಹದಿಂದ ಅವರಲ್ಲಿದ್ದ ವೈರಭಾವವೂ ಭಯಂಕರ ಸ್ಥಿತಿಯೂ ನಾಶವಾಗಿ ಅವರ ಮನಸ್ಸು ಪರಿಶುದ್ಧವಾಯಿತು.

೪೮. ಹೀಗೆ ಮಹೇಶ್ವರನು ತ್ರಿಪುರಗಳನ್ನು ದಹಿಸಿದ ಪುಣ್ಯತಮವಾದ ಕಥೆಯನ್ನು ನಾನು ನಿಮಗೆ ವಿಸ್ತಾರವಾಗಿ ತಿಳಿಸಿರುವೆನು ಋಷಿಶ್ರೇಷ್ಠರಿರಾ, ಈ ಕಥೆಯು ಅತ್ಯಂತ ಪುಣ್ಯತಮವಾದದ್ದು.

೪೯. ಯಾರು ಈ ಉತ್ತಮವಾದ ಕಥೆಯನ್ನು ಪರಮೇಶ್ವರನ ಸನ್ನಿಧಿಯಲ್ಲಿ ಓದುವರೋ, ಅಂಥವರು ಸಮಸ್ತ ಪಾಪಗಳನ್ನೂ ಕಳೆದುಕೊಂಡು, ಶಿವಲೋಕವನ್ನು ಹೊಂದುವರು.

ಲಕ್ಷ್ಮೀಂ ವಿದ್ಯಾಂ ಯಶಃ ಪುತ್ರಾನ್ ದಾರಾಂಶ್ಚ ಲಭತೇ ನರಃ ।
ಅನ್ಯಾಂಶ್ಚ ಪ್ರಾಪ್ನುಯಾತ್ಕಾಮಾನ್ ಶ್ರದ್ಧಯಾ ಮುನಿಪುಂಗವಾಃ ॥ ೫೦ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಶಿವರಥ ತ್ರಿಪುರದಾಹ ಕಥನಂ ನಾಮ
ಪಂಚತ್ರಿಂಶೋಽಧ್ಯಾಯಃ.

---

೫೦. ಇದನ್ನು ಶ್ರವಣಮಾಡಿದ ಮನುಷ್ಯರು, ಸಂಪತ್ತನ್ನೂ, ವಿದ್ಯೆಯನ್ನೂ ಪತ್ನೀಪುತ್ರರನ್ನೂ ಕೀರ್ತಿಯೇ ಮೊದಲಾದ ಅನೇಕ ಕಾಮ್ಯವಸ್ತುಗಳನ್ನೂ ಪಡೆದು ಸುಖಿಗಳಾಗುವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ, ಎಂದು ಸೂತಪುರಾಣಿಕರು ಶೌನಕಾದಿಗಳಿಗೆ ಹೇಳಿದರು.

ಹೀಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದ
ರೂಪವಾಗಿ ಶಿವರಥ ಮತ್ತು ತ್ರಿಪುರಗಳು ಇವುಗಳನ್ನು ಭಸ್ಮಮಾಡಿದ
ಕಥೆಯು ಈ ಮೂವತ್ತೈದನೇ ಅಧ್ಯಾಯದಲ್ಲಿ ಮುಗಿದುದು.